ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆ: ಲಿಂಗ ಸಂಬಂಧಿ ಅಧ್ಯಯನ

(ಪ್ರಾಥಮಿಕ ಮತ್ತು ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಸುಮಲತ ಬಿ.ಎಂ.

ಮಾರ್ಗದರ್ಶಕರು
ಡಾ. ಶಿವಾನಂದ ಎಸ್. ವಿರಕ್ತಮಠ
ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೨೧

1105

ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆ: ಲಿಂಗ ಸಂಬಂಧಿ ಅಧ್ಯಯನ

(ಪ್ರಾಥಮಿಕ ಮತ್ತು ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಸುಮಲತ ಬಿ.ಎಂ.

ಮಾರ್ಗದರ್ಶಕರು

ಡಾ. ಶಿವಾನಂದ ಎಸ್. ವಿರಕ್ತಮಠ

ಪ್ರಾಧ್ಯಾಪಕರು

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಮಹಿಳಾ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೨೧

ಮಾರ್ಗದರ್ಶಕರ ದೃಢೀಕರಣ ಪತ್ರ

ಸುಮಲತ ಬಿ.ಎಂ. ಅವರು **'ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆ; ಲಿಂಗ ಸಂಬಂಧಿ ಅಧ್ಯಯನ (ಪ್ರಾಥಮಿಕ ಮತ್ತು ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳನ್ನು ಅನುಲಕ್ಷಿಸಿ)'** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ. ಶಿವಾನಂದ ಎಸ್. ವಿರಕ್ತಮಠ)
ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬.

ದಿನಾಂಕ : 17/3/21
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

'ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆ : ಲಿಂಗ ಸಂಬಂಧಿ ಅಧ್ಯಯನ (ಪ್ರಾಥಮಿಕ ಮತ್ತು ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳನ್ನು ಅನುಲಕ್ಷಿಸಿ)' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಮಹಿಳಾ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ಶಿವಾನಂದ ಎಸ್. ವಿರಕ್ತಮಠ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

Sumalatha B.M.

(ಸುಮಲತ ಬಿ.ಎಂ.)

ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬.

ದಿನಾಂಕ : 17/3/21
ಸ್ಥಳ : ವಿದ್ಯಾರಣ್ಯ

Kannada University, Hampi
Akshara Central Library
Anti-Plagiarism Cell
Certificate of Plagiarism Check Report

Hennu-Gandu Makkala Saamaajikarana samasye:
Lingasambandhi Adhyayana
(Prathamika mattu Madhyamika Kannada
Patyapustakagalannu Anulakshisi)

Socialization Problems of Female-Male Children:
Gender Related Study

By
Sumalatha B M
Reg.No. 160106020114 dated: 23.11.2016

Research Guide
Dr.Shivananda S Virakhtmath
Professor
Dept. of Women's Studies
KUH, Vidyaranya.

Urkund Analysis Result

Analyzed document: KUH-PhD-DWS-B M Sumalata.docx (D98346052)
Submitted: 3/15/2021 5:59:00 AM
Submitted by: Shankaragouda S G
Submitter email: shankargoudas.mailbox@gmail.com
Similarity: 5%
Analysis address: shankargoudas.mailbox.kanuni@analysis.urkund.com

15/03/2021
Seal and authorized sign

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಮಹತ್ವ

೧.೧. ಪ್ರಸ್ತಾವನೆ
೧.೨. ಅಧ್ಯಯನದ ಉದ್ದೇಶ
೧.೩. ಅಧ್ಯಯನದ ವ್ಯಾಪ್ತಿ
೧.೪. ಅಧ್ಯಯನದ ವಿಧಾನಗಳು ಮತ್ತು ವೈಧಾನಿಕತೆ
೧.೫. ಅಧ್ಯಯನದ ಸ್ವರೂಪ
೧.೬. ಅಧ್ಯಯನದ ಸಮೀಕ್ಷೆ
೧.೭. ಅಧ್ಯಯನದ ಮಹತ್ವ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

೧.೧. ಪ್ರಸ್ತಾವನೆ

ಆಧುನಿಕ ಸಮಾಜದಲ್ಲಿ ಹೆಣ್ಣು-ಗಂಡಿಗೆ ಶಕ್ತಿ ಸಾಮರ್ಥ್ಯಗಳು ಒಂದೇ ಆಗಿದ್ದರೂ, ಸಾಮಾಜೀಕರಣದಿಂದಾಗಿ ಬೇರೆ ಬೇರೆಯಾಗಿ ನೋಡಲಾಗುತ್ತಿದೆ. ಗಂಡಿಗೆ ಸಮಾಜದಲ್ಲಿ ಹೆಣ್ಣಿನ ವಿರುದ್ಧ ದಮನ, ಅನ್ಯಾಯಗಳಿಗೆ ಅವಕಾಶ ಮಾಡಿಕೊಟ್ಟರೆ ಹೆಣ್ಣಿಗೆ ತನ್ನ ಪ್ರಾಣ, ಸೊತ್ತು ಮತ್ತು ಮಾನವನ್ನು ರಕ್ಷಿಸಲು ಬೇಕಾಗುವಂಥ ಹಕ್ಕುಗಳಿಂದ ವಂಚಿತಳನ್ನಾಗಿಸಲಾಗಿದೆ. ಇದಕ್ಕೆ ಹೆಣ್ಣಿನ ಲೈಂಗಿಕತೆ, ಲೈಂಗಿಕ ಚಲನಶೀಲತೆ, ಶೀಲ, ಪಾವಿತ್ರ್ಯತೆಗಳೆಂಬ ಮೌಲ್ಯಗಳನ್ನು ಸಾಮಾಜೀಕರಣ ರೂಢಿಸುವ ಮೂಲಕ ಪ್ರಕೃತಿ ಸಹಜವಾದ ಲೈಂಗಿಕತೆಯನ್ನು ನಿರ್ಬಂಧಿಸಿರುವುದು ಒಂದೆಡೆಯಾದರೆ, ಮತ್ತೊಂದಡೆ ಹೆಣ್ಣುಮಕ್ಕಳು ದೌರ್ಜನ್ಯ, ಶೋಷಣೆ, ಹಿಂಸೆ, ಕಿರುಕುಳ, ಅತ್ಯಾಚಾರಗಳಿಗೆ ಯಾಕೆ ಒಳಗಾಗುತ್ತಿದ್ದಾರೆ ? ಹೆಣ್ಣುಮಕ್ಕಳು ಅನೇಕ ಸಾಮಾಜಿಕ ಸವಲತ್ತುಗಳಿಂದ ಯಾಕೆ ವಂಚಿತರಾಗುತ್ತಿದ್ದಾರೆ ? ಹೆಣ್ಣುಮಕ್ಕಳನ್ನು ಯಾಕೆ ಸಂಸ್ಕೃತಿಗೆ ಪ್ರತಿಯಾಗಿ ಮತ್ತು ಪ್ರಕೃತಿಯ ಜೊತೆ ಯಾಕೆ ಸಮೀಕರಿಸಲಾಗಿದೆ ? ಹೆಣ್ಣುಮಕ್ಕಳಿಗೆ ಸಾರ್ವಜನಿಕ ವಲಯವನ್ನು ಪ್ರವೇಶಿಸಲು ಯಾಕೆ ಸಾಧ್ಯವಾಗಿಲ್ಲ ಈ ಮುಂತಾದ ಪ್ರಶ್ನೆಗಳನ್ನು ಅವಲೋಕಿಸಿದರೆ, ಮೂಲದಲ್ಲಿ ಸಾಮಾಜೀಕರಣ ಸಮಸ್ಯೆ ಕಂಡು ಬರುತ್ತದೆ. ಆದ್ದರಿಂದ ಈ ಸಾಮಾಜೀಕರಣ ಸಮಸ್ಯೆಯನ್ನು ಅರಿಯುವ, ಬದಲಾಯಿಸುವ ದೃಷ್ಟಿಕೋನ ಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ಮಾಡಲಾಗಿದೆ.

ಹೆಣ್ಣು ಮತ್ತು ಗಂಡಿನ ನಡುವೆ ವ್ಯಕ್ತಿಯ ಮತ್ತು ಅಂಗಾಂಗಗಳ ಆಧಾರಿತ ಜೈವಿಕ ವ್ಯತ್ಯಾಸವಿರುವುದು ಸಾಮಾನ್ಯ ವಿಚಾರ. ಆದರೆ ಸಾಮಾಜ ವಿಜ್ಞಾನಿಗಳ ಪ್ರಕಾರ ಹೆಣ್ಣು-ಗಂಡು ಕೇವಲ ಜೈವಿಕ ವ್ಯತ್ಯಾಸ ಒಂದೇ ಆಗಿರುವುದಿಲ್ಲ ಅದು ಸಾಮಾಜಿಕವಾಗಿ ನಿರ್ಧರಿಸಲ್ಪಟ್ಟಿರುತ್ತದೆ ಮತ್ತು ರೂಪಿಸಲ್ಪಟ್ಟಿರುತ್ತದೆ. ವಾಸ್ತವವಾಗಿ ಸಮಾಜದಲ್ಲಿ 'ಲಿಂಗ' ಮತ್ತು ಸಾಮಾಜಿಕ(ಲಿಂಗತ್ವ)ದ ಪಾತ್ರಗಳ ರೀತಿ ನೋಡಿದರೆ ಹೆಣ್ಣು-ಗಂಡಿನ ನಡುವೆ ಉಂಟಾಗಿರುವ ಅಸಮಾನತೆ, ಅಧಿಕಾರಗಳು ಬೇರೆ ಬೇರೆಯಾಗಿವೆ. ಜೈವಿಕವಾಗಿ ಹೆಣ್ಣು ಲಿಂಗ, ಗಂಡು ಲಿಂಗ ರೂಪುಗೊಂಡಿದೆ. ಆದರೆ ಸಾಮಾಜಿಕವಾಗಿ ಲಿಂಗತ್ವ ರಚನೆಗೊಂಡಿದೆ. ಈ 'ಲಿಂಗತ್ವ' ಹೆಣ್ಣು-ಗಂಡುಗಳ ಲಿಂಗದ ಮೇಲೆ ಸಾಮಾಜಿಕ ಮೌಲ್ಯ ರೂಪಿತಗೊಂಡಿರುವುದರಿಂದಲೇ ಹೆಣ್ಣು-ಗಂಡಿನ ನಡುವಿನ ವ್ಯತ್ಯಾಸಗಳು

ಕೇವಲ ಜೈವಿಕವಾದವಲ್ಲ ಅದು ಸಾಮಾಜಿಕವಾದದ್ದು ಎಂಬುದನ್ನು ಲಿಂಗತ್ವದ ಪರಿಕಲ್ಪನೆ ಸೂಚಿಸುತ್ತದೆ. ಹೆಣ್ಣು-ಗಂಡು ನಡುವಿನ ಶಾರೀರಿಕ ವ್ಯತ್ಯಾಸಕ್ಕೆ ಜೈವಿಕ ಅಂಶಗಳೇ ಆಧಾರವಾದರೆ, ಸಾಮಾಜಿಕ ನಿರ್ಮಿತವಾದದ್ದು(social construct) ಲಿಂಗತ್ವ ಆಗಿದೆ.

ಸಾಮಾಜೀಕರಣ ಮತ್ತು ಸಾಮಾಜೀಕರಣದ ಪ್ರಕ್ರಿಯೆ ಕುರಿತಂತೆ ಗಮನಿಸೋಣ. "ವ್ಯಕ್ತಿಯು ಸಮಾಜದ ವ್ಯವಸ್ಥೆಯಲ್ಲಿ ಹೇಗೆ ಭಾಗವಹಿಸಬೇಕೆಂಬುದನ್ನು ರೂಪಿಸುವ (ರೂಢಿಸುವ) ಪ್ರಕ್ರಿಯೆಯನ್ನು ಸಾಮಾಜೀಕರಣ ಎನ್ನಲಾಗುತ್ತದೆ". ಸಾಮಾಜೀಕರಣ ಪ್ರಕ್ರಿಯೆ ಎಂದರೆ, "ಮಗುವೊಂದು ಹುಟ್ಟಿದ ಕ್ಷಣದಿಂದಲೇ ರೂಢಿಗತ ಸಾಮಾಜಿಕ ಚಿಂತನೆಗಳನ್ನು ಆವಾಹಿಸಿಕೊಳ್ಳುವ, ಮನಸ್ಥಿತಿಗೆ ಅದನ್ನು ಒಗ್ಗಿಸಿಕೊಳ್ಳುವ ಮುಂದುವರೆದು, ಮಾತು-ಕತೆ, ನಡೆ-ನುಡಿ, ವೇಷ-ಭೂಷಣಗಳಂತಹ ಬಾಹ್ಯ ವರ್ತನೆಗಳಷ್ಟೇ ಅಲ್ಲದೆ ಬುದ್ಧಿಭಾವಗಳ ಆಳದಲ್ಲೂ ಇಳಿದು 'ಪ್ರಭಾವಿಸುವ ಸಾಮರ್ಥ್ಯವೇ' ಈ 'ಸಾಮಾಜೀಕರಣ ಪ್ರಕ್ರಿಯೆ'ಯಾಗಿದೆ". ಈ ಸಾಮಾಜೀಕರಣದಲ್ಲಿ ಬೆಳೆಯುತ್ತಾ ಹೋದಂತೆಲ್ಲಾ ಮಗು ತನ್ನ ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಂಡು ಯಂತ್ರಮಾನವನಾಗಿ ರೂಪುಗೊಳ್ಳುತ್ತದೆ. ಹೀಗೆ ರೂಪುಗೊಳ್ಳುವಾಗ ಮುಂದೆ ಮಗು ಲಿಂಗ ಆಧಾರಿತವಾದ ಸಾಮಾಜೀಕರಣದ ಪ್ರಕ್ರಿಯೆಗೆ ಒಳಗಾಗುತ್ತದೆ. ಈ ಲಿಂಗಾಧಾರಿತ ಸಾಮಾಜೀಕರಣದಿಂದಾಗಿ ಅನೇಕ ಸಮಸ್ಯೆಗಳು ಕಂಡುಬರುತ್ತವೆ. ಹೆಣ್ಣು-ಕನಿಷ್ಠ, ಗಂಡು-ಶ್ರೇಷ್ಠ, ಹೆಣ್ಣು-ಕೀಳು, ಗಂಡು-ಮೇಲು, ಹೆಣ್ಣು-ದ್ವಿತಿಯ ಗಂಡು-ಪ್ರಥಮ ಎನ್ನುವ ಸಮಸ್ಯೆಗಳನ್ನು ಮುಂದುವರೆಸಿದೆ. ಹೀಗೆ ಮುಂದುವರೆದು ಸಮಾಜದಲ್ಲಿ ಸಾಮಾಜಿಕ ಸಮಸ್ಯೆಗಳು ರೂಪುಗೊಳ್ಳಲು ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಸಾಮಾಜೀಕರಣದ ಸಮಸ್ಯೆಯನ್ನು ಮತ್ತು ಅದರ ಮೂಲವನ್ನು ಅಧ್ಯಯನ ಮಾಡಬೇಕಾಗಿದೆ.

ಹುಟ್ಟಿನಿಂದಲೇ ಮಗುವೊಂದನ್ನು ಲಿಂಗ ಆಧಾರಿತವಾಗಿ ರೂಪುಗೊಳಿಸುವ ಸಾಮಾಜೀಕರಣ ಪ್ರಕ್ರಿಯೆ ಗಮನಿಸಬಹುದು. ಹೆಣ್ಣು ಮಗುವೊಂದು ಜನಿಸಿದ ಕ್ಷಣದಿಂದಲೇ ನಡೆ, ನುಡಿ, ಗುಣ-ಸ್ವಭಾವ, ವರ್ತನೆ, ವೇಷಭೂಷಣ, ವಿವಾಹ, ಗೃಹಿಣಿತ್ವ, ತಾಯಿತನ – ಈ ಎಲ್ಲ ಸಂಗತಿಗಳಲ್ಲಿ ಹೆಣ್ಣನ್ನು ತಿದ್ದಿ ತೀಡಿ ಅಣಿಗೊಳಿಸುವ ಪ್ರಕ್ರಿಯೆ ಸಾಮಾಜೀಕರಣದಲ್ಲಿ ನಡೆಯುತ್ತದೆ. ಮತ್ತೊಂದು ಕಡೆ ಹೆಣ್ಣಿಗೆ ಮಗಳು, ಹೆಂಡತಿ, ತಾಯಿ, ಅತ್ತೆ, ಸೊಸೆ ಎಂಬ ಸ್ಥಿರಮಾದರಿ ಪಾತ್ರಗಳಲ್ಲಿ ಸಿಲುಕಿಸಿ ಹೆಣ್ಣಿನ ಆಯ್ಕೆಗಳಿವು, ಹೆಣ್ಣು ಮಾತ್ರ ಇವು ತನ್ನದೇ ಆಯ್ಕೆ ಎಂಬಂತೆ ಭಾವಿಸಿ ನಿರ್ವಹಿಸುತ್ತಾ ಬದುಕನ್ನು ಕಳೆಯುವಂತೆ ಸಾಮಾಜೀಕರಣಕ್ಕೆ ಒಳಗಾಗಿಸುತ್ತಿರುವುದು ಕಂಡು ಬರುತ್ತದೆ. ಗಂಡುಮಗುವಿಗೆ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಧೈರ್ಯ, ಸಾಹಸ, ಹೆಮ್ಮೆ, ಛಲ, ಗಟ್ಟಿತನ, ಸ್ವಾತಂತ್ರ್ಯ, ಅಧಿಕಾರ, ಆರ್ಥಿಕತೆ ಮುಂತಾದ ಸಂಗತಿಗಳನ್ನು ಒದಗಿಸುವಂಥ ಪ್ರಕ್ರಿಯೆ ಕಂಡು ಬರುತ್ತದೆ. ಹುಟ್ಟಿನಿಂದಲೇ ನಡೆ-ನುಡಿ, ಗುಣ-ಸ್ವಭಾವ, ಆಚಾರ-ವಿಚಾರ, ವರ್ತನೆ, ವೇಷಭೂಷಣ – ಹೀಗೆ ಮುಂತಾದ ನಡವಳಿಕೆಗಳು ಹೆಣ್ಣು-ಗಂಡುಮಕ್ಕಳಲ್ಲಿ ಕಂಡು ಬರುತ್ತದೆ. ಹೀಗೆ 'ಲಿಂಗ'ವನ್ನು ಆಧರಿಸಿ. ಸಾಮಾಜೀಕರಣದ ಪ್ರಕ್ರಿಯೆಗಳು ಸಮಾಜದಲ್ಲಿ ಕಂಡುಬರುತ್ತಿರುವುದರಿಂದ, ಹೆಣ್ಣು-ಗಂಡುಮಕ್ಕಳ ಮಧ್ಯೆ, ಮಹಿಳೆ-ಪುರುಷರ ಮಧ್ಯೆ ಅನೇಕ ಲಿಂಗ ತಾರತಮ್ಯಗಳು ರೂಪುಗೊಂಡಿವೆ. ಹೆಣ್ಣು

ಲಿಂಗಕ್ಕೆ ಅನೇಕ ಸಂಕಷ್ಟ, ಅನ್ಯಾಯ, ಅಪಾಯಗಳನ್ನು ತಂದೊಡ್ಡಿದೆ. ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಲೈಂಗಿಕ ಕಿರುಕುಳ, ಹೆಣ್ಣುಮಕ್ಕಳ ಸಾಗಾಣಿಕೆ, ಶೀಲ, ಪಾವಿತ್ರ್ಯತೆ – ಹೀಗೆ ಅನೇಕ ಸಮಸ್ಯೆಗಳನ್ನು ಪಟ್ಟಿ ಮಾಡಬಹುದಾಗಿದೆ. ವರದಕ್ಷಿಣೆ, ಕೌಟುಂಬಿಕ ಕಿರುಕುಳ, ವಧು ದಹನ, ಬಾಲ್ಯವಿವಾಹ, ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಮಕ್ಕಳಿಗೆ ಸಾರ್ವಜನಿಕ ಸಂಪರ್ಕದ ಕೊರತೆ, ಹೆಣ್ಣು ಮಕ್ಕಳಿಗೆ ಶಿಕ್ಷಣದ ಕೊರತೆ ಹೀಗೆ ಮುಂತಾದ ಸಮಸ್ಯೆಗಳು ಹೆಣ್ಣು–ಗಂಡು ಮಕ್ಕಳ ಸಾಮಾಜೀಕರಣದ ಪ್ರಕಿಯೆಯಿಂದ ಉಂಟಾದ ಸಮಸ್ಯೆಗಳಾಗಿವೆ. ಹೀಗಾಗಿ ಪ್ರಸ್ತುತ ಅಧ್ಯಯನದಲ್ಲಿ ಹೆಣ್ಣ–ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆಗಳ ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಯನದಲ್ಲಿ 'ಸಾಮಾಜೀಕರಣ' ಮತ್ತು 'ಲಿಂಗಸಂಬಂಧಿ ಅಧ್ಯಯನ'ದ ಕುರಿತಂತೆ ಸಂಕ್ಷಿಪ್ತ ಪರಿಚಯ

ಪ್ರಸ್ತುತ ಅಧ್ಯಯನದಲ್ಲಿ ಸಾಮಾಜೀಕರಣ ಮತ್ತು ಲಿಂಗ ಸಂಬಂಧಿ ಅಧ್ಯಯನ ಕುರಿತಂತೆ ಸಂಕ್ಷಿಪ್ತ ಪರಿಚಯ ಮಾಡುವುದಾದರೆ, 'ಸಾಮಾಜೀಕರಣ' ಸಮಾಜದಲ್ಲಿ ಗಂಡು–ಹೆಣ್ಣಿನ ಪಾತ್ರಗಳೇನೆಂಬುದನ್ನು ಸೂಚಿಸುತ್ತದೆ. ಸಾಮಾಜೀಕರಣದಲ್ಲಿ ಇಲ್ಲಿಯವರೆಗೂ ಪ್ರತಿಯೊಂದು ಸಮಾಜ, ಕುಟುಂಬದಲ್ಲೂ ಗಂಡು–ಹೆಣ್ಣಿಗೆ ಪ್ರತ್ಯೇಕ ಪಾತ್ರಗಳನ್ನು ಸೃಷ್ಟಿಸಲಾಗಿದೆ. ಈ ಸಾಮಾಜೀಕರಣ ಸಮಾಜಕ್ಕೆ 'ಒಪ್ಪಿತ'ವಾಗುವ ನಡವಳಿಕೆಯನ್ನು ರೀತಿ–ನೀತಿಗಳನ್ನು ಗಂಡು–ಹೆಣ್ಣುಗಳು ಅನುಸರಿಸಬೇಕು ಎನ್ನುವಂಥ ('ಲಿಂಗ ಅಸ್ಮಿತೆ'ಯಾಗಿ 'ಲಿಂಗಪಾತ್ರ'ಗಳಾಗಿ ನಿರ್ಧರಿಸುವ) ಕೆಲಸ ಮಾಡುತ್ತಿದೆ. ಸಾಮಾಜೀಕರಣ ಗಂಡು ಮತ್ತು ಹೆಣ್ಣಿನ ವರ್ತನೆ ಮತ್ತು ಸಾಮರ್ಥ್ಯದ ದೃಷ್ಟಿಯಿಂದ ಇಬ್ಬರ ಭಿನ್ನತೆಯನ್ನು ಅಳೆಯುವ ಕೆಲಸ ಮಾಡಿದೆ. ಹೆಣ್ಣು–ಗಂಡಿಗೆ ಜೀವನದುದ್ದಕ್ಕೂ ಅವರು ಹೆಂಗಸರನ್ನು ಗಂಡಸರಿಗೆ ಸಾಮಾಜಿಕವಾಗಿ ಒಪ್ಪುವ ರೀತಿಯಲ್ಲಿ ಜೀವಿಸಬೇಕೆಂಬ ಒತ್ತಾಯವನ್ನು ಸೃಷ್ಟಿಸಲಾಗಿದೆ.

"ಇತ್ತೀಚಿನ ದಿನಗಳಲ್ಲಿ ಸಮಾಜಶಾಸ್ತ್ರಜ್ಞರು ಮತ್ತು ಸ್ತ್ರೀವಾದಿಗಳು ಸಾಮಾಜೀಕರಣ ಮತ್ತು ಸಾಮಾಜಿಕ ಲಿಂಗ ಸಿದ್ಧಾಂತಗಳನ್ನು ಮರುಚಿಂತನೆಗೆ ಒಳಪಡಿಸಿದ್ದಾರೆ. ಜೈವಿಕ ಲಿಂಗ (ಸೆಕ್ಸ್) ಜೈವಿಕವಾಗಿ ಬಂದರೆ, ಸಾಮಾಜಿಕ ಲಿಂಗ (ಜೆಂಡರ್) ಸಮಾಜದಿಂದ ರೂಪಿತವಾಗಿ ಬಂದಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ". ಲೈಂಗಿಕ ಜೀವಶಾಸ್ತ್ರದ (ಸೋಷಿಯಲ್ ಬಯಾಲಾಜಿ) ದೃಷ್ಟಿಕೋನದ ಪ್ರಕಾರ ಇರುವುದು. ಎರಡೇ ಜೈವಿಕ ಲಿಂಗಗಳು. ಹೆಣ್ಣು ಮತ್ತು ಗಂಡು; ಎರಡು ಭಿನ್ನ ಜೀವಿಗಳು ಹೊಂದಿರುವ 'ಸ್ವಾಭಾವಿಕ ಪ್ರವೃತ್ತಿ' ಯಾವುದೇ ವ್ಯಕ್ತಿಯ ಗಂಡು ಅಥವಾ ಹೆಣ್ಣು ಆಗಿರುತ್ತಾನೆ/ಳೆ ಇದರಲ್ಲಿ ಯಾವುದೇ ಅನುಮಾನವಿಲ್ಲ. ವ್ಯಕ್ತಿಯ ಜೈವಿಕ ಲಿಂಗ ಬದಲಾಗುವುದಿಲ್ಲ. ಒಂದು ಬಾರಿ ಜೀವ ತಳೆದ 'ಲಿಂಗ' ಅದು ಜೀವಿಯಲ್ಲಿ ಕೊನೆಯತನಕ ಉಳಿಯುತ್ತದೆ. (ಕೃತಕ ಬದಲಾವಣೆ ಹೊರತುಪಡಿಸಿ) ಹಾಗೆಯೇ ಹೆಣ್ಣು ಹೆಣ್ಣಾಗಿಯೇ ಉಳಿಯುತ್ತಾಳೆ; ಗಂಡು ಗಂಡಾಗಿಯೇ ಉಳಿಯುತ್ತಾನೆ. ಇಬ್ಬರ ಜನನಾಂಗಗಳು ಜೈವಿಕ ಲಿಂಗಕ್ಕೆ ದಾರಿ ಮಾಡಿಕೊಡುತ್ತವೆ. ಗಂಡಿಗೆ ಶಿಶ್ನವಿದ್ದರೆ, ಹೆಣ್ಣಿಗೆ ಯೋನಿ ಇರುತ್ತದೆ. ಗಂಡು/ಹೆಣ್ಣು ಏಂಗಡಣೆ ನೈಸರ್ಗಿಕ ಹಾಗೂ ವಸ್ತುನಿಷ್ಠ,

ಗಂಡು-ಹೆಣ್ಣು ಎಂಬ ಜೈವಿಕ ಅಂಶಗಳು ಸಾಮಾಜಿಕ ನಿರ್ಧಾರಕ ಅಂಶವನ್ನು ಮೀರಿರುವ ಸ್ವತಂತ್ರ ಅಸ್ತಿತ್ವವಾಗಿದೆ. ಆದರೆ ಜೈವಿಕ ಲಿಂಗಗಳಿಗೆ ಸಾಮಾಜೀಕರಣದಲ್ಲಿ ಹೆಣ್ಣಿಗೆ ಸ್ತ್ರೀತ್ವ, (ಸ್ತ್ರೀಗೆ ತತ್ವ) ಗಂಡಿಗೆ ಪುರುಷತ್ವ (ಗಂಡಿಗೆ ತತ್ವ)ದ ಕಲ್ಪನೆ(ಲಿಂಗತ್ವ)ಗಳನ್ನು ಹೇರಿ ಹೆಣ್ಣು-ಗಂಡಿನ ಎರಡು ಭಿನ್ನ ಲಿಂಗಗಳನ್ನು ಸಾಮಾಜೀಕರಣವು ಈ ಮೇಲೆ ಹೇಳಿದಂತೆ ಸ್ತ್ರೀತ್ವ ಮತ್ತು ಪುರುಷತ್ವದ ಅಂಶಗಳನ್ನು ಆರೋಪಿಸುವುದರ ಮೂಲಕ ಗಟ್ಟಿಯಾದ ಮನೋಭಾವನೆ ಸೃಷ್ಟಿಸಿರುವುದು ಕಂಡುಬರುತ್ತದೆ. ಈ ಕಾರಣದಿಂದಾಗಿ 'ಸಾಮಾಜೀಕರಣ' ಸಾಮಾಜಿಕ ರಚನೆಯಾಗಿದೆ. ಇದು ಎರಡು ಭಿನ್ನ ಲಿಂಗಗಳಿಗೆ ಬೇರೆ ಬೇರೆಯಾದ ಕರ್ತವ್ಯ, ರೀತಿ, ನೀತಿ ಆಚಾರ-ವಿಚಾರ, ನಡೆ-ನುಡಿ, ಪರಸ್ಪರ ವಿರುದ್ಧತೆ ಮುಂತಾದ ಸಂಗತಿಗಳನ್ನು ಜಾರಿಗೊಳಿಸುವುದರ ಮೂಲಕ 'ಸಾಮಾಜೀಕರಣ' ಜೈವಿಕ ಭಿನ್ನ ಲಿಂಗಗಳ ಮಧ್ಯ ಸಾಮಾಜಿಕ ಭಿನ್ನತೆಯನ್ನು ಸೃಷ್ಟಿಸುತ್ತದೆ ಮತ್ತು ಸೃಷ್ಟಿಸಿದೆ.

ಸಾಮಾಜೀಕರಣ ನಿಂತ ನೀರಲ್ಲ, ಅದು ಸದಾ ಬದಲಾಗುತ್ತಿರುತ್ತದೆ. ಬದಲಾದ ಸಮಯಕ್ಕೆ, ಬದಲಾದ ಸಾಮಾಜಿಕ ವರ್ತನೆಗಳನ್ನು ಸೃಷ್ಟಿಸುತ್ತದೆ. ಹೆಣ್ಣಿಗೆ ಸ್ತ್ರೀತ್ವವನ್ನು ಸಾಮಾಜೀಕರಣಗೊಳಿಸುವಲ್ಲಿ ಹೆಣ್ಣು ತೆಳ್ಳಗಿರಬೇಕು, ಇದಕ್ಕಾಗಿ ಹೆಚ್ಚಿನ ಪ್ರಮಾಣದ ಹೆಣ್ಣು ಮಕ್ಕಳು ತೂಕ ಇಳಿಸುವಿಕೆಗೆ ಆಹಾರದಲ್ಲಿ ಪಥ್ಯಗಳನ್ನು ಮಾಡುವರು (ಹದಿಹರೆಯದವರು). ಇದರಿಂದ ಕೆಲವೊಮ್ಮೆ ಜೈವಿಕ ಲಿಂಗದ ವ್ಯತ್ಯಾಸ ಉಂಟಾಗುವುದೂ ಇದೆ. ಇದಕ್ಕೆ ಹೆಣ್ಣಿಗೆ ಶರೀರ ವರ್ಧನೆಯಿಂದ ಸೌಂದರ್ಯ ವರ್ಧಕ, ಶಸ್ತ್ರಚಿಕಿತ್ಸೆಯವರೆಗೆ ಹಾಗೂ ಹಾರ್ಮೋನ್‌ಗಳ ಚಿಕಿತ್ಸೆಯಿಂದ ಹಿಡಿದು, ಪೌಷ್ಠಿಕಾಂಶದ ಕೊರತೆ ತನಕ ಜೈವಿಕ ಲಿಂಗದ ವ್ಯತ್ಯಾಸವನ್ನು ಸೃಷ್ಟಿಸಿದೆ. ಕೆಲವೊಮ್ಮೆ ಹೆಣ್ಣುಮಕ್ಕಳಲ್ಲಿ ತಮ್ಮ ಬಯಕೆಗಳನ್ನು ಅದುಮಿಡಲು ಪ್ರಯತ್ನಿಸುತ್ತಿರುವುದು ಕಂಡುಬರುತ್ತದೆ. ಹೀಗೆ ಹೆಣ್ಣುಗಳ ದೇಹ ನಿಸರ್ಗ ನಿಯಮವನ್ನು ಸಾಮಾಜೀಕರಣ ಪ್ರಕ್ರಿಯೆಗಳಿಂದ ಜೈವಿಕ ನಿರ್ಧಾರಕವಾದ ಅಂಶಗಳನ್ನು ತಿರುಚುವ ಕೆಲಸ ಈ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ನಡೆಯುತ್ತಿದೆ. ಸಾಂಸ್ಕೃತಿಕ ಸೋಂಕಿಲ್ಲದ ಜೈವಿಕ ಲಿಂಗಗಳ ಮಧ್ಯೆ ಸಾಮಾಜೀಕರಣ ಅಂಶಗಳು ಹೆಣ್ಣು-ಗಂಡಿನ ದೇಹದ ಮೇಲೆ ಪರಿಣಾಮ ಬೀರಿ, ಜೈವಿಕ ಲಿಂಗದ ಅಸ್ತಿತ್ವವನ್ನು ಸಾಮಾಜೀಕರಣ ಪ್ರಕ್ರಿಯೆ ಬುಡಮೇಲು ಮಾಡುತ್ತಿದೆ. ಹೀಗಾಗಿ ಈ ಅಧ್ಯಯನದಲ್ಲಿ ಹೆಣ್ಣು-ಗಂಡು(ಮಹಿಳೆ ಮತ್ತು ಪುರುಷ) ಮಕ್ಕಳ ಸಾಮಾಜಿಕ ಸಂಬಂಧವನ್ನು ಮತ್ತು ವರ್ತನೆಯನ್ನು ಗುರುತಿಸುವುದು. ನಿರ್ದಿಷ್ಟವಾಗಿ ಸಾಂಸ್ಕೃತಿಕ ಗುಣಲಕ್ಷಣಗಳ ಸೂಚಿಸುವ ಸಾಮಾಜೀಕರಣ ಸಂಗತಿಗಳನ್ನು ಅರ್ಥೈಸಿಕೊಂಡು, ಲಿಂಗ ಸಂಬಂಧಿ ಎನ್ನುವುದನ್ನು ಕೇವಲ ಪುರುಷ ಮತ್ತು ಮಹಿಳೆ ಎಂಬ ಸೀಮಿತ ಅರ್ಥದಲ್ಲಿ ಬಳಸದೆ ಇದು ಅವರ ನಡುವಿನ ಸಂಬಂಧಕ್ಕೂ ಆ ಸಂಬಂಧಗಳು ಸಾಮಾಜಿಕ ವ್ಯವಸ್ಥೆಯಲ್ಲಿ ರಚನೆಗೊಂಡಿರುವ ವಿಧಾನಕ್ಕೂ ಅಥವಾ ರೀತಿಗೆ ಅನ್ವಯಿಸಿಕೊಂಡು ಇಲ್ಲಿ ವಿಶ್ಲೇಷಣಾತ್ಮಕವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸಾಮಾಜೀಕರಣ ಸಮಸ್ಯೆ: ಸಾಮಾಜೀಕರಣದ ಸಮಸ್ಯೆಯನ್ನು ಅಲಕ್ಷಿಸುವುದೆಂದರೆ ಸಮಾಜದಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ. ಇಂದು ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆ ಸಮಾಜದಲ್ಲಿ ಎಷ್ಟು ವ್ಯಾಪಕವಾಗಿ ಪಸರಿಸಿದೆ ಎಂದರೆ, ಅದು ನಮ್ಮ ಸಮಾನತೆ, ಪ್ರಜಾತಂತ್ರದ ಸಂವಿಧಾನದ

ಆಶಯ, ರಚನೆಯನ್ನು ಧ್ವಂಸಗೊಳಿಸಿದೆ. ಆದರೆ ಇದನ್ನು ಯಾರೂ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಹೆಣ್ಣು-ಗಂಡು ಮಧ್ಯೆ ಭಿನ್ನತೆಯನ್ನು ಸೃಷ್ಟಿಸುವ ಸಾಮಾಜೀಕರಣದ ಬಗ್ಗೆ ಪ್ರಜ್ಞೆ ಜಾಗೃತಗೊಳಿಸಬೇಕಾಗಿದೆ ಮತ್ತು ಸಾಮಾಜೀಕರಣದಲ್ಲಿ ಆಮೂಲಾಗ್ರ ಬದಲಾವಣೆ ತರುವ ಅವಶ್ಯಕತೆ ಇದೆ. ಏಕೆಂದರೆ ಈ ಸಮಸ್ಯೆ ನೈತಿಕ ಮತ್ತು ಮಾನಸಿಕ ಕ್ರಾಂತಿಯ ಸಮಸ್ಯೆಯಾಗಿದೆ. ಎಲ್ಲರಿಗೂ ಸಮಾನ ಒಳಿತನ್ನು ಸಾಧಿಸಬಲ್ಲ ಕೆಲಸವಾಗಬೇಕಿದೆ. ಆದರೆ ಸಾಮಾಜೀಕರಣ ಸಮಸ್ಯೆಯಲ್ಲಿ ಸೃಷ್ಟಿಗೊಂಡಿರುವ ಲಿಂಗ ತಾರತಮ್ಯ ಹೆಣ್ಣಿಗೆ ಸೀಮಿತಗೊಂಡಿದೆ. ಮತ್ತೊಂದು ಕಡೆ ವರ್ಗ, ಜಾತಿ ಅಥವಾ ಧರ್ಮದ ನೆಲೆಗಳಲ್ಲಿ ಮುಂದುವರೆದು, ಹೆಣ್ಣಿಗೆ ದಿನನಿತ್ಯದ ಅನುಭವಿಸುವ ಅಧೀನತೆ, ತಾರತಮ್ಯ, ಅಸಮಾನ, ನಿಯಂತ್ರಣ, ಹಿಂಸೆಯ ರೂಪವನ್ನು ತಳೆಯುತ್ತಿದೆ. ಸಾಮಾನ್ಯವಾಗಿ ಸಮಾಜದಲ್ಲಿ ಇದಕ್ಕೆ ಸಿಗುವ ನಿದರ್ಶನಗಳೆಂದರೆ, ಕುಟುಂಬವನ್ನು ಮುಂದುವರೆಸುವ ವಂಶ ಪಾರಂಪರ್ಯದಲ್ಲಿ, ಕುಟುಂಬದ ಆರ್ಥಿಕ ವ್ಯವಹಾರಗಳಲ್ಲಿ ಮತ್ತು ಅಂತ್ಯಕ್ರಿಯೆಯಲ್ಲಿ ಪೋಷಕರು ಗಂಡುಮಗುವಿಗೆ ಕೊಡುವ ಆದ್ಯತೆ. ಆಹಾರ ಕೊಡುವಾಗ ಹೆಣ್ಣುಮಕ್ಕಳ ವಿಷಯದಲ್ಲಿ ಮಾಡುವ ತಾರತಮ್ಯ; ಹೆಣ್ಣುಮಕ್ಕಳ ಮೇಲೆ ಹೊರಿಸಲಾಗಿರುವ ಮನೆ ಕೆಲಸದ ಹೊರೆ; ಹೆಣ್ಣುಮಕ್ಕಳಿಗೆ ಶಿಕ್ಷಣದ ಕೊರತೆ, ಹೆಣ್ಣುಮಕ್ಕಳಿಗೆ ಸಾರ್ವಜನಿಕ ಅವಕಾಶಗಳು ದೊರೆಯದೇ ಇರುವುದು. ಹೆಣ್ಣು ದೇಹ, ಶ್ರಮ, ಲೈಂಗಿಕತೆ ಮತ್ತು ಆಸ್ತಿಯ ಮೇಲೆ ಗಂಡಿನ ನಿಯಂತ್ರಣ; ಕೆಲಸದಲ್ಲಿ ಲೈಂಗಿಕ ಕಿರುಕುಳ; ಫಲವಂತಿಕೆ/ಸಂತಾನೋತ್ಪತ್ತಿ ವಿಷಯದಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯ ಇಲ್ಲದಿರುವುದು ಇತ್ಯಾದಿ. ಇವೆಲ್ಲವೂ ಹೆಣ್ಣು-ಗಂಡಿನ ಮಧ್ಯೆದ ಸಾಮಾಜೀಕರಣದ ಸಮಸ್ಯೆಯ ಕುರಿತು ಮಾಹಿತಿಗಳನ್ನು ನೀಡುತ್ತವೆ.

ಭಾರತದ ಕಾನೂನಿನಲ್ಲಿ ಹೆಣ್ಣು-ಗಂಡುಗಳನ್ನು ಸಮಾನರೆಂದು ಕರೆಯಲಾಗಿದೆ. ಆದರೆ ಭಾರತೀಯ ಸಮಾಜದ ಸಾಂಪ್ರದಾಯಿಕ ದೃಷ್ಟಿಕೋನ ಮಾತ್ರ ಯಥಾವತ್ತಾಗಿ ಮುಂದುವರೆದಿದೆ. ಇದಕ್ಕೆ ಭಾರತೀಯ ಸಮಾಜದಲ್ಲಿ ಹೆಣ್ಣು-ಗಂಡುಮಕ್ಕಳಿಗೆ ರೂಢಿಸಿಕೊಂಡಿರುವ ಸಾಮಾಜೀಕರಣ ಕಾರಣವಾಗಿದೆ. ಹೆಣ್ಣು-ಗಂಡುಗಳ ಕುರಿತಂತೆ ತಾರತಮ್ಯ ಭಾವನೆಯನ್ನು ಕೇವಲ ಸಾರ್ವಜನಿಕವಾಗಿ ಖಂಡಿಸಿ ತಿರಸ್ಕರಿಸುವವರೂ ಕೂಡ ತಮ್ಮ ದೈನಂದಿನ (ಖಾಸಗಿ) ಬದುಕಿನಲ್ಲಿ ಲಿಂಗ ತಾರತಮ್ಯತೆಯನ್ನು ಅದರ ಅನೇಕ ಸೂಕ್ಷ್ಮ ರೂಪದಲ್ಲಿ ಆಚರಿಸುತ್ತಿದ್ದಾರೆ. ಬೌದ್ಧಿಕ ಮಟ್ಟದಲ್ಲಿ ನಡೆಯುವ ಚಿಂತನೆ, ಚರ್ಚೆಗಳಲ್ಲಿ ಮತ್ತು ಅವುಗಳಿಂದ ಹೊರಹೊಮ್ಮುವ ಪರಿಕಲ್ಪನೆಗಳು ಯಾವಾಗಲೂ ಬದುಕಿನ ಆಚರಣೆಯ ಸಂದರ್ಭದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಅನೇಕ ಬುದ್ಧಿಜೀವಿಗಳೆನಿಸಿಕೊಂಡವರು ಕೂಡ ಲಿಂಗ ಅಸಮಾನತೆ ಹಾಗೂ ಅನ್ಯಾಯದ ಸಾಮಾಜಿಕ ಧಾರುಣ ವಾಸ್ತವಗಳ ಪರಿವೆ ಇಲ್ಲದೆ ತಮ್ಮದೇ ಆದ ಲೋಕದಲ್ಲಿ ಇರುತ್ತಾರೆ. ಕೆಲವೊಮ್ಮೆ ಇವರಲ್ಲಿ ಸಾರ್ವಜನಿಕವಾಗಿ ಲಿಂಗ ಸಮಾನತೆಯ ತಮ್ಮ ನಂಬುಗೆಗಳನ್ನು ಪೋಷಿಸಿದರೂ, ತಮ್ಮ ಖಾಸಗಿ ಜೀವನದಲ್ಲಿ ಅನೇಕ ಪೂರ್ವಗ್ರಹಗಳನ್ನು ಹೊಂದಿರುತ್ತಾರೆ. ಈ ಪೂರ್ವಗ್ರಹಗಳನ್ನು ಹೋಗಲಾಡಿಸಲು ಅವರಿಗಿನ್ನು ಸಾಧ್ಯವಾಗಿಲ್ಲ. ಇದಕ್ಕೆಲ್ಲ ಶೈಕ್ಷಣಿಕ ವಲಯದಲ್ಲಿನ ಸಾಮಾಜೀಕರಣ ಕಾರಣವಾಗಿದೆ. ಏಕೆಂದರೆ ಈವರೆಗೂ ಭಾರತೀಯ ಸಮಾಜದ ಶೈಕ್ಷಣಿಕ ಪಠ್ಯಗಳು ಹೆಣ್ಣು-ಗಂಡುಗಳ ಕುರಿತಂತೆ ಮೇಲು-ಕೀಳು, ಏಣಿ-ಶ್ರೇಣಿ,

ತಾರತಮ್ಯ ಭಾವದ ನೆಲೆಯಲ್ಲಿ ಮುಂದುವರೆದಿರುವುದು. ಹೀಗಾಗಿ ಪ್ರಸ್ತುತ ಅಧ್ಯಯನದಲ್ಲಿ ಸಾಮಾಜೀಕರಣ ಸಮಸ್ಯೆ ಮತ್ತು ಸಾಮಾಜೀಕರಣವನ್ನು ಸೃಷ್ಟಿ ಮಾಡುವ ನಿಯೋಗದಲ್ಲಿ ಒಂದಾದ ಶೈಕ್ಷಣಿಕ ವಲಯದಲ್ಲಿನ ಸಾಮಾಜೀಕರಣದ ಸಮಸ್ಯೆಗಳನ್ನು ವಿಷಯವಸ್ತುವನ್ನಾಗಿಸಲಾಗಿದೆ.

ಸಮಾಜದಲ್ಲಿ ಲಿಂಗಸೂಕ್ಷ್ಮತೆ ಇರಬೇಕು, ಸಮಾಜ ವ್ಯವಸ್ಥೆಯಲ್ಲಿ ಲಿಂಗ ಸೂಕ್ಷತೆಯುಳ್ಳ ಶಿಕ್ಷಣ ಇರಬೇಕು, ಇದರಿಂದ ಹೆಣ್ಣು-ಗಂಡು ಮಕ್ಕಳಿಬ್ಬರಲ್ಲೂ ಲಿಂಗ ಸಮಾನ ಸಾಮಾಜೀಕರಣ ಸ್ಥಾಪನೆ ಸಾಧ್ಯ. ಇಲ್ಲದೆ ಹೋದರೆ ಲಿಂಗ ತಾರತಮ್ಯ ನೀತಿ ಹಾಗೂ ಲಿಂಗ ವ್ಯವಸ್ಥೆಯ ಅಸಮಾನತೆಗಳು ಹೆಣ್ಣು-ಗಂಡುಮಕ್ಕಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತವೆ. ಹಾಗಾಗಿ ಶಿಕ್ಷಣದ ಮೂಲಕ ವಿದ್ಯಾರ್ಥಿಗಳಲ್ಲಿ(ಹೆಣ್ಣು-ಗಂಡುಮಕ್ಕಳಲ್ಲಿ), ಶಿಕ್ಷಕರಲ್ಲಿ ಹಾಗೂ ಭಾವಿ ಪ್ರಜೆಗಳಲ್ಲಿ ಲಿಂಗಸೂಕ್ಷ್ಮತೆ ಬೆಳೆಸುವುದು ಅತ್ಯಾವಶ್ಯಕ; ಈ ನಿಟ್ಟಿನಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಪಠ್ಯಪುಸ್ತಕಗಳನ್ನು ಅವಲೋಕಿಸಬಹುದು. ಅಲ್ಲಿ ಲಿಂಗ ತಾರತಮ್ಯಗೊಳಿಸುವ ಸಾಮಾಜೀಕರಣ ಇರುವುದು ಕಂಡುಬರುತ್ತದೆ. ಇದಕ್ಕೆ ಉದಾಹರಣೆಗೆ ಎರಡನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ರೈತ ಉಳುಮೆ ಮಾಡುತ್ತಿರುವ ಚಿತ್ರದಲ್ಲಿ ಗಂಡುಮಕ್ಕಳು ಮುಂದಾಳಾಗಿ ಕೆಲಸ ನಿರ್ವಹಣೆ; ಹೆಣ್ಣುಮಗಳು ಸಹಾಯಕಳಾಗಿ ಇದ್ದಾಳೆ. ಇದುವರೆಗೂ ಈ ಪಠ್ಯಪುಸ್ತಕದಲ್ಲಿ ರೈತ ಎಂದರೆ ಪುರುಷನೇ; ಅವನೇ ದುಡಿಮೆ ಕಾರ್ಯದಲ್ಲಿ ಮುಂದು. ಹೆಣ್ಣು ಪುರುಷನಿಗೆ ಸಹಾಯಕಳು ಎಂಬಂತೆ ತೋರಿಸಲಾಗಿದೆ. ೩ನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ಪುಟ ೪ರಲ್ಲಿ ತೋರಿಸಲಾಗಿರುವ ಚಿತ್ರದಲ್ಲಿ ತಾಯಿ ಕೆಲಸ ಮಾಡುತ್ತಿದ್ದು, ಅದು ಮಗುವನ್ನು ಪೋಷಿಸುವ ಕೆಲಸ ಅದು ಅವಳ ಕೆಲಸ ಎನ್ನುವಂತೆ ಬಿಂಬಿತವಾಗಿದೆ. ೪ನೇ ತರಗತಿ ಕನ್ನಡ ಪಠ್ಯದಲ್ಲಿ ಆಳ್ವಿಕೆ ಮತ್ತು ಪ್ರಮುಖ ಪಾತ್ರಗಳಲ್ಲಿ ಪುರುಷರನ್ನು ಮಾತ್ರ ಉಲ್ಲೇಖಿಸಲಾಗಿದೆ. ೪ನೇ ತರಗತಿ ಪಾಠ-೨ 'ಬುದ್ಧಿವಂತ ರಾಮಕೃಷ್ಣ' ಪುಟ-೬ ಮತ್ತು ೭ರಲ್ಲಿ ರಾಮಕೃಷ್ಣ ಆಸ್ಥಾನದ ಚಿತ್ರಗಳಲ್ಲಿ ರಾಜ, ಮಂತ್ರಿ, ಪಂಡಿತ, ಕಾವಲುಗಾರ ಮತ್ತು ಸೈನಿಕ ಪಾತ್ರಗಳಲ್ಲಿ ಪುರುಷರನ್ನು ತೋರಿಸಿ, ಮಹಿಳೆಯರನ್ನು ಸೇವಕಿಯರಾಗಿ ತೋರಿಸಲಾಗಿದೆ. ೫ನೇ ತರಗತಿಯ ಪುಟ ೨೪ರ 'ಸುಳ್ಳು ಹೇಳಬಾರದು' ಎಂಬ ೪ನೇ ಪಾಠದಲ್ಲಿ ಹೆಣ್ಣುಮಕ್ಕಳು ಸಂಪ್ರದಾಯ ಆಚರಣೆಗಳ ಮುಂದುವರೆಸಿಕೊಂಡು ಹೋಗುವವರು ಎನ್ನುವ ಸಾಮಾಜೀಕರಣದ ಮಾಹಿತಿ ದೊರೆಯುತ್ತದೆ. ೭ನೇ ತರಗತಿ ಸಿರಿ-ಕನ್ನಡ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕದಲ್ಲಿ ಕೃಷ್ಣ-ಸುಧಾಮ (ನಾಟಕ) ಪಾಠದಲ್ಲಿ ಸುಧಾಮ ಮತ್ತು ಆತನ ಹೆಂಡತಿಯ ಸಂಭಾಷಣೆಯಲ್ಲಿ ಮಕ್ಕಳ ಉಡುಗೆ ತೊಡುಗೆ ಮತ್ತು ಸರ, ಓಲೆ, ಬಳೆ ಎಲ್ಲಾ ದೊರೆಯುವ ಸಂಭಾಷಣೆಯಲ್ಲಿ ಹೆಣ್ಣುಮಕ್ಕಳೇ ಸರ, ಓಲೆ, ಬಳೆ ಹಾಕಿಕೊಳ್ಳುವವರೆಂದು ಹೇಳಲಾಗಿದೆ. ೭ನೇ ತರಗತಿ 'ಸಿರಿ-ಕನ್ನಡ' ಪ್ರಥಮ ಭಾಷೆ ಕನ್ನಡ ಪಠ್ಯಪುಸ್ತಕದ 'ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು' ಎಂಬ ಒಂದನೇ ಪಾಠದಲ್ಲಿ ತಾಯಿಯಾದವಳು ಮಕ್ಕಳನ್ನು ಮಡಿಲಲ್ಲಿ ಕುಳ್ಳಿರಿಸಿಕೊಂಡು ಗಾಳಿ

ಬೀಸುವುದು, ಕತೆ ಹೇಳುವುದು; ಇವೆಲ್ಲ ಅವಳದೇ ಕೆಲಸ ಎನ್ನುವ ಪಾತ್ರವನ್ನು ಈ ಪಾಠದ ಮೂಲಕ ಮಕ್ಕಳಲ್ಲಿ ಸಾಮಾಜೀಕರಣಗೊಳಿಸಲಾಗಿದೆ. ೮ನೇ ತರಗತಿ 'ಸಿರಿ-ಕನ್ನಡ' ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕದಲ್ಲಿ ಕೊಡಗಿನ ಗೌರಮ್ಮನವರು ಬರೆದ 'ಆಹುತಿ' ಎಂಬ ಸಣ್ಣ ಕಥೆಯನ್ನು ೩ನೇ ಪಾಠದಲ್ಲಿ ಇಡಲಾಗಿದೆ. ಈ ಕಥೆಯಲ್ಲಿ ಬಹುತೇಕ ಪಾತ್ರಗಳಲ್ಲಿ ಗಂಡು ವರದಕ್ಷಿಣೆ ಪಡೆಯುವುದು, ಕೇಳುವುದು, ಆಸೆ ಪಡುವುದು, ಗಂಡಿಗೆ ಅಧಿಕಾರವಿದೆ ಎನ್ನುವ ಸಾಮಾಜೀಕರಣವನ್ನು ರೂಪಿಸುವ ಅಂಶಗಳ ಸನ್ನಿವೇಶಗಳಿವೆ. ಆದುದರಿಂದ ಪಠ್ಯವನ್ನು ರೂಪಿಸುವಾಗ ನಮ್ಮ ಜವಾಬ್ದಾರಿ ಮತ್ತು ಕಾಳಜಿಗಳ ಹೆಚ್ಚು ಗುರುತರವೂ ನಿಖರವೂ ಆಗಿರಬೇಕಾಗುತ್ತದೆ. ನಮ್ಮ ಎಳೆಯ ತಲೆಮಾರು ಹೇಗೆ ಬೆಳೆಯಬೇಕೆಂದು ನಾವು ಆಶಿಸುತ್ತೇವೆ ಎಂಬುದೇ ಮೂಲಭೂತವಾಗಿ ನಾವು ಕೇಳಿಕೊಳ್ಳಬೇಕಾದ ಮುಖ್ಯ ಪ್ರಶ್ನೆಯಾಗಿದೆ. ಈ ಹಿನ್ನೆಲೆಯಿಂದ ಪ್ರಸ್ತುತ ಹೆಣ್ಣು-ಗಂಡು ಮಕ್ಕಳಿಗೆ ಪಠ್ಯಪುಸ್ತಕಗಳು ಸಾಮಾಜೀಕರಣ ಸಮಸ್ಯೆ ಸೃಷ್ಟಿಸುತ್ತಿವೆ ಎನ್ನುವ ಆಶಯದಲ್ಲಿ ಲಿಂಗ ಸಂಬಂಧಿ ದೃಷ್ಟಿಕೋನದ ಅಧ್ಯಯನ ಮಾಡಲಾಗಿದೆ.

ಸ್ತ್ರೀ-ಪುರುಷರ ನಡುವೆ ಇರುವ ಭಿನ್ನತೆಗಳು ಜೈವಿಕವಾದವುಗಳಲ್ಲ, ಸಾಮಾಜಿಕವಾದವುಗಳು. ಅವು ಒಂದು ನಿರ್ದಿಷ್ಟ ಸಮಾಜ ಮತ್ತು ಸಂಸ್ಕೃತಿಯ ಉತ್ಪನ್ನಗಳು, ಲಿಂಗತ್ವವೆಂಬುದು ಸಾಮಾಜಿಕ ಸಂಗತಿಯಾಗಿದ್ದು; ಗಂಡು ಹೆಣ್ಣಿನ ಲಿಂಗ ಸಂಬಂಧಗಳ ಬಗ್ಗೆ ಸೂಕ್ಷ್ಮ ಸಂವೇದನಾಶೀಲತೆ ಇರಬೇಕು; ಮಕ್ಕಳಲ್ಲಿ ಲಿಂಗತ್ವದ ಪೂರ್ವಗ್ರಹಗಳು ಇರಬಾರದು. ಹೆಣ್ಣಾಗಲಿ-ಗಂಡಾಗಲಿ, ಲಿಂಗತ್ವ ಸೂಕ್ಷ್ಮತೆ ಹೊಂದಿದವರಾಗಬೇಕು. ಪುರುಷ ಪ್ರಧಾನ ಚಿಂತನೆ, ದೃಷ್ಟಿಕೋನಕ್ಕೆ ತುತ್ತಾಗಿಸಬಾರದು. ಈಗಾಗಲೇ ಇರುವ ಜಾತಿ, ವರ್ಗ, ವರ್ಣಗಳ ಕಾಯಿಲೆಗಳಿಂದ ಮುಕ್ತರಾಗಿ ಆರೋಗ್ಯಪೂರ್ಣರಾಗಿ ಬೆಳೆಯಬೇಕು. ಇದೇ ಸಂದರ್ಭದಲ್ಲೇ ಪಠ್ಯಗಳಲ್ಲಿ ಮಹಿಳಾ ಪ್ರತಿನಿಧೀಕರಣದ ಸ್ವರೂಪವನ್ನು ಚರ್ಚಿಸುವ ಅಗತ್ಯವೂ ಇದೆ. ಲಿಂಗಾಧಾರಿತ ಅಸಮಾನತೆಯನ್ನು ತೊಡೆದು ಹಾಕಿ, ಲಿಂಗ ಸಮಾನತೆಯ ಸಮಾಜವನ್ನು ಕಟ್ಟುವುದು ನಮ್ಮ ಗುರಿಯಾಗಬೇಕು. ಲಿಂಗ ಸೂಕ್ಷ್ಮತೆಯನ್ನು ಸಾಮಾಜೀಕರಣವನ್ನು ಎಳೆಯರಲ್ಲಿ ಬಿತ್ತುವ ಮೂಲಕ ಭವಿಷ್ಯದಲ್ಲಿ ಲಿಂಗ ಸಮಾನತೆಯ ಸಮ-ಸಮಾಜದ ಸಾಮಾಜೀಕರಣ ನಿರ್ಮಾಣ ಸಾಧ್ಯವೆಂದು ಹಲವು ಪ್ರಜ್ಞಾವಂತರು ಒಪ್ಪಿಕೊಂಡಿದ್ದಾರೆ. ಇಂತಹ ಅಂಶಗಳನ್ನು ಲಿಂಗಸೂಕ್ಷ್ಮತೆಗಳ ಸಾಮಾಜೀಕರಣ ಪಠ್ಯಪುಸ್ತಕಗಳು ಒಳಗೊಂಡಿವೆಯೇ ಎನ್ನುವ ಪ್ರಶ್ನೆಗಳೊಂದಿಗೆ ಹಾಗೂ ಈ ಮೂಲಕ ಪಠ್ಯಪುಸ್ತಕಗಳು ಯಾವ ಸಾಮಾಜೀಕರಣವನ್ನು ರೂಪಿಸುತ್ತಿವೆ? ಆ ಮೂಲಕ ಯಾವ ಸಮಸ್ಯೆಗಳನ್ನು ಹೆಣ್ಣು-ಗಂಡು ಮಕ್ಕಳಲ್ಲಿ ಬಿತ್ತುವ ಕೆಲಸ ಮಾಡುತ್ತವೆ ಎನ್ನುವುದನ್ನು ಶೋಧಿಸುವ ನೆಲೆಯಿಂದಲೂ ಅಧ್ಯಯನ ಮಾಡಲಾಗಿದೆ.

ಶಿಕ್ಷಣ ವ್ಯಕ್ತಿ(ಮನುಷ್ಯ) ವಿಕಾಸಗೊಳ್ಳಲು ಹಾಗೂ ತಮ್ಮ ಹೃದಯವಂತಿಕೆಯನ್ನು ಜ್ಞಾನದ ಮತ್ತು ಅನುಭವದ ಆಧಾರದ ಮೇಲೆ ಹೆಚ್ಚಿಸಿಕೊಳ್ಳಲು ಇರುವ ಒಂದು ತಿಳುವಳಿಕೆಯಾಗಿದೆ. ಸಾಮಾಜಿಕ ಪಿಡುಗುಗಳನ್ನು ಕಿತ್ತೆಸೆಯಲು ಮತ್ತು ಬೇಧಭಾವರಹಿತ ಸಮಾಜವನ್ನು ಕಟ್ಟಲು

ನೆರವಾಗಬೇಕಾದ ಒಂದು ಸಾಧನವಾಗಿ ಶಿಕ್ಷಣ ಇರಬೇಕು. ಏಕೆಂದರೆ ಪ್ರಸ್ತುತ ಸಮಾಜದಲ್ಲಿ ಪುರುಷ ಪ್ರಧಾನ ರೂಪಿಸಿದ ಸಾಮಾಜೀಕರಣದಿಂದಾಗಿ ಹೆಣ್ಣುಮಕ್ಕಳನ್ನು ಗುಲಾಮರನ್ನಾಗಿ ಮಾಡಿಕೊಂಡು, ನೆಪಮಾತ್ರಕ್ಕೆ ದೈವತ್ವದ ಸ್ಥಾನಕ್ಕೇರಿಸಿ, ಅವ್ಯಾಹತವಾಗಿ ಶೋಷಣೆ ಮಾಡುತ್ತಾ ಬರಲಾಗಿದೆ. ಹೀಗಾಗಿ ಪಠ್ಯಗಳಲ್ಲಿ ಹೆಣ್ಣಿಗೆ ಯಾವ ಸ್ಥಾನಮಾನ ನೀಡಿದೆ ಎಂಬುದನ್ನು ಕಂಡುಕೊಳ್ಳಲು ಪ್ರಸ್ತುತ ಅಧ್ಯಯನದ ಅವಶ್ಯಕತೆ ಇದೆ. ಮಹಿಳೆ ಮತ್ತು ಹೆಣ್ಣುಮಕ್ಕಳ ಮೇಲೆ ಕೌಟುಂಬಿಕ ದೌರ್ಜನ್ಯದ ಜೊತೆಗೆ ಹೆಣ್ಣು ಭ್ರೂಣ ಹತ್ಯೆ, ಬಾಲ್ಯವಿವಾಹ, ಲೈಂಗಿಕ ಅತ್ಯಾಚಾರ, ಸಾಗಾಣಿಕೆ, ವರದಕ್ಷಿಣೆ ಕಿರುಕುಳ ಮತ್ತು ಸಾವು, ಮರ್ಯಾದಾ ಹತ್ಯೆ, ಆತ್ಮಹತ್ಯೆ (ವ್ಯವಸ್ಥಿತ ಕೊಲೆ), ಆ್ಯಸಿಡ್ ದಾಳಿ ಮುಂತಾದವುಗಳ ಮೂಲಕ ಸ್ತ್ರೀ ಶೋಷಣೆಯನ್ನು ಅವ್ಯಾಹತವಾಗಿ ನಡೆಯುತ್ತಿದೆ. ನಮ್ಮ ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗಗಳು ಈ ಮಹಿಳಾ ಸಮಸ್ಯೆಗಳ ಬಗ್ಗೆ ಬಹುತೇಕ ಸಂದರ್ಭಗಳಲ್ಲಿ ಮೌನ ವಹಿಸಿರುವುದು ಇದೆ. ಹೀಗಾಗಿ ಶೈಕ್ಷಣಿಕ ಪಠ್ಯಗಳು ನಿರಂತರವಾಗಿ ಹೆಣ್ಣು-ಗಂಡು ಮಕ್ಕಳಿಗೆ ಯಾವ ಸಾಮಾಜೀಕರಣ ರೂಪಿಸುತ್ತಿವೆ ? ಅಥವಾ ರೂಪಿಸುತ್ತಿರುವ ಪಠ್ಯಗಳಲ್ಲಿ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಅಂಶಗಳು ಹೆಣ್ಣು-ಗಂಡಿನ ಪ್ರಾಕೃತಿಕ ಭಿನ್ನತೆಗೆ 'ಸಾಮಾಜಿಕ ಭಿನ್ನತೆ'ಯನ್ನು ಕಟ್ಟಿಕೊಡುವ ಕೆಲಸ ಮಾಡುತ್ತಿವೆಯೇ ? ಅಥವಾ ಸಂಪ್ರದಾಯಗಳ ಕಟ್ಟಳೆ ಹೆಣ್ಣಮಕ್ಕಳನ್ನು 'ಕುಟುಂಬ' ಎಂಬ ಬಂಧಿಖಾನೆಯೊಳಗೆ ಇರುವಂತೆ ಹೆಣ್ಣು ಮತ್ತು ಗಂಡಿಗೆ ಅನ್ವಯಿಸಿರುವ ಮೌಲ್ಯಗಳು, ನಿಯೋಜಿತ ಪಾತ್ರಗಳು ಹಾಗೂ ಕಟ್ಟಿಕೊಟ್ಟಿರುವ ಮಿಥ್ಯೆಗಳು 'ಹೆಣ್ಣ ಕೀಳು, ಗಂಡು ಮೇಲು' ಎಂಬುದು ಸ್ಥಾಯೀಭಾವವಾಗಿರುವಂತೆ ಮುಂದುವರೆಸುತ್ತಿವೆಯೇ ? ಎನ್ನುವುದನ್ನು ಶೋಧಿಸುವುದಾಗಿದೆ. ಏಕೆಂದರೆ ಇಂದಿಗೂ ಸ್ತ್ರೀ ಶೋಷಣೆಯು ಶಾಶ್ವತವೂ ಹಾಗೂ ಸಹಜವೂ ಎಂಬಂತೆ ಆಗಿದೆ. ಈ ಸಾಂಸ್ಥಿಕವಾದ ಮಾನವ ನಿರ್ಮಿತ ಬೇಧವನ್ನು ಒಡೆಯಲು ಹೊಸ ಸಂಸ್ಥೆಯಾದ ಶಿಕ್ಷಣಕ್ಕೆ ಹೆಚ್ಚು ಅವಕಾಶವಿದೆ ಎಂಬುದನ್ನು ಮನಗಂಡು, ಲಿಂಗತ್ವ ಸಮಾನತೆ ಮತ್ತು ಲಿಂಗತ್ವ ನ್ಯಾಯದ ಪರಿಕಲ್ಪನೆಯಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಪಠ್ಯಪುಸ್ತಕದ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ.

ಸಮಾಜದ ಸಾಮಾಜೀಕರಣದಲ್ಲಿ ಗಂಡುಮಕ್ಕಳ ಬಗ್ಗೆ ವ್ಯಕ್ತವಾಗುತ್ತಿರುವ ವಿಶೇಷ ಒಲವಿಗೆ ವಿರುದ್ಧವಾಗಿ ಹೆಣ್ಣುಮಕ್ಕಳ ಬಗೆಗೆ ಒಂದು ರೀತಿಯ ಅನಾದರ ಅಥವಾ ತಾತ್ಸಾರವಿದೆಯೆಂದು ತಿಳಿಯಲಾಗಿದೆ. ಕುಸಿಯುತ್ತಿರುವ ಲಿಂಗ ಅನುಪಾತ, ಜನನ ಕಾಲದಲ್ಲಿ ಆಯುಶ್ ಪ್ರಮಾಣದ ಹೆಣ್ಣುಮಕ್ಕಳಲ್ಲಿ ಅಧಿಕವಿದ್ದರೂ ಲಿಂಗ ಅನುಪಾತದಲ್ಲಿ ಹೆಣ್ಣು ಶಿಶುವಿನ ಕಡಿಮೆ ಇದೆ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಹೆಣ್ಣುಮಕ್ಕಳನ್ನು ಕಡೆಗಣಿಸಿರುವ ವಿಷಯದ ಕುರಿತು ಬಹಳಷ್ಟು ಸಂಶೋಧನಾ ಅಧ್ಯಯನಗಳು ಬೆಳಕು ಚೆಲ್ಲಿವೆ. ಕಳೆದ ಹಲವಾರು ದಶಕಗಳ ಜನಗಣತಿಯ ಮಾಹಿತಿಯನ್ನು ವಿಶ್ಲೇಷಿಸಿದಾಗ ದಿನೇ ದಿನೇ ಸಮಾಜದಲ್ಲಿ ಹೆಣ್ಣುಮಕ್ಕಳ ಪ್ರಮಾಣ ಗಂಡು ಮಕ್ಕಳಿಗೆ ಹೋಲಿಸಿದರೆ ಇಳಿಕೆ ಪ್ರಮಾಣ ಕಂಡುಬರುತ್ತಿದೆ. ಭಾರತದಲ್ಲಿ ೧೯೯೧-೨೦೦೧ ಅವಧಿಯಲ್ಲಿ ಲಿಂಗ ಅನುಪಾತ ೨೦೦೧ರಲ್ಲಿ ೧೦೦೦ ಪುರುಷರಿಗೆ-೯೩೩ ಮಹಿಳೆಯರು,

೨೦೧೧ರಲ್ಲಿ ೧೦೦೦ ಪುರುಷರಿಗೆ ೯೪೩ ಮಹಿಳೆಯರು ಕಂಡುಬರುತ್ತಾರೆ. ಲಿಂಗಾನುಪಾತಕ್ಕೆ ಕಾರಣಗಳನ್ನು ಹುಡುಕಿದಾಗ ದೊರೆಯುವ ಹಲವಾರು ಅಂಶಗಳು ಹೇಳುವಂತೆ ಹೆಣ್ಣುಮಕ್ಕಳ ಬಗೆಗಿನ ತಾರತಮ್ಯ, ತಾತ್ಸಾರ, ಅಸಡ್ಡೆ ಸಾಮಾಜೀಕರಣ ಮುಂದುವರಿಯುತ್ತಿದೆ. ಹೀಗಾಗಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಪಠ್ಯಪುಸ್ತಕದಲ್ಲಿ ಹೆಣ್ಣು-ಗಂಡಿನ ಕುರಿತಂತೆ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಕೌಟುಂಬಿಕ ವಲಯದಲ್ಲಿ ಅವರ ದುಡಿಮೆ, ಕಾಣಿಕೆಯನ್ನು ಗುರುತಿಸುವ ಮತ್ತು ದಾಖಲಿಸುವ ಕೆಲಸಗಳು ಆಗಿದೆಯೇ ಇಲ್ಲವೋ ಎಂಬುದನ್ನು ಮೂಲ ಆಸಕ್ತಿ ನೆಲೆಯಲ್ಲಿ ಕಂಡುಕೊಳ್ಳುವುದಾಗಿದೆ. ಪ್ರಜಾಪ್ರಭುತ್ವದಲ್ಲಿ ಶಿಕ್ಷಣ ವ್ಯವಸ್ಥೆಯು ಹೆಣ್ಣು-ಗಂಡು ಮಕ್ಕಳ ಸಮಾನ ವ್ಯಕ್ತಿತ್ವವನ್ನು ಕಲ್ಪಿಸುವ, ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಿಸುವ, ಅಸಮಾನತೆಯನ್ನು ಪ್ರಶ್ನಿಸುವ ಹಾಗೂ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವ ರೀತಿಯಲ್ಲಿ ಶಿಕ್ಷಣದ ಮೂಲಕ ಸಾಮಾಜೀಕರಣ ಬೇಕಾಗಿದೆ. ಪಾಠಗಳ ಮತ್ತು ಚಟುವಟಿಕೆಗಳ ಮೂಲಕ ಲಿಂಗ ಸಮಾನ ಸಾಮಾಜೀಕರಣ ರೂಪಿಸಬೇಕಿದೆ. ಈ ದೃಷ್ಟಿಯಿಂದ ಅಧ್ಯಯನ ಮಾಡಲಾಗಿದೆ.

೧.೨. ಅಧ್ಯಯನದ ಉದ್ದೇಶ

೧. ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಪಠ್ಯಗಳ ಮೂಲಕ ವ್ಯಕ್ತವಾಗುವ ಗಂಡು-ಹೆಣ್ಣು ಮಕ್ಕಳ ಮೇಲಿನ ಸಾಮಾಜೀಕರಣ ಸಮಸ್ಯೆಗಳನ್ನು ಪರಿಶೀಲಿಸುವುದು.

೨. ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಲಿಂಗ ತಾರತಮ್ಯ ನೆಲೆಗಳನ್ನು ಶೋಧಿಸಿ ವಿಶ್ಲೇಷಿಸುವುದು.

೩. ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳಲ್ಲಿ ವ್ಯಕ್ತವಾಗುವ ಪುರುಷ ಪ್ರಧಾನ ಚಿಂತನೆಗಳನ್ನು ಸ್ತ್ರೀವಾದಿ ಚಿಂತನೆಗೆ ಒಳಪಡಿಸಿ ಅಧ್ಯಯನಿಸುವ ಉದ್ದೇಶ ಹೊಂದಿದೆ.

೪. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಕನ್ನಡ ಪಠ್ಯಪುಸ್ತಕಗಳಲ್ಲಿ ಯಾವ ಲಿಂಗಕ್ಕೆ ಸಂಬಂಧಿಸಿದಂತೆ ಯಾವ ಗ್ರಹಿಕೆಗಳು ಮೌಲ್ಯಗಳು ಮತ್ತು ಯಾವ ನಂಬಿಕೆಗಳ ಸಾಮಾಜೀಕರಣವನ್ನು ರೂಪಿಸುತ್ತಿವೆ ಎಂಬುದನ್ನು ತಿಳಿಯುವ ಉದ್ದೇಶವನ್ನು ಪ್ರಸ್ತುತ ಅಧ್ಯಯನ ಹೊಂದಿದೆ.

೫. ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳಲ್ಲಿನ 'ಲಿಂಗ ಪೂರ್ವಗ್ರಹ' ಪರಿಕಲ್ಪನೆಯ ಸಾಮಾಜೀಕರಣವನ್ನು ಪರಶೀಲಿಸುವುದು ಹಾಗೂ ಇದಕ್ಕಿರುವ ಪರಿಹಾರವನ್ನು ಕಂಡುಕೊಳ್ಳುವುದು.

೬. ಈ ಅಧ್ಯಯನದಲ್ಲಿ ಔಪಚಾರಿಕ(ಪಠ್ಯಪುಸ್ತಕ) ಶಿಕ್ಷಣ, ಅನೌಪಚಾರಿಕ(ಸಮಾಜ) ಶಿಕ್ಷಣ ವಲಯಗಳಲ್ಲಿ ವ್ಯಕ್ತವಾಗುವ ಲಿಂಗ ತಾರತಮ್ಯ ನೆಲೆಗಳನ್ನು ಶೋಧಿಸುವುದು.

೭. ಕುಟುಂಬದೊಳಗಿನ ಗಂಡು-ಹೆಣ್ಣುಮಕ್ಕಳ ಸಾಮಾಜೀಕರಣದಲ್ಲಿನ ತಾರತಮ್ಯವನ್ನು ಅಧ್ಯಯನ ಮಾಡುವುದು.

೮. ಕುಟುಂಬದೊಳಗೆ ವ್ಯಕ್ತವಾಗುವ ಸಾಮಾಜೀಕರಣ ಗಂಡು–ಹೆಣ್ಣಿನ ಸಂಬಂಧಗಳ ಸಂದರ್ಭಗಳಲ್ಲಿ ಸಾಮಾಜಿಕ, ಶೈಕ್ಷಣಿಕ, ಸ್ವಾತಂತ್ರ್ಯ ಹಕ್ಕು ಬಾಧ್ಯತೆಯನ್ನು ಯಾರಿಗೆ ನೀಡುತ್ತದೆ ಎನ್ನುವುದನ್ನು ಪರಿಶೀಲಿಸುವುದು.

೯. ವ್ಯಕ್ತಿಯ ಧಾರಣಾ ಸಾಮರ್ಥ್ಯವನ್ನು ಹೆಚ್ಚಿಸುವ ಶಕ್ತಿ ಶಿಕ್ಷಣ ಹೊಂದಿದೆ. ಇದನ್ನು ಹೊಂದುವ ಶೈಕ್ಷಣಿಕ ಸಾಮಾಜೀಕರಣದ ಸ್ವರೂಪ ಮತ್ತು ಪೂರ್ವಗ್ರಹದ ನೆಲೆಗಳನ್ನು ಶೋಧಿಸುವ ಉದ್ದೇಶ ಹೊಂದಿದೆ.

೧.೩. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನದ ವ್ಯಾಪ್ತಿ ೨೦೦೫ರಿಂದ ೨೦೧೦ರ ಶೈಕ್ಷಣಿಕ ಸಾಲಿನ ಪ್ರಾಥಮಿಕ ಹಾಗೂ ಮಾಧ್ಯಮಿಕ (ತರಗತಿ ೧ ರಿಂದ ೮ ರವರೆಗಿನ) ಕನ್ನಡ ಪಠ್ಯಪುಸ್ತಕಗಳಲ್ಲಿನ ಸಾಹಿತ್ಯವನ್ನಾಧರಿಸಿ, ಹೆಣ್ಣು–ಗಂಡುಮಕ್ಕಳ ಲಿಂಗ ತಾರತಮ್ಯದ ನೆಲೆಗಳನ್ನು ಶೋಧಿಸುವುದು ಮತ್ತು ಈ ಮೂಲಕ ಹೆಣ್ಣು–ಗಂಡುಮಕ್ಕಳ ಮೇಲೆ ಸಾಮಾಜೀಕರಣದ ಸಮಸ್ಯೆಗೆ ಕಾರಣವಾಗುವ ಅಂಶಗಳನ್ನು ಶೋಧಿಸಿ, ವಿಶ್ಲೇಷಿಸುವ ಹಂತದ ಅಧ್ಯಯನಕ್ಕೆ ಮಾತ್ರ ಮಿತಿಯನ್ನು ಹಾಕಿಕೊಳ್ಳಲಾಗಿದೆ. ಇದರಲ್ಲಿ ಮುಖ್ಯವಾಗಿ ಸಮಾಜ ವ್ಯವಸ್ಥೆಯಲ್ಲಿ ಗಟ್ಟಿಗೊಂಡಿರುವ ಪುರುಷ ಪ್ರಧಾನ ಚಿಂತನೆಗಳನ್ನು ಸ್ತ್ರೀವಾದಿ ನೆಲೆಯಿಂದ ವಿಮರ್ಶಿಸುವುದು. ಇನ್ನುಳಿದಂತೆ ಸಮಾಜ ವಾಸ್ತವದಲ್ಲಿನ ಸಂಗತಿಗಳಾದ ಕೌಟುಂಬಿಕ ವಲಯ ಮತ್ತು ಸಾಮಾಜಿಕ ವ್ಯವಸ್ಥೆ, ಸಾಮಾಜೀಕರಣವನ್ನು ಹೇಗೆ ಗಂಡು–ಹೆಣ್ಣುಮಕ್ಕಳಲ್ಲಿ ಗಟ್ಟಿಗೊಳಿಸುತ್ತಿದೆ ಎನ್ನುವ ವಾಸ್ತವ ನೆಲೆಯನ್ನು ಪರಿಶೀಲಿಸುವ ಉದ್ದೇಶಕ್ಕಾಗಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಸಂಡೂರು, ಸಿರುಗುಪ್ಪ, ಕೂಡ್ಲಿಗಿ, ಕೊಟ್ಟೂರು ಈ ಐದು ತಾಲೂಕುಗಳಲ್ಲಿ ಕ್ಷೇತ್ರಕಾರ್ಯದ ವ್ಯಾಪ್ತಿ ಹಾಕಿಕೊಳ್ಳಲಾಗಿತ್ತು. ಇಲ್ಲಿ ದೊರೆತ ಮಾಹಿತಿಯನ್ನು ಸ್ತ್ರೀವಾದಿ ದೃಷ್ಟಿಯಿಂದ ವಿಶ್ಲೇಷಣೆ ಮಾಡಲಾಗಿದೆ. ಇದು ಪ್ರಸ್ತುತ ಅಧ್ಯಯನದ ಮಿತಿ ಮತ್ತು ವ್ಯಾಪ್ತಿಯಾಗಿದೆ. ಇದಕ್ಕೆ ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಸಿರುಗುಪ್ಪ ತಾಲೂಕಿನ ಬೂದುಗುಂಪ, ಕರೂರ, ತೆಕ್ಕಲಕೋಟೆ ಗ್ರಾಮ. ಹೊಸಪೇಟೆ ತಾಲೂಕಿನ ಡಣಾಪುರ, ಕಮಲಾಪುರ, ಬುಕ್ಕಸಾಗರ ಗ್ರಾಮ, ಬಳ್ಳಾರಿ ತಾಲೂಕಿನಲ್ಲಿ ಕೊಳೂರ, ಬೆಳಗಲ್ಲು, ಮೋಕ ಗ್ರಾಮ, ಸಂಡೂರು ತಾಲೂಕಿನಲ್ಲಿ ಬಂಡ್ರಿ, ಯಶವಂತ ನಗರ, ತಾರಾನಗರ ಗ್ರಾಮ, ಕೂಡ್ಲಿಗಿ ತಾಲೂಕಿನ ನಾಣಪುರ, ಶಿವಪುರ, ಹಿರೇಹೆಗ್ಡಾಳ ಗ್ರಾಮದ ಒಟ್ಟು ತಾಲೂಕಿಗೆ ೮೦ ಕುಟುಂಬಗಳಂತೆ ಒಟ್ಟು ೫ ತಾಲೂಕಿನಲ್ಲಿ ಒಟ್ಟು ೪೦೦ ತಂದೆ–ತಾಯಿ ಪೋಷಕ ಕುಟುಂಬಗಳನ್ನು ಕ್ಷೇತ್ರಕಾರ್ಯಕ್ಕೆ ಬಳಸಿಕೊಳ್ಳಲಾಗಿದೆ. ಕುಟುಂಬದೊಳಗಿನ ತಂದೆ–ತಾಯಿ/ಪೋಷಕರುಗಳಿಗೆ ಸಂಬಂಧಿಸಿದಂತೆ ನಡೆಸಿದ ಕ್ಷೇತ್ರಕಾರ್ಯದ ಅಧ್ಯಯನವನ್ನಾಧರಿಸಿದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

೧.೪. ಅಧ್ಯಯನದ ವಿಧಾನಗಳು ಮತ್ತು ವೈಧಾನಿಕತೆ

ಪ್ರಸ್ತುತ ಅಧ್ಯಯನಕ್ಕೆ ಸಂಶೋಧನಾ ವಿಧಾನಗಳಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಸಂಶೋಧನ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಮಾಧ್ಯಮಿಕ ಸಂಶೋಧನಾ ವಿಧಾನಗಳಲ್ಲಿ ಪಠ್ಯಪುಸ್ತಕಗಳು,

ಲೇಖನಗಳು, ದಾಖಲಾತಿಗಳು, ಸಂಶೋಧನ ಕೃತಿಗಳು, ಸಾಹಿತ್ಯ ಆಕರಗಳನ್ನು, ಗುಣಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಧಾನವನ್ನು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ. ಇನ್ನು ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆಯನ್ನು ವಾಸ್ತವದ ನೆಲೆಯನ್ನು ಕಂಡುಕೊಳ್ಳುವ ದೃಷ್ಟಿಯಿಂದ ಪ್ರಾಥಮಿಕ ಸಂಶೋಧನಾ ಅಧ್ಯಯನ ವಿಧಾನಗಳಾದ ಕ್ಷೇತ್ರಕಾರ್ಯ, ಪ್ರಶ್ನಾವಳಿ, ರಚಿತ, ಅರಚಿತ, ಗುಂಪು ಚರ್ಚೆ ಮೂಲಕ ಮಾಹಿತಿಯನ್ನು ರ್‍ಯಾಂಡಮ್ ಸ್ಯಾಂಪಲ್ ಮೂಲಕ ಸಂಗ್ರಹಿಸಿಕೊಂಡು ವಿಶ್ಲೇಷಣಾತ್ಮಕ ವಿಧಾನಗಳ ಮೂಲಕ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ. ಕೊನೆಯಲ್ಲಿ ಎಲ್ಲ ದತ್ತಾಂಶವನ್ನು ಸ್ತ್ರೀವಾದಿ ವೈಧಾನಿಕತೆಯೊಂದಿಗೆ ಖಚಿತ ದೃಷ್ಟಿಕೋನದ ನೆಲೆಯಿಂದ ಅಧ್ಯಯನ ಮಾಡಲಾಗಿದೆ.

ಜ್ಞಾನ ಮೀಮಾಂಸೆ ಎನ್ನುವುದು ಪ್ರತಿಯೊಂದು ಜ್ಞಾನ ಮೀಮಾಂಸೆಗೆ ಅನ್ವಯಿಸುವ ಮಾತಾಗಿದೆ. ಪ್ರತಿಯೊಂದು ಜ್ಞಾನ ಮೀಮಾಂಸೆಗಳು ಕಳೆದ ಎರಡು ಮೂರು ಶತಮಾನಗಳಲ್ಲಿ ಇನ್ನೂ ಕೆಲವು ಅಂದರೆ ಸಂಸ್ಕೃತಿ, ಮೌಲ್ಯಗಳು, ಸಾಮಾಜಿಕ ವಾಸ್ತವ ಮುಂತಾದ ಜ್ಞಾನ ಮೀಮಾಂಸೆಗಳು ವೇದಕ್ಕಿಂತಲೂ ಪೂರ್ವದಿಂದ ಬಂದಿವೆ. ಸಾಹಿತ್ಯ, ಭಾಷೆ, ಸಂಸ್ಕೃತಿ ಮುಂತಾದ ಜ್ಞಾನ ಶಾಖೆಗಳೆಲ್ಲವೂ ಮೂಲದಲ್ಲಿ ಪಿತೃಪ್ರಧಾನ ರಚನೆಗಳೇ ಆಗಿರುವುದರಿಂದ ಅವು ಕಟ್ಟಿರುವ ಜ್ಞಾನ ಮೀಮಾಂಸೆಗಳೆಲ್ಲವೂ ಪುರುಷ ಪ್ರಧಾನತೆಯಿಂದ ಕೂಡಿವೆ. ಈ ಪಿತೃಪ್ರಧಾನತೆಯ ಲೋಕ ದೃಷ್ಟಿಕೋನವು ವೇದಗಳ ಕಾಲದಿಂದ ಹಿಡಿದು ಇಂದಿನ ಆಧುನಿಕ ಕಾಲದವರೆಗೆ ಬೆಳೆದು ಬಂದಿದೆ. ಇಂದು ನಾವು ಬದುಕುತ್ತಿರುವ ಸಾಮಾಜೀಕರಣ-ಸಾಮಾಜಿಕ ವ್ಯವಸ್ಥೆ-ಕುಟುಂಬ ವಿವಾಹ ಮುಂತಾದ ಸಾಂಸ್ಥಿಕ ರಚನೆಗಳು ಇದರಿಂದ ಹೊರತಲ್ಲ. ಇದೇ ಸಂಗತಿಯು 'ಪಠ್ಯಪುಸ್ತಕಗಳ' ವ್ಯವಸ್ಥೆಯಲ್ಲಿಯೂ ಸೇರಿಕೊಳ್ಳುತ್ತದೆ.

ಈ ಕಾರಣದಿಂದ ಎಲ್ಲಾ ಜ್ಞಾನ ಮೀಮಾಂಸೆಗಳಲ್ಲಿರುವ ಲಿಂಗ ರಾಜಕಾರಣವನ್ನು ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯ ಪರಿಭಾಷೆಯಲ್ಲಿ ಇದನ್ನು ಒಟ್ಟಾರೆಯಾಗಿ ಲೈಂಗಿಕತಾವಾದಿ 'sexist' ಎಂದು ಗುರುತಿಸಿ ಹೆಸರಿಸಲಾಗುತ್ತದೆ. ಏಕಕೇಂದ್ರಿತ ಪುರುಷ ಲೋಕ ದೃಷ್ಟಿಕೋನದ ಜ್ಞಾನ ಮೀಮಾಂಸೆಯನ್ನು 'ಲೈಂಗಿಕತಾವಾದಿ' ಎಂಬ ಪರಿಭಾಷೆಯಲ್ಲಿ ಸ್ತ್ರೀವಾದಿಗಳು ಕರೆಯುತ್ತಾ ಬಂದಿದ್ದಾರೆ. ಇಲ್ಲಿರುವ ಲಿಂಗ ಪೂರ್ವಗ್ರಹವನ್ನು ಒಡೆಯುವ, ಅಲ್ಲಿರುವ ಲಿಂಗ ರಾಜಕಾರಣವನ್ನು ಒಡೆಯುವ, ಅಲ್ಲಿರುವ ಲಿಂಗ ರಾಜಕಾರಣವನ್ನು ಬಯಲಿಗೆಳೆಯಬೇಕಾದರೆ ಈ ಜ್ಞಾನ ಮೀಮಾಂಸೆಗಳನ್ನು 'Non-sexist' ಅಂದರೆ 'ಲೈಂಗಿಕತಾವಾದಿಯಲ್ಲ'ದ ದೃಷ್ಟಿಯಿಂದ ವಿವರಿಸಬೇಕಾಗುತ್ತದೆ. ಈ ನೆಲೆಯಿಂದ ಎಲ್ಲಾ ಜ್ಞಾನ ಶಾಖೆಗಳಲ್ಲಿ ಇರುವ ಲಿಂಗರಾಜಕಾರಣವನ್ನು ಹೊರತೆಗೆದು ಉಭಯಲಿಂಗಿಗಳ ಪರವಾದ ಚಿಂತನೆಯನ್ನು ಹೊರಡಿಸಬೇಕೆಂದರೆ ಐದು ಬಗೆಯ ಮಾನದಂಡಗಳನ್ನು ಸ್ತ್ರೀವಾದಿಗಳು ಸೂಚಿಸುತ್ತಾರೆ. ಪ್ರಸ್ತುತ ಪಠ್ಯಪುಸ್ತಕಗಳಲ್ಲಿ ಹಾಗೂ ಸಾಮಾಜೀಕರಣ ಮನೆ ಮಾಡಿರುವ ಸಾಮಾಜಿಕ ವಾಸ್ತವದಲ್ಲಿ ಈ ಐದು ಪರಿಭಾಷೆಗಳಿಂದ ಅಲ್ಲಿ ಸ್ಥಾಪಿತವಾಗಿರುವ ಲಿಂಗರಾಜಕಾರಣವನ್ನು ಅನಾವರಣ ಮಾಡಬೇಕಾಗುತ್ತದೆ. ಅವು ಯಾವುವೆಂದರೆ,

೧. ಲಿಂಗ ಅಸೂಕ್ಷ್ಮತೆ

೨. ಅತಿ ಸಾಮಾನ್ಯೀಕರಣ

೩. ಸಿದ್ಧಮಾದರಿಯ ಲಿಂಗ ಪಾತ್ರಗಳ ಅಳವಡಿಕೆ

೪. ದ್ವಂದ್ವ ನಿಲುವುಗಳು

೫. ಲೈಂಗಿಕತಾ ದ್ವಿದಾಭಾವ

ಹೀಗಾಗಿ ಸ್ತ್ರೀವಾದಿ ಜ್ಞಾನ ಮೀಮಾಂಸೆ, ಹೆಣ್ಣಿನ ಅನುಭವಗಳು ಹಾಗೂ ಅವುಗಳಿಗೆ ಒದಗುವ ಸಾಕ್ಷಿ ಪ್ರಮಾಣಗಳ ಕುರಿತು ಸ್ತ್ರೀವಾದಿ ಸಂಶೋಧನಾ ವೈಧಾನಿಕತೆ ವಿವರಿಸಿಕೊಳ್ಳುತ್ತದೆ. ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯ ಸಂಶೋಧನೆಯಲ್ಲಿ ಲೈಂಗಿಕತಾವಾದವನ್ನು ತಡೆಗಟ್ಟುವುದು ಹಾಗೂ ಲೈಂಗಿಕತಾವಾದಿಯಲ್ಲದ ಜ್ಞಾನವಾಗಿ ಬೆಳೆಸುವುದು ಸ್ತ್ರೀವಾದಿ ಚಿಂತನಾ ವೈಧಾನಿಕತೆಯ ಬಹುಮುಖ್ಯ ಆಶಯವಾಗಿದೆ. ಈ ನೆಲೆಯಿಂದ ಇಲ್ಲಿ ಮೇಲೆ ಸೂಚಿಸಿದ ಐದು ಬಗೆಯ ವಿಶ್ಲೇಷಣೆಯ ಸ್ತ್ರೀವಾದಿ ವೈಧಾನಿಕತೆಯನ್ನು ಅಳವಡಿಸಿಕೊಳ್ಳಲಾಗಿದೆ.

ಸ್ತ್ರೀವಾದಿಗಳ ಸಂಶೋಧನಾ ವಿಧಾನಗಳು ಪ್ರಧಾನವಾಗಿ ಸಾಮಾಜಿಕ ಮೌಲ್ಯಗಳಿಂದ ಪ್ರಭಾವಿತವಾಗಿದೆ. ಸಾಮಾಜಿಕ ಮೌಲ್ಯಗಳೆಂದರೆ "ಪುರುಷ ರಚನೆಗಳು" ಹಾಗಾಗಿ ಸಂಶೋಧನಾ ವಿಧಾನಗಳನ್ನು ಲಿಂಗನಿರಪೇಕ್ಷವಾದದ್ದಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತಾರೆ. ಮುಂದುವರೆದು, ಜ್ಞಾನವು ಯಾವುದೇ ಸಮಾಜೋ-ರಾಜಕೀಯ ಪ್ರಭಾವಗಳಿಗೂ ಒಳಗಾಗದ 'ಪರಿಶುದ್ಧ' ಸ್ವರೂಪದ್ದು ಎಂಬುದನ್ನು ನಿರಾಕರಿಸುತ್ತಾರೆ. ಹೀಗಾಗಿ ಇಲ್ಲಿ ಮುಖ್ಯವಾಗಿ ಪಠ್ಯಪುಸ್ತಕಗಳಲ್ಲಿ ನುಸುಳಿರುವ ಜ್ಞಾನವನ್ನು ಪರಿಶೋಧಿಸುವಾಗ ಸ್ತ್ರೀವಾದಿ ವೈಧಾನಿಕತೆಯ ಆಶಯವನ್ನು ಅಳವಡಿಸಿಕೊಳ್ಳುತ್ತಾ ಸಂಶೋಧನೆ ಮಾಡಲಾಗಿದೆ.

ಸಂಶೋಧನೆಯಲ್ಲಿ ಲೈಂಗಿಕತಾವಾದ ಪ್ರಭಾವಿಸುತ್ತಿದೆ. ಇಲ್ಲಿ 'ಲೈಂಗಿಕತೆ' ಎಂದಾಗ ದೇಹ ಸಂಬಂಧಿಯಾದದ್ದಲ್ಲ. ಬದಲಿಗೆ ಸಾಮಾಜಿಕ ರಚನೆಗೆ ಸಂಬಂಧಿಸಿದ್ದು; 'ಲಿಂಗತ್ವ'ಕ್ಕೆ ಸಂಬಂಧಿಸಿದ್ದು, ಅಂದರೆ ಹೆಣ್ಣು-ಗಂಡುಗಳಿಗೆ ಆರೋಪಿತ ಚಹರೆಗಳು, ನಡೆನುಡಿ, ವರ್ತನೆ, ಬುದ್ಧಿ-ಭಾವ ಎಲ್ಲವೂ ಹೆಣ್ಣು-ಗಂಡಿಗೆ ಸಂಬಂಧಿಸಿದವು ಪ್ರಕಟಗೊಳಿಸುತ್ತವೆ. ಹೀಗಾಗಿ ಸಂಶೋಧನೆಯಲ್ಲಿ ಈ ಲೈಂಗಿಕತಾವಾದದ ಸವಾಲುಗಳನ್ನು ಕುರಿತು ವಿಶೇಷ ಎಚ್ಚರವಹಿಸಬೇಕು ಎನ್ನುವುದನ್ನು ತಿಳಿಸುತ್ತಾರೆ. ಯಾವುದೇ 'ಜ್ಞಾನ' ಲೈಂಗಿಕತಾವಾದಿಯಾಗಬಾರದು ಎಂಬುದನ್ನು ಹೇಳುತ್ತಾರೆ.

೧. ಲಿಂಗತ್ವ ಅಸೂಕ್ಷ್ಮತೆ

ಇದು ಹೆಣ್ಣು-ಗಂಡುಗಳ ಮಧ್ಯೆ ಅಂತರವನ್ನು ನಿರ್ಮಿಸುತ್ತದೆ. ಹೆಣ್ಣಿಗೆ ಅಧೀನತೆಯನ್ನು, ದೌರ್ಜನ್ಯ, ಹಿಂಸೆ, ಅವಮಾನಗಳನ್ನು ಸಹಜ ಪ್ರಕ್ರಿಯೆಗಳೆಂದು ನಂಬಿಸುತ್ತದೆ. ಗಂಡಸರಿಗೆ, ಅಧಿಕಾರ, ಹಕ್ಕುಗಳನ್ನು ನೀಡುತ್ತದೆ. ಇದು ಹೆಣ್ಣು-ಗಂಡಿನಲ್ಲಿ ನುಸುಳುತ್ತದೆ. ಇದಕ್ಕೆ ಮುಖ್ಯವಾದ

ಕಾರಣವೆಂದರೆ ಪುರುಷಪ್ರಧಾನ ಸಮಾಜವೇ ಆಗಿದೆ. ಪಿತೃಪ್ರಧಾನದ ಧೋರಣೆಗಳು ಸಾಮಾನ್ಯವಾಗಿ ಲಿಂಗ ಪಕ್ಷಪಾತಿ ಗುಣವನ್ನು ಹೊಂದಿರುತ್ತವೆ. ಹೀಗಾಗಿ ಲಿಂಗ ಅಸೂಕ್ಷ್ಮತೆಗಳನ್ನು ಪ್ರಜ್ಞಾಪೂರ್ವಕವಾದ ಚಿಂತನೆಗಳ ಮೂಲಕ ಗುರುತಿಸಬೇಕಾಗುತ್ತದೆ. ಸಂಶೋಧನೆಗಳಲ್ಲಿ ಈ ಲಿಂಗತ್ವ ಅಸೂಕ್ಷ್ಮತೆಯನ್ನು ಗುರುತಿಸುವ ಹಾಗೂ ಅದನ್ನು ತಡೆಗಟ್ಟುವ ಹುನ್ನಾರಗಳನ್ನು ರೂಪಿಸುವ ಅಗತ್ಯತೆಯನ್ನು ಸ್ತ್ರೀವಾದಿ ಚಿಂತನೆಗಳು ಒತ್ತಾಯಿಸುತ್ತವೆ. ಹೆಣ್ಣು-ಗಂಡು ಸಾಮಾಜೀಕರಣದ ಕಾರಣಗಳಿಂದ ಪಠ್ಯಪುಸ್ತಕಗಳು ಯಜಮಾನಿಕೆ, ಅಧೀನತೆಗಳಲ್ಲಿ ಸಿಲುಕಿರುವುದರಿಂದಾಗಿ ಲಿಂಗಸೂಕ್ಷ್ಮತೆಯ ಕುರಿತು ಸ್ತ್ರೀವಾದಿ ವೈಧಾನಿಕತೆ ಎಚ್ಚರ ವಹಿಸಬೇಕೆಂಬುದು ತಿಳಿಸುತ್ತದೆ.

೨. ಅತಿಸಾಮಾನ್ಯೀಕರಣ

ಈ ಸಾಮಾನ್ಯೀಕರಣದ ವಿಧಾನವು ಮಾನವಿಕ ಅಧ್ಯಯನಗಳಲ್ಲಿ, ಸಾಮಾಜಿಕ ಅಧ್ಯಯನಗಳಲ್ಲಿ ವಿಶೇಷವಾಗಿ ಸಮುದಾಯ ಅಧ್ಯಯನಗಳಲ್ಲಿ ತೊಡಕಾಗಿ ಕಾಣಿಸಿಕೊಳ್ಳುತ್ತದೆ. ಅಂದರೆ ಅತಿ ಸಾಮಾನ್ಯೀಕರಣದ ಶೋಧನೆಗಳು 'ಸತ್ಯ'ವನ್ನು ಕಾಣಿಸುವ ಬದಲು ಅಧಿಕಾರ ರಾಜಕಾರಣದ ಹುನ್ನಾರಗಳಾಗಿ ಕೆಲಸ ಮಾಡುತ್ತವೆ. ಹಾಗಾಗಿ ಸಂಶೋಧನಾ ಆಕರಗಳು, ಮಾಹಿತಿ ದತ್ತಾಂಶಗಳು, ವಿಶ್ಲೇಷಣೆ, ತರ್ಕ, ಸಿದ್ಧಾಂತಗಳು ಎಲ್ಲವೂ ಸಾಮಾನ್ಯೀಕರಣಗೊಂಡು ಸಂಶೋಧನಾ ಫಲಿತಗಳು ಪುರುಷ ಅಧಿಕಾರಕ್ಕೆ ಅನುಕೂಲವಾಗುತ್ತವೆ. ಆರ್ಥಿಕತೆ, ಶಿಕ್ಷಣ, ಉದ್ಯೋಗ, ಆರೋಗ್ಯ ಎಲ್ಲಾ ವಲಯಗಳಲ್ಲಿ ಸಾಮಾನ್ಯೀಕರಿಸಿದ ಫಲಿತಗಳು ಒಳಗೊಳ್ಳುತ್ತವೆ. ಹಾಗಾಗಿ 'ಮಹಿಳಾ ವಿಷಯಗಳ' ಶೋಧದಲ್ಲಿ ಅತಿ ಸಾಮಾನ್ಯೀಕರಣ ಸತ್ವವನ್ನು ಹೊರಗಿಡುತ್ತದೆ. ಹೀಗಾಗಿ ಅತಿ ಸಾಮಾನ್ಯೀಕರಣದ ಅಂಶಗಳ ಕುರಿತು ಎಚ್ಚರ ವಹಿಸಬೇಕೆನ್ನುವುದು ಈ ಚಿಂತನೆಯ ಸಾರವಾಗಿದೆ.

೩. ಸಿದ್ಧಮಾದರಿಯ ಲಿಂಗ ಪಾತ್ರಗಳ ಅಳವಡಿಕೆ

ಸಂಶೋಧನೆಯಲ್ಲಿ ಈ ಕುರಿತು ಎಚ್ಚರವಹಿಸಬೇಕು. ಸಾಮಾಜಿಕವಾಗಿ ಹೆಣ್ಣು-ಗಂಡು ಇಬ್ಬರಿಗೂ ಹಕ್ಕು ಮತ್ತು ಬಾಧ್ಯತೆಗಳನ್ನು ಸಮಾನವಾಗಿ ನೀಡಿದೆ ಎಂದು ನಂಬಿಸಲಾಗುತ್ತದೆ. ಆದರೆ ವಾಸ್ತವದಲ್ಲಿ ಹೆಣ್ಣು ಗಂಡಿನ ಅಧೀನಳಾಗಿ ಇರುವುದು ಕಂಡುಬರುತ್ತದೆ. ಉದಾಹರಣೆಗೆ, ಶ್ರಮ ವಿಭಜನೆಯಲ್ಲಿ ಇಬ್ಬರಿಗೂ ಸಮಾನವಾಗಿ ಎಂದು ಬಿಂಬಿಸಿ, ಗಂಡಿನದು 'ತಂದು ಹಾಕುವ ಕೆಲಸ' ಹೆಂಗಸಿನದು 'ಮಾಡಿ ಹಾಕುವ ಕೆಲಸ' ಎಂದು ಹೇಳಲಾಗುತ್ತದೆ. ಸೇವಾ ವಲಯದ ನೆಲೆಯನ್ನು ಹೆಂಗಸಿಗೆ ಎಂದು ಸಿದ್ಧಮಾದರಿಗಳಾಗಿ ಹಂಚಲಾಗಿದೆ. "ಸಾಮಾಜಿಕ ಮೌಲ್ಯ"ಗಳು ಸಾಮಾಜಿಕ ಸಿದ್ಧಮಾದರಿಯ ಚೌಕಟ್ಟಿನಲ್ಲಿ ಸಮಾನತೆಯಲ್ಲಿ ಕಾರ್ಯನಿರ್ವಹಿಸುತ್ತವೆ ಎನ್ನುವುದು ತೋರಿಕೆಗೆ ಮಾತ್ರ ಆಗಿದೆ. ಲಿಂಗಪಾತ್ರ ಅಳವಡಿಕೆಯು ಸಿದ್ಧಮಾದರಿಯದೆಂದು ನಮಗೆ ತಿಳಿಯದೇ ಹೋಗುತ್ತದೆ. ಹೆಣ್ಣು ತಾಯಿ, ಹೆಂಡತಿ, ಮಗಳು ಎಂಬ ಸಿದ್ಧಮಾದರಿ ಪಾತ್ರಗಳಲ್ಲಿ ಅಧೀನವಾಗಿದ್ದಾಳೆ. ಮನೆಯ ಹೊರಗೆ ಬಂದರೂ ದಾದಿ, ವೈದ್ಯೆ, ಶಿಕ್ಷಕಿ, ಕಾರ್ಯದರ್ಶಿ ಎಂಬ ಅವಕಾಶಗಳಷ್ಟೇ ಇರುವುದಾದರೆ ಮಹಿಳೆಯರು ಅಧೀನ ನೆಲೆಯಿಂದ ಹೊರಹೋಗಲು

ಸಾಧ್ಯವೇ ಇಲ್ಲದಂಥ ಪರಿಸ್ಥಿತಿ ಈ ಸಾಮಾಜೀಕರಣ ನಿರೂಪಿಸುತ್ತವೆ ಮತ್ತು ಪಠ್ಯಪುಸ್ತಕಗಳಲ್ಲಿಯೂ ಸಹ ಪ್ರತಿಬಿಂಬಿಸುತ್ತವೆ. ಹೆಣ್ಣುಮಕ್ಕಳಿಗೆ ಆರ್ಥಿಕ ವಲಯ, ಅಧಿಕಾರ, ರಾಜಕೀಯ, ಸೇವಾವಲಯದಲ್ಲಿ ಅಧೀನತೆಯಿಂದ ಮುಕ್ತಿ ಪಡೆಯಬೇಕು ಹಾಗೂ ಅಲ್ಲಿನ ಉತ್ಪಾದನೆಗಳು ಇಬ್ಬರಿಗೂ ಸಮಾನವಾಗಿ ಸಿಗಬೇಕು ಎಂದು ಸ್ತ್ರೀವಾದಿಗಳು ಎಚ್ಚರವಹಿಸುತ್ತಾರೆ.

೪. ದ್ವಂದ್ವ ನಿಲುವುಗಳು

ಕುರಿತಂತೆ ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯಲ್ಲಿ ಇದರ ಪಾತ್ರ ಮುಖ್ಯವಾಗಿದೆ. ಏಕೆಂದರೆ ಪ್ರೀತಿ, ಗೌರವ, ವಿನಯ, ವಿಧೇಯತೆ ಮುಂತಾದ ಮೌಲ್ಯಗಳು ಹೆಣ್ಣು-ಗಂಡು ಇಬ್ಬರಿಗೂ ಸಮಾನವಾಗಿ ಇರಬೇಕು ಆದರೆ ಅಧಿಕಾರ-ವಂಶವಾಹಿನಿಯ ಹಕ್ಕು, ವಾರಸುದಾರಿಕೆಯ ಹಕ್ಕು ನಿರ್ಧಾರಕ ಶಕ್ತಿ ಇವು ಪುರುಷ ಸ್ಥಾಪಿತ ಕೇಂದ್ರೀಕೃತವಾಗಿವೆ.

೫. ಲೈಂಗಿಕತಾ ದ್ವಿದಾಭಾವ

ದ್ವಿದಾಭಾವದ ಕುರಿತಾಗಿ ಎಚ್ಚರ ಸಂಗತಿಗಳನ್ನು ತಿಳಿಸುತ್ತದೆ. ಅಂದರೆ ಸಮಾಜದಲ್ಲಿನ ಭಿನ್ನತೆ, ವ್ಯತ್ಯಾಸ, ವಿರೋಧ, ಶತ್ರುತ್ವ, ಮಿತ್ರತ್ವ ಎಂಬ ಸಂಗತಿಗಳನ್ನು ತುಂಬಾ ಸೂಕ್ಷ್ಮಗಳಲ್ಲಿ ಗುರುತಿಸಿಕೊಳ್ಳುವ ಅಗತ್ಯವಿದೆ ಎನ್ನುವುದನ್ನು ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯ ನಿಲುವು ಹೇಳುತ್ತದೆ. ಹೆಣ್ಣಿಗೆ ಗಂಡು ವಿರುದ್ಧ ನೆಲೆಗಳಲ್ಲಿ, ಶತ್ರುಗಳೆಂಬಂತೆ ಬಾಳುತ್ತಿದ್ದಾರೆ ಎಂಬುದನ್ನೇ ಹೇಳುತ್ತವೆ. ಆದರೆ ಅವರು ವಿರುದ್ಧ ಅಲ್ಲ ಸಮಾನವಾಗಿ ಬಾಳಬೇಕು ಎನ್ನುವ ಆಶಯ ಇಟ್ಟುಕೊಂಡಿರುವವರು ಎಂದು ಸಮಾಜದಲ್ಲಿ ನಿರೂಪಿತವಾಗಬೇಕು ಅವು ಪಠ್ಯಪುಸ್ತಕಗಳ ಮೂಲಕ ಮಕ್ಕಳಲ್ಲಿ ದೃಢೀಕರಿಸಬೇಕು. ಸ್ತ್ರೀವಾದಿಗಳು ಗಂಡು ಹೆಣ್ಣಿನ ಸಾಮಾಜಿಕ ಸಂದರ್ಭಗಳಲ್ಲಿ ತೋರುವ ಭಿನ್ನತೆ-ವಿರೋಧ, ಶತ್ರುತ್ವ-ಮಿತ್ರತ್ವಗಳೆಂಬ ದ್ವಿದಾಭಾವಗಳ ಸ್ವರೂಪವನ್ನು ಗ್ರಹಿಸಲು ಯತ್ನಿಸುತ್ತಾರೆ. ಈ ಗ್ರಹಿಕೆಯು ಸ್ತ್ರೀವಾದಿ ಸಂಶೋಧನೆಗಳಲ್ಲಿನ ಒಂದು ವಿಶಿಷ್ಟ ಆಯಾಮವನ್ನು ಬಲಪಡಿಸಲು ನೆರವಾಗಬಲ್ಲದು ಎಂದು ಸಂಶೋಧಕರು ಅರಿತುಕೊಳ್ಳಬೇಕು.

೧.೫ ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನದ ಸ್ವರೂಪವನ್ನು ಈ ಕೆಳಕಂಡಂತೆ ರೂಪಿಸಿಕೊಳ್ಳಲಾಗಿದೆ.

ಅಧ್ಯಾಯ-೧ರಲ್ಲಿ ಸಂಶೋಧನೆಗೆ ಪೂರಕವಾದ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ವೈಧಾನಿಕತೆಯನ್ನು ಕುರಿತು ಬರೆಯಲಾಗಿದೆ.

ಅಧ್ಯಾಯ-೨ರಲ್ಲಿ ಅಧ್ಯಯನದ ವಿನ್ಯಾಸ ಹಾಗೂ ತಾತ್ವಿಕ ಸ್ವರೂಪವನ್ನು ಹಾಕಿಕೊಂಡು ಅಧ್ಯಯದಲ್ಲಿ ಬಳಸುವ ಪರಿಕಲ್ಪನೆ, ಪಠ್ಯಪುಸ್ತಕಗಳಲ್ಲಿ ಲಿಂಗ ಪೂರ್ವಗ್ರಹದ ಸ್ವರೂಪ ತಾತ್ವಿಕ ವಿಶ್ಲೇಷಣೆ ಮಾಡುವುದರೊಂದಿಗೆ ಹೆಣ್ಣು-ಗಂಡುಮಕ್ಕಳ ಸಾಮಾಜೀಕರಣ ರೂಪಿಸಲು ಕಾರಣವಾಗಿರುವ ನಿಯೋಗಗಳಾದ ಕೌಟುಂಬಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ಸಾರ್ವಜನಿಕ ವಲಯಗಳಲ್ಲಿನ ಸಾಮಾಜೀಕರಣಗೊಳಿಸುವ ಸಂಗತಿಗಳನ್ನು ಸೈದ್ಧಾಂತಿಕ ನೆಲೆಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ-೩ರಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳಲ್ಲಿ ದಾಖಲಾಗಿರುವ ಲಿಂಗ ಸಂಬಂಧಿ ಸ್ವರೂಪ ಕುರಿತು ಚರ್ಚಿಸಲಾಗಿದೆ. ಪಠ್ಯಪುಸ್ತಕಗಳಲ್ಲಿರುವ ವಿವಿಧ ಸಾಮಾಜೀಕರಣ ಸಂಗತಿಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಗಂಡು-ಹೆಣ್ಣುಮಕ್ಕಳ ಕುರಿತ ಗ್ರಹಿಕೆಗಳು, ಪ್ರಾತಿನಿಧಿತ್ವ ಕುರಿತು ಅಧ್ಯಯನ ಮಾಡಲಾಗಿದೆ. ಜೊತೆಗೆ ಪಠ್ಯಗಳಲ್ಲಿ ವ್ಯಕ್ತಗೊಂಡಿರುವ ಭಾಷೆ, ಸಾಹಿತ್ಯದಲ್ಲಿನ ಲಿಂಗ ಪೂರ್ವಗ್ರಹವನ್ನು ಕುರಿತು ಹಾಗೂ 'ಲಿಂಗತ್ವ' ಮತ್ತು 'ಲಿಂಗ ತಾರತಮ್ಯ'ವನ್ನು ಕುರಿತು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ-೪ರಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ದಾಖಲಾಗಿರುವ ಲಿಂಗ ಸಂಬಂಧಿ ಸ್ವರೂಪ ಕುರಿತು ಚರ್ಚಿಸಲಾಗಿದೆ. ಗಂಡು-ಹೆಣ್ಣುಮಕ್ಕಳ ಕುರಿತ ಗ್ರಹಿಕೆಗಳ ಪ್ರಾತಿನಿಧಿತ್ವ ಕುರಿತು ಅಧ್ಯಯನ ಮಾಡಲಾಗಿದೆ. ಅಧಿಕಾರ, ರಾಜಕೀಯ, ಇತಿಹಾಸ, ಸಮಾಜದಲ್ಲಿನ ಲಿಂಗ ಪೂರ್ವಗ್ರಹವನ್ನು ಕುರಿತು ಹಾಗೂ 'ಲಿಂಗ ತಾರತಮ್ಯ'ವನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ-೫ರಲ್ಲಿ ಕ್ಷೇತ್ರಕಾರ್ಯದ ಮೂಲಕ ಕುಟುಂಬದೊಳಗೆ ಇರುವ ಗಂಡು-ಹೆಣ್ಣು ಮಕ್ಕಳ ಮೇಲಿನ ಲಿಂಗ ಪೂರ್ವಗ್ರಹಗಳ ಅಧ್ಯಯನ ಮಾಡಲಾಗಿದೆ. ಇದರಲ್ಲಿ ಮುಖ್ಯವಾಗಿ ಕುಟುಂಬದೊಳಗೆ ಹೆಣ್ಣು-ಗಂಡುಮಕ್ಕಳ ಕುರಿತಾಗಿ ಹೊಂದಿರುವ ಪೋಷಕರ ಮನೋಭಾವ, ಮಕ್ಕಳು ಹೊಂದಿರುವ ಸಾಮಾಜೀಕರಣ ಮುಂತಾದ ಸಂಗತಿಗಳನ್ನು ಆಧರಿಸಿ ಲಿಂಗ ಪೂರ್ವಗ್ರಹಗಳನ್ನು ಪರಿಶೀಲಿಸಲಾಗಿದೆ.

ಅಧ್ಯಾಯ-೬ ಸಮಾರೋಪ; ಅಧ್ಯಯನದಲ್ಲಿ ಕಂಡುಕೊಂಡಿರುವ ಫಲಿತಗಳನ್ನು ನೀಡಲಾಗಿದೆ. ಅನುಬಂಧದಲ್ಲಿ ಅಧ್ಯಯನಕ್ಕೆ ಪೂರಕವಾದ ಆಕರ ಗ್ರಂಥಗಳನ್ನು, ವಕ್ತೃ ವಿವರ ಮತ್ತು ಛಾಯಾಚಿತ್ರಗಳನ್ನು ನೀಡಲಾಗಿದೆ.

೧.೬. ಅಧ್ಯಯನದ ಸಮೀಕ್ಷೆ

ಪ್ರಸ್ತುತ ಅಧ್ಯಯನದಲ್ಲಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆ ಕುರಿತಂತೆ ಈವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ ನೋಡುವುದಾದರೆ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆ ಕುರಿತಂತೆ ನಡೆದ ಅಧ್ಯಯನಗಳು ಕಡಿಮೆ ಕಂಡುಬರುತ್ತವೆ. ಆದರೆ ಹೆಣ್ಣು-ಗಂಡು ಮಕ್ಕಳ(ಮಹಿಳೆ-ಪುರುಷ) ಸಂಬಂಧಿಸಿದಂತೆ ನಡೆದ ಲಿಂಗಸಂಬಂಧಿ ಅಧ್ಯಯನಗಳು ದೊರೆಯುತ್ತವೆ. ಅವುಗಳಲ್ಲಿ ಕೆ. ಸವಿತ ಅವರು 'ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗಸಂಬಂಧಿ ಆಯಾಮಗಳು: ಸಮಾಜೋ, ಆರ್ಥಿಕ ಅಂಶಗಳು' ಅಧ್ಯಯನ ಮಾಡಿರುವುದು ದೊರೆಯುತ್ತದೆ. ಇವರು ಮುಖ್ಯವಾಗಿ ಶಾಲಾ ಶಿಕ್ಷಣ ಸಾರ್ವತ್ರೀಕರಣಕ್ಕೆ ನಡೆಸಿರುವ ಪ್ರಯತ್ನಗಳ ವಿಶ್ಲೇಷಿಸುವುದು, ಮಹಿಳಾ ಶಿಕ್ಷಣ ನಡೆದು ಬಂದ ದಾರಿಯನ್ನು ಗುರುತಿಸಿ ಸಾಕ್ಷರತೆ, ಶಾಲಾ ದಾಖಲಾತಿ, ಹಾಜರಾತಿ, ಶಾಲೆಯನ್ನು ಮಧ್ಯದಲ್ಲಿ ಬಿಟ್ಟು ಮಕ್ಕಳಲ್ಲಿ ಲಿಂಗಸಂಬಂಧಿ ಸ್ವರೂಪವನ್ನು ಗುರುತಿಸಿ

ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರ ಮನೋವೃತ್ತಿಯನ್ನು ವಿಶ್ಲೇಷಿಸಿದ್ದಾರೆ. ವಿವಾಹ ಮತ್ತು ಕುಟುಂಬದ ರಚನೆಗೂ ಹೆಣ್ಣು ಮಕ್ಕಳ ಶಾಲಾ ಭಾಗವಹಿಸುವಿಕೆಗೂ ಇರುವ ಸಂಬಂಧ ಮತ್ತು ಅರ್ಥ ಮಾಡಿಕೊಳ್ಳುವುದನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ. ಪಠ್ಯಗಳಲ್ಲಿನ ಲಿಂಗಸಂಬಂಧಿ ತಾರತಮ್ಯತೆಯ ಬಗ್ಗೆ ವಿವರಿಸಿದ್ದಾರೆ. ಅಲ್ಲದೇ ಹೆಣ್ಣು ಮಕ್ಕಳನ್ನು ಶಿಕ್ಷಣಕ್ಕೆ ಇರುವ ವಿರೋಧಗಳು ಕೇವಲ ಪೋಷಕರಿಂದಲೇ ಹುಟ್ಟಿಕೊಂಡಿರುವಂತಹಗಳಲ್ಲಿ ಇದು ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾದದ್ದು. ಅಂದರೆ ಒಪ್ಪಿತ ಸಾಂಸ್ಕೃತಿಕ ನಡವಳಿಕೆಗಳು ಹೆಣ್ಣುಮಕ್ಕಳ ಶಿಕ್ಷಣದ ಬೆಳವಣಿಗೆಯ ಮೇಲೆ ತನ್ನ ಪ್ರಭಾವವನ್ನು ಬೀರುವುದನ್ನು ಅಧ್ಯಯನದಿಂದ ಕಂಡುಕೊಳ್ಳುವಲ್ಲಿ ಪ್ರಯತ್ನಿಸಿದ್ದಾರೆ. ಗಂಡು ಹೆಣ್ಣು ಎಂಬ ಭೇದವಿಲ್ಲದೆ ಶಿಕ್ಷಣದಲ್ಲಿ ಸಮಾನತೆ ತರುವಲ್ಲಿ ನಡೆದ ವಿವರಗಳನ್ನು ದಾಖಲಿಸಿದ್ದಾರೆ.

ಸಾಕ್ಷರತೆ ಮತ್ತು ಶಾಲಾ ಶಿಕ್ಷಣದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಮತ್ತು ರಾಷ್ಟ್ರಮಟ್ಟದಲ್ಲಿ ಸಾಕ್ಷರತೆಯನ್ನು ಗಮನಿಸಿದಾಗ ಪ್ರತಿವರ್ಷ ಹೆಚ್ಚಾಗುತ್ತಾ ಬಂದಿದೆ. ಆದರೆ ಮಹಿಳೆಯರ ಸಾಕ್ಷರತೆಗಿಂತ ಪುರುಷರ ಸಾಕ್ಷರತೆ ಹೆಚ್ಚಾಗಿರುವುದು ಕಂಡುಬರುತ್ತದೆ. ಮಹಿಳೆಯರ ಮತ್ತು ಪುರುಷರ ಸಾಕ್ಷರತೆಯಲ್ಲಿ ಸಾಕಷ್ಟು ಅಂತರವಿರುವುದನ್ನು ನೋಡಬಹುದು. ಸಾಕ್ಷರತೆಯಲ್ಲಿಯು ಲಿಂಗ ಸಂಬಂಧಿ ಅಂತರಗಳು ಮಹಿಳೆಯರ ಸ್ಥಾನಮಾನವನ್ನು ಪ್ರತಿನಿಧಿಸುತ್ತವೆ. ಸಾಕ್ಷರತೆಯಲ್ಲಿ ಲಿಂಗ-ಸಂಬಂಧಿ ಅಂತರವು ಅಧಿಕವಾಗಿದ್ದರೆ ಸಾಮಾನ್ಯವಾಗಿ ಆ ಪ್ರದೇಶದಲ್ಲಿ ಮಹಿಳೆಯರು ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ ಎಂದು ವಿಶ್ಲೇಷಿಸುತ್ತಾರೆ. ನಮ್ಮ ಸಂವಿಧಾನವು ಸಮಾನತೆ ಅವಕಾಶ ನೀಡಿ, ಜಾತಿ, ಧರ್ಮಾಧಾರಿತ ಮತ್ತು ಲಿಂಗಾಧಾರಿತ ಬೇಧವನ್ನು ನಿಷೇದಿಸಿತ್ತಾದರೂ ವಾಸ್ತವದಲ್ಲಿ ಮಹಿಳಾ ಸಾಕ್ಷರತೆ ಪುರುಷರಿಗೆ ಸಮಾನವಾಗಿಲ್ಲ ಎಂಬುದನ್ನು ವಿವಿಧ ಜನಗಣತಿ ವರದಿಗಳ ಮೂಲಕ ವಿಶ್ಲೇಷಿಸಿದ್ದಾರೆ.

ಪ್ರಕಾಶ್ ಭೀಮರಾಯ ಅವರು 'ಲಿಂಗತಾರತಮ್ಯ ವ್ಯವಸ್ಥೆಯಲ್ಲಿ ಸಾಮಾಜೀಕರಣದ ಪ್ರಕ್ರಿಯೆ ಮತ್ತು ಹದಿಹರೆಯದ ವಯಸ್ಸಿನ ಮೇಲೆ ಅದರ ಪರಿಣಾಮಗಳು' ಎನ್ನುವ ಅಪ್ರಕಟಿತ ಎಂ.ಫಿಲ್ ಸಂಶೋಧನ ಗ್ರಂಥ ಲಿಂಗವ್ಯವಸ್ಥೆ, ಲಿಂಗತಾರತಮ್ಯ, ಸಾಮಾಜೀಕರಣದ ಅರ್ಥ, ಮಕ್ಕಳ ಗುಣಸ್ವಭಾವ ರೂಪಿಸುವ ಕುಟುಂಬದ ಬಗ್ಗೆ ಮಕ್ಕಳ ವರ್ತನೆಯ ಬಗ್ಗೆ ಕುಟುಂಬದಲ್ಲಿ ಮಕ್ಕಳ ಬೇಧದ ಸ್ವರೂಪಗಳ ಬಗ್ಗೆ ವಿಶ್ಲೇಷಿಸಿದ್ದಾರೆ. ಮಾನವ ಸಂಘಜೀವಿ, ಸಮಾಜಜೀವಿ ಎಂದು ಸರಳ ಭಾಷೆಯಲ್ಲಿ ಹೇಳುತ್ತೇವೆ. ಆದರೆ ವಾಸ್ತವದಲ್ಲಿ ಮಾನವ ಸ್ವಭಾವತಃ ಪ್ರಕೃತಿ ನಿಯಮದ ಸಮಾಜ ಜೀವಿಯಲ್ಲಿ ಪ್ರಕೃತಿ ಸೃಷ್ಟಿಯಲ್ಲಿ ಮಾನವ ಒಂದು ಪ್ರಾಣಿಯಷ್ಟೇ ಜೀವಶಾಸ್ತ್ರದ ಆಧಾರದ ಮೇಲೆ ಗಂಡು ಹೆಣ್ಣಿನ ದೈಹಿಕ ವ್ಯತ್ಯಾಸವನ್ನು ಕಾಣುತ್ತವೆ. ಲಿಂಗ ವ್ಯತ್ಯಾಸವು ನಿಸರ್ಗ ಸಹಜ ವ್ಯತ್ಯಾಸವನ್ನು ಅನುಸರಿಸಿ ನಾಗರಿಕ ಹಂತದಲ್ಲಿ ಲಿಂಗ ತಾರತಮ್ಯದ ವ್ಯವಸ್ಥೆಗಳು ರಚನೆಗೊಳ್ಳುತ್ತಾ ಬಂದಿವೆ. ಈ ಪರಿವರ್ತನೆಗಳನ್ನು ಹಲವಾರು ವಿದ್ವಾಂಸರು

ಗುರುತಿಸಿದ್ದರೂ ಕಷ್ಟಸಾಧ್ಯವೇ. ಏಕೆಂದರೆ ಈ ಬದಲಾವಣೆಗಳು ನಿರ್ದಿಷ್ಟ ಘಟ್ಟದಲ್ಲಿ ಹಠಾತ್ತಾಗಿ ಆಕ್ರಮಣಕಾರಿ ಸ್ವರೂಪದಲ್ಲಿ ನಡೆದಿದ್ದನೋ ಅಲ್ಲ, ಬದಲಿಗೆ ಹಂತ ಹಂತವಾಗಿ ಕುಟುಂಬಗಳು ರಚನೆಗೊಳ್ಳುತ್ತಾ ನಾಗರಿಕತೆಯ ವಿಸ್ತರಣೆಯೊಂದಿಗೆ ಗಟ್ಟಿಗೊಂಡು ಬಂದ ವ್ಯವಸ್ಥೆಯಾಗಿದೆ. ಹಾಗಾಗಿ ಇಂದು ನಾವು ನಿಂತ ನೆಲೆಯಿಂದ ಹಿಂತಿರುಗಿ ನೋಡಿದರೆ ಇದೊಂದು ತಾರತ್ಯಮ ವ್ಯವಸ್ಥೆಯಾಗಿ ಕಂಡುಬರುತ್ತದೆ ಎನ್ನುವುದರ ಕುರಿತಾಗಿ ವಿಶ್ಲೇಷಣೆ ಮಾಡಿರುವುದು ಕಂಡುಬರುತ್ತದೆ.

ಲಿಂಗಭೇದವು ಜೈವಿಕವಾಗಿ ಗಂಡು ಮತ್ತು ಹೆಣ್ಣು ಬೇರೆ ಎಂದು ಗುರುತಿಸುತ್ತದೆ. ಲಿಂಗತಾರತಮ್ಯವು ಮಹಿಳೆ ಮತ್ತು ಪುರುಷರ ಭೇದಗಳ ಸ್ವರೂಪವನ್ನು ಕಾಣುತ್ತೇವೆ. ಸಾಮಾಜಿಕವಾಗಿ ರಚಿಸಲ್ಪಟ್ಟ ಈ ವ್ಯತ್ಯಾಸಗಳು ಜೈವಿಕವಾಗಿ ಪರಿಗಣನೆಗೆ ತೆಗೆದುಕೊಳ್ಳದಿರುವುದನ್ನು ಕಾಣುತ್ತೇವೆ. ಹೆಣ್ಣು-ಗಂಡಿನ ಬಗ್ಗೆ ವಿವಿಧ ಕಲ್ಪಿತಗಳು ಸೃಷ್ಟಿಸಿ ಸಾಮಾಜಿಕವಾಗಿ ಒಪ್ಪಿಕೊಳ್ಳುವಂತೆ ತಾರತಮ್ಯಗಳು ವಿವಿಧ ವಲಯಗಳಲ್ಲಿ ರೂಪ ತಾಳಿವೆ. ಈ ತಾರತಮ್ಯಗಳಿಂದ ಮಹಿಳೆಯನ್ನು ಕಡಗಣಿಸುವುದು ಕಾಣುತ್ತವೆ ಎನ್ನುವುದನ್ನು ತಿಳಿಸಿದ್ದಾರೆ.

ಮನುಷ್ಯರು ಮೃಗಗಳಿಗಿಂತ ಭಿನ್ನವಾಗಿ ಬದುಕಲು ಸಾಮಾಜೀಕರಣದ ಪ್ರಕ್ರಿಯೆ ಅನಿವಾರ್ಯವಾಗಿ ರೂಪ ತಾಳಿದೆ. ಪೂರಕ ಬದುಕಿನ ಪ್ರತಿರೂಪ ಕಾಪಾಡಲು ಹುಟ್ಟಿಕೊಂಡು ಬಂದ ಸಿದ್ಧತೆ ಮಾನವರಿಗೆ ಅಗತ್ಯದ ಮಾದರಿಯಾಗಿ ರೂಪತಾಳಿದೆ. ಈ ಸಾಮಾಜೀಕರಣದ ಅಗತ್ಯ ಎಷ್ಟು ಮುಖ್ಯವೆಂದರೆ ಮಾನವರ ಬದುಕಿನ ಬದಲಾವಣೆಗಳು ಇದರಲ್ಲಿ ಒಳಗೊಂಡಿವೆ. ಪೂರ್ವಯೋಜಿತವಾಗಿ ನೆಲೆಗೊಂಡಿರುವ ಈ ಸಿದ್ಧತೆಗಳ ಕುಟುಂಬದಿಂದಲೇ ಮೂಲವಾಗಿ ಬಂದದ್ದಾಗಿದೆ. ಒಂದು ಮಡಿಕೆ ತಯಾರಿಕೆಗೆ ಅದು ಮಾಡುವ ಕಾರ್ಯದಿಂದ ಮಡಿಕೆ ತಯಾರಿಕೆಗೆ ಕೆಸರನ್ನು ಒಂದು ಹಂತದ ರೂಪಕ್ಕೆ ತರಲು ಅದು ಮಾಡುವ ಕಾರ್ಯದಿಂದ ಮಡಿಕೆಯ ರೂಪವನ್ನು ಅಳೆಯಬಹುದು. ಹಾಗೆ ಮಾನವರಿಗೆ ತಾವು ಬೆಳೆದು ಬಂದ ಹಿನ್ನೆಲೆಯ ಪ್ರತಿರೂಪಗಳು ಬಿಂಬಿಸಲು ಸಾಮಾಜೀಕರಣದ ತರಬೇತಿಯಿಂದ ಗುರುತಿಸಬಹುದು. ಈ ತರಬೇತಿಗಳು ಕುಟುಂಬದಲ್ಲಿಯ ಸ್ತ್ರೀ ಪುರುಷರಿಗೆ ನೀಡುವುದು ಕಾಣುತ್ತೇವೆ ಎನ್ನುವುದನ್ನು ತಿಳಿಸಿದ್ದಾರೆ.

ಜ್ಯೋತಿ ಶಶಿಕುಮಾರ್ ಅವರು 'ಮಹಿಳಾ ಸಾಮಾಜಿಕತೆ' (೨೦೦೭) ಎಂಬ ಕೃತಿಯಲ್ಲಿ ಸಮಾಜ ಮತ್ತು ಮಹಿಳೆ ಭಾಗದಲ್ಲಿ ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ವಿವಾಹ ಸಂಸ್ಥೆ, ಶಿಕ್ಷಣ, ಜಾತಿವ್ಯವಸ್ಥೆ ಹೇಗೆ ಮಹಿಳೆಯನ್ನು ಪರಿಗಣಿಸುತ್ತದೆ ಎಂಬುದನ್ನು ವಿಶ್ಲೇಷಿಸುತ್ತದೆ. ಮುಖ್ಯವಾಗಿ ಭಾರತದ ಮಹಿಳೆಯರ ಸಾಮಾಜಿಕ ಪ್ರಧಾನ ಸಮಸ್ಯೆಗಳನ್ನು ಇಟ್ಟುಕೊಂಡು ಅಧ್ಯಯನದ ವಿಷಯ ವಸ್ತುಗಳ ಕೃತಿಯಾಗಿದೆ. ಭಾಗ–೨ರಲ್ಲಿ ಸಂಸ್ಕೃತಿ ಮತ್ತು ಮಹಿಳೆ ಎಂಬುದರಲ್ಲಿ ಧರ್ಮ, ಕಲೆ, ಸಮೂಹ ಮಾಧ್ಯಮ, ಮತ್ತು ಬದಲಾಗುತ್ತಿರುವ ಸಾಂಸ್ಕೃತಿಕ

ಸಂದರ್ಭಗಳು, ಮಹಿಳಾ ಸಂಬಂಧಿ ಬದಲಾವಣೆಗಳು ಅವಕಾಶ, ಸವಾಲುಗಳ ಕುರಿತಾಗಿ ಚರ್ಚೆ ಮಾಡಿರುವುದನ್ನು ಗಮನಿಸಬಹುದು. ಪ್ರಸ್ತುತ ಕೃತಿ 'ಸ್ತ್ರೀಯು ಮೂಲತಃ ರೂಪಿತವಾದವಳು. ಹೆಣ್ಣು ನಿರ್ದಿಷ್ಟ ಸಾಮಾಜಿಕ ಪ್ರಕ್ರಿಯೆಗಳಿಂದ ನಿರ್ಮಿತಳಾಗುತ್ತಾಳೆಯೇ ವಿನಾಃ ಹೆಂಗಸಾಗಿ ಹುಟ್ಟುವುದಿಲ್ಲ' ಎಂಬ ಸಿಮೋನ್ ದಿ ಬೋವ ಅವರ ಮಾತುಗಳಂತೆ ಸಮಾಜದಲ್ಲಿ ರೂಪಿತಗೊಂಡ ಸಾಮಾಜೀಕರಣದಿಂದಾಗಿ ಹೆಣ್ಣು-ಹೆಂಗಸಾಗಿದ್ದಾಳೆಯೇ ಎನ್ನುವ ಅಂಶಗಳ ಕಡೆಗೆ ಬೆಳಕು ಚೆಲ್ಲುತ್ತದೆ. ಸಾಮಾಜೀಕರಣವನ್ನು ರೂಪಿಸುವ ನಿಯೋಗಗಳಾದ ಕುಟುಂಬ, ಶಿಕ್ಷಣ, ವಿವಾಹ ಸಂಸ್ಥೆಗಳು ಹೇಗೆ ಹೆಣ್ಣುಮಕ್ಕಳನ್ನು ಸಾಮಾಜೀಕರಣಗೊಳಿಸುತ್ತಾ ಸಾಗುತ್ತವೆ ಎನ್ನುವ ಮಾಹಿತಿಯು ಈ ಕೃತಿಯಲ್ಲಿ ದೊರೆಯುತ್ತದೆ. ಕುಟುಂಬ ಹೆಣ್ಣುಮಕ್ಕಳನ್ನು ಬಂಧಿಸಿರುವುದರಿಂದಾಗಿ ಶಾಶ್ವತವಾಗಿ ಸಾರ್ವಜನಿಕ ಸಂಪರ್ಕದಿಂದ ದೂರ ಉಳಿಯುವಂತಾಗಿದ್ದಾಳೆ, ಕುಟುಂಬದಲ್ಲಿ ಹೆಣ್ಣು ಮಕ್ಕಳಿಗೆ ಸ್ಥಿರ ಮಾದರಿಯ ಸಾಮಾಜೀಕರಣವನ್ನು ರೂಪಿಸುವ ಅಂಶಗಳನ್ನು ವಿವರವಾಗಿ ವಿವರಿಸುತ್ತದೆ. ಈ ಕೃತಿ ಕುಟುಂಬದಲ್ಲಿ ಹೆಣ್ಣುಮಕ್ಕಳಿಗೆ ಹಲವು ಸ್ಥಿರಮಾದರಿ ಪಾತ್ರಗಳಾದ ಮಗಳು, ಪತ್ನಿ, ಸೊಸೆ, ತಾಯಿ, ಅತ್ತೆ, ನಾದಿನಿ, ವಾರೆಗಿತ್ತಿ ಹೀಗೆ ಹಲವು ಪಾತ್ರಗಳನ್ನು ಸಾಮಾಜೀಕರಣಕ್ಕೆ ಒಳಗಾಗುವುದರ ಜೊತೆಗೆ ಪಿತೃ ಪ್ರಧಾನತೆಯನ್ನು ಮುಂದುವರೆಸಿಕೊಂಡು ಹೋಗುವಂತಾಳಾಗಿಸುವ ಕೆಲಸ ಈ 'ಸಾಮಾಜಿಕತೆ' ರೂಪಿಸುತ್ತದೆ ಎನ್ನುವ ಅಂಶಗಳನ್ನು ಈ ಕೃತಿಯಲ್ಲಿ ಚರ್ಚಿಸಲಾಗಿದೆ.

ಮಹಿಳಾ ಸಾಮಾಜಿಕತೆಯಲ್ಲಿ ಹೆಣ್ಣು ನಯ, ವಿನಯ, ಆದರ್ಶ, ಪಾಲನೆ ರಕ್ಷಣೆ, ಗೃಹಕೃತ್ಯ ಮನೆಯ ಜವಾಬ್ದಾರಿ, ಕುಟುಂಬದ ಮಾನ ಮರ್ಯಾದೆ, ಕಾಪಾಡುವುದೇ (ಮಹಿಳೆ) ಹೆಣ್ಣುಮಕ್ಕಳ 'ಧರ್ಮ' ಎನ್ನುವ ಸಾಮಾಜೀಕರಣಗೊಳಿಸುವ ಅಂಶಗಳನ್ನು ಈ ಕೃತಿಯಲ್ಲಿ ದಾಖಲಿಸಿರುವುದು ಕಂಡು ಬರುತ್ತದೆ. ಹೀಗೆ ಹೆಣ್ಣು-ಗಂಡು ಮಕ್ಕಳಿಗೆ ಪ್ರತ್ಯೇಕತೆಯನ್ನು ರೂಪಿಸುವ ಸಾಮಾಜೀಕರಣದ ಸಂಗತಿಗಳ ಕುರಿತು ಈ ಕೃತಿಯಲ್ಲಿ ಮಾಹಿತಿ ದೊರೆಯುತ್ತದೆ.

ದಯಾನಂದ ಅವರ "ಲಿಂಗ ಅಸಮಾನತೆಯ ವಿಭಿನ್ನ ಮುಖಗಳು" (೨೦೦೫) ಎಂಬುವುದರಲ್ಲಿ ಶತಮಾನಗಳಿಂದಲೂ ಲಿಂಗ ಅಸಮಾನತೆ ಮಾನವ ಸಮಾಜವನ್ನು ಕಾಡುತ್ತಿದೆ. ಇಂದಿನ ಆಧುನಿಕ ಕಂಪ್ಯೂಟರ್ ಯುಗವು ಹೊರತಾಗಿಲ್ಲ. ಪ್ರಪಂಚದ ಅರ್ಧದಷ್ಟು ಜನರು ಮಹಿಳೆಯರೇ ಆದರೂ ಅವರು ಪುರುಷರಿಗೆ ಸಮಾನರಾಗಿಲ್ಲದಿರುವುದು ಸಾಮಾಜಿಕ ದುರಂತವೇ ಸರಿ ಎಂದು ತಿಳಿಸುತ್ತಾರೆ. ಇಂದು ಮಹಿಳೆ ವಿವಿಧ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದ್ದಾಳೆ. ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಲಿಂಗ ಅಸಮಾನತೆಯನ್ನು ಹೋಗಲಾಡಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದಾರೆ. ಲಿಂಗ-ಸಂಬಂಧಿ ಹಾಗೂ ಲಿಂಗ-ತಾರತಮ್ಯದ ಪರಿಕಲ್ಪನೆಗಳನ್ನು ಕುರಿತು ಬೇರೆ ಬೇರೆ ವ್ಯಾಖ್ಯಾನಗಳಿವೆ. ಲಿಂಗ ಮಹಿಳೆಯರು ಮತ್ತು ಪುರುಷರ ನಡುವಿನ ಜೈವಿಕ ವ್ಯತ್ಯಾಸವನ್ನು ಸೂಚಿಸುತ್ತದೆ. ಲಿಂಗ ಸಂಬಂಧವು ಮಹಿಳೆಯರು ಮತ್ತು ಪುರುಷರ ಸಾಮಾಜಿಕ-ಸಂಬಂಧವನ್ನು ಮತ್ತು ವರ್ತನೆಯನ್ನು ಗುರುತಿಸುವುದಂತಹದ್ದು. ನಿರ್ದಿಷ್ಟವಾಗಿ

ಸಾಂಸ್ಕೃತಿಕ ಗುಣಲಕ್ಷಣಗಳನ್ನು ಸೂಚಿಸುವ ಒಂದು ಗುಚ್ಚ ಲಿಂಗ ಸಂಬಂಧ ಎನ್ನುವುದು ಕೇವಲ ಮಹಿಳೆಯರಿಗೆ ಮತ್ತು ಪುರುಷರಿಗೆ ಮಾತ್ರ ಸೀಮಿತ ಅರ್ಥದಲ್ಲಿ ಬಳಸಲು ಸಾಧ್ಯವಿಲ್ಲ. ಇದು ಅವರ ನಡುವಿನ ಸಂಬಂಧಕ್ಕೂ ಆ ಸಂಬಂಧಗಳು ಸಾಮಾಜಿಕ ವ್ಯವಸ್ಥೆಯಲ್ಲಿ ರಚನೆಗೊಂಡಿರುವ ವಿಧಾನಕ್ಕೆ ಅಥವಾ ರೀತಿಗೆ ಅನ್ವಯಿಸಿದೆ ಎನ್ನುವುದನ್ನು ತಿಳಿಸಿರುವುದು ಕಂಡುಬರುತ್ತದೆ.

ಸ್ವರಾಜ್ ಸಂಘಟನೆ ಕರ್ನಾಟಕದವರು ಪ್ರಕಟಿಸಿದ 'ಲಿಂಗತ್ವ ಸಮಾನತೆ ಮತ್ತು ಲಿಂಗತ್ವ ನ್ಯಾಯದ ಪರಿಕಲ್ಪನೆಯಲ್ಲಿ ಪ್ರಾಥಮಿಕ ಶಾಲಾ ಪಠ್ಯಪುಸ್ತಕದ ಅಧ್ಯಯನ ಮತ್ತು ವಿಶ್ಲೇಷಣೆ' ಎನ್ನುವ ಕೃತಿಯಲ್ಲಿ ಮುಖ್ಯವಾಗಿ ೧ ರಿಂದ ೫ನೇ ತರಗತಿ ಕನ್ನಡ ಮತ್ತು ಸಮಾಜ ವಿಜ್ಞಾನ ಪಠ್ಯಗಳಲ್ಲಿ ಲಿಂಗತ್ವ ಸಮಾನತೆ ಮತ್ತು ಲಿಂಗತ್ವ ನ್ಯಾಯದ ಪರಿಕಲ್ಪನೆಗಳು ಹೇಗೆ ಪ್ರಕಟಗೊಂಡಿವೆ ಎನ್ನುವುದರ ಕುರಿತಂತೆ ಅಧ್ಯಯನ ಮಾಡಿರುವುದು ದೊರೆಯುತ್ತದೆ. ಈ ಕೃತಿಯಲ್ಲಿ ಸಂವಿಧಾನದ ಮೂಲ ಆಶಯವಾದ ಸಾಮಾಜಿಕ ನ್ಯಾಯ, ಸಮಾನತೆ, ಸ್ವಾತಂತ್ರ್ಯವನ್ನು ಸಾಕಾರಗೊಳಿಸಲು ಶಾಲಾ ಪಠ್ಯಕ್ರಮದ ಕೊಡುಗೆಯೇನೆಂಬುದನ್ನು ಅರ್ಥ ಮಾಡಿಕೊಳ್ಳುವುದು, ಮಹಿಳೆ ಮತ್ತು ಮಕ್ಕಳ ಮೇಲೆ ಅವ್ಯಾಹತವಾಗಿ ನಡೆಯುತ್ತಿರುವ ಹಿಂಸೆಯ ಬೇರನ್ನು ಅಲುಗಿಸಲು ಶಿಕ್ಷಣ ವ್ಯವಸ್ಥೆ ವಹಿಸುತ್ತಿರುವ ಪಾತ್ರ ಹಾಗೂ ಜವಾಬ್ದಾರಿಯನ್ನು ಮನಗಾಣುವುದು, ಲಿಂಗತ್ವ ಸಮಾನತೆ ಮತ್ತು ನ್ಯಾಯದ ಪರಿಕಲ್ಪನೆಯಲ್ಲಿ ಮಕ್ಕಳ ಸಂವೇದನೆ ಹೊಂದುವುದಕ್ಕಾಗಿ ಶಿಕ್ಷಣ ವ್ಯವಸ್ಥೆ ಯಾವ ಪೂರಕ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ವಿವೇಚಿಸುವುದು, ಯಾವ ಉದ್ದೇಶಗಳನ್ನು ಇಟ್ಟುಕೊಂಡು ಒಂದರಿಂದ ಐದನೇ ತರಗತಿಯ ಕನ್ನಡ, ಇಂಗ್ಲೀಷ್, ಪರಿಸರ ಮತ್ತು ಸಮಾಜ ವಿಜ್ಞಾನ ಪಠ್ಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿರುವುದು ಕಂಡು ಬರುತ್ತದೆ.

ಈ ಕೃತಿಯಲ್ಲಿ ವ್ಯಕ್ತಿಯು ಘನತೆಯಿಂದ ಬದುಕುವ ಹಿಂಸೆ ಮುಕ್ತ ಸಮಾಜ ನಿರ್ಮಾಣ, ಶಿಕ್ಷಣಕ್ಕೆ ಇದೆ. ಆದರೆ ಪಠ್ಯಗಳಲ್ಲಿ ಚಿತ್ರಿತಗೊಂಡಿರುವ ಚಿತ್ರಗಳು, ಸಂಭಾಷಣೆ ನುಡಿಗಟ್ಟುಗಳು, ಭಾಷೆಯ ಬಳಕೆ ಮತ್ತು ಸಂದೇಶವನ್ನು ಲಿಂಗತ್ವ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ. ಮುಖ್ಯವಾಗಿ ಈ ಕೃತಿಯಲ್ಲಿ ೨೦೧೪ರಲ್ಲಿ ಬೋಧಿಸುತ್ತಿರುವ ಪಠ್ಯಗಳನ್ನು ಆಯ್ದುಕೊಂಡು ಅಧ್ಯಯನ ಮಾಡಿರುವುದು ಕಂಡು ಬರುತ್ತದೆ. ಮಹಿಳಾ ವಿರೋಧಿ ಹಿಂಸೆಗೆ ಕಾರಣವಾದ ಅಂಶಗಳನ್ನು ಎಳೆ ಎಳೆಯಾಗಿ ಬಿಡಿಸುತ್ತಾ ಹೋದಂತೆಲ್ಲಾ ಸಮಸ್ಯೆಯು ಅತ್ಯಂತ ಗಂಭೀರ ಸ್ವರೂಪದಾಗಿರುವುದು ಕಂಡು ಬರುತ್ತದೆ. ಹೀಗಾಗಿ ಶಾಲಾ ಪಠ್ಯಪುಸ್ತಕಗಳಲ್ಲಿ ಪ್ರಕಟಗೊಂಡ ಕುಟುಂಬ, ಮದುವೆ, ಧಾರ್ಮಿಕ ಸಂಸ್ಥೆಗಳು, ಪರಿಸರ ಸಮಾಜ, ಯಾವ ದೃಷ್ಟಿಕೋನದಿಂದ ಪರಿಚಯಿಸಿದ್ದಾರೆ ಎನ್ನುವ ಕುರಿತು ಅಧ್ಯಯನದಲ್ಲಿ ನೋಡಬಹುದಾಗಿದೆ. ಶಿಕ್ಷಣವೆಂದರೆ ವ್ಯಕ್ತಿ ವಿಕಸನಗೊಳ್ಳಲು ಮತ್ತು ಜ್ಞಾನದ ಅನುಭವದ ಆಧಾರದ ಮೇಲೆ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಿಕೊಳ್ಳಲು

ಇರುವ ಸಾಧನ. ಜೊತೆಗೆ ಸಾಮಾಜಿಕ ಪಿಡುಗುಗಳನ್ನು ಕಿತ್ತೆಸೆಯಲು ಮತ್ತು ಭೇದಭಾವ ರಹಿತ ಸಮಾಜವನ್ನು ಕಟ್ಟಲು ನೆರವಾಗಬೇಕಾದ ಒಂದು ಸಾಧನ. ಇಂತಹ ಶಿಕ್ಷಣ, ಮಕ್ಕಳಿಗೆ ಯಾವ ನೆಲೆಯ ಸಾಮಾಜೀಕರಣವನ್ನು ರೂಪಿಸಲು ಹೊರಟಿದೆ ಎನ್ನುವುದರ ಕುರಿತಂತೆ ಲಿಂಗತ್ವದ ದೃಷ್ಟಿಕೋನದಲ್ಲಿ ಅಧ್ಯಯನ ಮಾಡಿರುವುದು ಗಮನಾರ್ಹ.

ಮಹಿಳೆ ಮತ್ತು ಹೆಣ್ಣುಮಕ್ಕಳ ಮೇಲೆ ಕೌಟುಂಬಿಕ ದೌರ್ಜನ್ಯದ ಜೊತೆಗೆ ಹೆಣ್ಣು ಭ್ರೂಣ ಹತ್ಯೆ, ಬಾಲ್ಯ ವಿವಾಹ, ಲೈಂಗಿಕ ಕಿರುಕುಳ, ಅತ್ಯಾಚಾರ, ಹೆಣ್ಣುಮಕ್ಕಳ ಸಾಗಾಣಿಕೆ, ಮಾರಾಟ, ವರದಕ್ಷಿಣೆ ಕಿರುಕುಳ, ಮರ್ಯಾದಾ ಹತ್ಯೆ ಮತ್ತು ಆ್ಯಸಿಡ್ ದಾಳಿ ಇವುಗಳ ಅವ್ಯಾಹತವಾಗಿ ನಡೆಯುತ್ತಿವೆ. ಇದಕ್ಕೆಲ್ಲ ಕಾರಣ ಶಿಕ್ಷಣ ವ್ಯವಸ್ಥೆ ಹೆಣ್ಣು-ಗಂಡಿನ ಪ್ರಾಕೃತಿಕ ಭಿನ್ನತೆಗೆ ಸಾಮಾಜಿಕ ಭಿನ್ನತೆಗಳನ್ನು ಕಟ್ಟಿಕೊಂಡಿರುವುದರಿಂದಾಗಿ ಮತ್ತು ಅದಕ್ಕೆ ಸಂಪ್ರದಾಯಗಳ ಕಟ್ಟಳೆ ಹೇರಿ ಹೆಣ್ಣನ್ನು ಕುಟುಂಬಕ್ಕೆ ಸೀಮಿತಗೊಳಿಸಿರುವುದರಿಂದ ಹೆಣ್ಣಿಗೆ ಶೋಷಣೆ ಶಾಶ್ವತವಾಗಿ ಉಳಿದುಕೊಂಡು ಬಂದಿದೆ ಎನ್ನುವ ಅಂಶಗಳನ್ನು ಪ್ರಾಥಮಿಕ ಶಾಲಾ ಪಠ್ಯಪುಸ್ತಕಗಳಲ್ಲಿ ಪ್ರಕಟಗೊಂಡ ಲಿಂಗತ್ವ ಅಂಶಗಳನ್ನು ಅಧ್ಯಯನ ಮಾಡಿ ಹೇಳಿರುವುದು ಕಂಡು ಬರುತ್ತದೆ.

ಮಾನವ ನಿರ್ಮಿತ ಲಿಂಗಬೇಧವನ್ನು ಒಡೆಯಲು ಶಿಕ್ಷಣಕ್ಕೆ ಸಾಮರ್ಥ್ಯವಿದೆ. ಹೀಗಾಗಿ ಶಾಲಾ ಪಠ್ಯಪುಸ್ತಕದಲ್ಲಿ ಪ್ರಕಟಗೊಳ್ಳುವ ಲಿಂಗತ್ವ ಅಸಮಾನತೆಗಳನ್ನು ಕಿತ್ತೊಗೆಯಬೇಕೆಂಬ ವಿವರಗಳನ್ನು ಈ ಕೃತಿ ನೀಡುತ್ತದೆ. ಒಟ್ಟಾರೆಯಾಗಿ ಈ ಕೃತಿಯಲ್ಲಿ ಹೆಣ್ಣು-ಗಂಡು ಮಕ್ಕಳ ಕುರಿತಂತೆ ಶಾಲಾ ಪಠ್ಯಗಳಲ್ಲಿ ಪ್ರಕಟಗೊಂಡ ಲಿಂಗಬೇಧ ನೀತಿಗಳನ್ನು ಎಳೆ ಎಳೆಯಾಗಿ ವಿಶ್ಲೇಷಿಸಲಾಗಿದೆ.

ಸಬಿಹಾ ಭೂಮಿಗೌಡರವರು 'ಮಹಿಳೆ ಇಂದಿನ ಸವಾಲುಗಳು'(೨೦೧೪) ಎಂಬ ಕೃತಿಯಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು, ಮಹಿಳೆಗೆ ಇರುವ ಪಡಿಯಚ್ಚುಗಳು ಸಾಮಾಜೀಕರಣ ಮಹಿಳೆಯರಿಗೆ ಇರುವ ಶಿಕ್ಷಣ; ಸಾಮಾಜಿಕ, ಧಾರ್ಮಿಕ ಒತ್ತಡ ಕೌಟುಂಬಿಕ ದೌರ್ಜನ್ಯಗಳ ಕುರಿತಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇದೇ ಕೃತಿಯಲ್ಲಿ ಮತ್ತೊಂದು ಕಡೆ ಶಾಲಾ ಪಠ್ಯಪುಸ್ತಕಗಳಲ್ಲಿ ಮಹಿಳಾ ಪ್ರತಿನಿಧೀಕರಣ, ಶಿಕ್ಷಣ ಕ್ಷೇತ್ರದಲ್ಲಿ ಲೈಂಗಿಕ ಕಿರುಕುಳ ಸ್ವರೂಪ ಮತ್ತು ಪರಿಣಾಮಗಳು ಕುರಿತಂತೆ ಮಾಹಿತಿ ದೊರೆಯುತ್ತದೆ. ಮುಖ್ಯವಾಗಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ, ಶಾಲಾ ಪಠ್ಯಪುಸ್ತಕಗಳಲ್ಲಿ ಮಹಿಳೆಯ ಪ್ರತಿನಿಧೀಕರಣಕ್ಕೆ ಸಂಬಂಧಿಸಿದಂತೆ, ೨೦೧೨ ರಿಂದ ೫ನೇ ಮತ್ತು ೮ನೇ ತರಗತಿ ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಡಲಾಗಿರುವ ಅಂಶಗಳನ್ನು ಸೇರಿಸಿಕೊಂಡು, ಪಠ್ಯಪುಸ್ತಕಗಳಲ್ಲಿ ಮಹಿಳೆಯ ಪ್ರತಿನಿಧೀಕರಣದ ಕುರಿತು ಕೆಲವು ಟಿಪ್ಪಣಿಗಳನ್ನು ಮಂಡಿಸಿರುವುದು ನೋಡಬಹುದು.

ಈ ಕೃತಿಯಲ್ಲಿ ಎಳೆಯ ಮನಸ್ಸುಗಳಿಗೆ ಯಾವ ಶಿಕ್ಷಣ ನೀಡಬೇಕು, ಲಿಂಗತ್ವ ಪೂರ್ವಗ್ರಹಗಳನ್ನು ಮೀರಿ ಬೆಳೆಯಬೇಕಾದದ್ದು ಅಗತ್ಯವಾಗಿದೆ, ಮಕ್ಕಳಲ್ಲಿ ಲಿಂಗತ್ವ ಸೂಕ್ಷ್ಮತೆಗಳನ್ನು ಬೆಳೆಸಬೇಕು

ಎನ್ನುವ ಉದ್ದೇಶದಿಂದ ಹಿಡಿದು, ಪಠ್ಯಪುಸ್ತಕಗಳಲ್ಲಿ ಪ್ರಕಟಗೊಂಡ ಲಿಂಗತ್ವ ಅಸೂಕ್ಷ್ಮತೆಗಳನ್ನು ವಿವರಿಸಲಾಗಿದೆ. ಈ ಕೃತಿಯಲ್ಲಿ ಈಗಿನ ಕಾಲದಲ್ಲಿ ಮಹಿಳೆ ಎದುರಿಸುತ್ತಿರುವ ಸವಾಲುಗಳ ಕುರಿತು, ಆಧುನಿಕ ಮಹಿಳೆಯ ವರ್ತಮಾನದ ತಲ್ಲಣಗಳ ಜೊತೆಗೆ ಲೈಂಗಿಕ ದೌರ್ಜನ್ಯ, ವೃತ್ತಿಯ ಆಯ್ಕೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಲಿಂಗ ತಾರತಮ್ಯ ಮುಂತಾದ ಸಮಸ್ಯೆಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಲಾಗಿದೆ.

ಶ್ರೀ ಚಲಪತಿ ಆರ್. ಅವರು 'ಕನ್ನಡ ಭಾಷಾ ಕಲಿಕೆಯ ಪಠ್ಯಗಳು ಮತ್ತು ಸಾಮಾಜಿಕ ಹೊಣೆಗಾರಿಕೆಯ ತೊಡಕುಗಳು' ಎಂಬ ತಮ್ಮ ಅಧ್ಯಯನದಲ್ಲಿ ಕನ್ನಡ ಭಾಷೆ ಕಲಿಕೆಯ ಪಠ್ಯಗಳು ಯಾವ ರೀತಿ ಇರಬೇಕು, ಅದರಿಂದ ಸಾಮಾಜಿಕ ತೊಡಕುಗಳು ಯಾವ ರೀತಿ ಆಗುತ್ತವೆ ಎಂದು ಚರ್ಚಿಸಿದ್ದಾರೆ. ದಿನಪತ್ರಿಕೆಯೊಂದರಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಚಿಂತಕರೊಬ್ಬರು ಭಾರತೀಯ ಮೂರ್ಖರ ಸಂಸ್ಥೆ ಎಂದು ಕರೆಯುತ್ತಾರೆ. ಅವರು ಒಟ್ಟು ಶಿಕ್ಷಣ ವ್ಯವಸ್ಥೆಯ ಬಗ್ಗೆ ಬರೆಯುತ್ತಾ ಆ ವಿಷಯ ಕೈಗೆತ್ತಿಕೊಂಡರೆ ನನ್ನ ರಕ್ತ ಕುದಿಯಲು ಪ್ರಾರಂಭಿಸುತ್ತದೆ, ನಿದ್ರೆ ಬರುವುದಿಲ್ಲ ಮತ್ತು ನನಗೆ ನಿಜಕ್ಕೂ ಗಾಸಿಗೊಂಡ ಅನುಭವವಾಗುತ್ತದೆ. ಅದು ದೇಶದ ಭವಿಷ್ಯಕ್ಕೆ ಧಕ್ಕೆ ತರುತ್ತಿದೆ. ಹೆಚ್ಚು ಕಡಿಮೆ ಪ್ರತಿಯೊಂದು ಕುಟುಂಬದ ಮೇಲೂ ಪರಿಣಾಮ ಬೀರುತ್ತಿದೆ. ಪ್ರತಿಯೊಬ್ಬರಿಗೂ ಇದು ಗೊತ್ತಿದೆ. ಬದಲಾವಣೆಯನ್ನು ಎಲ್ಲಾ ರೀತಿಯಿಂದಲೂ ತಡೆಯುವುದು ಭಾರತೀಯ ಸಂಸ್ಕೃತಿಯಾಗಿದೆ. ಬದಲಾವಣೆಗೆ ಟೀಕೆಗಳನ್ನು ನಿರ್ಲಕ್ಷಿಸದೇ ಧೈರ್ಯದಿಂದ ಹೆಜ್ಜೆ ಇಡಬೇಕಾಗುತ್ತದೆ. ದುರಂತವೆಂದರೆ ಇದನ್ನು ಸಮಾಜ ನಮಗೆ ಕಲಿಸಿಲ್ಲ ಎಂದು ಪ್ರತಿಕ್ರಿಯಿಸುತ್ತಾ, ನಮ್ಮ ಕಲಿಕೆಯ ಪಠ್ಯಗಳು, ಪರೀಕ್ಷೆ ಮತ್ತು ಬದುಕಿನ ಸಂಬಂಧಗಳನ್ನು ಕುರಿತು ಶಾಲೆ ಕಾಲೇಜುಗಳಲ್ಲಿ ಕಲಿಸುತ್ತಿರುವುದು ದೈನಂದಿನ ಬದುಕಿನಲ್ಲಿ ಉಪಯೋಗಕ್ಕೆ ಬರುತ್ತಿಲ್ಲ. ಸಾಮಾಜಿಕವಾಗಿ ತೀವ್ರವಾದ ಬದಲಾವಣೆಗಳು ನಡೆಯುತ್ತಿದ್ದರೂ ನಮ್ಮ ವ್ಯಾಸಂಗ ವಿಷಯಗಳು ಅದಕ್ಕೆ ತಕ್ಕ ಹಾಗೆ ಬದಲಾಗಿಲ್ಲ. ಬದಲಾಗಿದ್ದರೂ, ನಮ್ಮ ಪಠ್ಯ ಕ್ರಮವನ್ನು ಬದಲಾಯಿಸುತ್ತಿರುವವರಿಗೆ ಏನನ್ನು ಬದಲಾಯಿಸಬೇಕಾಗಿದೆ ಎನ್ನುವ ಬಗ್ಗೆ ಸರಿಯಾದ ಪರಿಜ್ಞಾನವಿಲ್ಲ. ಶಿಕ್ಷಣದ ಗುರಿ 'ಜ್ಞಾನದ ಅರಸುವಿಕೆಯಾದರೂ ವ್ಯಾಸಂಗದ ವಿಷಯಗಳು ಅದಕ್ಕೆ ಪೂರಕವಾಗಿಲ್ಲ ವಿದ್ಯಾರ್ಥಿಗಳೆಲ್ಲಾ ತಮ್ಮ ಪಾಠಗಳನ್ನು ಎಷ್ಟು ಚೆನ್ನಾಗಿ ಓದಿಕೊಂಡಿದ್ದಾರೆ ಎಂಬುದನ್ನು ಪರೀಕ್ಷಿಸುವುದಕ್ಕೆ ನಾವು ಅಂಟಿಕೊಂಡಿದ್ದೇವೆ. ನಾವು ಪಾಠಗಳನ್ನು ಪಾಲಿಸಬೇಕಾದ ನಿಯಮಗಳಂತೆ ಪರಿಗಣಿಸುತ್ತೇವೆ. ಹೆಚ್ಚು ಅಂಕ ಗಳಿಸುವುದಕ್ಕೆ ಆದ್ಯತೆ ನೀಡುತ್ತೇವೆ. ವಿದ್ಯಾರ್ಥಿಗಳ ಮತ್ತು ಸೃಜನಶೀಲತೆಗಳಿಗೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಜಾಗವಿಲ್ಲ. ವಾಸ್ತವವಾಗಿ ನಾವು ಸೋಲುತ್ತಿದ್ದೇವೆ. ಎರಡನೆ ದರ್ಜೆಯ ಸಮಾಜದ ಸೃಷ್ಟಿ ಕಾರ್ಯದಲ್ಲಿ ತೊಡಗಿದ್ದೇವೆ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತ ತೀವ್ರವಾದ ಸಿಟ್ಟು ಹತಾಶೆಗಳನ್ನು ವ್ಯಕ್ತಪಡಿಸಲಾಗಿದೆ.

ಇಲ್ಲಿ ವ್ಯಕ್ತವಾಗುವ ಮೂಲ ಪ್ರಶ್ನೆಯೆಂದರೆ ಪಠ್ಯಕ್ರಮ ಎನ್ನುವುದು ಅದರ ನಿಜವಾದ ಅರ್ಥದಲ್ಲಿ ಮೊದಲಿಗೆ ಸಾಮಾಜಿಕ ಹೊಣೆಗಾರಿಕೆಯನ್ನು ಪ್ರದರ್ಶಿಸುವುದಾಗಬೇಕು. ಸಾಮಾಜಿಕ

ಹೊಣೆಗಾರಿಕೆಯೆನ್ನುವುದು ನಿರ್ದಿಷ್ಟ ಸಮಾಜದ ಒಟ್ಟಾರೆ ಸ್ವರೂಪದ ಗ್ರಹಿಕೆಗೆ ಅವಕಾಶಗಳನ್ನು ಒದಗಿಸಿಕೊಡುವುದು ಎಂದೇ ಇಲ್ಲಿ ಗ್ರಹಿಸಬೇಕಾಗುತ್ತದೆ. ಅಂದರೆ ಶ್ರೇಣೀಕೃತ ವಾದ ಅಧಿಕಾರ ಸಂಬಂಧಗಳ ನಡುವೆ ಸಂವಾದ ಸಾಧ್ಯವಾಗುವಂತೆ ಕಲಿಯುವವರಲ್ಲಿ ಒಂದು ಸಾಮಾಜಿಕ ಅವಕಾಶವನ್ನು ಹುಟ್ಟುಹಾಕುವಂತದ್ದಾಗಬೇಕು. ಕಲಿಯುವಿಕೆಯ ಪ್ರಕ್ರಿಯೆಯು ಕ್ರಿಯಾತ್ಮಕ ಮತ್ತು ಗುಣಾತ್ಮಕವಾಗುವುದು ಆಗ ಮಾತ್ರ ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಅಧ್ಯಯನ ಪೂರಕವಾಗಿ ಪದವಿ ಪಠ್ಯಕ್ರಮಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಭೀಮರಾವ್ ಗುಂಡೇರಾವ್ ಕುಲಕರ್ಣಿ ಅವರು 'ಕರ್ನಾಟಕದಲ್ಲಿ ವಿದ್ಯಾರ್ಥಿ ಸಂಘಟನೆಗಳ ರಾಜಕೀಯ ಸಾಮಾಜೀಕರಣ ಅಧ್ಯಯನ' ಎನ್ನುವ ಸಂಶೋಧನ ಗ್ರಂಥದಲ್ಲಿ ಮುಖ್ಯವಾಗಿ ರಾಜಕೀಯ ಸಾಮಾಜೀಕರಣದ ಬಗ್ಗೆ ವಿಶ್ಲೇಷಿಸಿದ್ದಾರೆ. ರಾಜಕೀಯ ಸಾಮಾಜೀಕರಣ: ಕೆಲವು ವ್ಯಕ್ತಿಗಳಿಗೆ ಹುಟ್ಟಿನಿಂದಲೇ ನಾಯಕತ್ವದ ಗುಣಗಳು ಬಂದಿರುತ್ತವೆ. ಆದರೆ ಹಲವು ವ್ಯಕ್ತಿಗಳು ತಮ್ಮ ಸತತ ಪ್ರಯತ್ನದಿಂದ ಹಾಗೂ ದೃಢಸಂಕಲ್ಪದ ಪರಿಣಾಮವಾಗಿ ನಾಯಕರಾಗಿ ಬೆಳೆಯುತ್ತಾರೆ. ಒಂದು ರಾಜಕೀಯ ವ್ಯವಸ್ಥೆಯ ಕುರಿತು ಅವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಬೆಳೆಸಿಕೊಳ್ಳುವ ನಂಬಿಕೆಗಳು, ನಡವಳಿಕೆಗಳು ಹಾಗೂ ಬದ್ಧತೆಗಳು ಮುಂದೆ ಅವರ ಬದುಕಿನಲ್ಲಿ ಬಹುಮುಖ್ಯವಾದ ಪಾತ್ರವಹಿಸುತ್ತವೆ. ಈ ಹಿನ್ನೆಲೆಯಿಂದ ನಾವು ನೋಡಿದಾಗ ರಾಜಕೀಯ ಸಾಮಾಜೀಕರಣವು ವಿದ್ಯಾರ್ಥಿ ನಾಯಕರಲ್ಲಿ ಅತ್ಯಂತ ಪ್ರಮುಖವಾದ ಪಾತ್ರ ವಹಿಸುತ್ತದೆ ಎಂದು ಹೇಳಬಹುದು. ರಾಜಕೀಯ ಸಾಮಾಜೀಕರಣವೆಂದರೆ ಒಬ್ಬ ವ್ಯಕ್ತಿಯು ರಾಜಕೀಯ ವ್ಯವಸ್ಥೆಯ ಬಗ್ಗೆ ಅವನು ಇಟ್ಟುಕೊಂಡ ನಂಬಿಕೆಗಳು ಹಾಗೂ ನಡಾವಳಿಗಳು ಎಂದು ಹೇಳಬಹುದು. ಅಂದರೆ ಒಂದು ರಾಜಕೀಯ ವ್ಯವಸ್ಥೆ ಪರಿಪಾಲಿಸುವ ಸಂಪ್ರದಾಯಗಳು, ನಿಯಮಗಳು, ನಡವಳಿಕೆಗಳು ಹಾಗೂ ವರ್ತನೆಗಳನ್ನು ಕಲಿಯುವ ನಿರಂತರ ಪ್ರಕ್ರಿಯೆ ರಾಜಕೀಯ ಸಾಮಾಜೀಕರಣವೆಂದು ಹೇಳಬಹುದು. ರಾಜಕೀಯ ಸಾಮಾಜೀಕರಣದ ಮುಖಾಂತರ ವ್ಯಕ್ತಿಯ ರಾಜಕೀಯ ಸಂಸ್ಕೃತಿ ರೂಪುಗೊಳ್ಳುತ್ತದೆ ಇದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ವರ್ಗಾವಣೆಯಾಗುತ್ತದೆ. ಇದು ರಾಜಕೀಯ ಸಂಸ್ಕೃತಿಯನ್ನು ಸೃಷ್ಟಿಸುವ, ಅದನ್ನು ಕಾಪಾಡುವ ಹಾಗೂ ಮುಂದಿನ ತಲೆಮಾರಿಗೆ ವರ್ಗಾಯಿಸುವ ಪ್ರಮುಖ ಕಾರ್ಯನಿರ್ವಹಿಸುತ್ತದೆ. ಬಾಲ್ಯಜೀವನದಲ್ಲಿ ಅಳವಡಿಸಿಕೊಂಡ ಜ್ಞಾನ, ಮೌಲ್ಯಗಳು ಹಾಗೂ ವಿಚಾರಧಾರೆ ಒಬ್ಬ ವ್ಯಕ್ತಿಯ ಬದುಕ್ಕಿನುದ್ದಕ್ಕೂ ಪ್ರಭಾವ ಬೀರುತ್ತವೆ. ಈ ಪ್ರಕ್ರಿಯೆಯಲ್ಲಿ ರಾಜಕೀಯ ಸಾಮಾಜೀಕರಣವು ಅತ್ಯಂತ ಪ್ರಮುಖವಾದ ಪಾತ್ರವಹಿಸುತ್ತದೆ. ರಾಜಕೀಯ ಸಾಮಾಜೀಕರಣದ ಪ್ರಮುಖ ಮೂಲಾಂಶಗಳಾದ ಕುಟುಂಬ, ಸಮವಯಸ್ಕರ ಗುಂಪು, ಶೈಕ್ಷಣಿಕ ಸಂಸ್ಥೆಗಳು, ಮಾಧ್ಯಮಗಳು, ಸರಕಾರ ಹಾಗೂ ರಾಜಕೀಯ ಪಕ್ಷಗಳು–ಇವುಗಳ ಮುಖಾಂತರ ಒಬ್ಬ ವ್ಯಕ್ತಿಯು ಸಾಮಾಜೀಕರಣದ ಪ್ರಕ್ರಿಯೆಗೆ ಒಳಗಾಗುತ್ತಾನೆ. ಹೀಗಾಗಿ ವಿದ್ಯಾರ್ಥಿಗಳು ಅಥವಾ ಯುವ ಸಮುದಾಯ ಹೇಗೆ ರಾಜಕೀಯ ಸಾಮಾಜೀಕರಣದ ಪ್ರಭಾವಕ್ಕೆ ಒಳಗಾಗುತ್ತದೆ

ಹಾಗೂ ಅದು ವಹಿಸುವ ಮಹತ್ವದ ಪಾತ್ರವನ್ನು ಗುರುತಿಸಿ ವಿಶ್ಲೇಷಣೆಗೆ ಒಳಪಡಿಸುವುದು ಅವಶ್ಯಕವಾಗಿದೆ ಎಂದು ತಿಳಿಸುತ್ತಾರೆ.

ರಾಜಕೀಯ ಸಾಮಾಜೀಕರಣವು ಇತ್ತೀಚಿನ ಪರಿಕಲ್ಪನೆಯಾಗಿದ್ದು ರಾಜ್ಯಶಾಸ್ತ್ರ ಅಧ್ಯಯನದ ಮಹತ್ವವಾದ ವಸ್ತುವಿಷಯವಾಗಿದೆ. ರಾಜ್ಯಶಾಸ್ತ್ರಜ್ಞರು ರಾಜಕೀಯ ಸಾಮಾಜೀಕರಣವನ್ನು ಇತ್ತೀಚೆಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡಲು ಪ್ರಾರಂಭಿಸಿದ್ದಾಗಿನಿಂದ ಈ ಪರಿಕಲ್ಪನೆಗೆ ಹೆಚ್ಚಿನ ಮಹಿತ್ವ ಬಂದಿತು. ಸಾಮಾಜೀಕರಣವೆಂಬ ಪದವನ್ನು ಇಂಗ್ಲೀಷ್ ಸಾಹಿತ್ಯದಲ್ಲಿ ಕ್ರಿ.ಶ. ೧೮೨೮ರಲ್ಲಿ ಮೊದಲು ಬಾರಿಗೆ ಬಳಸಲಾಯಿತು. 'ಸ್ಕಾಲರ್ ಹೇಮನ್' ಎಂಬ ರಾಜಕೀಯ ತಜ್ಞರು ರಾಜಕೀಯ ಸಾಮಾಜೀಕರಣದ ಅಧ್ಯಯನಕ್ಕೆ ಹೆಚ್ಚಿನ ಉತ್ತೇಜನ ನೀಡಿದರು. ಹೇಮನ್‌ರವರ ಗ್ರಂಥ ಬರುವುದಕ್ಕಿಂತ ಮುಂಚೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ವಿದ್ಯಾರ್ಥಿಗಳ ರಾಜಕೀಯ ಸಾಮಾಜೀಕರಣವನ್ನು ತಮ್ಮ ಅಧ್ಯಯನದಲ್ಲಿ ಸಾಕಷ್ಟು ಬಳಸಿರುವುದನ್ನು ಕಂಡು ಬರುತ್ತದೆ. ರಾಜಕೀಯ ಸಾಮಾಜೀಕರಣವು ರಾಜಕೀಯ ಸಂಸ್ಕೃತಿಯನ್ನು ಒಳಗೊಂಡ ಒಂದು ಪ್ರಕ್ರಿಯೆ ಎಂದು ಸಾಮಾನ್ಯವಾಗಿ ವ್ಯಾಖ್ಯಾನಿಸಲಾಗುತ್ತದೆ. ಹೆಮನ್‌ರವರ ಪ್ರಕಾರ ಸಮಾಜದ ವಿವಿಧ ನಿಯೋಗಗಳ ಮುಖಾಂತರ ತನ್ನ ಸಮಾಜದ ಸ್ಥಾನಮಾನಕ್ಕನುಗುಣವಾಗಿ ಸಮಾಜದ ವಿವಿಧ ಮಾದರಿಗಳನ್ನು ಕಲಿಯುವ ಪ್ರಕ್ರಿಯೆ ರಾಜಕೀಯ ಸಾಮಾಜೀಕರಣವೆಂದು ಅಭಿಪ್ರಾಯಪಟ್ಟಿದ್ದಾರೆ. ವಿಲಿಯಂ ಎಫ್. ಆಗ್‌ಬರ್ನ್ ಅವರ ಪ್ರಕಾರ "ಸಮಾಜದ ನಿಯಮಗಳಿಗೆ ಅನುಸಾರವಾಗಿ ತನ್ನ ನಡತೆಯನ್ನು ರೂಪಿಸಿಕೊಳ್ಳುವ ಪ್ರಕ್ರಿಯೆಯೇ ಸಾಮಾಜೀಕರಣ".

ಈ ಪ್ರತಿಯೊಂದು ನಿಯೋಗಗಳು ರಾಜಕೀಯ, ಸಾಮಾಜಿಕ ಮತ್ತು ಆಡಳಿತಾತ್ಮಕ ಅಭಿಪ್ರಾಯ ರೂಪಿಸುವಲ್ಲಿ ಅಂತರ್‌ಸಂಬಂಧವನ್ನು ಹೊಂದಿವೆ. ಉದಾ: ರಾಜಕೀಯ ಪಕ್ಷಗಳು ನಿರ್ದಿಷ್ಟ ಆಡಳಿತ ಧೋರಣೆಯನ್ನು ರೂಪಿಸಿ ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತವೆ. ಆ ಮೂಲಕ ದೇಶದ ಅಭಿವೃದ್ಧಿಗೆ ಶ್ರಮಿಸುತ್ತವೆ. ಇಂತಹ ಅಭಿವೃದ್ಧಿ ಕಾರ್ಯಗಳನ್ನು ಪತ್ರಿಕೆಗಳು ರೇಡಿಯೋ, ದೂರದರ್ಶನದಂತಹ ಮಾಧ್ಯಮಗಳು ಸಾರ್ವಜನಿಕರಿಗೆ ತಲುಪಿಸುವಲ್ಲಿ, ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹೀಗೆ ಪರಸ್ಪರ ಒಟ್ಟು ಅಭಿಪ್ರಾಯವನ್ನು ರೂಪಿಸುವುದರ ಮೂಲಕ ಪರಿಣಾಮಾತ್ಮಕವಾಗಿ ರಾಜಕೀಯ ಸಾಮಾಜೀಕರಣದಲ್ಲಿ ಪಾಲ್ಗೊಳ್ಳುತ್ತವೆ. ಆ ಮೂಲಕ ವ್ಯಕ್ತಿಯ ರಾಜಕೀಯ ಭಾಗವಹಿಸುವಿಕೆಗೆ ಉತ್ತಮ ಪ್ರೇರಣೆಗಳನ್ನು, ತಿಳುವಳಿಕೆಗಳನ್ನು ಇವು ನೀಡುತ್ತವೆ.

ಮಗುವಿನ ಬೆಳವಣಿಗೆ ಮತ್ತು ನಡವಳಿಕೆಯ ಮಾದರಿಗಳು ನಿರಂತರವಾಗಿದ್ದು, ಮಗು ಪ್ರಾಪ್ತ ವಯಸ್ಸಿಗೆ ಬರುವವರೆಗೂ ಇದು ಮುಂದುವರಿಯುತ್ತದೆ. ಈ ಸಂದರ್ಭದಲ್ಲಿ ಮಗು ತನ್ನ ದೈಹಿಕ, ಮಾನಸಿಕ ಹಾಗೂ ಮನೋಭಾವನೆಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ ಸಾಮಾಜಿಕ ಕಾರ್ಯಗಳು ಹಾಗೂ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತದೆ. ಕುಟುಂಬ, ಶಾಲೆ, ಚರ್ಚ್,

ಮಾಧ್ಯಮಗಳು, ರಾಜಕೀಯ ಪಕ್ಷಗಳು ಮತ್ತು ವಿವಿಧ ಸಾಮಾಜಿಕ ಮತ್ತು ರಾಜಕೀಯ ವಯಸ್ಕ ಗುಂಪುಗಳು ರಾಜಕೀಯ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಅತ್ಯಂತ ಮಹತ್ವವಾದ ಪಾತ್ರವನ್ನು ವಹಿಸುತ್ತವೆ ಎನ್ನುವುದನ್ನು ಈ ಕೃತಿಯಲ್ಲಿ ತಿಳಿಸಿದ್ದಾರೆ.

ವಾಗೀಶ್.ಎನ್.ಎಂ. ಅವರು ಪ್ರಾಥಮಿಕ ಹಂತದ ಕನ್ನಡ ಭಾಷಾ ಪಠ್ಯಪುಸ್ತಕಗಳ ಭಾಷಿಕ ಮತ್ತು ಶೈಕ್ಷಣಿಕ ಅಧ್ಯಯನ (ಪ್ರಚಲಿತ ಪ್ರಥಮ ಕನ್ನಡ ಕನ್ನಡ ಭಾಷಾ ಪಠ್ಯಪುಸ್ತಕಗಳನ್ನು ಅನುಲಕ್ಷಿಸಿ)ಎನ್ನುವ ವಿಷಯದ ಮೇಲಿನ ಅಪ್ರಕಟಿತ ಸಂಶೋಧನಾ ಕೃತಿಯಲ್ಲಿ ಇವರು ಮುಖ್ಯವಾಗಿ ಪ್ರಾಥಮಿಕ ಕನ್ನಡ ಪಠ್ಯಪುಸ್ತಕಗಳ ಭಾಷೆ ಬಗ್ಗೆ ಅಧ್ಯಯನ ಮಾಡಿದ್ದಾರೆ. ಪಠ್ಯಕ್ರಮವು ಶಿಕ್ಷಣದ ವ್ಯಾಪ್ತಿಯಲ್ಲಿ ಬರುವ ಅತ್ಯಂತ ಅಮೂಲ್ಯವಾದ ಭಾಗವಾಗಿದೆ. ಇದೊಂದು ವ್ಯಾಪಕವಾದ ವಿಸ್ತಾರ ಹೊಂದಿದ ಶೈಕ್ಷಣಿಕ ಚಟುವಟಿಕೆಯಾಗಿದೆ. ಈ ಚಟುವಟಿಕೆಯ ಮೂಲಕ ವಯಸ್ಕರು ಮತ್ತು ವಿದ್ಯಾರ್ಥಿಗಳು ಶೈಕ್ಷಣಿಕ ಗುರಿಯನ್ನು ಸಾಧಿಸಬೇಕೆಂಬ ನಿಟ್ಟಿನಲ್ಲಿ ರಚನೆಯಾಗಿರುತ್ತದೆ. 'ಶೈಕ್ಷಣಿಕ ಚಟುವಟಿಕೆಗಳಿಗೆ ಪಠ್ಯಕ್ರಮ ಮಾರ್ಗದರ್ಶಿಯಾಗಿದೆ. ಪ್ರಾಥಮಿಕ ಹಂತದ ಶಿಕ್ಷಣದ ಉದ್ದೇಶಗಳನ್ನು ಸಂಧಿಸಲು ಸಹಾಯಕವಾಗಿದೆ.

ನಾವೆಗೆ ಅಂಬಿಗನ ಚುಕ್ಕಾಣಿ ಎಷ್ಟು ಮುಖ್ಯವೋ ಶಿಕ್ಷಣದಲ್ಲಿ ಪಠ್ಯಕ್ರಮವು ಅಷ್ಟೇ ಮುಖ್ಯವಾದುದ್ದಾಗಿದೆ. ಪಠ್ಯಕ್ರಮವು ಒಂದು ಅವಿಭಾಜ್ಯ ಅಂಗವಾಗಿದೆ. ಶಿಕ್ಷಣದ ನಿರ್ದಿಷ್ಟ ಚೌಕಟ್ಟನ್ನು ಹಾಕಿಕೊಂಡು ವಿದ್ಯಾರ್ಥಿಗಳಿಗೆ ಮಾನಸಿಕ ಮತ್ತು ದೈಹಿಕ ಬೆಳವಣಿಗೆ ಮೂಡಿಸುವಲ್ಲಿ ಪಠ್ಯಕ್ರಮ ಮುಖ್ಯವೆನಿಸಿದೆ. ಆದ್ದರಿಂದ ಪಠ್ಯಕ್ರಮ, ಪಠ್ಯವಸ್ತು, ಶಿಕ್ಷಣ ವ್ಯವಸ್ಥೆಯಲ್ಲಿ ವಿಶಾಲಾರ್ಥವನ್ನು ಪಡೆದುಕೊಂಡಿದೆ. ಈ ಪಠ್ಯಕ್ರಮವು ಶಿಕ್ಷಣದ ಒಂದು ಭಾಗವಾಗಿದೆ. ಮಕ್ಕಳ ವಯಸ್ಸಿಗೆ ಅನುಗುಣವಾಗಿ ವ್ಯವಸ್ಥಿತ ರೀತಿಯಲ್ಲಿ ಶಿಕ್ಷಣದ ಕಾರ್ಯಕ್ರಮ ಮತ್ತು ಯೋಜನೆಯನ್ನು ರೂಪಿಸುತ್ತದೆ. ಪಠ್ಯಕ್ರಮವು ತರಗತಿಯ ಒಳಗೂ ಮತ್ತು ಹೊರಗೂ ಪಡೆಯುವ ಎಲ್ಲಾ ಮೌಲ್ಯಯುತವಾದ ಅನುಭವಗಳನ್ನು ಒಳಗೊಂಡಿರುವಂತದ್ದಾಗಿದೆ. ಮಗುವಿನ ಸರ್ವತೋಮುಖ ಅಭಿವೃದ್ಧಿ ಅನ್ವಯ ರಚನೆಯನ್ನು ಮಾಡಲಾಗಿರುತ್ತದೆ. ಶಿಕ್ಷಣವೇ ಜೀವನದ ಬೆಳವಣಿಗೆಯ ಆಧಾರ ಸ್ತಂಭದೋಪಾದಿಯಲ್ಲಿ ಪಠ್ಯಕ್ರಮ ರಚನೆಯಾಗಿರುತ್ತದೆ. ಪ್ರತಿಯೊಂದು ಮುಗುವಿನ ಜ್ಞಾನ, ಸೃಜನಶೀಲತೆಯನ್ನು ಬೆಳಗಿಸಲು ಸಹಾಯಕವಾದುದಾಗಿದೆ.

ಪ್ರಾಥಮಿಕ ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ನಾಲ್ಕು ಕೌಶಲಗಳ ಜೊತೆಗೆ ಪದ್ಯ, ಗದ್ಯ, ವ್ಯಾಕರಣ ಬೋಧನೆಯನ್ನು ಸಮರ್ಪಕವಾಗಿ ನಿರ್ವಹಿಸಲಾಗಿದೆಯೇ ಎಂಬುದು ಅಧ್ಯಯನಕ್ಕೆ ಮುಖ್ಯವಾದ ವಿಷಯವಾಗಿದೆ. ಈ ನಾಲ್ಕು ಕೌಶಲಗಳು ಕೇವಲ ಭಾಷೆಯನ್ನು ಮಾತ್ರ ಕಲಿಸದೆ ಮಗುವಿನ ಸರ್ವತೋಮುಖ ಅಭಿವೃದ್ಧಿಯ ಜೀವನದ ಮೌಲ್ಯಗಳನ್ನು ಬೆಳೆಸುವಂತಹ ಸಾಮಗ್ರಿಗಳಾಗಿವೆ ಎಂಬುದು ತಿಳಿದು ಬರುತ್ತದೆ.

ಮಕ್ಕಳಿಗೆ ಬಾಲ್ಯಾವಸ್ಥೆಯಲ್ಲಿ ಜ್ಞಾಪಕಶಕ್ತಿ ಹೆಚ್ಚಿರುತ್ತದೆ. ಇದನ್ನು ಶಿಕ್ಷಕರಾದವರು ಅರಿತಿರಬೇಕು. ಏಕೆಂದರೆ ಒಂದು ಸಲ ಹೇಳಿಕೊಟ್ಟ ಪಾಠಗಳಲ್ಲಿ ತಪ್ಪು ನಡೆದರೆ ಮಗು ಅದನ್ನೇ ಪರಿಪಾಲಿಸುವುದುಂಟು. ಹೇಗೆಂದರೆ ಕನ್ನಡ ಪಠ್ಯದಲ್ಲಿ ಕನ್ನಡದ ವರ್ಣಮಾಲೆ ಒಟ್ಟು ನಲವತ್ತೊಂಭತ್ತು ಎಂದು ಹೇಳಿದೆ. ಶಿಕ್ಷಕರಾದವರು ನಲವತ್ತೆಂಟು ಎಂದು ಹೇಳಿದರೆ ಮಗು ಅದನ್ನೇ ಗ್ರಹಿಸಿ ಬಿಡುತ್ತದೆ. ಪೋಷಕರು ಮಗುವನ್ನು ಕನ್ನಡದ ಒಟ್ಟು ಅಕ್ಷರಗಳು ಎಷ್ಟು ಎಂದಾಗ ನಲವತ್ತೆಂಟು ಎಂದು ಹೇಳುತ್ತದೆ. ಪೋಷಕರು ನಲವತ್ತೊಂಭತ್ತು ಎಂದು ಹೇಳಿದರೂ ಮಗು ತಪ್ಪು ನಲವತ್ತೆಂಟು ಎಂದು ಹೇಳುತ್ತದೆ. ಆದ್ದರಿಂದ ಶಿಕ್ಷಕರಾದವರು ಬೋಧಿಸುವಾಗ ವಿಷಯದ ಸ್ಪಷ್ಟತೆಯನ್ನು ಮೂಡಿಸುವುದು ಅವಶ್ಯಕ ಎಂಬುದು ಈ ಮೇಲಿನ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ.

ಪಠ್ಯಕ್ರಮ ವಿದ್ಯಾರ್ಥಿಗಳಲ್ಲಿ ಆಲೋಚನಾಶಕ್ತಿಯನ್ನು ಮೂಡಿಸಲು ಹಾಗೂ ಅಕ್ಷರಗಳನ್ನು ಕಲಿಸುವುದಕ್ಕೆ ಮಾತ್ರ ಸೀಮಿತವಾಗಿರದೆ ಧ್ವನಿ, ಪದ, ವಾಕ್ಯಗಳ ಉಚ್ಚರಣೆಯನ್ನು, ಬರವಣಿಗೆಯನ್ನು ಹೇಳಿಕೊಡಲಾಗುತ್ತದೆ. ಜೊತೆಗೆ ಭಾಷಾ ಕೌಶಲಗಳ ಉಳಿದ ಅಂಶಗಳನ್ನು ಹೇಳುವ ರೀತಿಯಲ್ಲಿ ಪಠ್ಯಕ್ರಮ ರಚನೆಯಾಗಿರುತ್ತದೆ. ಪದಗಳ ಪದರಚನೆಯ ವಿಧಾನವನ್ನು ಹೇಳಿಕೊಡುವಂತೆ, ವಾಕ್ಯಗಳು ವಾಕ್ಯ ರಚನೆಯ ಚೌಕಟ್ಟನ್ನು ವ್ಯಾಕರಣದ ಹಿನ್ನೆಲೆಯಲ್ಲೇ ಬಿಡಿ ಬಿಡಿಯಾಗಿ ಹಂತ ಹಂತವಾಗಿ ಬೋಧನೆಯ ಮೂಲಕ ಕಲಿಸುವಂತೆ ರಚನೆಯಾಗಿರುವುದನ್ನು ಕಾಣುತ್ತೇವೆ.

ಪಠ್ಯಕ್ರಮ ಮಕ್ಕಳಲ್ಲಿ ಚಿಂತನಾಶಕ್ತಿಯನ್ನು, ಸೃಜನಶೀಲತೆಯನ್ನು ಪ್ರಚೋದಿಸುವಂತೆ ರಚಿತವಾಗಿರುತ್ತದೆ. ಪಠ್ಯಪುಸ್ತಕ ಕೇವಲ ಓದುವ ಬರೆಯುವ ವಿಧಾನವನ್ನು ಕಲಿಸುವುದೊಂದೇ ಪಠ್ಯಪುಸ್ತಕದ ಉದ್ದೇಶವಾಗಿರದೆ ಜೊತೆಗೆ ಮಗುವಿನ ಭವಿಷ್ಯತ್ತನ್ನು ರೂಪಿಸುವ ನಿಟ್ಟಿನಲ್ಲಿ ರಚಿತವಾಗಿರುತ್ತದೆ. ನಾಡು, ನುಡಿ, ರಾಷ್ಟ್ರದ ತಿಳುವಳಿಕೆಯನ್ನು ಸಹ ಪರಿಚಯಿಸಲು ಪ್ರಯತ್ನಿಸುತ್ತಿರುವುದು ತಿಳಿದು ಬರುತ್ತದೆ. ಮಗುವಿನ ವಿದ್ಯಾಭ್ಯಾಸವೆಂದರೆ ಕುತೂಹಲ ಮತ್ತು ಉತ್ಸಾಹ ಮೊದಲನೆಯ ದಿನದಿಂದಲೇ ಉಂಟಾಗಲು ಚಿತ್ರಗಳ ಮೂಲಕ ಬೋಧನೆ ಪ್ರಾರಂಭವಾಗುತ್ತದೆ. ಇದರಿಂದ ಮಕ್ಕಳಿಗೆ ಆಲಿಸುವ ಪ್ರಕ್ರಿಯೆ ಸ್ಪಷ್ಟವಾಗಿ, ಕಲಿಕೆ ಅರ್ಥಪೂರ್ಣವಾಗಬಲ್ಲದು. ಇದರಿಂದ ಮಕ್ಕಳು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳುವರು. ನಿತ್ಯಜೀವನದಲ್ಲಿ ಬಳಕೆಯಲ್ಲಿರುವ ಹಾಗೂ ಪರಿಚಯವಾದ ಪದಗಳನ್ನು ಪ್ರಾರಂಭದ ಪ್ರಾಥಮಿಕ ಪಠ್ಯಗಳಲ್ಲಿ ಕಲಿಸಲಾಗುತ್ತದೆ. ಏಕೆಂದರೆ ಕನ್ನಡ ಭಾಷೆಯ ರಚನೆಯ ತಿಳುವಳಿಕೆಯನ್ನು, ರೂಢಿಯನ್ನು ತರಲು ಇಂತಹ ಪಠ್ಯಕ್ರಮ ರಚನೆಯಾಗಿರುವುದನ್ನು ಕಾಣುತ್ತೇವೆ.

ಈ ಪಠ್ಯಗಳು ಕಲಿಸುವ ವಿಷಯ ಮತ್ತು ಬೋಧನಾ ತಂತ್ರಕ್ಕೆ ಹೊಂದಾಣಿಕೆ ಇರುವಂತೆ ಪಠ್ಯಕ್ರಮ ರಚಿತವಾಗಿದ್ದರೂ ಕೆಲವೊಂದು ಸಂದರ್ಭಗಳನ್ನು ಗಮನಿಸಿದಾಗ ಪಠ್ಯಗಳಲ್ಲಿ ಪದ್ಯ/ ಗದ್ಯ ಪಾಠ ಹಾಗೂ ಅಭ್ಯಾಸ ಚಟುವಟಿಕೆಗಳಿಗೆ ಸಂಬಂಧವಿಲ್ಲದ ರೀತಿಯಲ್ಲಿ ರಚನೆ

ಮಾಡಿರುವುದನ್ನು ಕಾಣಬಹುದಾಗಿದೆ. ಜೊತೆಗೆ ಮಕ್ಕಳ ಸಾಮರ್ಥ್ಯಕ್ಕೆ ಅನುಗುವಾಗಿ ಕೊಡದೆ ಕಠಿಣ ಪದಗಳು, ವ್ಯಾಕರಣಾಂಶಗಳನ್ನು ಪೂರ್ವ ಪ್ರಾಥಮಿಕ ಹಂತದಲ್ಲಿಯೇ ಕೊಟ್ಟಿರುವುದನ್ನು ನೋಡಬಹುದಾಗಿದೆ. ಅಲ್ಲದೆ ಪಾಠೋಪಕರಣಗಳ ಬಳಕೆಯಲ್ಲಿಯೂ ಸಹ ಪಾಠಕ್ಕೂ, ಪದ್ಯಕ್ಕೂ ಹಾಗೂ ಅಭ್ಯಾಸ ಚಟುವಟಿಕೆಗಳಿಗೂ ಸಾಮ್ಯತೆ ಇಲ್ಲದೆ ಇರುವುದನ್ನು ಗುರುತಿಸಬಹುದಾಗಿದೆ. ಉದಾ: ೨ನೇ ತರಗತಿಯ 'ಮೂರು ಕೊಡಲಿಗಳು' (ಪಾಠ–೩, ಪುಟ–೧೦) ಎಂಬ ಪಾಠದಲ್ಲಿ ರಂಗಪ್ಪ ಹಸಿರು ಮರವನ್ನು ಕಡಿಯುತ್ತಾನೆ ಎಂಬುದನ್ನು ವಿವರಿಸುತ್ತದೆ. ಆದರೆ ಚಿತ್ರದಲ್ಲಿ ರಂಗಪ್ಪ ಹಸಿರು ಮರವನ್ನು ಕಡಿಯುತ್ತಿರುವ ದೃಶ್ಯವನ್ನು ಕೊಡಲಾಗಿದೆ. ಇಂತಹ ಸಮಸ್ಯೆಗಳು ಪ್ರಾಥಮಿಕ ಕನ್ನಡ ಭಾಷಾ ಪಠ್ಯಗಳಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ. ಇಂತಹವುಗಳನ್ನು ವಿಶ್ಲೇಷಣೆಗೆ ಒಳಪಡಿಸುವುದರ ಮೂಲಕ ಅಧ್ಯಯನ ಮಾಡಲಾಗಿದೆ.

ಮುಖ್ಯವಾಗಿ ಕನ್ನಡ ಭಾಷಾ ಪಠ್ಯಗಳ ಸ್ವರೂಪವನ್ನು ವಿವರಿಸಲಾಗಿದೆ. ಅದರಲ್ಲಿ ಧ್ವನಿ, ಪದ, ವಾಕ್ಯಗಳ ಬಳಕೆ ಹಾಗೂ ಬೋಧನೆ, ಶಿಕ್ಷಕ, ವಿದ್ಯಾರ್ಥಿ, ಪರೀಕ್ಷೆ ಮೌಲ್ಯಮಾಪನ ಲೇಖನ ಚಿಹ್ನೆಗಳ ಬಳಕೆ ಪಾಠ/ಪದ್ಯ ಮತ್ತು ಅಭ್ಯಾಸ ಚಟುವಟಿಕೆಯಲ್ಲಿ ಮಕ್ಕಳ ಸಾಮರ್ಥ್ಯಾನುಸಾರ ಬಳಕೆಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಗಮನಿಸಲಾಗಿದೆ. ಬಳಕೆಯಾಗಿದ್ದರೂ ಬಳಕೆಯ ಕ್ರಮ, ಕಲಿಸುವ ವಿಧಾನಗಳು ಸರಿ ಇದೆಯೇ ಇಲ್ಲವೇ ಎಂಬುದನ್ನು ಚರ್ಚಿಸಲಾಗಿದೆ. ಈ ಮೇಲಿನ ಶಿಕ್ಷಣದ ಅಂಶಗಳಲ್ಲಿಯೇ ಕೊರತೆಗಳು ದ್ವಂದ್ವಗಳು ಪಠ್ಯಗಳಲ್ಲಿರುವುದು ಈಗಾಗಲೇ ತಿಳಿದು ಬಂದಿದೆ. ಇಂತಹ ಕೊರತೆಗಳಿಗೆ ಕಾರಣಗಳನ್ನು ಶೈಕ್ಷಣಿಕ ಮನೋವಿಜ್ಞಾನಿಗಳು, ಭಾಷಾಚಿಂತಕರು, ಶಿಕ್ಷಣಚಿಂತಕರು ಅಲ್ಲಲ್ಲಿ ಪ್ರತಿಕ್ರಿಯಿಸಿ ಉಲ್ಲೇಖಿಸಿದ್ದಾರೆ. ಅವರುಗಳ ಅಭಿಪ್ರಾಯದ ಹಿನ್ನೆಲೆಯಲ್ಲಿ ನಿದರ್ಶನಗಳನ್ನು ಕೊಡುತ್ತಾ ಚರ್ಚಿಸಿ ವಿಶ್ಲೇಷಣೆಯನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಪಠ್ಯಕ್ರಮವು ಬೋಧನೆ–ಕಲಿಕೆಯ ಶಿಕ್ಷಣದ ಗುರಿಗಳನ್ನು ಗಮನಿಸಿ ವ್ಯಕ್ತಿಯ ವೈಯಕ್ತಿಕ ಮತ್ತು ಸಾಮಾಜಿಕ ಅವಶ್ಯಕತೆಗಳನ್ನು ಕ್ರೋಢೀಕರಿಸಿ ರಚಿಸಲಾಗಿರುತ್ತದೆ. ಕಾಲಕಾಲಕ್ಕೆ ಬದಲಾದ ಪರಿಸ್ಥಿತಿಗಳಿಗನುಗುಣವಾಗಿ ಪಠ್ಯಕ್ರಮ ರಚಿಸಲಾಗುತ್ತದೆ. ಇವರೆಲ್ಲರೂ ಹೇಳುವ ಹಾಗೆ ಪಠ್ಯಕ್ರಮವೆಂದರೆ ಶಿಕ್ಷಣದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗೆ ಲಭಿಸುವ ಅನುಭವಗಳ ಮೊತ್ತವಾಗಿದೆ. ಈ ಕಾರ್ಯಕ್ರಮದ ಉದ್ದೇಶ ವ್ಯಾಪಕವೂ ನಿರ್ದಿಷ್ಟವೂ, ಆದ ಗುರಿಗಳನ್ನು ಸಾಧಿಸಲಾಗಿರುತ್ತದೆ. ಈ ಅಂಶಗಳನ್ನು ತಾತ್ವಿಕವಾಗಿ ಹಾಗೂ ಪ್ರಾಯೋಗಿಕವಾಗಿ ಯೋಜಿಸಲಾಗಿರುತ್ತದೆ ಎಂಬುದನ್ನು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಒಟ್ಟಾರೆಯಾಗಿ ಹೆಣ್ಣು–ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆಗಳ ಕುರಿತಂತೆ ಶೈಕ್ಷಣಿಕ ವಲಯದಲ್ಲಿ ಅನೇಕ ಸಂಶೋಧನೆ ಕೃತಿಗಳು ಬಂದಿವೆ; ಆದರೆ ಸಾಮಾಜೀಕರಣ ಸಮಸ್ಯೆಗಳ ಅಧ್ಯಯನ ಮಾಡಿರುವುದು ಕಡಿಮೆ. ಹೀಗಾಗಿ ಈವರೆಗೆ ನಡೆದ ಅಧ್ಯಯನಗಳ ಸಂಶೋಧನೆ

ಪ್ರಶ್ನೆಗಳನ್ನು ಗಮನದಲ್ಲಿ ಇಟ್ಟುಕೊಂಡು ಪ್ರಸ್ತುತ ಸಂಶೋಧನೆಯಲ್ಲಿ ಹೊಸ ಪ್ರಶ್ನೆಗಳೊಂದಿಗೆ ಅಧ್ಯಯನ ಮಾಡಲಾಗಿದೆ.

೧.೭ ಅಧ್ಯಯನದ ಮಹತ್ವ

- ಪ್ರಸ್ತುತ ಅಧ್ಯಯನವು ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆಗಳ ನೆಲೆಗಳನ್ನು ಶೋಧಿಸುವಲ್ಲಿ ಮಹತ್ವ ಪಡೆಯುತ್ತದೆ.

- ಸಾಮಾಜೀಕರಣದ ಸಂಗತಿಗಳಿಂದಾಗಿ ಸಮಾಜದಲ್ಲಿ ಹೆಣ್ಣನ್ನು ಹೇಗೆ ನಡೆಸಿಕೊಳ್ಳಲಾಗುತ್ತದೆ ಎನ್ನುವ ಸಂಗತಿಗಳನ್ನು ಶೋಧಿಸುವುದರ ಜೊತೆಗೆ ಸಾಮಾಜೀಕರಣ ಸೃಷ್ಟಿ ಮಾಡಿದ ಸಾಮಾಜಿಕ ಸಮಸ್ಯೆಗಳನ್ನು ತಿಳಿಯಲು ಸಾಧ್ಯವಾಗುತ್ತದೆ.

- ಹೆಣ್ಣು-ಗಂಡುಮಕ್ಕಳ ಸಾಮಾಜೀಕರಣದಲ್ಲಿ ಅಧ್ಯಯನಿಸಬೇಕಾದ ಸಂಗತಿಗಳಲ್ಲಿ ಲಿಂಗಾನುಪಾತ, ಹೆಣ್ಣು-ಗಂಡುಮಕ್ಕಳ ವ್ಯತ್ಯಾಸ, ಶಿಕ್ಷಣದಲ್ಲಿ ಲಿಂಗ ಅಂತರ, ಹೆಣ್ಣು ಭ್ರೂಣ ಹತ್ಯೆ, ಅತ್ಯಾಚಾರ, ವರದಕ್ಷಿಣೆ, ಹೆಣ್ಣುಮಕ್ಕಳ ಅಪಹರಣ, ಕೌಟುಂಬಿಕ ದೌರ್ಜನ್ಯ, ಹೆಣ್ಣುಮಕ್ಕಳ ಹಿಂಸೆ ಹೀಗೆ ಲಿಂಗ ತಾರತಮ್ಯಗಳನ್ನಾಧರಿಸಿ ಸಮಸ್ಯೆಗಳ ಮೂಲ ಕಂಡುಹಿಡಿಯಲು ಈ ಅಧ್ಯಯನ ಮಹತ್ವ ಪಡೆಯುತ್ತದೆ.

- "ಈವರೆಗಿನ 'ಚರಿತ್ರ ಬರವಣಿಗೆಗಳು' ಪುರುಷಪ್ರಧಾನ ಸಮಾಜದ ಒಂದು ಶಕ್ತಿಯುತ ಅಸ್ತ್ರವಾಗಿ ಕಾರ್ಯನಿರ್ವಹಿಸುತ್ತ ಬಂದಿವೆ. ಹೆಣ್ಣಿನ ಬದುಕಿನ ಸಕರಾತ್ಮಕ ಗುಣ, ಸಾಮರ್ಥ್ಯಗಳ ದಾಖಲೆಗಳನ್ನೆಲ್ಲ ಗೌಣವಾಗಿಸಿ ಹೆಣ್ಣು ಎಂದೆಂದು ಸಮಾಜದಲ್ಲಿ ಗಂಡಿನ ಅವಲಂಬನೆಯಲ್ಲಿ ಮಾತ್ರವೇ ಬದುಕುವ ದುರ್ಬಲಳು ಎಂದು ನಂಬಿಸಲು ಸತತವಾಗಿ ಪ್ರಯತ್ನಿಸಿವೆ. ಹೀಗಾಗಿ ಪ್ರಯತ್ನಪೂರ್ವಕವಾಗಿ ಎಂಬಂತೆ ನಗಣ್ಯಗೊಳಿಸಿರುವ ದಾಖಲಾತಿಗಳನ್ನು ಶೋಧಿಸಿ 'ಮಹಿಳಾ ಚರಿತ್ರೆ'ಯನ್ನು ಪುನರ್‌ರಚಿಸುವ ಪ್ರಯತ್ನ ಆಗಬೇಕು. ಶಿಕ್ಷಣ, ತರಬೇತಿಗಳಲ್ಲಿ ಪುರುಷ ಚಿಂತನೆ ಮಾದರಿಗಳನ್ನು ನೀಡಲಾಗಿದೆ. ಹೀಗಾಗಿ ಹೊಸದಾರಿಗಳನ್ನು ನಿರ್ಮಿಸುವ ಶೋಧಿಸುವಲ್ಲಿ ಹಾಗೂ ಹೆಣ್ಣು-ಗಂಡುಗಳ ಸಾಮಾಜೀಕರಣದ ಸಮಸ್ಯೆಗಳನ್ನು ಅನಾವರಣ ಮಾಡುವ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ಮಹತ್ವ ಪಡೆಯುತ್ತದೆ.

- ಸಮಾಜದಲ್ಲಿ ರೂಢಿಗತವಾಗಿ ಬಂದಿರುವ ಲಿಂಗ ತಾರತಮ್ಯದ ಅಂಶಗಳು ಸಮಾಜದಲ್ಲಿನ ಲಿಂಗತ್ವದಿಂದ ಬಂದವು; ಅವು ಜೈವಿಕ ಸಂಗತಿಗಳಲ್ಲ ಎಂದು ಮಕ್ಕಳಿಗೆ ಮನದಟ್ಟು ಮಾಡುವ ಮೂಲಕ ಮುಂದಿನ ಪೀಳಿಗೆಯಲ್ಲಿ ಲಿಂಗತ್ವ ಸಮಾನತೆ ರೂಪಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ಮಹತ್ವ ಪಡೆಯುತ್ತದೆ.

- ಇಂದು ಎಲ್ಲ ಕ್ಷೇತ್ರಗಳಲ್ಲಿ ಮಹಿಳೆ ದುಡಿಯುತ್ತಿದ್ದಾಳೆ. ವ್ಯಾಪಾರ, ಪೋಲೀಸ್, ನಿರ್ವಾಹಕರು, ಚಾಲಕರು, ವೈದ್ಯರು, ವಕೀಲರು, ವಿಜ್ಞಾನಿಗಳು, ಕಂಪ್ಯೂಟರ್ ಕ್ಷೇತ್ರ - ಹೀಗೆ ಎಲ್ಲ ಕ್ಷೇತ್ರ,

ವೃತ್ತಿಗಳಲ್ಲಿ ಮಹಿಳೆಯರು ಸಕ್ರಿಯವಾಗಿ ತೊಡಗಿದ್ದರೂ ಸಹ ಈ ಎಲ್ಲ ಕ್ಷೇತ್ರಗಳು ಪುರುಷರದ್ದೇ ಎಂಬಂತೆ ಬಿಂಬಿಸುವ ಸಾಮಾಜೀಕರಣವನ್ನು ಪುನರ್‌ಪರಿಶೀಲಿಸುವಲ್ಲಿ ಹಾಗೂ ಭಾಷೆಯಲ್ಲಿನ ತೊಡಕುಗಳನ್ನು ನಿವಾರಿಸುವಲ್ಲಿ ಈ ಅಧ್ಯಯನ ಮಹತ್ವ ಪಡೆಯುತ್ತದೆ.

- ನಿಸರ್ಗದ ಪ್ರಾಣಿ, ಕ್ರಿಮಿ-ಕೀಟ ಎಲ್ಲವನ್ನು ಪುರುಷವಾಚಕದಿಂದ ಗುರುತಿಸುವ ಪ್ರಸ್ತುತ ಸಮಾಜಕ್ಕೆ ಹಾಗೂ ಪುರುಷನನ್ನು ಉದ್ದೇಶಿಸಿ ಪೌರುಷ, ವೀರತ್ವ, ಸಾಹಸ, ಔದಾರ್ಯ, ಸಹೃದಯತೆ, ಪ್ರೀತಿ ಮುಂತಾದ ಮಾನವೀಯ ಗುಣಗಳನ್ನು ಕೇವಲ ಪುರುಷನಿಗೆ (ಗಂಡಿಗೆ) ಮಾತ್ರ ಅನ್ವಯಿಸುವ ಹೇಳುವ ಪಠ್ಯಗಳನ್ನು, ಮತ್ತೊಮ್ಮೆ ಪುನರ್‌ಪರೀಶಿಲಿಸುವಲ್ಲಿ ಈ ಅಧ್ಯಯನ ಮಹತ್ವ ಪಡೆಯುತ್ತದೆ.
- ಸಾಮಾಜೀಕರಣ ಕುರಿತು ಅಧ್ಯಯನ ಏಕೆ ಮಾಡಬೇಕೆಂದರೆ ಶ್ರಮ ಮತ್ತು ಉತ್ಪಾದನೆಯಲ್ಲಿ ಹೆಣ್ಣು-ಗಂಡು ಸಮಾನತೆಯಾಗಿರಬೇಕು. ಈ ಕುರಿತಂತೆ ಪಠ್ಯಪುಸ್ತಕಗಳ ಮೂಲಕ ಮಕ್ಕಳಿಗೆ ಲಿಂಗ ಸಮಾನತೆ ಸಾಮಾಜೀಕರಣವನ್ನು ರೂಪಿಸುವ ಕಾರಣಕ್ಕಾಗಿ ಈ ತರಹದ ಅಧ್ಯಯನ ಮಹತ್ವ ಪಡೆಯುತ್ತದೆ.

♦ ♦ ♦

ಅಧ್ಯಾಯ : ಎರಡು

ಅಧ್ಯಯನದ ವಿನ್ಯಾಸ ಹಾಗೂ ತಾತ್ವಿಕ ಸ್ವರೂಪ

ಅಧ್ಯಾಯ : ಎರಡು

ಅಧ್ಯಯನದ ವಿನ್ಯಾಸ ಹಾಗೂ ತಾತ್ವಿಕ ಸ್ವರೂಪ

೨.೧. ಪ್ರಸ್ತಾವನೆ

ಸಾಮಾಜೀಕರಣ ಎನ್ನುವುದು ಕೇವಲ ಯಾವುದೇ ಒಬ್ಬ ವ್ಯಕ್ತಿಗೆ, ಒಂದು ಸಮಾಜ, ಒಂದು ಸಮುದಾಯಕ್ಕೆ ಸಂಬಂಧಿಸಿದ ಸಂಗತಿಯಲ್ಲ, ಇದು ಇಡೀ ಮಾನವ ಸಂಕುಲಕ್ಕೆ ಸಂಬಂಧಿಸಿದ್ದಾಗಿದೆ. ಈ ಹಿನ್ನೆಲೆಯಿಂದ ಇಲ್ಲಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆಯ ಅಧ್ಯಯನದ ವಿನ್ಯಾಸ ಮತ್ತು ತಾತ್ವಿಕ ಸ್ವರೂಪ ಕುರಿತಂತೆ ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಹೆಣ್ಣು-ಗಂಡಿನ ಮಧ್ಯ ತಾರತಮ್ಯ ಹೆಚ್ಚಾದಂತೆಲ್ಲಾ, ಸಮಾಜದಲ್ಲಿ ಸಾಮಾಜಿಕ ಸಮಸ್ಯೆ ರೂಪುಗೊಳ್ಳುತ್ತವೆ. ಇದು ವ್ಯಕ್ತಿಗಳ ಮೇಲೆ ಬೌದ್ಧಿಕತೆಯ ಮೇಲೆ ಹಾಗೂ ಸಾಮಾಜಿಕವಾಗಿ ಹಲವಾರು ದುಷ್ಪ ಪರಿಣಾಮಗಳು ಬೀರುತ್ತವೆ. ಅವುಗಳೆಂದರೆ ಲಿಂಗತಾರತಮ್ಯ, ಸಾಮಾಜಿಕ ಸಂಬಂಧಗಳ ಮೇಲೆ ಪರಿಣಾಮ, ವ್ಯಕ್ತಿತ್ವದ ನಾಶ, ಮಾನಸಿಕ ತೊಂದರೆಗಳು, ಬೌದ್ಧಿಕ ಹಿನ್ನೆಲೆಯ ಸಮಸ್ಯೆಗಳು, ವ್ಯಕ್ತಿಯಲ್ಲಿ ಅಧೈರ್ಯ, ಆತ್ಮವಿಶ್ವಾಸದ ಕೊರತೆ, ಸಾಮಾಜಿಕ ಅಸಮಾನತೆ, ಹಿಂಸೆ, ದೌರ್ಜನ್ಯ ಪ್ರವೃತ್ತಿಗಳು, ಲಿಂಗ ಅಂತರ, ವರದಕ್ಷಿಣೆ, ಕೌಟುಂಬಿಕ ಹಿಂಸೆ, ಅತ್ಯಾಚಾರ, ಮಾನಭಂಗ, ಲೈಂಗಿಕ ಕಿರುಕುಳ ಮುಂದುವರಿದು ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆಯಲ್ಲಿ ಬಹು ಮುಖ್ಯವಾಗಿ ಎದುರಾಗುವ ಸಮಸ್ಯೆಗಳೆಂದರೆ, ಹೆಣ್ಣು-ಗಂಡು ಮಧ್ಯೆ ಸೌಹಾರ್ದ ಸಂಬಂಧಗಳ ಸಮಸ್ಯೆ, ಹೆಣ್ಣಿನಲ್ಲಿ ವ್ಯಕ್ತಿತ್ವದ ಅವನತಿ. ಒಂದು ಲಿಂಗದ ಬೌದ್ಧಿಕ/ ಮಾನಸಿಕ ಖಿನ್ನತೆ ಸಮಸ್ಯೆ ಹೀಗೆ ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತಿರುವುದು ಕಂಡು ಬರುತ್ತದೆ. ಈ ಹಿನ್ನೆಲೆಯಿಂದ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆ ತಂದೊಡ್ಡಿರುವ ಸಾಮಾಜೀಕರಣ ಸಮಸ್ಯೆಯನ್ನು ರೂಪಿಸುವ ನಿಯೋಗಗಳ ಕುರಿತಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಮೊದಲಿಗೆ ಹೆಣ್ಣು-ಗಂಡು ಲಿಂಗಗಳ ಅರ್ಥ, 'ಸಾಮಾಜೀಕರಣ' ಪದದ ಅರ್ಥ, ವಿವಿಧ ವಿದ್ವಾಂಸರು ನೀಡಿರುವ ಲಿಂಗದ ಮತ್ತು ಸಾಮಾಜೀಕರಣದ ವ್ಯಾಖ್ಯಾನಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಹೆಣ್ಣು-ಗಂಡು ಲಿಂಗಗಳ ಅರ್ಥ: ಹೆಣ್ಣು ಮತ್ತು ಗಂಡು-ಜೈವಿಕ ಲಿಂಗ ಇವುಗಳು ಜೀವಸಂಬಂಧಿತ ಸಹಜ ಪ್ರಕ್ರಿಯೆಗೆ ಸಂಬಂಧಿಸಿದವುಗಳಾಗಿವೆ. "ಹೆಣ್ಣು-ಗಂಡು ಎಂಬ ಪದಗಳು ಕೇವಲ ಆಯಾ ವರ್ಗದ ಸಾಮಾನ್ಯ ಜೈವಿಕ ಲಕ್ಷಣಗಳನ್ನು ಹೇಳುವ ಪದವಾಗಿ ಬಳಕೆಯಾಗುತ್ತವೆ. 'ಹೆಣ್ಣು' ಎಂದರೆ ಅದು ಸ್ತ್ರೀವರ್ಗದ ಸಾಮಾನ್ಯ ಲಕ್ಷಣಗಳನ್ನು ಹೇಳುವ ಪದವಾಗಿ ಬಳಕೆಯಾಗುತ್ತದೆ".[೧] ಆದರೆ ಸಾಮಾಜೀಕರಣ-ಸಾಮಾಜಿಕವಾಗಿ ರಚನೆಗೊಂಡಿರುವ ಲಿಂಗತ್ವ, ಈ ಲಿಂಗತ್ವ, ಹೆಣ್ಣು-ಗಂಡುಗಳ ಜೈವಿಕ ಲಿಂಗದ ಮೇಲೆ ಅಂಟಿಕೊಂಡಿರುವ ಸಾಮಾಜಿಕ ಮೌಲ್ಯವಾಗಿದೆ. ಹೀಗಾಗಿ ಇದು ಸಾಮಾಜೀಕರಣ ಸಮಾಜ ನಿರ್ಮಿತ(Social Construct) ಲಿಂಗತ್ವ ಆಗಿದೆ.

೨.೨ ಸಾಮಾಜೀಕರಣದ ಅರ್ಥ, ವ್ಯಾಖ್ಯಾನಗಳು

ಸಾಮಾಜೀಕರಣದ ಅರ್ಥ: "ವ್ಯಕ್ತಿಯು ಸಮಾಜದ ವ್ಯವಸ್ಥೆಯಲ್ಲಿ ಹೇಗೆ ಭಾಗವಹಿಸ ಬೇಕೆಂಬುದನ್ನು ರೂಪಿಸುವ ಪ್ರಕ್ರಿಯೆಯನ್ನು ಸಾಮಾಜೀಕರಣ ಎನ್ನಲಾಗುತ್ತದೆ".[೨]

ಇಂಗ್ಲಿಷ್-ಇಂಗ್ಲಿಷ್-ಕನ್ನಡ ನಿಘಂಟುವಿನಲ್ಲಿ "ಸಾಮಾಜೀಕರಣದ ಅರ್ಥ 'Socialization'/ ಸೋಷಲೈಜೇಷನ್ ೧. Nestablishing Socialism. ನಾ ಸಮಾಜವನ್ನು ಕಾರ್ಯಗತ ಮಾಡುವುದು. ೨. Mixing with people ಜನರೊಡನೆ ಬೆರೆಯುವುದು ಎಂಬರ್ಥ ದೊರೆಯುತ್ತದೆ."[೩]

ಇಂಗ್ಲಿಷ್-ಕನ್ನಡ ನಿಘಂಟುವಿನಲ್ಲಿ "ಸಾಮಾಜೀಕರಣದ ಅರ್ಥ, 'Socialization'/ ಸೋಷಲೈಜೇಷನ್ ನಾ. ಸಾಮಾಜೀಕರಣ: ೧. ಸಮಾಜದ ಸ್ವಾಮ್ಯಕ್ಕೆ ನಿಯಂತ್ರಣಕ್ಕೆ ಒಳಪಡಿಸುವುದು. ೨. ಸಮಾಜವಾದಿ ತತ್ತ್ವಗಳಿಗೆ ಅನುಸಾರವಾಗಿ ವ್ಯವಸ್ಥೆಗೊಳಿಸುವುದು ಎಂಬರ್ಥ ದೊರೆಯುತ್ತದೆ."[೪]

ಸಮಾಜಶಾಸ್ತ್ರಜ್ಞರ ಪ್ರಕಾರ 'ಸಾಮಾಜೀಕರಣ' ಎಂದರೇನು:- "ಸಾಮಾನ್ಯವಾಗಿ ಮಾನವ ಮಗುವಾಗಿ ಬೆಳೆದು ಕ್ರಮೇಣ ಸಾಮಾಜಿಕ ವ್ಯಕ್ತಿಯಾಗಿ ರೂಪುಗೊಳ್ಳುವ ಪ್ರಕ್ರಿಯೆಯನ್ನು ಸಾಮಾಜೀಕರಣ ಅಥವಾ 'socialization' ಎನ್ನುತ್ತಾರೆ."[೫]

ಹ್ಯಾರಿ ಎಮ್. ಜಾನ್ಸನ್ ಪ್ರಕಾರ 'ಸಾಮಾಜೀಕರಣ' ಎಂದರೆ:- "ಸಾಮಾಜಿಕ ಪಾತ್ರಗಳನ್ನು ಅರ್ಥಪೂರ್ಣವಾಗಿ ನಿರ್ವಹಿಸುವಂತೆ ನೀಡುವ ಶಿಕ್ಷಣವೇ ಸಾಮಾಜೀಕರಣವಾಗಿದೆ."[೬]

ವಿಲಿಯಂ ಎಫ್ ಆಗ್‌ಬರ್ನ್ ಪ್ರಕಾರ 'ಸಾಮಾಜೀಕರಣ' ಎಂದರೆ:- "ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದ ನಿಯಮಗಳಿಗೆ ಅನುಸಾರವಾಗಿ ತನ್ನ ವರ್ತನೆಗಳನ್ನು ರೂಢಿಸಿಕೊಳ್ಳುವ ಪ್ರಕ್ರಿಯೆಯೇ ಸಾಮಾಜೀಕರಣ."[೭]

ಬೊಗಾರ್ಡ್‌ಸನ್ ಪ್ರಕಾರ 'ಸಾಮಾಜೀಕರಣ' ಎಂದರೆ:- "ಸಾಮಾಜಿಕ ನಿಯಮಗಳನುಸಾರವಾಗಿ ವ್ಯಕ್ತಿ ಜೀವನವನ್ನು ಅಳವಡಿಸಿಕೊಳ್ಳುವ ಹೊಣೆಯೇ ಸಾಮಾಜೀಕರಣ."[೮]

ಪೀಟರ್ ವೆಸ್ಲೆರ್ ಪ್ರಕಾರ "ಸಾಮಾಜೀಕರಣವು ಸಾಂಸ್ಕೃತಿಕ ಸಂರಕ್ಷಣೆಯ ಪ್ರಕ್ರಿಯೆಯಾಗಿದ್ದು ಎನ್ನಲಾಗುತ್ತದೆ. ಇದರ ಮೂಲಕ ಜನರು ಸಾಮಾಜಿಕ ಸಮೂಹ ನಿಯಮಗಳ ಮತ್ತು ಆಚರಣೆಗಳನ್ನು ಕಲಿತುಕೊಳ್ಳುವುದೇ ಆಗಿದೆ."[೯]

ವಿಲಿಯಂ ಡರ್ಖಿಂ ಪ್ರಕಾರ 'ಸಾಮಾಜೀಕರಣ' ಎಂದರೆ "ಯುವಕ/ಯುವತಿಯರ ಮೇಲೆ ನೈತಿಕ ಶಿಕ್ಷಣದ ಮೂಲಕ ಪ್ರಮಾಣಗಳನ್ನು ಅವಳ/ನ ವ್ಯಕ್ತಿತ್ವದ ಭಾಗವಾಗುವಂತೆ ಮಾಡಿಸುವುದೇ 'ಸಾಮಾಜೀಕರಣ'ವಾಗಿದೆ".[೧೦]

ಸಿಗ್ಮಂಡ್ ಪ್ರಾಯ್ಡ್ "ಮನುಷ್ಯನ ಮೂಲಭೂತ ಪ್ರವೃತ್ತಿಗಳನ್ನು ದಮನಗೊಳಿಸುವ ಮೂಲಕ ನಾಗರಿಕರನಾಗಿಸಿಕೊಳ್ಳುವುದೇ 'ಸಾಮಾಜೀಕರಣ' ಎಂದು ಅಭಿಪ್ರಾಯಪಟ್ಟಿದ್ದಾರೆ."[೧೧]

ಲುಂಡಬರ್ಗ್ ಅವರು ಹೇಳಿರುವಂತೆ "ಸಾಮಾಜಿಕ ಸಮೂಹಗಳು ಮತ್ತು ಸಮುದಾಯಗಳಲ್ಲಿ ಪರಿಣಾಮಕಾರಿಯಾಗಿ ಪಾತ್ರ ವಹಿಸಲು ಅಗತ್ಯವಾದ ಹವ್ಯಾಸಗಳು, ನಂಬುಗೆಗಳು, ಕೌಶಲ್ಯಗಳು ಮತ್ತು ಸರಿತಪ್ಪುಗಳ ನಿರ್ಣಯಗಳನ್ನು ವ್ಯಕ್ತಿಯು ಕಲಿತುಕೊಳ್ಳಲು ನೆರವಾಗುವ ಸಂಕೀರ್ಣಮಯವಾದ ಅಂತಃಕ್ರಿಯೆಗಳನ್ನು ಒಳಗೊಂಡಿರುವುದೇ ಸಾಮಾಜೀಕರಣ"[೧೨] ಎಂದಿದ್ದಾರೆ. ಹೀಗೆ ಸಾಮಾಜೀಕರಣ ಕುರಿತು ವಿವಿಧ ವಿದ್ವಾಂಸರು, ಸಾಮಾಜಶಾಸ್ತ್ರಜ್ಞರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯೆಗಳನ್ನು ನೀಡಿರುವುದು ಕಂಡು ಬರುತ್ತದೆ. ಮುಂದುವರೆದು 'ಸಾಮಾಜೀಕರಣ' ಎಂಬ ಪರಿಕಲ್ಪನೆಯು ಕೇವಲ ಸಮಾಜಶಾಸ್ತ್ರಜ್ಞರ ಗಮನ ಮಾತ್ರ ಸೆಳೆದಿಲ್ಲ. ಅದು ಸಾಂಸ್ಕೃತಿಕ ಚಿಂತಕರು, ಮಾನವಶಾಸ್ತ್ರಜ್ಞರು, ಶಿಕ್ಷಣಶಾಸ್ತ್ರಜ್ಞರು ಮುಂತಾದವರ ಗಮನವನ್ನು ಸಹ ಸೆಳೆದಿರುವುದು ಕಂಡು ಬರುತ್ತದೆ. 'ಸಮೂಹದ ಸಂಸ್ಕೃತಿಯನ್ನು ಪಡೆಯುವ ಪ್ರಕ್ರಿಯೆಯನ್ನು ಸಾಮಾಜೀಕರಣ ಎಂದು ಸಾಂಸ್ಕೃತಿಕ ಮಾನವಶಾಸ್ತ್ರಜ್ಞರು ವ್ಯಾಖ್ಯಾನಿಸುತ್ತಾರೆ. ಮನಃಶಾಸ್ತ್ರಜ್ಞರು ಸಾಮಾಜಿಕ ಬೆಳವಣಿಗೆಯೇ ಸಾಮಾಜೀಕರಣ ಆಗಿದೆ ಎಂದಿದ್ದಾರೆ. ಅಂದರೆ ಇಲ್ಲಿ ಜೈವಿಕ ಜೀವಿ ಸಾಮಾಜಿಕ ಜೀವಿಯಾಗಿ ಪರಿವರ್ತಿಸುವ ಪ್ರಕ್ರಿಯೆಯಾಗಿದೆ ಅಥವಾ ಕಚ್ಚಾ ಮನುಷ್ಯ ಶುದ್ಧ ಮನುಷ್ಯನಾಗಿ ಪರಿವರ್ತಿಸುವ ಪ್ರಕ್ರಿಯೆಯಾಗಿದೆ. ನವಜಾತ ಶಿಶು ಹುಟ್ಟಿದಾಗ ಮಾಂಸದ ಮುದ್ದೆಯಂತಿರುತ್ತದೆ. ಅದು ಭೌತಿಕವಾಗಿ, ಜೈವಿಕವಾಗಿ ಬೆಳೆದಂತೆ ಕುಟುಂಬ ಮತ್ತು ಕುಟುಂಬದ ಹೊರಗಿರುವ ನಿಯಮಗಳನ್ನು ಕಾಲಕ್ರಮೇಣ ಅಂತರ್ಗತ ಮಾಡಿಕೊಂಡು ಬೆಳೆಯುವ ಪ್ರಕ್ರಿಯೆಯನ್ನು ಸಮಾಜಶಾಸ್ತ್ರಜ್ಞರು 'ಸಾಮಾಜೀಕರಣ' ಎಂದು ಕರೆದಿದ್ದಾರೆ. ಇದು ನಿರಂತರವಾಗಿ ಕಂಡುಬರುವ ಪ್ರಕ್ರಿಯೆಯಾಗಿದೆ. ಆದರೆ ಕೆಲವು ಸಮಾಜಶಾಜ್ಞರು ಪ್ರಾಪ್ತ ವಯಸ್ಸಿನ ಹಂತಕ್ಕೆ ಬಂದೊಡನೆ ಈ ಪ್ರಕ್ರಿಯೆ ನಿಂತು ಹೋಗುತ್ತದೆ ಎಂದು ತಿಳಿದಿದ್ದರು. ಮತ್ತೆ ಕೆಲವರು ಇದು ಹುಟ್ಟಿನಿಂದ ಚಟ್ಟದವರೆಗೆ ನಿರಂತರವಾಗಿ ಜರುಗುವ ಪ್ರಕ್ರಿಯೆಯಾಗಿದೆ ಎಂದು ವಾದಿಸಿರುವುದು ಕಂಡುಬರುತ್ತದೆ. ಹೀಗೆ ಒಟ್ಟಾರೆಯಾಗಿ ಸಾಮಾಜೀಕರಣ ಸಮಾಜದ ಕಲಿಕೆಯಿಂದ ಎಂಬುದು ಸ್ಪಷ್ಟವಾಗುತ್ತದೆ. ಸಾಮಾಜೀಕರಣವು ಒಪ್ಪಿತ, ರೂಢಿಗತ, ನಂಬಿಕೆ, ಮೌಲ್ಯ ಮತ್ತು ಆಚರಣೆಗಳನ್ನು ಅನುಸರಿಸುತ್ತಿರುವ ವ್ಯವಸ್ಥೆಯನ್ನು

ಒಳಗೊಂಡಿದೆ. ಮತ್ತೊಂದು ಕಡೆ ಸಮಾಜದಲ್ಲಿನ ಜನರು ತಮ್ಮ ಸಂಸ್ಕೃತಿಗೆ ಸಂಬಂಧಿಸಿದಂತೆ ಮೌಲ್ಯಗಳು, ನಂಬಿಕೆಗಳು, ಉದ್ದೇಶಗಳು ಈ ಗುರಿಗಳನ್ನು ಅರಿಯುವುದನ್ನು ಈ ಪ್ರಕ್ರಿಯೆಯು ಒಳಗೊಂಡಿದೆ. ಹೀಗಾಗಿ ಸಾಮಾಜೀಕರಣದಲ್ಲಿ ಸಂಸ್ಕೃತಿಯ ಮೌಲ್ಯಗಳು, ನಂಬಿಕೆಗಳು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಮಾರ್ಪಾಡಾಗುವ ಅಥವಾ ವರ್ಗಾವಣೆಗೊಳ್ಳುವ ಕೆಲಸ ಈ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಕಂಡುಬರುತ್ತದೆ.

೨.೩. ಲಿಂಗ ಮತ್ತು ಸಾಮಾಜೀಕರಣದ ತಾತ್ವಿಕ ಸ್ವರೂಪ

'ಲಿಂಗ' ಮತ್ತು 'ಸಾಮಾಜೀಕರಣ ಸಮಸ್ಯೆ'ಯ ತಾತ್ವಿಕತೆ ಕುರಿತಂತೆ ಚರ್ಚೆ ಮಾಡುವುದಾದರೆ, 'ಲಿಂಗ' ಜೈವಿಕವಾಗಿ ರೂಪುಗೊಂಡಿರುವ ಅಂಶ, ಸಾಮಾಜೀಕರಣ 'ಲಿಂಗ'ದ ಮೇಲೆ ಅಂಟಿಕೊಂಡಿರುವ 'ಸಾಮಾಜಿಕ ಮೌಲ್ಯ'; ಅಂದರೆ ಸಾಮಾಜಿಕ ನಿರ್ಮಿತ 'ಲಿಂಗತ್ವ'ವಾಗಿದೆ. "ಸಾಮಾಜಿಕ ಸಂರಚನೆವಾದಿಗಳ ಪ್ರಕಾರ ಲಿಂಗಭೇದದ ಮೂಲ ಇರುವುದು ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಕ್ರಿಯೆಗಳಲ್ಲಿ ಜೊತೆಗೆ ಇದು ಕಾಲದೇಶಗಳಲ್ಲಿ ವ್ಯತ್ಯಾಸ ಹೊಂದುವ ಕಲ್ಪನೆ ಮತ್ತು ಆಚರಣೆಗಳ ಪ್ರಕ್ರಿಯೆಗಳ ಮೂಲಕ ಹುಟ್ಟಿಕೊಳ್ಳುತ್ತದೆ".[೨] ಮುಂದುವರೆದು ವ್ಯಕ್ತಿಯ ಗುಣವು ಸಾಮಾಜಿಕವಾಗಿ ರೂಪಿಸಲ್ಪಡುತ್ತದೆ ಎಂಬುದರ ಕಡೆಗೆ ಗಮನ ಸೆಳೆದ ಗೇಲ್ ರೂಬಿನರವರು ೧೯೭೫ರಲ್ಲಿ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಜೈವಿಕ ಭಿನ್ನತೆಗಳನ್ನಾಧರಿಸಿ ಸಾಮಾಜಿಕ ವರ್ತನೆಗಳನ್ನು ವಿವರಿಸುವ ವ್ಯವಸ್ಥೆಯನ್ನು 'ಸೆಕ್ಸ್-ಜೆಂಡರ್ ವ್ಯವಸ್ಥೆ' ಎಂದು ಮೊಟ್ಟ ಮೊದಲ ಬಾರಿಗೆ ಗುರುತಿಸಿದರು. ಇದನ್ನು ವಿವರಿಸಿಕೊಳ್ಳಲು ಇಂಗ್ಲೀಷ್ ಮಾತನಾಡುವ ದೇಶಗಳಲ್ಲಿ 'ಜೆಂಡರ್' ಅಥವಾ 'ಸಾಮಾಜಿಕ ಲಿಂಗ' ಎಂಬ ಪರಿಕಲ್ಪನೆಗಳನ್ನು ವಿಸ್ತರಿಸಲಾಯಿತು. ಇಲ್ಲಿ ಜೈವಿಕ ಲಿಂಗ ಎಂದರೆ ವರ್ಣತಂತುಗಳು, ಜನನೇಂದ್ರಿಯಗಳ ಮತ್ತು ಸಂತಾನೋತ್ಪತ್ತಿ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಗಂಡು-ಹೆಣ್ಣಿನ ದೇಹಗಳಲ್ಲಿರುವ ಸಾರ್ವತ್ರಿಕ ವ್ಯತ್ಯಾಸಗಳು. ಅನ್.ಒಕ್ಲೆ ಅವರು ಕೂಡ ಸೆಕ್ಸ್ ಜೆಂಡರ್ ಅಂಡ್ ಸೊಸೈಟಿ(೧೯೮೨) ಎಂಬ ತನ್ನ ಮುಖ್ಯ ಗ್ರಂಥದಲ್ಲಿ ಅವರು "ದೈಹಿಕವಾಗಿ ಸ್ತ್ರೀಯರಾಗಿರುವವರಿಗೆ ಕೆಲವು ಸ್ತ್ರೀತ್ವವನ್ನು ಆರೋಪಿಸಲಾಗಿರುತ್ತದೆ. ಅದೇ ರೀತಿ ಪುರುಷರಿಗೆ ಪುರುಷತ್ವವನ್ನು ಆರೋಪಿಸಲಾಗಿರುತ್ತದೆ"[೩] ಎಂದು ಹೇಳಿರುವುದು ದೊರೆಯುತ್ತದೆ. ಹೀಗೆ ಲಿಂಗ ಮತ್ತು ಸಾಮಾಜೀಕರಣ ಅನೇಕ ವ್ಯಾತ್ಯಾಸಗಳು ಕುರಿತಂತೆ ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು ಮತ್ತು ಸ್ತ್ರೀವಾದಿಗಳು ತಿಳಿಸಿಕೊಟ್ಟಿರುವುದು ದೊರೆಯುತ್ತದೆ. ಹೀಗಿರುವಾಗ ಲಿಂಗ ಮತ್ತು ಸಾಮಾಜೀಕರಣ ಬೇರೆ ಬೇರೆಯಾಗಿದ್ದು ಅದು ಜೈವಿಕ ಲಿಂಗದ ಮೇಲೆ ಸಾಮಾಜಿಕ ಮೌಲ್ಯಗಳ ಪ್ರಭಾವಿರುವುದು ಸ್ಪಷ್ಟವಾಗುತ್ತದೆ. ಈ ಸಾಮಾಜೀಕರಣದ ಪ್ರಭಾವ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆಗೆ ಕಾರಣವಾಗಿದೆ.

ಇತ್ತೀಚಿನ ದಿನಗಳಲ್ಲಿ 'ಜೈವಿಕ ಲಿಂಗ' ಮತ್ತು 'ಸಾಮಾಜೀಕರಣ' ಕುರಿತಂತೆ ಸಮಾಜಶಾಸ್ತ್ರಜ್ಞರು ಮತ್ತು ಸ್ತ್ರೀವಾದಿಗಳು ಮರುಚಿಂತನೆಗೆ ಒಳಪಡಿಸಿದ್ದಾರೆ. ಜೈವಿಕ ಲಿಂಗ (sex) ಮತ್ತು ಸಾಮಾಜೀಕರಣ ಇದೊಂದು ಸಾಮಾಜಿಕ ಲಿಂಗ (Gender) ಸಮಾಜದಿಂದ ರೂಪಿತವಾಗಿದೆ

ಎಂದು ಅಭಿಪ್ರಾಯಪಟ್ಟಿದ್ದಾರೆ. ಲೈಂಗಿಕ ಜೀವಶಾಸ್ತ್ರದ[೧೪] ದೃಷ್ಟಿಕೋನದ ಪ್ರಕಾರ ಇರುವುದು ಎರಡೇ ಜೈವಿಕ ಲಿಂಗಗಳು ಹೆಣ್ಣು ಮತ್ತು ಗಂಡು ಎರಡು ಭಿನ್ನ ಜೀವಿಗಳು ಹೊಂದಿರುವ 'ಸ್ವಾಭಾವಿಕ ಪ್ರವೃತ್ತಿ'; ಇದರಲ್ಲಿ ಯಾವುದೇ ಅನುಮಾನವಿಲ್ಲ. ವ್ಯಕ್ತಿಯ ಜೈವಿಕ ಲಿಂಗ ಬದಲಾಗುವುದಿಲ್ಲ, ಒಂದು ಬಾರಿ ಜೀವ ತಳೆದ ಮೇಲೆ 'ಲಿಂಗ' ಜೀವಿಯಲ್ಲಿ ಕೊನೆಯ ತನಕ ಉಳಿಯುತ್ತದೆ. (ಕೃತಕ ಬದಲಾವಣೆಯನ್ನು ಹೊರತುಪಡಿಸಿ) ಹಾಗೆ ಹೆಣ್ಣು ಹೆಣ್ಣಾಗಿಯೇ ಉಳಿಯುತ್ತಾಳೆ, ಗಂಡು ಗಂಡಾಗಿಯೇ ಉಳಿಯುತ್ತಾನೆ. ಜನನಾಂಗಗಳು ಜೈವಿಕ ಲಿಂಗಕ್ಕೆ ದಾರಿ ಮಾಡಿಕೊಡುತ್ತವೆ. ಗಂಡಿಗೆ ಶಿಶ್ನವಿದ್ದರೆ, ಹೆಣ್ಣಿಗೆ ಯೋನಿ ಇರುತ್ತದೆ. ಗಂಡು-ಹೆಣ್ಣು ವಿಂಗಡಣೆ ನೈಸರ್ಗಿಕ ಹಾಗೂ ವಸ್ತುನಿಷ್ಠ, ಗಂಡು-ಹೆಣ್ಣು ಎಂಬುದು ಸಾಮಾಜಿಕ ನಿರ್ಧಾರಕ ಅಂಶವನ್ನು ಮೀರಿರುವ ಸ್ವತಂತ್ರ ಅಸ್ತಿತ್ವವಾಗಿದೆ.

ಸಾಮಾಜೀಕರಣ ಜೈವಿಕ ಲಿಂಗಕ್ಕೆ ಸಾಮಾಜಿಕ ಮೌಲ್ಯಗಳನ್ನು ಹೇರುತ್ತದೆ. ಇದಕ್ಕೆ "ಮಾನವನು ಸಂಘಜೀವಿಯಾಗಿದ್ದರೂ ಹುಟ್ಟಿನಿಂದಲೇ ಆತ ಹಾಗಿಲ್ಲ. ಮುಂದೆ ಸಮೂಹ ಜೀವಿಯಾಗಿಬಲ್ಲ. ಜೈವಿಕ ಸಾಮರ್ಥ್ಯ ಮಾತ್ರ ಆತನಿಗೆ ಹುಟ್ಟಿನಲ್ಲಿಯೇ ಲಭ್ಯವಾಗಿರುತ್ತದೆ. ಆದರೆ ಈ ಜೈವಿಕ ಸಾಮರ್ಥ್ಯದಿಂದಲೂ ಆತ ತಾನಾಗಿಯೇ ಸಾಮಾಜಿಕ ಜೀವಿಯಾಗಲಾರ ಮತ್ತು ತನ್ನದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲಾರ. ಆತನಿಗೆ ಇತರರ ಹಾಗೂ ಸಮಾಜದ ಸಹಾಯ ಅಗತ್ಯ, ಅನಿವಾರ್ಯ. ಪ್ರತಿಯೊಂದು ಸಮಾಜದಲ್ಲೂ, ಅಂದರೆ ಪ್ರತಿಯೊಂದು ಸಂಸ್ಕೃತಿಯಲ್ಲಿ ತನ್ನ ಸದಸ್ಯರ ಪಾಲನೆ-ಪೋಷಣೆ ಮತ್ತು ಶಿಕ್ಷಣ ನೀಡುವ ಕ್ರಮದ ಮೇಲೆ ತನ್ನದೇ ಆದ ಸಾಮಾಜೀಕರಿಣಕ್ಕೆ ಒಳಗಾಗುತ್ತಾನೆ. ಈ ಸಾಮಾಜೀಕರಣ ಅಥವಾ ಸಾಮಾಜಿಕ ಶಿಕ್ಷಣ ಅಲ್ಪಕಾಲಿಕವಾದುದ್ದಲ್ಲ. ಆದರೆ ಅದು ನಿರಂತರವಾಗಿ ಆತನ (ವ್ಯಕ್ತಿ) ಜೀವನ ಪರ್ಯಂತ ಆಗುವಂತಹದ್ದು. ಹೀಗೆ ಸಾಗುವ ದಾರಿಯಲ್ಲಿ (ಬೆಳವಣಿಗೆಯಲ್ಲಿ) ಅಂದರೆ ಸಾಮಾಜಿಕ ಕಲಿಕೆಯಲ್ಲಿ ಜೈವಿಕವಾಗಿದ್ದ ವ್ಯಕ್ತಿ ಸಾಮಾಜಿಕ ಜೀವಿಯಾಗಿ ರೂಪಾಂತರಗೊಳ್ಳುವುದು.[೧೫]

ಸಾಮಾಜೀಕರಣದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ತನ್ನದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾನೆ. ವ್ಯಕ್ತಿಯ ತಂದೆ-ತಾಯಿಯರು, ಸಮವಯಸ್ಕರು, ಸ್ನೇಹಿತರು, ಒಡಹುಟ್ಟಿದವರು, ಶಿಕ್ಷಕರು, ಇತರ ವ್ಯಕ್ತಿಗಳು ಮತ್ತು ಸಮೂಹ ಮಾಧ್ಯಮಗಳು ಈ ನಿಟ್ಟಿನಲ್ಲಿ ನವಜಾತ ವ್ಯಕ್ತಿಗೆ ಸಹಾಯಕರಾಗುವರು. ಸಾಮಾಜೀಕರಣದ ವಿಧಿ-ವಿಧಾನಗಳು, ರೀತಿ-ನೀತಿಗಳು ನಿರ್ಧರಿಸುವುದು ಸಂಸ್ಕೃತಿ. ಸಾಮಾಜೀಕರಣದ ಕ್ರಮವು ಸಮಾಜದಿಂದ ಸಮಾಜಕ್ಕೆ ಬೇರೆಯಾಗುವುದು. ಈ ಸಾಮಾಜೀಕರಣದಲ್ಲಿ ಒಂದೇ ಸಮಾಜದ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಳೆದು ಬಂದಿರುವ ಎಲ್ಲಾ ವ್ಯಕ್ತಿಗಳು ಒಂದೇ ಬಗೆಯ ವ್ಯಕ್ತಿತ್ವವನ್ನು ಹೊಂದಿರಬೇಕೆಂಬ ನಿಯಮವೇನೂ ಇಲ್ಲ. ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ವೈಯಕ್ತಿಕತೆಯ ಬೆಳವಣಿಗೆಗೂ ತಕ್ಕಷ್ಟು ಅವಕಾಶವಿದೆ. ಆದರೂ ವ್ಯಕ್ತಿತ್ವದ ಬೆಳವಣಿಗೆಯ ಮೇಲೆ ಸಂಸ್ಕೃತಿಯೂ ತನ್ನದೇ ಆದ ರೀತಿ-ನೀತಿಗಳನ್ನು ಹೇರುವುದನ್ನು ಕಡೆಗಣಿಸಲಾಗದು.

ಸಾಮಾಜೀಕರಣದಲ್ಲಿ ವ್ಯಕ್ತಿಗೆ ಯೋಚಿಸಿ ಸಾಮಾಜೀಕರಣ ನೀಡಿದರೂ ಒಮ್ಮೊಮ್ಮೆ ವಿಫಲವಾಗಲೂಬಹುದು. ಏಕೆಂದರೆ ಇದು ಸಮಾಜದಿಂದ ಸಮಾಜಕ್ಕೆ ನಿರಂತರವಾಗಿ ಪರಿವರ್ತನೆಗೊಳ್ಳುತ್ತಿರುವುದರಿಂದ, ಇದನ್ನು ಯೋಚಿಸಿ ಸಾಮಾಜೀಕರಣ ನೀಡಲು ಸಾಧ್ಯವಾಗುವುದಿಲ್ಲ. ದೋಷಪೂರ್ಣವಾದ ಸಾಮಾಜೀಕರಣದಿಂದಾಗಿ ಹಲವಾರು ವ್ಯಕ್ತಿಗತ ಸಮಸ್ಯೆಗಳು ಎದುರಾಗುವವು. ಅವುಗಳಲ್ಲಿ ಕೆಲವು ಜೀವನ ಪರ್ಯಂತ ನಿರಂತರವಾಗಿ ಉಳಿಯಲೂಬಹುದು. ಹೀಗಾಗಿ ಹೆಣ್ಣು-ಗಂಡು ಮಕ್ಕಳಿಗೆ ನೀಡಿದ ಸಾಮಾಜೀಕರಣ ಸಂಗತಿಗಳನ್ನು ಯಾರೂ ನಿರ್ಲಕ್ಷಿಸುವಂತಿಲ್ಲ. ಕ್ರಮವರಿತು ನೀಡುವ ಸಾಮಾಜಿಕ ಶಿಕ್ಷಣವು ಉದ್ದೇಶಿತ ಫಲವನ್ನು ನೀಡಬಹುದು. ಉತ್ತಮ ಸಾಮಾಜೀಕರಣವೆಂಬುದು ಭವಿಷ್ಯದ ಬಗೆಗಿನ ಭವ್ಯವಾದ ಭರವಸೆ ಎಂಬ ಮಾತು ಅಕ್ಷರಶಃ ನಿಜ. ಈ ಭರವಸೆ ಹುಸಿಯಾಗದಿರಬೇಕಾದರೆ ಅದಕ್ಕೆ ಪೂರಕವಾದ ಸಾಮಾಜಿಕ ಪರಿಸರವಿರಬೇಕಾದದ್ದು ಅಗತ್ಯ. ಅಂತಹ ಪರಿಸರವನ್ನು ನಿರ್ಮಿಸುವುದು ಸಾಧ್ಯವಾಗಿದೆಯೇ ? ಎನ್ನುವ ಹಿನ್ನೆಲೆಯಲ್ಲಿ ಅಧ್ಯಯನ ಸಾಗಿದೆ.

ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆ ಸೃಷ್ಟಿಗೆ ಕಾರಣಗಳು: ಸಮಾಜಶಾಸ್ತ್ರ ಹಾಗೂ ಮಾನವಶಾಸ್ತ್ರಜ್ಞರು ಈಗಾಗಲೇ ನಡೆಸಿರುವ ಹಲವಾರು ಅಧ್ಯಯನ ಹಾಗೂ ಸಂಶೋಧನೆಗಳಲ್ಲಿ ಸಾಮಾಜಿಕ ಜೀವಿಯಾದ ವ್ಯಕ್ತಿಯು ಈ ಸಾಮಾಜೀಕರಣ ಸಮಸ್ಯೆಗೆ ಒಳಗಾಗಲು ಕಾರಣಗಳೇನು ಎಂಬುದನ್ನು ತಿಳಿಯುವ ಪ್ರಯತ್ನ ಮಾಡಿದ್ದಾರೆ. ಆದರೆ ಇದರ (ಹುಟ್ಟು) ಉಗಮಕ್ಕೆ ನಿಖರವಾದ ಕಾರಣಗಳು ತಿಳಿಯಲು ಇಂದಿಗೂ ಸಾಧ್ಯವಾಗಿಲ್ಲ. ಏಕೆಂದರೆ 'ಸಾಮಾಜೀಕರಣ' ಸಮಸ್ಯೆ ಎಂಬ ಪರಿಕಲ್ಪನೆ ಬಹು ವಿಸ್ತೃತವಾದದ್ದು, ಇದಕ್ಕೆ ಇಂದು, ನಾಳೆ ಎಂಬುವುದು ಇರುವುದಿಲ್ಲ. ಅದು ಪರಿವರ್ತನೆಶೀಲತೆಯಿಂದ ಕೂಡಿದ್ದಾಗಿದೆ ಮತ್ತು ಅನೇಕ ಪ್ರಭಾವ/ಕಾರಣಗಳಿಂದ ಬದಲಾಗುತ್ತಿರುತ್ತದೆ. ಹೀಗಾಗಿ ನಿಖರವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಸಮಾಜದ ಭಾಗವಾಗಿ ಸಮಾಜಶಾಸ್ತ್ರೀಯ, ಮಾನವಶಾಸ್ತ್ರ, ಮಹಿಳಾ ದೃಷ್ಟಿಕೋನದಲ್ಲಿ ವಿಶ್ಲೇಷಿಸಿದರೆ ಇದರ ಹಿನ್ನಲೆಗೆ ಹಲವಾರು ಅಂಶಗಳು ಪ್ರಭಾವ ಬೀರಿರುವುದು ಕಂಡು ಬರುತ್ತವೆ.

ಹೆಣ್ಣು-ಗಂಡಿನ ಎರಡು ಜೈವಿಕ ಲಿಂಗಗಳ ಮಧ್ಯೆ ಸಾಮಾಜೀಕರಣದ ಸಮಸ್ಯೆ ಸೃಷ್ಟಿಗೊಂಡಿರುವ ಚಾರಿತ್ರಿಕ ಬೆಳವಣಿಗೆಯನ್ನು ಹಲವು ಪಲ್ಲಟಗಳಲ್ಲಿ ಗುರುತಿಸಬಹುದು ಎನ್ನುತ್ತಾರೆ ವಿದ್ವಾಂಸರು. ಇದಕ್ಕೆ "ಬೇಸಾಯ ಪೂರ್ವ ಸಮುದಾಯಗಳಲ್ಲಿ ಹೆಂಗಸು-ಗಂಡಸಿನಲ್ಲಿ ಮೂಲಭೂತ ಸಮಾನತೆಯಿತ್ತೆಂಬುದು 'ಎಂಗೆಲ್ಸ್ ವಾದ'. ಗಂಡಸರು ಉತ್ಪಾದಕರಾಗಿ (ಬೇಟೆಗಾರರು, ಬೇಸಾಯಗಾರರು, ಜಾನುವಾರುಗಳನ್ನು ಸಾಕುವವರು) ಇದ್ದ ಸಂದರ್ಭದಲ್ಲಿ ಹೆಣ್ಣು ಮನೆಯಲ್ಲಿ 'ಮರು ಉತ್ಪಾದಕಿ'ಯಾಗಿ ಅತ್ಯಂತ ಮಹತ್ವಪೂರ್ಣ ಕಾರ್ಯನಿರ್ವಹಿಸುತ್ತಿದ್ದಳು. ಉತ್ಪಾದನಾ ಸಾಮರ್ಥ್ಯಕ್ಕಿಂತ ಮರು ಉತ್ಪಾದನೆಯೇ(reproductive) ಮುಖ್ಯವಾದದರಿಂದ ಅವಳ ಸಾಮಾಜಿಕ ಸ್ಥಾನಮಾನ ಉನ್ನತವಾಗಿತ್ತು. ಆದರೆ ಮಗುವಿನ ತಂದೆ ಯಾರೆಂದು ಗೊತ್ತಿಲ್ಲದಿದ್ದರಿಂದ

ತಾಯಿಯ ಹಕ್ಕು ಚಲಾವಣೆಯಲ್ಲಿತ್ತು ಹಾಗೂ ಕುಟುಂಬದಲ್ಲಿ ಹೆಣ್ಣಿಗೆ ಅಧಿಕಾರಯುಕ್ತ ಸ್ಥಾನ ಇತ್ತು. ಬೇಸಾಯ ಮತ್ತು ಜಾನುವಾರು ಸಾಕಾಣಿಕೆ ಬೆಳವಣಿಗೆ ಹೊಂದಿದಂತೆ ಹೆಚ್ಚುವರಿ ಉತ್ಪಾದನೆ ಸಾಧ್ಯವಾಗಿ ಅದರ ಮೇಲೆ ಗಂಡಸರ ನಿಯಂತ್ರಣ ಸಾಧಿಸುವಂತಾಯಿತು ಹಾಗೂ ಉತ್ಪಾದನಾ ನಿರ್ಧಾರಗಳ ಲಗಾಮು ಅವನ ಕೈ ಸೇರಿತು. ಮುಂದುವರೆದು ಅಂತೆಯೇ ಕುಟುಂಬದ ಹೆಂಗಸರ ಮೇಲೆ ನಿಯಂತ್ರಣ ಇಟ್ಟುಕೊಂಡು ಅಧಿಕಾರ ಸಾಧಿಸುವಂತಾಯಿತು. ಇದರ ಜೊತೆಗೆ ಪರಸ್ಪರ ಪೈಪೋಟಿಯಿಂದ ಕೂಡಿದ ವರ್ಗಗಳೂ ತಲೆ ಎತ್ತಿದವು. ಹಾಗೂ ಇವುಗಳ ಮಧ್ಯದ ಸಂಘರ್ಷವು ಉಂಟಾಯಿತು. ಹೀಗೆ ಹೆಣ್ಣು-ಗಂಡುಗಳಿಬ್ಬರೂ ಪರಸ್ಪರ ಹಿಡಿದಿಟ್ಟುಕೊಳ್ಳುವ ದಿಸೆಯಲ್ಲಿ ಮುಂದೆ ಪ್ರಬುದ್ಧ ಬೆಳವಣಿಗೆ ಆಯಿತು"[೧೬] ಎಂದು ದೊರೆಯುವ ಮಾಹಿತಿಯಲ್ಲಿ ಹೆಣ್ಣು-ಗಂಡಿನ ಮಧ್ಯೆ ವ್ಯವಸಾಯ ಪೂರ್ವದಲ್ಲಿ ಸಾಮಾಜೀಕರಣದಲ್ಲಿ ಲಿಂಗತಾರತಮ್ಯಗಳ ಸಮಸ್ಯೆ ಇದ್ದಿಲ್ಲ, ಅದು ಸಮಾನತೆಯಿಂದ ಕೂಡಿತ್ತು. ಆದರೆ ಹೆಣ್ಣು-ಗಂಡಿನ ಜೈವಿಕ ಲಿಂಗಗಳ ಮಧ್ಯೆ ಉಂಟಾದ ಲಿಂಗತ್ವದ ಪ್ರಭುತ್ವ, ನೆಲೆಗಳಲ್ಲಿ ಭಿನ್ನತೆಗಳು ಕಂಡುಬಂದಿದ್ದರ ಪರಿಣಾಮ ಉತ್ಪಾದನೆ, ಆರ್ಥಿಕತೆಯ, ಶ್ರಮ ವಿಭಜನೆ ಮುಂತಾದ ಸಂಗತಿಗಳ ಮಧ್ಯೆ ಶ್ರೇಣೀಕರಣಗಳೆಲ್ಲಾ ಬೆಳೆದು ಮುಂದೆ ಸಮಾಜದ ಹೆಣ್ಣು-ಗಂಡು ಪ್ರತ್ಯೇಕ ಚಿಂತನೆ ಹಾಗೂ ಮೌಲ್ಯಗಳು ಸೃಷ್ಟಿಗೊಂಡವು. ಹೀಗೆ ಸೃಷ್ಟಿಗೊಂಡ ಸಾಮಾಜೀಕರಣ ನಿರಂತರವಾಗಿ ಮುಂದುವರೆದುಕೊಂಡು ಬಂದಿತು.

ಹೆಣ್ಣು-ಗಂಡಿನ ಸಾಮಾಜೀಕರಣ ಸಮಸ್ಯೆಗೆ ಚಾರಿತ್ರಿಕ ಅಂಶಗಳನ್ನು ಗಮನಿಸೋಣ. ಆಹಾರದ ಅಗತ್ಯಗಳಿಗಾಗಿ ಮನುಷ್ಯರು ಗುಂಪು-ಗುಂಪಾಗಿ ಅಲೆದಾಡುತ್ತಿರುವ ಕಾಲ ಹೋಗಿ ನೆಲೆನಿಂತ ನಂತರ ಕೃಷಿ ಮತ್ತು ಆಹಾರದ ಉತ್ಪಾದನೆ ಕಂಡುಹಿಡಿದು ಆಹಾರ ಸಂಗ್ರಹಣೆ ನಡೆಸಿದ ಮನುಷ್ಯರು ಮನೆ ಮತ್ತು ಕುಟುಂಬ ನಿರ್ಮಿಸಿಕೊಂಡು ಮನೆಯ ಕೆಲಸಗಳು ಅಂದರೆ ಒಳಗಿನ ಕೆಲಸ ಹೆಣ್ಣಿನವು ಹಾಗೂ ಹೊರಗಿನ ಕೆಲಸ ಗಂಡಿನದ್ದು ಎಂದು ಶ್ರಮ ವಿಭಜನೆ ಸೃಷ್ಟಿಸಿಕೊಂಡರು. ಹೆಣ್ಣಿಗೆ ಹೆರಿಗೆ, ಬಾಣಂತನ, ಸಂಗೋಪನೆ (ಮಕ್ಕಳ ಪಾಲನೆ, ಪೋಷಣೆ, ರಕ್ಷಣೆ) ನೈಸರ್ಗಿಕ ಕರ್ತವ್ಯಗಳ ಜೊತೆ ಮನೆಯಲ್ಲಿ ಇದ್ದರೆ, ಅದೇ ಗಂಡು ಅಲೆಮಾರಿತನವನ್ನು ಮುಂದುವರೆಸಿ ಆಹಾರ ಉತ್ಪಾದನೆ, ಶೇಖರಣೆ, ಅವುಗಳ ಮೇಲೆ ಹಕ್ಕು ಸಾಧಿಸಿ ಕ್ರಮೇಣ ಜಮೀನು, ಮನೆ, ಆಹಾರ ಇವುಗಳ ಹೆಚ್ಚುವರಿ ಹಕ್ಕು ಸ್ಥಾಪಿಸಿದ. ಇದು ಮುಂದೆ ಕುಟುಂಬ ವ್ಯವಸ್ಥೆ ಬೆಳೆದು ಹೆಣ್ಣು-ಗಂಡಿನ ಮಧ್ಯೆ ಶ್ರಮ ವಿಭಜನೆ ಪ್ರಕ್ರಿಯೆಗಳು ರೂಪಗೊಂಡು, ಸಮಾಜದ ಹೆಣ್ಣು-ಗಂಡನಲ್ಲಿನ ಸಾಮಾಜೀಕರಣ ರೂಪುಗೊಳ್ಳಲು ಕಾರಣವಾಗಿದೆ ಎನ್ನುವುದು ದೊರೆಯುತ್ತದೆ.

ಮತ್ತೊಂದು ಕಡೆ ಚರಿತ್ರೆಯಲ್ಲಿ ಹೆಣ್ಣು-ಗಂಡಿನ ಮಧ್ಯೆ ಸಾಮಾಜೀಕರಣಗೊಂಡ ಕುರಿತಾಗಿ "ಚರಿತ್ರೆಯ ವಿವಿಧ ಹಂತಗಳಲ್ಲಿ ಗಂಡು, ಹೆಣ್ಣನ್ನು ಬಹು ಬಗೆಯ ನಿರೀಕ್ಷೆ, ಆತಂಕ, ತಲ್ಲಣ ಹಾಗೂ ಭಯಗಳಲ್ಲಿ ನೋಡುತ್ತಾ ಭೂಮಿಯೆಂದೊ, ದೇವತೆಯೆಂದೊ ದೂರವಾಗಿಯೇ ಇರಿಸಿ

ತನ್ನಿಂದ ಹೊರತಾದದ್ದೆಂದು ತಿಳಿದನೇ ಹೊರತು, ತನ್ನ ಸಹಜೀವಿಯಾಗಿ ಎಂದು ನೋಡಲಿಲ್ಲ"[೧೭] ಎಂಬ ಮಾಹಿತಿಯು ದೊರೆಯುತ್ತದೆ. "ಮಾನವರು ಎಂದರೆ ಸ್ತ್ರೀಯರನ್ನು ಒಳಗೊಂಡ ವರ್ಗ ಎಂಬ ಸಹಜತೆಯನ್ನು ನಿರೀಕ್ಷಿಸಬಹುದಾಗಿತ್ತು. ಆದರೆ ಹಾಗಾಗಲಿಲ್ಲ. ಅವನು (ಪುರುಷ) ಪ್ರಕೃತಿಯನ್ನು ಆಕ್ರಮಿಸಿ ಒಡೆತನವನ್ನು ಸ್ಥಾಪಿಸಿದ, ಅವಳನ್ನು (ಹೆಣ್ಣು) ಉಪಜೀವಿಯಾಗಿ ಕಂಡಂದಿನಿಂದಲೇ ಹೆಣ್ಣು-ಗಂಡಿನ ಸಂಬಂಧಗಳ ಸಹಜತೆಯು ನೀಗಿಕೊಂಡು ಬಿಟ್ಟವು. ಇದು ಅವಳಲ್ಲಿ (ಹೆಣ್ಣು) ನೋವು, ಹಿಂಸೆ, ಅಪಮಾನಗಳನ್ನು ತುಂಬಿದರೆ, ಅವನಲ್ಲಿ (ಪುರುಷ) ಹೆದರಿಕೆ, ಅಪಾಯ, ಆತಂಕಗಳನ್ನು ತುಂಬಿಸಿತು. ಅವನಲ್ಲಿ ಅಧಿಕಾರವಿದೆ ಹಾಗಾಗಿ ಅವನೇ ಹುಟ್ಟುಹಾಕಿದ ಧರ್ಮ ಕಾನೂನು ನಿಯಮಗಳು ಅವಳನ್ನು ನಿರ್ದಾಕ್ಷಿಣ್ಯವಾಗಿ, ಹೀನಾಯವಾಗಿ ನಡೆಸಿಕೊಂಡಿತು. ಪುರಾಣ, ಐತಿಹ್ಯ, ಮಾನವರು ಸೃಷ್ಟಿಕೊಳ್ಳ ತೊಡಗಿದ ಕಾಲಕ್ಕಾಗಲೇ ಪಿತೃಪ್ರಧಾನತೆ ಸ್ಥಿರವಾದದ್ದು"[೧೮] ಮತ್ತು "ಸಮಾಜ ಎಂದರೆ 'ಪುರುಷ' ಎಂದೇ ಅರ್ಥ. ಪ್ರಾಚೀನ ಸಮಾಜಗಳ ಕುರಿತು ತೀವ್ರವಾಗಿ ಅಧ್ಯಯನ ಮಾಡಿದ ಲೆವಿಸ್ಟ್ರಾಸ್, ಸಾಮಾಜಿಕ ಅಧಿಕಾರ ಯಾವಾಗಲೂ ಪುರುಷನದ್ದೇ ಎಂದು ಗ್ರಹಿಸಿದ್ದಾನೆ."[೧೯] ಹೀಗೆ ದೊರೆಯುವ ಮಾಹಿತಿಗಳನ್ನು ಆಧರಿಸಿ ನೋಡಿದರೆ, ಹೆಣ್ಣನ್ನು ಸಮಾಜವು ಭಿನ್ನ ದೃಷ್ಟಿಕೋನದಿಂದ ನೋಡಿರುವುದರ ಕಾರಣವಾಗಿಯೇ ಎರಡು ಲಿಂಗಗಳ ಸಾಮಾಜಿಕ ಭಿನ್ನತೆ ಪ್ರಕ್ರಿಯೆಗಳ ಮೂಲಕ ಸಾಮಾಜೀಕರಣವಾಗಿ ರೂಪುಗೊಂಡಿರುವುದು ಕಂಡು ಬರುತ್ತದೆ. ಆದರೆ ಇದು ಪ್ರಾರಂಭದಲ್ಲಿ ಸಾಮಾಜಿಕವಾಗಿ ಅಲ್ಲ, ಕೇವಲ ಜೈವಿಕ ಸಂಗತಿಗಳ ಆಧಾರದಿಂದಲೇ ಮಾತ್ರ, ಆದರೆ ಈ ಜೈವಿಕ ವ್ಯತ್ಯಾಸ ಸಮಾಜದಲ್ಲಿನ ವ್ಯಕ್ತಿಗಳಲ್ಲಿ ಸಾಮಾಜಿಕ ನಡವಳಿಕೆ ಪ್ರಕ್ರಿಯೆಗಳಿಂದ ಭಿನ್ನತೆಗೊಂಡಿರುವುದು ಮಾತ್ರ ದುರಂತ. ಇದು ಇಂದು ಹೆಣ್ಣು-ಗಂಡಿನ ಮಧ್ಯೆ ಅನೇಕ ಸಾಮಾಜಿಕ ಸಮಸ್ಯೆಗಳನ್ನು ತಂದೊಡ್ಡಿರುವುದು ಕಂಡು ಬರುತ್ತದೆ. ಅದೇನೆಂದರೆ ಶ್ರಮವಿಭಜನೆ, ಪಿತೃಪ್ರಧಾನತೆ, ಪುರುಷ ಪ್ರಧಾನತೆ ಮುಂತಾದ ಸಂಗತಿಗಳು ಇಂದು ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗಿವೆ. ಈ ಸಾಮಾಜೀಕರಣದ ಸಮಸ್ಯೆಗಳಿಗೆ ಪುರುಷ ಪ್ರಧಾನತೆ ಬಹುಮುಖ್ಯ ಕಾರಣ. ಈ ಸಂಗತಿಯನ್ನು ಸ್ತ್ರೀವಾದಿಗಳು ಅನಾವರಣಗೊಳಿಸುತ್ತಾರೆ.

ಹೆಣ್ಣು-ಗಂಡಿನ ಸಾಮಾಜೀಕರಣ ಸಮಸ್ಯೆಯಲ್ಲಿ ಹೆಣ್ಣು ಗಂಡಿನ ಶ್ರಮವಿಭಜನೆ ಒಂದೆಡೆಯಾದರೆ, ಮತ್ತೊಂದು ಕಡೆ ಇದರ ಚರಿತ್ರೆಯನ್ನು ಗಮನಿಸಿದರೆ, ಒಬ್ಬರ ಮೇಲೊಬ್ಬರು ಹೇರಿರುವ(ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿ ಮೇಲೆ) ಶ್ರೇಣೀಕೃತ ವ್ಯವಸ್ಥೆ ಕಾರಣವಾಗಿದೆ. ಸಾಮಾಜೀಕರಣವನ್ನು ವ್ಯಕ್ತಿಯ ಹುಟ್ಟಿನಿಂದ ಸೂಕ್ಷ್ಮವಾಗಿ ಅವಲೋಕಿಸಿದರೆ, ಇದು ಇಚ್ಛೆಪಟ್ಟು ಕಟ್ಟಿಕೊಂಡ ಸ್ಥಿತಿಯಾಗದೆ ಬಲವಂತವಾಗಿ ಹೇರಿರುವ ಸ್ಥಿತಿಯಾಗಿದೆ. ಏಕೆಂದರೆ ವ್ಯಕ್ತಿಯ(ಹೆಣ್ಣು) ವೈಯಕ್ತಿಕ ಭಾವನೆಗಳಿಗೆ ಇಲ್ಲಿ ಆಸ್ಪದವೇ ಇಲ್ಲ. ವ್ಯಕ್ತಿಗೆ(ಹೆಣ್ಣು) ನಿಗದಿಪಡಿಸಿದ ಕೆಲಸವು, ಕಡ್ಡಾಯವಾಗಿ ಹಾಗೂ ನಿರಂತರವಾಗಿ ಮುಂದುವರೆದಿರುವುದು ಈ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಕಂಡು ಬರುತ್ತದೆ. ಈ ಸಾಮಾಜೀಕರಣವು ವ್ಯಕ್ತಿಯಿಂದ ವ್ಯಕ್ತಿಗೆ(ಹೆಣ್ಣು) ಬದಲಾಯಿಸಲು

ಸಾಧ್ಯವಾಗದೇ ಉಳಿದಿದೆ. ಮತ್ತೊಂದು ಕಡೆ ಸಮಾಜದಲ್ಲಿ ವ್ಯಕ್ತಿ-ವ್ಯಕ್ತಿಗಳ ಮಧ್ಯೆ ಭಿನ್ನತೆ ಸೃಷ್ಟಿಗೊಂಡು ಮುಂದುವರೆದು ಹೆಣ್ಣು-ಗಂಡಿನ ಮಧ್ಯೆ ಸಾಮಾಜೀಕರಣ ಪ್ರತ್ಯೇಕವಾಗಿ ಸ್ಥಾಪಿತಗೊಂಡಿದೆ. ವ್ಯಕ್ತಿಯ (ಹೆಣ್ಣಿನ) ಸಹಜ ಶಕ್ತಿ ಮತ್ತು ಸಾಮರ್ಥ್ಯಗಳನ್ನು ಹತ್ತಿಕ್ಕಿ ಮತ್ತೊಬ್ಬ ವ್ಯಕ್ತಿ(ಪುರುಷ) ಹೊರಿಸುವ ಮೌಲ್ಯವನ್ನು ಒಪ್ಪಿಕೊಂಡು, ಅನುಸರಿಸಿಕೊಂಡು ಬಂದಿರುವುದರಿಂದ ಹೆಣ್ಣು-ಗಂಡುಗಳ ಮಧ್ಯೆ ಸಾಮಾಜೀಕರಣ ಸಮಸ್ಯೆ ಸಮಾಜದಲ್ಲಿ ಕಂಡು ಬರುತ್ತಿದೆ. ಸ್ತ್ರೀವಾದಿ ಚಿಂತಕಿ ಸಿಮೊನ್ ದಿ ಬೋವ ಅವರು ಹೆಣ್ಣಿನ ಬದುಕನ್ನು ಚಾರಿತ್ರಿಕವಾಗಿ ಸಾಮಾಜೀಕರಣಗೊಳಿಸಿರುವುದರಿಂದ "ಅಲೆಮಾರಿ ಬದುಕಿನ ಪ್ರಾಚೀನ ಸಮಾಜಗಳಿಂದ ಹಿಡಿದು, ಅದು ಕೃಷಿ ಹಾಗೂ ಪಶುಪಾಲನೆ ಸಮುದಾಯವಾಗಿ ನೆಲೆನಿಂತ ಹಂತಗಳಿಗೆ ದಾಟಿ ಮನುಕುಲವು ನಡೆದು ಬಂದ ಚಾರಿತ್ರಿಕ ವಸ್ತುಸ್ಥಿತಿಯನ್ನು ಅವಲೋಕಿಸಿ ಮಹಿಳೆಯ ಬದುಕನ್ನು ಗುರುತಿಸಿಕೊಳ್ಳಬೇಕು. ಇದು ಅಷ್ಟು ಸುಲಭದ ಕೆಲಸವಲ್ಲ ಏಕೆಂದರೆ ಈ ಹಾದಿಯಲ್ಲಿ ಅವಳ ಹೆಜ್ಜೆ ಗುರುತುಗಳನ್ನು ಅಳಿಸಿ ಹಾಕುವ ಪ್ರಯತ್ನಗಳು ನಿರಂತರವಾಗಿ ಜಾರಿಯಲ್ಲಿವೆ"[೨೦] ಎಂಬ ಮಾಹಿತಿಯ ಮೂಲಕ ಹೇಗೆ ಸ್ತ್ರೀ-ಪುರುಷರ (ಹೆಣ್ಣು-ಗಂಡು ಮಕ್ಕಳ) ಮಧ್ಯೆ ಗಟ್ಟಿಕೊಂಡಿರುವ (ಕಟ್ಟಿಕೊಟ್ಟಿರುವ) ಸಾಮಾಜಿಕ ನಡಾವಳಿಗಳು, ಮೌಲ್ಯಗಳು, ರೂಢಿಗಳು ಸಾಮಾಜೀಕರಣಗೊಂಡಿವೆ ಎಂದು ಅನಾವರಣಗೊಳಿಸಿರುವುದು ಕಂಡು ಬರುತ್ತದೆ. ಮುಂದುವರೆದು ಇದಕ್ಕಾಗಿಯೇ ಚಾರಿತ್ರಿಕವಾಗಿ ಹೆಣ್ಣು ಸಾಮಾಜೀಕರಣಗೊಳಿಸಿರುವ ಸಂಗತಿಗಳ ಕುರಿತಾಗಿ ಸಿಮೊನ್ ದಿ ಬೋವ ಅವರು 'ಪುರಾಣ ಐತಿಹ್ಯದಲ್ಲಿ ಹುದುಗಿರುವ ಮಿಥ್‌ಗಳ ಬಗ್ಗೆ ಅಧ್ಯಯನ ಮಾಡುವ ಮೂಲಕವೇ ವಸ್ತುಸ್ಥಿತಿಯನ್ನು ಗ್ರಹಿಸಬೇಕು ಎನ್ನುತ್ತಾರೆ. ಪುರುಷ ನಿರ್ಮಿತ ಚರಿತ್ರೆಯಲ್ಲಿ ಮಹಿಳೆ ಇದ್ದಾಳೆಯೇ ಎಂದು ಕೇಳುವುದರ ಜೊತೆಗೆ ಸಮಾಜದಲ್ಲಿ ಹೆಣ್ಣಿನ ಲೈಂಗಿಕತೆಯನ್ನು ಸಾಮಾಜೀಕರಣಗೊಳ್ಳುವ ಪ್ರಕ್ರಿಯೆಯನ್ನು ಚರಿತ್ರೆಯಲ್ಲಿ ಶೋಧಿಸಬೇಕು ಎಂದು ತಿಳಿಸುತ್ತಾರೆ. ಹೀಗೆ ಹೆಣ್ಣು-ಗಂಡಿನ ಸಾಮಾಜೀಕರಣ ಉಂಟಾಗಿರುವ ನೆಲೆಗಳನ್ನು ಶೋಧಿಸುತ್ತಾ ನಡೆದರೆ, ಜೈವಿಕ ಲಿಂಗಗಳ ಸಾಮಾಜಿಕ ಸಂಬಂಧಗಳಿಗೆ ಒಳಪಟ್ಟ ಸಂಗತಿಗಳನ್ನು ತಿಳಿಸುವುದು ಕಂಡುಬರುತ್ತದೆ.

ಹೆಣ್ಣು-ಗಂಡಿನ ಸಾಮಾಜೀಕರಣ ಸಮಾಜದಿಂದ ಸಮಾಜಕ್ಕೆ, ವ್ಯವಸ್ಥೆಯಿಂದ ವ್ಯವಸ್ಥೆಗೆ ಸಾಗಿಬಂದಿದೆ. ಹೀಗೆ ಸಾಗಿ ಬರುವಾಗ ದಾರಿಯಲ್ಲಿ ವ್ಯಕ್ತಿ, ವ್ಯಕ್ತಿಗಳ ಮಧ್ಯೆ ಭಿನ್ನ ಜೈವಿಕತೆ, ಅದು ಸಾಮಾಜಿಕವಾಗಿ ರೂಪುಗೊಳ್ಳುವಾಗ ಪುರುಷ ನಿರ್ಮಿತ ಗುಣಗಳಿಂದ ರೂಪಿತಗೊಂಡು ಅದು ಅವಳ ಸಾಮಾನ್ಯ, ಸಹಜತೆ ಎನ್ನುವಂತೆ ವ್ಯವಸ್ಥೆಯಲ್ಲಿ ಪ್ರಕಟಗೊಂಡಿದೆ. ಮೇಲ್ನೋಟಕ್ಕೆ ಸಾಮಾಜೀಕರಣದ ನಿಯಮಗಳು ಎಲ್ಲರಿಗೂ (ಹೆಣ್ಣು-ಗಂಡು) ಒಂದೇ ರೀತಿಯಲ್ಲಿ ಅನ್ವಯವಾಗುತ್ತವೆ ಎಂಬಂತಿದ್ದರೂ ವಾಸ್ತವದಲ್ಲಿ ಅವು ಹೆಣ್ಣಿನ ಬದುಕಿನ ಮೇಲೆ ಹೇರಿದ ನಿರ್ಬಂಧಗಳೇ ಆಗಿವೆ. ಯಾಕೆಂದರೆ ಸಾಮಾಜಿಕ 'ನೀತಿ-ಸಂಹಿತೆ'ಗಳು ಹೆಣ್ಣಿನ ದೇಹಕ್ಕೆ ಅನ್ವಯವಾಗುವಷ್ಟು ಬಿಗಿಯಾಗಿ ಗಂಡಿನ ದೇಹಕ್ಕೆ ಅನ್ವಯವಾಗುವುದಿಲ್ಲ. ದೇಹಕ್ಕೆ ಪ್ರಕೃತಿ ಸಹಜವಾದ ನೀತಿ-ಸಂಹಿತೆಗಳು ಇರುತ್ತವೆ. ಈ ಸಂಹಿತೆಗಳಿಂದ ಹೆಣ್ಣು-ಗಂಡಿನ ಮಧ್ಯೆ ತಾರತಮ್ಯವಿರುವುದಿಲ್ಲ. ದೇಹಗಳ

ಮೇಲೆ ಹೇರಿರುವ ಸಾಮಾಜಿಕ ನೀತಿ–ಸಂಹಿತೆಗಳು ಮಾತ್ರ ಪಕ್ಷಪಾತ ರೀತಿಯವು ಶೀಲ–ಅಶ್ಲೀಲ, ಶುಚಿ–ಅಶುಚಿ, ಮಡಿ–ಮೈಲಿಗೆ, ಗೌರವ–ಅವಹೇಳನ, ಸಾಮಾಜಿಕ ನೀತಿ–ಸಂಹಿತೆಗಳು ಹೆಣ್ಣು–ಗಂಡುಗಳ ದೇಹಗಳಿಗೆ ಭಿನ್ನವಾಗಿ ಅನ್ವಯಿಸುವಂತೆ ಮಾಡಲಾಗಿದೆ. ಹೀಗಾಗಿಯೇ ಹೆಣ್ಣು–ಗಂಡುಗಳ ಸಾಮಾಜಿಕ ಬದುಕು ಲಿಂಗತಾರತಮ್ಯದಿಂದ ಕೂಡಿದೆ.

ಸಮಾಜದಲ್ಲಿ ಸಾಮಾಜೀಕರಣ ಪ್ರಕ್ರಿಯೆ ಹೆಣ್ಣು–ಗಂಡುಗಳ ಮಧ್ಯೆ ತಾರತಮ್ಯ ಸೃಷ್ಟಿಸಿ ಗಂಡಿಗೆ ಮಾತ್ರ ಲಾಭವಾಗಿರುವಂತೆ ನೋಡಿಕೊಳ್ಳುತ್ತದೆ. ಶ್ರಮ, ಸಾಮರ್ಥ್ಯ, ಬುದ್ಧಿ ಪ್ರತಿಭೆಗಳಲ್ಲಿ ಹೆಣ್ಣು–ಗಂಡಿನ ಮಧ್ಯೆ ಪ್ರತ್ಯೇಕ ಗುಣಲಕ್ಷಣಗಳನ್ನು ವಿಂಗಡಿಸುತ್ತದೆ. ಅದರಂತೆ ಸಮಾಜದಲ್ಲಿ ಹೆಣ್ಣು–ಗಂಡಿನ ಕೆಲಸಗಳು ಬೇರೆ ಬೇರೆ ಎಂದು ಪ್ರತ್ಯೇಕಿಸುತ್ತದೆ. ಆದರೆ ಜೈವಿಕವಾಗಿ ಹೆಣ್ಣು–ಗಂಡುಗಳ ಗುಣ ಸಾಮರ್ಥ್ಯಗಳು ವಿಭಿನ್ನ ಸ್ವರೂಪದಲ್ಲಿ ಹಾಗೂ ವಿವಿಧ ರೀತಿಯಲ್ಲಿ ಪ್ರಕಟಗೊಳ್ಳುತ್ತವೆ. ಕೆಲವರಲ್ಲಿ ಕೆಲವು ಪ್ರಧಾನವಾಗಿಯೂ, ಕೆಲವು ದುರ್ಬಲವಾಗಿಯೂ ಪ್ರಕಟಗೊಳ್ಳುತ್ತವೆ. ಆದರೆ ಈ ಗುಣ ಸಾಮರ್ಥ್ಯಗಳಲ್ಲಿ ಸ್ವತಃ ಲಿಂಗತಾರತಮ್ಯದ ಆಶಯಗಳಿರುವುದಿಲ್ಲ. ಆದರೆ ಈ ಸಾಮಾಜೀಕರಣದಿಂದ ಗುಣ–ಸಾಮರ್ಥ್ಯಗಳನ್ನು ಪ್ರಕಟಿಸುವಂತೆ ಒತ್ತಾಯಿಸಲಿಕ್ಕೆ ಅನೇಕ ನಿಯೋಗಗಳಾಗಿ ಏಜೆನ್ಸಿ ತರಹ ಕೆಲಸ ಮಾಡುತ್ತಿವೆ. ಅವುಗಳೆಂದರೆ ಕುಟುಂಬ, ಶಿಕ್ಷಣ, ಧರ್ಮ, ಸಾರ್ವಜನಿಕ ನೆರೆ–ಹೊರೆ, ಸಾಮಾಜಿಕತೆ ಹೀಗೆ ಮುಂತಾದ ನಿಯೋಗಗಳು ಸಾಮಾಜೀಕರಣ ರೂಪಿಸಲಿಕ್ಕೆ ಕಾರಣವಾಗಿವೆ. ಇವುಗಳ ಕುರಿತಂತೆ ಇಲ್ಲಿ ನೋಡಬಹುದು.

೨.೪. ಕೌಟುಂಬಿಕ ವಲಯದ ಸಾಮಾಜೀಕರಣ

ಜೈವಿಕವಾಗಿ ಹೆಣ್ಣು–ಗಂಡುಗಳಾಗಿ ರೂಪುಗೊಂಡ ಮಕ್ಕಳಲ್ಲಿ ಗುಣಸ್ವಭಾವಗಳನ್ನು ರೂಪಿಸುವುದೇ ಕೌಟುಂಬಿಕ ಸಾಮಾಜೀಕರಣ. ಈ ಕೌಟುಂಬಿಕ ಸಾಮಾಜೀಕರಣದಲ್ಲಿ ಹೆಣ್ಣು ಮತ್ತು ಗಂಡು ಮಗುವು ಬೇರೆ ಬೇರೆ ರೀತಿಯಲ್ಲಿ ಬೆಳೆಯುವ ಹಾಗೇ ಸಾಮಾಜೀಕರಣ ಪ್ರಕ್ರಿಯೆಯನ್ನು ನೀಡಲಾಗುತ್ತದೆ. ಈ ಮೂಲಕ ಮಗುವಿನಲ್ಲಿ ಲಿಂಗತಾರತಮ್ಯದ ಚಿಂತನೆಗಳನ್ನು ಬಿತ್ತಲಾಗುತ್ತದೆ. ಮಗುವಿರುವಾಗಲೇ ಮಕ್ಕಳಿಗೆ ಹೀಗೆ ಮಾಡು, ಹೀಗೆ ಮಾಡಬೇಡ ಎಂದು ಹೇಳಲಾಗುತ್ತದೆ. ಇದಕ್ಕೆ ಹೆಣ್ಣು ಮಗು(ಮಕ್ಕಳ)ವಿಗೆ ಹೇಳುವ ಮಾತುಗಳಲ್ಲಿ, ಸೂಚಿಸುವ ಕೆಲಸಗಳಲ್ಲಿ, ರೂಢಿಸುವ ಗುಣಗಳಲ್ಲಿ ತಿಳಿಯಬಹುದು. ಉದಾ: ಹೆಣ್ಣು ಮಗುವಿಗೆ ಕುಟುಂಬದಲ್ಲಿ ಹೆಚ್ಚು ಮಾತನಾಡಬಾರದು. ಅಪಹಾಸ್ಯವಾಗಿ ನಗಬಾರದು. ಗಂಭೀರವಾಗಿ ಇರಬೇಕು, ಹೊರಗಡೆ ಹೆಚ್ಚು ಇರಬಾರದು, ಗಂಡುಮಕ್ಕಳ ಜೊತೆ ಸೇರಬಾರದು, ಆಟವಾಡಬಾರದು, ಮನೆಯಲ್ಲಿ ಅಡುಗೆ ಕೆಲಸ, ಶುಚಿತ್ವ ಕೆಲಸ ಹೀಗೆ ಹೇಳುವ ಮಾತುಗಳಲ್ಲಿ ಕೂಡ ಹೆಣ್ಣುಮಕ್ಕಳಿಗೆ 'ನೀನು ಇದನ್ನು ಮಾಡಬೇಕು, ಹೀಗೆ ಮಾತನಾಡಬೇಕು, ಹೆಣ್ಣಾದವಳು ಇಂತಹದೇ ಉಡುಪು ಧರಿಸಬೇಕು, ಮನೆಗೆ ಕತ್ತಲಾಗುವ ಮುಂಚೆ ಸೇರಿಕೊಳ್ಳಬೇಕು, ಹುಡುಗರ ಜೊತೆ ಸಲುಗೆಯಿಂದ ಇರಬೇಡ' ಎಂಬ ಮಾತುಗಳ ಮೂಲಕ ಕುಟುಂಬದೊಳಗೆ ಹೆಣ್ಣು ಮಕ್ಕಳಿಗೆ 'ಬೇಡ' ಎಂಬ ಮಾತುಗಳನ್ನು ರೂಢಿಸಲಾಗುತ್ತದೆ.

ಜೊತೆಗೆ ಕೌಟುಂಬಿಕ ಸಾಮಾಜೀಕರಣದಲ್ಲಿ ಹೆಣ್ಣು ಮಗುವಿಗೆ (ಮಕ್ಕಳಿಗೆ) ಬಾಲ್ಯದಿಂದಲೇ ರೂಢಿಸುವ ಕೆಲಸಗಳಲ್ಲಿ, ಮನೆ ಸ್ವಚ್ಛಗೊಳಿಸುವುದು, ಬಟ್ಟೆ ತೊಳೆಯವುದು, ಕಸ ಬಳಿಯುವುದು, ಊಟ ಮಾಡಿದ ನಂತರ ಪಾತ್ರೆಗಳನ್ನು ಸ್ವಚ್ಛ ಮಾಡುವುದು, ಮಕ್ಕಳನ್ನು ನೋಡಿಕೊಳ್ಳುವುದು, ಆಹಾರ ತಯಾರಿಸುವ, ಮನೆ ಶೃಂಗಾರ ಮಾಡುವ, ಮಕ್ಕಳನ್ನು ನೋಡಿಕೊಳ್ಳುವ, ಮನೆಗೆ ಯಾರೇ ಅತಿಥಿ ಬಂದರೆ ಉಪಚರಿಸುವುದು – ಹೀಗೆ ಕೌಟುಂಬಿಕ ಸಾಮಾಜೀಕರಣದಲ್ಲಿ ಗೃಹಿಣಿತ್ವ ಪಾಲಿಸುವ ಸಾಮಾಜೀಕರಣ ರೂಪಿಸಲಾಗುತ್ತದೆ. ಕುಟುಂಬದ ಒಳಗೆ ನಡೆಯುವ ಎಲ್ಲಾ ಗೃಹಕೃತ್ಯ ಹಾಗೂ ಸೇವಾ ಕಾರ್ಯಗಳು ಹೆಣ್ಣು ಮಕ್ಕಳದ್ದೇ ಎನ್ನುವಂತೆ ಸಾಮಾಜೀಕರಣ ಕುಟುಂಬದಲ್ಲಿ ಹೆಣ್ಣು ಮಗುವಿನಲ್ಲಿ (ಮಕ್ಕಳ) ತುಂಬಲಾಗುತ್ತದೆ.

ಗಂಡು ಮಗುವಿಗೆ ಸ್ವತಂತ್ರವಾಗಿ ಆಟವಾಡಲು ಬಿಡುವುದು, ಹೆಣ್ಣು ಮಕ್ಕಳ ಜೊತೆ ಆಟವಾಡಬೇಡ ಎಂದು ಹೇಳುವುದು, ನೀನು ಗಂಡು ಮಗು, ನೀನು ಧೈರ್ಯವಾಗಿ ಇರಬೇಕು, ಅಂಜಿಕೆ ವ್ಯಕ್ತಪಡಿಸಬಾರದು, ಸ್ವತಂತ್ರವಾಗಿ ಇರಬೇಕು, ಗಂಡು ಮಕ್ಕಳ ಜೊತೆ ಸೇರಿ ಆಟವಾಡ ಬೇಕು, ಮನೆ ಕೆಲಸಗಳನ್ನು ನೀನು ಮಾಡಬಾರದು ಹೀಗೆ ಕಟ್ಟಪ್ಪಣೆಗೆ ಅನುಗುಣವಾಗಿ ಗಂಡು ಮಗುವನ್ನು ಕುಟುಂಬದಲ್ಲಿ ಸಾಮಾಜೀಕರಣ ಪ್ರಕ್ರಿಯೆಗೆ ಒಳಗಾಗಿಸಲಾಗುತ್ತದೆ. ಈ ಕಲಿಕೆಯ ಹಂತದಲ್ಲಿರುವ ಮಗುವಿಗೆ(ಮಕ್ಕಳಿಗೆ) ತಪ್ಪು ಸರಿ ಎನ್ನುವುದನ್ನು ವಿಮರ್ಶಿಸಿಸಲು ಸಾಧ್ಯವಾಗುವುದಿಲ್ಲ. ಜೊತೆಗೆ ಅವಲಂಬಿತವಾಗಿರುವ ಮಗು ಕುಟುಂಬದಲ್ಲಿ ಪೋಷಕರ ಸೂಚನೆಗೆ ಅನುಗುಣವಾಗಿ ನಡವಳಿಕೆ ಪ್ರಕ್ರಿಯೆಗಳನ್ನು ರೂಢಿಸಿಕೊಳ್ಳುತ್ತದೆ. ಇದೇ ಪ್ರಕ್ರಿಯೆಯ ಗುಣಗಳು ಮಗುವಿನಲ್ಲಿ ಸಾಮಾಜೀಕರಣಗೊಳ್ಳುತ್ತದೆ. ಹೀಗೆ ಕೌಟುಂಬಿಕ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಹೆಣ್ಣು ಮಗುವಿಗೆ ನಯ–ನಾಜೂಕತನದ ತರಬೇತಿ ನೀಡಿದರೆ, ಗಂಡು ಮಗುವಿಗೆ ಒರಟು, ಸ್ವ–ಪ್ರತಿಷ್ಠೆಯ ಪ್ರಕ್ರಿಯೆಗಳನ್ನು ಮಕ್ಕಳಿರುವಾಗಲೇ ರೂಢಿಸಿ ಬಿಡಲಾಗುತ್ತದೆ. ಈ ರೂಢಿಸುವ ಪ್ರಕ್ರಿಯೆ ಸಮಾಜದಲ್ಲಿ ಸಾಮಾಜೀಕರಣ ಸಮಸ್ಯೆಯಾಗಿ ಹೆಣ್ಣು–ಗಂಡು ಮಕ್ಕಳಲ್ಲಿ ಕಂಡುಬರುತ್ತದೆ.

ಕುಟುಂಬದೊಳಗೆ ಹೆಣ್ಣು ಮಗುವಿಗೆ(ಮಕ್ಕಳ) ಬಾಲ್ಯದಲ್ಲಿ ಲಿಂಗಭೇದ ಇಲ್ಲದೆ ಮೂಲಭೂತ ಸಾಮರ್ಥ್ಯಗಳು ವಿಕಸನಗೊಳಿಸುವ ಸಾಮಾಜೀಕರಣ ಇಲ್ಲದೆ ಇರುವುದರಿಂದ ಮತ್ತು ಲಿಂಗಕ್ಕೆ ಅನುಗುಣವಾಗಿ ಲಿಂಗಭೇದ ಮತ್ತು ಲಿಂಗತಾರತಮ್ಯ ನೆಲೆಯಲ್ಲಿ ಸಾಮರ್ಥ್ಯಗಳನ್ನು, ಅವಕಾಶಗಳನ್ನು ಕೊಡುವುದರಿಂದ ಹೆಣ್ಣು–ಗಂಡು ಮಕ್ಕಳಲ್ಲಿ ಸಾಮಾಜೀಕರಣದ ಸಮಸ್ಯೆಯನ್ನು ಕುಟುಂಬ ರೂಪಿಸುತ್ತಿರುವುದು ಕಂಡು ಬರುತ್ತದೆ. ಮಕ್ಕಳ ಸ್ವಭಾವಗಳು ಸೂಕ್ಷ್ಮವಾಗಿದ್ದು ಕಲಿಕೆಯ ಮಾದರಿಯನ್ನು ಅನುಸರಿಸುತ್ತವೆ ಮತ್ತು ಯಾವ ರೀತಿಯ ಸ್ವಭಾವಗಳು ಬೆಳವಣಿಗೆಗನುಗುಣವಾಗಿ ಪ್ರೋತ್ಸಾಹಿಸುತ್ತಾರೋ ಅದೇ ಸ್ವಭಾವದ ಸಾಮಾಜೀಕರಣ ಮುಂದುವರೆಯುತ್ತದೆ. ಬೆಳೆದು ಮುಂದೆ ದೊಡ್ಡವರಾದ ಮೇಲೆ ಕುಟುಂಬದಲ್ಲಿ ನೀಡಿದ ಸಾಮಾಜೀಕರಣಕ್ಕೆ ಅನುಗುಣವಾಗಿ ಸಮಾಜದಲ್ಲಿ ವರ್ತನೆಗಳನ್ನು ವ್ಯಕ್ತಪಡಿಸುತ್ತಾರೆ. ಇದಕ್ಕೆ ಕುಟುಂಬದಲ್ಲಿ ಗಂಡು ಮಗುವಿಗೆ

ನೀಡಿದ ಅವಕಾಶ, ಸಾಮರ್ಥ್ಯ, ಸ್ವತಂತ್ರಗಳ ಧೈರ್ಯ, ಸಾಹಸ, ಶಕ್ತಿ, ಅಧಿಕಾರ ಪ್ರದರ್ಶನ ಸಾಮಾಜೀಕರಣದ ಫಲವಾಗಿ ಬೆಳೆದು ಪುರುಷ ಪ್ರಧಾನ ಸಾಮಾಜೀಕರಣ ಕಂಡುಬರುತ್ತದೆ. ಅದೇ ಹೆಣ್ಣು ಮಕ್ಕಳ ಸಾಮಾಜೀಕರಣದಲ್ಲಿ ಅವಕಾಶ, ಸಾಮರ್ಥ್ಯ, ಸ್ವತಂತ್ರಗಳನ್ನು ನೀಡದೆ ಇರುವುದರ ಫಲವಾಗಿ ಇಂದಿಗೂ ಭಯ, ಹಿಂಜರಿಕೆ, ನಯ ನಾಜೂಕು, ಸಂಕೋಚ, ಅಧೈರ್ಯ ಕಂಡುಬರುತ್ತದೆ. ಅದೇ ಅವಕಾಶ, ಸಾಮರ್ಥ್ಯ ಚೆನ್ನಾಗಿ ಪಡೆದ ಮಗು ಬೇಗ ಸಮಾಜದಲ್ಲಿ ಅವಕಾಶ, ಸ್ವತಂತ್ರ ಶಕ್ತಿ ಮತ್ತು ಅಧಿಕಾರವನ್ನು ಪಡೆದುಕೊಳ್ಳುತ್ತದೆ. ಹೀಗಾಗಿ ಕುಟುಂಬದೊಳಗಿನ ಸಾಮಾಜೀಕರಣದ ಪ್ರಕ್ರಿಯೆಯು ವ್ಯಕ್ತಿಯ ಅಗತ್ಯವಾದ ಕೌಶಲ್ಯಗಳನ್ನು ರೂಢಿಸುವುದಲ್ಲದೆ ತನ್ನತನದ ಗುರುತಿಸುವಿಕೆಯಲ್ಲಿ, ಜವಾಬ್ದಾರಿಯುತ ಪಾತ್ರ ನಿರ್ವಹಣೆಯನ್ನು ಕಲಿಸುವುದೇ ಆಗಿದೆ. ಆದರೆ ಕೌಟುಂಬಿಕ ಸಾಮಾಜೀಕರಣದಲ್ಲಿ ತಂದೆ ಮಾಡುವ ಕಾರ್ಯ ಮಗನು ಮಾಡುವುದು. ತಾಯಿ ಮಾಡುವ ಕಾರ್ಯ ಮಗಳು ಮಾಡುವ ಹಾಗೆ ರೂಪಿಸಿ ಬಿಡಲಾಗುತ್ತದೆ. ಹೀಗಾಗಿ ಮಗುವಿರುವಾಗಲೇ ಕುಟುಂಬದೊಳಗೆ ನೀಡಿದ ಸಾಮಾಜೀಕರಣ ಮಗು ದೊಡ್ಡದಾದ ಮೇಲೆ ಕುಟುಂಬದಾಚೆಗೂ ಸಾಮಾಜಿಕ ಸಮಸ್ಯೆಯನ್ನು ರೂಪಿಸುತ್ತಿರುವುದು ಕಂಡುಬರುತ್ತದೆ.

ಒಟ್ಟಾರೆ ಕೌಟುಂಬಿಕ ಸಾಮಾಜೀಕರಣದಲ್ಲಿ ಹೆಣ್ಣು-ಗಂಡು ಮಕ್ಕಳಿಗೆ ಶ್ರಮ ವಿಭಜನೆ, ಹೆಣ್ಣು-ಗಂಡು ಪರಸ್ಪರ ವಿರುದ್ಧ, ಗಂಡು ಮಕ್ಕಳಿಗೆ ಬೇರೆ ಕೆಲಸ, ಹೆಣ್ಣು ಮಕ್ಕಳಿಗೆ ಬೇರೆ ಕೆಲಸ, ಮಕ್ಕಳ ಆಟಗಳಲ್ಲಿ ಹೆಣ್ಣು-ಗಂಡು ಮಕ್ಕಳಿಗೆ ಭೇದ-ಭಾವ, ಮಾತು, ನಡೆ, ನುಡಿ, ಉಡುಪು ಮುಂತಾದ ಸಂಗತಿಗಳನ್ನು ರೂಢಿಸಲಾಗುತ್ತದೆ.

೨.೫. ಶೈಕ್ಷಣಿಕ ವಲಯದ ಸಾಮಾಜೀಕರಣ

ಕೌಟುಂಬಿಕ ವಲಯದ ಸಾಮಾಜೀಕರಣದ ನಂತರ ಮಗುವಿಗೆ ಶೈಕ್ಷಣಿಕ ವಲಯದ ಮೂಲಕ ಸಾಮಾಜೀಕರಣ ರೂಪಿಸಲಾಗುತ್ತದೆ. ಮಗು(ಮಕ್ಕಳು) ಕುಟುಂಬದಿಂದ ಏನನ್ನು ಕಲಿಯುತ್ತದೆಯೋ ಅದಕ್ಕಿಂತ ಹೆಚ್ಚಾಗಿ ಅದು ಓದುವ ಅಥವಾ ಶಿಕ್ಷಣ ಪಡೆಯುವ ಶಾಲೆ-ಶೈಕ್ಷಣಿಕ ಪರಿಸರದಿಂದ ಕಲಿಯುತ್ತದೆ. ಮಗುವಿಗೆ ಶಾಲೆಯಲ್ಲಿ ಶಿಕ್ಷಕರು ಏನನ್ನು ಕಲಿಸುತ್ತಾರೋ ಹಾಗೂ ಹೇಗೆ ಕಲಿಸುತ್ತಾರೋ ಎಂಬುದರ ಆಧಾರದ ಮೇಲೆ ತನ್ನ ನಡತೆಗಳನ್ನು, ಮೌಲ್ಯಗಳನ್ನು ರೂಢಿಸಿಕೊಳ್ಳುತ್ತದೆ. ಮಗುವಿಗೆ ಕುಟುಂಬ ಸಾಮಾಜೀಕರಣದ ಮೊದಲ ಗುರುವಾದರೆ, ಶೈಕ್ಷಣಿಕ ವಲಯ ಮಗುವಿನ ನಡತೆಯನ್ನು ರೂಪಿಸುವ ಎರಡನೆಯ ಗುರುವಾಗುತ್ತದೆ. ಮಗು ತನ್ನ ೫ನೇ ವರ್ಷದಿಂದ ಆರಂಭಿಸಿ ೨೦ನೇ ವರ್ಷದವರೆಗೆ ಶಿಕ್ಷಣ ಪಡೆಯುವಲ್ಲಿ ಜೀವನದ ಮೌಲ್ಯಗಳನ್ನು ಕಲಿಯುತ್ತದೆ. ಈ ಅವಧಿಯಲ್ಲಿ ಮಗು ಏನನ್ನು ಕಲಿಯುತ್ತದೆ ಅಥವಾ ರೂಢಿಸಿಕೊಳ್ಳುತ್ತದೆಯೋ ಅದು ಮಗುವಿನ ಸಾಮಾಜಿಕ, ರಾಜಕೀಯ ಆರ್ಥಿಕ, ಶೈಕ್ಷಣಿಕ ಜೀವನದುದ್ದಕ್ಕೂ ಹಾಸುಹೊಕ್ಕಾಗಿ ಪ್ರಭಾವ ಬೀರುತ್ತದೆ.

ಶೈಕ್ಷಣಿಕ ವಲಯ ಸಾಮಾಜೀಕರಣದಲ್ಲಿ ಮಗುವಿಗೆ ಲಿಂಗವನ್ನಾಧರಿಸಿ(ಹೆಣ್ಣು-ಗಂಡು) ಪ್ರತ್ಯೇಕವಾದ ನಡವಳಿಗಳನ್ನು ಸೃಷ್ಟಿಸಲಾಗುತ್ತದೆ. ಉದಾಹರಣೆಗೆ ಸಹ ಶಿಕ್ಷಣ ಇರುವ ಶಾಲೆಗಳಲ್ಲಿ ಹೆಣ್ಣು-ಗಂಡು ಮಕ್ಕಳನ್ನು ಪ್ರತ್ಯೇಕವಾಗಿ ಕುಳ್ಳಿಸುವುದು, ಪ್ರತ್ಯೇಕ ಸಾಲಿನಲ್ಲಿ ನಿಲ್ಲಿಸುವುದು, ಪ್ರತ್ಯೇಕ ಆಟವಾಡಿಸುವುದು, ಹೆಣ್ಣು-ಗಂಡು ಮಕ್ಕಳ ಗುಂಪುಗಳನ್ನು ಬೇರೆ ಬೇರೆಯಾಗಿ ಮಾಡುವುದು ಮತ್ತು ಪರಸ್ಪರ ಮಾತನಾಡುವಾಗಲು ಪ್ರತ್ಯೇಕತೆ ಹೇಳಿ ಕೊಡುವ ಪ್ರಕ್ರಿಯೆಗಳು ಶಾಲಾ-ಕಾಲೇಜುಗಳಲ್ಲಿ ಕಂಡುಬರುತ್ತದೆ. ಇದು ಮುಂದುವರೆದು ಶಾಲೆ-ಕಾಲೇಜುಗಳ ಸಭೆ-ಸಮಾರಂಭದಲ್ಲಿ ನೀಡುವ ಕೆಲಸ-ಕಾರ್ಯಗಳಲ್ಲಿ ಹೆಣ್ಣು-ಗಂಡು ಮಕ್ಕಳಿಗೆ ಪ್ರತ್ಯೇಕವಾದ ಕೆಲಸಗಳನ್ನು ನೀಡಲಾಗುತ್ತದೆ. ಅದೇನೆಂದರೆ ಹೆಣ್ಣು ಮಕ್ಕಳಿಗೆ ಸಭೆ ಸಮಾರಂಭಗಳಲ್ಲಿ ಕಸ ಗುಡಿಸುವುದು, ರಂಗೋಲಿ ಹಾಕುವುದು, ವೇದಿಕೆ ಅಲಂಕಾರ, ಶೃಂಗಾರಗೊಳಿಸುವುದು, ಅತಿಥಿಗಳನ್ನು ಸ್ವಾಗತಿಸುವುದು, ಹೂಗುಚ್ಚ ಕೊಡುವುದು, ಅತಿ ಹಗುರವಾದ, ಸೂಕ್ಷ್ಮವಾದ ಕೆಲಸಗಳಿಗೆ ಹೆಣ್ಣು ಮಕ್ಕಳಿಗೆಂದು ನಿರ್ಧರಿಸಿ ಕೆಲಸ ನೀಡುವುದು ಕಂಡು ಬರುತ್ತದೆ. ಅದೇ ಗಂಡು ಮಕ್ಕಳಿಗೆ ನಿರೂಪಣೆ, ಹೊರಗಿನ ಭಾರವಾದ ಕೆಲಸ, ಕಟ್ಟುವುದು, ಟೇಬಲ್ ಹಾಕುವುದು, ನೀರು ತರುವುದು, ಕಾರ್ಯಕ್ರಮದ ಮೇಲ್ವಿಚಾರಣೆ ಕೆಲಸ ನೀಡಲಾಗುತ್ತದೆ. ಇದು ಹೆಣ್ಣು-ಗಂಡುಮಕ್ಕಳಲ್ಲಿ ಪ್ರತ್ಯೇಕ ಸಾಮಾಜೀಕರಣ ರೂಪುಗೊಳ್ಳಲು ಕಾರಣವಾಗುತ್ತದೆ. ಇದನ್ನು ಈಗಾಗಲೇ ನಡೆದ ಅಧ್ಯಯನಗಳು ಹೀಗೆ ಗುರುತಿಸುತ್ತವೆ. "ಶಾಲಾ ಚಟುವಟಿಕೆಗಳಲ್ಲಿ ಹುಡುಗಿಯರಿಗೆ ಸಹ ಕಾರ್ಯದರ್ಶಿಯಾಗಲು ಹೆಚ್ಚೆಂದರೆ ಉಪಕಾರ್ಯದರ್ಶಿಯಾಗಲು ಅವಕಾಶ, ಅಧ್ಯಕ್ಷೆಯಾಗಲು ಸ್ಪರ್ಧಿಸಿದರೆ ಗಂಡುಬೀರಿಯೆಂದೇ ಲೆಕ್ಕಾಚಾರ, ಕುಮಾರಿಯರಿಗೆ ಭಾಷಾ ಪರಿಣಿತಿ ಇರುವುದರಿಂದಾಗಿ ಸಭೆಯ ವರದಿಗಳನ್ನು ಸಿದ್ಧಪಡಿಸುವ ಕೆಲಸ, ಅವರ ಪಾಲಿಗೆ ಕ್ರೀಡೋತ್ಸವದ ಪಥ ಸಂಚಲನದಲ್ಲಿ ಸಾಲಿನ ಮುಂದುಗಡೆ ನಿಂತು ಧ್ವಜ ಹಿಡಿಯಲು, ಸ್ವಾಗತ ನೃತ್ಯ ಅಥವಾ ಭಕ್ತಿಗೀತೆ ಹಾಡಲು, ಧನ್ಯವಾದ ಸಮರ್ಪಣೆ, ಮುಖ್ಯ ಅಥಿತಿಗಳ ಮುಖ ಅರಳಿಸಲು, ಹೂ ಗುಚ್ಛ ನೀಡುವ ಕೆಲಸ, ಕುಮಾರಿಯರಿಗೆ ಶಾಲಾ-ಕಾಲೇಜು ವಾರ್ಷಿಕೋತ್ಸವಕ್ಕೆ ತಯಾರಿಯಲ್ಲಿ ವೇದಿಕೆಗಳನ್ನು ಅಲಂಕರಿಸುವುದು ಕುಮಾರಿಯರು. ಅದಕ್ಕೆ ಬೇಕಾದ ಗುಂಡುಸೂಜಿ, ಗಮ್, ಮೊಳೆಗಳನ್ನು ಕುಮಾರರು ಸರಬರಾಜು ಮಾಡುತ್ತಾರೆ. ಅಂದರೆ ಸರಕು ಸರಂಜಾಮುಗಳ ಸರಬರಾಜು ಹುಡುಗರ ಕೆಲಸ, ಅಲಂಕರಿಸುವುದು ಹುಡುಗಿಯರಿಗೆ ಬಿಟ್ಟದ್ದು, ಹೊರಗಣ ಸಮಾಜದಲ್ಲಿ ಹಾಗೆಯೇ ಗಂಡಸರಿಗೆ ಸರಕುಗಳ ಸರಬರಾಜು ಹಾಗೂ ನಿರ್ವಹಣೆಯ ಕೆಲಸ, ಸರಕುಗಳ ನಿರ್ವಹಣೆ ಹಾಗೂ ಸ್ವಚ್ಚವಾಗಿಡುವ ಕೆಲಸ ಹೆಂಗಸರಿಗೆ".[೨೧] ಹೀಗೆ ಶಾಲಾ-ಕಾಲೇಜುಗಳಲ್ಲಿ ಮಕ್ಕಳಿಗೆ (ಹೆಣ್ಣು-ಗಂಡು) ಸಿದ್ಧಗೊಳಿಸುವ ಸಾಮಾಜೀಕರಣ ಕಂಡುಬರುತ್ತದೆ. ಇದು ಮಕ್ಕಳಿಗೆ ಪಠ್ಯಕ್ರಮದಿಂದ ಹಿಡಿದು, ತರಗತಿಗಳಲ್ಲಿ ಶಿಕ್ಷಕರು ಬಳಸುವ ಭಾಷೆ, ಅವರು ನಡೆಸಿಕೊಳ್ಳುವ ರೀತಿ, ಅವರಿಗೆ ವಹಿಸುವ ಜವಾಬ್ದಾರಿಗಳು ಹೀಗೆ ಮಕ್ಕಳಲ್ಲಿ ಮಾನಸಿಕ ಸ್ಥಿತಿಯನ್ನು, ನಡವಳಿಕೆಯನ್ನು ರೂಪಿಸುವಲ್ಲಿ ಶಿಕ್ಷಣವು ಸಾಮಾಜೀಕರಣಕ್ಕೆ ಕಾರಣವಾಗುತ್ತಿದೆ. ಇದು ಮುಂದುವರೆದು ಇಲ್ಲಿಗೆ

ನಿಂತಿಲ್ಲ ಶೈಕ್ಷಣಿಕ ವಲಯದಲ್ಲಿ ಪ್ರತ್ಯೇಕ ಶಾಲೆ-ಕಾಲೇಜು, ವಿಶ್ವವಿದ್ಯಾಲಯಗಳು ತರಗತಿಗಳ ಮೂಲಕ ಬೋಧನೆ ಮಾಡುವಂತಹದ್ದು ಇದೆ. 'ಹೆಣ್ಣು' ಮಕ್ಕಳೆಂದರೆ 'ವಿಭಿನ್ನ' ಎಂಬ ಸಂದೇಶವನ್ನು ಮತ್ತು ಸಾಮಾಜೀಕರಣವನ್ನು ತಲುಪುವಂತೆ ನೋಡಿಕೊಳ್ಳಲಾಗುತ್ತಿರುವ ಸಾಮಾಜೀಕರಣ ಕಂಡುಬರುತ್ತದೆ.

ಶಾಲಾ-ಕಾಲೇಜುಗಳಲ್ಲಿ ನೀಡುವ ವಿವಿಧ ಚಟುವಟಿಕೆಗಳಲ್ಲಿ ಯಾವ ಚಟುವಟಿಕೆ ಹೆಣ್ಣುಮಕ್ಕಳಿಗೆ ಸೂಕ್ತ, ಯಾವ ಚಟುವಟಿಕೆ ಗಂಡುಮಕ್ಕಳಿಗೆ ಸೂಕ್ತ ಮತ್ತು ಹೆಣ್ಣುಮಕ್ಕಳ ಗುಣಶೀಲ ಹೇಗಿರಬೇಕು, ಗಂಡುಮಕ್ಕಳ ಗುಣಶೀಲ ಹೇಗಿರಬೇಕು ಮುಂತಾದ ಗುಣಲಕ್ಷಣಗಳನ್ನು ಶಾಲಾ-ಕಾಲೇಜುಗಳಲ್ಲಿ ಪ್ರತ್ಯೇಕಗೊಳಿಸುವುದರಿಂದ ಹೆಣ್ಣು ಗಂಡು ಮಕ್ಕಳ ಸಾಮಾಜೀಕರಣದಲ್ಲಿ ಪ್ರತ್ಯೇಕ ಸಮಸ್ಯೆ ಸೃಷ್ಟಿಗೆ ಕಾರಣವಾಗಿದೆ. ಇದಕ್ಕೆ ಉದಾಹರಣೆಗೆ ಹೆಣ್ಣುಮಕ್ಕಳ ಕುರಿತಾಗಿ ನೈತಿಕ ಮೌಲ್ಯಗಳಲ್ಲಿ 'ಹುಡುಗಿಯರು ಸುಳ್ಳು ಹೇಳುವುದಾ? ಹುಡುಗಿಯರಿಗೆ ಸ್ವಲ್ಪವು ನಾಚಿಕೆ ಬೇಡವೇ? ಗಂಡುಬೀರಿ' ಎಂದೆಲ್ಲ ಹೇಳುವ ಮಾತುಗಳಲ್ಲಿ ಮತ್ತು ಶಾಲಾ-ಕಾಲೇಜುಗಳಲ್ಲಿ ಪ್ರತ್ಯೇಕ ಸೌಲಭ್ಯಗಳು, ಚಟುವಟಿಕೆಗಳು, ಹುಡುಗ-ಹುಡುಗಿಯರನ್ನು ನಡೆಸಿಕೊಳ್ಳುವ ರೀತಿ ಎಲ್ಲವೂ ಸಾಮಾಜೀಕರಣದ ಸಂಗತಿಗಳಾಗಿವೆ. ಮತ್ತೊಂದು ಕಡೆ ಬಹುತೇಕ ಸಹ ಶಿಕ್ಷಣ ಸಂಸ್ಥೆಗಳಲ್ಲಿ ಹೆಣ್ಣು-ಗಂಡು ಮಕ್ಕಳನ್ನು ನಡೆಸಿಕೊಳ್ಳುವ ರೀತಿ ಭಿನ್ನವಾದ ನಿಯಮಗಳು, ಉಡುಪುಗಳನ್ನು ಕುರಿತು ನಿರ್ಬಂಧಗಳು ಕ್ರೀಡೆಗಳಿಗಾಗಿ ಹೆಣ್ಣು-ಗಂಡು ಮಕ್ಕಳಿಗೆ ಪ್ರತ್ಯೇಕ ಆಟವಾಡಿಸುವಾಗ ಕಂಡು ಬರುವ ತಾರತಮ್ಯ ನೀತಿ, ಜವಾಬ್ದಾರಿಗಳನ್ನು ಹಂಚುವಾಗ, ಅನುಸರಿಸುವಾಗ ಲಿಂಗತಾರತಮ್ಯದಿಂದ ಕೂಡಿದ ಕ್ರಮಗಳು ಇವೆಲ್ಲವೂ ಶೈಕ್ಷಣಿಕ ವಲಯದಲ್ಲಿನ ಸಾಮಾಜೀಕರಣ ಸ್ವರೂಪವನ್ನು ಮತ್ತು ಲಿಂಗ ಪೂರ್ವಗ್ರಹಗಳನ್ನು ತೋರಿಸುತ್ತವೆ.

ಕೆಲವು ಶಾಲೆ-ಕಾಲೇಜುಗಳಲ್ಲಿ ಹೆಣ್ಣು-ಗಂಡು ಮಕ್ಕಳ ಕುರಿತಂತೆ, ವಿಭಿನ್ನ ಧೋರಣೆಯ ಸಾಮಾಜೀಕರಣ ರೂಪಿಸಿರುವುದು ಕಂಡು ಬರುತ್ತದೆ. "ಬಹುಸಂಖ್ಯಾತ, ಅಲ್ಪಸಂಖ್ಯಾತ ಧರ್ಮಿಯರ ಶಾಲೆಗಳಲ್ಲಿ ಹೆಣ್ಣು ಮಕ್ಕಳು ನರಕಯಾತನೆ ಅನುಭವಿಸಬೇಕಾಗಿದೆ. ಕೆಲವೊಂದು ಕ್ರಿಶ್ಚಿಯನ್ ಶಾಲೆಗಳಲ್ಲಿ ಹುಡುಗಿಯರು ಹೂ ಮುಡಿಯುವಂತಿಲ್ಲ, ಬಳೆ ತೊಡುವಂತಿಲ್ಲ, ಕುಂಕುಮ ಧರಿಸುವಂತಿಲ್ಲ, ಹುಡುಗರ ಜೊತೆ ಮಾತಾಡುವಂತಿಲ್ಲ, ಏಸುವಿನ ಪ್ರಾರ್ಥನೆ ಮಾಡಬೇಕು ಎಂಬ ಒತ್ತಡಗಳಿವೆ. ಹಿಂದೂ ಧಾರ್ಮಿಕ ಶಾಲೆಗಳಲ್ಲಿ ಶಾರದಾ ಪೂಜೆ, ಮಂತ್ರ ಪಠಣ ಇತ್ಯಾದಿ ಮುಸ್ಲಿಮ್ ಮಕ್ಕಳು ಬುರ್ಖಾ ಧರಿಸಬಾರದು, ಸ್ಕಾರ್ಪ್ ಧರಿಸಿ ತರಗತಿಗೆ ಬರಬಾರದು ಎಂಬ ನಿರ್ಬಂಧ, ಹಿಂದೂ ಹುಡುಗಿಯರನ್ನು ಮುಸ್ಲಿಂ ಹುಡುಗರು ಮಾತನಾಡಿಸಬಾರದು. ಇದರಿಂದ ಗುಂಪು ಗಲಾಟೆ ನಡೆಯುತ್ತವೆ. ಹಾಗೇನಾದರೂ ಮಾತು ತಪ್ಪಿದರೆ ಆ ಶಾಲೆಯಲ್ಲಿ ದುರಂತಗಳು ಹೆಚ್ಚಾಗುತ್ತವೆ. ಮುಸ್ಲಿಂ ಶಾಲೆಗಳಲ್ಲಿ ಖುರಾನ್ ಪಠನ ಕಡ್ಡಾಯ, ಬುರ್ಖಾ ಕಡ್ಡಾಯ, ಧಾರ್ಮಿಕ ಶಿಕ್ಷಣ ಕಡ್ಡಾಯ. ಮತ್ತೆ ಕೆಲವು ಕೋಮುವಾದಿಗಳು ನಡೆಸುವ ಶಾಲೆಗಳಲ್ಲಿ ರಾಷ್ಟ್ರ ಪ್ರೇಮದ ಹೆಸರಲ್ಲಿ ಮಂಕುಬೂದಿ ಎರಚುವ ವೈಚಾರಿಕ ಸ್ವಾತಂತ್ರ್ಯ ಹರಣ ಮಾಡುವ

ಹುನ್ನಾರ; ಕಡ್ಡಾಯವಾಗಿ ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆ ಪಾರಾಯಣ, ಸಂಸ್ಕೃತ ಕಡ್ಡಾಯ ಈ ಎಲ್ಲವೂ ಹೆಣ್ಣಿನ ಅಸ್ಮಿತೆ, ಅನನ್ಯತೆ ವ್ಯಕ್ತಿತ್ವದ ಮೇಲೆ ಮಾಡಲಾಗುತ್ತಿರುವ ಸವಾರಿಗಳು”[೨೨] ಹೀಗೆ ಶೈಕಣಿಕ ವಲಯದಲ್ಲಿ ಸಾಮಾಜೀಕರಣದಲ್ಲಿ ಹೆಣ್ಣು-ಗಂಡುಮಕ್ಕಳಿಗೆ ಧಾರ್ಮಿಕ ಹಿನ್ನೆಲೆ, ಸಾಂಸ್ಕೃತಿಕ ಹಿನ್ನೆಲೆ ಇಟ್ಟುಕೊಂಡು ಸಾಮಾಜೀಕರಣ ರೂಪಿಸುತ್ತಿರುವುದು ಕಂಡುಬರುತ್ತದೆ. ಇದರಿಂದ ಆಯಾ ಧರ್ಮಕ್ಕೆ, ಸಂಸ್ಕೃತಿಗೆ ಅನುಗುಣವಾಗಿ ಧರ್ಮ ಕಲಿಸಿದ ಮೌಲ್ಯಗಳು ಶೈಕ್ಷಣಿಕ ವಲಯದಲ್ಲಿ ಪುನರ್‌ಸ್ಥಾಪಿಸುತ್ತಿರುವುದು ಕಂಡುಬರುತ್ತದೆ.

ಶೈಕ್ಷಣಿಕ ವಲಯದ ಸಾಮಾಜೀಕರಣದಲ್ಲಿ ಗಂಡುಮಕ್ಕಳಿಗೆ ಪುರುಷತ್ವವನ್ನು ತುಂಬಿಸುವುದು, ಹೆಣ್ಣು ಮಗುವಿನಲ್ಲಿ ಸ್ತ್ರೀತ್ವವನ್ನು ತುಂಬಿಸುವುದು ನಿರಂತರವಾಗಿ ನಡೆಯುತ್ತಿರುತ್ತದೆ. ಇದು ನಿರಂತರವಾಗಿ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಮುಂದುವರೆದು ವ್ಯಕ್ತಿಯ ಜೀವನದುದ್ದಕ್ಕೂ ಪ್ರಭಾವ ಬೀರುತ್ತದೆ. ಜೊತೆಗೆ ಇದು ಮಕ್ಕಳಲ್ಲಿ ಲಿಂಗ-ಪೂರ್ವಗ್ರಹ, ಲಿಂಗತಾರತಮ್ಯ ಭಾವನೆಗಳು ನಿರಂತರವಾಗಿ ಮುಂದುವರೆಯಲು ಕಾರಣವಾಗುತ್ತದೆ. ಮತ್ತೊಂದು ಕಡೆ ಶೈಕ್ಷಣಿಕ ಸಾಮಾಜೀಕರಣದಲ್ಲಿ ಇಂದಿಗೂ ಅಧ್ಯಯನದ ವಿಷಯಗಳಲ್ಲಿ ಗಂಡುಮಕ್ಕಳಿಗೆ ಸೂಕ್ತವಾದದ್ದು ಯಾವುದು ಎಂದು, ಹೆಣ್ಣುಮಕ್ಕಳಿಗೆ ಸೂಕ್ತವಾದದ್ದು ಯಾವುದು ಎಂದು ಬೇರೆ ಬೇರೆ ವಿಷಯಗಳ ಅಧ್ಯಯನ ಕಂಡು ಬರುತ್ತದೆ. ಉದಾಹರಣೆಗೆ ಹೆಣ್ಣು ಮಕ್ಕಳಿಗೆಂದರೆ ಕಲೆ, ಹಾಡು, ಹೊಲಿಗೆ, ಗೃಹ ವಿಜ್ಞಾನ ಮುಂತಾದ ಕ್ಷೇತ್ರಗಳು ಅವರಿಗೆ ಸೂಕ್ತವಾದವು ಎಂಬ ಸಾಮಾಜೀಕರಣ ಕಂಡುಬರುತ್ತದೆ. ಇತ್ತೀಚೆಗೆ ತಾಂತ್ರಿಕ ಕ್ಷೇತ್ರಕ್ಕೆ ಹೆಣ್ಣು ಮಕ್ಕಳ ಪ್ರವೇಶದ ಪ್ರಮಾಣ ಹೆಚ್ಚಳವಾದರೂ ಕೂಡ ಹೆಣ್ಣು ಮಕ್ಕಳನ್ನು ಅಧಿಕ ಸಂಖ್ಯೆಯಲ್ಲಿ ದಾಖಲಿಸಿದ್ದು ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ ವಿಷಯಗಳಿಗೆ, ಶಾಲಾ-ಕಾಲೇಜುಗಳಲ್ಲಿ ಈ ಕ್ಷೇತ್ರಗಳು ಹೆಣ್ಣುಮಕ್ಕಳಿಗೆ 'ಮೃದು'ವಾದ ಕ್ಷೇತ್ರಗಳೆಂದು ಗುರುತಿಸಲ್ಪಟ್ಟಿದ್ದರಿಂದ ಕಠಿಣ ದೈಹಿಕ ಪರಿಶ್ರಮವನ್ನೊಳಗೊಂಡ ಕೋರ್ಸ್‌ಗಳಿಗೆ ಹೆಣ್ಣು-ಮಕ್ಕಳು ಪ್ರವೇಶ ಬಯಸಿದರೂ ಕೂಡ ಹಲವು ಬಾರಿ ಇವು ಗಂಡುಮಕ್ಕಳಿಗೆ ಸೂಕ್ತವಾದವು, ಸುಕೋಮಲೆಯಾದ ವಿದ್ಯಾರ್ಥಿನಿಯರಿಗೆ ಇದನ್ನು ನಿಭಾಯಿಸಲು ಸಾಧ್ಯವಿಲ್ಲವೆಂಬ ಅರ್ಥಹೀನ ಕಾರಣವನ್ನು ಮುಂದಿಟ್ಟು ಪ್ರತ್ಯಕ್ಷವಾಗಿಯೂ, ಇಲ್ಲ ಪರೋಕ್ಷವಾಗಿಯೂ ಅವರನ್ನು ನಿರುತ್ತೇಜನಗೊಳಿಸುವ ಸಾಮಾಜೀಕರಣ ಸಮಾಜದಲ್ಲಿ ಕಂಡುಬರುತ್ತದೆ. ಇದನ್ನು ಪ್ರಾಥಮಿಕ ಶಾಲಾ ಮಟ್ಟದಲ್ಲಿ ಶಿಕ್ಷಕರ ಹುದ್ದೆಗಾಗಿ ತರಬೇತಿಯನ್ನು ನೀಡುವ ಹಾಗೂ ದಾದಿಯ ವೃತ್ತಿಗೆ ತರಬೇತಿಯನ್ನು ನೀಡುವ ಕೋರ್ಸ್‌ಗಳಲ್ಲಿ ಮಾತ್ರ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳ ಪ್ರಮಾಣ ಹೆಚ್ಚಾಗಿರುವುದು ಕಂಡು ಬರುತ್ತದೆ. ಇದಕ್ಕೆ ಕಾರಣವೆಂದರೆ ಸಮಾಜದ ಶೈಕ್ಷಣಿಕ ವಲಯದ ಸಾಮಾಜೀಕರಣದಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಕರ ಹಾಗೂ ದಾದಿಯರ ಕೆಲಸ ಸುರಕ್ಷಿತ ಕೆಲಸ, ಕಠಿಣವಲ್ಲದ, ಪರಿಶ್ರಮ ಇಲ್ಲದ್ದು ಎಂದು ಭಾವಿಸಿರುವುದು. ಹೆಣ್ಣು ಮಕ್ಕಳಿಗೆ ಯಾಕೆ ಹೆಚ್ಚಾಗಿ ಈ ಶಿಕ್ಷಣ ನೀಡುತ್ತಾರೆ ಎಂದರೆ, ಕೌಟುಂಬಿಕ ಸಾಮಾಜೀಕರಣದಲ್ಲಿ ಮೊದಲಿಗೆ

ಮಕ್ಕಳನ್ನು ಮನೆಯಲ್ಲಿ ಲಾಲಿಸಿ ಪಾಲಿಸುವವರು ಹೆಣ್ಣುಮಕ್ಕಳು. ಹಾಗೆಯೇ ಕುಟುಂಬದಲ್ಲಿ ಪಾಲನೆ, ಪೋಷಣೆ, ರಕ್ಷಣೆ ಮತ್ತು ಇತರೆ ಜವಾಬ್ದಾರಿಗಳನ್ನು ನಿಭಾಯಿಸಲು ಕುಟುಂಬ ಸಾಮಾಜೀಕರಣಗೊಳಿಸುವುದು ಕಂಡು ಬರುತ್ತದೆ. ಆದ್ದರಿಂದ ಇದನ್ನು ಆಧರಿಸಿ ರೋಗಿಗಳಿಗೆ ಶುಶ್ರೂಷೆಯಲ್ಲಿ ಹೆಣ್ಣು-ಮಕ್ಕಳು ಮನೆಯಲ್ಲಿ ಮಾಡುವ ಕೆಲಸಗಳನ್ನು ಒಂದು ಔಪಚಾರಿಕ ಚೌಕಟ್ಟಿನಲ್ಲಿಯೂ ಅವರು ನಿರ್ವಹಿಸಲು ಸೂಕ್ತವಾದವರು ಎಂಬ ವಾದ ಸಾಮಾಜೀಕರಣದಲ್ಲಿ ಸ್ಥಾಪಿತಗೊಂಡಿದ್ದರಿಂದ, ಹೆಣ್ಣುಮಕ್ಕಳು ಮನೆಯಲ್ಲಿ ನಿರ್ವಹಿಸುವ ಪಾತ್ರಗಳೇ ಹೊರಗು ನಿರ್ವಹಿಸಲು ಸಾಧ್ಯ ಎಂಬುದು ಶೈಕ್ಷಣಿಕ ವಲಯದ ಸಾಮಾಜೀಕರಣದಲ್ಲಿ ಮುಂದುವರೆದಿರುವುದು ಕಂಡುಬರುತ್ತದೆ. ಆದರೆ ದೇಶದಾದ್ಯಂತ ಸಾವಿರಾರು ಹೆಣ್ಣುಮಕ್ಕಳು ಬಿಸಿಲು ಮಳೆಯೆನ್ನದೆ ಕಲ್ಲೊಡೆಯುವ, ಮಣ್ಣು ಅಗೆಯುವ ಕಟ್ಟಡ ನಿರ್ಮಾಣದಲ್ಲಿ, ಗಾರೆ ಕೆಲಸ ಹಾಗೂ ದಿನವಿಡೀ ಮನೆಯ ಹೊರಗೆ ಮತ್ತು ಒಳಗೆ ನಿರಂತರವಾಗಿ ದೈಹಿಕ ಶ್ರಮವನ್ನೊಳಗೊಂಡ ಕೆಲಸಗಳಲ್ಲಿ ತೊಡಗಿರುವುದನ್ನು ನೋಡುತ್ತಿದ್ದರೂ ದೈಹಿಕ ದೌರ್ಬಲ್ಯದ ನೆಪವೊಡ್ಡಿ ಹೆಣ್ಣುಮಕ್ಕಳನ್ನು ಹಲವು ಜ್ಞಾನಶಾಖೆಗಳಿಂದ ಮತ್ತು ಕೆಲವು ಉದ್ಯೋಗಗಳಿಂದ ದೂರವಿಡುತ್ತಿರುವುದು ಶೈಕ್ಷಣಿಕ ಸಾಮಾಜೀಕರಣ ಸಮಸ್ಯೆಯಿಂದಾಗಿಯೇ ಹೊರತು ಮತ್ತೇನು ಅಲ್ಲ. ವೈದ್ಯಕೀಯ ಕ್ಷೇತ್ರದಲ್ಲಿಯೂ ಕೂಡ ಹಲವು ಶಾಖೆಗಳಲ್ಲಿ ಹೆಣ್ಣುಮಕ್ಕಳ ಪ್ರಮಾಣ ಬಹು ಕಡಿಮೆ ಎನ್ನುವುದು ಗಮನಾರ್ಹ. ಒಟ್ಟಾರೆಯಾಗಿ ಶೈಕ್ಷಣಿಕ ಸಾಮಾಜೀಕರಣ ಹೆಣ್ಣು-ಗಂಡು ಮಕ್ಕಳ ಸಾಮಾಜಿಕ ಸಮಸ್ಯೆಯನ್ನು ರೂಪಿಸುವಲ್ಲಿ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ.

೨.೬. ಧಾರ್ಮಿಕ ವಲಯದ ಸಾಮಾಜೀಕರಣ

ಭಾರತೀಯ ಸಮಾಜವು ಹಲವು ಧಾರ್ಮಿಕ ಸಮುದಾಯಗಳಿಂದ, ಜಾತಿಗಳಿಂದ ಮತ್ತು ಸಾಂಸ್ಕೃತಿಕ ಪಂಗಡಗಳಿಂದ ಕೂಡಿದೆ. ಆದರೆ ಪ್ರಸ್ತುತ ಸನ್ನಿವೇಶದಲ್ಲಿ (ಅಧ್ಯಾಯದಲ್ಲಿ) ಭಾರತದ ಮೇಲು ವರ್ಗದ ಧಾರ್ಮಿಕ, ಸಾಂಸ್ಕೃತಿಕ ವಿಧಿ-ವಿಧಾನಗಳು ಬಹುಸಂಖ್ಯಾತರನ್ನು ಪ್ರಭಾವಿಸುತ್ತಿರುವಾಗ 'ಹಿಂದು' ಧಾರ್ಮಿಕತೆಗೆ ಸಂಬಂಧಿಸಿದಂತೆ ರೂಪಿತಗೊಂಡಿರುವ ಸಾಮಾಜೀಕರಣದ ಕುರಿತು ಇಲ್ಲಿ ಚರ್ಚಿಸಲಾಗಿದೆ. 'ಹಿಂದೂ' ಎಂಬ ಪದವನ್ನು ಸಾಂಸ್ಕೃತಿಕವಾಗಿ ಸಾಮಾಜೀಕರಣಗೊಳಿಸಿದ ಹಿನ್ನೆಲೆಯಲ್ಲಿ ಬಳಸಲಾಗಿದೆ ಮತ್ತು ಅತ್ಯಂತ ಸಾಮಾನ್ಯ ಅರ್ಥದಲ್ಲಿ ಈ ಪದ ಬಳಕೆಗೊಂಡಿದೆ. ಮೊದಲಿಗೆ ಹಿಂದೂ ಧರ್ಮದಲ್ಲಿ ಹೆಣ್ಣಿನ ಕುರಿತಾಗಿ ಚಿತ್ರೀಕರಿಸಿದ ಸಂಗತಿಗಳನ್ನು ಸಂಕ್ಷಿಪ್ತವಾಗಿ ನೋಡುವುದಾದರೆ, "ಹಿಂದೂ ಧರ್ಮದಲ್ಲಿ ಸ್ತ್ರೀ ದ್ವಂದ್ವದ ಪ್ರತೀಕ. ಒಂದು ಕಡೆ ಆಕೆ ಫಲವತ್ತಾದವಳು, ಕರುಣಾಮಯಿ, ಕ್ಷಮಾಪಣೆ, ಮತ್ತೊಂದು ಕಡೆ ಆಕೆ ಉಗ್ರರೂಪಳು, ನಿರ್ದಯಿ, ಲಯಕಾರಣಿ, ಸಮೃದ್ಧಿಯ ಕಾಲದಲ್ಲಿ ಆಕೆ ಲಕ್ಷ್ಮೀ (ಗಂಡಿನ ಮನೆಗೆ ಸಂಪತ್ತು ತರುವವಳು) ಕೇಡಿನ ಕಾಲದಲ್ಲಿ ಆಕೆಯೇ ದುರದೃಷ್ಟದ ದೇವತೆ. ಉದಾಹರಣೆಗೆ ಮಾರೆಮ್ಮ, ದುರ್ಗಿ ಅವಳ ಇಂತಹ ದ್ವಂದ್ವಕ್ಕೆ ಪ್ರಸಿದ್ಧಳು. ಸಂಸ್ಕೃತಿ ಮತ್ತು ತಮಿಳು ಶಬ್ದ

ಮೀಮಾಂಸೆ ಬಳಸಿ ಹೇಳುವುದಾದರೆ 'ಮಾರಿ' ಎಂದರೆ ಸಾವು ಮತ್ತು ಮಳೆ, ಅದೇ ಜಾನಪದ ಶಬ್ದ ಮೀಮಾಂಸೆಯ ಪ್ರಕಾರ 'ಮಾರಿ' ಎಂದರೆ ಬದಲಾಗುವಿಕೆ, 'ಅಮ್ಮ' ಎಂದರೆ ಹೆಣ್ಣು ಅಥವಾ ತಾಯಿ ದೇವಿಯನ್ನು ಅವಳ ದ್ವಂದ್ವ ಲಕ್ಷಣಕ್ಕೆ ತಕ್ಕಂತೆ 'ಬದಲಾಗುವ ಹೆಣ್ಣು' ಎಂದು ಗುರುತಿಸಲಾಗಿದೆ. ಹಿಂದು ನಂಬಿಕೆಯಲ್ಲಿ ಮಾನುಷಿ-ಅಮಾನುಷಿ ಮಧ್ಯೆ ವ್ಯತ್ಯಾಸ ಇರುವ ಕಾರಣ ದೇವಿ ಮತ್ತು ಹೆಣ್ಣು ಇಬ್ಬರು ಕರುಣೆ, ಫಲವಂತಿಕೆ, ನಿರ್ದಯಿ ಉಗ್ರತ್ವ, ನಾಶವನ್ನು ಪ್ರತಿಬಿಂಬಿಸುತ್ತಾರೆ."[೨೩] ಅದೇ ಗಂಡಿನ 'ಕುರಿತಂತೆ ಕೊಟ್ಟಿರುವ ಚಿತ್ರಣದಲ್ಲಿಯೂ ಕೂಡ ಹೆಣ್ಣು ಕ್ಷೇತ್ರ ಅಥವಾ ಭೂಮಿ, ಗಂಡು ಅದಕ್ಕೆ ಬೀಜ ಬಿತ್ತುತ್ತಾನೆ ಎಂಬ ಸಾಮಾನ್ಯ ರೂಪಕವಿದೆ. ಧರ್ಮದಲ್ಲಿ 'ಹೆಣ್ಣನ್ನು' ಪ್ರಕೃತಿಗೆ ಸಮೀಕರಿಸಿ, ಮತ್ತೊಂದು ಕಡೆ ಸಾಂಸ್ಕೃತಿಕ ದೃಷ್ಟಿಕೋನದಲ್ಲಿ 'ಹೆಣ್ಣು' ಸಾರ್ವತ್ರಿಕ ಸಬಲಳು, ಹೆಣ್ಣು ಭಯವನ್ನು ಹುಟ್ಟಿಸುವವಳು, ಅವಳು ಲೈಂಗಿಕತೆಯಿಂದ ಪುರುಷನನ್ನು ನಾಶಪಡಿಸಬಲ್ಲಳು. ಅದೇ ಸಮಯದಲ್ಲಿ 'ಗಂಡಿನ' ಶಕ್ತಿಯನ್ನು ಹೀರುತ್ತಾಳೆ. ಹೀಗೆ ಪ್ರತಿಯೊಂದು ಹಂತದಲ್ಲಿ ಧರ್ಮದಲ್ಲಿ ಗಂಡು-ಹೆಣ್ಣಿನ ಕುರಿತಂತೆ ವಿರೋಧಾಭಾಸದ ಅಂಶಗಳನ್ನು ಪ್ರಕಟಗೊಳಿಸಿರುವುದರ ಪರಿಣಾಮವಾಗಿ ಪ್ರೇರಣೆಗೊಂಡ ಹೆಣ್ಣು-ಗಂಡಿನ ಮಧ್ಯೆ ಮೇಲು-ಕೀಳು, ಪ್ರಬಲ-ದುರ್ಬಲ, ಶ್ರೇಷ್ಠ-ಕನಿಷ್ಠ ಎನ್ನುವ ಚಿಂತನೆಗಳು ಸೃಷ್ಟಿಗೊಂಡಿರುವುದು ಕಂಡುಬರುತ್ತದೆ. ಹಿಂದೂ ಧರ್ಮದ ಧಾರ್ಮಿಕ ಸಂಸ್ಕಾರಗಳು, ವೇದಗಳು, ಪುರಾಣಗಳು, ಭಗವದ್ಗೀತೆ ಮತ್ತು ಮನುಸ್ಮೃತಿ ಇವುಗಳಲ್ಲಿನ ಅಂಶಗಳನ್ನು ಆಧರಿಸಿ ನೋಡಿದರೂ ಹೆಣ್ಣು-ಗಂಡನ್ನು ಧಾರ್ಮಿಕ ಸಾಮಾಜೀಕರಣದಲ್ಲಿ ಭಿನ್ನ ನೆಲೆಯಲ್ಲಿ ಸೃಷ್ಟಿಸಿರುವುದು ಕಂಡುಬರುತ್ತದೆ. ಮೊದಲಿಗೆ ಹೆಣ್ಣನ್ನು ಕುರಿತಾಗಿ ಭಗವದ್ಗೀತೆಯಲ್ಲಿ "ಸ್ತ್ರೀಯನ್ನು ಜಗನ್ಮಾತೆ ಎಂದು ಗೌರವಿಸುವ ದೃಷ್ಟಿಯಿದೆ, ಇನ್ನೊಂದೆಡೆ 'ಸ್ತ್ರೀಯನ್ನು' ಮೋಕ್ಷ ಮಾರ್ಗದಲ್ಲಿ ಒಂದು ಅಡ್ಡಗಾಲು" ಎಂದು ಹೇಳುವುದರ ಮೂಲಕ ಅವಹೇಳನ ಮಾಡುತ್ತಾ ಬರಲಾಗಿದೆ. ಮತ್ತೊಂದು ಕಡೆ 'ಯತ್ರ ನಾರ್ಯಸ್ತು, ಪೂಜ್ಯಂತೆ ತತ್ವ ರಮತೇ ದೇವತಾಃ ಯ್ತ್ಯತಾಸ್ತು ನ ಪೂಜ್ಯಂತೇ ಸರ್ವಾಸ್ತತ್ರಾಫಲಾಃ ಕ್ರಿಯಾಃ' (೧;೫೬) ಎಂದು ಹೇಳಿರುವ ಮನುವೇ ಮತ್ತೊಂದೆಡೆಯಲ್ಲಿ 'ನಾ' 'ಸ್ತ್ರೀ' ಸ್ವಾತಂತ್ರ್ಯ ಮರ್ಹತೀ ಎಂಬುದಾಗಿ ಹೇಳುವ ಮೂಲಕ ಸ್ತ್ರೀ ಬದುಕನ್ನು ಗುಲಾಮಗಿರಿಯ ಚೌಕಟ್ಟಿನಲ್ಲಿ ಪ್ರಸ್ತಾಪಿಸಿರುವುದು ಒಂದು ವಿಪರ್ಯಾಸ."[೨೪] ಈ ಹಿನ್ನೆಲೆಯಲ್ಲಿ ಹೆಣ್ಣು ಸ್ವತಂತ್ರಕ್ಕೆ ಅರ್ಹತೆ ಇಲ್ಲದವಳು ಎಂದು ಸ್ಥೀಕರಿಸಿದ ಅಂಶಗಳು ಕಂಡುಬರುತ್ತವೆ. ಇದರಿಂದ ಹೆಣ್ಣಿಗೆ ಇಂದಿಗೂ ಧಾರ್ಮಿಕ ವಲಯದಲ್ಲಿ ಸ್ವತಂತ್ರ ಅಸ್ತಿತ್ವ ಇಲ್ಲದಂತೆ ಸಾಮಾಜೀಕರಣಗೊಳಿಸುತ್ತಿರುವುದು ಕಂಡುಬರುತ್ತದೆ.

ಧಾರ್ಮಿಕತೆಯ ಒಳಗಡೆ ಹೆಣ್ಣು ದೇವತೆಯಾಗಿ ಆಕೆ ಪೂಜ್ಯತೆಗೆ ಒಳಗಾಗುತ್ತಾಳೆ. ಆಕೆಗೆ ಮೋಕ್ಷವಿಲ್ಲ, ಹೀಗೆ ನಾನಾ ರೀತಿಯಲ್ಲಿ ಹೆಣ್ಣನ್ನು ಅರ್ಥೈಸಿರುವುದರಿಂದ ಹೆಣ್ಣಿನ ಸಾಮಾಜೀಕರಣ ವಿವಿಧ ರೀತಿಯಲ್ಲಿ ಗಂಡಿಗೆ ತಕ್ಕಂತೆ ರೂಪಿತಗೊಳ್ಳಲಿಕ್ಕೆ ಕಾರಣವಾಗಿದೆ. ಧರ್ಮದಲ್ಲಿ ಗಂಡಿನ ಬದುಕು ಹೆಣ್ಣಿಗಿಂತ ಶ್ರೇಷ್ಠ, ಗಂಡು ಸ್ವತಂತ್ರ, ಅವನು ಹೆಣ್ಣನ್ನು ಸಂರಕ್ಷಿಸಬೇಕು. ಆಕೆ ಎಷ್ಟೇ

ದೊಡ್ಡವಳಾದರೂ ಗಂಡೇ ಅವಳನ್ನು ರಕ್ಷಿಸಬೇಕು ಎಂದು ಹೇಳುವ ಅನೇಕ ಶ್ಲೋಕಗಳು ಹಿಂದೂ ಧರ್ಮಗಳಲ್ಲಿ ದೊರೆಯುತ್ತವೆ. 'ಹೆಣ್ಣು ಮಗುವಾದಾಗ ತಂದೆಯ ಆಶ್ರಯದಲ್ಲಿ, ಯೌವನದಲ್ಲಿದ್ದಾಗ ಗಂಡನ ಆಶ್ರಯದಲ್ಲಿ, ತಾಯಿ ಆದಾಗ ಮಕ್ಕಳ(ಗಂಡು) ಆಶ್ರಯದಲ್ಲಿ ಇರಬೇಕು ಎನ್ನುವ ಚಿಂತನೆಗಳಿಂದಲೇ ಹೆಣ್ಣಿಗೆ ಗಂಡಿನ ಅಧೀನತೆಯ ಸಾಮಾಜೀಕರಣ ರೂಪಿತಗೊಂಡಿದೆ. ಅದೇ ಗಂಡಿಗೆ ಕುಟುಂಬದ ಯಾಜಮಾನ, ಒಡೆಯ, ಅಧಿಕಾರಸ್ಥದ ಪಾತ್ರಗಳು ಸ್ಥಾಪನೆಗೊಂಡಿವೆ.

ಮೊದಲಿಗೆ ಮಗುವಿನ ಸಂತಾನಕ್ಕೆ ಸಂಬಂಧಿಸಿದಂತೆ ಧರ್ಮ ಗ್ರಂಥಗಳಲ್ಲಿನ ಉಲ್ಲೇಖಗಳನ್ನು ನೋಡಿದರೆ ಸಾಮಾಜೀಕರಣ ಸಮಸ್ಯೆ ಈ ಧಾರ್ಮಿಕ ಸಂಗತಿಗಳೇ ಕಾರಣವಾಗಿದೆ ಎಂದು ತಿಳಿಯಬಹುದು. "ಗಂಡು ಸಂತಾನಕ್ಕಾಗಿ ಯಜ್ಞ-ಹೋಮ ಹವನಗಳನ್ನು ಮಾಡಿ ದೇವತೆಗಳನ್ನು ಬೇಡುತ್ತಾರೆ. ಈ ಕುರಿತಂತೆ ವೇದಗಳಲ್ಲಿ ಸ್ಮೃತಿ, ಶ್ಲೋಕಗಳಲ್ಲಿ ಉಲ್ಲೇಖ ಅಸಂಖ್ಯಾತವಾಗಿವೆ".[೨೫] ಋಗ್ವೇದದಲ್ಲಿ ಕೂಡಾ ಗಂಡು ಸಂತಾನದ ಬಗ್ಗೆ ಮಾಹಿತಿ ಇದೆ. ಇಂದು ಇದನ್ನು ಪಾಲಿಸಿಯೇ ಜನರು ದೇವರುಗಳಲ್ಲಿ ಗಂಡು-ಸಂತಾನಕ್ಕಾಗಿ ಅನೇಕ ಪೂಜೆ, ಪುನಸ್ಕಾರಗಳನ್ನು ಮಾಡುತ್ತಿರುವುದು ಕಂಡು ಬರುತ್ತದೆ. ಧಾರ್ಮಿಕ ಸಾಮಾಜೀಕರಣದ ಭಾಗವಾಗಿ ಇದಕ್ಕೆ ಇಂದಿಗೂ ಸಮಾಜದ ಅನೇಕ ಕುಟುಂಬಗಳಲ್ಲಿ ಹೆಣ್ಣು ಗರ್ಭಿಣಿಯಾಗುವುದಕ್ಕೆ ಮೊದಲೇ 'ಗಂಡು' ಮಗುವಿಗಾಗಿ ಹಾರೈಸುತ್ತಾರೆ. ಆ ನಂತರದಲ್ಲಿ ಹುಟ್ಟುವ ಮಗು ಹೆಣ್ಣೋ-ಗಂಡೋ ಯಾವುದೇ ಆಗಲಿ ಎನ್ನುತ್ತಾರೆ. ಹೀಗಾಗಿ ತಾಯಿಯಾಗುವ ಹೆಣ್ಣಿಗೆ ಮೊದಲಿನ ಸಂತಾನದ ಆಸೆಯಲ್ಲಿ ಗಂಡು ಮಗುವಿನ ವಿಚಾರಗಳನ್ನು ಮೊದಲು ತುಂಬುತ್ತಿರುವುದು ಕಂಡುಬರುತ್ತದೆ. ಇದು ಹೆಣ್ಣು ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆಗಳು ಹುಟ್ಟಲು ಧಾರ್ಮಿಕ ವಲಯದ ಸಾಮಾಜೀಕರಣ ಕಾರಣವಾಗಿದೆ.

ಹಿಂದೂ ಧರ್ಮದ ಮಹಾನ್ ಗ್ರಂಥಗಳೆಂದು ಕರೆಸಿಕೊಳ್ಳುವ ರಾಮಾಯಣ, ಮಹಾಭಾರತದಲ್ಲಿ ಚಿತ್ರಣಗೊಂಡಿರುವ ಆದರ್ಶ ಸ್ತ್ರೀತ್ವದ ಅಂಶಗಳನ್ನು ಮತ್ತು ಹೆಣ್ಣಿನ ಪಾತ್ರಗಳ ಚಿತ್ರಣಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಪ್ರಸ್ತುತ ಸಮಾಜದಲ್ಲಿ ಹೆಣ್ಣಿಗೆ ಸಾಮಾಜೀಕರಣಗೊಳಿಸುವ ಆದರ್ಶ ಪರಿಕಲ್ಪನೆಗಳು ಈ ಧರ್ಮದ ಗ್ರಂಥಗಳಿಂದಲೇ ಆಗಿದೆ ಎಂದು ಗ್ರಹಿಸಬಹುದು. ಇದಕ್ಕೆ ರಾಮಾಯಣದ ಸೀತೆ, ಮಹಾಭಾರತದ ಗಾಂಧಾರಿ, ಪುರಾಣದ ಸಾವಿತ್ರಿ, ಪಾರ್ವತಿ ಇವರೇ ಹೆಣ್ಣಿಗೆ ಆದರ್ಶರು. ಇವರು ಇದ್ದ ಹಾಗೆ ಇರಬೇಕು ಎಂದು ಪ್ರತಿಯೊಬ್ಬ ಹೆಣ್ಣಿಗೆ ನಡವಳಿಕೆಗಳನ್ನು ಹೇಳಲಾಗುತ್ತದೆ. ಈ ಪಾತ್ರಗಳ ರೀತಿಯಲ್ಲಿ ಹೆಣ್ಣು ನಡವಳಿಗಳನ್ನು ಮತ್ತು ಮೌಲ್ಯಗಳನ್ನು ಪ್ರದರ್ಶನ ಮಾಡುವಂತೆ ಒತ್ತಾಯಿಸಲಾಗುತ್ತದೆ ಮತ್ತು ಇವುಗಳನ್ನು ಪ್ರದರ್ಶನ ಮಾಡಿದರೇ ಮಾತ್ರ ಹೆಣ್ಣು ಆದರ್ಶ ಮತ್ತು ಒಳ್ಳೆಯವಳೆನಿಸಿಕೊಳ್ಳುತ್ತಾಳೆ. ಇದಕ್ಕೆ ಸಮಾಜದಲ್ಲಿ ಹೇಳುವ ಮಾತುಗಳಲ್ಲಿ 'ಹೆಣ್ಣಿಗೆ ಶೀಲ ದೊಡ್ಡ ಸಂಪತ್ತು', ಉದಾಹರಣೆಗೆ ಸೀತೆ ತನ್ನ 'ಶೀಲ' ಸಾಭೀತುಪಡಿಸಲು 'ಅಗ್ನಿ' ಪ್ರವೇಶ ಮಾಡಿದಳು, ಸಾವಿತ್ರಿ ಗಂಡನನ್ನು ಯಮನಿಂದ ಕಾಪಾಡಲು

ಯಮನೊಡನೆ ಹೋರಾಡಿದಳು, ಪಾರ್ವತಿ ಗಂಡನ ಅರ್ಧಾಂಗಿ ಎಂದು ಹೇಳಲಾಗುತ್ತದೆ. ಈ ಎಲ್ಲಾ ಸಂಗತಿಗಳು ಧಾರ್ಮಿಕ ವಲಯಗಳಿಂದ ಪ್ರಕಟ(ಪ್ರೇರಣೆ)ಗೊಂಡಿರುವುದರಿಂದ ಇಂದಿಗೂ ಹೆಣ್ಣಿನ ಗುಣ-ಮಾದರಿಗಳು ಅದೇ ರೀತಿಯಲ್ಲಿ ಇರುವಂತೆ ಸಾಮಾಜೀಕರಣಗೊಳಿಸಲಾಗುತ್ತಿದೆ. ಹೆಣ್ಣಿಗೆ ಸಂಸ್ಕಾರ ಮುಖ್ಯ; ಹೆಣ್ಣಿಗೆ ಆದರ್ಶ ಮುಖ್ಯ ಹೆಣ್ಣು ಎಂದರೆ ಗಂಡು ಹೇಳುವ ಆದರ್ಶ ಪಾಲಿಸಬೇಕಾದವಳು; ಇದಕ್ಕಾಗಿ ಸಮಾಜದಲ್ಲಿ ಆದರ್ಶ ನಾರಿ ಗುಣಗಳನ್ನು ಹೆಣ್ಣಿಗೆ ಹೇಳಲಾಗುತ್ತದೆ. ಇದಕ್ಕೆ ಸ್ತ್ರೀವಾದಿ ಚಿಂತಕಿ ಸಿಮೊನ್ ದಿ ಬೋವಾ ಅವರ “ಹೆಣ್ಣಿನ ಸುತ್ತ ಹೆಣ್ಣಿನ ಪುರಾಣಗಳು, ಐತಿಹ್ಯಗಳು, ಸಮೃದ್ಧವಾಗಿವೇ ಹೊರತು ಅಲ್ಲೆಲ್ಲಿಯೂ ಅವಳ ವಸ್ತುಸ್ಥಿತಿಯ ದಾಖಲೆಗಳ ಸುಳಿವು ಇಲ್ಲ”[೨೬] ಎಂಬ ಹೇಳಿಕೆಯಲ್ಲಿ ಹೆಣ್ಣಿಗೆ ಧಾರ್ಮಿಕ ಐತಿಹ್ಯಗಳು ಕಟ್ಟಿಕೊಟ್ಟಿರುವ ಸಾಮಾಜೀಕರಣದ ಕಾರಣಗಳಿಂದ ಅವಳ ಪಾತ್ರಗಳು ಬೇರೆಯಾಗಿ ನಿಲ್ಲುವುದು ಕಂಡು ಬರುತ್ತದೆ.

ಧಾರ್ಮಿಕ ಹಿನ್ನೆಲೆಯಲ್ಲಿ ರೂಪುಗೊಂಡ ಪುರಾಣ, ಪುಣ್ಯ ಕಥೆಗಳಲ್ಲಿ ದೊರೆಯುವ ಸ್ತ್ರೀಯರ ಪಾತ್ರಗಳು ಮತ್ತು ನಡವಳಿಕೆಗಳ ಮಾದರಿಗಳು ಹೆಣ್ಣಿಗೆ ಸಾಮಾಜೀಕರಣ ರೂಪಿಸುವ ಸಂಗತಿಗಳೇ ಆಗಿವೆ. ಪುರಾಣಗಳಲ್ಲಿ ದೊರೆಯುವ ಮಾಹಿತಿಯಲ್ಲಿ ‘ಹೆಣ್ಣು ಸಹಿಸಿಕೊಂಡು’, ‘ಮೌನ ವಹಿಸಿ ಸ್ತ್ರೀಧರ್ಮ ಪಾಲಿಸಿಬೇಕು’. ಮತ್ತೊಂದು ಕಡೆ ಹೆಣ್ಣಾದವಳು ಗಂಡ ಮನೆಗೆ ಬರುವ ಹೊತ್ತಿಗೆ ಸ್ತ್ರೀಧರ್ಮ ಪಾಲಿಸಿ ಹೆಂಗಸಾಗಿ ಯೋಚಿಸಬೇಕು, ಗಂಡನನ್ನು ಕಿರುನಗೆಯಿಂದ ಸ್ವಾಗತಿಸಬೇಕು, ಭಕ್ತಿಯಿಂದ ಅವನನ್ನು ದೇವರೆಂಬಂತೆ ಸೇವೆ ಮಾಡುವುದಕ್ಕೆ ಅವನೆದುರು ನಿಲ್ಲಬೇಕು ಇದೇ ಸತಿ, ಸ್ತ್ರೀ ಧರ್ಮ ಎಂದು ಹೇಳಲಾಗುತ್ತದೆ. ಇದಕ್ಕೆ ಸ್ತ್ರೀ ಧರ್ಮವನ್ನು ಪಾಲಿಸುವ ಹೆಣ್ಣಿನ ಆದರ್ಶ ಹೇಳುವಾಗ ಮಹಾಭಾರತದಲ್ಲಿ ಬರುವ ಪಾತ್ರಗಳಾದ “ಧೃತರಾಷ್ಟ್ರ ಕುರುಡನಾದದ್ದಕ್ಕೆ ಅವನ ಹೆಂಡತಿ (ಹೆಣ್ಣು) ಗಾಂಧಾರಿ ಮದುವೆಯಾದ ಕೂಡಲೇ ಕಣ್ಣಿಗೆ ಬಟ್ಟೆ ಕಟ್ಟಿಕೊಂಡಳು” ಎಂದು ಹೇಳುವ ಮಾತುಗಳಲ್ಲಿ ಸ್ತ್ರೀ ಧರ್ಮದ ಸಾಮಾಜೀಕರಣ ರೂಪಿಸಲಾಗಿದೆ. ಹೆಣ್ಣು ಧರ್ಮವನ್ನು ಪಾಲಿಸಬೇಕು, ಧರ್ಮ ಅಂದರೆ ಗಂಡಿಗೆ ಗೌರವ ನೀಡುವುದು. ಗಂಡು ಎಂದರೆ ದೇವರ ಸಮಾನ, ‘ದೈವ’ ಅವನು ಹೆಣ್ಣಿನ ರಕ್ಷಕ ಎನ್ನುವ ಅಂಶಗಳನ್ನು ಸಾಮಾಜೀಕರಣಗೊಳಿಸಲಾಗಿದೆ. ಗಂಡಿಗೆ ಇದರಿಂದ ವಿನಾಯಿತಿ ನೀಡಿರುವುದು ಕಂಡುಬರುತ್ತದೆ.

ವೇದಶಾಸ್ತ್ರಗಳು ಹೆಣ್ಣಿನ ಕುರಿತಾಗಿ ಕೆಲವು ನಿರ್ದಿಷ್ಟ ಪಾತ್ರಗಳನ್ನು ಅಂಟಿಸಿರುವುದು ಕಂಡು ಬರುತ್ತದೆ. ಅದರ ಕುರಿತು ಕೆಲವು ಶಾಸ್ತ್ರ ಕೃತಿಗಳಲ್ಲಿ ಉಲ್ಲೇಖಗಳು ಕಂಡುಬರುತ್ತವೆ. ಹೀಗೆ ಶಾಸ್ತ್ರವೊಂದರಲ್ಲಿ ದೊರೆಯುವ ಶ್ಲೋಕವೊಂದು ಹೆಣ್ಣಿನ ಕುರಿತಂತೆ ಈ ರೀತಿ ಇದೆ.

“ಕಾರ್ಯೇಶು ದಾಸಿ,
ಕರುಣೇಶು ಮಂತ್ರಿ,
ಶಯನೇಶು ರಂಭೇ,

ಬೋಜೇಶು–ಮಾತಾ
ಕ್ಷಮಯ–ಧರಿತ್ರಿ".

ಈ ಮೇಲಿನ ಶ್ಲೋಕದಲ್ಲಿ ಹೆಣ್ಣಿನ ನಡವಳಿಕೆ, ಪಾತ್ರಗಳು ಇಂದಿಗೂ ಬದಲಾಗದೆ ಸ್ಥಿರವಾಗಿ ಸಮಾಜದಲ್ಲಿ ಉಳಿದುಕೊಂಡು ಬಂದಿರುವುದು ಕಂಡು ಬರುತ್ತದೆ. ಹೆಣ್ಣಿನ ಕೆಲಸವೆಂದರೆ ಕುಟುಂಬದಲ್ಲಿ ಗೃಹಕೃತ್ಯಗಳು, ಪಾಲನೆ–ಪೋಷಣೆ, ರಕ್ಷಣೆ, ಮಾತೆ, ಮಡದಿ, ಗಂಡನ ತಪ್ಪುಗಳನ್ನು ತಿದ್ದಿಕೊಂಡು ಮುಂದುವರೆಯುತ್ತಿದೆ. ಆಧುನಿಕ ಸಮಾಜದ ಗಾಳಿ ಬೀಸಿ ಹೆಣ್ಣಿನ ಪಾತ್ರದಲ್ಲಿ ಹಾಗೇನಾದರೂ ಬದಲಾವಣೆಗೊಂಡಿದೆ ಎಂದರೆ, 'ಹೊಸ ಪಾತ್ರೆಯಲ್ಲಿ ಹಳೆಯ ಹೆಂಡದಂತೆ' ಸಮಸ್ಯೆಗಳ ಸ್ವರೂಪ ಇನ್ನು ಸಂಕೀರ್ಣವಾಗಿದೆ. ಸ್ವರೂಪ ಭಿನ್ನವಾದ ಮಾತ್ರಕ್ಕೆ ಸಮಸ್ಯೆಗಳು ನಿರ್ಮೂಲನೆಯಾದಂತಲ್ಲ. ಈ ಕಾಲದಲ್ಲಿ ಹೆಣ್ಣಾದವಳು ಹೆಂಗಸಾಗಿರಬೇಕೆಂದು ಸಮಾಜವು ಬಯಸುತ್ತಿದೆ ಹೊರತು ಬೇರೆ ಏನು ಅಲ್ಲ.

ಹಿಂದೂ ಧರ್ಮಗಳ ಅನೇಕ ಸಂಹಿತೆಗಳಲ್ಲಿ ಗಂಡು ಸಂತಾನದ ಮೂಲಕ ವಂಶಾವಳಿಯನ್ನು ಗುರುತಿಸುವುದು ಕಂಡುಬಂದರೆ, ವಿವಾಹ ಒಂದು ಪವಿತ್ರ ಬಂಧನ ಎಂಬ ಪರಿಕಲ್ಪನೆ ಬಹುಮಟ್ಟಿಗೆ ಹೆಣ್ಣಿಗೆ ಮಾತ್ರ ಅನ್ವಯಿಸುವಂತಹ ಒಂದು ವ್ಯವಸ್ಥೆಯಾಗಿ ಧಾರ್ಮಿಕ ಸಾಮಾಜೀಕರಣ ಮೌಲ್ಯದಲ್ಲಿ ಕಂಡು ಬರುತ್ತದೆ. ರಾಮಾಯಣ ಮತ್ತು ಮಹಾಭಾರತ ಇಂದಿಗೂ ಧಾರ್ಮಿಕ ಗ್ರಂಥಗಳೆಂದು ಆರಾಧಿಸಲ್ಪಡುತ್ತಿದ್ದು ಭಾರತೀಯ ಹೆಣ್ಣು–ಗಂಡಿನ ಸಾಮಾಜೀಕರಣ ಧೋರಣೆ ಮತ್ತು ಆಚರಣೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಮಹಾಭಾರತದ ದ್ರೌಪದಿಯ ಪಾತ್ರಕ್ಕಿಂತ, ರಾಮಾಯಣದ ಸೀತೆಯ ಪಾತ್ರವನ್ನು ಹೆಣ್ಣುಮಕ್ಕಳೆ "ಆದರ್ಶ ನಾರಿ" ಸ್ಥಾನಕ್ಕೇರಿಸಲು ಪ್ರಮುಖ ಪಾತ್ರ ವಹಿಸಿರುವುದು ಕಂಡುಬರುತ್ತದೆ. ಇಲ್ಲಿ ಹೆಣ್ಣು–ಪತ್ನಿ ವ್ಯಕ್ತಿತ್ವದ ಲಕ್ಷಣಗಳಾಗಿ ಪತಿ ವಿಧೇಯತೆ, ತಾಳ್ಮೆ, ಪರಾಧೀನತೆ, ಪತಿಯಲ್ಲಿ ಪ್ರಶ್ನಾತೀತವಾದ ನಂಬಿಕೆ ಇವೇ ಮುಂತಾದವು ಆದರ್ಶ ನಾರಿಯ ಗುಣಗಳೆಂದು ಹೆಣ್ಣಿಗೆ ಘೋಷಿಸಿರುವುದು ಕಂಡು ಬರುತ್ತದೆ. ಕಾಡಿನಲ್ಲಿ ಅಪಹರಣಕ್ಕೆ ಒಳಗಾದ ಸೀತೆ ತನ್ನ ಪತಿಯಲ್ಲಿ ಅಚಲವಾದ ನಂಬಿಕೆಯನ್ನು ಇರಿಸಿಕೊಂಡಿದ್ದರು. ರಾಮ ಆಕೆಯ(ಹೆಣ್ಣಿನ) ಪಾತಿವ್ರತ್ಯವನ್ನು ಪರೀಕ್ಷೆಗೆ ಒಡ್ಡಿದಂಥ ಪರಿಸ್ಥಿತಿಯನ್ನು 'ಸಹಜ ಪುರುಷ ಹಕ್ಕು' ಎಂದು ಸಾಮಾಜೀಕರಣಗೊಳಿಸಿರುವುದು ಕಂಡು ಬರುತ್ತದೆ. 'ಪುರುಷ ಸಹಜ ಹಕ್ಕು' ಇಂದಿಗೂ ಸಮಾಜದಲ್ಲಿ ಕಂಡು ಬರುತ್ತದೆ. ರಾಮನಿಂದ ದೂರವಾಗಿದ್ದ ಸೀತೆ ರಾಮನನ್ನು ಇಂತಹುದೇ ಅಗ್ನಿ ಪರೀಕ್ಷೆ ಏಕೆ ಒಳಪಡಿಸಲಿಲ್ಲ? ಎಂದು ಇಂತಹ ಪ್ರಶ್ನೆಗಳನ್ನು ಕೇಳುವವರನ್ನು ಉದ್ಧಟತನವೆಂದು ಹೀಯಾಳಿಸಿ, ಸೀತೆಯನ್ನು ದೈವತ್ವಕ್ಕೆದ ಸ್ಥಾನಕ್ಕೇರಿಸಿ ಆಕೆಯ ಮೂರ್ತಿ ಪೂಜೆಯನ್ನು ಮಾಡುತ್ತಿರುವುದು ಸಮಾಜದಲ್ಲಿ ಕಂಡು ಬರುತ್ತದೆ. ಅದೇ ದ್ರೌಪದಿ ವಿಷಯದಲ್ಲಿಯೂ ಹೆಣ್ಣನ್ನು ಹೀಯಾಳಿಸಿ ಅಪಮೌಲ್ಯೀಕರಿಸಿದ ಸಾಮಾಜೀಕರಣ ಕಂಡುಬರುತ್ತದೆ.

ಪುರಾಣ, ಪುಣ್ಯಕಥೆಗಳಲ್ಲಿ ಹೆಣ್ಣಿನ ಸಾಮಾಜೀಕರಣ ಸಂಗತಿಗಳನ್ನು ನೋಡಿದರೆ, "ಹೆಣ್ಣನ್ನು ಪುರುಷನ ಭೋಗದ ವಸ್ತುವಾಗಿ, ಅಲಂಕಾರ ವಸ್ತುವಾಗಿ, ದಾಸಿ, ಸೇವಕಳಾಗಿ ನಿರ್ವಚಿಸಿರುವುದು ಕಂಡುಬರುತ್ತದೆ. ಇದಕ್ಕೆ ಪತಿವ್ರತ ಧರ್ಮದ ಮೌಲ್ಯದ ಸಾಮಾಜೀಕರಣ, ಇದಲ್ಲದೆ ಹೆಣ್ಣು ವಿವಾಹಬಾಹಿರ ಕಾಮ ವ್ಯವಹಾರಗಳನ್ನು ನಡೆಸಿದರೆ ಅದನ್ನು ಭಯಂಕರವಾದ ಅಪರಾಧವೆಂದು ಸಾಮಾಜೀಕರಣಗೊಳಿಸಿರುವುದು ಕಂಡುಬರುತ್ತದೆ. ಅಷ್ಟೇ ಅಲ್ಲದೆ ಹೆಣ್ಣಿಗೆ ಧಾರ್ಮಿಕತೆಯಿಂದಾಗಿ, ವೈಧವ್ಯ ಆಚರಣೆ, ಸತಿ ಹೋಗುವುದು, ಪುನರ್‌ವಿವಾಹ ನಿಷೇಧ ಮುಂತಾದ ಸಂಗತಿಗಳನ್ನು ಹೆಣ್ಣಿನ ಮೇಲೆ 'ಇವುಗಳನ್ನು ಪಾಲಿಸಬೇಕು' ಎಂಬ ಸಾಂಸ್ಕೃತಿಕ ಒತ್ತಡ. ಮತ್ತೊಂದು ಕಡೆ ಧರ್ಮದೊಳಗಿನ ಪುರಾಣ, ಪುಣ್ಯಕಥೆಗಳಲ್ಲಿ ಹೆಣ್ಣನ್ನು ಕೌಟುಂಬಿಕ ವಲಯದಲ್ಲಿ ಸೇರಿಸಿ ಮಗಳು, ಮಡದಿ, ಮಾತೆ ಎಂಬ ಪಡಿಯಚ್ಚುಗಳನ್ನು ರೂಪಿತಗೊಳಿಸಿರುವುದು ಕಂಡು ಬರುತ್ತದೆ. ಇದಲ್ಲದೇ ಧಾರ್ಮಿಕ ಸಾಮಾಜೀಕರಣದಲ್ಲಿ ಹೆಣ್ಣು ಮಕ್ಕಳಿಗೆ ಎಂಟು ಕಟ್ಟುಪಾಡುಗಳನ್ನು ಮಾಡಿದ್ದು ಕುಂಕುಮ ಭಾಗ್ಯ, ಗಟ್ಟಿತಾಳಿ, ಮುತ್ತೈದೆ ಸಾವು, ಪುಣ್ಯಸ್ತ್ರೀ, ಪತಿವ್ರತಾ ಶಿರೋಮಣಿ ಇತ್ಯಾದಿ ಪದಗಳು ಧಾರ್ಮಿಕ ಸಾಮಾಜೀಕರಣದಿಂದ ಪ್ರಭಾವಿತವಾಗಿವೆ. ಈ ಮೂಲಕ ಪಿತೃಸಂಸ್ಕೃತಿಯನ್ನು ನಿರಂತರವಾಗಿ ಮುಂದುವರೆಸುವ, ಸಂರಕ್ಷಿಸುವ ಕಾವಲುಗಾರಳಾಗಿ ಈ ಮೌಲ್ಯಗಳನ್ನು ಪೀಳಿಗೆಯಿಂದ ಪೀಳಿಗೆಗೆ ಸಾಗಿಸುವ ವಾಹಕಳಾಗಿ, ಸಾಮಾಜೀಕರಣಗೊಳಿಸಿರುವುದು ಕಂಡುಬರುತ್ತದೆ. ಈ ಮೂಲಕ ಹೆಣ್ಣಿಗೆ ಸ್ವತಂತ್ರ ಅಸ್ತಿತ್ವ ಇಲ್ಲ".[೨೭]

ಧರ್ಮಗಳಲ್ಲಿನ ಮೌಲ್ಯ, ರೂಢಿ, ಆಚಾರ-ವಿಚಾರ, ನಂಬಿಕೆ, ಸಂಪ್ರದಾಯ, ಆಚರಣೆಗಳ ಮೂಲಕ ಧಾರ್ಮಿಕ ಮೌಲ್ಯಗಳು ಲಿಂಗದಲ್ಲಿ ಅಂತರ್ಗತಗೊಳ್ಳುವಂತೆ ಮಾಡಿರುವುದು ಕಂಡು ಬರುತ್ತದೆ. ಇದಕ್ಕೆ ಹೆಣ್ಣುಮಗು ಅನೇಕ ಧಾರ್ಮಿಕ ಸಂದರ್ಭಗಳಲ್ಲಿ ಮೌಲ್ಯ, ಆದರ್ಶ, ಸಂಪ್ರದಾಯ ಆಚರಣೆಗಳನ್ನು ಚಾಚೂ ತಪ್ಪದೇ ಪಾಲಿಸಬೇಕು, ಮುಂದುವರೆಸಿಕೊಂಡು ಹೋಗಬೇಕೆಂಬ ಅನೇಕ ಸಾಂಸ್ಕೃತಿಕ ಒತ್ತಡಗಳು ಸಾಮಾಜೀಕರಣದ ಸಂಗತಿಗಳಲ್ಲಿ ಕಂಡು ಬರುತ್ತದೆ. ಉದಾ: ಹೆಣ್ಣುಮಕ್ಕಳ ಮೂಲಕ ವ್ರತ ಮಾಡುವುದು, ಉಪವಾಸ ಮಾಡುವುದು, ವಿಶೇಷ (ಸಂಕಷ್ಟಿ)ಪೂಜೆ ಮಾಡುವುದು, ಜೈವಿಕ ಸಹಜ ಪ್ರಕ್ರಿಯೆಗಳ ಸಂದರ್ಭದಲ್ಲಿ ಧಾರ್ಮಿಕ ವಲಯಗಳಿಂದ ದೂರವಿರುವಂತೆ ನೋಡಿಕೊಳ್ಳುವುದು, ಹೀಗೆ ಅನೇಕ ಸಂಗತಿಗಳಲ್ಲಿ ಹೆಣ್ಣುಮಕ್ಕಳ ವಿಷಯಕ್ಕೆ ಬೇರೆ ಬೇರೆಯಾಗಿ ಸಾಮಾಜೀಕರಣಗೊಳಿಸಿವೆ. ಅದೇ ಗಂಡು ಮಗುವಿನ ವಿಷಯಕ್ಕೆ ಬಂದರೆ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಗತಿಗಳ ವಿಷಯಕ್ಕೆ ಬಂದರೆ ನಿಯಂತ್ರಣ ಮತ್ತು ನಿರ್ಬಂಧಗಳು ಅಷ್ಟಾಗಿ ಕಂಡು ಬರುವುದಿಲ್ಲ. ಹೆಣ್ಣು ಮಗುವಿಗೆ ಸಾಂಸ್ಕೃತಿಕ ಸಂಬಂಧಗಳ ಸಾಮಾಜೀಕರಣ ರೂಪಿಸುವುದು, ಗಂಡು ಮಗುವಿಗೆ ಸಾಂಸ್ಕೃತಿಕ ಸಂಬಂಧಗಳ ಸಾಮಾಜೀಕರಣದಿಂದ ಹೊರಗಿರುವಂತಹ ಸಾಮಾಜೀಕರಣನ್ನು ರೂಪಿಸಿರುವುದು ಕಂಡುಬರುತ್ತದೆ. ಹೀಗೆ ರೂಪಿಸುವ ಸಂದರ್ಭದಲ್ಲಿ ಹೆಣ್ಣು-ಗಂಡಿನ ನಡವಳಿಕೆ ಭಿನ್ನವಾಗಿ ಇರುವಂತೆ ಸಾಮಾಜೀಕರಣಗೊಳಿಸಿರುವುದು

ಇದೆ. ಇದಕ್ಕಾಗಿ ಸ್ತ್ರೀವಾದಿಗಳು ಸಾಮಾಜೀಕರಣ ಅದೊಂದು ಮಿಥ್ ಎಂದು ಹೇಳುವುದು ಕಂಡು ಬರುತ್ತದೆ. ಏಕೆಂದರೆ ಅದು ಪುರುಷ ಪ್ರಧಾನ ಸಮಾಜ ತನ್ನ ಹಿತಾಸಕ್ತಿಯ ರಕ್ಷಣೆಗಾಗಿ ತಾನೇ ರೂಪಿಸಿದ, ತಾನೇ ನಿಗದಿಪಡಿಸಿದ, ಸ್ತ್ರೀ ಪ್ರತಿಮೆ. ಹೀಗಾಗಿ ಈ ಪುರಾಣದಲ್ಲಿ ದೊರೆಯುವ ಸ್ತ್ರೀ ಮಾದರಿಗಳು ಮಿಥ್‌ಗಳಾಗಿವೆ ಎನ್ನಲಾಗುತ್ತದೆ. 'ಮಿಥ್' ಎಂದರೆ ಸ್ತ್ರೀವಾದಿಗಳ ಪ್ರಕಾರ ಮನದಾಳದ ಆಶಯ, ಭಯ, ಆತಂಕಗಳ ಅನಿಸಿಕೆಗಳನ್ನು ಪುರಾಣ, ಐತಿಹ್ಯ, ಭಾಷೆ, ಆಚರಣೆಗಳ ಎಳೆಗಳೇ ಹುದುಗಿಟ್ಟ ರಚನೆಗಳು"[೨೮] ಎಂದು ಹೇಳಿರುವುದನ್ನು ನೋಡಿದರೆ ಪುರಾಣ, ಪುಣ್ಯಕಥೆಗಳಲ್ಲಿ ದೊರೆಯುವ ಸ್ತ್ರೀ ಪಾತ್ರಗಳು ಅವು ಹೆಣ್ಣು-ಗಂಡಿನ ವಿರುದ್ಧ ಮೌಲ್ಯಗಳಾಗಿವೆ, ಅವು-ಪುರಾಣ ಪುಣ್ಯಕಥೆಗಳೆಂಬ ವಾಹಕದ ಮೂಲಕ ಸಾಮಾಜೀಕರಣಗೊಂಡು, ಇಂದಿಗೂ ಹೆಣ್ಣು ತನ್ನ ಗಂಡನನ್ನು ದೇವರೆಂದು ಭಾವಿಸಿಕೊಂಡು ಹಿಂಸೆ, ಕಿರುಕುಳ, ದೌರ್ಜನ್ಯ ಸಹಿಸಿಕೊಂಡು ಬದುಕುವ ಸ್ಥಿತಿ ಹೆಣ್ಣಿನಲ್ಲಿ ಕಂಡು ಬರುತ್ತಿದೆ.

ಧರ್ಮ ಹೆಣ್ಣಿಗೆ ಹೇರಿರುವ ಧಾರ್ಮಿಕ ಮೌಲ್ಯಗಳು ಸಾಮಾಜೀಕರಣದಲ್ಲಿ ಗಂಡ ಎಷ್ಟೇ ನೀಚನಾದರೂ ಹೆಂಡತಿಯಾದವಳು(ಹೆಣ್ಣು) ಗಂಡನನ್ನು ದೇವರಂತೆ ಪೂಜಿಸಬೇಕೆಂಬ ಮಾತನ್ನು ಮಾತ್ರ ಹೇಳಲಾಗುತ್ತದೆ. ಇದರ ಫಲವಾಗಿ ಹೆಣ್ಣಿಗೆ ಕೌಟುಂಬಿಕ ದೌರ್ಜನ್ಯ ಮಾಡುವುದು, ಹೆಣ್ಣಿಗೆ ಮೋಸ ಮಾಡುವುದು, ಹೆಣ್ಣಿಗೆ ಹಿಂಸಿಸುವುದು, ಕೊಲೆ ಮಾಡುವುದು, ವರದಕ್ಷಿಣೆಗಾಗಿ ಪೀಡಿಸುವುದು ಕಂಡು ಬರುತ್ತದೆ. ಸಮಾಜದಲ್ಲಿ ಗಂಡನನ್ನು ದೈವ ಸಮಾನ ಎಂದು ಹೇಳಲಾಗುತ್ತದೆ. ಒಬ್ಬ ಗಂಡ ತನ್ನ ಹೆಂಡತಿಗೆ(ಹೆಣ್ಣು) ನಿಜಕ್ಕೂ ದೈವ ಸಮಾನನಾಗಬೇಕೆಂದರೆ ಅವನು ದೇವರಂತೆ ನಡೆದುಕೊಳ್ಳಬೇಕಲ್ಲವೇ ? ಹೆಂಡತಿಯರು ಗಂಡಂದಿರನ್ನು ದೇವರಂತೆ ಪೂಜಿಸಬೇಕು ಎಂದುಕೊಂಡರೆ, ಗಂಡಂದಿರು ತಮ್ಮ ಹೆಂಡತಿಯ ಮೇಲೆ ನಿಜವಾದ ಅನುರಾಗವಿದ್ದು, ಅವರ ಕಷ್ಟ-ಸುಖಗಳನ್ನು ದೇವರಂತೆ ಸ್ಪಂದಿಸಬೇಕೆಂದು, ದೇವರು ಭಕ್ತರನ್ನು ನೋಡಿದಂತೆ, ಸಂತೋಷ ಮತ್ತು ಸಂತೃಪ್ತಿಯಿಂದ ಹೆಂಡತಿಯನ್ನು ಇರುವ ಹಾಗೆ ನೋಡಿಕೊಳ್ಳಬೇಕಲ್ಲವೇ ? ಆದರೆ ಧಾರ್ಮಿಕ ವಲಯದ ಸಾಮಾಜೀಕರಣದಲ್ಲಿ ಹೆಣ್ಣು-ಗಂಡಿನ ಕುರಿತಂತೆ ಸೃಷ್ಟಿಗೊಂಡಿರುವ ತಾರತಮ್ಯ ಪರಸ್ಪರ ವಿರುದ್ಧ ಭಾವನೆಯ ಸಾಮಾಜೀಕರಣ.

ವೈಧವ್ಯ ಸಂದರ್ಭದಲ್ಲಿನ ಹೆಣ್ಣು-ಗಂಡಿನ ಕುರಿತಂತೆ ವ್ಯಕ್ತಗೊಂಡ ಸಾಮಾಜೀಕರಣದಲ್ಲಿ ಹೆಣ್ಣಿಗೆ ಅಲಂಕಾರ ತೆಗೆದುಹಾಕುವುದು. ಆಕೆಯ ಅಂದವನ್ನು ಮರೆಮಾಡುವುದು, ಧಾರ್ಮಿಕ ಶುಭ ಸಮಾರಂಭಗಳಲ್ಲಿ ನಿಷೇಧ ಹೇರುವುದು ಕಂಡು ಬರುತ್ತದೆ. ಈ ಎಲ್ಲಾ ನಿಬಂಧನೆ, ನಿಷೇಧಗಳು ಹೆಣ್ಣಿಗೆ ಮಾತ್ರ ಯಾಕೆ ? ಅದೇ ಗಂಡಿಗೆ, ಬೇಗನೆ ಮದುವೆ ಮಾಡಿಸುವುದು (ವರ್ಷದೊಳಗೆ) ತಡವಾಗಬಾರದು. ಇವನ ಲೈಂಗಿಕತೆ ಮುಂದುವರಿಯಬೇಕು. ಅದೇ ಹೆಣ್ಣಿನ ಲೈಂಗಿಕತೆ ನಿರ್ಬಂಧ ಹೇರಿ, ಸಾಮಾಜಿಕವಾಗಿ 'ಅಪಶಕುನ' ಮಾಡುವುದು ಕಂಡುಬರುತ್ತದೆ. ಗಂಡು ಹೆಣ್ಣಿನ ಕುರಿತಾಗಿ ಧಾರ್ಮಿಕ ಗ್ರಂಥಗಳು ಸೃಷ್ಟಿಸಿರುವ ಅಪನಂಬಿಕೆಗಳು ಹೆಣ್ಣಿಗೊಂದು

ಗಂಡಿಗೊಂದು ಎಂದು ಪ್ರತ್ಯೇಕವಾಗಿ ನೀತಿ-ನಿಯಮಗಳನ್ನು ರೂಪಿಸಿರುವುದರಿಂದ ಹೆಣ್ಣು ಗಂಡಿನ ಮಧ್ಯೆ ಭಿನ್ನ ಸಾಮಾಜೀಕರಣ ರೂಪಿತಗೊಂಡಿದೆ.

ಧಾರ್ಮಿಕ ಸಾಮಾಜೀಕರಣದಲ್ಲಿ ಹೆಣ್ಣು-ಗಂಡುಗಳಿಬ್ಬರೂ ಸಮಾನವಾಗಿ ಪಾಲ್ಗೊಳ್ಳಬೇಕೆಂಬ ಪ್ರಾಮುಖ್ಯತೆಯನ್ನು ನೀಡುವಲ್ಲಿ ವಿಫಲವಾಗಿದೆ. ಯಾಕೆಂದರೆ ಧಾರ್ಮಿಕ ಆಚರಣೆಗಳನ್ನು ವಿಶ್ಲೇಷಿಸುತ್ತಿರುವವರು ಗಂಡಸರೇ ಆಗಿದ್ದಾರೆ. ಆದ್ದರಿಂದ ಇದು ಹೆಣ್ಣು ಮಕ್ಕಳಿಗೆ ಒಂದು ಸಾಮಾಜಿಕ ನಿಯಂತ್ರಣ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಹೆಣ್ಣಿನ ಹುಟ್ಟು, ವಿವಾಹ, ಶಿಕ್ಷಣ, ವೈಧವ್ಯ, ಸಾವು ಮುಂತಾದ ಸಂದರ್ಭಗಳಲ್ಲಿ ಹೆಣ್ಣುಮಕ್ಕಳು ಮಾಡಬಹುದಾದ ಅಥವಾ ಮಾಡಬಾರದಂತಹ ಪಟ್ಟಿಯನ್ನು ಪ್ರತಿ ಧರ್ಮವು ಸೃಷ್ಟಿಸಿದೆ. ಹೆಣ್ಣನ್ನು ಕುರಿತಂತೆ 'ಮಾತೃದೇವೋಭವ' ಎಂದು ಸಾರುವ ಮೂಲಕ ಹೆಣ್ಣನ್ನು ದೈವತ್ವದ ಪಟ್ಟಕ್ಕೇರಿಸಿದ ಧರ್ಮ ಆಕೆ ಸತ್ತ ಪತಿಯೊಡನೆ ಜೀವಂತವಾಗಿ ಚಿತೆಯೇರುವಂಥ ಅಮಾನುಷ ಆಚರಣೆಗೆ ಅಂಗೀಕಾರ ನೀಡಿದೆ. ಮತ್ತೊಂದು ಕಡೆ ಪತಿ ಸತ್ತ ನಂತರ ವೈಧವ್ಯದ ಮೂಲಕ ಅವಳ ಮೇಲೆ ಹೇರಿರುವ ನೂರಾರು ಧಾರ್ಮಿಕ, ಸಾಮಾಜಿಕ ನಿರ್ಬಂಧಗಳು ಹೆಣ್ಣು ಧಾರ್ಮಿಕ ಸಾಮಾಜೀಕರಣಕ್ಕೆ ಒಳಪಡಿಸಿರುವುದು ಕಂಡುಬರುತ್ತದೆ. ಒಟ್ಟಾರೆ ಧಾರ್ಮಿಕ ಸಾಮಾಜೀಕರಣದಲ್ಲಿ ಹೆಣ್ಣು-ಗಂಡು ಮಕ್ಕಳಿಗೆ ಪ್ರತ್ಯೇಕವಾದ ಮೌಲ್ಯ, ಆಚರಣೆ, ಹೆಣ್ಣುಮಕ್ಕಳ ಕುರಿತಂತೆ ದ್ವಿಮುಖ ಧೋರಣೆಗಳು ಒಂದು ಕಡೆ, ಹೆಣ್ಣನ್ನು ದೇವತೆಯೆಂದು ಮತ್ತೊಂದು ಕಡೆ ಹೆಣ್ಣಿನ ಮೇಲೆ ದೌರ್ಜನ್ಯಕ್ಕೆ ಮಾನ್ಯತೆ ನೀಡುವುದು. ಹೀಗೆ ಹೆಣ್ಣು-ಗಂಡು ಮಕ್ಕಳ ಕುರಿತಂತೆ ಸಾಮಾಜೀಕರಣ ರೂಪಿಸಿರುವುದು ಕಂಡು ಬರುತ್ತದೆ.

೨.೭. ಸಾರ್ವಜನಿಕ ವಲಯದ ಸಾಮಾಜೀಕರಣ

ಸಾರ್ವಜನಿಕ ವಲಯದ ಸಾಮಾಜೀಕರಣ ಕುರಿತಂತೆ ನೋಡಿದರೆ ಹೆಣ್ಣು-ಗಂಡುಮಕ್ಕಳಿಗೆ ಪ್ರತ್ಯೇಕ ಸಾಮಾಜೀಕರಣ ರೂಪಿಸುತ್ತಿರುವುದು ಕಂಡುಬರುತ್ತದೆ. ಇದಕ್ಕೆ ಮಾಧ್ಯಮಗಳಲ್ಲಿ ಹೆಣ್ಣು-ಗಂಡು ಮಕ್ಕಳ ಬಗ್ಗೆ ರೂಪಿಸುತ್ತಿರುವ ಅಭಿಪ್ರಾಯಗಳಿಂದ ತಿಳಿಯಬಹುದಾಗಿದೆ. ಅದು ಉದ್ದೇಶಿತ, ಅನುದ್ದೇಶಿತ ಸಾಮಾಜೀಕರಣ. ಅದೇನೆಂದರೆ ಹೆಣ್ಣುಮಕ್ಕಳ ಕುರಿತಂತೆ ಸೌಂದರ್ಯ ವರ್ಧಕಗಳನ್ನು ಪರಿಚಯಿಸುವಾಗ, ಹೆಣ್ಣುಮಕ್ಕಳಿಗೆ ಸೌಂದರ್ಯ ವರ್ಧಕಗಳನ್ನು ಮುಖಕ್ಕೆ ಲೇಪಿಸಿಕೊಂಡರೆ ಮಾತ್ರ ಸೌಂದರ್ಯವಂತೆಯರು ಎನ್ನುವಂಥ ಸಾಮಾಜೀಕರಣವನ್ನು ಜಾಹೀರಾತುಗಳ ಮೂಲಕ ಬ್ರಾಂಡೆಡ್ ಮತ್ತು ಕಂಪನಿ ವರ್ಧಕಗಳನ್ನು ಬಳಸಿಕೊಳ್ಳಬೇಕೆಂಬ ಅಭಿಪ್ರಾಯವನ್ನು ರೂಪಿಸಲಾಗುತ್ತಿದೆ. ಇದಕ್ಕಾಗಿ ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ತಲೆ ಕೂದಲುಗಳ ಎಣ್ಣೆಗಳು, ಪೌಡರ್, ಲಿಪ್‌ಸ್ಟಿಕ್, ಫೇಸ್ ಕ್ರಿಮ್ - ಹೀಗೆ ಇದಕ್ಕೆ ವಿರುದ್ಧವಾಗಿ ಗಂಡುಮಕ್ಕಳಿಗೆ ಹೇರ್ ಕಂಡಿಷನರ್, ಮೆನ್ಸ್ ಕ್ರೀಮ್, ಪೌಡರ್, ಸೆಂಟ್-ಹೀಗೆ ಹೆಣ್ಣು ಗಂಡುಮಕ್ಕಳಿಗೆ ಪ್ರತ್ಯೇಕವಾದ ಜಾಹೀರಾತುಗಳ ಮೂಲಕ ಪ್ರಚಾರಪಡಿಸಲಾಗುತ್ತದೆ. ಜೊತೆಗೆ ಪ್ರತ್ಯೇಕವಾಗಿ

ಟಿಪ್ಸನ್ನು ನೀಡಲಾಗುತ್ತದೆ. ಇದರಿಂದ ಹೆಣ್ಣು-ಗಂಡು ಮಕ್ಕಳು ಬೇರೆ ಬೇರೆ ಎನ್ನುವ ಸಾಮಾಜೀಕರಣ ರೂಪುಗೊಳ್ಳಲು ಕಾರಣವಾಗುತ್ತದೆ.

ಹೆಣ್ಣುಮಕ್ಕಳ ವಿಚಾರದಲ್ಲಿ ಮಾಧ್ಯಮಗಳು ರೂಪಿಸುತ್ತಿರುವ ಸಾಮಾಜೀಕರಣದಲ್ಲಿ ಹೆಣ್ಣನ್ನು ಎರಡನೆ ದರ್ಜೆಯ ಪ್ರಜೆಯ ರೀತಿಯಲ್ಲಿಯೇ ಅಭಿಪ್ರಾಯವನ್ನು ರೂಪಿಸುವುದು ಕಂಡು ಬರುತ್ತದೆ. ಇದಕ್ಕೆ ಟಿ.ವಿ. ಚಾನಲ್‌ನಲ್ಲಿ ಸುದ್ದಿ ಕೊಡುವಾಗ ಹೆಣ್ಣು-ಗಂಡಿನ ಸಂಬಂಧಗಳ ವಿಚಾರದಲ್ಲಿ ಸೃಷ್ಟಿಸುವ ಭಾಷೆ, ದೃಶ್ಯ, ಚಿತ್ರ ಎಲ್ಲವೂ ಬೇರೆ ಬೇರೆ ರೀತಿಯಾದ ಸ್ಥಾನಗಳು ಉಂಟಾಗುವಂತೆ ನೋಡಿಕೊಳ್ಳುತ್ತವೆ. ಇದಕ್ಕೆ ಗಂಡು, ಹೆಂಡತಿಯಲ್ಲದೆ ಇತರ ಹೆಣ್ಣುಮಕ್ಕಳ ಜೊತೆ ಸಂಬಂಧ ಇರುವ ಗಂಡಿನ ಬಗ್ಗೆ ಬರೆಯುವಾಗ/ಹೇಳುವಾಗ 'ಹಲವು ಹೆಂಡಿರ ಮುದ್ದಿನ ಗಂಡ' ಎನ್ನುವ ವರ್ಣನೆ ನೀಡಲಾಗುತ್ತದೆ. ಆದರೆ ಅದೇ ಹೆಣ್ಣಿನ ಸಂದರ್ಭದಲ್ಲಿ ಹೆಣ್ಣಿನ ಬಗ್ಗೆ ಬರೆಯುವಾಗ ಹೇಳುವಾಗ 'ಈ ಲಂಪಟಿಗೆ ಎಷ್ಟು ಜನವಾದರೂ ಸಾಲದು', ಎನ್ನುವ ಅರ್ಥದ ಅದು ಕಾಮ ಪಿಶಾಚಿ, ಮೋಹಿನಿ ಇನ್ನಿತರ ಪದಗಳನ್ನು ಬಳಸಲಾಗುತ್ತದೆ. ಹೆಣ್ಣು ಗಂಡನ್ನು ಹಾಳು ಮಾಡುವವಳು ಎನ್ನುವಂಥ ಅಭಿಪ್ರಾಯವನ್ನು ರೂಪಿಸಲು ಪ್ರಯತ್ನಿಸುವುದು ಕಂಡು ಬರುತ್ತದೆ. ಇದಕ್ಕೆ 'ಮೀಟೂ' ಪ್ರಕರಣದಲ್ಲಿ ಹೆಣ್ಣು ಶೋಷಣೆ ಆಗಿದ್ದರೂ ಅದನ್ನು ಧೈರ್ಯವಾಗಿ ಹೇಳಿದ ಎಷ್ಟೋ ಹೆಣ್ಣುಮಕ್ಕಳನ್ನು 'ಅವರ ನಡತೆ' ಬಗ್ಗೆ ಜರಿಯಲಾಯಿತು. ಇದರಿಂದ ಅವಳೊಳಗಿದ್ದ ಹತಾಶೆಯನ್ನು ಹೊರಹಾಕಲು ಆಗಲಾರದಂಥ ಸ್ಥಿತಿ ಹೆಣ್ಣುಮಕ್ಕಳಿಗೆ ಉಂಟಾಗಿರುವುದು ಕಂಡು ಬಂದಿರುವುದು ಇದೆ. ಇದಕ್ಕೆ ಹೆಣ್ಣುಮಕ್ಕಳು ಸಾರ್ವಜನಿಕವಾಗಿ ಸಮಸ್ಯೆಗಳನ್ನು ಹೇಳಿಕೊಳ್ಳಬಾರದಂತಹ ಸಾಮಾಜೀಕರಣ ಸೃಷ್ಟಿಗೊಂಡ ಪರಿಣಾಮವಾಗಿ ಈ ತೆರನಾದ ಸಮಸ್ಯೆಗಳು ಹೆಣ್ಣುಮಕ್ಕಳಿಗೆ ಕಾಡುತ್ತಿರುವುದು ಕಂಡುಬರುತ್ತದೆ. ಹೆಣ್ಣುಮಕ್ಕಳು ಕುಡಿತದ ಅಪರಾಧಕ್ಕೆ/ಆರೋಪಕ್ಕೆ ಒಳಗಾದರೆ ಸಾಕು ಸಾರ್ವಜನಿಕವಾಗಿ ಹೆಣ್ಣಿನ ಬಗ್ಗೆ ಬಳಸುವ ಭಾಷೆಯಲ್ಲಿಯೇ ಲಿಂಗತಾರತಮ್ಯ ತಿಳಿದು ಬರುತ್ತದೆ, ಇದಕ್ಕೆ ಉದಾ: 'ನಶಾ ರಾಣಿ', 'ಮಾದಕ ನಟಿ', 'ನಶಾ ರಾಣಿ ನೌಟಂಕಿ' 'ಅಳುವ ಹೈಡ್ರಾಮಾ', 'ಮಾಯಾವಿ', 'ನಶೆ ಏರಿಸುತ್ತಿದ್ದವಳ ಇಳಿದ ನಶೆ', ದೌರಾಣಿ ಹೀಗೆ ಅನೇಕ ಪದಪುಂಜಗಳಲ್ಲಿ ಕೆಟ್ಟ ಅಭಿಪ್ರಾಯವನ್ನು ರೂಪಿಸುತ್ತವೆ. ಆದರೆ ಗಂಡಿನ ವಿಷಯಕ್ಕೆ ಒಂದು ಸಾಫ್ಟ್ ಕಾರ್ನರ್‌ನಲ್ಲಿ ಹೇಳಿ ಬಿಡಲಾಗುತ್ತದೆ. ಅಂದರೆ ಹೆಣ್ಣು ಪ್ರತ್ಯೇಕ, ಗಂಡು ಪ್ರತ್ಯೇಕ ವಲಯದಲ್ಲಿರುವವರು; ಗಂಡು ಸಾರ್ವಜನಿಕವಾಗಿ ಏನು ಮಾಡಿದರೂ ನಡೆಯುತ್ತದೆ. ಹೆಣ್ಣು ಸಾರ್ವಜನಿಕ ವಲಯದಲ್ಲಿ ಪ್ರವೇಶಿಸಬಾರದು, ಪ್ರವೇಶಿಸಿದರೂ ನೈತಿಕ ನಿಯಮದಡಿ ಪರದೆಯೊಳಗೆ ಅಪ್ಪಿತಪ್ಪಿಯೂ ಬರಬಾರದು. ಬಂದರೆ ಅವಳ ವ್ಯಕ್ತಿತ್ವವನ್ನು (ಇಲ್ಲಿ ವ್ಯಕ್ತಿತ್ವ ಎಂದರೆ ಬುದ್ಧಿ, ಬೌದ್ಧಿಕ ನೆಲೆ, ಅವರ ರಾಜಕೀಯ, ಸಾಮಾಜಿಕ ನಿಲುವುಗಳನ್ನೆಲ್ಲ ಒಳಗೊಂಡದ್ದಲ್ಲ ಕೇವಲ ಅವಳ ದೇಹ ಮಾತ್ರ) ಹೇಗೆ ರೋಚಕಗೊಳಿಸುವುದು ಎನ್ನುವುದರ ಕಡೆ ಮಾತ್ರ ಮಾಧ್ಯಮ ಲೋಕದ ಗಮನವೇ ಹೊರತು,

ಹೆಣ್ಣನ್ನು ಗೌರವಿಸುವ ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದಾಗಿರುವಲ್ಲಿ ಪ್ರಯತ್ನಿಸುವ ಸಾಮಾಜೀಕರಣ ಕಡಿಮೆ ಕಂಡು ಬರುತ್ತದೆ. ಇಲ್ಲಿ ಮುಖ್ಯವಾಗಿ ಮಾಧ್ಯಮಗಳು ಸಾರ್ವಜನಿಕ ವಲಯದಲ್ಲಿ ಹೆಣ್ಣು-ಗಂಡಿನ ಕುರಿತಾಗಿ ಅಭಿಪ್ರಾಯ ಮೂಡಿಸುವಲ್ಲಿ ಹೆಣ್ಣನ್ನು ಎರಡನೇ ದರ್ಜೆ ಪ್ರಜೆಯಾಗಿ ಇಲ್ಲವೆ ಗಂಡಿನ ಅಡಿಯಾಳಾಗಿ ವ್ಯಕ್ತಿತ್ವ ಹೊಂದಿರುವ ವ್ಯಕ್ತಿಯಾಗಿಯೇ ಅಭಿಪ್ರಾಯವನ್ನು ರೂಪಿಸುತ್ತವೆ. ಇದರಿಂದ ಹೆಣ್ಣು-ಗಂಡು ಸಾಮಾಜೀಕರಣದಲ್ಲಿ ಹೆಣ್ಣಿಗೆ ಭಯ, ಆತಂಕ, ತಲ್ಲಣವನ್ನು ಸೃಷ್ಟಿಸುತ್ತವೆ. ಈ ತರಹದ ಸಾಮಾಜೀಕರಣ ಹೆಣ್ಣಿನಲ್ಲಿ ಅಸಹಜತೆ ಸೃಷ್ಟಿ ಮಾಡಿದರೆ ಗಂಡಿಗೆ ಸಹಜ ಎನ್ನುವಂತೆ ಸಾಮಾಜೀಕರಣ ರೂಪಿತಗೊಳ್ಳಲಿಕ್ಕೆ ಕಾರಣವಾಗಿರುವುದು ಕಂಡು ಬರುತ್ತದೆ.

ಹೆಣ್ಣು-ಗಂಡುಗಳಿಗೆ ಸಾರ್ವಜನಿಕ ವಲಯದ ಸಾಮಾಜೀಕರಣದಲ್ಲಿ ಹೆಣ್ಣು-ಗಂಡಿನ ನಡವಳಿಕೆ ಭಿನ್ನವಾಗಿರಬೇಕೆಂದು ತೀರ್ಮಾನಿಸುವ ಮೂಲಕ ಬೇರೆ ಬೇರೆಯಾದ ನಂಬಿಕೆ, ಮೌಲ್ಯ, ದೃಷ್ಟಿಕೋನವನ್ನು ಬೆಳೆಯಲು ಪ್ರೇರಣೆ ನೀಡುತ್ತಿರುವುದು ಕಂಡು ಬರುತ್ತದೆ. ಇದಕ್ಕೆ ಮಾಧ್ಯಮಗಳಲ್ಲಿ ಹೆಣ್ಣುಮಕ್ಕಳಿಗೆ ಸಂಬಂಧಿಸಿದಂತೆ ಪ್ರಕಟಗೊಳ್ಳುವ ವಿಷಯಗಳಾದ ಅಂಗಾಂಗ ಪ್ರದರ್ಶನ, ಫ್ಯಾಶನ್, ಮಾಡೆಲಿಂಗ್, ಹೆಣ್ಣನ್ನು ಭೋಗದ ವಸ್ತುವಿನಂತೆ ಬಿಂಬಿಸುವ ಪ್ರದರ್ಶನ ಪ್ರಯತ್ನ ಕಂಡು ಬರುತ್ತದೆ. ಇದಲ್ಲದೇ ಕುಟುಂಬ ಹೆಣ್ಣುಮಕ್ಕಳನ್ನು ಮತ್ತು ಗೃಹಿಣಿಯರನ್ನು ಮುಖ್ಯವಾಗಿ ಗಮನದಲ್ಲಿ ಇಟ್ಟುಕೊಂಡು ಹೆಣ್ಣು-ಗಂಡು ಪರಸ್ಪರ ವಿರುದ್ಧ ಚಿತ್ರೀಕರಿಸುವುದು ಕಂಡು ಬರುತ್ತದೆ. ಇದಕ್ಕೆ ಅನೇಕ ಧಾರವಾಹಿ ಮತ್ತು ಜಾಹೀರಾತುಗಳನ್ನು ಉದಾಹರಿಸಬಹುದಾಗಿದೆ. ಧಾರಾವಾಹಿಗಳಲ್ಲಿ ಒಬ್ಬ ಗಂಡಿಗೆ ಇಬ್ಬರು ಹೆಂಡತಿಯರು, ಇಲ್ಲವೇ ಇಬ್ಬರು ಒಂದು ಗಂಡನ್ನು ಪ್ರೀತಿಸುವುದು, ಇಲ್ಲವೇ ಗಂಡಿನ ಕಾರಣಕ್ಕಾಗಿ ಹೆಣ್ಣು ಕಿತ್ತಾಡುವಂತೆ ಮಾಡುವುದು ಕಂಡುಬಂದರೆ, ಇನ್ನು ಧಾರವಾಹಿಗಳ ಮಧ್ಯದಲ್ಲಿ ಬರುವ ಜಾಹೀರಾತುಗಳಲ್ಲಿ ಕಸಬಾರಿಗೆ ಜೊತೆ, ಶೌಚಾಲಯದ ಪರಿಕರಗಳ ಜೊತೆ, ಬಟ್ಟೆ ಸೋಪುಗಳ ಜೊತೆ, ಗೃಹ ಅಲಂಕಾರಗಳ ವಸ್ತುಗಳ ಜೊತೆ, ಗೃಹವಸ್ತುಗಳ ಜೊತೆ, ಅಡುಗೆ ಮನೆ – ಹೀಗೆ ಹೆಣ್ಣುಮಕ್ಕಳ ವಲಯಕ್ಕೆ ಸಂಬಂಧಿಸಿದಂತೆ ತೋರಿಸುವ ದೃಶ್ಯಗಳು ಕಂಡು ಬರುತ್ತವೆ. ಅದೇ ಗಂಡುಮಕ್ಕಳ ವಿಷಯಕ್ಕೆ ಸಂಬಂಧಿಸಿದಂತೆ ಕಂಡು ಬರುವುದಿಲ್ಲ. ಇದರಿಂದ ಹೆಣ್ಣುಮಕ್ಕಳ ವಲಯವೇ ಬೇರೆ, ಗಂಡುಮಕ್ಕಳ ವಲಯವೇ ಬೇರೆ ಎನ್ನುವ ಸಾಮಾಜೀಕರಣದ ಸಂಗತಿಗಳನ್ನು ಪ್ರಕಟಿಸುತ್ತವೆ. ಇದರಿಂದ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆಗಳು ಸೃಷ್ಟಿಗೊಳುತ್ತವೆ.

"ಪತ್ರಿಕಾ ಮಾಧ್ಯಮಗಳಲ್ಲಿ ಹೆಣ್ಣುಮಕ್ಕಳ ಸಮಸ್ಯೆಗಳ ಕುರಿತು ಚರ್ಚಿಸಲು ಪ್ರತ್ಯೇಕವಾದ ಪುಟಗಳನ್ನು, ಸ್ಲಾಟ್‌ಗಳನ್ನು ಮೀಸಲಿಡುತ್ತವೆ. ಜೊತೆಗೆ ಮಹಿಳಾ ಸಮಸ್ಯೆಯನ್ನು ಪ್ರತ್ಯೇಕವಾಗಿ ಚರ್ಚಿಸುತ್ತವೆ. ಈ ಮೂಲಕ ಹೆಣ್ಣುಮಕ್ಕಳಿಗೆ ಸಂಬಂಧಿಸಿದ ಪುರವಣಿಗಳನ್ನಾಗಲೀ, ಕಾರ್ಯಕ್ರಮಗಳನ್ನಾಗಲೀ ಮಹಿಳೆಯರೂ ಮಾತ್ರ ನೋಡುವಂತಹದ್ದು ಎನ್ನುವ ಭಾವನೆ

ಸಾರ್ವತ್ರೀಕರಿಸುತ್ತವೆ. ಇದರಿಂದ ಹೆಣ್ಣು-ಗಂಡಿನ ಸಮಾನತೆ ಸಾಧಿಸುವ ನಿಟ್ಟಿನಲ್ಲಿ ಗಂಡಿಗೆ ಏನನ್ನು ಮನವರಿಕೆ ಮಾಡಿಕೊಡುವುದು ಸಾಧ್ಯವಾಗುವುದಿಲ್ಲ"[೨೯] ಎನ್ನುವ ಮಾಹಿತಿಯಲ್ಲಿ ಸ್ಪಷ್ಟವಾಗಿ ಸಾರ್ವಜನಿಕ ಮಾಧ್ಯಮಗಳು ಹೆಣ್ಣು-ಗಂಡಿನ ಪ್ರತ್ಯೇಕ ಮಾಹಿತಿಯನ್ನು ನೀಡುತ್ತವೆ. ಇದರಿಂದ ಹೆಣ್ಣು-ಗಂಡಿನ ಮಧ್ಯೆ ಸಮನ್ವಯ, ಸಮಾನತೆ ತರಲು ಸಾಧ್ಯವಾಗಿಲ್ಲ ಅನ್ನುವುದನ್ನು ಸ್ಪಷ್ಟಪಡಿಸುವುದು ಕಂಡು ಬರುತ್ತದೆ. ಹೆಚ್ಚಾಗಿ ಹೆಣ್ಣು-ಗಂಡಿಗೆ ಬೇರೆ ಬೇರೆ ಕ್ಷೇತ್ರಗಳೆಂಬ ವಿಚಾರಗಳನ್ನು ಮಾಧ್ಯಮಗಳು ಚರ್ಚೆ ಮಾಡುತ್ತಿರುವುದು ಕೂಡ ಹೆಣ್ಣು-ಗಂಡಿನ ಪ್ರತ್ಯೇಕತೆಯನ್ನು ಸಾಮಾಜೀಕರಣ ರೂಪಿಸಲು ಕಾರಣವಾಗುತ್ತದೆ.

ಸಾರ್ವಜನಿಕ ವಲಯದಲ್ಲಿ ನೆರೆ-ಹೊರೆ ಸಂದರ್ಭದ ಸಾಮಾಜೀಕರಣದಲ್ಲಿ ಪ್ರಕ್ರಿಯೆಯ ಕುರಿತಂತೆ ನೋಡುವುದಾದರೆ, ಒಂದು ಕುಟುಂಬದಲ್ಲಿ ಹೆಣ್ಣುಮಗು ಹುಟ್ಟಿದರೆ ಆ ಮಗುವಿನ ಕುರಿತಂತೆ ಸಾಮಾಜೀಕರಣದಲ್ಲಿನ ಗ್ರಹಿಕೆ ಲಿಂಗಭೇದದಿಂದ ಕೂಡಿರುವುದು ಕಂಡು ಬರುತ್ತದೆ. ಉದಾ: ಹೆಣ್ಣುಮಗು ಹುಟ್ಟಿದಾಗ ನೋಡಲು ಬರುವ ಆಪ್ತರು, ಸಂಬಂಧಿಗಳು, ಸ್ನೇಹಿತರು, ನೆರೆಹೊರೆಯವರು ಮಗು ಯಾವ ಲಿಂಗದ್ದು ಎನ್ನುವುದನ್ನು ಆಧರಿಸಿ ಮಗುವಿಗೆ ಉಡುಗೆ-ತೊಡುಗೆ ಆಟಿಕೆ(kids)ಗಳನ್ನು ಮತ್ತು ಉಡುಗೊರೆಯನ್ನು ನೀಡುವುದು ಕಂಡುಬರುತ್ತದೆ. ಟೆಡ್ಡಿಬೇರ್, ಬಾರ್ಬಿ ಬೊಂಬೆ ನೀಡುವುದರ ಮೂಲಕ ಪ್ರತ್ಯೇಕಿಸುವುದು. ಹೆಣ್ಣುಮಕ್ಕಳು ಚೆನ್ನಾಗಿದ್ದರೆ ಅವಳ ಕುರಿತು ಹೇಳುವ ಮಾತುಗಳಲ್ಲಿ ಡ್ಯಾನ್ಸ್‌ಗಳಿಗೆ ಹೇಳಿ ಮಾಡಿಸಿದ ಹಾಗೆಯೇ ಇದ್ದಾಳೆ. ಮುಂದೆ ಒಳ್ಳೆಯ ಡ್ಯಾನ್ಸರ್ ಆಗುತ್ತಾಳೆ. ಅಳುವ ಧ್ವನಿ ಕೇಳಿ ಚೆನ್ನಾಗಿದ್ದರೆ, ಒಳ್ಳೆಯ ಸಂಗೀತಗಾರಳಾಗುತ್ತಾಳೆ. ಇಲ್ಲವೆ ಚೆನ್ನಾಗಿ ಮಾತನಾಡಲು ಕಲಿತರೆ ಟೀಚರ್ ಆದರೆ ಚೆನ್ನಾಗಿರುತ್ತಾಳೆ. ನೋಡಲು ಸುಂದರವಾಗಿ ಕಂಡರೆ ಮುಂದೆ ಒಳ್ಳೆಯ ಹಿರೋಯಿನ್ ಆಗುತ್ತಾಳೆ. ಹೀಗೆ ನೆರೆಹೊರೆ ಸಂಬಂಧಿಕರ ಮಾತುಗಳೇ ಮಕ್ಕಳ ಮನೋಭಾವನೆಯಲ್ಲಿ ಪ್ರತ್ಯೇಕ ಬೆರೆತು ಪ್ರತ್ಯೇಕತೆ ಸಾಮಾಜೀಕರಣ ರೂಪಿತವಾಗಲಿಕ್ಕೆ ಕಾರಣವಾಗುತ್ತದೆ. ಸಾರ್ವಜನಿಕ ವಲಯದಲ್ಲಿ ಕೂಡ ಗಂಡಿಗೆ ಸೃಷ್ಟಿ ಮಾಡಿರುವ ಸಾರ್ವಜನಿಕ ಸಾಮಾಜೀಕರಣದಲ್ಲಿ ಮುಖ್ಯವಾಗಿ ಕಂಡುಬರುವುದೇನೆಂದರೆ ಗಂಡು ಅಳಬಾರದು, ಒಂದುವೇಳೆ ಗಂಡು ಅತ್ತರೆ ಜನ 'ಛೀ ಹೆಂಗಸಿನ ಹಾಗೇ ಅಳುತ್ತಾನೆ' ಎಂದು ಅಪಹಾಸ್ಯ ಮಾಡುವುದು, ಹೆಂಡತಿಗೆ (ಹೆಣ್ಣು) ಸಹಾಯ ಮಾಡಿದರೆ 'ಹೆಂಡತಿಯ ಗುಲಾಮ' ಎಂದು ಗೇಲಿ ಮಾಡುವುದು ಕಂಡು ಬರುತ್ತದೆ. ಅದೇ ಹೆಣ್ಣು ಹೆಚ್ಚು ನಗಬಾರದು, ಹೆಚ್ಚು ಮಾತನಾಡಬಾರದು. ಹೀಗೆ ಹೆಣ್ಣು-ಗಂಡು ಇಬ್ಬರಿಗೂ ಸಮಾನ ಸಾಮಾಜೀಕರಣ ಸಾಧ್ಯವಾಗದಂಥ ಸಾಮಾಜೀಕರಣ ಸಾರ್ವಜನಿಕ ಸಂದರ್ಭದಲ್ಲಿ ಕಂಡು ಬರುತ್ತದೆ.

ಭಾರತದಲ್ಲಿ 'ಲಿಂಗ'ದ ಸಾಮಾಜೀಕರಣ ಕುಟುಂಬದಿಂದ, ತಂದೆ-ತಾಯಿಗಳಿಂದ ಶಿಕ್ಷಣ, ಶಿಕ್ಷಕರಿಂದ, ನೆರೆಹೊರೆಯವರಿಂದ, ಮಾಧ್ಯಮಗಳಿಂದ, ವೃತ್ತಿಗಳಿಂದ ಹೀಗೆ ಅನೇಕ ಮೂಲಗಳಿಂದ ಸಾಮಾಜೀಕರಣಗೊಂಡರು ಇದರ ಮೂಲದಲ್ಲಿ ಲಿಂಗಾಧಾರಿತ ವರ್ತನೆಗೊಳಿಸಿರುವುದು ಕಂಡು ಬರುತ್ತದೆ. 'ಲಿಂಗ'ದ ಸಾಮಾಜೀಕರಣ ಪ್ರಕ್ರಿಯೆಯು ದುಬೆ ಅವರ ಪ್ರಕಾರ(೨೦೦೧) ಭಾರತದಲ್ಲಿ 'ಲಿಂಗ'ದ ಸಾಮಾಜೀಕರಣದ ಪ್ರಕ್ರಿಯೆಯ ಅಧ್ಯಯನದಲ್ಲಿ ಹೆಣ್ಣುಮಕ್ಕಳನ್ನು ಸಾಮಾಜೀಕರಣ

ಗೊಳಿಸುವಲ್ಲಿ ಭಾಷೆ, ಆಚರಣೆ, ವರ್ತನೆ, ಸಂಹಿತೆ ಮತ್ತು ಪದ್ಧತಿಗಳ ಬಳಕೆಯನ್ನು ವಿವರಿಸುತ್ತಾರೆ. ಈ ಪ್ರಕ್ರಿಯೆಗಳ ಮೂಲಕ ಹೆಣ್ಣುಮಕ್ಕಳು ಅಸ್ತಿತ್ವದಲ್ಲಿರುವ ಪರಿಕಲ್ಪನೆಗೆ ಅಗತ್ಯಕ್ಕಿಂತ ಜಾರಿಗೊಳಿಸಲಾಗುತ್ತದೆ. ಹೆಣ್ಣಿನ ಜೈವಿಕ ಲಿಂಗವನ್ನು ನಿಯಂತ್ರಿಸುವುದರ ಜೊತೆಗೆ, ಪಿತೃವಂಶೀಯತೆ, ಪಿತೃಪ್ರಧಾನತೆ, ಬೆಳವಣಿಗೆ ಮಾಡುವುದಾಗಿದೆ. ಭಾರತದಲ್ಲಿ ಲಿಂಗದ ಸಾಮಾಜೀಕರಣ ಎಂದರೆ ಮುಖ್ಯವಾಗಿ ಹೆಣ್ಣಿನ ಜೈವಿಕ ಲಿಂಗದ ನಿಯಂತ್ರಣ ಮತ್ತು ಭವಿಷ್ಯದ ಪಾತ್ರಗಳಿಗೆ ಹುಡುಗಿಯರನ್ನು ಸಾಮಾಜೀಕರಣಗೊಳಿಸುವುದಾಗಿದೆ[೩೦] ಎನ್ನುತ್ತಾರೆ. ಮುಂದುವರೆದು ಲಿಂಗದ ಸಾಮಾಜೀಕರಣವನ್ನು ಕುರಿತಂತೆ ದುಬೆಯವರು. "ಗಂಡು ಮಗುವಿಗಿರುವ ಹೆಚ್ಚಿನ ಮನ್ನಣೆ ಮತ್ತು ಹೆಣ್ಣಿಗಿರುವ ಎರಡನೆಯ ದರ್ಜೆಯ ಸ್ಥಾನಮಾನ ಗುರುತಿಸಲು ಚಿಕ್ಕ ವಯಸ್ಸಿನಲ್ಲಿಯೇ ಹೆಣ್ಣುಮಕ್ಕಳಿಗೆ ಮತ್ತು ಗಂಡು-ಮಕ್ಕಳಿಗೆ ಅಪೇಕ್ಷಣೀಯ, ಅನಪೇಕ್ಷಣೀಯ ಎನ್ನುವುದನ್ನು ಪ್ರಕಟಿಸುವ ಭಾಷೆಯ ಬಳಕೆಯಿಂದ ಇದು ಸ್ಪಷ್ಟವಾಗುತ್ತದೆ. ಉದಾ:- ಗರ್ಭಿಣಿಯಾದ ತಾಯಿಗೆ ಯಾವಾಗಲೂ ಪುತ್ರನನ್ನು ಹೆತ್ತು ಕೊಡು ಎಂದು ಆರ್ಶೀವದಿಸಲಾಗುತ್ತದೆ. ಹೆಂಗಸರು ಕೂಡ ಗಂಡು ಮಗುವನ್ನು ಹಡೆಯಲು ವಿಶೇಷ ವ್ರತಗಳನ್ನು ಆಚರಿಸುತ್ತಾರೆ. ಒಂದುವೇಳೆ ಗಂಡು ಮಗು ಹುಟ್ಟಿದರೆ ಅದನ್ನು ತಪಸ್ಸಿನ ಫಲ ಎಂದು ಭಾವಿಸುತ್ತಾರೆ. ಹೆಣ್ಣುಮಕ್ಕಳನ್ನು ಕುಟುಂಬದಲ್ಲಿ ತಾತ್ಕಾಲಿಕ ಸದಸ್ಯರು ಎಂಬ ಅರಿವಿನೊಂದಿಗೆ ಬೆಳೆಸುತ್ತಾರೆ. ಈ ಕಾರಣಕಾಗಿಯೇ ಹೆಣ್ಣು ಮಕ್ಕಳಿಗೆ ಸಣ್ಣ ಮಕ್ಕಳಿರುವಾಗ ನೀನು ಬೇರೆಯವರ ಮನೆಗೆ ಹೋಗುವವಳು, ಚೆನ್ನಾಗಿರಬೇಕು, ಸಹೋದರ ಜೊತೆ ಜಗಳವಾಡಬೇಡ, ನೀನು ಗಂಭೀರವಾಗಿರಬೇಕು, ಹೆಚ್ಚಿಗೆ ನಗಬೇಡ, ಹೆಚ್ಚು ಮಾತನಾಡಬೇಡ, ಹೆಚ್ಚು ತಿನ್ನಬೇಡ ಹೀಗೆ ಅನೇಕ ಸಾಂಸ್ಕೃತಿಕ ಸಂಗತಿಗಳಿಂದ ಹಿಡಿದು ಅವಳ ಜೈವಿಕ, ಬೌದ್ಧಿಕ, ದೈಹಿಕ, ಮಾನಸಿಕ ಸಂಗತಿಗಳವರೆಗೆ ಸಾಮಾಜೀಕರಣಗೊಳಿಸುತ್ತಿರುವುದು ಕಂಡು ಬರುತ್ತದೆ. ಬಾಲ್ಯದಲ್ಲಿಯೇ ಹೆಣ್ಣುಮಕ್ಕಳಿಗೆ ಸ್ವತಃ ಮನೆ 'ತಾತ್ಕಾಲಿಕ' ಎನ್ನುವ ಅಂಶಗಳನ್ನು ಕುಟುಂಬದಲ್ಲಿ ಸಾಮಾಜೀಕರಣಗೊಳಿಸಲಾಗುತ್ತದೆ.

ಹೆಣ್ಣುಮಕ್ಕಳಿಗೆ ಅಧೀನತೆಯನ್ನು ಒಪ್ಪಿಕೊಳ್ಳಲು ಸಹಾಯಕವಾಗುವ ಸಾಮಾಜೀಕರಣದ ವಿಧಾನಗಳನ್ನು, ಭಾಷೆ, ಆಚರಣೆ, ವರ್ತನೆ, ಸಂಹಿತೆ ಮತ್ತು ಪದ್ಧತಿಗಳ ಮೂಲಕ ಹೇಳುತ್ತಿರುವುದು ಇದಕ್ಕೆ ಹೆಣ್ಣುಮಕ್ಕಳು ಕಲಿತುಕೊಳ್ಳುವ, ನಿಲ್ಲುವ, ನಡೆಯುವ, ರೀತಿ-ನೀತಿಗಳಿಗೆ ನಿರ್ಬಂಧಗಳಿವೆ. ಆಕೆ ನಿರ್ದಿಷ್ಟ ಉದ್ದೇಶವಿಲ್ಲದೆ ಸಾರ್ವಜನಿಕವಾಗಿ ಓಡಾಡುವಂತಿಲ್ಲ. ಆಕೆ ಮೃದು ಭಾಷೆ, ವರ್ತನೆ ಹೊಂದಿರಬೇಕೆಂದು ಬಯಸುತ್ತಾರೆ. ಆದರೆ ಗಂಡುಮಕ್ಕಳಿಗೆ ಇದಕ್ಕೆ ವಿರುದ್ಧವಾಗಿ ಸಾಮಾಜೀಕರಣಗೊಳಿಸಲಾಗುತ್ತದೆ. ಅವನ ನಡವಳಿಕೆ, ನಡೆ-ನುಡಿ, ಭಾಷೆ, ಆಚರಣೆ, ಪದ್ಧತಿಗಳಿಗೆ ಯಾವುದೇ ನಿರ್ಬಂಧ ಇಲ್ಲದೆ ಮುಂದುವರೆಸಲಾಗುತ್ತದೆ.

ಹೆಣ್ಣುಮಕ್ಕಳನ್ನು ತಾಯ್ತನಕ್ಕೆ ಸಾಮಾಜೀಕರಣಗೊಳಿಸುವ ಪ್ರಕ್ರಿಯೆಯಲ್ಲಿ ಭಾಷೆ ಮತ್ತು ಆಚರಣೆಗಳನ್ನು ನೋಡಿದರೆ ಅವಳ ಭವಿಷ್ಯದ ಪಾತ್ರವನ್ನು ಗುರುತಿಸಿ ಅವಳಿಗೆ ಭಾಷೆ ಮೂಲಕ ತಿಳಿಸಲಾಗುತ್ತದೆ. ಉದಾ:- ಹೆಣ್ಣು ಮಕ್ಕಳಿಗೆ 'ಅಮ್ಮ', 'ಅವ್ವ', 'ತಾಯಿ' ಎಂದು ಕುಟುಂಬದ ಒಳಗೆ ಹೆಣ್ಣುಮಕ್ಕಳಿಗೆ ಸಣ್ಣ ಮಗು ಇರುವಾಗಲೇ ಸಂಬೋಧಿಸಿ ಕರೆಯಲಾಗುತ್ತದೆ.

ಅದೇ ಸಮಯದಲ್ಲಿ ಆಕೆಯ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಮತ್ತು ಬುದ್ಧಿ ಶಕ್ತಿಯನ್ನು ನಿರಾಕರಿಸಲಾಗುತ್ತದೆ. ಉದಾ:- ಕುಟುಂಬದಲ್ಲಿ ಪ್ರತ್ಯೇಕವಾಗಿ ಇರಿಸುವುದರ ಮೂಲಕ, ಇನ್ನೂ ಶಾಲೆಗಳಲ್ಲಿ ಇದು ಹೆಚ್ಚಾಗಿ ಕಂಡು ಬರುತ್ತದೆ. ಶಾಲೆಗಳಲ್ಲಿ ಹೆಣ್ಣುಮಕ್ಕಳು ಗಂಡು ಮಕ್ಕಳು ಪ್ರತ್ಯೇಕವಾಗಿ ಕೂರಬೇಕು. ಅವರಿಬ್ಬರೂ ಒಟ್ಟಿಗೆ ಆಟವಾಡುವುದನ್ನು ಮತ್ತು ಮಾತನಾಡುವುದನ್ನು ಯಾರು ಪ್ರೋತ್ಸಾಹಿಸುವುದಿಲ್ಲ. ಪ್ರತ್ಯೇಕ ಶಾಲೆ, ಕಾಲೇಜು, ತರಗತಿಗಳ ಮೂಲಕ ಬೋಧನೆ ಮಾಡುವಂತಹದ್ದು ಇದೆ. ಹೆಣ್ಣುಮಕ್ಕಳೆಂದರೆ "ವಿಭಿನ್ನ ಎಂಬ ಸಂದೇಶವನ್ನು ತಲುಪುವ ಹಾಗೆ ನೋಡಿಕೊಳ್ಳುತ್ತವೆ. ಕೇವಲ ಇದು ಇಲ್ಲಿಗೆ ನಿಂತಿಲ್ಲ ಮುಂದುವರೆದು ಶಿಕ್ಷಣದ, ಪಠ್ಯಪುಸ್ತಕದಲ್ಲಿ ದಾಖಲಿಸುವ ಮಟ್ಟಕ್ಕೆ ಹೋಗಿದೆ; ಇದಕ್ಕೆ ಪ್ರಾಥಮಿಕ ಶಾಲೆ ಪಠ್ಯಪುಸ್ತಕಗಳಲ್ಲಿ ಹೆಣ್ಣು-ಗಂಡುಮಕ್ಕಳ ವಿಭಿನ್ನ ಪಾತ್ರಗಳನ್ನು ಕುರಿತು ಉದಾಹರಣೆಗಳು ತುಂಬಿವೆ. ಅವುಗಳಲ್ಲಿ ಹೆಣ್ಣುಮಕ್ಕಳಿಗೆ ಗೃಹಕೃತ್ಯ ಪ್ರತ್ಯೇಕತೆ, ನಾಚಿಕೆ, ನಮ್ರತೆ, ಭಯದ ಗುಣಗಳನ್ನು ಹಾಗೂ ಗಂಡುಮಕ್ಕಳಿಗೆ ಹೊರಗಡೆ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ, ಉತ್ಪಾದನೆ, ಒರಟುತನ ಮತ್ತು ಆಕ್ರಮಣಕ್ಕಾಗಿ ಪ್ರವೃತ್ತಿಗಳನ್ನು ಬೆಳೆಸುವ ಪಠ್ಯಗಳು ಕಂಡು ಬರುತ್ತದೆ. ಹೀಗಾಗಿ ಮುಂದಿನ ಅಧ್ಯಾಯದಲ್ಲಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಕುರಿತಂತೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಭಾಷೆ ಪಠ್ಯಪುಸ್ತಕದಲ್ಲಿ ರೂಪುಗೊಳಿಸುತ್ತಿರುವ ಸಾಮಾಜೀಕರಣದ ಸ್ವರೂಪವನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಶ್ರೀಮತಿ ಎಚ್.ಎಸ್. ೨೦೦೪, **ಹೆಣ್ಣು-ಹೆಂಗಸು,** ಪು. ೧೯.

೨. ಚ.ನ. ಶಂಕರರಾವ್, ೨೦೧೪, **ಸಮಾಜಶಾಸ್ತ್ರ ದರ್ಶನ,** ಪು. ೫೯೨.

೩. ಡಿ.ಕೆ. ಭಾರದ್ವಾಜ್, ೨೦೦೨, **ಸ್ಟ್ಯಾಂಡರ್ಡ್ ಡಿಕ್ಷನರಿ,** ಪು. ೩೮೬.

೪. ಪುರುಷೋತ್ತಮಚಾರ್, ೨೦೦೪, **ಡಿಕ್ಷನರಿ ಇಂಗ್ಲೀಷ್-ಕನ್ನಡ,** ಪು. ೩೩೨.

೫. ಚ.ನ. ಶಂಕರರಾವ್, ೨೦೧೪, **ಸಮಾಜಶಾಸ್ತ್ರ ದರ್ಶನ,** ಪು. ೫೯೧-೫೯೨.

೬ ಅದೇ, ಪು. ೫೯೩.

೭ ಅದೇ, ಪು. ೫೯೩.

೮. ಅದೇ, ಪು. ೫೯೩.

೯. ಅದೇ, ಪು. ೫೯೪.

೧೦. ಅದೇ, ಪು. ೫೯೪.

೧೧. ಅದೇ, ಪು. ೫೯೪.

೧೨. ಅದೇ, ಪು. ೫೯೪.

೧೩. ಸುಧಾ ಸೀತಾರಾಮನ್, ೨೦೧೦, **ಮಹಿಳಾ ಅಧ್ಯಯನ,** ಪು. ೧೩.

೧೪. ಅದೇ, ಪು. ೧೩.

೧೫. ಚ.ನ. ಶಂಕರರಾವ್, ೨೦೧೪, **ಸಮಾಜಶಾಸ್ತ್ರ ದರ್ಶನ,** ಪು. ೫೯೧.

೧೬. ಉದ್ಧೃತ: ಗೇಲ್ ಒಮನ್ ವೆತ್ತ್ ೧೯೯೩, ೪೧) ಬುಕ್ ಎಂಗೆಲ್ಸ್ (ಉದ್ಧೃತ), **ಸ್ತ್ರೀಯರ ಮೇಲಿನ ಹಿಂಸೆ,** ಗೇಲ್ ಒಮ್ ವೆತ್ತ, (ಸಂ) ಮನು ಚಕ್ರವರ್ತಿ, ೧೯೯೩, ಭಾರತೀಯ ಸ್ತ್ರೀವಾದ, ಅಕ್ಷರ ಪ್ರಕಾಶನ, ಹೆಗ್ಗೋಡು. ಪು. ೪೦.

೧೭. ಶ್ರೀಮತಿ ಎಚ್.ಎಸ್., ೨೦೦೪, **ಹೆಣ್ಣು ಹೆಂಗಸು,** ಪು. ೨೫.

೧೮. ಅದೇ, ಪು. ೨೬.

೧೯. ಅದೇ, ಪು. ೨೭.

೨೦. ಅದೇ, ಪು. ೨೭.

೨೧. ಮಹಾಬಲೇಶ್ವರ್‌ರಾವ್, ೨೦೧೯, **ಮಹಿಳಾ ಶಿಕ್ಷಣ,** ಪು. ೭೪-೭೫.

೨೨. ಅದೇ, ಪು. ೯೦.

೨೩. ಸುಧಾ ಸೀತಾರಾಮನ್, ೨೦೧೦, **ಮಹಿಳಾ ಅಧ್ಯಯನ,** ಪು. ೧೨.

೨೪. ಶೈಲಜಾ ಹಿರೇಮಠ, ೨೦೦೭, **ಮಹಿಳಾ ಅಧ್ಯಯನ, ಸಂಚಿಕೆ-೨, ಸಂಪುಟ-೯,** ಪು. ೧೦೮.

೨೫. ಶ್ರೀಮತಿ ಎಚ್.ಎಸ್., ೨೦೦೪, **ಹೆಣ್ಣು ಹೆಂಗಸು,** ಪು. ೧೮.

೨೬. ಲತಾ ಅಭಯ್(ಸಂ), ೨೦೦೭, **ಪುರಾಣ ಸ್ತ್ರೀವಾದ, ಮಹಿಳಾ ಅಧ್ಯಯನ ಸಂಚಿಕೆ, ಸಂಪುಟ-೯, ಸಂಚಿಕೆ-೧,** ಪು. ೧೨೦.

೨೭. ಶ್ರೀಮತಿ ಎಚ್.ಎಸ್., ೨೦೦೩, **ಸ್ತ್ರೀವಾದ,** ಪು. ೧೮.

೨೮. ಮನುಸ್ಮೃತಿ.

೨೯. ರೂಪ ಹಾಸನ, ೨೦೧೫, ಲೇಖನ, **ಹೆಣ್ಣು ಶಿರಿತನ ತಲ್ಲಣಗಳು,** ಪು. ೭೨.

೩೦. ಅದೇ, ಪು. ೭೩

◆ ◆ ◆

ಅಧ್ಯಾಯ : ಮೂರು

ಕನ್ನಡ ಭಾಷಾ ಪಠ್ಯಗಳಲ್ಲಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸ್ವರೂಪ

ಅಧ್ಯಾಯ : ಮೂರು

ಕನ್ನಡ ಭಾಷಾ ಪಠ್ಯಪುಸ್ತಗಳಲ್ಲಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸ್ವರೂಪ

ಪೀಠಿಕೆ

ಪಠ್ಯಪುಸ್ತಕಗಳು ಭಾಷೆಯನ್ನು ಮಾತ್ರ ಕಲಿಸದೇ ಮಕ್ಕಳಿಗೆ ಪ್ರೌಢಿಮೆ, ವಿಷಯಜ್ಞಾನ, ಲೋಕಜ್ಞಾನ, ಸಾಹಿತ್ಯಾಭಿರುಚಿ, ಪರಿಸರ ಜ್ಞಾನ, ಸಹಬಾಳ್ವೆ, ಸಾರ್ವಜನಿಕ ಸಂಪರ್ಕ, ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳಂತಹ ಸಾಮಾಜಿಕ ಅಂಶಗಳನ್ನು ಕಲಿಸಿಕೊಡುವ ಕೆಲಸ ಮಾಡುತ್ತವೆ. ಜೊತೆಗೆ ಮಕ್ಕಳ ಸರ್ವತೋಮುಖ ಅಭಿವೃದ್ಧಿ, ಜೀವನ ಮೌಲ್ಯಗಳನ್ನು ಬೆಳೆಸುವಂತಹ ಸಾಮಗ್ರಿಯಾಗಿವೆ. ಹೀಗಾಗಿ ಇವುಗಳಲ್ಲಿ ಅಡಕವಾಗಿರುವ ಸಾಮಾಜೀಕರಣ ಸ್ವರೂಪ ಮತ್ತು ಲಿಂಗಸಂಬಂಧಿ ನೆಲೆಗಳ ಕುರಿತು ಚಿಂತನ-ಮಂಥನ ಅಗತ್ಯವಿದೆ. ಜೊತೆಗೆ ಮಕ್ಕಳಲ್ಲಿ ಲಿಂಗಾಧಾರಿತ ಅಸಮಾನತೆಯನ್ನು ತೊಡೆದು ಹಾಕಿ, ಲಿಂಗ ಸಮಾನತೆಯ ಸಮಾಜವನ್ನು ಕಟ್ಟುವ ಗುರಿ ನಮ್ಮದಾಗಿರುವಾಗ ಪಠ್ಯಪುಸ್ತಕಗಳಲ್ಲಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆಯನ್ನು ರೂಪಿಸುವ ಅಂಶಗಳು ಹೇಗೆ ಪ್ರತಿನಿಧೀಕರಣಗೊಂಡಿವೆ ಎಂಬುದನ್ನು ಚರ್ಚಿಸುವ ಅಗತ್ಯ ಇದೆ. ಆದುದರಿಂದ ಪ್ರಸ್ತುತ ಅಧ್ಯಯನದ ಅಧ್ಯಾಯದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ಆಧರಿಸಿ ಹೆಣ್ಣು-ಗಂಡು ಮಕ್ಕಳಿಗೆ ಸಾಮಾಜೀಕರಣ ರೂಪಿಸುವಲ್ಲಿ ಕಾರಣವಾದ ಅಂಶಗಳನ್ನು ಇಲ್ಲಿ ಪರಿಶೀಲಿಸಿ ಚರ್ಚಿಸಲಾಗಿದೆ.

ಮುಖ್ಯವಾಗಿ ಶಾಲಾ ಪಠ್ಯಪುಸ್ತಕಗಳಲ್ಲಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆಗೆ ಕಾರಣವಾಗುವ ಸಂಗತಿಗಳನ್ನು ಚರ್ಚಿಸುವ ಪೂರ್ವದಲ್ಲಿ ಕೆಲವು ಕೇಳಿಕೊಳ್ಳಲೇಬೇಕಾದ ಪ್ರಶ್ನೆಗಳಿವೆ. ಅವುಗಳೆಂದರೆ, ಮಕ್ಕಳಲ್ಲಿ ಲಿಂಗ ಪೂರ್ವಗ್ರಹಿಕೆಗಳು ಬೆಳೆಯಬೇಕೆ? ಮತ್ತು ಲಿಂಗ ತಾರತಮ್ಯದಲ್ಲಿ ಬೆಳೆಯಬೇಕೆ? ಅಥವಾ ಹೆಣ್ಣಾಗಲಿ-ಗಂಡಾಗಲಿ ಲಿಂಗತ್ವ ಸೂಕ್ಷ್ಮತೆ (Gender Sensitivenss) ಹೊಂದಿದವರಾಗಿರಬೇಕಾಗಿಲ್ಲವೆ? ಸಾಮಾಜೀಕರಣ ರೂಪಿಸಿದ ಸ್ಥಿರಮಾದರಿ ಪಾತ್ರದಲ್ಲಿ (Sterotyep Roles) ಮಕ್ಕಳು (ಹೆಣ್ಣು-ಗಂಡು) ಮುಂದುವರೆಯಬೇಕಾ? ಎಂಬ ಪ್ರಶ್ನೆಗಳನ್ನು ನಾವು

ಕೇಳಿಕೊಳ್ಳಬೇಕಾಗಿದೆ. ಏಕೆಂದರೆ ಸಮಾಜದಲ್ಲಿ ಈಗಾಗಲೇ ಇರುವ ಲಿಂಗ, ಜಾತಿ, ವರ್ಗ, ವರ್ಣಗಳ ಸಾಮಾಜೀಕರಣ ಕಂಡುಬರುತ್ತಿದೆ ಜೊತೆಗೆ ಲಿಂಗತಾರತಮ್ಯ ಅಸಮಾನತೆ, ಹೆಣ್ಣು-ಗಂಡು ಮಕ್ಕಳ ಕುರಿತಾದ ಭಿನ್ನ ದೃಷ್ಟಿಕೋನ ಕಂಡು ಬರುತ್ತಿದೆ. ಹೀಗಾಗಿ ಎಳೆಯ ಹಂತದಲ್ಲಿ ಮಕ್ಕಳ ಔಪಚಾರಿಕ ಶಿಕ್ಷಣದ ಮೂಲಕ ದೊರೆತ ಸಾಮಾಜೀಕರಣ ಮಕ್ಕಳ ಬದುಕಿನುದ್ದಕ್ಕೂ ದೃಷ್ಟಿ ಮತ್ತು ಅವರ ನಡವಳಿಕೆಯನ್ನು ರೂಪಿಸುತ್ತದೆ. ಈ ಹಿನ್ನೆಲೆಯಿಂದಲೂ ಸಮಾಜದಲ್ಲಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆಯನ್ನು ಸೃಷ್ಟಿಸುವಲ್ಲಿ ಪಠ್ಯಪುಸ್ತಕಗಳ ಪಾತ್ರವಿದೆಯೇ ಎನ್ನುವುದನ್ನು ನೋಡಲಾಗಿದೆ.

೩.೧. ಪಠ್ಯಪುಸ್ತಕಗಳ ಸ್ವರೂಪ ಮತ್ತು ಅದರ ತಾತ್ವಿಕ ವಿಶ್ಲೇಷಣೆ

ಪಠ್ಯಪುಸ್ತಕಗಳ ಕುರಿತಂತೆ ಮೊದಲಿಗೆ ನೋಡುವುದಾದರೆ, ಪಠ್ಯಪುಸ್ತಕಗಳಲ್ಲಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಗುರಿಯನ್ನು ಸಾಧಿಸುವ, ಮಕ್ಕಳ ಜ್ಞಾನ ಮತ್ತು ಸೃಜನಶೀಲತೆಯನ್ನು ಹೆಚ್ಚಿಸುವ ಕೆಲಸ ದೃಷ್ಟಿಕೋನದಿಂದ ಪಠ್ಯಕ್ರಮವನ್ನು ರೂಪಿಸಲಾಗಿರುತ್ತದೆ. ಈ ಪಠ್ಯಕ್ರಮದ ಮೂಲಕ ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವೆ ಬೆಸುಗೆ ರೂಪುಗೊಂಡಿರುತ್ತದೆ. ಅದು ಹೇಗೆಂದರೆ ಪಠ್ಯಪುಸ್ತಕಗಳಿಂದ ವಿದ್ಯಾರ್ಥಿಗಳು ಏನನ್ನು ಮತ್ತು ಎಷ್ಟನ್ನು ಕಲಿಯಬೇಕಾದ ಸಂಗತಿಗಳಿವೆ ಎನ್ನುವುದನ್ನು ಈ ಪಠ್ಯಕ್ರಮ ತಿಳಿಸುತ್ತದೆ. ಇದರಿಂದ ಕೆಲವೊಮ್ಮೆ ಪಠ್ಯಕ್ರಮದ ಲೋಪದೋಷಗಳನ್ನು ತಿದ್ದಿ ಸರಿಪಡಿಸಿಕೊಳ್ಳುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತದೆ.

ಕಳೆದ ಹತ್ತು ವರ್ಷಗಳಿಂದೀಚೆಗೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಪಠ್ಯಪುಸ್ತಕಗಳಲ್ಲಿ ಆಮೂಲಾಗ್ರ ಬದಲಾವಣೆಯನ್ನು ಮಾಡಲಾಗುತ್ತಿದೆ. ಅದರಲ್ಲಿ ಕನ್ನಡ ಭಾಷಾ ಪಠ್ಯಪುಸ್ತಕವು ಸೇರಿದೆ. ಈ ಪಠ್ಯಪುಸ್ತಕಗಳಲ್ಲಿ ವಿಶೇಷವಾಗಿ ಮಕ್ಕಳ ಸೃಜನಶೀಲತೆಗೆ, ಮಕ್ಕಳಲ್ಲಿ ಶೈಕ್ಷಣಿಕ ಬೆಳವಣಿಗೆಗೆ ಪಠ್ಯೇತರ ವಿಷಯಗಳ ಮೂಲಕ ಶಿಸ್ತನ್ನು ರೂಪಿಸಬೇಕೆಂಬ ಆಶಯವನ್ನು ಇಟ್ಟುಕೊಂಡು ರಚನೆ ಮಾಡಿರುವುದು ಕಂಡುಬರುತ್ತದೆ. ಕನ್ನಡ ಪ್ರಾಥಮಿಕ ಮತ್ತು ಮಾಧ್ಯಮಿಕ ಪಠ್ಯಪುಸ್ತಕಗಳು ಅಕ್ಷರ ಜ್ಞಾನದ ಜೊತೆಗೆ ವ್ಯಕ್ತಿತ್ವ ಜೀವನ ಮೌಲ್ಯಗಳನ್ನು ರೂಪಿಸುವ ಸಾಮಗ್ರಿಗಳಾಗಿವೆ. ಪಠ್ಯಪುಸ್ತಕಗಳು ಕೇವಲ ಓದುವ ವಿಧಾನವನ್ನು ಕಲಿಸುವ ಉದ್ದೇಶವಾಗಿರದೆ ಜೊತೆಗೆ ಮಗುವಿನ (ಮಕ್ಕಳ) ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ರಚಿತವಾಗಿರುತ್ತವೆ. ನಾಡು, ನುಡಿ, ಭಾಷೆ, ರಾಷ್ಟ್ರ, ಸಮಾಜ, ಪರಿಸರ ಇತ್ಯಾದಿಗಳನ್ನು ಪರಿಚಯಿಸುವ ಪ್ರಯತ್ನ ಇದರಲ್ಲಿರುತ್ತದೆ. ಪಠ್ಯಪುಸ್ತಕದಲ್ಲಿ ಚಿತ್ರಗಳ ಮೂಲಕ ಬೋಧನೆ ಮಾಡಲಾಗುತ್ತದೆ. ಇದರಿಂದ ಮಕ್ಕಳಿಗೆ ನೋಡುವ, ಅರಿಯುವ, ಜೊತೆಗೆ ಸ್ಪಷ್ಟವಾದ ಕಲಿಕಾ ಸಾಮರ್ಥ್ಯಕ್ಕೆ ಕಾರಣವಾಗುವ ಅಂಶಗಳಿರುತ್ತವೆ. ನಿತ್ಯಜೀವನದಲ್ಲಿ ಬಳಕೆಯಲ್ಲಿರುವ ಹಾಗೂ ಪರಿಚಯವಾದ ಪದಗಳನ್ನು ಪ್ರಾರಂಭಿಕ, ಪ್ರಾಥಮಿಕ ಹಾಗೂ

ಮಾಧ್ಯಮಿಕ ಪಠ್ಯಗಳಲ್ಲಿ ಕಲಿಸಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪಠ್ಯಕ್ರಮದ ಉದ್ದೇಶ, ಗುರಿ, ಆಶಯ ಕುರಿತು ಹೇಳಿರುವುದು ದೊರೆಯುತ್ತದೆ.

ಪಠ್ಯಪುಸ್ತಕಗಳಲ್ಲಿ ರಚನೆಗೊಂಡ ಪಠ್ಯಕ್ರಮದ ಕುರಿತು ಅನೇಕ ಶಿಕ್ಷಣ ತಜ್ಞರು ಹಾಗೂ ಆಯೋಗಗಳ ವ್ಯಾಖ್ಯಾನಗಳ ಕುರಿತು ನೋಡೋಣ. ಶಿಕ್ಷಣದ ವಿಶ್ವಕೋಶದಲ್ಲಿ 'ಬ್ಲೊಂಡರ್' ಹೇಳಿರುವಂತೆ: "ಶಾಲಾ ಮಾರ್ಗದರ್ಶನದ ಮೂಲಕ ಒಬ್ಬ ವಿದ್ಯಾರ್ಥಿಯು ಪಡೆದುಕೊಳ್ಳುವ ಸಾವಿರ ಅನುಭವಗಳೇ ಪಠ್ಯಕ್ರಮವಾಗಿದೆ."[೧] ಮಾಧ್ಯಮಿಕ ಶಿಕ್ಷಣ ಆಯೋಗ ಹೇಳಿರುವಂತೆ: "ಪಠ್ಯಕ್ರಮವೆಂದರೆ ಕಲಿಯುವವರು ಪಡೆದುಕೊಳ್ಳುವ ವಿವಿಧ ಪ್ರಕಾರಗಳ ಅನುಭವಗಳ ಸಮಗ್ರ ವಿಷಯಗಳ ಸಮೂಹ".[೨] ಕೋಠಾರಿ ಆಯೋಗ ಹೇಳಿರುವಂತೆ: "ಆಧುನಿಕ ಶೈಕ್ಷಣಿಕ ವೈಚಾರಿಕತೆಯೇ ಪಠ್ಯಕ್ರಮವು ಕೇವಲ ಶಾಲೆಗಳಲ್ಲಿ ಶೈಕ್ಷಣಿಕ ವಿಷಯಗಳನ್ನು ಸಾಂಪ್ರಾದಾಯಕ ರೀತಿಯಲ್ಲಿ ಬೋಧಿಸುವುದು ಆಗಿರದೇ ಅದು ಶಾಲೆಗಳಲ್ಲಿ ಜರುಗುವ ವೈವಿಧ್ಯಮಯ ಚಟುವಟಿಕೆಗಳ ಮುಖಾಂತರ ಮಗು ಪಡೆದುಕೊಳ್ಳುವ ಸಮಗ್ರ ಅನುಭಗಳ ಸಮೂಹವಾಗಿದೆ".[೩] ಜಾನ್ ಡ್ಯೂಯಿ ಹೇಳಿರುವಂತೆ: "ಪಠ್ಯಕ್ರಮದ ಕಲಿಯುವಿಕೆಯ ವಿಷಯವು ಕ್ರಿಯೆಯ ಅವಿರತ ಬೆಂಬತ್ತುವಿಕೆಯಲ್ಲಿ ಬರುವ ಆಶ್ರಯ ಇಲ್ಲವೇ ಅಡೆತಡೆಗಳ ಆದರ್ಶ ಮತ್ತು ತತ್ವಗಳಿಗೆ ಸಮವಾಗಿರುತ್ತದೆ".[೪] ಜಾನ್ಸನ್: "ಉದ್ದೇಶಿತ ಕಲಿಕೆಯ ಫಲಿತಗಳ ವ್ಯವಸ್ಥಿತ ಸರಣಿಯೇ ಪಠ್ಯಕ್ರಮ ಈ ವ್ಯಾಖ್ಯೆಯ ಕಲಿಕೆಯ ಫಲಿತಗಳಿಗೆ ಮಹತ್ವ ನೀಡುತ್ತದೆ. ಕಲಿಕೆಯ ಅನುಭವಗಳಲ್ಲಿ ಈ ಫಲಿತಗಳಿಗೂ, ಉದ್ದೇಶಗಳಿಗೂ ಸಂಬಂಧವಿದೆ."[೫] ಈ ಮೇಲಿನ ವ್ಯಾಖ್ಯಾನಗಳಲ್ಲಿ ದೊರೆಯುವ ಮಾಹಿತಿಯನ್ನು ಗಮನಿಸಿದಾಗ, ಪಠ್ಯಕ್ರಮ ವಿಶಾಲವಾದುದೆಂದು ತಿಳಿಯುತ್ತದೆ. ಶಾಲಾ ಪಠ್ಯಕ್ರಮವು ಕೇವಲ ತರಗತಿಯಲ್ಲಿ ಓದಬೇಕಾದ ಒಂದೇ ವಿಷಯಕ್ಕೆ ಸಂಬಂಧಿಸಿರದೇ ಅದು ಒಬ್ಬ ವಿದ್ಯಾರ್ಥಿಯ (ಮಗುವಿನ) ಸಂಪೂರ್ಣ ವ್ಯಕ್ತಿತ್ವ ವಿಕಾಸಕ್ಕೆ ಅನುಕೂಲವಾಗುವ ಎಲ್ಲಾ ವಿಷಯಗಳನ್ನು ಒಳಗೊಂಡು ಸಮನಾಂತರವಾಗಿ ರಚನೆಯಾಗಿರುತ್ತದೆ. ಆದ್ದರಿಂದ ಪಠ್ಯಕ್ರಮ ಕಲಿಸುವವನಿಗೆ ಮತ್ತು ಕಲಿಯುವವರಿಗೆ ಮಾರ್ಗದರ್ಶಿಯಾಗಿರುತ್ತದೆ ಎಂಬುದು ಈ ಮೇಲಿನ ವಿದ್ವಾಂಸರ, ಆಯೋಗಗಳ ವ್ಯಾಖ್ಯಾನಗಳಿಂದ ತಿಳಿದು ಬರುತ್ತದೆ.

ಪಠ್ಯಕ್ರಮವು ಬೋಧನೆ ಕಲಿಕೆಯು ಶಿಕ್ಷಣದ ಗುರಿಗಳನ್ನು ಗಮನಿಸಿ ವ್ಯಕ್ತಿಯ ವೈಯಕ್ತಿಕ ಮತ್ತು ಸಾಮಾಜಿಕ ಅವಶ್ಯಕತೆಗಳನ್ನು ಕ್ರೋಢೀಕರಿಸಿ ರಚಿಸಲಾಗಿರುತ್ತದೆ. ಕಾಲಕಾಲಕ್ಕೆ ಬದಲಾದ ಪರಿಸ್ಥಿತಿಗಳಿಗೆ ಅನುಗುಣವಾಗಿ ಪಠ್ಯಕ್ರಮ ರಚಿಸಲಾಗುತ್ತದೆ ಮತ್ತು ಈ ಮೇಲೆ ಹೇಳಿರುವ ವಿದ್ವಾಂಸರು, ಆಯೋಗಗಳ ಹೇಳಿಕೆಯ ಪ್ರಕಾರ ಪಠ್ಯಕ್ರಮವೆಂದರೆ ಶಿಕ್ಷಣದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಲಭಿಸುವ ಅನುಭವಗಳ ಮೊತ್ತವಾಗಿದೆ. ಪಠ್ಯಕ್ರಮದಲ್ಲಿ ಶೈಕ್ಷಣಿಕ ಚಟುವಟಿಕೆಯನ್ನು,

ಜ್ಞಾನವನ್ನು, ವಾಸ್ತವಿಕತೆಯ ಮನೋಭಾವವನ್ನು ಸೇರಿಸಲಾಗಿರುತ್ತದೆ ಜೊತೆಗೆ ಬೋಧನೆಗಳ ಸಂದರ್ಭದಲ್ಲಿ ಪ್ರಾಯೋಗಿಕ ಪಾಠಗಳ ಮೂಲಕ ಹೇಳಿಕೊಡಲು ಶಿಕ್ಷಣ ವ್ಯವಸ್ಥೆಯ ಯೋಜನೆಗಳನ್ನು ರೂಪಿಸಲಾಗುತ್ತದೆ ಎಂದು ಆಧರಿಸಿ ಅಧ್ಯಯನಕ್ಕೆ ತೊಡಗಿದರೆ ಪಠ್ಯಪುಸ್ತಕಗಳಲ್ಲಿ ದೊರೆಯುವ ಮಾಹಿತಿ ಭಿನ್ನವಾಗಿದೆ. ಅದೇನೆಂದರೆ, ಹೆಣ್ಣು-ಗಂಡು ಮಕ್ಕಳಲ್ಲಿ ನಡೆದುಕೊಳ್ಳಬೇಕಾದ ವರ್ತನೆ ಭಿನ್ನವಾಗಿರಬೇಕು, ಸಮಾಜದಲ್ಲಿ ವಿರುದ್ಧ ಪಾತ್ರಗಳನ್ನು ನಿರ್ವಹಿಸಬೇಕು, ಲಿಂಗಾಧಾರಿತ ಶ್ರಮವಿಭಜನೆ ಹೊಂದಿರಬೇಕು, ಹೆಣ್ಣು ಕನಿಷ್ಠ, ಗಂಡು ಶ್ರೇಷ್ಠ, ಹೆಣ್ಣು-ಗಂಡು ಸಮವಲ್ಲ, ಪರಸ್ಪರ ಸಾಮಾಜಿಕವಾಗಿ ವಿರುದ್ಧವಾಗಿರಬೇಕು ಎಂಬ ಅನೇಕ ಶ್ರೇಣೀಕರಣದ ಅಂಶಗಳು ಕನ್ನಡ ಪ್ರಾಥಮಿಕ ಹಾಗೂ ಮಾಧ್ಯಮಿಕ ಪಠ್ಯಪುಸ್ತಕಗಳಲ್ಲಿ ಇಂದಿಗೂ ಕಂಡು ಬರುತ್ತದೆ. ಇದರಿಂದಾಗಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ರೂಪಿಸುವಲ್ಲಿ ಈ ಅಂಶಗಳು ಕಾರಣವಾಗಿವೆ. ಅವು ಹೇಗಿವೆ ಎಂಬುದನ್ನು ತಿಳಿದುಕೊಳ್ಳಲು ಐದು ರೀತಿಯಲ್ಲಿ ವರ್ಗೀಕರಿಸಿಕೊಂಡು ಪಠ್ಯಪುಸ್ತಕದಲ್ಲಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆ ಸಂಗತಿಗಳನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೧. ಪಠ್ಯ ರಚನಾ ಸಮಿತಿ ಹೆಣ್ಣು-ಗಂಡುಗಳ ಪ್ರತಿನಿಧೀಕರಣದ ನೆಲೆಯ ಸಾಮಾಜೀಕರಣ.

೨. ಪಠ್ಯ ಆಯ್ಕೆಯಲ್ಲಿನ ಹೆಣ್ಣು-ಗಂಡು ಸಂಖ್ಯಾನೆಲೆಯ ಸಾಮಾಜೀಕರಣ.

೩. ಪಠ್ಯದಲ್ಲಿ ಹೆಣ್ಣುಮಕ್ಕಳು ನಿರ್ವಹಿಸುವ ಪಾತ್ರಗಳ ನೆಲೆಯ ಸಾಮಾಜೀಕರಣ.

೪. ಪಠ್ಯದಲ್ಲಿ ಹೆಣ್ಣುಮಕ್ಕಳ ಚಿತ್ರಗಳು ಬಿಂಬಿಸುವ ಅರ್ಥದ ನೆಲೆಯ ಸಾಮಾಜೀಕರಣ.

೫. ಪಠ್ಯದಲ್ಲಿ ಹೆಣ್ಣುಮಕ್ಕಳ ಕುರಿತಂತೆ ಪಠ್ಯದಲ್ಲಿ ವ್ಯಕ್ತವಾಗುವ ಭಾಷಾ ನೆಲೆಯ ಸಾಮಾಜೀಕರಣ.

೩.೨. ಪಠ್ಯ ರಚನಾ ಸಮಿತಿ ಹೆಣ್ಣು-ಗಂಡುಗಳ ಪ್ರತಿನಿಧೀಕರಣದ ನೆಲೆಯ ಸಾಮಾಜೀಕರಣ

ಮೊದಲಿಗೆ ೧ ರಿಂದ ೮ನೇ ತರಗತಿ ಪಠ್ಯಪುಸ್ತಕದ ರಚನಾ ಸಮಿತಿಯಲ್ಲಿ ಹೆಣ್ಣು-ಗಂಡು ಪ್ರತಿನಿಧೀಕರಣದ ನೆಲೆಯನ್ನು ನೋಡಿದರೆ, ಪುರುಷ ಪ್ರಧಾನ ಸಾಮಾಜೀಕರಣ ಪಠ್ಯಪುಸ್ತಕದ ಮೇಲೆ ಹೇಗೆ ಪರಿಣಾಮ ಬೀರಿದೆ ಎನ್ನುವುದು ತಿಳಿದು ಬರುತ್ತದೆ. ಏಕೆಂದರೆ ಪಠ್ಯಪುಸ್ತಕವನ್ನು ರಚಿಸುವ ಮತ್ತು ಪಠ್ಯಗಳನ್ನು ಪಠ್ಯಕ್ರಮಕ್ಕೆ ಸೇರಿಸುವ ಮನಸುಗಳು ಮತ್ತು ದೃಷ್ಟಿಕೋನ ಇಲ್ಲಿ ಕೆಲಸ ಮಾಡಿರುತ್ತದೆ. ಈ ಮನಸುಗಳಲ್ಲಿ ಲಿಂಗ ಸೂಕ್ಷ್ಮತೆಗಳು ಇಲ್ಲದೇ ಹೋದರೆ ಇಡೀ ಪಠ್ಯದ ವಿಷಯ ವಸ್ತುಗಳು ಪುರುಷಪ್ರಧಾನ ಸಮಾಜವನ್ನು ಪ್ರತಿನಿಧಿಸುತ್ತವೆ. ಹೀಗಾಗಿ ಮೊದಲಿಗೆ ಕನ್ನಡ ಪ್ರಾಥಮಿಕ ಮತ್ತು ಮಾಧ್ಯಮಿಕ ತರಗತಿಗಳ ಕನ್ನಡ ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಹೆಣ್ಣು-ಗಂಡುಗಳ ಪ್ರತಿನಿಧೀಕರಣ ನೆಲೆಯ ಸಾಮಾಜೀಕರಣದ ಸಂಗತಿಯನ್ನು ಮೊದಲು ಚರ್ಚಿಸಲಾಗಿದೆ. ಪಠ್ಯಪುಸ್ತಕದ ಮೊದಲಿಗೆ ಈ ರೀತಿಯಾಗಿ ದೊರೆಯುತ್ತದೆ.

“೨೦೦೫ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದಲ್ಲಿ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕ ರಚನೆ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತದೆ. ೧ ರಿಂದ ೫ನೇ ತರಗತಿವರೆಗೆ ಕನ್ನಡ ಭಾಷಾ, ಪರಿಸರ ಅಧ್ಯಯನ, ಗಣಿತ ಮತ್ತು ೬ ರಿಂದ ೧೦ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ”[೬] ಎಂದು ಹೇಳಿರುವುದು ದೊರೆಯುತ್ತದೆ. ಹೀಗಾಗಿ ಇವುಗಳಲ್ಲಿ ಕನ್ನಡ ಭಾಷೆಯ ಪಠ್ಯ ಪುಸ್ತಕಗಳಿಗೆ ಸಂಬಂಧಿಸಿದಂತೆ, ಪಠ್ಯಪುಸ್ತಕ ಪರಿಷ್ಕರಣ ಪೂರ್ವದಲ್ಲಿನ ೧ ರಿಂದ ೮ನೇ ತರಗತಿಯವರೆಗೆ ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಹೆಣ್ಣು-ಗಂಡುಗಳ ಪ್ರತಿನಿಧೀಕರಣದ ನೆಲೆಯ ಸಾಮಾಜೀಕರಣ ನೋಡಿದರೆ ಈ ಮುಂದಿನಂತೆ ನೋಡಬಹುದು.

ಕೋಷ್ಟಕ–೧

ಕನ್ನಡ ಭಾಷಾ ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಹೆಣ್ಣು–ಗಂಡುಗಳ ಪ್ರತಿನಿಧಿತ್ವದ ಸಾಮಾಜೀಕರಣ

ಕ್ರ.ಸಂ.	ತರಗತಿ	ಅಧ್ಯಕ್ಷರು		ಸದಸ್ಯರು		ಪರಿಶೀಲಕರು		ಸಲಹೆ ಮಾರ್ಗದರ್ಶನ		ಮುಖ್ಯ ಕಾರ್ಯಕ್ರಮ ಸಂಯೋಜಕರು		ಸಂಪಾದಕೀಯ ಮಂಡಳಿ		ವರ್ಷ
		ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
೧	೧ನೇ	–	–	–	–	–	–	–	–	–	–	–	–	೨೦೧೮ &೧೯
೨	೨ನೇ	–	–		–	–	–	೦	೧	೦	೧	೧	೩	೨೦೧೯
೩	೩ನೇ	೦	೧	೧	೩	೦	೧	೧	೧	೦	೧	೦	೫	೨೦೧೯
೪	೪ನೇ	೦	೧	೨	೩	೦	೧	೧	೧	೦	೧	೦	೫	೨೦೧೯ & ೧೬
೫	೫ನೇ	೦	೧	೨	೪	೦	೧	೧	೧	೦	೧	೦	೩	೨೦೧೮ & ೧೬
೬	೬ನೇ	೦	೧	೧	೫	೦	೧	೧	೧	೦	೧	೦	೫	೨೦೧೬ & ೧೭ & ೧೯
೭	೭ನೇ	೦	೧	೧	೪	೦	೧	೧	೧	೦	೧	೦	೫	೨೦೧೬ & ೧೮ & ೧೯
೮	೮ನೇ	೦	೧	೦	೬	೦	೧	೦	೨	೦	೧	೦	೩	೨೦೧೨ & ೧೮
ಒಟ್ಟು		೦	೬	೭	೨೫	೦	೬	೫	೮	೦	೭	೧	೨೯	

ಆಧಾರ: ೧ ರಿಂದ ೮ನೇ ತರಗತಿ ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ರಚನಾ ಸಮಿತಿ ದಾಖಲಾತಿಯನ್ನು ಆಧರಿಸಿ.

ಪ್ರಾಥಮಿಕ ಮತ್ತು ಮಾಧ್ಯಮಿಕ ಕನ್ನಡ ಪಠ್ಯ ಪುಸ್ತಕಗಳ ರಚನಾ ಸಮಿತಿಯಲ್ಲಿ ಸದಸ್ಯರ ಹೆಣ್ಣು-ಗಂಡುಗಳ ಪ್ರತಿನಿಧಿತ್ವ ಸಾಮಾಜೀಕರಣ ನೋಡಿದರೆ, ಪುರುಷಪ್ರಧಾನ ಸಾಮಾಜೀಕರಣ ಸ್ಪಷ್ಟವಾಗಿ ಕಂಡುಬರುತ್ತದೆ. ಎಲ್ಲಿಯೂ ಲಿಂಗ ಸಮಾನತೆಯ ಸಾಮಾಜೀಕರಣ ಕಂಡುಬರುವುದಿಲ್ಲ. ಆಧುನಿಕ ಸಮಾಜದಲ್ಲಿ ಲಿಂಗ ಸಮಾನತೆಯ ಕುರಿತಾಗಿ ಮಾತನಾಡಿದ್ದರೂ, ಪ್ರತಿನಿಧಿತ್ವಗೊಳ್ಳುವಾಗ ಪುರುಷ ಸಾಮಾಜೀಕರಣ ಇರುವುದು ಕಂಡುಬರುತ್ತದೆ. ೧ ರಿಂದ ೮ನೇ ತರಗತಿ ಪಠ್ಯಪುಸ್ತಕ ರಚನಾ ಸಮಿತಿ ಅಧ್ಯಕ್ಷರೆಲ್ಲ ಶೇ. ೧೦೦ರಷ್ಟು ಪುರುಷರೇ ಆಗಿದ್ದಾರೆ. ಸದಸ್ಯರಲ್ಲಿ ಮಹಿಳೆಯರು ೭ ಜನ ಶೇ. ೨೧ರಷ್ಟು ಪುರುಷರು ೨೫ ಜನ ಶೇ. ೭೮ರಷ್ಟು ಇನ್ನೂ ಪರಿಶೀಲಕರಲ್ಲಿ ಶೇ. ೧೦೦ರಷ್ಟು ಪುರುಷರೇ ಇದ್ದಾರೆ. ಸಲಹೆ ಮತ್ತು ಮಾರ್ಗದರ್ಶಕರಲ್ಲಿ ಮಹಿಳೆಯರು ಒಟ್ಟು ೫ ಜನ, ಶೇ. ೪೧ರಷ್ಟು ಪುರುಷರು, ಒಟ್ಟು ೮ ಜನ ಶೇ. ೬೬ರಷ್ಟು ಮುಖ್ಯ ಕಾರ್ಯಕ್ರಮ ಸಂಯೋಜಕರಲ್ಲಿ ಪುರುಷರ ಪ್ರಮಾಣ ಶೇ. ೧೦೦ರಷ್ಟಿದೆ. ಕೊನೆಯದಾಗಿ ಪಠ್ಯಪುಸ್ತಕ ಸಂಪಾದಕೀಯ ಮಂಡಳಿಯಲ್ಲಿ ಮಹಿಳೆಯರ ಒಟ್ಟು ೧; ಶೇ. ೩.೪೪ರಷ್ಟು ಪುರುಷರು ಒಟ್ಟು ೨೪ ಶೇ. ೯೬.೬೬ರಷ್ಟು ಪುರುಷರಿದ್ದಾರೆ. ಕನ್ನಡ ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಹೆಣ್ಣುಮಕ್ಕಳ ಪ್ರತಿನಿಧಿತ್ವ ಪ್ರಮಾಣ ಎಲ್ಲಾ ಹಂತಗಳಲ್ಲಿ ಅತಿ ಕಡಿಮೆ ಆದರೆ ಪುರುಷರ ಪ್ರತಿನಿಧಿತ್ವ ಪ್ರಮಾಣ ಹೆಚ್ಚಾಗಿರುವುದು ಕಂಡುಬರುತ್ತದೆ. ಹೀಗಿರುವಾಗ ಹೆಣ್ಣು-ಗಂಡಿನ ಸಾಮಾಜೀಕರಣದ ಲಿಂಗ ಸಂಬಂಧಿ ಅಧ್ಯಯನದಲ್ಲಿ ಹೆಚ್ಚು ಪುರುಷ ಸಾಮಾಜೀಕರಣ ಕೆಲಸ ಮಾಡಿದೆ ಎನ್ನುವುದು ಸ್ಪಷ್ಟವಾಗುತ್ತದೆ.

ಇನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ (೧ ರಿಂದ ೮ನೇ ತರಗತಿಯವರೆಗೆ) ಕನ್ನಡ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಗಳ ವಿವರಗಳಲ್ಲಿ ಹೆಣ್ಣು-ಗಂಡಿನ ಪ್ರತಿನಿಧೀಕರಣ ವಿವರಗಳನ್ನು ನೋಡಿದರೆ ಈ ಕೆಳಕಂಡಂತೆ ದೊರೆಯುತ್ತದೆ.

ಕೋಷ್ಟಕ-೨

ಕನ್ನಡ ಭಾಷಾ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಗಳಲ್ಲಿ ಹೆಣ್ಣು-ಗಂಡಿನ ಪ್ರತಿನಿಧೀಕರಣ

ಕ್ರಸಂ	ತರಗತಿ	ಸರ್ವಾಧ್ಯಕ್ಷರು/ ಅಧ್ಯಕ್ಷರು		ಪರಿಷ್ಕರಣ ಸಮಿತಿ ಸದಸ್ಯರು		ಉನ್ನತ ಪರಿಶೀಲನಾ ಸಮಿತಿ		ಸಲಹೆ ಮಾರ್ಗದರ್ಶಕರು		ವರ್ಷ
		ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
೧	೧ನೇ	–	–	–	–	–	–	–	–	೨೦೧೮ & ೧೯
೨	೨ನೇ	–	–		–	–	–	೦		೨೦೧೯
೩	೩ನೇ	೦	೧	೧	೮	೨	೬	೦	೨	೨೦೧೯
೪	೪ನೇ	೦	೧	೧	೮	೨	೬	೦	೨	೨೦೧೯
೫	೫ನೇ	೦	೧	೧	೮	೨	೬	೧	೧	೨೦೧೮
೬	೬ನೇ	೦	೧	೧	೮	೨	೬	೧	೧	೨೦೧೭ & ೧೯ ೨೦೧೯ರಲ್ಲಿ ಬದಲಿಸಿದೆ ಸದಸ್ಯರನ್ನು ಮಾತ್ರ
೭	೭ನೇ	೦	೧	೧	೮	೨	೬	೦	೨	೨೦೧೮ & ೧೯
೮	೮ನೇ	೦	೧	೧	೮	೨	೬	೧	೧	೨೦೧೮
	ಒಟ್ಟು	೦	೬	೬	೪೮	೧೨	೩೬	೩	೯	

ಆಧಾರ: ೧ ರಿಂದ ೮ ನೇ ತರಗತಿ ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ರಚನಾ ಸಮಿತಿ ದಾಖಲಾತಿಯನ್ನು ಆಧರಿಸಿ.

ಪ್ರಾಥಮಿಕ ಮತ್ತು ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳ ಪರಿಷ್ಕರಣಾ ಸಮಿತಿಯಲ್ಲಿ ಲಿಂಗ ಸಮಾನ ಸಾಮಾಜೀಕರಣ ಕೊರತೆ ಇರುವುದು ಕಂಡು ಬರುತ್ತದೆ. ಇತ್ತೀಚೆಗೆ ರಚನೆಗೊಂಡ ಸಮಿತಿಯಲ್ಲಿ ಕೂಡ ಹೆಣ್ಣಿನ ಪ್ರತಿನಿಧೀಕರಣ ಎಲ್ಲ ಹಂತಗಳಲ್ಲಿ ಕಡಿಮೆ ಇದೆ. ಪರಿಷ್ಕರಣ ಸಮಿತಿಯಲ್ಲಿ ಸರ್ವಾಧ್ಯಕ್ಷರು/ಅಧ್ಯಕ್ಷರಲ್ಲಿ ಶೇ. ೧೦೦ರಷ್ಟು ಪುರುಷರಿದ್ದಾರೆ. ಪರಿಷ್ಕರಣ ಸಮಿತಿ ಸದಸ್ಯರಲ್ಲಿ ಮಹಿಳೆ ಪ್ರತಿನಿಧಿತ್ವ ಒಟ್ಟು ೬ ಜನ (ಶೇ. ೧೧ರಷ್ಟು) ಪುರುಷರು ಒಟ್ಟು ೪೮ ಜನ (ಶೇ. ೮೯ರಷ್ಟು) ಉನ್ನತ ಪರಿಶೀಲನಾ ಸಮಿತಿಯಲ್ಲಿ ಮಹಿಳೆಯರು ಒಟ್ಟು ೧೨ ಜನ (ಶೇ. ೨೫ರಷ್ಟು) ಪುರುಷರು, ಒಟ್ಟು ೩೬ ಜನ (ಶೇ. ೭೫ರಷ್ಟು) ಸಲಹೆ ಮತ್ತು ಮಾರ್ಗದರ್ಶಕರದಲ್ಲಿ ಮಹಿಳೆಯರು ೩ ಜನ (ಶೇ. ೨೫ರಷ್ಟು) ಪುರುಷರು ಒಟ್ಟು ೯ ಶೇ. ೭೫ರಷ್ಟು ಇರುವುದು ಕಂಡುಬರುತ್ತದೆ. ಇಲ್ಲಿ ಪುರುಷ ಪ್ರಧಾನ ಸಾಮಾಜೀಕರಣ ಪ್ರಧಾನವಾಗಿರುವುದು ಕಂಡು ಬರುತ್ತದೆ. ಹೀಗಿರುವಾಗ ಮಕ್ಕಳ ಸಾಮಾಜೀಕರಣ ರೂಪಿಸುವಲ್ಲಿ ಹೆಚ್ಚಾಗಿ ಪ್ರಭಾವ ಬೀರುವುದು ಪುರುಷ ಸಾಮಾಜೀಕರಣವಾಗಿದೆ. ಈ ಸಮಿತಿ ಬಹುಪಾಲು ಒಳಗೊಂಡಿರುವುದು ಪುರುಷ ದೃಷ್ಟಿಕೋನ ಮತ್ತು ಪುರುಷ ಸಾಮಾಜಿಕ ಪರಿಸರ. ಏಕೆಂದರೆ ಬಹುತೇಕ ಪ್ರಮಾಣದಲ್ಲಿ ಪುರುಷರೇ ಪಠ್ಯದ ಪರಿಷ್ಕರಣ ಸಮಿತಿಯಲ್ಲಿರುವುದು ಮತ್ತು ಮಹಿಳೆಯರನ್ನು ನಾಮ ನಿರ್ದೇಶನದ ರೀತಿಯಲ್ಲಿ ಹಾಕಿಕೊಂಡಿರುವಂತೆ ಕಂಡು ಬರುತ್ತದೆ. ಇದಕ್ಕೆ ಸಾಕ್ಷಿಯಂತೆ ಪಠ್ಯಪುಸ್ತಕದಲ್ಲಿ ಅಳವಡಿಸಿಕೊಂಡಿರುವ ಲೇಖಕರ ಪಠ್ಯಗಳನ್ನು ಪರಿಶಿಲಿಸಿದರೆ ತಿಳಿದು ಬರುತ್ತದೆ. ಹೀಗಾಗಿ ಮುಂದಿನ ಚರ್ಚೆಯಲ್ಲಿ ಪಠ್ಯ ಆಯ್ಕೆಯಲ್ಲಿ ಹೆಣ್ಣು-ಗಂಡು ಸಂಖ್ಯಾನೆಲೆಯ ಸಾಮಾಜೀಕರಣವನ್ನು ನೋಡಲಾಗಿದೆ.

೩.೩. ಪಠ್ಯ ಆಯ್ಕೆಯಲ್ಲಿನ ಹೆಣ್ಣು-ಗಂಡು ಸಂಖ್ಯಾ ನೆಲೆಯ ಸಾಮಾಜೀಕರಣ

೧ರಿಂದ ೧೦ನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮುಖ್ಯಮಂತ್ರಿಗಳಾಗಿದ್ದ ಸಿದ್ಧರಾಮಯ್ಯನವರು ತಮ್ಮ ೨೦೧೪-೧೫ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಕುರಿತು ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು. "ಪಠ್ಯಪುಸ್ತಕಗಳು ಸಾಮಾಜಿಕ ಸಾಮರಸ್ಯ, ನೈತಿಕ ಮೌಲ್ಯಗಳು, ವ್ಯಕ್ತಿತ್ವ ವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವನೆ, ಜಾತ್ಯಾತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್‌ರಚಿಸಲಾಗುವುದು"[೭] ಎಂದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯದಂತೆ ೧ ರಿಂದ ೧೦ನೇ ತರಗತಿಯವರೆಗೆ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ ೨೪-೧೧-೨೦೧೪ರ ಆದೇಶ ನೀಡಲಾಯಿತು. ಇದಕ್ಕೆ ಅನುಗುಣವಾಗಿ ಅಗತ್ಯವಿದ್ದಲ್ಲಿ ಪುನರ್‌ರಚಿಸುವ ಸ್ವಾತಂತ್ರ್ಯವನ್ನು ನೀಡಲಾಯಿತು. ೨೦೧೬-೧೭ರ ಬದಲು ೨೦೧೭-೧೮ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಪರಿಷ್ಕರಣೆಗೊಂಡ ಪುಸ್ತಕಗಳನ್ನು ಜಾರಿಗೊಳಿಸಲಾಯಿತು.

ಪಠ್ಯಪುಸ್ತಕ ಪರಿಷ್ಕರಣೆ ಕುರಿತಂತೆ ಹೇಳಿರುವ ಮಾಹಿತಿಗಳಲ್ಲಿ ಅನೇಕ ವ್ಯಕ್ತಿಗಳಿಗೂ, ಸಂಘಟನೆಗಳಿಗೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿ ದೋಷ, ಆಶಯ ದೋಷಗಳನ್ನು ಪಟ್ಟಿ ಮಾಡಿ ಶಿಕ್ಷಣ ಸಚಿವರಿಗೆ ಕಳುಹಿಸಿ ಅವುಗಳನ್ನು ಪರಿಶೀಲನೆ ಮಾಡಿದ್ದಲ್ಲದೆ, ಪ್ರಾಥಮಿಕ ಮತ್ತು ಪ್ರೌಢ ಶಾಲಾ ಆಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ, ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ನೀಡಿ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರ ವಿಷಯ ಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದ ಕಡೆ ಪರಿಷ್ಕರಿಸಲಾಗಿದೆ ಎಂದು ಹೇಳಿರುವುದು (ಪಠ್ಯಪುಸ್ತಕದ) ಪರಿಷ್ಕರಣೆ ಕುರಿತು ಮಾತುಗಳಲ್ಲಿ ದೊರೆಯುತ್ತದೆ.

ಪರಿಷ್ಕರಣೆ ಕುರಿತು ಕೊನೆಯ ಮಾತುಗಳಲ್ಲಿ ಪಠ್ಯಪುಸ್ತಕಗಳ ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆ ಅಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ ಶಾಸ್ತ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆ ನಡೆದಿವೆ(೧ರಿಂದ ೧೦ನೇ ತರಗತಿ ಪಠ್ಯಪುಸ್ತಕಗಳ ಪರಿಷ್ಕರಣೆ ಕುರಿತು ಎನ್ನುವ ಪ್ರತಿಗಳಿಂದ) ಎಂದು ತಿಳಿಸಲಾಯಿತು. ಈ ಪರಿಷ್ಕರಣೆ ಕುರಿತು ನೀಡಿರುವ ಆಶಯದ ಹಿನ್ನೆಲೆಯಲ್ಲಿ ಪಠ್ಯಪುಸ್ತಕಗಳಲ್ಲಿ ಅಳವಡಿಸಿಕೊಂಡಿರುವ ಮಹಿಳಾ ಕೃತಿಕಾರರ ಸಂಖ್ಯೆಯ ಪ್ರಮಾಣವನ್ನು ನೋಡಿದರೆ ಪುರುಷ ಪ್ರಧಾನ ಸಾಮಾಜೀಕರಣ ಎದ್ದು ಕಂಡು ಬರುತ್ತಿದೆ. ಇದಕ್ಕೆ ಕೆಳಕಂಡ ಕೋಷ್ಟಕದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಪಠ್ಯಗಳಲ್ಲಿನ ಮಹಿಳಾ ಪ್ರತಿನಿಧೀಕರಣ ಗಮನಿಸಿದರೆ ತಿಳಿದು ಬರುತ್ತದೆ.

ಕೋಷ್ಟಕ–೩

ಪ್ರಾಥಮಿಕ ಹಾಗೂ ಮಾಧ್ಯಮಿಕ ಪಠ್ಯಗಳಲ್ಲಿ ಮಹಿಳಾ ಪ್ರತಿನಿಧೀಕರಣ

ಕ್ರಸಂ.	ತರಗತಿ	ಪರಿವಿಡಿ ಯಲ್ಲಿರುವುದು ಒಟ್ಟು ಪಾಠ	ಗದ್ಯಭಾಗ ಕೃತಿಕಾರರು		ಪದ್ಯಭಾಗ ಕೃತಿಗಾರರು			ಪೂರಕ ಪಾಠಗಳು	ಪರಿಷ್ಕರಣದಲ್ಲಿ ಸೇರಿಸಲಾಗಿದೆ.
			ಹೆಣ್ಣು	ಗಂಡು	ಹೆಣ್ಣು	ಗಂಡು	ಸಮಿತಿ ರಚನೆ		
೧	೧ನೇ		–	–	–	–	–	–	–
೨	೨ನೇ		–	–	–	–	–	–	–
೩	೩ನೇ	೧೬	–	–	–	೫	೧೦ ಪಠ್ಯಗಳು (ಗದ್ಯ–ಪದ್ಯ) ಸೇರಿದಂತೆ ಸಮಿತಿ ರಚನೆ	೧–ಜನಪದ	–
೪	೩ನೇ	೧೭	–	–	–	೫	೧೨ ಸಮಿತಿ ರಚನೆ	–	**ಪದ್ಯ ಭಾಗ** ೧ ಪುರುಷರದ್ದು
೫	೫ನೇ	೨೩	೦	೫	೧	೮	೪ ಸಮಿತಿ ರಚನೆ	**೫–ಪೂರಕ–ಪಾಠಗಳು** ೨–ಸಮಿತಿ ರಚನೆ ೩–ಪುರುಷರ ಪದ್ಯಗಳು	**ಗದ್ಯ ಭಾಗ** ೧–ಜನಪದ ೨–ಪುರುಷರದ್ದು **ಪದ್ಯ ಭಾಗ** ೧–ವಚನಗಳು ೧–ಪುರುಷರದ್ದು
೬	೬ನೇ	೨೧	೧	೩	೦	೮	೪ ಸಮಿತಿ ರಚನೆ	**೫ ಪೂರಕ ಪಾಠಗಳು** ೧–ಸಮಿತಿ ರಚನೆ ೩–ಪುರುಷರದ್ದು ೨–ಮಹಿಳೆಯರದ್ದು	–
೭	೭ನೇ	೨೧	೧	೬	೦	೬	೩ ಸಮಿತಿ ರಚನೆ	**೫–ಪೂರಕ ಪಾಠಗಳು** ೩–ಪುರುಷರದ್ದು ೨–ಮಹಿಳೆಯರದ್ದು	**ಗದ್ಯ ಭಾಗ** ೧–ಪುರುಷರದ್ದು **ಪದ್ಯ ಭಾಗ** ೨–ಪುರುಷರದ್ದು ಪೂರಕ ಪಾಠಗಳು ೨–ಪುರುಷರದ್ದು ೨–ಮಹಿಳೆಯರದ್ದು
೮	೮ನೇ	೨೧	೧	೭	೧	೭	–	**೫ ಪೂರಕ ಪಾಠಗಳು** ೪–ಪುರುಷರದ್ದು ೧–ಮಹಿಳೆಯರದ್ದು	**ಗದ್ಯ ಭಾಗ** ೪–ಪುರುಷರದ್ದು ೧ ಮಹಿಳೆಯರು **ಪದ್ಯ ಭಾಗ** ೩–ಪುರುಷರದ್ದು ಪೂರಕ ಪಾಠಗಳು ೩–ಪುರುಷರದ್ದು ೧–ಮಹಿಳೆಯರದ್ದು

ಈ ಮೇಲಿನ ಕೋಷ್ಟಕವನ್ನು ಗಮನಿಸಿದರೆ, ಪಠ್ಯ ಆಯ್ಕೆಯಲ್ಲಿ ಹೆಣ್ಣು–ಗಂಡು ಮಕ್ಕಳಿಗೆ ಸಂಬಂಧಿಸಿದಂತೆ ಸಾಮಾಜೀಕರಣ ಹೇಗೆ ಪ್ರತಿನಿಧಿಸುತ್ತದೆ ಎನ್ನುವುದಕ್ಕೆ ಪಠ್ಯ ಆಯ್ಕೆಯಲ್ಲಿನ

ಹೆಣ್ಣು-ಗಂಡು ಸಂಖ್ಯಾ ನೆಲೆಯ ಸಾಮಾಜೀಕರಣದಲ್ಲಿ ಮಾಹಿತಿಯನ್ನು ವಿವರಿಸಿಕೊಂಡರೆ ಪುರುಷ ಸಾಮಾಜೀಕರಣ ಇರುವುದು ತಿಳಿದು ಬರುತ್ತದೆ. ಇದಕ್ಕೆ ಪ್ರಾಥಮಿಕ ವಲಯದ (೧ ರಿಂದ ೫ನೇ ತರಗತಿಯ) ಕನ್ನಡ ಪಠ್ಯ ಪುಸ್ತಕಗಳಲ್ಲಿ ೧ನೇ, ೨ನೇ ತರಗತಿಯನ್ನು ಹೊರತು ಪಡಿಸಿದರೆ, ೩ನೇ ತರಗತಿಯ ಪರಿವಿಡಿಯಲ್ಲಿ ಒಟ್ಟು ೧೬ ಪಾಠಗಳಿವೆ. ಅದರಲ್ಲಿ ಗದ್ಯಭಾಗ-ಕೃತಿಕಾರರಲ್ಲಿ ಲೇಖಕಿಯರ ಪಠ್ಯಗಳು ಕಡಿಮೆ ಇವೆ. ಆದರೆ ಪದ್ಯ ಭಾಗದಲ್ಲಿ ೫ ಜನ ಪುರುಷ ಲೇಖಕರ ಪಠ್ಯಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಉಳಿದಂತೆ ೧೦ ಪಠ್ಯಗಳನ್ನು ಗದ್ಯ-ಪದ್ಯ ಭಾಗ ಸೇರಿದಂತೆ ಸಮಿತಿ ರಚನೆ ಮಾಡಿದೆ. ಉಳಿದ ೧ ಪಾಠವನ್ನು ಜನಪದಕ್ಕೆ ಸಂಬಂಧಿಸಿದಂತೆ ಮಹಿತಿಯನ್ನು ಸೇರಿಸಲಾಗಿದೆ. ೪ನೇ ತರಗತಿಯ ಪರಿವಿಡಿಯಲ್ಲಿ ಒಟ್ಟು ೧೭ ಪಾಠಗಳಿವೆ. ಇದರಲ್ಲಿ ಗದ್ಯ ಭಾಗ-ಕೃತಿಕಾರರಲ್ಲಿ ಹೆಣ್ಣು-ಗಂಡು ಯಾವ ಲೇಖಕರ ಪಠ್ಯಗಳನ್ನು ಆಯ್ಕೆ ಮಾಡಿಕೊಂಡಿಲ್ಲ. ಪದ್ಯ ಭಾಗದಲ್ಲಿ ಒಟ್ಟು ೫ ಪಾಠಗಳಿವೆ. ಇದರಲ್ಲಿ ೫ ಪಾಠಗಳಿಗೆ ೫ ಜನ ಪುರುಷ ಲೇಖಕರ ಪಠ್ಯಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಉಳಿದಂತೆ ೧೨ ಸಮಿತಿ ರಚನೆ ೧ ಪರಿಷ್ಕರಣೆಗೊಂಡ ನಂತರ ಪದ್ಯಭಾಗ ಒಬ್ಬ ಪುರುಷರು ರಚಿಸಿದ ಪಾಠವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ೫ನೇ ತರಗತಿಯ ಕನ್ನಡ ಪುಸ್ತಕದಲ್ಲಿನ ಪರಿವಿಡಿಯಲ್ಲಿ ಒಟ್ಟು ೨೩ ಪಾಠಗಳಿವೆ. ಇದರಲ್ಲಿ ಗದ್ಯಭಾಗ-ಕೃತಿಕಾರರಲ್ಲಿ ಒಟ್ಟು ೫ ಪಾಠಗಳಿವೆ. ಇದರಲ್ಲಿ ಯಾವೊಬ್ಬ ಮಹಿಳೆ ಬರೆದ ಪಾಠವನ್ನು ಆಯ್ಕೆ ಮಾಡಿಕೊಂಡಿಲ್ಲ. ಆದರೆ ೫ ಜನ ಪುರುಷ ಲೇಖಕರು ಬರೆದ ಪಾಠಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಪದ್ಯಭಾಗದಲ್ಲಿ ಒಟ್ಟು ೯ ಕೃತಿಕಾರರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದರಲ್ಲಿ ಒಬ್ಬ ಮಹಿಳೆಯನ್ನು ಬಿಟ್ಟರೆ ಉಳಿದ ೮ ಜನ ಪುರುಷ ಲೇಖಕರನ್ನು ಅಯ್ಕೆ ಮಾಡಿಕೊಳ್ಳಲಾಗಿದೆ.

ಮಾಧ್ಯಮಿಕ (೬ರಿಂದ ೮ನೇ ತರಗತಿಯ) ಕನ್ನಡ ಪಠ್ಯಪುಸ್ತಕಗಳಲ್ಲಿ ಪಠ್ಯ ಆಯ್ಕೆಯಲ್ಲಿ ಹೆಣ್ಣು-ಗಂಡು ಸಂಖ್ಯೆ ನೆಲೆಯ ಸಾಮಾಜೀಕರಣದಲ್ಲಿ ಮೊದಲಿಗೆ ೬ನೇ ತರಗತಿಯ ಕನ್ನಡ ಪಠ್ಯಪುಸ್ತಕಗಳ ಪರಿವಿಡಿಯಲ್ಲಿ ಒಟ್ಟು ೨೧ ಪಾಠಗಳಿವೆ ಇದರಲ್ಲಿ ಗದ್ಯಭಾಗದ ಒಟ್ಟು ೪ ಜನ ಕೃತಿಕಾರರಲ್ಲಿ ಒಟ್ಟು ಮಹಿಳೆಯರದ್ದು ಪಠ್ಯವನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. ಉಳಿದಂತೆ ೩ ಪುರುಷ ಲೇಖಕರು ಬರೆದ ಪಾಠಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇನ್ನು ಪದ್ಯಭಾಗದ ಕೃತಿಕಾರರಲ್ಲಿ ಒಟ್ಟು ೮ ಜನ ಕೃತಿಕಾರರಿದ್ದಾರೆ. ಇದರಲ್ಲಿ ೬ ಜನ ಪುರುಷ ಲೇಖಕರು ಬರೆದ ಪದ್ಯಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ೭ನೇ ತರಗತಿ ಕನ್ನಡ ಪಠ್ಯಪುಸ್ತಕದ ಪರಿವಿಡಿಯಲ್ಲಿ ಒಟ್ಟು ೨೧ ಪಾಠಗಳಿವೆ; ಇದರಲ್ಲಿ ಗದ್ಯಭಾಗದಲ್ಲಿ ಒಟ್ಟು ೭ ಜನ ಕೃತಿಕಾರರಿದ್ದಾರೆ. ಇದರಲ್ಲಿ ಒಬ್ಬ ಮಹಿಳಾ ಲೇಖಕಿ ಬರೆದ ಪಠ್ಯವನ್ನು ಅಳವಡಿಸಿದರೆ, ಇನ್ನುಳಿದಂತೆ ೬ ಜನ ಪುರುಷರು ಬರೆದ ಪಠ್ಯವನ್ನು ಅಳವಡಿಸಿಕೊಳ್ಳಲಾಗಿದೆ. ಇದೇ ತರಗತಿಯ ಪದ್ಯಭಾಗದಲ್ಲಿ ಒಟ್ಟು ೬ ಪದ್ಯಗಳಿವೆ. ಇದರಲ್ಲಿ ಯಾವೊಬ್ಬ ಮಹಿಳೆ ಬರೆದ ಪದ್ಯಗಳನ್ನು ಅಳವಡಿಸಿಕೊಂಡಿಲ್ಲ. ಈ ಭಾಗದಲ್ಲಿ ೬ ಜನ ಪುರುಷ ಲೇಖಕರು ಬರೆದ ಪದ್ಯವನ್ನು ಅಳವಡಿಸಿಕೊಳ್ಳಲಾಗಿದೆ.

೮ನೇ ತರಗತಿ ಕನ್ನಡ ಪಠ್ಯಪುಸ್ತಕದ ಪರಿವಿಡಿಯಲ್ಲಿ ಒಟ್ಟು ೨೧ ಪಾಠಗಳಿವೆ; ಇದರಲ್ಲಿ ಗದ್ಯಭಾಗದಲ್ಲಿ ೮ ಜನ ಕೃತಿಕಾರರಿದ್ದಾರೆ. ಇದರಲ್ಲಿ ಒಬ್ಬ ಮಹಿಳೆಯ ಕೃತಿಯನ್ನು ಆಯ್ಕೆ ಮಾಡಿಕೊಂಡರೆ, ಉಳಿದಂತೆ ೭ ಜನ ಪುರುಷ ಲೇಖಕರ ಪಾಠಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದೇ ತರಗತಿಯ ಪದ್ಯಭಾಗದಲ್ಲಿ ಒಟ್ಟು ೭ ಜನ ಬರೆದ ಪದ್ಯಗಳಿವೆ. ಇದರಲ್ಲಿ ಒಬ್ಬ ಮಹಿಳೆಯರ ಪದ್ಯವನ್ನು ಆಯ್ಕೆ ಮಾಡಿಕೊಂಡರೆ, ಉಳಿದಂತೆ ೭ ಜನ ಪುರುಷರು ಬರೆದ ಪದ್ಯಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಹೀಗೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳಲ್ಲಿ ಹೆಚ್ಚು ಪುರುಷರು ಬರೆದ ಗದ್ಯ-ಪದ್ಯ ಪಾಠಗಳನ್ನು ಆಯ್ಕೆ ಮಾಡಿಕೊಂಡಿರುವುದು ಕಂಡು ಬರುತ್ತದೆ.

೨೦೧೭-೧೮ನೇ ಶೈಕ್ಷಣಿಕ ಸಾಲಿನಿಂದ ಪರಿಷ್ಕರಣೆಗೊಂಡು ಪಠ್ಯಗಳನ್ನು ನೋಡಿದರೆ-ಪಠ್ಯ ಆಯ್ಕೆಯಲ್ಲಿ ಹೆಣ್ಣು-ಗಂಡು ಸಂಖ್ಯಾನೆಲೆಯ ಸಾಮಾಜೀಕರಣದಲ್ಲಿ ಕೂಡ ಪುರುಷರು ಬರೆದ ಪಠ್ಯಗಳನ್ನು ಸೇರಿಸಿರುವುದು ಕಂಡು ಬರುತ್ತದೆ. ಇಲ್ಲಿ ಪಠ್ಯದೊಳಗಿನ ವಿಷಯ ಕುರಿತು ನೋಡುವುದು ಬೇರೆ ಸಂಗತಿ. ಆದರೆ ಪಠ್ಯ ಆಯ್ಕೆಯಲ್ಲಿ ಲಿಂಗ ರಾಜಕಾರಣ ಮೆರೆದಿರುವುದು ಕಂಡು ಬರುತ್ತದೆ. ಇದಕ್ಕೆ ಪ್ರಾಥಮಿಕ ಶಾಲೆಯ ಪಠ್ಯಗಳಲ್ಲಿನ ೪ನೇ ತರಗತಿಗೆ ಪರಿಷ್ಕರಣೆಯಲ್ಲಿ ಅಂದರೆ ಪದ್ಯಭಾಗದಲ್ಲಿ ಒಬ್ಬ ಪುರುಷನ ಪಠ್ಯವನ್ನು ಸೇರಿಸಲಾಗಿದೆ. ೫ನೇ ತರಗತಿಯ ಗದ್ಯ ಭಾಗದಲ್ಲಿ ೧ನೇ ಪಾಠ ಜನಪದಕ್ಕೆ ಸಂಬಂಧಿಸಿದಂತೆ ಸೇರಿಸಿದರೆ, ಪುರುಷರದ್ದು ೨ ಪಠ್ಯಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದೇ ತರಗತಿಯ ಪದ್ಯಭಾಗದಲ್ಲಿ ೧ ಪದ್ಯ ವಚನಗಳಿಗೆ ಸಂಬಂಧಿಸಿದಂತೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಮಾಧ್ಯಮಿಕ ೬ನೇ ತರಗತಿಯ ಕನ್ನಡ ಪಠ್ಯಪುಸ್ತಕದ ಪರಿಷ್ಕರಣೆ ಸಮಿತಿಯಲ್ಲಿ ಪೂರಕ ಪಾಠಗಳಲ್ಲಿ ೧ ಸಮಿತಿ ರಚನೆ ಮಾಡಿದ್ದು, ೩ ಪುರುಷರು ಬರೆದಿರುವುದನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ೧ ಮಾತ್ರ ಮಹಿಳೆಯರದ್ದು ಆಯ್ಕೆ ಮಾಡಿಕೊಳ್ಳಲಾಗಿದೆ. ೭ನೇ ತರಗತಿಯ ಪೂರಕ ಪಾಠಗಳಲ್ಲಿ ೩ ಪುರುಷರದ್ದು, ೨ ಮಹಿಳೆಯರದ್ದಾಗಿದೆ. ಪರಿಷ್ಕರಣೆಗೊಂಡ ನಂತರ ಪದ್ಯಭಾಗದಲ್ಲಿ ೧ ಪುರುಷರ ಬರೆದಿದ್ದು, ಪದ್ಯಭಾಗದಲ್ಲಿ ೨ ಪುರುಷರು ಬರೆದಿದ್ದ ಪೂರಕ ಪಾಠಗಳು ಮತ್ತೆರಡು ಮಹಿಳೆಯರು ಬರೆದಿದ್ದನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ೮ನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ ಪೂರಕ ಪಾಠಗಳಲ್ಲಿ ೪ ಪುರುಷರದ್ದು ೧ ಮಹಿಳೆಯರದ್ದು ಹೀಗೆ ಪಠ್ಯಪುಸ್ತಕಗಳ ಪರಿಷ್ಕರಣೆಗೊಂಡ ನಂತರ ಪಠ್ಯ ಆಯ್ಕೆಯಲ್ಲಿ ಹೆಣ್ಣು-ಗಂಡು ಮಕ್ಕಳ ಸಂಖ್ಯಾನೆಲೆಯಲ್ಲಿ ಸಾಮಾಜೀಕರಣ ನೋಡಿದರೆ ಪುರುಷರ ಪರವಾಗಿರುವುದು ಕಂಡು ಬರುತ್ತದೆ. ಈಗಾಗಲೇ ಪಠ್ಯ ಆಯ್ಕೆ ಸಮಿತಿ ರಚನೆಯಲ್ಲಿ ಬಹುಪಾಲು ಜನರು ಪುರುಷರೇ ಇದ್ದಾರೆ. ಇದರ ಜೊತೆಗೆ ಪರಿಷ್ಕರಣೆಗೊಂಡ ನಂತರದ ಪಠ್ಯಗಳ ಆಯ್ಕೆಯಲ್ಲಿ ಇವರ (ಪುರುಷರ) ಪಾಲು ಹೆಚ್ಚು, ಅಂದರೆ ಇಲ್ಲಿ ಮಹಿಳೆಯರನ್ನು ಕಡೆಗಣಿಸುವುದರ ಜೊತೆಗೆ ಪುರುಷ ಪರ

ಸಾಮಾಜೀಕರಣ ಮೆರೆದಿರುವುದು ಕಂಡು ಬರುತ್ತದೆ. ಇದು ಕೇವಲ ಪಠ್ಯಪುಸ್ತಕಗಳ ಪಠ್ಯ ಆಯ್ಕೆಯಲ್ಲಿ ಒಂದೇ ಅಲ್ಲ. ಇದು ಸಮಾಜದ ಅನೇಕ ಕ್ಷೇತ್ರ/ವಲಯಗಳಲ್ಲಿ ಕಂಡು ಬರುತ್ತದೆ. ಇದಕ್ಕೆ ಪ್ರಸ್ತುತ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಗಳಲ್ಲಿ ಸದಸ್ಯರ ನೇಮಕಾತಿಯಲ್ಲಿ, ಪುಸ್ತಕ ಪ್ರಕಾಶನದಲ್ಲಿ ಹಾಗೂ ಲೇಖಕಿಯರ ಪುಸ್ತಕಗಳ ಆಯ್ಕೆಯಲ್ಲಿ ಕೂಡ ಲಿಂಗತಾರತಮ್ಯವನ್ನು ಮಾಡುತ್ತಿರುವುದು ಕಂಡು ಬರುತ್ತದೆ. ಇದು ಆಯ್ಕೆ ನೆಲೆಯಲ್ಲಿ ಹೆಣ್ಣು-ಗಂಡು ಮಕ್ಕಳ ಕುರಿತಂತೆ ಹೊಂದಿರುವ ಸಾಮಾಜೀಕರಣವಾಗಿದೆ.

೩.೪. ಪಠ್ಯದಲ್ಲಿ ಹೆಣ್ಣು-ಗಂಡು ಮಕ್ಕಳು ನಿರ್ವಹಿಸುವ ಪಾತ್ರಗಳ ನೆಲೆಯ ಸಾಮಾಜೀಕರಣ

ಪ್ರಾಥಮಿಕ ಮತ್ತು ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳಲ್ಲಿ ಹೆಣ್ಣು-ಗಂಡುಗಳು ನಿರ್ವಹಿಸುವ ಪಾತ್ರಗಳ ನೆಲೆಯಲ್ಲಿ ಸಾಮಾಜೀಕರಣಗೊಳಿಸುವ ಸಂಗತಿಗಳ ಕುರಿತು ನೋಡಿದರೆ, ಯಾವ ಲಿಂಗವು, ಯಾವ ಕಾರ್ಯವನ್ನು ನಿರ್ವಹಿಸುತ್ತದೆ, ಯಾವ ಪಾತ್ರವನ್ನು ನಿರ್ವಹಿಸುತ್ತದೆ, ಯಾವ ಜವಾಬ್ದಾರಿಯನ್ನು ಹೊರುತ್ತದೆ, ಯಾವ ಕರ್ತವ್ಯವನ್ನು ನಿಭಾಯಿಸುತ್ತದೆ ಎನ್ನುವುದರ ಮೇಲೆ ಸಮಾಜದಲ್ಲಿ ಸ್ಥಾನ-ಮಾನ, ಗೌರವ, ಸನ್ಮಾನಗಳು ವ್ಯಕ್ತಿಗೆ ಲಭ್ಯವಾಗುತ್ತವೆ ಎನ್ನುವ ಸಂಗತಿಗಳನ್ನು ತಿಳಿಸುತ್ತವೆ. ಇದಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ಹೆಣ್ಣು-ಗಂಡು ಮಕ್ಕಳು ನಿರ್ವಹಿಸುವ ಪಾತ್ರಗಳ ಕುರಿತಂತೆ ಪಠ್ಯಗಳಲ್ಲಿ ದಾಖಲೆಗೊಂಡ ಸಂಗತಿಗಳನ್ನು ಈ ರೀತಿಯಾಗಿ ಕಾಣಬಹುದು.

೧ನೇ ತರಗತಿ ಕನ್ನಡ ಪಠ್ಯ ಪುಸ್ತಕದ ನಲಿ-ಕಲಿ ಕನ್ನಡ ಅಭ್ಯಾಸ ಪುಸ್ತಕದಲ್ಲಿ ಮಕ್ಕಳಿಗೆ ಚಿತ್ರಗಳ ಮೂಲಕ ಹೆಣ್ಣು-ಗಂಡು ಮಕ್ಕಳ ಕೆಲಸಗಳನ್ನು ತಿಳಿಸುವ ಕೆಲಸ ಮಾಡಲಾಗಿದೆ. 'ಚಿತ್ರ ನೋಡಿ ಬಿಟ್ಟ ಅಕ್ಷರ ಬರೆ' ಪುಟ-೧೭ರಲ್ಲಿ ಚಿತ್ರಗಳಲ್ಲಿ ಪುರುಷರಿಬ್ಬರ ಸಮರ ಕಲೆಯ ಚಿತ್ರವಿದೆ. ಇದರಿಂದ ಗಂಡು ಸಾಹಸಮಯಿ, ಶೂರ, ಧೀರ ಎನ್ನುವ ಚಿಂತನೆಗಳನ್ನು ಬಾಲ್ಯದಲ್ಲಿಯೇ ಮಕ್ಕಳ ಮನಸ್ಸಿನಲ್ಲಿ ಬಿತ್ತುವ ಕೆಲಸ ಮಾಡುವುದು ಕಂಡು ಬರುತ್ತದೆ.

ಎರಡನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ ರೈತ ಉಳುಮೆ ಮಾಡುತ್ತಿರುವ ಚಿತ್ರದಲ್ಲಿ ಗಂಡುಮಕ್ಕಳು ಮುಂದಾಳಾಗಿ ಕೆಲಸ ನಿರ್ವಹಣೆ, ಹೆಣ್ಣುಮಕ್ಕಳು ಸಹಾಯಕರಾಗಿ ಇರುವ ಮತ್ತು ಇದುವರೆಗೂ ರೈತ ಎಂದರೆ ಪುರುಷ; ಅವನೇ ದುಡಿಮೆ ಕಾರ್ಯದಲ್ಲಿ ಮುಂದು. ಹೆಣ್ಣು ಪುರುಷನಿಗೆ ಸಹಾಯಕಳಾಗಿ ಇರುವ ಎನ್ನುವ ಪಾತ್ರಗಳನ್ನು ತೋರಿಸಲಾಗಿದೆ. ಇದರಿಂದ ಹೆಣ್ಣು ಎಂದರೆ ಸಹಾಯಕಳಾಗಿರುವವಳು ಎನ್ನುವ ಚಿತ್ರಣ ಮಕ್ಕಳಲ್ಲಿ ಮೂಡುತ್ತದೆ. (ಪುಟ-೮) ಚಿತ್ರ ನೋಡಿ ವಾಕ್ಯ ಸರಿಪಡಿಸಿ ಬರೆ (ಪುಟ-೮), ವಿಮಲೆಯ ಕೈಯಲ್ಲಿ ಮಗು ಇದೆ. ಇದಕ್ಕೆ ಮಗುವನ್ನು ಎತ್ತಿಕೊಂಡು ಪೋಷಿಸುವ ಪಾತ್ರಗಳನ್ನು ನಿರ್ವಹಿಸುವ ಕೆಲಸ ಹೆಣ್ಣಿನದ್ದು ಎನ್ನುವ ಕೆಲಸ ತೋರಿಸುತ್ತದೆ. 'ಗೌರಿ ಗೌತಮ ತಂದರು ನೀರನ್ನು ಚೇರಿಗೆಯಲ್ಲಿ' (ಪುಟ-೧೫) ಎಂದು ಹೆಣ್ಣು-ಗಂಡು ಮಕ್ಕಳ ಸಮಾನ ಕೆಲಸ ನಿರ್ವಹಣೆ ಇದೆ. ಇದೇ ಪುಟದಲ್ಲಿ

ಗೌರಿ ತಾಯಿಯು ಕಾಲಿನ ಗಾಯಕ್ಕೆ ಔಷಧಿ ಹಾಕಿದಳು' ಎಂದಿದೆ. ಹೆಣ್ಣುಮಕ್ಕಳು ಪಾಲನೆ, ಪೋಷಣೆ, ರಕ್ಷಣೆ ಪಾತ್ರಗಳನ್ನು ನಿರ್ವಹಿಸುವುದನ್ನು ಪ್ರತಿಬಿಂಬಿಸುವ ಪಾತ್ರ ಇಲ್ಲಿ ವ್ಯಕ್ತವಾಗುತ್ತದೆ. ಇದೇ ತರಗತಿಯ 'ಚಿತ್ರ ನೋಡಿ ವಾಕ್ಯ ಪೂರ್ಣಗೊಳಿಸು' ಪುಟ-೧೮ರಲ್ಲಿ ರೈತನ ಚಿತ್ರದೊಂದಿಗೆ ಅವನ ಕಾಯಕದ ಕುರಿತು ಹೇಳಲಾಗಿದೆ. 'ರೈತನ ಕಾಯಕ ನಾಡಿನ ಜೀವಾಳ; ಎನ್ನುವಲ್ಲಿ ಕೂಡ ಗಂಡಿನ ಕೆಲಸವನ್ನು ಹೇಳಲಾಗಿದೆ. 'ಚಿತ್ರ ನೋಡಿ ಬಿಟ್ಟ ಅಕ್ಷರ ಬರೆ' ಎಂಬ ಅಭ್ಯಾಸದಲ್ಲಿ ಹೆಣ್ಣೊಬ್ಬಳು ಮಗುವನ್ನು ಮಲಗಿಸಿಕೊಂಡು ಪೋಷಿಸುವ ಕೆಲಸವನ್ನು ತೋರಿಸುವುದು ಕಂಡು ಬರುತ್ತದೆ. ಇದೇ ತರಗತಿಯ ಮಾದರಿಯಂತೆ ಚಿತ್ರ ನೋಡಿ ಬಿಟ್ಟಿರುವ ಪದ ಬರೆ ಎನ್ನುವ ಪುಟ-೨೬ರಲ್ಲಿ ಅಜ್ಜಿ ಚಿತ್ರ ಇದೆ; ಮುಂದೆ ಮಾಡಿದ ಗೊಜ್ಜು ಬಲು ರುಚಿ ಎನ್ನುವುದರಲ್ಲಿ ಹೆಣ್ಣುಮಕ್ಕಳು ಅಡುಗೆ ಕೆಲಸ ಮತ್ತು ಅವರು ಮಾಡುವ ಅಡುಗೆ ರುಚಿ ಎನ್ನುವುದನ್ನು ತಿಳಿಸುತ್ತದೆ. ಬಿಜ್ಜಳ ರಾಜನ ಚಿತ್ರ ಬಲಶಾಲಿ; ಇದು ಪುರುಷ ವ್ಯಕ್ತಿಯ ಸಾಹಸ, ಧೈರ್ಯ, ಶಕ್ತಿಶಾಲಿ ಕಾರ್ಯವನ್ನು ಮಾಡುವವನು ಎನ್ನುವುದನ್ನು ತಿಳಿಸುತ್ತದೆ. ಮುಂದುವರಿದು ಇದೇ ತರಗತಿಯ ಪಠ್ಯದಲ್ಲಿ ದೊರೆಯುವ ಚಿತ್ರ 'ನೋಡಿ ಬಿಟ್ಟ ಅಕ್ಷರ ಬರೆ' ಪುಟ-೪೦ರಲ್ಲಿ ತಾಯಿಯು ಮಗುವನ್ನು ಮಡಿಲಲ್ಲಿ ಎತ್ತಿಕೊಂಡಿರುವ ಚಿತ್ರ ಹೆಣ್ಣಿಗೆ ಪಾಲನೆ ಕೆಲಸವನ್ನು ನಿರ್ವಹಿಸುವ ಪಾತ್ರಗಳ ನೆಲೆಯನ್ನು ಹೇಳುತ್ತದೆ. ತಾಯ್ತಿತನದ ಕೆಲಸದ ಜೊತೆಗೆ ಪಾಲನೆ-ಪೋಷಣೆ-ರಕ್ಷಣೆ ಹೆಣ್ಣುಮಕ್ಕಳದ್ದೇ ಎನ್ನುವ ಸಾಮಾಜೀಕರಣಕ್ಕೆ ಕಾರಣವಾಗಿರುವ ರೀತಿ ಈ ಚಿತ್ರಗಳಲ್ಲಿನ ಭಂಗಿ ಕಂಡುಬರುತ್ತದೆ. 'ಕರೆದಳು ಅಜ್ಜಿ ಊಟಕೆ, ಮಾಡಿದಳು ಕಜ್ಜಾಯ ಅಜ್ಜಿ', ಕೊಡುವಳು ಕುಡಿಯಲು ಮಜ್ಜಿಗೆ ಅಜ್ಜಿಯು. ಇವು ಹೆಣ್ಣಿನ ಕೆಲಸವನ್ನು ತಿಳಿಸುತ್ತವೆ. ಇದೇ ತರಗತಿ ಪುಟ-೬೧ರಲ್ಲಿ 'ರಾಖಿ ಅಣ್ಣನಿಗೆ ಕಟ್ಟಿದಳು' ರಕ್ಷಾ ಬಂಧನದಂದು ತಂಗಿ ಅಣ್ಣನಿಗೆ ರಾಖಿ ಕಟ್ಟುವುದು ರಕ್ಷಣೆಯ ಸೂಚಕದ ಜೊತೆಗೆ ಗಂಡು ಮಕ್ಕಳ ಸಮೃದ್ಧಿ ಮತ್ತು ಆಯುಷ್ಯ ವೃದ್ಧಿಗಾಗಿ ಸದಾ ಪ್ರಾರ್ಥಿಸುವ ಸಂಕೇತ. ರಾಖಿಯನ್ನು ಕಟ್ಟುವುದು ಹೆಣ್ಣುಮಕ್ಕಳ ಕೆಲಸ; ಗಂಡುಮಕ್ಕಳ ಬಲಶಾಲಿಗಳೆನ್ನುವ ಚಿಂತನೆಗಳನ್ನು ಮುಂದುವರಿಸಲಾಗಿದೆ. ಇದಕ್ಕೆ 'ಬಲಿಷ್ಠ ಯುದ್ಧ ಮಾಡಿದ ಯೋಧ' ಎಂದು ಹೇಳುವ ಸಾಲುಗಳು ಕಂಡುಬರುತ್ತದೆ.

೩ನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ಪುಟ-೪ರಲ್ಲಿ ತೋರಿಸಲಾಗಿರುವ ಚಿತ್ರದಲ್ಲಿ ತಾಯಿ ಮಕ್ಕಳ ಜೊತೆ ಇರುವುದನ್ನು ಚಿತ್ರೀಕರಿಸಲಾಗಿದೆ. ತಾಯಿ ಆದವಳು ಮಗುವನ್ನು ಪೋಷಿಸುವ ಕೆಲಸ, ಅವಳ ಕೆಲಸ ಎನ್ನುವ ಚಿತ್ರ ಬಿಂಬಿತವಾಗಿದೆ. ಇದೇ ತರಗತಿ ಪಾಠ-೨ರ ಲಗೋರಿ ಆಟದಲ್ಲಿ ಗಂಡುಮಕ್ಕಳು ಪ್ರತ್ಯೇಕ ಆಟವಾಡುತ್ತಿರುವ ಚಿತ್ರಗಳನ್ನು ಕೊಡಲಾಗಿದೆ. ಇದು ಗಂಡುಮಕ್ಕಳಿಗೆ ಪ್ರತ್ಯೇಕವಾದ ಆಟ ಇರುತ್ತವೆ ಎನ್ನುವುದು ತಿಳಿಸುತ್ತದೆ. ಹೆಣ್ಣುಮಕ್ಕಳ ಕೆಲವು ಆಟಗಳಲ್ಲಿ ಗಂಡುಮಕ್ಕಳು ಸೇರಬಾರದು ಎನ್ನುವ ಅಂಶಗಳನ್ನು ಈ ಆಟಗಳಲ್ಲಿ ತೋರಿಸಲಾಗಿದೆ. ಹೆಣ್ಣು-ಗಂಡುಮಕ್ಕಳು ಸೇರಿ ಆಡುವ ಅನೇಕ ಕ್ರೀಡೆಗಳಿವೆ. ಆದರೆ ಇಲ್ಲಿ ತೋರಿಸಿರುವ ಆಟಗಳಲ್ಲಿ ಹೆಣ್ಣು-ಗಂಡು ಪ್ರತ್ಯೇಕ ಎನ್ನುವ ಕ್ರೀಡೆಗಳನ್ನು ಚಿತ್ರಪಟದೊಂದಿಗೆ ಕೊಡಲಾಗಿದೆ. ಇದರಿಂದ

ಆಡುವ ಕ್ರೀಡೆಗಳು ಹೆಣ್ಣು-ಗಂಡು ಮಕ್ಕಳಿಗೆ ಬೇರೆಯೇ ಇವೆ ಎನ್ನುವುದನ್ನು ಸಾಮಾಜೀಕರಣಗೊಳಿಸುತ್ತವೆ. ಇದೇ ತರಗತಿಯ 'ಚಿತ್ರ ನೋಡಿ ಉತ್ತರಿಸು' ಪುಟ-೧೮ರಲ್ಲಿ ಹುಡುಗ ಕೆಲಸ ಮಾಡಲು ಸಹಾಯಕವಾಗುವಂತೆ ೫ ಸೂಚನೆಗಳನ್ನು ಬರೆ ಎನ್ನುವುದರಲ್ಲಿ ಗಂಡುಮಕ್ಕಳ ಕೆಲಸವನ್ನು ಎತ್ತಿ ಹಿಡಿಯುವುದು, ಗಂಡುಮಕ್ಕಳ ಕೆಲಸ ಹೊರಗಡೆ ಕೆಲಸ ಎನ್ನುವುದನ್ನು ಬಿಂಬಿಸಲು ಇಲ್ಲಿ ಚಟುವಟಿಕೆ ನೀಡಿರುವುದು ಕಂಡುಬರುತ್ತದೆ. ಭಾಷಾಭ್ಯಾಸ ಪುಟ-೩೯ ಮತ್ತು ೪೦ರಲ್ಲಿ ದ್ರಾಕ್ಷಿ ಗೊಂಚಲಿನ ಪದಗಳನ್ನು ಮತ್ತು ಸಂಖ್ಯೆಗಳನ್ನು ಓದಿ ಮುಂದಿನ ಪುಟದಲ್ಲಿ ನೀಡಲಾದ ಮಾದರಿಯಲ್ಲಿ ವಾಕ್ಯ ರಚಿಸಿ ಎನ್ನುವುದರಲ್ಲಿ 'ಹೆಣ್ಣು ಸಂಸಾರದ ಕಣ್ಣು' ಎನ್ನುವ ವ್ಯಾಖ್ಯೆ ಬರುವಂತೆ ನೀಡಲಾಗಿದೆ. ಹೆಣ್ಣಿನ ಕೆಲಸ ಸಂಸಾರದ ಕಡೆ ಇರಬೇಕು. ಸಂಸ್ಕಾರಗಳನ್ನು ಅಳವಡಿಸಿಕೊಳ್ಳಬೇಕು ಎನ್ನುವ ಸಂದೇಶವನ್ನು ನೀಡುವುದು ಕಂಡುಬರುತ್ತದೆ.

೪ನೇ ತರಗತಿ:- ಹಿಂದಿನ ತರಗತಿಗಳಲ್ಲಿದ್ದಂತೆ ೪ನೇ ತರಗತಿ ಕನ್ನಡ ಪಠ್ಯದಲ್ಲಿ ಆಳ್ವಿಕೆ ಮತ್ತು ಪ್ರಮುಖ ಪಾತ್ರಗಳಲ್ಲಿ ಪುರುಷರನ್ನು ಚಿತ್ರೀಕರಿಸಲಾಗಿದೆ. ಪುರುಷರು ನಿರ್ವಹಿಸುವ ಕಾರ್ಯ ಮತ್ತು ಮಹಿಳೆಯರು ನಿರ್ವಹಿಸುವ ಕಾರ್ಯ ಅಂದರೆ ಹೆಣ್ಣು-ಗಂಡು ನಿರ್ವಹಿಸುವ ಕಾರ್ಯಗಳು ಬೇರೆ ಬೇರೆ ಎನ್ನುವಂತಹ ಸಂಗತಿಗಳನ್ನು ಸಾಮಾಜೀಕರಣಗೊಳಿಸಿರುವುದು ಕಂಡು ಬರುತ್ತದೆ. ಇದಕ್ಕೆ ೪ನೇ ತರಗತಿ ಪಾಠ-೨ 'ಬುದ್ಧಿವಂತ ರಾಮಕೃಷ್ಣ' ಪುಟ-೬ ಮತ್ತು ೭ರಲ್ಲಿ ರಾಮಕೃಷ್ಣ ಆಸ್ಥಾನದ ಚಿತ್ರಗಳಲ್ಲಿ ರಾಜ, ಮಂತ್ರಿ, ಪಂಡಿತ, ಕಾವಲುಗಾರ ಮತ್ತು ಸೈನಿಕ ಪಾತ್ರಗಳಲ್ಲಿ ಪುರುಷರನ್ನು ತೋರಿಸಿ, ಮಹಿಳೆಯರನ್ನು ಸೇವಕಿಯರಾಗಿ ತೋರಿಸಲಾಗಿದೆ ಮತ್ತು ವಿವರಣೆ ಹೆಚ್ಚು ಪುರುಷವಾಚಕದಲ್ಲಿದೆ. ಹೀಗಿರುವಾಗ ಹೆಣ್ಣು-ಗಂಡುಮಕ್ಕಳ ಸಾಮಾಜೀಕರಣ ರೂಪಿಸುವಲ್ಲಿ ಈ ಪಾತ್ರಗಳನ್ನು ನೋಡಿ ಮುಂದೆ ಮಕ್ಕಳೇ ಒಪ್ಪಿಕೊಳ್ಳುವಂತೆ ಅವರನ್ನು ಮಾನಸಿಕವಾಗಿ ಒಪ್ಪಿಸಲು ಸಿದ್ಧಗೊಳಿಸಲಾಗುತ್ತಿದೆ. ಇದೇ ತರಗತಿಯ ಪುಟ ೪೬ರಲ್ಲಿ ಮಹಿಳೆಯೊಬ್ಬಳು ಬೀಸೋಕಲ್ಲಿನಲ್ಲಿ ಆಹಾರ ತಯಾರಿಕೆಗೆ ಸಿದ್ಧ ಮಾಡಿಕೊಳ್ಳುವ ಕೆಲಸದ ಸಂಗತಿಗಳನ್ನು ಹೇಳುತ್ತದೆ. ಜೊತೆಗೆ ಬೀಸೋಕಲ್ಲು ಎಂದರೆ ಹೆಣ್ಣುಮಕ್ಕಳು ನಿರ್ವಹಿಸುವ ಕೆಲಸ ಎನ್ನುವಂತೆ ಬಿಂಬಿಸಲಾಗಿದೆ. ಹೆಣ್ಣುಮಕ್ಕಳ ಹಾಡೆಂದರೆ ಬೀಸೋಕಲ್ಲು ಹಾಡು ಎನ್ನುವಂತಹ ಸಾಮಾಜೀಕರಣಕ್ಕೆ ಪೂರಕವಾಗಿ ಚಿತ್ರಣಗೊಂಡಿರುವುದು ಕಂಡು ಬರುತ್ತದೆ. ಇದಕ್ಕೆ ನಮ್ಮ ಸಮಾಜದಲ್ಲಿ ಅನೇಕ ಬೀಸೋಕಲ್ಲು ಹಾಡುಗಳು ದೊರೆಯುತ್ತವೆ. ಇನ್ನು ಪುಟ-೪೯ರಲ್ಲಿ ಬಳಕೆ ಚಟುವಟಿಕೆಗಳಲ್ಲಿ ಹೆಣ್ಣು-ಗಂಡು ಮಕ್ಕಳಿಗೆ ಸಮಾಜದಲ್ಲಿ ಸ್ಥಾನಮಾನ ಕುರಿತಂತೆ ಒಗಟನ್ನು ಬಿಡಿಸುವ ಸಂದರ್ಭದಲ್ಲಿ ಹೆಣ್ಣು-ಗಂಡುಮಕ್ಕಳ ಶ್ರಮ ವಿಭಜನೆ ಕುರಿತಾಗಿ ಸ್ಪಷ್ಟ ಚಿತ್ರಣವನ್ನು ಕೊಡಲಾಗಿದೆ. ಇದಕ್ಕೆ "ಅವ್ವನ ಹಾಸಿಗೆ ಸುತ್ತಾಕಾಗೊಲ್ಲ. ಅಪ್ಪನ ದುಡ್ಡು ಎಣಿಸಾಕಾಗೊಲ್ಲ", "ಕರಿ ಸೀರೆ ಉಟ್ಟಾಳ. ಕಾಲುಂಗುರ ಕೊಟ್ಟಾಳ. ಮೇಲೆ ಹೋಗುತ್ತಾಳ. ಕೆಳಗೆ ಬರುತಾಳ".

"ಅಪ್ಪಾ ಎಂದರೆ ಮುಚ್ಚುತಾವ, ಅವ್ವ ಎಂದರೆ ತೆರಿತಾವ", ಇವೆಲ್ಲವೂ ಸಮಾಜದಲ್ಲಿ ಹೆಣ್ಣು-ಗಂಡುಮಕ್ಕಳಿಗೆ ಇರುವ ಕೆಲಸಗಳು, ಪಾತ್ರಗಳನ್ನು ನಿರ್ವಹಿಸುವಂತಹ ಸಾಮಾಜೀಕರಣದ ಸಂಗತಿಗಳಾಗಿವೆ. ಗಂಡು ಹಣ-ಸಂಪಾದನೆಯ ಕೆಲಸ, ಹೆಣ್ಣು ಗೃಹಕೃತ್ಯಗಳಲ್ಲಿ ಅಂದರೆ, ಬಟ್ಟೆ ತೊಳೆಯುವ, ಬಟ್ಟೆ ಮಡಚುವ – ಹೀಗೆ ಹೆಣ್ಣು-ಗಂಡು ನಿರ್ವಹಿಸುವ ಕೆಲಸ ಬಳಸಿಕೊಂಡು ಒಗಟುಗಳನ್ನು ಸೃಷ್ಟಿಸಿರುವುದು ಕಂಡು ಬರುತ್ತದೆ. ಇದೇ ತರಗತಿ ಪಾಠ-೯ರಲ್ಲಿ 'ಮಹಿಳಾ ದಿನಾಚರಣೆ' ಪುಟ-೫೮, ೫೯, ೬೦ರಲ್ಲಿ "ಹೆಣ್ಣುಮಕ್ಕಳು ಪಾಲನೆ, ಪೋಷಣೆಯಿಂದ ಹಿಡಿದು ಅಂತರಾಷ್ಟ್ರೀಯ ಮಟ್ಟದವರೆಗೂ ಹಲವು ಸಾಧನೆಗಳನ್ನು ಮಾಡಿದ್ದಾರೆ" ಎನ್ನುವ ವಾಕ್ಯದಲ್ಲಿ ಹೆಣ್ಣಿಗೆ ಮೀಸಲಾದ ಪಾಲನೆ, ಪೋಷಣೆ ಕುರಿತಂತೆ ಮತ್ತೊಮ್ಮೆ ಸಂದೇಶ ಸಾರುವಂತಿದೆ. ಹೆಣ್ಣು ಎಷ್ಟೇ ಸಾಧನೆ ಮಾಡಿದರೂ ಪಾಲನೆ-ಪೋಷಣೆ, ಆದರ್ಶ ಕಾಪಾಡಿಕೊಳ್ಳುವುದು ಅವಳ ಕೆಲಸವಾಗಿದೆ ಮತ್ತು ಹಾಗೆಯೇ ಇರಬೇಕೆಂಬ ಸಂದೇಶ ಸಾರುತ್ತಿರುವ ವ್ಯಾಖ್ಯಾನ ಕಂಡು ಬರುತ್ತವೆ. ಇದು ಹೆಣ್ಣುಮಕ್ಕಳು ನಿರ್ವಹಿಸುತ್ತಿರುವ ಪಾತ್ರಗಳ ಕುರಿತಾಗಿ ಪುನರ್‌ಪ್ರಸ್ತಾಪಿಸುವ ಕೆಲಸಗಳನ್ನು ಈ ಪಾಠದ ವ್ಯಾಖ್ಯೆಗಳಲ್ಲಿ ತಿಳಿಸಲಾಗಿರುವುದರಿಂದ ಮಕ್ಕಳಲ್ಲಿ ಹೆಣ್ಣುಮಕ್ಕಳಿಗೆ ಪಾಲನೆ-ಪೋಷಣೆ ಕೆಲಸವಾಗಿದೆ ಎನ್ನುವುದನ್ನು ಸ್ಥಿರೀಕರಿಸುತ್ತದೆ. ಪುರುಷನಿಗೆ ಸಂಬಂಧಿಸಿದಂತೆ ಪಾಠ-೧೫ರಲ್ಲಿ ದುಡಿಮೆಯ ಗರಿಮೆ ಎನ್ನುವ ಪದ್ಯದಲ್ಲಿ ಇಡೀ ದುಡಿಮೆ ಎಲ್ಲ ಪುರುಷನದ್ದೇ ಎನ್ನುವಂಥ ವ್ಯಾಖ್ಯೆಗಳ ಮೂಲಕ ಮತ್ತು ಪುರುಷ ಮಾಡುವ ಕೆಲಸಗಳನ್ನು ಚಿತ್ರದ ಮೂಲಕ ತೋರಿಸಲಾಗಿದೆ. ಇದರಿಂದ ಹೆಣ್ಣು-ಗಂಡುಗಳ ಶ್ರಮ ವಿಭಜನೆ ಬೇರೆ ಬೇರೆ ಎನ್ನುವ ಸಾಮಾಜೀಕರಣಗೊಳಿಸುತ್ತಿರುವುದು ಕಂಡು ಬರುತ್ತದೆ. ಮುಂದುವರೆದು ಇದೇ ತರಗತಿಯಲ್ಲಿ ಪುಟ-೧೩ರಲ್ಲಿ 'ಇವರ ಹೆಸರನ್ನು ಬರೆಯಿರಿ' ಕಲಿಕೆದಾರಿ ಚಟುವಟಿಕೆಯಲ್ಲಿ ೫ ಮಂದಿ ಪುರುಷರು ಮತ್ತು ೩ ಮಂದಿ ಮಹಿಳೆಯರೆಂದು ತೋರಿಸುವ ಮೂಲಕ ಲಿಂಗತ್ವ ಅಸಮಾನತೆಯಲ್ಲಿ ಪರಿಚಯಿಸಿರುವುದು ಕಂಡುಬರುತ್ತದೆ.

೫ನೇ ತರಗತಿ 'ಸಿರಿ-ಕನ್ನಡ' ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕದಲ್ಲಿ ಒಟ್ಟು ೯ ಗದ್ಯಭಾಗ, ೯ ಪದ್ಯಭಾಗ, ೫ ಪೂರಕ ಪಾಠಗಳಿವೆ. ಇದರಲ್ಲಿ ಹೆಣ್ಣು-ಗಂಡುಮಕ್ಕಳು ನಿರ್ವಹಿಸುವ ಪಾತ್ರಗಳ ನೆಲೆಯ ಸಾಮಾಜೀಕರಣ ನೋಡಿದರೆ ಇದರಲ್ಲಿ ತಾಳ್ಮೆ, ಪರಿಶ್ರಮ, ಮಾನಸಿಕ ಶುದ್ಧೀಕರಣ, ಶೌರ್ಯ, ಸಾಹಸವನ್ನು ಹಾಗೂ ಪ್ರಕೃತಿಯ ಸೊಬಗನ್ನು ವಿವರಿಸುವ ಪದ್ಯ ಮತ್ತು ಗದ್ಯ ಪಾಠಗಳಿವೆ. ಆದರೆ ಹೆಣ್ಣು-ಗಂಡುಮಕ್ಕಳು ನಿರ್ವಹಿಸುವ ಪಾತ್ರಗಳ ನೆಲೆಯ ಸಾಮಾಜೀಕರಣಕ್ಕೆ ಸಂಬಂಧಿಸಿದಂತೆ ವ್ಯಕ್ತವಾಗುವ ವಾಕ್ಯ ಆಶಯಗಳು ಹೆಣ್ಣು-ಗಂಡು ಮಕ್ಕಳಿಗೆ ಬೇರೆ ಬೇರೆ ಕೆಲಸಗಳು ಎಂದೇ ಬಿಂಬಿಸಿದೆ. ಇದೇ ತರಗತಿಯ ಪುಟ-೪೮ರಲ್ಲಿ "ಮಲ್ಲಜ್ಜಿಯ ಮಳಿಗೆ ನೋಡಲು ಚಿಕ್ಕದಾದರೂ ಅಲ್ಲಿ ಎಲ್ಲವೂ ದೊರೆಯುತ್ತದೆ. ಮಲ್ಲಜ್ಜಿಗೆ ಬೇಕಾದ ಎಲೆ-ಅಡಿಕೆ, ಶಿಂಗಾರಪ್ಪನಿಗೆ ಸಕ್ಕರೆ-ಚಹಾಪುಡಿ, ಪೂಜಾರಪ್ಪನಿಗೆ ಊದುಕಡ್ಡಿ-ಕರ್ಪೂರ, ಬೀಗರಿಗೆ

ಬಿಸ್ಕೇಟು-ಖಾರ, ಹೆಣ್ಣುಮಕ್ಕಳಿಗೆ ಸೋಪು-ಪೌಡರು, ಚಿಕ್ಕಮಕ್ಕಳಿಗೆ-ಚಾಕಲೇಟು, ಪೆಪ್ಪರಮೆಂಟು (ಪುಟ-೪೮) ಹೀಗೆ ಹೆಣ್ಣು-ಗಂಡುಮಕ್ಕಳಿಗೆ ಬೇಕಾಗುವ ಅವರು ನಿರ್ವಹಿಸಿಕೊಳ್ಳುವ ಕೆಲಸಗಳಿಗೆ ಸಂಬಂಧಿಸಿದಂತೆ ವಾಕ್ಯಗಳನ್ನು ಜೋಡಿಸಿರುವುದು ಇಲ್ಲಿ ಕಂಡು ಬರುತ್ತದೆ.

೫ನೇ ತರಗತಿಯ ೪ನೇ ಪಾಠ 'ಸುಳ್ಳು ಹೇಳಬಾರದು' ಪುಟ-೨೪ ಇದರಲ್ಲಿ ಹೆಣ್ಣು ಮಕ್ಕಳು ಸಂಪ್ರದಾಯ ಆಚರಣೆಗಳನ್ನು ಮುಂದುವರೆಸಿಕೊಂಡು ಹೋಗುವವರು ಎನ್ನುವ ಸಾಮಾಜೀಕರಣದ ಮಾಹಿತಿ ದೊರೆಯುತ್ತದೆ. ಇದಕ್ಕೆ ಪ್ರತಿವರ್ಷವೂ ಮಳೆಗಾಲದ ನಂತರ ಬರುವ 'ಚಾತುರ್ಮಾಸ'ದಲ್ಲಿ ಅವಳು ಉಪವಾಸ ವ್ರತವನ್ನು ನಿಷ್ಠೆಯಿಂದ ಆಚರಿಸುತ್ತಿದ್ದಳು. ಎಷ್ಟೇ ಕಷ್ಟವಾದರೂ ವ್ರತದ ನಿಯಮದಂತೆ ಸೂರ್ಯೋದಯ ಆಗುವುದನ್ನು ಕಣ್ಣಾರೆ ನೋಡದೆ ಊಟ ಮಾಡುತ್ತಿರಲಿಲ್ಲ. ಮುಂದುವರೆದು "ಆಗ ಅವನ ಅಮ್ಮ ಹೊರೆಗೆ ಅಂಗಳಕ್ಕೆ ಬಂದು ಸೂರ್ಯನನ್ನು ಕಂಡು ಶಕ್ತಿಯಿಂದ ನಮಸ್ಕರಿಸಿ, ಆ ನಂತರ ಊಟ ಮಾಡುತ್ತಿದ್ದಳು, ಆಗ ಮೋನು ಪಾಪುವಿಗೆ ಸಂತೋಷವಾಗುತ್ತಿತ್ತು". ಮುಂದುವರೆದು ಇದೆ ಕಥೆಯಲ್ಲಿ "ಸೂರ್ಯ ಕಾಣದೆ ಅಮ್ಮ ಉಪವಾಸವನ್ನು ಮುಂದುವರೆಸುತ್ತಿದ್ದಳು. ಅಂತಹ ದಿನಗಳಲ್ಲಿ ಹಸಿವಿನಿಂದ ಅಮ್ಮ ಕಷ್ಟಪಡುವುದನ್ನು ನೋಡಿ ಮೋನು ಪಾಪುವಿಗೆ ಬೇಸರ ಉಂಟುಮಾಡುತ್ತಿತ್ತು. "ಆದರೂ ವ್ರತದಲ್ಲಿರುವ ಅಮ್ಮ ಸೂರ್ಯನನ್ನು ನೋಡದೆ ಊಟ ಮಾಡಲು ಒಪ್ಪುವುದಿಲ್ಲ ಎಂಬುದು ಮೋನು ಪಾಪುವಿಗೆ ಗೊತ್ತಿತ್ತು. ಸೂರ್ಯನನ್ನು ಕಣ್ಣಾರೆ ಕಾಣದೇ ಅಮ್ಮ ಊಟ ಮಾಡಲು ಒಪ್ಪುವುದಿಲ್ಲ ಎಂದು" ಈ ಪಾಠದಲ್ಲಿ ಯಾವುದೇ ಕಾರಣಕ್ಕೂ ಮಕ್ಕಳು ಸುಳ್ಳು ಹೇಳಬಾರದು ಎನ್ನುವ ನೀತಿಪಾಠ ಹೇಳುವಾಗ ಹೆಣ್ಣುಮಕ್ಕಳ ವ್ರತವನ್ನು ಸಂಪ್ರದಾಯ ಆಚರಣೆಯನ್ನು ಎಷ್ಟೇ ಕಷ್ಟ ಬಂದರೂ ಆಚರಿಸುವವರು ಹೆಣ್ಣುಮಕ್ಕಳೇ. ಅವರಿಗೆ ಆಹಾರ, ಆರೋಗ್ಯ ಮುಖ್ಯವಲ್ಲ ನೀತಿ, ಆದರ್ಶ, ನಿಷ್ಠೆ ಆಚರಣೆ, ಸಂಪ್ರದಾಯ ಮುಖ್ಯವಾದವು ಎನ್ನುವುದನ್ನು ಸಾಮಾಜೀಕರಣಗೊಳಿಸಲಾಗಿದೆ. ಮತ್ತೊಂದು ಕಡೆ ಕಥೆಯ ನೀತಿಪಾಠ ಹೆಣ್ಣುಮಕ್ಕಳು ದೊಡ್ಡವರಾದ ಮೇಲೆ ಇದೇ ಪಾಠದಂತೆ ಅನುಸರಿಸಿ ಅವರ ವೈಯಕ್ತಿಕ ಆರೋಗ್ಯ ಜೀವನದ ಮೇಲೆ ಪ್ರಭಾವಿಸುತ್ತದೆ. ಹೆಣ್ಣುಮಕ್ಕಳೆಂದರೆ ವ್ರತ ಸಂಪ್ರದಾಯ ಆಚರಣೆಗಳ ಪಾಲಿಸಬೇಕು, ಗಂಡುಮಕ್ಕಳೆಂದರೆ ಇದರಿಂದ ಹೊರತಾದವರು ಎಂದು ಸಾಮಾಜೀಕರಣ ಪಠ್ಯದ ಮೂಲಕ ಮಕ್ಕಳಲ್ಲಿ ನೆಲೆಗೊಳಿಸಲಾಗಿದೆ. ಪ್ರಸ್ತುತ ಎಷ್ಟೋ ಹೆಣ್ಣು ಮಕ್ಕಳನ್ನು ಬಾಲ್ಯದಲ್ಲಿಯೇ ಉಪವಾಸ, ವ್ರತ, ಪೂಜೆ, ಸಂಪ್ರದಾಯ ಆಚರಣೆಗಳನ್ನು ನೆರವೇರಿಸುವಂತೆ ರೂಪಿಸಿಕೊಂಡು ಬರುತ್ತಿರುವುದು ಕಂಡು ಬರುತ್ತದೆ. ಪಠ್ಯದಲ್ಲಿಯೂ ನೇರವಾಗಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣವನ್ನು ನಿರೂಪಿಸಲಾಗಿದೆ.

ಗದ್ಯದಲ್ಲಿ ಇಬ್ಬರ ಜೀವನ ಚರಿತ್ರೆಯನ್ನು ಅಂದರೆ ಧೀರ ಸೇನಾನಿ ಜಿ.ಜಿ. ಬೇವೂರ (ಪುಟ-೫೫) ಮತ್ತು ಸಂಗೊಳ್ಳಿ ರಾಯಣ್ಣ (ಪುಟ-೬೧) ಪರಿಚಯಿಸುವಲ್ಲಿ ಪ್ರಾಮಾಣಿಕತೆ, ಧೈರ್ಯ, ಸಾಹಸ ಹಾಗೂ ದೇಶದ ರಕ್ಷಣಾ ಗುಣಗಳನ್ನು ಪುರುಷರ ಮೂಲಕ ಕಟ್ಟಿಕೊಡಲಾಗಿದೆ.

ಇನ್ನುಳಿದ ಕಾಲ್ಪನಿಕ ಪಾಠಗಳಲ್ಲಿ ಸೇವೆ, ಸತ್ಯ, ಪರೋಪಕಾರ, ಪರಿಶ್ರಮ, ಪರಿಸರ ಪ್ರಜ್ಞೆ, ಸಾಮಾನ್ಯ ಮತ್ತು ಅಸಾಮಾನ್ಯರ ಕೊಡುಗೆಗಳನ್ನು ಮಕ್ಕಳಿಗೆ ಕಟ್ಟಿಕೊಡುವ ಸಂದರ್ಭದಲ್ಲಿ ಸಹ ಪುರುಷರನ್ನು ಕೇಂದ್ರದಲ್ಲಿಟ್ಟುಕೊಂಡೇ ಪಾಠಗಳ ಮೂಲಕ ಹೇಳಲಾಗಿದೆ. ಇವೆಲ್ಲವೂ ಪುರುಷರ ಗುಣಗಳು; ಕೆಲಸಗಳು, ಪುರುಷರೇ ಮಾಡುವವರು ಎನ್ನುವಂತೆ ಸಾಮಾಜೀಕರಣಗೊಳಿಸಲಾಗಿದೆ. ವ್ಯವಹಾರ ಜ್ಞಾನ, ವ್ಯಾಪಾರ ವಹಿವಾಟು, ಲೋಕಾನುಭವ ಮುಂತಾದವುಗಳು ಸಹ ಕಾಲ್ಪನಿಕವಾಗಿದ್ದರೂ ಪುರುಷರ ಪಾತ್ರದ ಮೂಲಕವೇ ಚಿತ್ರಿಸುವ ಅನಿವಾರ್ಯತೆ ಏಕೆ ಎಂಬ ಪ್ರಶ್ನೆ ಕಾಡುತ್ತದೆ. ರಾಜ, ಮಂತ್ರಿ, ಸೇವಕ ಪಾಠದ ಪಾತ್ರ ಮತ್ತು ಚಿತ್ರದಲ್ಲಿ ಗಂಡುಮಕ್ಕಳು, ನಾನು ಮತ್ತು ಹುಣಸೆಮರ ಪಾಠದಲ್ಲಿ ಜೋಕಾಲಿ ಆಟದಲ್ಲಿ ಹೆಣ್ಣುಮಕ್ಕಳು ಹುಣಸೆಮರದ ಜೊತೆಗಿನ ಸಂಬಂಧವನ್ನು ಪುರುಷರ ಮೂಲಕ ಬಿಂಬಿಸಿರುವುದು ಕಂಡು ಬರುತ್ತದೆ. ಇದೇ ತರಗತಿಯ ಪೂರಕ ಪಾಠಗಳಲ್ಲಿ ಪ್ರಾಮಾಣಿಕತೆಯ ಜೊತೆಗೆ ಆರ್ಥಿಕ ತೊಂದರೆಗಳು ಹೆಣ್ಣಿಗೆ ಇವೆ ಎನ್ನುವ ಸಂದೇಶವನ್ನು ಸಾರಲಾಗಿದೆ.

೬ನೇ ತರಗತಿ ಸಿರಿ-ಕನ್ನಡ ಪ್ರಥಮ ಭಾಷೆ ಕನ್ನಡ ಪಠ್ಯಪುಸ್ತಕದಲ್ಲಿ ಕೃಷ್ಣ-ಸುಧಾಮ (ನಾಟಕ) ಪಾಠದಲ್ಲಿ ಸುಧಾಮನ ಹೆಂಡತಿಯು ಮತ್ತು ಮಕ್ಕಳ ಉಡುಗೆ ತೊಡುಗೆಗಳಲ್ಲಿ ಕಂಡುಬರುವ ಸರ, ಓಲೆ, ಬಳೆ ಇವುಗಳು ಹೆಣ್ಣಿಗೆ ಹಾಕಿಕೊಳ್ಳುವ ವಸ್ತುಗಳೆಂದು ಹೇಳಲಾಗಿದೆ. ಇದೇ ತರಗತಿಯ ೫ನೇ ಪಾಠ 'ಧನ್ಯವಾದ ಹೇಳಿದ ಕೊಕ್ಕರೆ' ಎನ್ನುವ ಪಾಠದಲ್ಲಿ "ಹುಡುಗಿ ರಾತ್ರಿಯ ಅಡುಗೆ ಮಾಡಲು, ವೃದ್ಧನ ಹೆಂಡತಿಗೆ ನೆರವಾದಳು; ಮನೆಯನ್ನು ಗುಡಿಸಿ, ಸಾರಿಸಿ ಚೊಕ್ಕಟ ಮಾಡಿದಳು.(ಪುಟ-೩೫) ಇಲ್ಲಿ ಹೆಣ್ಣುಮಕ್ಕಳು ನಿರ್ವಹಿಸುವ ಗೃಹಕೃತ್ಯಗಳನ್ನು ಮೀಸಲೀಕರಿಸಿದ ಪಾತ್ರದ ಸಂಗತಿಗಳು ಈ ಪಾಠದಲ್ಲಿ ದೊರೆಯುತ್ತದೆ. ಮುಂದುವರೆದು ಇದೇ ತರಗತಿಯ ೬ನೇ ಪಾಠ 'ಮೆರವಣಿಗೆ' ಎಂಬ ಪಾಠದಲ್ಲಿ ದೊರೆಯುವ ಹೆಣ್ಣು-ಗಂಡುಮಕ್ಕಳ ಸಾಮಾಜೀಕರಣ ಸಾಂಪ್ರದಾಯಿಕ ಸಂಗತಿಗಳನ್ನು ಅನುಸರಿಸುವುದು ಕಂಡು ಬರುತ್ತದೆ. ಅದೇನೆಂದರೆ ಶಾಲೆಯ ಒಳಗಡೆ ನಡೆಯುವ ಸಮಾರಂಭದಲ್ಲಿ ಹೆಣ್ಣು ಯಾವ ಕೆಲಸ ನಿರ್ವಹಿಸಬೇಕೆಂಬ ನಿಯಮಗಳು ಶ್ರಮ ವಿಭಜನೆ ಸಂಗತಿಗಳಲ್ಲಿ ಸಾಂಪ್ರದಾಯಿಕ ಸಂಗತಿಗಳೇ ಮುಂದುವರೆದಿರುವುದು ಕಂಡು ಬರುತ್ತದೆ. ಇದಕ್ಕೆ "ತಾವು ಯಾವ ಕೆಲಸ ಮಾಡುವುದು ? ಎಂದು ಯೋಚಿಸಿದರು ಸಂಗಡಿಗರೊಂದಿಗೆ ಮಾತನಾಡಿಕೊಳ್ಳಲು ಶುರು ಮಾಡಿದರು. ಸ್ವಲ್ಪ ಸಮಯದ ಅನಂತರ ಮಾತುಗಳು ಕಡಿಮೆ ಆದವು ಆಗ ಊರಿನ ಹಿರಿಯರೊಬ್ಬರು 'ಯಾರು ಯಾರು ಯಾವ ಯಾವ ಸಿದ್ಧತೆಗಳನ್ನು ನಿರ್ವಹಿಸುತ್ತೀರಿ? ಹೇಳಿರಿ ಎಂದರು' (ಪುಟ-೪೧) ಮುಂದುವರೆದು ಕ್ರೀಡಾಮಂತ್ರಿ ಹಬೀಬ್. ವಾದ್ಯದ ಜವಾಬ್ದಾರಿಯನ್ನು ನಮ್ಮ ತರಗತಿಯವರು ನಿರ್ವಹಿಸುತ್ತಾರೆ ಎಂದನು." ಶಿಕ್ಷಣ ಮಂತ್ರಿ ಡೀನಾ ನಮ್ಮ ತರಗತಿಯವರು ಘೋಷಣಾ ಫಲಕಗಳನ್ನು ಸಿದ್ಧಪಡಿಸುತ್ತೇವೆ ಎಂದಳು. ದೊಡ್ಡೇಶನು ಕಪಿಗಳ ಚಿತ್ರ ನಮ್ಮ ತರಗತಿಯವರು ಸಂಗ್ರಹಿಸುತ್ತೇವೆ ಎಂದನು. ಹಾಡು ಮತ್ತು ನೃತ್ಯಕ್ಕೆ ಸಾಂಸ್ಕೃತಿಕ ಸಂಘದವರು ತಯಾರಾಗುತ್ತಾರೆ ಎಂದಳು

ಮಯೂರಿ. ಚಿಕ್ಕಮಕ್ಕಳಿಗೆ ವೇಷಭೂಷಣಗಳನ್ನು ನಾವು ತಯಾರಿಜಿಸುತ್ತೇವೆ ಎಂದನು ಪಿಂಟೋ, ಆರತಿಯನ್ನು ನಾವು ಹಿಡಿಯುತ್ತೇವೆ ಎಂದಳು ಉನ್ನತಿ, ಪೂರ್ಣಕುಂಭ ನಾವು ಹೊರುತ್ತೇವೆ ಎಂದಳು ಡಾಲಿ, ಮಂಟಪ ಅಲಂಕಾರ ನಮಗಿರಲಿ ಎಂದರು. ಯುವಕ ಸಂಘದವರು. ಕೋಲಾಟ ಮತ್ತು ಡೊಳ್ಳಿನ ಕುಣಿತ ನಾವು ಮಾಡುತ್ತೇವೆ ಎಂದರು ಯುವತಿ ಮಂಡಳಿಯವರು(ಪುಟ-೪೧) ಇಲ್ಲಿ ಶಾಲೆಯಲ್ಲಿಯೇ ಹೆಣ್ಣು-ಗಂಡುಮಕ್ಕಳಿಗೆ 'ಲಿಂಗ'ವನ್ನು ಆಧರಿಸಿ ಸಾಮಾಜೀಕರಣ ರೂಪಿಸುವ ಚಟುವಟಿಕೆಗಳು ಪಾತ್ರಗಳು ಈ ಪಾಠಗಳ ಮೂಲಕ ವ್ಯಕ್ತವಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಇದರಿಂದ ಹೆಣ್ಣು-ಗಂಡು ಮಕ್ಕಳಲ್ಲಿ ಹೆಣ್ಣಿನ ಕೆಲಸ ಬೇರೆ ಗಂಡಿನ ಕೆಲಸ ಬೇರೆ ಎನ್ನುವ ಸಾಮಾಜೀಕರಣವನ್ನು ರೂಪಿಸುತ್ತದೆ ಅದರಂತೆ ಮುಂದುವರೆಸುತ್ತದೆ.

೭ನೇ ತರಗತಿ 'ಸಿರಿ-ಕನ್ನಡ' ಪ್ರಥಮ ಭಾಷೆ ಕನ್ನಡ ಪಠ್ಯಪುಸ್ತಕದ ಒಂದನೇ ಪಾಠದಲ್ಲಿ 'ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು' ಪಾಠದಲ್ಲಿ ತಾಯಿಯಾದವಳು ಮಕ್ಕಳನ್ನು ಮಡಿಲಲ್ಲಿ ಕುಳ್ಳಿರಿಸಿಕೊಂಡು ಗಾಳಿ ಬೀಸುವುದು ಕತೆ ಹೇಳುವುದು, ಈ ಕೆಲಸ ತಾಯಿಯಾದವಳು ಮಾಡುತ್ತಾಳೆ. ಈ ಕೆಲಸ ಅವಳದೇ ಎನ್ನುವ ಪೂರ್ವ ನಿರ್ಧಾರ ರೀತಿಯಲ್ಲಿ ಪಾತ್ರ ಸೃಷ್ಟಿಸಲ್ಪಟ್ಟಿದೆ. ಈ ಪಾಠದ ಮೂಲಕ ಮಕ್ಕಳಲ್ಲಿ ಸಾಮಾಜೀಕರಣಗೊಳಿಸುತ್ತಿರುವುದು ಕಂಡುಬರುತ್ತದೆ. ಪಾಠ-೨ರ 'ಸೀನ ಸೆಟ್ಟರು ನಮ್ಮ ಟೀಚರು' ಎನ್ನುವ ಪಾಠದಲ್ಲಿ ರೈತನ ಕೆಲಸ ಅಂದರೆ ಪುರುಷರು ಮಾಡುವುದು, ಟೀಚರ್ ಕೆಲಸ ಮಹಿಳೆಯರು ಮಾಡುವುದು ಎನ್ನುವ ಸಾಮಾಜೀಕರಣ ಮಕ್ಕಳಲ್ಲಿ ಮೂಡುತ್ತದೆ. ಇದಕ್ಕೆ ಈ ಪಾಠದಲ್ಲಿ ಚಿತ್ರಗಳನ್ನು ಕೊಡಲಾಗಿದೆ. ಪಾಠದೊಳಗಿನ ಸಂಭಾಷಣೆಯಲ್ಲಿ ಕೂಡ ರೈತ ಹೀಗೆ ಸಮಾಜದಲ್ಲಿ ಟೀಚರ್ ಕೆಲಸ ಮಹಿಳೆಗೆ ಮಕ್ಕಳಿಗೆ ಸೂಕ್ತ ರೈತನ ಕೆಲಸ ಪುರುಷನಿಗೆ ಸೂಕ್ತ ಎನ್ನುವಂತೆ ಸಾಮಾಜೀಕರಣವನ್ನು ಯಥಾವತ್ತಾಗಿ ಪಠ್ಯದಲ್ಲಿ ಅಳವಡಿಸಿರುವುದು ಕಂಡುಬರುತ್ತದೆ. ಇದೇ ತರಗತಿಯ ಜನಪದ ಗೀತೆ 'ಭಾಗ್ಯದ ಬಳೆಗಾರ' ಈ ಹಾಡುಗಳಲ್ಲಿ ಬರುವ ಗೀತೆಗಳ ಸಾಲಿನಲ್ಲಿ ದೊರೆಯುವ ಅರ್ಥಗಳು ಸಮಾಜದಲ್ಲಿ ಹೇಗೆ ಹೆಣ್ಣಿಗೆ ಇರುವ ಮುತ್ತೈದೆತನ, ತವರೂರು, ಹಡೆದವ್ವ, ಬಲು ಆಸೆ, ಅಚ್ಚಕೆಂಪಿನ ಬಳೆ ಹಸಿರು ಗೀರಿನ ಬಳೆ ಎನ್ನುವ ಹೆಣ್ಣುಮಕ್ಕಳು, ತವರಿನ ಆಸೆ, ತಾಯಿಯ ಮನೆಯ ದಾರಿಯನ್ನು ಹೆಣ್ಣುಮಗಳು ತಿಳಿಸುವ ರೀತಿ ಈ ಗೀತೆಯಲ್ಲಿದೆ. ಮುತ್ತೈದೆ-ಮದುವೆಯಾದ ಹೆಣ್ಣು, ಹಡೆದವ್ವ ಹೆತ್ತ ತಾಯಿ; ಸಮಾಜದಲ್ಲಿ ಮುತ್ತೈದೆ ಎಂದರೆ, ಹೆಣ್ಣಿಗೆ ಅನೇಕ ಸಾಂಸ್ಕೃತಿಕ ಬಂಧಗಳನ್ನು ತಿಳಿಸುವುದಾಗಿದೆ. ಇದೇ ತರಗತಿಯ ಗದ್ಯಪಾಠ 'ಅಭಿಮನ್ಯು ಪದ್ಮಕ್ರಮದಲ್ಲಿ ಪುರುಷನ ಧೈರ್ಯ, ಸಾಹಸ, ಪರಾಕ್ರಮಗಳ ವಿವರವನ್ನು ನೀಡಿದ್ದು, ಪುರುಷನ ಕುರಿತಾಗಿ ಹೇಳಿರುವುದು ಪುರುಷ ಪರವಾದ ಸಾಮಾಜೀಕರಣಕ್ಕೆ ಪೂರಕವಾಗಿರುವುದು ಕಂಡುಬರುತ್ತದೆ.

೮ನೇ ತರಗತಿ 'ಸಿರಿ-ಕನ್ನಡ' ಪ್ರಥಮ ಭಾಷೆ ಕನ್ನಡ ಪಠ್ಯಪುಸ್ತಕದಲ್ಲಿ ಕೊಡಗಿನ ಗೌರಮ್ಮನವರು ಬರೆದ 'ಆಹುತಿ' ಎಂಬ ಸಣ್ಣ ಕಥೆಯನ್ನು ಈ ತರಗತಿಯ ಅಧ್ಯಾಯದ ೩ನೇ ಪಾಠದಲ್ಲಿ ಇಡಲಾಗಿದೆ. ಈ ಕಥೆಯಲ್ಲಿ ಬಹುತೇಕ ಪಾತ್ರಗಳಲ್ಲಿ ಗಂಡು ವರದಕ್ಷಿಣೆ ಪಡೆಯುವುದು, ಕೇಳುವುದು, ಆಸೆ ಪಡುವುದು, ಗಂಡಿಗೆ ಅಧಿಕಾರವಿದೆ ಎನ್ನುವ ಸಾಮಾಜೀಕರಣವನ್ನು ರೂಪಿಸುವ ಅಂಶಗಳು ಕಥೆಯಲ್ಲಿ ಬರುವ ಸನ್ನಿವೇಶಗಳಲ್ಲಿ ಕಂಡುಬರುತ್ತದೆ. ಉದಾ: ಐಶ್ವರ್ಯವಂತರ ಅಳಿಯನಾದರೆ ನಾನು ಇಂಗ್ಲೆಂಡ್‌ಗೆ ಸುಲಭವಾಗಿ ಹೋಗಬಹುದಾಗಿತ್ತು. ಆದುದರಿಂದ ಆ ಬಡವರ ಹುಡುಗಿಯನ್ನು ಮದುವೆಯಾಗಲು ನನಗೆ ಮನಸಿರಲಿಲ್ಲ "ಪುಟ-೧೪೭ ಮುಂದುವರೆದು "ನಾನಾಗ ಕೇಳಿದ ವರದಕ್ಷಿಣೆ ಎಷ್ಟು ಕೊಡುತ್ತಾರೆ", ಮುಂದುವರೆದು "ನನಗೆ ಲಂಡನ್ನಿಗೆ ಹೋಗಿ ಲಾ ಕಲಿಯಬೇಕೆಂದು ಇಚ್ಛೆಯಿದೆ ಅದಕ್ಕಾಗುವ ಖರ್ಚನ್ನು ಕೊಡುವುದಾದರೆ ಮಾತ್ರ ನಾನು ಆ ಹುಡುಗಿಯನ್ನು ಮದುವೆಯಾಗುತ್ತೇನೆ ಇಲ್ಲದಿದ್ದರೆ ಇಲ್ಲ (ಮುಂದೆ ಪುಟ ೧೪೭). "ಮುಂದಿನ ಓದಿನ ಖರ್ಚಿಗೆ ಹಣ ಕೊಟ್ಟರೆ ಮದುವೆಯಾಗುತ್ತೇನೆ", "ಮಗಳ ಮದುವೆಗೆ ಬಹಳ ಪ್ರಯತ್ನ ಮಾಡುತ್ತಿದ್ದರು, ಬಡತನದ ದೆಸೆಯಿಂದ ವರದಕ್ಷಿಣೆ ಕೊಡಲಾರದೆ ಇನ್ನು ಮದುವೆಯಾಗಿರಲಿಲ್ಲ", (ಪುಟ-೧೪೯) ವರದಕ್ಷಿಣೆಯನ್ನು ಕೊಡಲಾರದ ತಂದೆ ತಾಯಿಯರು ನಾಲ್ಕು ಜನ ಮೊಮ್ಮಕ್ಕಳಿರುವ ಮುದುಕನನ್ನು ಮದುವೆಯಾಗಲಾರದೆ ಆತ್ಮಹತ್ಯೆ ಮಾಡಿಕೊಂಡದ್ದನ್ನು (ಪುಟ-೧೪೯) ಮುಂದುವರೆದು "ಬೆಳಗಿನ ಹೊತ್ತಿನಲ್ಲಿ ಮನೆಗೆ ತಲುಪಿದೆ ನಾನು ಹೋಗುವಾಗ ಅಮ್ಮ ಅಂಗಳ ಸಾರಿಸಿ ರಂಗೋಲಿ ಇಡುತ್ತಿದ್ದಳು. (ಪುಟ-೧೫೦) ಎನ್ನುವುದು ದೊರೆಯುತ್ತದೆ. ಇದೆ ಕಥೆಯಲ್ಲಿ ವರದಕ್ಷಿಣೆ ತೆಗೆದುಕೊಳ್ಳುವುದು ತಪ್ಪು ಎನ್ನುವ ಸಂದೇಶಗಳು ಇವೆ. ಆದರೆ ಅವು ಹೆಚ್ಚು ಒತ್ತು ಕೊಟ್ಟು ಗಂಡಿಗೆ ಹೇಳುವ ಭಾಗವಾಗಿ ಇಲ್ಲಿ ನಿರ್ವಚನೆಗೊಂಡಿಲ್ಲದಿರುವುದು ಕಂಡು ಬರುತ್ತದೆ. ಇಂದಿನ ಸಾಮಾಜಿಕ ಸಂದರ್ಭದಲ್ಲಿ ಹೆಣ್ಣು-ಗಂಡುಮಕ್ಕಳ ಮೇಲೆ ರೂಪಿತಗೊಳ್ಳುವ ವಿಷಯಗಳಲ್ಲಿ 'ವರದಕ್ಷಿಣೆ' ಸಮಸ್ಯೆ ಒಂದು. ವರದಕ್ಷಿಣೆ ಒಂದು ಸಮಸ್ಯೆ, ವರದಕ್ಷಿಣೆ ತೆಗೆದುಕೊಳ್ಳುವುದು ಅಪರಾಧ. ಇದಕ್ಕೆ ಶಿಕ್ಷೆಗಳಿವೆ ಎನ್ನುವ ಕಥೆ ಇದ್ದಿದ್ದರೆ ಮಕ್ಕಳ ಸಾಮಾಜೀಕರಣದ ಮೇಲೆ ಸಾಮಾಜಿಕ ಸಮಸ್ಯೆಯನ್ನು ಹೋಗಲಾಡಿಸುವ ಸಂಗತಿಗಳ ಬಗ್ಗೆ ತಿಳಿಸಿದಂತಾಗುತ್ತಿತ್ತು. ಆದರೆ ಈ ಪಠ್ಯದಲ್ಲಿ ವರದಕ್ಷಿಣೆಯಿಂದ ಆತ್ಮಹತ್ಯೆ, ಸಾವು, ದುರಂತಕ್ಕೆ ಒಳಗಾಗುವವಳು ಮಹಿಳೆ. ಗಂಡು ಇದನ್ನು ಒತ್ತಾಯಿಸುವ, ಕೇಳುವ, ಆಸೆಪಡುವ ಗುಣಗಳನ್ನು ಹೊಂದಬಹುದಾದ ವ್ಯಕ್ತಿ ಎನ್ನುವುದನ್ನು ಈ 'ಆಹುತಿ' ಪಠ್ಯದಿಂದ ಸಾಮಾಜೀಕರಣಗೊಳ್ಳುತ್ತಿರುವುದು ಕಂಡುಬರುತ್ತದೆ. ತಾಯಿ ರಂಗೋಲಿ ಹಾಕುವುದು, ಅಂಗಳ ಸಾರಿಸುವುದು, ಶುಚಿ ಇಡುವುದು ಅವಳಿಂದ ಮಾಡಿಸುವ ಕಾರ್ಯಗಳು; ಅವಳೇ ಅದನ್ನು ಮಾಡುವವಳು. ಆದರೆ ಇಲ್ಲಿ ಕೃತಿಕಾರರು ಕಥೆಯನ್ನು ಸ್ವಾರಸ್ಯಕರವಾಗಿ ನಿರೂಪಿಸಿರಬಹುದು. ಆದರೆ ಹೆಣ್ಣು ಗಂಡು ಮಕ್ಕಳ

ಸಾಮಾಜೀಕರಣ ಸೃಷ್ಟಿಗೊಳಿಸಿರುವುದು ಪಠ್ಯದಲ್ಲಿ ದೊರೆಯುವ ಅಕ್ಷರ, ಪದ ರೂಪದ ಮಾಹಿತಿಯು ಸಾಮಾಜೀಕರಣದ ಸಮಸ್ಯೆಯನ್ನು ಸೃಷ್ಟಿಸುತ್ತದೆ. ಹೀಗಾಗಿ ಇಂದು 'ವರದಕ್ಷಿಣೆ ಎಂದರೆ ಅದು ಹೆಣ್ಣಿಗೆ ಮದುವೆ ಸಂದರ್ಭದಲ್ಲಿ ಗಂಡು ಕೇಳಬಹುದಾದ ಹಕ್ಕು ಎಂದು ಇಂದಿಗೂ ಮುಂದುವರೆದಿರುವುದು ಅಲ್ಲದೇ ಇಂತಹ ಪಠ್ಯಗಳ ಮೂಲಕ ದೊರೆಯುವುದರಿಂದ ಸಾಮಾಜೀಕರಣ ಎನ್ನಬಹುದಾಗಿದೆ'. ವರದಕ್ಷಿಣೆ ಕೊಡುವುದು ಮತ್ತು ತೆಗೆದುಕೊಳ್ಳುವುದು ಶಿಕ್ಷೆ ಆಗುತ್ತದೆ ಎನ್ನುವ ಅಂಶಗಳು, ವರದಕ್ಷಿಣೆ ಕೇಳುವರು ಕಾನೂನಿನ ಪ್ರಕಾರ ಅಪರಾಧ ಎನ್ನುವ ಅಂಶಗಳನ್ನು ಹೆಣ್ಣು-ಗಂಡು ಮಕ್ಕಳಲ್ಲಿ ಬಿತ್ತಬೇಕಾದ ಸಾಮಾಜೀಕರಣದ ಪಾಠಗಳ ಪಠ್ಯಬೇಕಾಗಿದೆ.

ಜೈವಿಕ ಲಿಂಗದ ಸುತ್ತ ಸಂಸ್ಕೃತಿ ದೃಢೀಕರಣಗೊಂಡಷ್ಟು ಹುಡುಗ ಹುಡುಗಿಯರು ಗುರುತಿಸುವ ಲಿಂಗಬೇಧ ಹೆಚ್ಚು ತೀವ್ರವಾಗಿರುತ್ತದೆ. ಜನನೇಂದ್ರಿಯ ಆಧಾರದಲ್ಲಿ ಗಂಡು-ಈಗಾಗಲೇ ಹೆಣ್ಣಿಗಿಂತ ಭಿನ್ನ ಎಂಬುದನ್ನು ನಾವು ನಿರ್ಧರಿಸಿಕೊಂಡಿದ್ದೇವೆ. ಅಲ್ಲದೆ ಅದನ್ನು 'ವಸ್ತುನಿಷ್ಠ' ಸತ್ಯ ಎಂಬಂತೆ ಒಪ್ಪಿಕೊಂಡಿದ್ದೇವೆ. ವ್ಯಕ್ತಿಯನ್ನು ಗುರುತಿಸಲು, ಹೆಸರು, ಧರಿಸುವ ಆಭರಣ, ಮುಖದಲ್ಲಿರುವ ಕೂದಲು ಮುಂತಾದ ಜೈವಿಕ ಲಕ್ಷಣಗಳ ಸಾಕ್ಷಿಗಾಗಿ ಹುಡುಕುತ್ತೇವೆ. ಸಾಮಾಜೀಕರಣದ ಪರಿಣಾಮದಿಂದಾಗಿ ಜೈವಿಕ ಲಿಂಗವು ಸಾಮಾಜಿಕ ಲಿಂಗವಾಗಿ ಮಾರ್ಪಟ್ಟಿರುವುದು. ಈ ತೆರನಾದ ಪಠ್ಯಗಳಿಂದ ದೊರೆಯುವ ಸಾಮಾಜೀಕರಣದಿಂದ ಮತ್ತು ಶಾಲೆ, ಪಠ್ಯಪುಸ್ತಕಗಳು ಹಾಗೂ ಶಿಕ್ಷಕರು ಕೂಡ ಲಿಂಗಪಾತ್ರದ ಮೇಲೆ ಪ್ರಭಾವ ಬೀರುತ್ತದೆ. ಹೀಗಾಗಿ ಸಾಮಾಜೀಕರಣ ಶಾಲಾ ಪಠ್ಯಪುಸ್ತಕಗಳು ಕೂಡ ಗಂಡು ಹೆಣ್ಣುಮಕ್ಕಳ ನಿರ್ದಿಷ್ಟ ಪಾತ್ರಗಳ ಮಾದರಿಗಳನ್ನು ಮಕ್ಕಳ ಮುಂದಿಡುತ್ತಿವೆ. ಹೆಣ್ಣಿಗೆ ಪಾಲನೆ, ಪೋಷಣೆ, ರಕ್ಷಣೆ ಪತಿವ್ರತೆ, ತ್ಯಾಗಮಯಿ, ಮಗಳು, ಹೆಂಡತಿ, ತಾಯಿ, ಸಹೋದರಿ ಗಂಡಿಗೆ ಪತಿ, ಧೀರ, ಶೂರ, ಸಾಹಸಿ ಸೋದರ ಎಂದು ಮುಂದುವರಿಸಿಕೊಂಡು ಹೋಗಬೇಕು ಎಂಬ ಸಾಮಾಜೀಕರಣವನ್ನು ಸ್ಥಿರಗೊಳಿಸುತ್ತಿರುವುದು ಕಂಡುಬರುತ್ತದೆ. ಇದಕ್ಕೆ ಪಠ್ಯಪುಸ್ತಕಗಳಲ್ಲಿ ದೊರೆಯುವ ಅಡುಗೆ ಮನೆಯ ಪಾತ್ರ, ತಾಯಿಯ ಪಾತ್ರದಚಿತ್ರಗಳು, ಅದೇ ಗಂಡಿನ ಚಿತ್ರಗಳಲ್ಲಿ ದುಡಿಮೆಯ ಚಿತ್ರಗಳು 'ಉದ್ಯೋಗಂ ಪುರುಷ ಲಕ್ಷಣಂ' ಎನ್ನುವ ಹೇಳಿಕೆಯು ಲಿಂಗ ಪಾತ್ರದ ಬಗ್ಗೆ ತಿಳಿಸುತ್ತದೆ.

೩.೫. ಪಠ್ಯದಲ್ಲಿ ಹೆಣ್ಣು-ಗಂಡುಮಕ್ಕಳ ಕುರಿತಾದ ಚಿತ್ರಗಳು ಬಿಂಬಿಸುವ ಅರ್ಥಗಳ ನೆಲೆಯ ಸಾಮಾಜೀಕರಣ

ಹೆಣ್ಣು-ಗಂಡುಮಕ್ಕಳ ಸಾಮಾಜೀಕರಣ ರೂಪಿಸುವಲ್ಲಿ ಪಠ್ಯಪುಸ್ತಕಗಳಲ್ಲಿ ಪ್ರಕಟಗೊಂಡ ಚಿತ್ರಗಳು ಬಿಂಬಿಸುವ ಅರ್ಥಗಳು ಮಹತ್ವ ಪಡೆಯುತ್ತವೆ. ಅದೇನೆಂದರೆ, ಚಿತ್ರಪಟಗಳಲ್ಲಿ ಆಕರ್ಷಿಸುವ ಬಣ್ಣ, ವಿನ್ಯಾಸ, ರೂಪ, ಗಾತ್ರ, ಚಿತ್ರಗಳಲ್ಲಿ ಮೂಡಿರುವ ಚಟುವಟಿಕೆ ಸಂಗತಿಗಳ ಮೂಲಕ ಅಕ್ಷರ ಜ್ಞಾನವನ್ನು ಹೇಳಿಕೊಡಲಾಗುತ್ತದೆ. ಚಿತ್ರಪಟಗಳ ಮೂಲಕ ಮಕ್ಕಳ ಕಲಿಕೆ ಪ್ರಾರಂಭಿಸಲಾಗುತ್ತದೆ. ಹೀಗಾಗಿ ಹೆಣ್ಣು-ಗಂಡುಮಕ್ಕಳ ಸಾಮಾಜೀಕರಣ ರೂಪಿಸುವಲ್ಲಿ ಪಠ್ಯಪುಸ್ತಕಗಳಲ್ಲಿ

ದೊರೆಯುವ ಚಿತ್ರಗಳು ಮಕ್ಕಳ ಸಾಮಾಜೀಕರಣವನ್ನು ರೂಪಿಸುತ್ತದೆ. ಹೀಗಾಗಿ ಶಾಲೆಗಳ ಪಠ್ಯಪುಸ್ತಕದಲ್ಲಿ ತೋರಿಸಲಾಗಿರುವ ಚಿತ್ರಗಳನ್ನು ದಾಖಲಿಸಿ ವಿಶ್ಲೇಷಿಸಿದರೆ ಈ ಮಾಹಿತಿಗಳು ದೊರೆಯುತ್ತವೆ.

ಒಂದನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ 'ಚಿತ್ರ ನೋಡಿ ಬಿಟ್ಟ ಅಕ್ಷರ ಬರೆ' ಎನ್ನುವ ಹಲವು ಅಭ್ಯಾಸದ ಚಟುವಟಿಕೆಗಳಲ್ಲಿ ಮಕ್ಕಳಿಗೆ ಚಿತ್ರಿಸಿರುವ ಹಲವು ಚಿತ್ರಗಳಲ್ಲಿ ಪುರುಷ ಪರವಾದ ಸಾಮಾಜೀಕರಣದ ಸಂಗತಿಗಳು ಕಂಡು ಬರುತ್ತದೆ. ಉದಾ: ೧ನೇ ತರಗತಿ ಪಠ್ಯಪುಸ್ತಕದ ಪುಟ-೧೭ರಲ್ಲಿ ಸಮರ ಭಾವಚಿತ್ರ, ಪುಟ-೪೨ರಲ್ಲಿ ರಾಜ, ಆಟವಾಡುವ ಬಾಲಕ, ಮುದಕನ ಭಾವಚಿತ್ರ, ಪುಟ-೪೮ರಲ್ಲಿ ಶೂರ ಭಾವಚಿತ್ರ, ಗಂಡಿನ ಶರೀರ ಭಾವಚಿತ್ರ, ಪುಟ-೫೪ರಲ್ಲಿ ಜಾದುಗಾರ ಭಾವಚಿತ್ರ, ಇದೇ ಪುಟದಲ್ಲಿ ಹೆಣ್ಣು ಮಕ್ಕಳ ಕೂದಲ ಭಾವಚಿತ್ರ- ಹೀಗೆ ಒಟ್ಟಾರೆಯಾಗಿ ಪುರುಷರ ಹೆಚ್ಚು ಭಾವಚಿತ್ರಗಳು ಇರುವುದು ಕಂಡು ಬರುತ್ತದೆ. ಕೂದಲು ಬಿಡುವುದು ಹೆಣ್ಣುಮಕ್ಕಳು ಮಾತ್ರ, ಗಂಡು ಯಾವಾಗಲೂ ರಾಜನೇ ಆಗಿರುತ್ತಾನೆ ಮತ್ತು ಅವನ ಧೀರ, ಶೂರ ಆಗಿರುತ್ತಾನೆ ಎನ್ನುವ ಪರಿಕಲ್ಪನೆಗಳನ್ನು ಈ ಚಿತ್ರಗಳು ಮಕ್ಕಳ ಮನಸ್ಸಿನಲ್ಲಿ ಸಾಮಾಜೀಕರಣ ರೂಪಿತಗೊಳ್ಳಲು ಕಾರಣವಾಗುತ್ತದೆ. ಎಳೆಯ ಮನಸ್ಸಿಗೆ ಚಿತ್ರಗಳ ಮೂಲಕ ಲಿಂಗತ್ವ ಅಸಮಾನತೆಯ ವಿಷಯಗಳನ್ನು ಒಂದನೇ ತರಗತಿಯಿಂದಲೇ ಸಾಮಾಜೀಕರಣಗೊಳಿಸಲಾಗುತ್ತಿದೆ ಎನ್ನುವುದನ್ನು ಈ ಮೇಲಿನ ಪಠ್ಯಪುಸ್ತಕಗಳಲ್ಲಿ ದಾಖಲಿದ ಚಿತ್ರಗಳ ಮೂಲಕ ಸ್ಪಷ್ಟವಾಗುತ್ತದೆ. ಹೆಣ್ಣುಮಕ್ಕಳು ಕೂದಲು ಬಿಡಬೇಕು, ಗಂಡುಮಕ್ಕಳು ಕೂದಲು ಬಿಡಬಾರದು. ಗಂಡುಮಕ್ಕಳು, ಸಮರ ಕಲೆ ಕರಗತಗೊಳಿಸಿಕೊಳ್ಳಬೇಕು ಎನ್ನುವ ಅಂಶಗಳು ಗಂಡುಮಕ್ಕಳನ್ನು 'ಶ್ರೇಷ್ಠ' ಎನ್ನುವ ಧೋರಣೆಗೆ ಪೂರಕವೆಂಬಂತೆ ಪಠ್ಯದ ಚಿತ್ರಗಳಲ್ಲಿ ತೋರಿಸಲಾಗಿದೆ.



ಸಮರ



ರಾಜ



ಬಾಲಕ



ಅಜ್ಜ



ಗಂಡಿನ ಶರೀರ



ಸೈನಿಕ



ಹೆಣ್ಣುಮಕ್ಕಳ ಕೂದಲು



ಜಾದುಗಾರ

ಎರಡನೇ ತರಗತಿ ಕನ್ನಡ ನಲಿ-ಕಲಿ, ಕನ್ನಡ ಅಭ್ಯಾಸ ಪುಸ್ತಕದಲ್ಲಿ ಪುಟ-೫ರಲ್ಲಿ ರೈತನ ಭಾವಚಿತ್ರ ಇದೆ. ಸೈನಿಕನ ಭಾವಚಿತ್ರ ಇದೆ. ಪುಟ-೮ರಲ್ಲಿ ರೈತ ಭೂಮಿಯನ್ನು ಉಳುಮೆ ಮಾಡುತ್ತಿರುವನು, ಪುಟ-೮ರಲ್ಲಿ ವಿಮಲೆಯ ಕೈಯಲ್ಲಿ ಮಗು ಇರುವ ಚಿತ್ರ, ಪುಟ-೧೨ರಲ್ಲಿ ಪೊಲೀಸನ ಭಾವಚಿತ್ರ, ಪುಟ-೧೫ರಲ್ಲಿ ತಾಯಿ ಗಾಯಕ್ಕೆ ಔಷಧಿ ಹಾಕಿದಳು, ಪುಟ-೧೮ರಲ್ಲಿ ಪುರುಷ-ರೈತ ನೇಗಿಲು ಹೆಗಲಿಗೆ ಹಾಕಿಕೊಂಡಿರುವುದು, ಪುಟ-೨೬ರಲ್ಲಿ ರಾಜನ ಭಾವಚಿತ್ರ, ಪುಟ-೪೦ರಲ್ಲಿ ತಾಯಿ ಮಗುವಿನ ಭಾವಚಿತ್ರ ಮತ್ತು ಒನಕೆ ಓಬವ್ವಳ ಭಾವಚಿತ್ರ, ಪುಟ-೪೨ರಲ್ಲಿ ಹೆಣ್ಣುಮಕ್ಕಳ ಜಡೆ ಭಾವಚಿತ್ರ, ಪುಟ-೫೩ರಲ್ಲಿ ಹೆಣ್ಣು ಮಕ್ಕಳ ಕಾಲಿಗೆ ಗೆಜ್ಜೆ ಹಾಕಿದ ಭಾವಚಿತ್ರ, ಈ ಭಾವಚಿತ್ರಗಳು ಬಿಂಬಿಸುವ ಸಾಮಾಜೀಕರಣದ ಮಾಹಿತಿಯನ್ನು ಅನುಲಕ್ಷಿಸಿದರೆ,

ಹೆಣ್ಣು-ಗಂಡು ಮಕ್ಕಳು ಬೇರೆ ಬೇರೆ ಎನ್ನುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅಲ್ಲದೆ 'ಚಿತ್ರ ನೋಡಿ ಸೂಕ್ತ ಪದ ಆರಿಸಿ ವಾಕ್ಯ ಪೂರ್ಣಗೊಳಿಸಿ, ಚಿತ್ರ ನೋಡಿ ಪದ ಬರೆ, ಚಿತ್ರ ನೋಡಿ ಬಿಟ್ಟ ಅಕ್ಷರ ಬರೆ, ಮಾದರಿಯಂತೆ ಚಿತ್ರ ನೋಡಿ ಬಿಟ್ಟಿರುವ ಪದ ಬರೆ, ಮಾದರಿಯಂತೆ ವಾಕ್ಯಗಳನ್ನು ಸರಿಪಡಿಸಿ ಬರೆ - ಹೀಗೆ ನಾನಾ ರೀತಿಯಲ್ಲಿ ಮಕ್ಕಳಿಗೆ ಅಭ್ಯಾಸ ಮಾಡಿಸುವ ಸಂದರ್ಭದಲ್ಲಿ ಪಠ್ಯಪುಸ್ತಕದಲ್ಲಿ ಇರುವ ಚಿತ್ರಗಳನ್ನು ಮತ್ತು ಸಂಗತಿಗಳ ಆಧರಿಸಿ ಮಕ್ಕಳಿಗೆ ಬರೆಸುವುದರಿಂದ, ಅಭ್ಯಸಿಸುವುದರಿಂದ, ಹೆಣ್ಣು-ಗಂಡುಮಕ್ಕಳಿಗೆ ಬೇರೆ ಬೇರೆ ಸಾಮಾಜೀಕರಣ ರೂಪಿಸುವಲ್ಲಿ ಕಾರಣವಾಗುತ್ತದೆ. ಇದು ಮುಂದುವರೆದು ಹೆಣ್ಣು-ಗಂಡುಮಕ್ಕಳಲ್ಲಿ ಸಾಮಾಜಿಕ ಸಮಸ್ಯೆಯನ್ನು ರೂಪಿಸುವಲ್ಲಿ ಕಾರಣವಾಗುತ್ತದೆ. ರೈತ ಉಳುಮೆ ಮಾಡುತ್ತಿರುವುದು ಮತ್ತು ಹೆಣ್ಣುಮಕ್ಕಳು ಸಹಾಯಕರಾಗಿ ಕೆಲಸ ಮಾಡುತ್ತಿರುವುದು, ತಾಯಿ ಮಗುವನ್ನು ಎತ್ತಿಕೊಂಡಿರುವುದು, ಹೆಣ್ಣುಮಕ್ಕಳಿಗೆ ಕಾಲಿಗೆ ಗೆಜ್ಜೆ ಹಾಕಿರುವ ಚಿತ್ರ, ಪೊಲೀಸನ ಭಾವಚಿತ್ರ, ತಾಯಿ ಮಗುವನ್ನು ಔಷಧಿ ಹಾಕಿ ಸುಧಾರಿಸುವ ಭಾವಚಿತ್ರ, ಲಿಂಗತ್ವ ಅಸಮಾನತೆಯನ್ನು ಗಟ್ಟಿಗೊಳಿಸುವ, ಸಿದ್ಧ ಮಾದರಿಗಳನ್ನೇ ಮಕ್ಕಳಿಗೆ ಚಿತ್ರದ ಮೂಲಕ ಸಾಮಾಜೀಕರಣಗೊಳಿಸುವ ಕೆಲಸ ನಡೆದಿರುವುದು ಕಂಡು ಬರುತ್ತದೆ.



ರೈತನು ಭೂಮಿ ಉಳುತಿಹನು



ಸೈನಿಕ



ವಿಮಲಾ ಕೈಯಲ್ಲಿ ಮಗು



ಪೊಲೀಸ್



ತಾಯಿ ಮಗಳಿಗೆ ಔಷಧಿ ಹಾಕುತ್ತಿರುವಳು




ರೈತ ನೇಗಿಲು ಹೊತ್ತುಕೊಂಡಿರುವುದು



ಬಿಜ್ಜಳ ಬಲಶಾಲಿ



ತಾಯಿ ಮಗುವಿನ ಚಿತ್ರ



ಮಹಿಳೆ ಮೊಗ್ಗಿನ ಜಡೆ



ಹೆಣ್ಣುಮಕ್ಕಳ ಕಾಲಿಗೆ ಗೆಜ್ಜೆ ಹಾಕಿರುವುದು

೩ನೇ ತರಗತಿ ಕನ್ನಡ ಭಾಷಾಪಠ್ಯ ಪುಸ್ತಕದಲ್ಲಿ 'ಚಿತ್ರ ನೋಡಿ ಉತ್ತರಿಸುವ' ಮತ್ತು ವಿವಿಧ ಪಾಠಗಳಲ್ಲಿ ಕೊಟ್ಟಿರುವ ಚಿತ್ರಗಳು 'ಭಾಷಾಭ್ಯಾಸ ಮತ್ತು ಚಟುವಟಿಕೆಗಳಲ್ಲಿ' ಸ್ಥಿರಗೊಳಿಸುವ ಅಂಶಗಳು ಇರುವುದು ಕಂಡು ಬರುತ್ತದೆ. ಹೆಣ್ಣುಮಕ್ಕಳಿಗೆ ನಗಣ್ಯತೆ ಪುರುಷರ ಮೂಲಕ ವಿವರಿಸುತ್ತಿರುವುದು, ನಿರ್ಣಾಯಕರಾಗಿ ಪುರುಷರನ್ನೇ ತೋರಿಸಿರುವುದು. ನ್ಯಾಯ ನಿರ್ಣಯದಲ್ಲಿ

ಎಲ್ಲರೂ ಪುರುಷರೆ, ಹೆಣ್ಣು ನೋವು ಅನುಭವಿಸುವವಳು ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಇದಕ್ಕೆ ಮೊದಲಿಗೆ ೩ನೇ ತರಗತಿಯ ಕನ್ನಡ ಪಠ್ಯಪುಸ್ತಕ ನಲಿ-ಕಲಿ ಪುಟ-೪ರಲ್ಲಿ ತಾಯಿ ಮಗುವನ್ನು ಅಪ್ಪಿಕೊಂಡಿರುವುದು ಪಾಲನೆ-ಪೋಷಣೆಯ ಸಂಕೇತವಾಗಿದೆ. ಪಟ-೧೧ರಲ್ಲಿ ಲಗೋರಿ ಆಟದ ಚಿತ್ರಗಳಲ್ಲಿ ಗಂಡುಮಕ್ಕಳು ಮಾತ್ರ ಆಟವಾಡುತ್ತಿರುವುದು, ಹೆಣ್ಣುಮಕ್ಕಳು ಪ್ರತ್ಯೇಕವಾಗಿ ಆಟವಾಡುತ್ತಿರುವುದು ಚಿತ್ರವನ್ನು ಕೊಡಲಾಗಿದೆ. ಇಲ್ಲಿ ಕ್ರೀಡೆಯಲ್ಲಿ ಕೂಡ ಹೆಣ್ಣು-ಗಂಡು ಪ್ರತೇಕವಾದ ಆಟಗಳನ್ನು ಆಡುತ್ತಾರೆ ಎನ್ನುವಂಥ ಚಿತ್ರಗಳನ್ನು ಪ್ರಕಟಿಸಲಾಗಿದೆ. ಇದು ಮಕ್ಕಳಲ್ಲಿ ಆಟದಲ್ಲಿ ಪ್ರತ್ಯೇಕ ಸಾಮಾಜೀಕರಣ ರೂಪಿತವಾಗಲು ಕಾರಣವಾಗುತ್ತದೆ. ಪುಟ-೪೬ರಲ್ಲಿ ರಾಜನ ಆಸ್ಥಾನದ ಭಾವಚಿತ್ರವಿದೆ ಇದರಲ್ಲಿ ಮಹಿಳೆಯರ ಭಾವಚಿತ್ರವಿಲ್ಲ. ರಾಜ ಎಂದರೆ ಗಂಡುಮಕ್ಕಳು ಎಂದು ತಿಳಿಸುತ್ತದೆ. ಇದೇ ತರಗತಿಯ ಪುಟ-೭೩ರಲ್ಲಿ ಗಂಡು ಮಗುವೊಂದು ಅಂಗಡಿ ಮುಂದೆ ನಿಂತಿರುವುದು ಚಿತ್ರವಿದೆ. ಇದೇ ತರಗತಿ ಕೊನೆಯ ಪುಟ-೧೨೫ರಲ್ಲಿ ಗ್ರಾಹಕ, ಶಿಕ್ಷಕ, ವೈದ್ಯ ಸಂಬಂಧಿಸಿದಂತೆ ಚಿತ್ರಗಳಲ್ಲಿ ಬರೆ ಪುರುಷರ ಚಿತ್ರಗಳನ್ನು ಮುಖ್ಯ ಭೂಮಿಕೆಯಾಗಿ ಚಿತ್ರಿಸಲಾಗಿದೆ. ಇಲ್ಲಿ ಚಿತ್ರಗಳ ಮೂಲಕ ಗಂಡು ಮಾಡುವುದು ಹೊರಗಡೆ ಕೆಲಸ; ಹೆಣ್ಣು ಮಾಡುವುದು ಮನೆಯೊಳಗಿನ ಕೆಲಸ. ಗಂಡು ಎಂದರೆ ದುಡಿಮೆ, ಹೆಣ್ಣು ಎಂದರೆ ಗೃಹ ಕೆಲಸ, ಎಂದು ಹೀಗೆ ಮಕ್ಕಳಲ್ಲಿ ಬೇರೆ ಬೇರೆ ಸಾಮಾಜೀಕರಣ ರೂಪಿತಗೊಳ್ಳಲು ಕಾರಣವಾಗುತ್ತದೆ. ಈ ತೆರನಾದ ಚಿತ್ರಗಳ ಕುರಿತಂತೆ ಮಕ್ಕಳ ಕಡೆಯಿಂದ ಬರೆಸುವಾಗ ಆ ಮಕ್ಕಳು ಚಿತ್ರದಲ್ಲಿ ಬಿಂಬಿತವಾದ ಭಾವಚಿತ್ರ ನೋಡಿ ಬರೆದಾಗ ಗಂಡುಮಕ್ಕಳು ಈ ಕೆಲಸ ಹೆಣ್ಣುಮಕ್ಕಳು ಬೇರೆ ಕೆಲಸ ಎಂದು ಶ್ರಮದಲ್ಲಿ ಲಿಂಗ ಆಧಾರಿತ ಶ್ರಮವಿಭಜನೆಗೆ ಕಾರಣವಾಗುತ್ತದೆ.

ಮೂರನೆ ತರಗತಿಯ ಪಠ್ಯದಲ್ಲಿ ಚಿತ್ರ ನೋಡಿ ಉತ್ತರಿಸು, ವಿವಿಧ ಪಾಠಗಳಲ್ಲಿ ಕೊಟ್ಟಿರುವ ಚಿತ್ರಗಳು, ಭಾಷಾಭ್ಯಾಸ ಮತ್ತು ಚಟುವಟಿಕೆಗಳಲ್ಲಿ ಬಹುತೇಕ ಎಲ್ಲ ಕಡೆ ಗಂಡುಮಕ್ಕಳನ್ನೇ ತೋರಿಸಿ, ಪುರುಷವಾಚಕಗಳನ್ನು ಬಳಸಲಾಗಿದೆ. ಜೊತೆಗೆ ಸಾಧಕರ, ಹೊರಸಂಚಾರದ ಚಿತ್ರಗಳು ಪುರುಷರ ಮೂಲಕ ವಿವರಿಸುತ್ತಿರುವುದು, ಪೇಟೆಗೆ ಹೋಗುವ ಹಣ ಖರ್ಚು ಮಾಡುವ ನಿರ್ಣಾಯಕರಾಗಿ ಅವರನ್ನೇ(ಪುರುಷರ) ತೋರಿಸಿರುವುದು, ನ್ಯಾಯ ನಿರ್ಣಯದಲ್ಲಿ ಪುರುಷರಿರುವುದು ಎಲ್ಲವೂ ಪುರುಷರ ಸಾಮಾಜೀಕರಣ ನೀಡಿದಂತಾಗುತ್ತದೆ. ಮತ್ತೊಂದು ಕಡೆ ತಾಯಿ ಮಗು ಜೊತೆಗೆ ಇರುವ ಚಿತ್ರ ಮಗುವಿನ ಲಾಲನೆ-ಪಾಲನೆ ತಾಯಿಯದ್ದು ಎನ್ನುವ ಮನೋಸ್ಥಿತಿ ಪ್ರತಿಫಲನವಾಗುತ್ತದೆ ಮಕ್ಕಳಲ್ಲಿ. ಈ ತೆರನಾದ ಸಾಮಾಜೀಕರಣದ ರೂಪಣೆಯಿಂದಾಗಿಯೇ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆ ಹುಟ್ಟಿಕೊಳ್ಳುತ್ತದೆ.

ಈಗಾಗಲೇ ಮೂರನೇ ತರಗತಿಯ ಪರಿಷ್ಕರಣೆ ಪೂರ್ವದ ಪಠ್ಯಪುಸ್ತಕದಲ್ಲಿ ಕೂಡ ಗಂಡು ಮಗುವನ್ನು ತಾಯಿ ಬೆಳಿಗ್ಗೆ ಎದ್ದೇಳಿಸುವುದು, ಪುಟ-೧೦ರಲ್ಲಿ ಹೋರಾಟ, ಚಳುವಳಿ, ಪುರುಷರೇ ಮುಂದು, ಪುಟ-೩೮, ೪೦ರಲ್ಲಿ ಹೆಣ್ಣುಮಕ್ಕಳು ಬಟ್ಟೆ ತೊಳೆದು, ಒಣಗಿಸುವ ದೃಶ್ಯದ ಭಾವಚಿತ್ರ, ಪು-೪೪ರಲ್ಲಿ ಸಾಧಕರ ಭಾವಚಿತ್ರ, ಪುಟ-೪೮ರಲ್ಲಿ ಹೆಣ್ಣುಮಕ್ಕಳ ಆರತಿ ಮಾಡುವ ಭಾವಚಿತ್ರ ಪುಟ-೪೬ರಲ್ಲಿ ಆದರ್ಶ ಶಿಕ್ಷಕ ಭಾವಚಿತ್ರ, ಪುಟ-೬೭ರಲ್ಲಿ ಜಾತ್ರೆ

ಸಂದರ್ಭದಲ್ಲಿ ಪುರುಷರೇ ಇರುವ ಡೊಳ್ಳು ಕುಣಿತ, ಕಂಸಾಳೆ ಭಾವಚಿತ್ರ ಹೀಗೆ ಒಟ್ಟಾರೆಯಾಗಿ ಹೇಳುವುದಾದರೆ ಹಿಂದಿನ ತರಗತಿಗಳಲ್ಲಿ ಬಿಂಬಿಸಿದ ಪುರುಷ ಧೋರಣೆಯನ್ನು ಈ ಪಠ್ಯಪುಸ್ತಕಗಳಲ್ಲಿಯೂ ಚಿತ್ರೀಕರಿಸಿರುವುದು ಕಂಡುಬರುತ್ತದೆ. ಪರಿಷ್ಕರಣೆ ನಂತರದ ಪಠ್ಯಪುಸ್ತಕಗಳಲ್ಲಿ ಪ್ರಕಟಗೊಂಡ ಚಿತ್ರಗಳಲ್ಲಿ ಮಕ್ಕಳ ಮನಸ್ಸಿನಲ್ಲಿ ಗಟ್ಟಿಗೊಳಿಸಿ ಇಂತಹ ಸ್ಥಿತಿಯು ಸಹಜ ಎಂದು ಮಕ್ಕಳು ಒಪ್ಪಿಕೊಳ್ಳುವಂತೆ ಮಾಡುವ ಸಾಮಾಜೀಕರಣವಾಗಿದೆ. ಡೊಳ್ಳು ಕುಣಿತ ಭಾವಚಿತ್ರ, ಕಂಸಾಳೆ, ಸಾಧಕರ ಭಾವಚಿತ್ರಗಳು ಪುರುಷರನ್ನು ಗುರುತಿಸಿ ಪುರುಷ ಪರ ಸಾಮಾಜೀಕರಣಕ್ಕೆ ಕಾರಣವಾಗಿರುವುದು ಕಂಡುಬರುತ್ತದೆ.



ಹುಡುಗರು ಲಗೋರಿ ಆಡುತ್ತಿರುವುದು



ರಾಜನ ಆಸ್ಥಾನದ ಭಾವಚಿತ್ರ



ಗಂಡು ಹುಡುಗ ಅಂಗಡಿ
ಮುಂದೆ ನಿಂತಿರುವುದು



ತಾಯಿ ಮಕ್ಕಳನ್ನು
ಅಪ್ಪಿಕೊಂಡಿರುವುದು



ಪೋಷಕರು ಗಂಡು ಮಗುವನ್ನು
ಶಾಲೆಗೆ ಕಳುಹಿಸುತ್ತಿರುವುದು



ವೈದ್ಯ ಮತ್ತು ರೋಗಿ
(ಪುರುಷರು)

೪ನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ಚಿತ್ರಗಳು ಬಿಂಬಿಸುವ ನೆಲೆಗಳನ್ನು ನೋಡುವುದಾದರೆ 'ಬುದ್ಧಿವಂತ ರಾಮಕೃಷ್ಣ' ಪಾಠದಲ್ಲಿ ರಾಮಕೃಷ್ಣ ಆಸ್ಥಾನದ ಚಿತ್ರಗಳಲ್ಲಿ ರಾಜ, ಮಂತ್ರಿ, ಪಂಡಿತ ಕಾವಲುಗಾರ ಮತ್ತು ಸೈನಿಕ ಪಾತ್ರಗಳಲ್ಲಿ ಪುರುಷರನ್ನು ತೋರಿಸಿ, ಮಹಿಳೆಯರನ್ನು ಸೇವಕಿಯಾಗಿ ತೋರಿಸಲಾಗಿದೆ. ಪುಟ-೬ ಮತ್ತು ೭ರಲ್ಲಿ ವಿವರಣೆ ಹೆಚ್ಚು ಪುರುಷವಾಚಕದಲ್ಲಿವೆ. ಕಲಿಕೆಗೆ ದಾರಿ ಪರಿಚಯಿಸಿರುವ ಭಾವಚಿತ್ರಗಳಲ್ಲಿ ಗಾಂಧೀಜಿ, ನೆಹರು, ಬಸವಣ್ಣ, ಅಂಬೇಡ್ಕರ್, ಕುವೆಂಪು, ಇಷ್ಟು ಮಂದಿ ಪುರುಷರು; ಒನಕೆ ಓಬವ್ವ, ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಮದರ್ ತೆರೆಸಾ ಅಂದರೆ ಕೇವಲ ೩ ಮಂದಿ ಮಹಿಳೆಯರು ಪುಟ-೧೩ರಲ್ಲಿ ಇದೆ. ಇದಲ್ಲದೆ ಬೀಸೋಕಲ್ಲಿನ ಪದ(ಪದ್ಯ) ಬೀಸೋಕಲ್ಲು ಬೀಸುವ ಮಹಿಳೆ ಚಿತ್ರ ಪುಟ-೪೬ರಲ್ಲಿ ಬರಹ ಕಲಿಯಿರಿ, ಜ್ಞಾನ ದೀಪ ಬೆಳಗಿರಿ, ಎಂದು ವಾಕ್ಯ ಬಳಸುವುದರ ಜೊತೆಗೆ ಗಂಡು ಹುಡುಗ ಬರೆಯುತ್ತಿರುವ

ಭಾವಚಿತ್ರವನ್ನು ಚಿತ್ರಿಸಲಾಗಿದೆ. ಪುಟ-೫೧ರಲ್ಲಿ, 'ವೀರ ಅಭಿಮನ್ಯು' ಪಾಠದಲ್ಲಿ ರಾಜನ ಆಸ್ಥಾನದ ಎರಡು ಚಿತ್ರಗಳಲ್ಲಿ ಪುರುಷರು ಮತ್ತು ಇನ್ನೊಂದು ಚಿತ್ರದಲ್ಲಿ ಮಹಿಳೆಯರಿಬ್ಬರು ರಾಜನಿಗೆ ಆರತಿ ಬೆಳಗುತ್ತಿದ್ದಾರೆ. ಪು-೬೮ ಮತ್ತು ೭೦ರಲ್ಲಿ ಪಾಠದ ಸಂಭಾಷಣೆ ಮತ್ತು ಹೆಚ್ಚು ಪಾತ್ರಗಳಲ್ಲಿ ಪುರುಷರನ್ನೇ ಚಿತ್ರೀಕರಿಸಲಾಗಿದೆ. ಪುಟ-೭೩ರಲ್ಲಿ ವೀರಾವೇಶದಿಂದ ಹೋರಾಡಿದ ಚಿತ್ರ (ಅಭಿಮನ್ಯು ಕಥೆಯಲ್ಲಿ ಚಕ್ರವನ್ನು ಕೈಯಲ್ಲಿ ತಿರುಗಿಸಿ ವೀರಾವೇಶದಿಂದ ಹೋರಾಡಿ ವೀರಮರಣ ಹೊಂದುವವನು) ಪುಟ-೮೬ರಲ್ಲಿ ವೈದ್ಯ ಮತ್ತು ರೋಗಿ ಇಬ್ಬರೂ ಪುರುಷರು ಮತ್ತು ಪುಟ-೮೭ರಲ್ಲಿ ಬಸ್ ನಿರ್ವಾಹಕ ವೃತ್ತಿಯಲ್ಲಿ ಪುರುಷ; ಇವರ ಜೊತೆಗೆ ಇರುವ ಪ್ರಯಾಣಿಕರು ಹೆಚ್ಚಿನವರು ಪುರುಷರನ್ನು ಚಿತ್ರಿಸಿರುವುದು ಕಂಡುಬರುತ್ತದೆ. ಪುಟ-೯೫ರಲ್ಲಿ ಗಂಡು ಮಗುವನ್ನು ತಾಯಿ ಮುದ್ದಿಸುವುದು, ಪುಟ-೯೬ರಲ್ಲಿ ಹೋರಾಟದ ಭಾವಚಿತ್ರಗಳನ್ನು ತೋರಿಸಲಾಗಿದೆ. ಇದರಲ್ಲಿ ಮುಂದಾಳತ್ವ ಗಂಡುಮಕ್ಕಳು ಎನ್ನುವಂತೆ ಬಿಂಬಿತವಾಗಿದೆ. ಪಾಠ-೧೫ರಲ್ಲಿ 'ದುಡಿಮೆಯ ಗರಿಮೆ'(ಪಠ್ಯ) ಇದರಲ್ಲಿ ತೋರಿಸಲಾಗಿರುವ ಎಲ್ಲಾ ಭಾವ ಚಿತ್ರಗಳು ಪುರುಷರದ್ದೇ ಆಗಿವೆ. ಇಲ್ಲಿ ಹಿಂದಿನ ತರಗತಿಗಳಲ್ಲಿದ್ದಂತೆ ನಾಲ್ಕನೇ ತರಗತಿ ಕನ್ನಡ ಪಠ್ಯದಲ್ಲೂ ಆಳ್ವಿಕೆ ಮತ್ತು ಪ್ರಮುಖ ಪಾತ್ರಗಳಲ್ಲಿ ಪುರುಷರನ್ನು ಚಿತ್ರೀಕರಿಸಿ ಹೆಚ್ಚು ಪುರುಷವಾಚಕಗಳನ್ನು ಬಳಸುವುದರ ಮೂಲಕ ಪುರುಷ ಪ್ರಧಾನತೆಯೇ ಸಾಮಾಜೀಕರಣ ಸರಿ ಎಂದು ಮಕ್ಕಳು ಒಪ್ಪಿಕೊಳ್ಳುವಂತೆ ಅವರನ್ನು ಮಾನಸಿಕವಾಗಿ ಒಪ್ಪಿಸಲಾಗುತ್ತಿರುವ ಹಂತವೆಂದೆನಿಸುತ್ತದೆ. ಇದೇ ತರಗತಿಯಲ್ಲಿ ಇವರ ಹೆಸರನ್ನು ಬರೆಯಿರಿ ಎಂದು ಕೊಟ್ಟಿರುವ ಚಟುವಟಿಕೆಯ ಚಿತ್ರಗಳಲ್ಲಿ ೫ ಮಂದಿ ಪುರುಷರು ೩ ಮಂದಿ ಮಹಿಳೆಯರ ಭಾವಚಿತ್ರ ಕೊಡಲಾಗಿದೆ. ಮಹಿಳೆಯರ ಭಾವಚಿತ್ರಗಳಲ್ಲಿ ಮಲ್ಲಿಗೆ ಹೂ ಮುಡಿದಿರುವುದು, ಹೆಣ್ಣುಮಕ್ಕಳ ಭಾವಚಿತ್ರದಲ್ಲಿ ಬಳೆ, ಸರ, ಕುಂಕುಮ ಹಾಕಿರುವ ಚಿತ್ರಗಳು ಗಂಡುಮಕ್ಕಳ ಚಿತ್ರಗಳಲ್ಲಿ ಆಟಿಕೆ ವಸ್ತುಗಳು ಉದಾ: ಚೆಂಡು ಕೊಡಲಾಗಿದೆ. ಇದರಿಂದ ಹೆಚ್ಚು ಪುರುಷನಿಗೆ ಮಹತ್ವ ಕೊಟ್ಟು ಚಿತ್ರೀಕರಿಸಿರುವುದು ಕಂಡು ಬರುತ್ತದೆ.




ಅಭಿಮನ್ಯು ತನ್ನ ತಾಯಿ ಸುಭದ್ರೆಯ ಪಾದಗಳಿಗೆ ನಮಸ್ಕರಿಸುವನು.




ಗಂಡು ಹುಡುಗ ಬರೆಯುತ್ತಿರುವುದು



ಮಹಿಳೆ ಬೀಸೋಕಲ್ಲಿನ ಚಿತ್ರ



ವೈದ್ಯ ಮತ್ತು ರೋಗಿ ಇಬ್ಬರು
ಪುರುಷರ ಚಿತ್ರ



ಪುರುಷ ಕಂಡೆಕ್ಟರ್ ಚಿತ್ರ



ತಾಯಿ ಮಗುವಿಗೆ ಮುದ್ದಿಸುವುದು



ಚಳುವಳಿಯಲ್ಲಿ ಪುರುಷರ ಮುಂದಾಳುತ್ವ







ದುಡಿಮೆಯ ಗರಿಮೆಯಲ್ಲಿ ಪುರುಷರ
ಚಿತ್ರಗಳು ಹೆಚ್ಚಾಗಿವೆ.

೫ನೇ ತರಗತಿ ಗದ್ಯಭಾಗದ ಒಂದನೇ ಪಾಠದಲ್ಲಿ ‘ಒಟ್ಟಿಗೆ ಬಾಳುವ ಆನಂದ’ ಪಾಠದಲ್ಲಿ ಪುಟ-೧ರಲ್ಲಿ ಇಬ್ಬರು ಪುರುಷರು ಇರುವ ಭಾವಚಿತ್ರ ಪಾಠ-೨ರಲ್ಲಿ ‘ನದಿಯ ಅಳಲು’ ಪುಟ-೮ರಲ್ಲಿ ಇರುವ ಭಾವಚಿತ್ರದಲ್ಲಿ ಹೆಚ್ಚಾಗಿ ಗಂಡುಮಕ್ಕಳ ಭಾವಚಿತ್ರವಿದೆ. ಪುಟ-೧೦ರಲ್ಲಿ ಮಹಿಳೆಯನ್ನು ದೇವಿ ಆಕಾರದಲ್ಲಿ ಚಿತ್ರಿಸಲಾಗಿದೆ. ಮಕ್ಕಳ ಬೇಡಿಕೊಳ್ಳುವ ಚಿತ್ರ. ಪಾಠ-೪ರಲ್ಲಿ ಪುಟ-೨೫-೨೬ ‘ಸುಳ್ಳು ಹೇಳಬಾರದು’ ಎನ್ನುವ ತಾಯಿ ಮಕ್ಕಳಿಗೆ ನೈತಿಕ ಪಾಠ ಹೇಳುವ ಚಿತ್ರವಿದೆ. ಪಾಠ-೫ರಲ್ಲಿ ಪಂಜರ ಶಾಲೆಯಲ್ಲಿ ರಾಜರ ಪೋಷಾಕು ತೊಟ್ಟ ಚಿತ್ರವಿದೆ. ಪುಟ-೩೩ ಮತ್ತು ೩೫ರಲ್ಲಿ, ರಾಜ ಪೋಷಾಕು ತೊಟ್ಟ ಪುರುಷರ ಚಿತ್ರ. ಪಾಠ-೬ರಲ್ಲಿ ‘ನಾನು ಮತ್ತು ಹುಣಸೆಮರ’ ಎಂಬ ಪಾಠದಲ್ಲಿ ಪುಟ-೪೦ರಲ್ಲಿ ಜೋಕಾಲಿ ಆಟದಲ್ಲಿ ಹೆಣ್ಣುಮಕ್ಕಳು, ಹುಣಸೆಮರದ ಜೊತೆಗಿನ ಸಂಬಂಧವನ್ನು ಪುರುಷನ ಮೂಲಕ ಬಿಂಬಿಸಿರುವುದು; ‘ಜೊತೆಯಲ್ಲಿ ಇರುವವರು’ ಹುತ್ತರಿ ಹಾಡು ಪುಟ-೬೨ ಮಹಿಳೆಯ ಚಿತ್ರವನ್ನು ದೇವಿ ಆಕಾರದಲ್ಲಿ, ಪುಟ-೬೮ರಲ್ಲಿ ಪುರುಷನ ಚಿತ್ರವನ್ನು ಋಷಿಮುನಿಯಂತೆ ಚಿತ್ರದಲ್ಲಿ ತೋರಿಸಲಾಗಿದೆ. ಪುಟ-೮೮ರ ಪಾಠ-೫ರಲ್ಲಿ ಕರಡಿ ಕುಣಿತದಲ್ಲಿ ಪುರುಷನ ಚಿತ್ರವನ್ನು ಹಾಕಲಾಗಿದೆ. ಪೂರಕ ಪಾಠಗಳಲ್ಲಿ ‘ಪ್ರಾಮಾಣಿಕತೆ ಪಾಠದಲ್ಲಿನ ರೈಲು ಚಿತ್ರದಲ್ಲಿನ ಮಹಿಳೆಯರ ಚಿತ್ರವನ್ನು ಸಂಪ್ರದಾಯ ಉಡುಗೆ ತೊಟ್ಟ ಪುರುಷ-ಮಹಿಳೆಯರ ಚಿತ್ರವನ್ನು ಹಾಕಲಾಗಿದೆ’. ಪಾಠದಲ್ಲಿ ಪಾತ್ರೆ, ಹಣ, ಸಂಪಾದನೆ, ಮರ ಕಡಿಯುವ ನಿರ್ಣಯಗಳಲ್ಲಿ ಪುರುಷರನ್ನು ಬಿಂಬಿಸಲಾಗಿದೆ. ಒಟ್ಟಾರೆಯಾಗಿ ಹೆಣ್ಣು-ಗಂಡು ಮಕ್ಕಳ ಕುರಿತಾಗಿ ಚಿತ್ರಿತಗೊಂಡಿರುವ ಭಾವಚಿತ್ರಗಳಲ್ಲಿ ಗಂಡು-ಹೆಣ್ಣು ಮಕ್ಕಳ ಕುರಿತಂತೆ ಭಿನ್ನ ಸಾಮಾಜೀಕರಣ ರೂಪಿತಗೊಳಿಸುವಂಥ ಚಿತ್ರಗಳು ಕಂಡು ಬರುತ್ತವೆ. ಮತ್ತೊಂದು ಕಡೆ ಈ ತರಗತಿಯಲ್ಲಿ ಚಿತ್ರಗಳನ್ನು ನೋಡಿದರೆ ಹೆಣ್ಣು-ಗಂಡಿನ ಉಡುಗೆ ತೊಡುಗೆ ಬೇರೆ, ಬೇರೆ ಎಂದು ಬಿಂಬಿಸುತ್ತವೆ. ಏಕೆಂದರೆ ಸಮಾಜದಲ್ಲಿ ಹೆಣ್ಣು ಗಂಡುಮಕ್ಕಳಿಗೆ ರೂಢಿಯಲ್ಲಿರುವುದನ್ನು ಕೊಂಚವೂ ಬದಲಾವಣೆ ಮಾಡದೆ ಯಥಾವತ್ತಾದ ಚಿತ್ತಗಳನ್ನು ಮುದ್ರಿಸಲಾಗಿದೆ.



ಪುರುಷನ ಜೊತೆ ಹೆಣ್ಣು ಮಗಳು
ಕೆಲಸಕ್ಕೆ ಹೋಗುತ್ತಿರುವುದು



ಗಂಡು ಮಕ್ಕಳ ಭಾವಚಿತ್ರ



ಮಹಿಳೆ ದೇವಿ ಚಿತ್ರ



ಪುರುಷ ಸೈನಿಕರು



ಹುಡುಗಿಯರ ಜೋಕಾಲಿ ಆಟ



ರಾಜನು ಮಂತ್ರಿಯೊಂದಿಗೆ ಸಮಾಲೋಚನೆ



ಮಹಿಳೆ ಅಳುತ್ತಿರುವುದು



ಮಹಿಳೆಯು ಮಕ್ಕಳೊಂದಿಗೆ ಚರ್ಚೆ

೬ನೇ ತರಗತಿ ಕನ್ನಡ ಭಾಷೆ ಪಠ್ಯಪುಸ್ತಕದ 'ಗಂಧರ್ವಸೇನ!' ಎನ್ನುವ ೨ನೇ ಪಾಠದಲ್ಲಿ ಕೊಟ್ಟಿರುವ ಚಿತ್ರದಲ್ಲಿ ರಾಜನು ಪೋಷಾಕು ತೊಟ್ಟ ಪುರುಷರ ಭಾವಚಿತ್ರಗಳಿವೆ. (ಪುಟ-೯) ಇದೇ ಪಾಠದ ಪುಟ-೧೧ರಲ್ಲಿ ಹೆಣ್ಣು ಮಕ್ಕಳು ಚಿಂತಿಸುವ, ಅಳಲು ತೋಡಿಕೊಳ್ಳುವ ಚಿತ್ರಗಳು ಇವೆ. ಇದೇ ತರಗತಿಯ ಪಾಠ-೩ರ ಕೃಷ್ಣ-ಸುಧಾಮ(ನಾಟಕ)ದ ಭಾವಚಿತ್ರದಲ್ಲಿ ಹಿರಿಯ ಮಹಿಳೆಯೊಬ್ಬಳು ಹಿರಿಯ ಪುರುಷ ಸಮಾನಳಾಗಿ ಕುಳಿತುಕೊಳ್ಳದೆ ಮಂಚದ ಕೆಳಗೆ ಕುಳಿತುಕೊಂಡಿರುವುದು ಮತ್ತು ವ್ಯಥೆ ಪಡುತ್ತಿರುವುದು ಚಿತ್ರ ಕಂಡು ಬರುತ್ತದೆ. ಪುಟ-೧೭ರಲ್ಲಿ ಪಾಠ-೬ರ 'ಮೆರವಣಿಗೆ' ಎಂಬ ಪಾಠದ ಭಾವಚಿತ್ರದಲ್ಲಿ ಪುಟ-೪೦ರಲ್ಲಿ ಶಾಲೆಯ ಮುಂದೆ ಮಹಿಳೆಯು ನಿಂತಿರುವ, ಪುರುಷರು ಕುಳಿತುಕೊಂಡಿರುವ ಜೊತೆಗೆ ಲಿಂಗ ಅಸಮಾನತೆಯನ್ನು

ಬಿಂಬಿಸುವ ಭಾವಚಿತ್ರ ಕಂಡು ಬರುತ್ತದೆ. ಜೊತೆಗೆ ಇದೇ ಪಾಠ, ಪುಟ-೪೨ರಲ್ಲಿ ಗಂಡುಮಕ್ಕಳು ಮೆರವಣಿಗೆ ಮುಂದೆ ಕುಳಿತು ಕುಣಿಯುತ್ತಿರುವುದು ಮತ್ತು ಇಲ್ಲಿ ಹೆಣ್ಣುಮಕ್ಕಳು ನೋಡುಗರಾಗಿಸಿದ ಭಾವಚಿತ್ರವಿದೆ. ಇದೇ ತರಗತಿ ಪಾಠ-೮ರಲ್ಲಿ 'ಕರ್ನಾಟಕ ಏಕೀಕರಣ ಪುಟ-೫೮ರಲ್ಲಿ ರೇಡಿಯೊ ಕೇಳುಗರಲ್ಲಿ ಗಂಡುಮಕ್ಕಳ ಪಾತ್ರ ಹೆಚ್ಚಿದೆ ಎನ್ನುವುದನ್ನು ಬಿಂಬಿಸುವ ಚಿತ್ರ ಕಂಡುಬರುತ್ತದೆ. ಇದೇ ತರಗತಿಯ ಪದ್ಯ-೨ರಲ್ಲಿ 'ಅವ್ವ' ಪದ್ಯದಲ್ಲಿ ತೋರಿಸಿರುವ ಭಾವಚಿತ್ರದಲ್ಲಿ ಹೆಣ್ಣುಮಕ್ಕಳಿಗೆ ಪಾಲಕ-ಪೋಷಕರಾಗಿ ರಕ್ಷಣಾ ನೆಲೆಯಲ್ಲಿ ಭಾವಚಿತ್ರ ಪ್ರತಿಬಿಂಬಿತವಾಗಿರುವುದು. ಇದೇ ತರಗತಿ 'ಗಂಗವ್ವ ತಾಯಿ' ಪದ್ಯದಲ್ಲಿ ಹೆಣ್ಣುಮಕ್ಕಳು ನಾಟಿ ಮಾಡುವ ಚಿತ್ರವಿದೆ. ಇದಲ್ಲದೆ ಇದೇ ತರಗತಿ ಪು-೧೨೧ರಲ್ಲಿ ಹೆಣ್ಣುಮಕ್ಕಳ ಮುಂದೆ ಪಾತ್ರೆಗಳು (ಊಟದ ತಟ್ಟೆ, ಡಬ್ಬಿಗಳು) ಬಿದ್ದಿರುವುದು ಕಂಡು ಬರುತ್ತದೆ.



ಶಿಕ್ಷಕರು ಹುಡುಗರ ಜೊತೆ ಸಭೆ



ಹುಡುಗರು ಮುಂದಾಳತ್ವದ ಮೆರವಣಿಗೆ



ಶಿಕ್ಷಕರು ಹುಡುಗರ ಜೊತೆ ಚರ್ಚೆ



ಹುಡುಗಿಯು ದೆವ್ವದ ಹತ್ತಿರ ಮಾತನಾಡುವುದು

೭ನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ಮೊದಲ ಗದ್ಯ ಭಾಗದಲ್ಲಿ 'ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು' ಪುಟ-೨ರಲ್ಲಿ ಅಜ್ಜಿ ಬಾಲಕನನ್ನು ಮಡಿಲಲ್ಲಿ ಕುಳ್ಳಿರಿಸಿಕೊಂಡು ಕತೆ ಹೇಳುವ ಚಿತ್ರವಿದೆ. ಇದೇ ಮತ್ತೊಂದು ಕಡೆ ಇದೆ. ಪಾಠದ ಪುಟ-೪ರಲ್ಲ ಗಂಡು ಮತ್ತು ಹೆಣ್ಣಿನ ಚಿತ್ರವಿದೆ. ಇದರಲ್ಲಿ ಸಿಂಗರಿಸಿಕೊಂಡ ಮಹಿಳೆಯ ಚಿತ್ರವಿದೆ. ಇದಕ್ಕೆ ಪೂರಕವಾಗಿ ಗಂಭೀರ ಭಾವವುಳ್ಳ ಪುರುಷನ ಚಿತ್ರವಿದೆ. ಪುಟ ೧೪ರಲ್ಲಿ 'ಸೀನಸೆಟ್ಟರು ನಮ್ಮ ಟೀಚರು' ಎನ್ನುವ ಪಾಠದಲ್ಲಿ ರೈತ ಚಿತ್ರ ಗಂಡಿನದಾಗಿದ್ದು, ಟೀಚರು ಚಿತ್ರ ಹೆಣ್ಣಿನದ್ದಾಗಿದೆ. ಇದೇ ತರಗತಿಯ ಪಾಠ-೩ರಲ್ಲಿ ಪುಟ-೨೫ರಲ್ಲಿ ಇಬ್ಬರ ಪುರುಷರ ಅಂದರೆ ರಾಜರ ಪೋಷಾಕು ತೊಟ್ಟ ಚಿತ್ರಗಳಿವೆ. ತರಗತಿಯಲ್ಲಿ

ಪಾಠ-೭ 'ಬಿಲ್ಲಹಬ್ಬ'(ನಾಟಕ)ದ ಪಠ್ಯದಲ್ಲಿ ಭಾವಚಿತ್ರ ಹೆಚ್ಚು ಪುರುಷರದ್ದೇ ಇದೆ. ಪಾಠ-೮ ಸಂಕ್ರಾಂತಿಯಂದು 'ಸುಖ-ದುಃಖ'ದ ಪಾಠದಲ್ಲಿ ಪುರುಷರು ಕಿಚ್ಚು ಹಾಯಿಸುವುದು, ದನಕರುಗಳನ್ನು ಬೆಂಕಿಯಲ್ಲಿ ಜಿಗಿಸುವ ಚಿತ್ರ ಇದೆ. ಪಾಠ-೮ ಅಭಿಮನ್ಯು ಪರಾಕ್ರಮ' ಪುಟ ೧೨೬ರಲ್ಲಿ ಪುರುಷರ ರಾಜ ಪೋಷಾಕು ತೊಟ್ಟ ಚಿತ್ರವಿದೆ. ಕೊನೆಯಲ್ಲಿ ಇದೇ ತರಗತಿ ಪುಸ್ತಕದ ೧೫೦ನೇ ಪುಟದಲ್ಲಿ ಹೆಣ್ಣುಮಕ್ಕಳಿಗೆ ತಲೆಬಾಚುವ ಚಿತ್ರವಿದೆ. ಯಾಕೆ ಈ ಪಾಠಗಳಲ್ಲಿ ತೋರಿಸುವ ಚಿತ್ರಗಳು ಹೆಣ್ಣಿನ ಚಹರೆ ಪ್ರತ್ಯೇಕ ಗಂಡಿನ ಚಹರೆ ಪ್ರತ್ಯೇಕ ಎಂದು ತೋರಿಸುವ ಕೆಲಸ ಈ ಚಿತ್ರಗಳಲ್ಲಿ ಕಂಡುಬರುತ್ತದೆ. ರೈತ ಎಂದರೆ ಪುರುಷನ ಭಾವಚಿತ್ರ ಹಾಕುವುದು, ಟೀಚರ್ ಎಂದರೆ ಮಹಿಳೆ ಭಾವಚಿತ್ರ ಪ್ರಕಟಿಸುವುದು ಇದೆ. ಹೆಣ್ಣು-ಗಂಡು ಮಕ್ಕಳ ಭಿನ್ನ ಸಾಮಾಜೀಕರಣವನ್ನು ಮತ್ತೆ ಇದೇ ಪಠ್ಯಪುಸ್ತಕದ ಚಿತ್ರಗಳ ಮೂಲಕ ಸ್ಥಿರೀಕರಿಸುವ ಕೆಲಸ ನಡೆಸುತ್ತಿರುವುದನ್ನು ಗಮನಿಸಬಹುದಾಗಿದೆ.



ತಾಯಿ ಮಗನ ಚಿತ್ರ



ಹೆಣ್ಣುಮಗಳ ಜಿಂಕೆಯೊಂದಿಗೆ ಪ್ರೀತಿ



ರೈತನ ಭಾವಚಿತ್ರ



ಅಭಿಮನ್ಯುನ ಪರಾಕ್ರಮ



ದುರ್ಯೋಧನ ಮತ್ತು ಶಲ್ಯನ ಮಾತುಕತೆ




ತಂದೆಯು ಮಕ್ಕಳಿಗೆ ಜಡೆ ಹಾಕುತ್ತಿರುವುದು






೮ನೇ ತರಗತಿಯ ಕನ್ನಡ ಭಾಷಾ ಪಠ್ಯಪುಸ್ತಕದಲ್ಲಿ ಮೊದಲ ಪಾಠ–'ಮಗ್ಗದ ಸಾಹೇಬದಲ್ಲಿ ಪುಟ–೨ರಲ್ಲಿ ಕೈಮಗ್ಗ, ಕೆತ್ತನೆ ಕೆಲಸ, ಮಿಷನ್ ಕೆಲಸ ಕೌಶಲ್ಯ ಸಂಬಂಧಿ ಕೆಲಸವನ್ನು ಹೆಚ್ಚು ಪುರುಷನೇ ಮಾಡುತ್ತಾನೆ ಎನ್ನುವಂತೆ ಚಿತ್ರಿಸಲಾಗಿದೆ. ದುಡಿಮೆ ಎಂದರೆ ಪುರುಷ(ಗಂಡು) ಎನ್ನುವ ಸಾಮಾಜೀಕರಣ ರೂಪಿಸುವಲ್ಲಿ ಈ ಚಿತ್ರ ಕೆಲಸ ಮಾಡುತ್ತದೆ. ಇದೇ ತರಗತಿಯ ಪಾಠ–೬ರಲ್ಲಿ 'ಯಶೋಧರೆ' ಪುಟ–೫೪ರಲ್ಲಿ ನಾಟಕ ರೂಪದಲ್ಲಿ ಇರುವ ಕಥೆಯ ಭಾವಚಿತ್ರ ಹೆಣ್ಣು ಚಿಂತಾಕ್ರಾತವಳಾಗಿದ್ದಾಳೆ. ಇದೇ ತರಗತಿಯ ಪುಟ ೯೪ರಲ್ಲಿ ಪುಟ ಮಗುವಿನ ಜೊತೆ ತಾಯಿ ಮಲಗಿರುವ ಚಿತ್ರವಿದೆ. ಇದು ಹೆಣ್ಣುಮಕ್ಕಳ ಪಾಲನೆ–ಪೋಷಣೆ, ರಕ್ಷಣೆ ಮಹಿಳೆಯ ಕೆಲಸ ಎನ್ನುವಂಥ ಸಾಮಾಜೀಕರಣವನ್ನು ಬಿಂಬಿಸುತ್ತದೆ. ಪುಟ–೧೦೫ರಲ್ಲಿ ಹೆಣ್ಣಿನ ಚಿತ್ರವಿದೆ; ಇದರಲ್ಲಿ ಹೆಣ್ಣಿನ ಚಿತ್ರದಲ್ಲಿ ಶೃಂಗಾರಮಯ ಕನಸುಗಳನ್ನು ಕಾಣುವವಳು, ಹೂವು, ನಾಚಿಕೆ ಅವಳಿಗೆ ಸಂಬಂಧಿಸಿದ್ದು ಎನ್ನುವಂಥ ಸಾಮಾಜೀಕರಣಗೊಳಿಸಲಾಗಿದೆ. ಇದೇ ತರಗತಿಯ ಕೊನೆಯ ಪಾಠ ಪುಟ–೧೫೫ರಲ್ಲಿ ಸಾರ್ವಜನಿಕ ಚಿತ್ರಗಳಲ್ಲಿ ಹೆಚ್ಚು ಪುರುಷನ ಪೋಟೋಗಳು ಇರುವುದು ಕಂಡುಬರುತ್ತದೆ. ಅಂದರೆ ಸಾರ್ವಜನಿಕ ಜೀವನದಲ್ಲಿ ಗಂಡು ಇರುವವನು ಎನ್ನುವ ಸಾಮಾಜೀಕರಣ ರೂಪಿಸುತ್ತದೆ.



ಹುಡುಗರ ಮುಂದಾಳತ್ವದಲ್ಲಿ ಕೆಲಸ ಮಾಡುವುದು



ಮಗ ತಾಯಿಗೆ ಸಂತೈಸುವುದು



ತಾಯಿ ಮಗುವಿನ ಭಾವಚಿತ್ರ



ಮಹಿಳೆಯ ಕೋಗಿಲೆ ಜೊತೆ ಹಾಡು

ಒಟ್ಟಾರೆಯಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಕಲಿ–ನಲಿ ಎನ್ನುವ ಕನ್ನಡ ಪಠ್ಯಪುಸ್ತಕಗಳಲ್ಲಿ ಎಳೆವಯಸ್ಸಿನ, ಮುಗ್ಧ ಮನಸಿಗೆ, ಹೆಣ್ಣು–ಗಂಡು ಮಕ್ಕಳ ಮನಸಿನಲ್ಲಿ ಚಿತ್ರಗಳು ಬಿಂಬಿಸುವ

ಅರ್ಥಗಳನ್ನು ನೋಡಿದರೆ ಹೆಣ್ಣು-ಗಂಡುಗಳನ್ನು ಭಿನ್ನ ಸಾಮಾಜೀಕರಣ ರೂಪಿಸುವಲ್ಲಿ, ಮಕ್ಕಳ ಮನಸಿನಲ್ಲಿ ಕಲ್ಪನೆ, ಚಿಂತನೆ, ಪಾತ್ರ ಕೆಲಸ, ಪರಿಸರ ರೂಪಿಸುವುದರ ಜೊತೆಗೆ ಹೆಣ್ಣು-ಗಂಡು ಭಿನ್ನ ಪಾತ್ರಗಳನ್ನು ನಿರ್ವಹಿಸುತ್ತಾರೆ, ಭಿನ್ನವಾಗಿ ಇರುತ್ತಾರೆ, ಭಿನ್ನ ಉಡುಪುಗಳನ್ನು ಧರಿಸುತ್ತಾರೆ ಎಂಬ ಸಂದೇಶಗಳ ಚಿತ್ರಗಳನ್ನು ಮುದ್ರಿಸಿರುವುದು ಪಠ್ಯಪುಸ್ತಕಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಇದರಿಂದ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆ ಸಮಾಜದಲ್ಲಿ ರೂಪುಗೊಳ್ಳಲು ಕಾರಣವಾಗುತ್ತದೆ. ಈ ಪಠ್ಯಪುಸ್ತಕದಲ್ಲಿ ಚಿತ್ರಗಳಲ್ಲ ಹೆಣ್ಣುಮಕ್ಕಳ ಚಿತ್ರಗಳಲ್ಲಿ ಸೀರೆ, ಲಂಗ, ಬಳೆ, ಓಲೆ, ಕುಂಕುಮ, ಜಡೆ ಬಿಟ್ಟಿರುವುದು, ಬಂಗಾರದ ಒಡವೆ ಇವು ಹೆಣ್ಣಿನವು ಎಂದು ಚಿತ್ರಿಸಿದ್ದಾರೆ. ಗಂಡು ಮಕ್ಕಳಿಗೆ ಪಂಚೆ, ಅಂಗಿ, ರಾಜರು ತೊಡುವ ಕಿರೀಟ, ಗದೆ, ಖಡ್ಗ ಧರಿಸುವ ಚಿತ್ರಗಳೇ ಇವೆ. ಹೆಣ್ಣು-ಗಂಡು ಮಕ್ಕಳ ಉಡುಪು, ಧರಿಸುವ ವಸ್ತುಗಳಲ್ಲಿ ಯಾವುದೇ ಸಾಮಾಜೀಕರಣದ ವ್ಯತ್ಯಾಸಗಳ ಚಿತ್ರಗಳು ಕಂಡು ಬಂದಿಲ್ಲ.

'ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆ 'ಕನ್ನಡ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ ಪುಸ್ತಕಗಳನ್ನು ಗಮನಿಸಿದಂತೆ ಅದರಲ್ಲಿರುವ ಚಿತ್ರಗಳು ಬಿಂಬಿಸುವ ಸಾಮಾಜೀಕರಣ ಸಮಸ್ಯೆಯಲ್ಲಿ ಮುಖ್ಯವಾಗಿ ಲಿಂಗತಾರತಮ್ಯದ ಚಿತ್ರವನ್ನು ಪದೇ ಪದೇ ತೋರಿಸಿ ಪುರುಷರ ಹಿರಿಮೆಯನ್ನು ಪ್ರತಿಪಾದಿಸುತ್ತಿರುವುದು ಕಂಡು ಬರುತ್ತದೆ. ಹೆಣ್ಣುಮಕ್ಕಳ ಚಿತ್ರವಿರುವುದು ಬಹಳ ವಿರಳ. ಕೊಟ್ಟಿರುವ ಚಿತ್ರಗಳು ಸಹ ಹೆಣ್ಣಿನ ಅಂದ-ಚೆಂದವನ್ನು, ಅವರ ಮನೆ ಕೆಲಸದಲ್ಲಿ, ಪಾಲನೆ, ಪೋಷಣೆ, ರಕ್ಷಣೆ, ಗೃಹಕೃತ್ಯಗಳಲ್ಲಿ ತೊಡಗಿರುವುದನ್ನು ಎತ್ತಿಹಿಡಿಯುತ್ತವೆ. ಸಮಾಜದಲ್ಲಿ ಮಹಿಳೆಯರು ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ಇದ್ದರೂ ಸಹ ಅವರನ್ನು ಗುರುತಿಸದೆ, ಅವರನ್ನು ಸೇವೆ ಮತ್ತು ಆರೈಕೆಗೆ ಸ್ಥಿರೀಕರಿಸಿದೆ; ಪುರುಷರನ್ನು ಕೃಷಿ, ವೈದ್ಯಕೀಯ, ಅಂಚೆ, ಪೋಲೀಸ್, ಸೈನ್ಯ, ಸಾರಿಗೆ ಮತ್ತು ಸಂಪರ್ಕ ವಲಯಗಳ ವಾರಸುದಾರರಂತೆ ಬಿಂಬಿಸಲಾಗಿದೆ. ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರೂ ಆಡುವ ಆಟಗಳಲ್ಲಿ ಪಡಿಯಚ್ಚುಗಳನ್ನು ಅಂದರೆ ಬುಗುರಿ, ಲಗೋರಿ, ಗೋಲಿ, ಮರಕೋತಿ, ಚಿನ್ನಿದಾಂಡು, ಕ್ರಿಕೆಟ್, ಕಬಡ್ಡಿ, ಡೊಳ್ಳು ಕುಣಿತ, ಕಂಸಾಳೆ, ಬಯಲಾಟ, ಗಂಡು ಮಕ್ಕಳನ್ನು ಚಿತ್ರೀಕರಿಸಿದರೆ, ಹೆಣ್ಣುಮಕ್ಕಳನ್ನು ಕುಂಟಬಿಲ್ಲೆ, ಕಲ್ಲುಗುಚ್ಚ, ಜೋಕಾಲಿ ಆಟಗಳಲ್ಲಿ ತೋರಿಸಲಾಗಿದೆ. ಶಾಲಾ ಶಿಕ್ಷಣದಲ್ಲಿ ಮುಖ್ಯವಾಗಿ ಗಂಡುಮಕ್ಕಳು ಇರುವುದನ್ನು ತೋರಿಸಿವುದರ ಮೂಲಕ 'ಶಿಕ್ಷಣ ಗಂಡಿಗೆ' ಎನ್ನುವ ಮನೋಧರ್ಮವನ್ನು ಸಾಮಾಜೀಕರಣಗೋಳಿಸಿರುವುದು ಕಂಡು ಬರುತ್ತದೆ. ಪದವಿ ಪುರಸ್ಕಾರ ಮತ್ತು ಹೆಗ್ಗಳಿಕೆಗೆ ವೀರ, ಶೂರ, ಧೀರ, ಸಾಹಸ ದೃಶ್ಯಗಳು ಪುರುಷರ ಚಿತ್ರಗಳಲ್ಲಿ ಕಂಡು ಬಂದರೆ, ಹೆಣ್ಣುಮಕ್ಕಳನ್ನು ಸಂಸ್ಕೃತಿ ಬಿಂಬಿಸುವ ಸಾಹಿತ್ಯ, ಕಲೆ, ಆಚರಣೆಗಳನ್ನು ನೆರವೇರಿಸಿಕೊಂಡು ಹೋಗುವ ಮಹಿಳೆಯರನ್ನಾಗಿ ಚಿತ್ರೀಕರಿಸಿರುವುದು ಕಂಡು ಬರುತ್ತದೆ.

ಋಷಿಗಳಾಗಿ, ರಾಜರಾಗಿ, ಸಮಾಜ ಸುಧಾರಕರಾಗಿ, ಸಾಹಿತಿಗಳಾಗಿ, ಪುರುಷರನ್ನೇ ಪ್ರಧಾನವಾಗಿ ಮಕ್ಕಳಿಗೆ ಚಿತ್ರಗಳನ್ನು ಪರಿಚಯಿಸಲಾಗಿದೆ. ಹೆಣ್ಣನ್ನು ಅಲಂಕಾರ ಸ್ತ್ರೀಯರನ್ನಾಗಿ, ಸೊಬಗಿನ ಚೆಲುವಿನ ಪ್ರತಿಮೆಗಳಾಗಿ ರೂಪಿಸುತ್ತಾ, ಒಂದು ಸಾಮಗ್ರಿಯ ಮಟ್ಟಕ್ಕೆ ಇಳಿಸಿರುವುದು ಕಂಡು ಬರುತ್ತದೆ. ಹೆಣ್ಣನ್ನು ಸಂಭ್ರಮ ಮತ್ತು ಸಂತೋಷ 'ಆಚರಣೆ', 'ಸಮಾರಂಭ', ಎಂದು ಸಮೀಕರಿಸುವ ಚಿತ್ರಗಳು ಕಂಡು ಬರುತ್ತವೆ. ಮನುಷ್ಯ ಸಹಜ ಗುಣಗಳಾದ ಸಾಹಸ, ಧೈರ್ಯ, ಶೌರ್ಯ, ಶಕ್ತಿ, ಸಾಮರ್ಥ್ಯ, ದಕ್ಷತೆ, ಬುದ್ಧಿವಂತಿಕೆ, ಔದಾರ್ಯ, ಜಾಣ್ಮೆ, ತ್ಯಾಗ, ಬಲಿದಾನ, ದೇಶಪ್ರೇಮ ಇವುಗಳೆಲ್ಲವೂ ಪುರುಷನವೇ ಎಂಬಂತೆ ಬಿಂಬಿಸಲಾಗಿದೆ. ಅಪ್ಪಿತಪ್ಪಿಯೂ ಈ ಗುಣಗಳನ್ನು ಹೆಣ್ಣಿಗೆ ಅನ್ವಯಿಸಿಲ್ಲ. ಬದಲಾಗಿ ಹೆಣ್ಣಿಗೆ ಭಯ, ಧನ್ಯತೆ, ಅಸಹಾಯಕತೆ, ಅಧೀನತೆ, ಸೇವೆ, ಆರೈಕೆ ಮುಂತಾದ ನಕಾರಾತ್ಮಕ ಮೌಲ್ಯಗಳನ್ನು ಸ್ಥಿರೀಕರಿಸುವ ಚಿತ್ರಗಳನ್ನು ಅನ್ವಯಿಸಲಾಗಿದೆ. ಈ ರೀತಿಯ ಚಿತ್ರಗಳು ಬಿಂಬಿಸುವ ನೆಲೆಗಳಲ್ಲಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆ ಸಮಾಜದ ಮೇಲೆ ಪರಿಣಾಮವನ್ನು ಬೀರುತ್ತದೆ. ಹೆಣ್ಣು ಮಗು ತನ್ನ ಅಸ್ತಿತ್ವವನ್ನು ಮತ್ತು ಹಿರಿಮೆ-ಗರಿಮೆಗಳನ್ನು ಕುಟುಂಬದ ಚೌಕಟ್ಟಿನೊಳಗೆ ಇರುವ ಅಡುಗೆ ಮನೆಯೊಳಗೆ ಕಂಡುಕೊಂಡರೆ, ಅದೇ ಗಂಡುಮಗು ಗಡಸುತನವನ್ನು ಎತ್ತಿ ಹಿಡಿದುಕೊಂಡು ಇದೇ ಗುಣ ಮತ್ತು ಮೌಲ್ಯಗಳನ್ನು ಅಳವಡಿಸಿಕೊಂಡು ಹೆಣ್ಣಿನಿಂದ ಅಂತರ ಕಾಯ್ದುಕೊಳ್ಳುತ್ತದೆ. ಹೀಗಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಪಠ್ಯಗಳಲ್ಲಿನ ಚಿತ್ರಗಳು ಕೂಡ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಮೇಲೆ ಪ್ರಭಾವ ಬೀರುತ್ತದೆ. ಈ ಹಿನ್ನೆಲೆಯಲ್ಲಿಯೇ ಪಠ್ಯದಲ್ಲಿ ಚಿತ್ರಿತಗೊಂಡಿರುವ ಚಿತ್ರಗಳು ಬಿಂಬಿಸುವ ತಾರತಮ್ಯದ ಅಂಶಗಳನ್ನು ಕೂಲಂಕಷವಾಗಿ ಮತ್ತೊಮ್ಮೆ ಪರಿಶೀಲಿಸಿ, ವಿಶ್ಲೇಷಿಸಿ ಸೂಕ್ಷ್ಮ ಪರಿಹಾರ ಕಂಡುಕೊಳ್ಳಬೇಕಾದ ಅಗತ್ಯವಿದೆ.

ಲಿಂಗತ್ವ ನ್ಯಾಯ ಮತ್ತು ಲಿಂಗ ಸಮಾನತೆಯನ್ನು ಸೂಚಿಸುವ ಚಿತ್ರಗಳು

ಒಂದನೇ ತರಗತಿ



ಜನರು



ಹೆಣ್ಣು-ಗಂಡು ಊಟ ಮಾಡುತ್ತಿರುವುದು

ಎರಡನೇ ತರಗತಿ



ರೈಲುಗಾಡಿ ಏರುತ್ತಿರುವ ಹುಡುಗಿಯರು




ಗೌರಿ ಗೌತಮ್ಮ ತಂದರು ನೀರನ್ನು



ಓಬವ್ವ

ಮೂರನೇ ತರಗತಿ



ಉದ್ಯಾನವನದಲ್ಲಿ ಒಂದು ದಿನ



ಸಮಾನ ಶ್ರಮ



ಸಮಾನ ಶ್ರಮ



ಸಮಾನ ಶ್ರಮ

ನಾಲ್ಕನೇ ತರಗತಿ



ಕೋಲಾಟ



ಸಮಾನ ತರಬೇತಿ

ಐದನೇ ತರಗತಿ



ಸಮಾನ ಶ್ರಮ



ಸಮಾನ ಹೋರಾಟ

ಆರನೇ ತರಗತಿ





ಸಮಾನ ಶಿಕ್ಷಣ

ಸಮಾಜದಲ್ಲಿ ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ವಲಯಗಳಲ್ಲಿ ಮಕ್ಕಳು ಸಮಾನವಾಗಿ ಭಾಗವಹಿಸುವಂತೆ ಮಾನಸಿಕವಾಗಿ ತಯಾರಿಗೊಳಿಸಲು ಲಿಂಗತ್ವ ಸಮಾನತೆ ಮುಖ್ಯವಾಗಿದೆ. ಈ ಪರಿಕಲ್ಪನೆಯನ್ನು ಆಧರಿಸಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿನ ಲಿಂಗತ್ವ ಸಮಾನತೆ ಬಿಂಬಿಸುವ ಚಿತ್ರಗಳನ್ನು ಕುರಿತು ನೋಡಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳಲ್ಲಿ ದೊರೆಯುವ ಲಿಂಗತ್ವ ಸಮಾನತೆ ಒಂದನೇ ತರಗತಿಯಲ್ಲಿ ದೊರೆಯುವ ಪುಟ-೨೪ರಲ್ಲಿ ಲಿಂಗತ್ವ ಸಮಾನತೆ ಆಧಾರವಾಗಿ ಚಿತ್ರ ನೋಡಿ ಬಿಟ್ಟ ಅಕ್ಷರ ಬರೆ ಎನ್ನುವ ತಲೆಬರಹದಲ್ಲಿ ಇಬ್ಬರು ಹೆಣ್ಣು-ಗಂಡು ಮಕ್ಕಳು ಒಟ್ಟಿಗೆ ಕುಳಿತು ಊಟ ಮಾಡುತ್ತಿರುವ ಚಿತ್ರಗಳನ್ನು ಹಾಕುವ ಮುಖಾಂತರ ಲಿಂಗತ್ವ ಸಮಾನ ನ್ಯಾಯದ ಅಂಶಗಳನ್ನು ಚಿತ್ರೀಕರಿಸಲಾಗಿದೆ. ಅಂದರೆ ಲಿಂಗತ್ವ ಸಮಾನತೆಯ ಆಶಯದ ಅಂಶಗಳು ಈ ತರಗತಿಯ ಪಠ್ಯದಲ್ಲಿ ಕಂಡು ಬರುತ್ತದೆ.

ಎರಡನೇ ತರಗತಿಯ ಕೆಲವು ಚಿತ್ರಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಶ್ರಮವಿಭಜನೆಯನ್ನು ಬಿಂಬಿಸುವ ಚಿತ್ರಗಳು ಕಂಡುಬರುತ್ತವೆ. ಇದಲ್ಲದೆ ಮೂರನೇ ಪುಟ-೪೪ರಲ್ಲಿ ಹೆಣ್ಣು-ಗಂಡು ಮಕ್ಕಳು ನಿರ್ವಹಿಸುವ ಪಾತ್ರಗಳ ನೆಲೆಯಲ್ಲಿ ನೋಡಿದರೆ ಶ್ರಮ ಎನ್ನುವುದು ಹೆಣ್ಣು-ಗಂಡು ಮಕ್ಕಳಿಗೆ ಒಂದೇ ನೆಲೆಯಲ್ಲಿ ಪ್ರಕಟಗೊಳ್ಳಬೇಕೆಂಬ ಆಶಯದಿಂದ ಲಿಂಗತ್ವ ಸಮಾನತೆಯ ನೆಲೆಯಲ್ಲಿ ವಾಕ್ಯ ರಚನೆ ಚಟುವಟಿಕೆಯ ಮೂಲಕ ಚಿತ್ರಣಕ್ಕೆ ಸಂಬಂಧಿಸಿದ ಅರ್ಥಪೂರ್ಣ ವಾಕ್ಯಗಳನ್ನು ಸೂಕ್ತ ಅರ್ಥದೊಂದಿಗೆ ಸ್ಪಷ್ಟವಾಗಿ ಬರೆ ಎನ್ನುವ ಚಿತ್ರಗಳ ಮೂಲಕ ಹೆಣ್ಣು-ಗಂಡುಗಳ ಸಮಾನ ಕೆಲಸ ನಿರ್ವಹಣೆಯ ಮಾಹಿತಿಯನ್ನು ನೀಡಿರುವುದು ಕಂಡುಬರುತ್ತದೆ. ಪುಟ-೭೯ರಲ್ಲಿ ಕ್ರೀಡೆಗಳಲ್ಲಿ ಹೆಣ್ಣು-ಗಂಡು ಸಮಾನವಾಗಿ ಭಾಗವಹಿಸಬಹುದಾಗಿದೆ ಎಂಬ ಸಂದೇಶವನ್ನು ಸಾರುವ ಕೋಲಾಟ ಪಾಠವನ್ನು ಅಳವಡಿಸುವುದರ ಮೂಲಕ ಕ್ರೀಡೆಯಲ್ಲಿ ಹೆಣ್ಣು-ಗಂಡು ಸಮಾನ ಭಾಗಿಗಳೆಂದು ಸಂದೇಶ ಸಾರಿರುವುದು ಇದೆ. ಪುಟ-೮೦ರಲ್ಲಿ ವೇದಿಕೆಯ ಮೇಲೆ ಹೆಣ್ಣು-ಗಂಡಿಗೆ ಸಮಾನ ಸ್ಥಾನಮಾನ ಎನ್ನುವ ಸಂದೇಶ ಸಾರಲಿಕ್ಕೆ ಅನುಕೂಲಕರವಾಗುವ ಕಾರ್ಯನಿರ್ವಹಿಸುವ ಚಿತ್ರಗಳನ್ನು ಪ್ರಕಟಗೊಳಿಸಲಾಗಿದೆ. ಆದರೆ ಈ ಲಿಂಗತ್ವ ಸಮಾನ ನ್ಯಾಯ ಬಿಂಬಿಸುವ ವಾಕ್ಯ ರಚನೆಗಳಾಗಲೀ, ಹೆಚ್ಚಿನ ಚಿತ್ರಗಳಾಗಲೀ ಈ ತರಗತಿಗಳ ಪಠ್ಯಗಳಲ್ಲಿ ಕಂಡುಬರುವುದಿಲ್ಲ.

ನಾಲ್ಕನೇ ತರಗತಿಯ ಹೆಣ್ಣು-ಗಂಡು ಮಕ್ಕಳ ಸಮಾನ ನೆಲೆಯಲ್ಲಿ ಸಾಮಾಜೀಕರಣ ಕುರಿತಂತೆ ಶೋಧಿಸಿದರೆ ಪುಟ ೮೯ರಲ್ಲಿ ಹೆಣ್ಣು-ಗಂಡು ಮಕ್ಕಳು ಸಮಾನ ಕಲೆಯನ್ನು ಸಾರುವ ಸಂದೇಶ ಚಿತ್ರಗಳಲ್ಲಿ ಕೋಲಾಟ ಮತ್ತು ತರಗತಿಯಂತಹ ಅಂಶಗಳನ್ನು ಚಿತ್ರಿಸಲಾಗಿದೆ. ಮುಂದುವರಿದು ಐದನೇ ತರಗತಿಯ ಲಿಂಗತ್ವದ ಸಮಾನತೆಯ ಅಂಶಗಳನ್ನು ಪರಿಶೀಲಿಸಿದಾಗ ಹೆಣ್ಣು-ಗಂಡು ಇಬ್ಬರು ರೈತವರ್ಗ ಅಥವಾ ಶ್ರಮವರ್ಗವನ್ನು ಸರಿಸಮಾನವಾಗಿ ಕಾರ್ಯನಿರ್ವಹಿಸಬೇಕೆಂಬ ಸಾಮಾಜೀಕರಣ ಅಂಶಗಳು ಈ ತರಗತಿಯ ಪಠ್ಯಗಳಲ್ಲಿ ಕಂಡುಬರುತ್ತದೆ. ಇದಕ್ಕೆ ಹೆಣ್ಣು-

ಗಂಡು ಕೆಲಸ ನಿರ್ವಹಿಸುವ ಸಮಾನರು ಎನ್ನುವ ಸಂದೇಶಕ್ಕೆ ಪೂರಕವಾಗುವಂತೆ ಚಿತ್ರಗಳನ್ನು ಪ್ರಕಟಿಸಿರುವುದು ಕಂಡುಬರುತ್ತದೆ. ಇನ್ನು ಆರನೇ ತರಗತಿಯ ಲಿಂಗತ್ವ ಸಮಾನತೆ ನೋಡಿದರೆ ಈ ತರಗತಿಯಲ್ಲಿ ಪಾಠ-೭ರಲ್ಲಿ 'ಯಾಣ ಕುರಿತೊಂದು ಪತ್ರ' ಪುಟ-೪೮ರಲ್ಲಿ ಹೆಣ್ಣು-ಗಂಡು ಮಕ್ಕಳು ಆಧುನಿಕ ತಂತ್ರಜ್ಞಾನವನ್ನು ಸಮಾನವಾಗಿ ಕಲಿಯಬೇಕೆಂಬ ಸಂದೇಶವನ್ನು ಸಾರಿರುವ ಚಿತ್ರಗಳು ಕಂಡುಬರುತ್ತವೆ. ಹೀಗೆ ಒಂದರಿಂದ ಆರನೇ ತರಗತಿಯ ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ಚಿತ್ರಗಳ ಮೂಲಕ ಸಮಾನತೆಯ ಅಂಶಗಳನ್ನು ಹೇಳಿದರೂ ಆದರೆ ಭಾಷೆಯ ವಾಕ್ಯರಚನೆಯಲ್ಲಿ ಸಮಾನತೆ ಸೂಚಿಸುವ ಯಾವ ವ್ಯಾಖ್ಯೆಗಳು ಕಂಡುಬರುವುದಿಲ್ಲ. ಇನ್ನು ಮುಂದುವರಿದು ಏಳು ಮತ್ತು ಎಂಟನೇ ತರಗತಿಯ ಪಠ್ಯಗಳಲ್ಲಿ ಚಿತ್ರಗಳ ಸಂಖ್ಯೆಯನ್ನು ಕಡಿಮೆಗೊಳಿಸಿರುವುದು ಕಂಡುಬರುತ್ತದೆ. ಒಟ್ಟಾರೆ ಹೆಣ್ಣು-ಗಂಡು ಮಕ್ಕಳ ಕುರಿತಂತೆ ಚಿತ್ರಗಳು ಬಿಂಬಿಸುವ ನೆಲೆಯ ಸಾಮಾಜೀಕರಣ ಲಿಂಗತ್ವ ಸಮಾನತೆ ಅಂಶಗಳು ಕಡಿಮೆ ಕಂಡುಬರುತ್ತವೆ.

೩.೬. ಪಠ್ಯದಲ್ಲಿ ಹೆಣ್ಣು-ಗಂಡು ಮಕ್ಕಳ ಕುರಿತಂತೆ ವ್ಯಕ್ತವಾಗುವ ಭಾಷಾ ನೆಲೆಯ ಸಾಮಾಜೀಕರಣ

ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ರೂಪಿಸುವುದರಲ್ಲಿ 'ಭಾಷೆ'ಯು ಪಾತ್ರ ವಹಿಸುತ್ತದೆ. ಯಾವ ಭಾಷೆಯು ಯಾರನ್ನು ಸೂಚಿಸುತ್ತದೆ ಏನನ್ನು ಸೂಚಿಸುತ್ತದೆ, ಯಾವುದನ್ನು ವ್ಯಕ್ತಪಡಿಸುತ್ತದೆ ಯಾವ ಸಂದೇಶವನ್ನು ಹೇಳುತ್ತದೆ. ಈ ಮೂಲಕ ವ್ಯಕ್ತಿಯಲ್ಲಿ ಯಾವ ಸಾಮಾಜೀಕರಣಕ್ಕೆ ಪ್ರೇರಣೆಯಾಗುತ್ತದೆ ಎನ್ನುವುದನ್ನು ಪಠ್ಯಪುಸ್ತಕಗಳಲ್ಲಿನ ಹೆಣ್ಣು-ಗಂಡು ಮಕ್ಕಳ ಭಾಷೆ ನೆಲೆಯ ಸಾಮಾಜೀಕರಣದ ಸಂಗತಿಗಳನ್ನು ಇಲ್ಲಿ ದಾಖಲಿಸಿ ವಿಶ್ಲೇಷಣೆ ಮಾಡಲಾಗಿದೆ. ಮಕ್ಕಳ ಕುರಿತಾದ ಪಠ್ಯಗಳಲ್ಲಿ ಭಾಷೆ ಕುರಿತಂತೆ ಎಚ್ಚರ ವಹಿಸುವುದು ಅತ್ಯಗತ್ಯ. ಯಾಕೆಂದರೆ "ಪಠ್ಯಪುಸ್ತಕಗಳಲ್ಲಿ ಬಳಕೆಗೊಳ್ಳುವ ಭಾಷೆಯು ಸಮಾಜದಲ್ಲಿ ವ್ಯಕ್ತಿ ಹೊಂದಿರುವ ಸ್ಥಾನಮಾನ ಮತ್ತು ಅಧಿಕಾರ ಸಂಬಂಧಗಳನ್ನು ತಿಳಿಸುತ್ತದೆ. ಅದೇ ರೀತಿ ಭಾಷೆ ಕುರಿತಂತೆ ವಿಶ್ಲೇಷಣೆ ಮಾಡುವ ಸಂದರ್ಭದಲ್ಲಿ ಸ್ತ್ರೀವಾದಿಗಳು ಹೇಳುವ ಪ್ರಕಾರ ಹೆಣ್ಣುಮಕ್ಕಳ ಭಾಷೆ ಸಾಮಾನ್ಯವಾಗಿ ಅನುಮೋದನೆ ಮತ್ತು ನಿರೀಕ್ಷೆಯ ಸ್ವರೂಪವನ್ನು ಹೊಂದಿರುತ್ತವೆ. ಅದೇ ಪುರುಷರ ವಾಕ್ಯಗಳು ಆದೇಶಾತ್ಮಕ ಸ್ವರೂಪವನ್ನು ಹೊಂದಿರುತ್ತವೆ"[೮] ಇಲ್ಲಿ ಭಾಷೆ ಪುರುಷ ಪ್ರಧಾನತೆಯನ್ನು ಹೇಗೆ ಪ್ರಕಟಗೊಳಿಸುತ್ತದೆ ಎನ್ನುವುದು ತಿಳಿದು ಬರುತ್ತದೆ. ಮತ್ತೊಂದು ಕಡೆ ಯಾವ ಶಬ್ದ ಪ್ರಯೋಗ ಮಾಡಿದಾಗ 'ಗಂಡಸು' ಎಂಬರ್ಥವು ಮನಸ್ಸಿಗೆ ಹೊಳೆಯುವುದೋ ಅದು 'ಪುಲ್ಲಿಂಗ'ವೆನಿಸುವುದು. ನಮ್ಮ ಭಾವನೆಗೆ 'ಹೆಂಗಸು' ಎಂಬ ಅರ್ಥ ಹೊಳೆದರೆ ಅದು 'ಸ್ತ್ರೀ' ಲಿಂಗವೆನಿಸುವುದು. ಈ ನೆಲೆಯ ಮೂಲಕ ಸಮಾಜದಲ್ಲಿನ ಸಾಮಾಜೀಕರಣದ ಪ್ರಭಾವದಿಂದ ಭಾಷೆ ಪಠ್ಯಪುಸ್ತಕದಲ್ಲಿ ಗಾಢವಾಗಿ ಪ್ರಭಾವಿಸಿದೆ ಎನ್ನುವುದನ್ನು ಉದಾಹರಣೆ ಸಹಿತವಾಗಿ ಪಠ್ಯಪುಸ್ತಕದಲ್ಲಿ ಸಂಗತಿಗಳನ್ನು ದಾಖಲಿಸಿ ವಿಶ್ಲೇಷಿಸಿರುವುದನ್ನು ಈ ರೀತಿಯಾಗಿ ನೋಡಬಹುದು. ಒಂದನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ ಭಾಷೆಗೆ ಸಂಬಂಧಿಸಿದಂತೆ ನೋಡಿದರೆ, ಪುರುಷವಾಚಕ ಪದಗಳನ್ನು ಬಳಸಿರುವುದು ಕಂಡುಬರುತ್ತದೆ.

ಉದಾ: ಅರಸ, ರಾಜ, ತಾತ, ತಂದೆ, ಧೀರ, ಶರೀರ, ಜಾದುಗಾರ, ಬಾಲಕ, ಅಗಸ, ಸಮರ ಮತ್ತು ದಸರ ಶಬ್ದಗಳ ಅಕ್ಷರ ಪರಿಚಯಕ್ಕೆ ಪುರುಷರ ಚಿತ್ರ ತೋರಿಸಲಾಗಿದೆ. ಇಲ್ಲಿ ಅಕ್ಷರ ಅಭ್ಯಾಸದ ಜೊತೆಗೆ ಭಾಷೆಯಲ್ಲಿ ಪುರುಷರ ಸಾಮಾಜೀಕರಣವನ್ನು ಬಿತ್ತುವ ಕೆಲಸ ನಡೆದಿರುವುದು ಕಂಡು ಬರುತ್ತದೆ. ಚಿತ್ರಗಳನ್ನು ಮತ್ತು ಭಾಷೆಯನ್ನು ಲಿಂಗತ್ವ ತಟಸ್ಥವಾಗಿ ಬಳಸಿ, ಇಬ್ಬರನ್ನು ಸಮಾನವಾಗಿ ಗುರುತಿಸುವ ರೀತಿಯಲ್ಲಿ ಪಠ್ಯವನ್ನು ವಿನ್ಯಾಸ ಮಾಡಿದಾಗ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಮಕ್ಕಳು ಸಮಾನ ವ್ಯಕ್ತಿಗಳಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಲಿಂಗತಾರತಮ್ಯದ ನೆಲೆಗಳು ಮಕ್ಕಳಲ್ಲಿ ಗಾಢವಾಗಿ ಉಳಿದುಕೊಳ್ಳುತ್ತವೆ.

ಎರಡನೇ ತರಗತಿಯ ಕನ್ನಡ ಪಠ್ಯಪುಸ್ತಕದ ಪುಟ-೫ರಲ್ಲಿ ಸೈನಿಕ, ರೈತ, ಉಳುತಿಹನು ಭೂಮಿ ರೈತನು, ಪುಟ-೮ರಲ್ಲಿ ರೈತ ಭೂಮಿಯನ್ನು ಉಳುಮೆ ಮಾಡುತ್ತಿರುವನು, ಪುಟ-೧೨ರಲ್ಲಿ ಪೊಲೀಸನ ಕೈಯಲ್ಲಿ ಟೋಪಿ ಇದೆ. ಪುಟ-೧೮ರಲ್ಲಿ ರೈತನ ಕಾಯಕ ನಾಡಿನ ಜೀವಾಳ, ಪು-೨೬ ಬಿಜ್ಜಳ(ರಾಜನ ಪೋಷಾಕು)ಪುರುಷನ ಬಲಶಾಲಿ ಶಿಕ್ಷಣ ಇರುವುದು ದೊರೆಯುತ್ತದೆ. ಇದೇ ತರಗತಿಯ ಪುಟ-೨೬ರಲ್ಲಿ ಅಜ್ಜಿಯು ಮಾಡಿದ ಗೊಜ್ಜು ಬಲು ರುಚಿ, ಅಜ್ಜಿ ತೇಜಳ ಕಾಲಿಗೆ ಗೆಜ್ಜೆ ಹಾಕಿದಳು ಬಿಟ್ಟಿರುವ ಪದಗಳನ್ನು ತುಂಬಿರಿ ಎನ್ನುವ ವಾಕ್ಯದಲ್ಲಿ ಇದನ್ನು ಲಿಂಗತ್ವ ದೃಷ್ಟಿಕೋನದ ಭಾಷೆಯಲ್ಲಿ ವಿಶ್ಲೇಷಿಸಿದರೆ, ಮಕ್ಕಳಿಗೆ ಸಾಮಾಜೀಕರಣ ರೂಪಿಸುವಲ್ಲಿ 'ಭಾಷೆ'ಯ ಪಾತ್ರ ಅರ್ಥವಾಗುತ್ತದೆ. ಎರಡನೇ ತರಗತಿಯ ಪಠ್ಯದಲ್ಲಿ ಪುರುಷ ವಾಚಕ ಮತ್ತು ಇಂದಿಗೂ ಸಮಾಜದಲ್ಲಿ ರೈತ, ಪೊಲೀಸ್, ಸೈನಿಕ, ಬಲಶಾಲಿ ಇವುಗಳ ಮೂಲಕ ವ್ಯಕ್ತವಾಗುವ ಭಾವನೆ ಪುರುಷರೇ ಮೊದಲು. ಇದಕ್ಕೆ ಪೂರಕವಾಗಿ ಪುರುಷರ ಭಾವಚಿತ್ರ ಹಾಕಲಾಗಿದೆ. ಲಿಂಗ ಸಮಾನತೆಯನ್ನು ತರುವ 'ಭಾಷೆ' ಪಠ್ಯಗಳಲ್ಲಿ ಕಂಡುಬಂದಿಲ್ಲ. ಇದರಿಂದ ಮಕ್ಕಳಲ್ಲಿ ಬಾಲ್ಯದಲ್ಲಿಯೇ ಮಕ್ಕಳ ಮೇಲೆ ಪುರುಷ ಪರವಾಗಿ ಪ್ರಭಾವ ಬೀರುತ್ತದೆ. ಹೀಗೆ ಭಾಷೆಯ ಮೂಲಕ ಪುರುಷ ಪ್ರಧಾನತೆಯ ಅಂಶಗಳನ್ನು ಸಾಮಾಜೀಕರಣಗೊಳಿಸುವ ಸಂಗತಿಗಳು ಈ ತರಗತಿಯ ಪಠ್ಯದಲ್ಲಿ ಕಂಡುಬರುತ್ತದೆ.

ಮೂರನೇ ತರಗತಿಯ ಕನ್ನಡ ಪಠ್ಯಪುಸ್ತಕದ ಪಾಠ-೬ರಲ್ಲಿ(ಪುಟ-೪) 'ಈಸೂರು ಸ್ವಗತ' ಎನ್ನುವ ಪಾಠದಲ್ಲಿ ಹೆಣ್ಣುಮಕ್ಕಳನ್ನು ಕುರಿತಂತೆ ಹೇಳುವ ಸಂದರ್ಭದಲ್ಲಿ ಬೇರೆ ಎನ್ನುವ ದೃಷ್ಟಿಕೋನ ಸೂಚಿಸುವ ಭಾಷೆಯು ಈ ರೀತಿಯಾಗಿ ದೊರೆಯುತ್ತದೆ. "ಹೆಂಗಸರು, ಮಕ್ಕಳೆನ್ನದೇ ಅನೇಕರು ಚಿತ್ರಹಿಂಸೆಗೆ ಗುರಿಯಾದರೂ ಸರಕಾರದ ವಿರುದ್ಧ ಬಂಡೆದ್ದರೆಂದು ಹಲವರು ವಿರುದ್ಧ ಮೊಕದ್ದಮೆ ಹೂಡಲಾಯಿತು; ಮುಂದೆ ಆ ವೀರರಲ್ಲಿ ಐವರು ಮರಣದಂಡನೆಗೆ ಗುರಿಯಾದರು". ಇಲ್ಲಿ ಭಾಷೆಯ ಮೂಲಕ ಮಹಿಳೆ ಮತ್ತು ಮಕ್ಕಳನ್ನು ಪ್ರತ್ಯೇಕ ವಲಯದಲ್ಲಿ ಇಟ್ಟು ಹೇಳಿರುವುದು ಕಂಡು ಬರುತ್ತದೆ. ಆದೇ ಪುರುಷನನ್ನು ಪ್ರತ್ಯೇಕಗೊಳಿಸಿ ಹೇಳುವ ಸಂಗತಿ ಕಂಡುಬರುವುದಿಲ್ಲ. ಮೂರನೇ ತರಗತಿ ಪಠ್ಯದಲ್ಲಿ ಚಿತ್ರ ನೋಡಿ ಉತ್ತರಿಸು. ವಿವಿಧ

ಪಾಠಗಳಲ್ಲಿ ಬಳಕೆಗೊಂಡಿರುವ ಭಾಷಾಭ್ಯಾಸ ಮತ್ತು ಚಟುವಟಿಕೆಗಳಲ್ಲಿ ಬಹುತೇಕ ಎಲ್ಲ ಕಡೆ ಪುರುಷವಾಚಕಗಳನ್ನು ಬಳಸಿ ಗಂಡುಮಕ್ಕಳನ್ನು ತೋರಿಸಲಾಗಿದೆ. ಪ್ರಕೃತಿದತ್ತವಾದ ವಿಚಾರಗಳನ್ನು ತಿಳಿಸಲು ಪುರುಷವಾಚಕಗಳನ್ನು ಬಳಸಲಾಗಿದೆ. ಈ ತರಗತಿಯ ಪಠ್ಯದಲ್ಲಿ ಬಳಸಿರುವ ರಾಜ, ತಯಾರಕ, ಪಂಡಿತರು, ಮಂತ್ರಿ, ಪ್ರಭು, ಪೊಲೀಸ್, ರೈತ, ಸಿಂಹ ಪುರುಷವಾಚಕಗಳು ಕಂಡು ಬರುತ್ತವೆ. ಆದರೆ ತಯಾರಕ, ಪಂಡಿತರು, ಮಂತ್ರಿ, ಪ್ರಭುಗಳು, ಪೊಲೀಸ್, ರೈತ ಇವರಲ್ಲಿ ಹೆಣ್ಣು ಮಕ್ಕಳು ಇದ್ದಾರೆ; ಆದರೆ ಭಾಷೆ ಪುರುಷ ಪರವಾದ ಸಾಮಾಜೀಕರಣಕ್ಕೆ ಒಳಪಟ್ಟಿರುವುದರಿಂದ ಮಕ್ಕಳ ಮನಸ್ಸಿನಲ್ಲಿ ಇವರೆಲ್ಲ ಪುರುಷರೇ ಎನ್ನುವ ಭಾವನೆಯನ್ನು ಮೂಡಿಸುತ್ತದೆ. ಇದಕ್ಕೆ ಸಾಕ್ಷಿಯಾಗಿ ಪಾಠಗಳಲ್ಲಿ ಪುರುಷರ ಚಿತ್ರಗಳನ್ನು ಮುದ್ರಿಸಲಾಗಿದೆ. ಪಾಠ-೧೧ರ (ಪುಟ-೧೧೧ರಲ್ಲಿ) ಕಾಡಿನ ರಾಜನ ಆಯ್ಕೆ ತಲೆಬರಹದಲ್ಲಿ ಪ್ರಕೃತಿದತ್ತವಾದ ಕಾಡುಪ್ರಾಣಿಗಳಿಗೆ 'ರಾಜನ ಆಯ್ಕೆಯಾಗಬೇಕು' ಎನ್ನುವ ಸಂದೇಶ ಭಾಷೆಯ ಮೂಲಕ ಹೇಳಲಾಗಿದೆ. ಗದ್ಯ-೧೦ರಲ್ಲಿ ಕಿತ್ತೂರು ಚೆನ್ನಮ್ಮಳ ಸಾಧನೆಗಳನ್ನು ಪರಿಚಯಿಸಲು ಮತ್ತು ಪ್ರಕೃತಿದತ್ತ ವಿಚಾರವನ್ನು ತಿಳಿಸಲು ಪುರುಷವಾಚಕ ಬಳಸಲಾಗಿದೆ. ಉದಾ; ಕಿತ್ತೂರು ಚೆನ್ನಮ್ಮರ ಸಾಧನೆಯ ಪದ್ಯದಲ್ಲಿ ಬರುವ ವ್ಯಾಖ್ಯೆಗಳು 'ಕೇಳಿರಿ ಮಕ್ಕಳೇ ನಾಳಿನ ಪ್ರಜೆಗಳೆ; 'ವೀರ ಪುತ್ರಿಯು ಜನಿಸಿಹಳು; 'ತಂದೆಯೊಡನೆ ಪುರುಷವೇಷದಿ; 'ವೀರವನಿತೆ ಎನಿಸಿಹಳು'. ಎಂದಿರುವಲ್ಲಿ ಸ್ಪಷ್ಟವಾಗಿ ಪುರುಷ ಪರವಾಚಕಗಳು ಹಾಗೂ ತಂದೆಯೊಡನೆ ಹೋರಾಡಿದಳು ಎಂದು ಹೇಳುವುದು ಕಂಡು ಬರುತ್ತವೆ.

ನಾಲ್ಕನೇ ತರಗತಿ ಕನ್ನಡ ಪಠ್ಯದಲ್ಲಿ ಆಳ್ವಿಕೆ ಮತ್ತು ಪ್ರಮುಖ ಪಾತ್ರಗಳಲ್ಲಿ ಪುರುಷರನ್ನು ಚಿತ್ರೀಕರಿಸಿ ಹೆಚ್ಚು ಪುರುಷವಾಚಕಗಳನ್ನು ಬಳಸುವುದರ ಮೂಲಕ ಪುರುಷ ಪ್ರಧಾನತೆಯನ್ನು ಸಾಮಾಜೀಕರಣಗೊಳಿಸುವುದು ಕಂಡು ಬರುತ್ತದೆ. ಇದಕ್ಕೆ ಪಾಠದಲ್ಲಿ ಬಹುತೇಕ ಶಿಕ್ಷಕ ಎಂದೇ ಕೊಡಲಾಗಿದೆ. ಪ್ರಕೃತಿದತ್ತ ಸೂರ್ಯ, ಮೋಡ, ಬೆಟ್ಟಗಳನ್ನು ಪುರುಷವಾಚಕದಲ್ಲಿ ಗುರುತಿಸಲಾಗಿದೆ. ಬುದ್ಧಿವಂತ, ರಾಷ್ಟ್ರಪತಿ, ರೈತರು, ಶಿಲ್ಪಿಗಳು, ಮೋಹನ, ವೀರಮಾತೆ ಮತ್ತು ಚೆನ್ನಾಗಿ ನೃತ್ಯವನ್ನು ಹೆಣ್ಣುಮಕ್ಕಳು ಮಾಡುತ್ತಾರೆಂಬ ಚಿಂತನೆ ಪುರುಷಪ್ರಧಾನ ಸಾಮಾಜೀಕರಣ ಗ್ರಹಿಕೆಯ ಭಾಗವಾಗಿದೆ. 'ಪಲ್ಲಕ್ಕಿ ಮೇಲೆ ಮಗ ಬರಲೆಂದು ಮೇಲರಿ ಮೊಗೆ' ಪೂರಕವಾಗಿ ಹೊಗಳಿರುವುದು, ಆಹಾರ ತಯಾರಿಕೆ ಮತ್ತು ಅದರ ಪೂರಕ ಕೆಲಸ ಮಾಡಬೇಕಾದವರು ಆ ಹೆಣ್ಣು. 'ಮಲ್ಲಿಗೆ ಹೂ, ಮುಡಿದು ಚೆಂದ ಸೊಸೆ ಬರಲಿ; ಗಾದೆಗಳು ಇದಲ್ಲದೆ ಒಗಟುಗಳಲ್ಲಿ 'ಅವ್ವನ ಹಾಸಿಗೆ ಸುತ್ತಾಕಾಗೊಲ್ಲ, ಅಪ್ಪನ ದುಡ್ಡು ಎಣಿಸಾಕಾಗೊಲ್ಲ' ಈ ಒಗಟು ಪ್ರಾದೇಶಿಕವಾಗಿ 'ಅವ್ವನ/ಅಮ್ಮನ ಸೀರೆ ಸುತ್ತಾಕಾಗೊಲ್ಲ ಅಪ್ಪನ ದುಡ್ಡು ಎಣಿಸಾಕಾಗೊಲ್ಲ, ಇದಲ್ಲದೆ ಅಮ್ಮ ಸೀರಿ ಉಟ್ಟಾಳ, ಕಾಲುಂಗುರ ಇಟ್ಟಾಳ, ಮೇಲೆ ಹೋಗುತಾಳ, ಒಳಗೆ ಇರುತಾಳ, ಹೆಣ್ಣು-ಗಂಡು ಮಕ್ಕಳ ಸಮಾಜದಲ್ಲಿನ ಸಾಮಾಜೀಕರಣ ಈ ಭಾಷೆ ಮೂಲಕ ಬಂದಿದೆ: ಅದು ಅಪ್ಪ ಎಂದರೆ ಗಂಡು, ಆರ್ಥಿಕತೆ, ಹಣ, ಭಯ, ಧೈರ್ಯ. ಅದೇ ಹೆಣ್ಣು ಅವ್ವ/ಅಮ್ಮ ಎಂದರೆ ಕೆಲಸ,

ಉಡುಪು, ಸೀರೆ, ಬಳೆ ಕಾಲುಂಗುರ, ತಾಳ್ಮೆ, ಸಹನೆ, ಪ್ರೀತಿ ಇಲ್ಲಿ ಸ್ಪಷ್ಟವಾಗಿ ಹೆಣ್ಣು-ಗಂಡು ಮಕ್ಕಳು ಇರುವ ಸ್ಥಾನಮಾನವನ್ನು ಅಕ್ಷರ ಭಾಷೆ ಮೂಲಕ ಸಾಮಾಜೀಕರಣಗೊಳ್ಳುತ್ತಿರುವುದು ಕಂಡು ಬರುತ್ತದೆ. ಪಾಠ-೯ 'ಮಹಿಳಾ ದಿನಾಚರಣೆ' ಪುಟ ೫೯ರಲ್ಲಿ ಮಹಿಳೆಯರ ಕುರಿತಾಗಿ ಹೇಳುವಾಗ "ಹೆಣ್ಣು ಆದರ್ಶ ಸಮಾಜ ನಿರ್ಮಾಣಕ್ಕಾಗಿ ಹಗಲಿರುಳು ಶ್ರಮಿಸುತ್ತಿದ್ದಾಳೆ. ಮಕ್ಕಳ ಪಾಲನೆ, ಪೋಷಣೆಯಿಂದ ಹಿಡಿದು ಅಂತಾರಾಷ್ಟ್ರೀಯ ಮಟ್ಟದವರೆಗೂ ಹಲವು ಸಾಧನೆಗಳನ್ನು ಮಾಡಿದ್ದಾಳೆ." ಹೀಗೆ ಆದರ್ಶ, ಪಾಲನೆ-ಪೋಷಣೆ ಹೆಣ್ಣುಮಕ್ಕಳು ಮಾಡುವ ಕೆಲಸ; ಇಲ್ಲಿ ಅವಳು ಶ್ರಮಿಸುತ್ತಾಳೆ ಎನ್ನುವುದೇ ಹೆಣ್ಣು ಗಂಡು ಮಕ್ಕಳ ಶ್ರಮವಿಭಜನೆಯ ಸಾಮಾಜೀಕರಣ ಸೃಷ್ಟಿಗೊಳ್ಳುತ್ತದೆ. ಗಾದೆಗಳಲ್ಲಿ ಒಗಟುಗಳಲ್ಲಿ ನುಡಿಗಳಲ್ಲಿ ಅನೇಕ ಕಡೆ ಈ ತರಗತಿಯ ಪಾಠದಲ್ಲಿ ಪುರುಷ ಪರವಾದ ಅಥವಾ ಇದು ಪುರುಷರದ್ದು, ಇದು ಮಹಿಳೆಯರದ್ದು ಎಂದು ಸಂಬೋಧಿಸುವ ಭಾಷೆ ಬಳಕೆಗೊಂಡಿರುವುದು ಕಂಡು ಬರುತ್ತದೆ.

ಶಿಕ್ಷಕವೃಂದ ಅದರಲ್ಲೂ ಪ್ರಾಥಮಿಕ ಶಿಕ್ಷಣದಲ್ಲಿ ಶೇ. ೮೦ರಷ್ಟು ಶಿಕ್ಷಕಿಯರಿರುವರು. ಆದರೆ ಪಾಠದಲ್ಲಿ ಬಹುತೇಕ ಕಡೆ ಶಿಕ್ಷಕ ಎಂದೇ ಕೊಡಲಾಗಿದೆ. ಪ್ರಕೃತಿದತ್ತ ಸೂರ್ಯ, ಮೋಡ, ಬೆಟ್ಟಗಳನ್ನು ಪುರುಷವಾಚಕದಲ್ಲಿ ಗುರುತಿಸುವುದು. ಬುದ್ಧಿವಂತ ವಿದ್ಯಾರ್ಥಿ ಮತ್ತು ಚೆನ್ನಾಗಿ ನೃತ್ಯವನ್ನು ಹೆಣ್ಣು ಮಕ್ಕಳು ಮಾಡುತ್ತಾರೆಂಬ ಚಿಂತನೆ ಪುರುಷ ಪ್ರಧಾನ ಗ್ರಹಿಕೆಯ ಭಾಗವಾಗಿದೆ. ಬುದ್ಧಿವಂತ ರಾಮಕೃಷ್ಣ, ವೀರ ಅಭಿಮನ್ಯು, ವೀರಮಾತೆ ಜೀಜಾಬಾಯಿ – ಹೀಗೆ ಪುರುಷ ಪರವಾದ ತಲೆಬರಹದಿಂದಲೇ ಪುರುಷ ವಾಚಕ ಆರಂಭವಾಗುತ್ತದೆ. ಪಾಠ-೬ರ 'ದೊಡ್ಡವರು ಯಾರು?' ಎನ್ನುವ ಪಾಠದಲ್ಲಿ ಇಲಿಗಳ ಸಂಸಾರದ ಕುರಿತ ಸಂಭಾಷಣೆಯಲ್ಲಿ ಸೂರ್ಯ, ಮೋಡ, ಬೆಟ್ಟಗಳ ಸಂಭೋದನೆ ಪುರುಷವಾಚಕದಲ್ಲಿದೆ.

೫ನೇ ತರಗತಿ ಒಟ್ಟು ೯ ಗದ್ಯಭಾಗ ೯ ಪದ್ಯಭಾಗ ೫ ಪೂರಕ ಪಾಠಗಳನ್ನು ಸೇರಿಸಲಾಗಿದೆ. ಇದರಲ್ಲಿ ತಾಳ್ಮೆ, ಪರಿಶ್ರಮ, ಮಾನಸಿಕ ಶುದ್ಧೀಕರಣ, ಶೌರ್ಯ, ಸಾಹಸಗಳನ್ನು ಹಾಗೂ ಪ್ರಕೃತಿಯ ಸೊಬಗನ್ನು ವಿವರಿಸುವಂಥ ಪದ್ಯಗಳನ್ನು ಆರಿಸಲಾಗಿದೆ. ವಚನಗಳು ಹಾಗೂ ಚಂದ್ರಶೇಖರ ಕಂಬಾರರ 'ಮೂಡಲ ಮನೆ' ಪದ್ಯ ಹೆಣ್ಣು-ಗಂಡು ಇಬ್ಬರನ್ನೂ ಒಳಗೊಂಡಿರುವ ಮತ್ತು 'ಒಳಗೊಳ್ಳುವ' ಭಾವನೆಯನ್ನು ಕಟ್ಟಿ ಕೊಡುತ್ತದೆ. ಧೀರ ಸೇನಾನಿ ಮತ್ತು ಸಂಗೊಳ್ಳಿ ರಾಯಣ್ಣ ಪಾಠಗಳಲ್ಲಿ ಪ್ರಾಮಾಣಿಕತೆ, ಧೈರ್ಯ, ಸಾಹಸ ಹಾಗೂ ದೇಶ ರಕ್ಷಣೆ ಗುಣಗಳನ್ನು ಪುರುಷರ ಮೂಲಕ ಕಟ್ಟಿಕೊಡಲಾಗಿದೆ. ಇನ್ನುಳಿದ ಪಾಠಗಳಲ್ಲಿ ಸೇವೆ, ಸತ್ಯ, ಪರೋಪಕಾರ, ಪರಿಶ್ರಮ, ಪರಿಸರ ಪ್ರಜ್ಞೆ ಇಂತಹ ಸಂಗತಿಗಳನ್ನು ಕಟ್ಟಿಕೊಡುವ ಸಂದರ್ಭದಲ್ಲಿ ಸಹ ಪುರುಷರನ್ನೇ ಕೇಂದ್ರದಲ್ಲಿಟ್ಟುಕೊಂಡು ಪಾಠಗಳನ್ನು ಅಳವಡಿಸಿಕೊಳ್ಳಲಾಗಿದೆ. ಈ ತರಗತಿಯ ಪಠ್ಯದಲ್ಲಿ ಸೂರ್ಯ ಪದವನ್ನು ಬಳಸಲಾಗಿದೆ. ಸೂರ್ಯ ಪುರುಷವಾಚಕವಾಗಿದೆ. ಆಸೆ, ಭಕ್ತ, ಆದೇಶದಲ್ಲಿ ಆಸೆ ಮತ್ತು ಆದರ್ಶ ಹಾಡುಗಳು ಪುರುಷ ಪ್ರಧಾನತೆಯ ಭಾಷೆಯಲ್ಲಿರುವುದು ಕಂಡು ಬರುತ್ತದೆ.

ಇದೇ ತರಗತಿಯ ಪಾಠದಲ್ಲಿ ದೊರೆಯುವ ಆನೆಯು ಕಾಡಿನ ಅಧಿಪತಿಯಾಗಿತ್ತು, ಅದು ಆಗಾಗ ಸಭೆ ಕರೆದು ಅವುಗಳ ಕ್ಷೇಮ ಸಮಾಚಾರವನ್ನು ವಿಚಾರಿಸುತ್ತಿತ್ತು'. ಪುಟ-೧೬ ಮುಂದುವರೆದು 'ಉತ್ತಮ ನಾಯಕತ್ವ ಗುಣ ಹೊಂದಿರುವ ಆನೆಯು ಎಲ್ಲ ಪ್ರಾಣಿಗಳಿಂದಲೂ ಮೆಚ್ಚುಗೆಯನ್ನು ಗಳಿಸಿತ್ತು', 'ಎಲ್ಲಾ ಪ್ರಾಣಿಗಳು ಅಂದು ಮನುಷ್ಯರ ಮೇಲೆ ಬಹಳ ದೂರು ಹೇಳುತ್ತಿದ್ದವು, ಮಾನವನಿಂದ ಆಗುತ್ತಿರುವ ತೊಂದರೆ ಹಾಗೂ ಪರಿಹಾರ ಕುರಿತು ಚರ್ಚಿಸುತ್ತಿದ್ದವು". ಹಾಗೇ ಮುಂದಿನ ಸಾಲುಗಳಲ್ಲಿ 'ಮನುಷ್ಯನಿಗೆ ತಿಳಿಹೇಳುವ ಫಲಕದಲ್ಲಿ ವಿವರ ಬರೆದು ತರಲು ಆನೆಯು ಪ್ರಾಣಿಗಳಿಗೆ ಸೂಚಿಸಿತು'. 'ನಾಯಕನ ಸೂಚನೆಯಂತೆ ಅವುಗಳು ಫಲಕಗಳನ್ನು ಹಿಡಿದುಕೊಂಡು ಸಾಲಾಗಿ ನಿಂತವು'. ಹೀಗೆ ಪಠ್ಯಪುಸ್ತಕದಲ್ಲಿ ಪುರುಷ ಪರವಾದ ಸಾಮಾಜೀಕರಣವನ್ನು ರೂಪಿಸುವ ಪುರುಷವಾಚಕ ವ್ಯಾಖ್ಯೆಗಳು ಕಂಡುಬರುತ್ತವೆ. ಯಾಕೆಂದರೆ ಆನೆಯನ್ನು ಪುರುಷ ಲಿಂಗಸೂಚಕವಾಗಿ ಬಳಸಿಕೊಳ್ಳಲಾಗಿದೆ. ಜೊತೆಗೆ ಬಳಸಿರುವ ಭಾಷೆಯಲ್ಲಿ ಪುರುಷನೇ, ರಾಜನೇ ಆದೇಶ ಕೊಡುತ್ತಿದ್ದಾನೆ ಎನ್ನುವ ಭಾವನೆಯಂತೆ ಸಾಮಾಜೀಕರಣ ರೂಪಿಸಲಾಗಿದೆ. ಇದೇ ತರಗತಿಯ ಪಾಠ-೪ರಲ್ಲಿ 'ಸುಳ್ಳು ಹೇಳಬಾರದು' ಪಾಠದಲ್ಲಿ ಬರುವ ವ್ಯಾಖ್ಯೆಗಳಲ್ಲಿ 'ಅಮ್ಮ ಸೂರ್ಯನನ್ನು ನೋಡದೆ ಊಟ ಮಾಡಲು ಒಪ್ಪುವುದಿಲ್ಲ' ಪುಟ-೨೪ ಮುಂದುವರೆದು ನೀವಿಬ್ಬರೂ ಉದಯಿಸುತ್ತಿರುವ ಸೂರ್ಯನನ್ನು ಕಂಡದ್ದು ನಿಜವೆ?' ಪುಟ-೨೫ 'ಸೂರ್ಯನನ್ನು ನೀವು ನೋಡಿದ್ದು ನಿಜವೇ' ಪುಟ-೨೬ ಎಂದು ದೊರೆಯುವ ಸಾಲುಗಳಲ್ಲಿ ಪ್ರಕೃತಿದತ್ತವಾದ ಸೂರ್ಯ, ಆದರೆ ಪುರುಷ ಹೆಸರಿನ ಸಂಬೋಧನೆಯಲ್ಲಿ ಕಂಡುಬರುತ್ತಿದೆ. ಇದಕ್ಕೆ ಕಾರಣ ಪುರುಷ ಪ್ರಧಾನ ಭಾಷೆಯಾಗಿದೆ.

ರೂಢಿಯಲ್ಲಿ ಬಂದ ಪದಗಳಿಗೆ ರೂಢನಾಮ ಎನ್ನುವುದಾದರೂ, ಉದಾ: ನದಿ, ಪರ್ವತ, ಹೆಂಗಸು, ಪಟ್ಟಣ, ದೇಶ, ಇತ್ಯಾದಿ ಅಂಕಿತನಾಮದಲ್ಲಿ ಗುರುತುಗಳಾಗಿ ಹಾಗೂ ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡು ಹೆಸರುಗಳೆಲ್ಲ ಅಂಕಿತನಾಮಗಳು. ಉದಾ: ಕೂಡಲಸಂಗಮದೇವ, ಪುರಂದರ ವಿಠ್ಠಲ, ಗಂಗಾ, ಬ್ರಹ್ಮಪುತ್ರ, ಭಾರತ ಇತ್ಯಾದಿ. ಇನ್ನು ಅನ್ವರ್ಥನಾಮ ಉದಾ: ವ್ಯಾಪಾರಿ, ರೋಗಿ, ಯೋಗಿ, ಬಳೆಗಾರ, ಪೂಜಾರ, ಶಿಕ್ಷಕ, ವಿದ್ಯಾರ್ಥಿ ಇತ್ಯಾದಿ. ಆದರೆ ಬಹುತೇಕ ಈ ತರಗತಿಯ ಪಠ್ಯದಲ್ಲಿ ಕೆಲವೊಮ್ಮೆ ಪುರುಷ ಪರವಾದ ಭಾವನೆಯನ್ನು ಪ್ರಕಟಗೊಳಿಸುವ ಪದಗಳು ಕಂಡುಬರುತ್ತವೆ. ಇದಕ್ಕೆ ಕಾರಣ ಪುರುಷ ಪರವಾದ ಸಾಮಾಜೀಕರಣದ ಸಮಾಜವಾಗಿದೆ. ಹೀಗಾಗಿ ಇಲ್ಲಿಯ ಪಠ್ಯದಲ್ಲಿ ರೈತ, ಶಿಕ್ಷಕ, ವ್ಯಾಪಾರಿ, ಬಳೆಗಾರ, ರಕ್ಷಕರು, ಹೆಚ್ಚಾಗಿ ಪುರುಷಪರವಾದ ಚಿಂತನೆಗಳನ್ನು, ಭಾವನೆಗಳನ್ನು ಪ್ರಕಟಗೊಳಿಸುತ್ತವೆ. ಇದಕ್ಕೆ ಪಾಠ-೫ರಲ್ಲಿ 'ಪಂಜರ ಶಾಲೆ' ಪಾಠದಲ್ಲಿ ಬಳಸಿರುವ ಪದಗಳಲ್ಲಿ ರಾಜ, ರಕ್ಷಕ, ರಾಜಧಿರಾಜ, ಯುವರಾಜ, ರಾಜಸಭೆ, ಮಂತ್ರಿ ಹೀಗೆ ಹಲವು ಪುರುಷಪರ ಸಾಮಾಜೀಕರಣಗೊಳಿಸುತ್ತವೆ. ಇದೇ ತರಗತಿ ಪಾಠ-೮ರ 'ಧೀರಸೇನಾನಿ'ಯಲ್ಲಿ 'ಯುವಜನರು ನಾಳೆಯ ದೇಶ ರಕ್ಷಕರಾಗಬೇಕು' ಪುಟ-೫೬ರಲ್ಲಿ ಹಾಗೂ 'ಬೇವೂರಿನ ವರಪುತ್ರ ಭಾರತದ ಒಂಬತ್ತನೆಯ ಮಹಾದಂಡನಾಯಕರಾಗಿ

ಸೇವೆ ಸಲ್ಲಿಸಿದ' ಪುಟ-೫೭ರಲ್ಲಿ ಈ ವ್ಯಾಖ್ಯೆಗಳಲ್ಲಿ ಪುರುಷನೇ 'ವರ' ಪುರುಷ 'ಪುತ್ರ' ಪುರುಷ ಗಂಡು ಲಿಂಗದ ಭಾಷೆಯ ಪರವಾಗಿ ಸಾಮಾಜೀಕರಣಗೊಳಿಸುತ್ತಿರುವುದು ಕಂಡುಬರುತ್ತದೆ. ಇದೇ ತರಗತಿ ಪುಟ-೬೨ರಲ್ಲಿ 'ಸಾವಿರ ಒಂಟೆ ಸರದಾರ' ಎಂಬ ಬಿರುದು, ಕಡುಗಲಿ(ಗಂಡುಗಲಿ) ಇನ್ನು ಪುಟು-೬೭ರಲ್ಲಿ 'ಎಲ್ಲಿ ಭೂರಮ್ಮ ದೇವಿ ಸನ್ನಿಧಿ ಬಯಸಿ ಬಿಮ್ಮನೇ ಬಂದಳೋ' ಭೂರಮ್ಮ (ಭೂದೇವಿ) ಭೂಮಿಯನ್ನು ಹೆಣ್ಣಿಗೆ ಸಮೀಕರಿಸಿದ ಭಾಷೆ ದೊರೆಯುತ್ತದೆ. ಇದೇ ತರಗತಿಯಲ್ಲಿ ಪುಟ-೭೩ರಲ್ಲಿ 'ಹುಲಿಯ ಬಾಯಿ ಮೇವ ಕಸಿಯುವಂತೆ ಧೀರಶಕ್ತಿ' ಪುಟ-೭೨ರಲ್ಲಿ ಮಕ್ಕಳಿಗೆ ನೀಡುವ ಅಭ್ಯಾಸದಲ್ಲಿ 'ದೇಶಕ್ಕಾಗಿ ಹೋರಾಡಿದ ಕೊಡಗಿನ ವೀರರನ್ನು ಕುರಿತು ಹಾಡುಗಳನ್ನು ಸಂಗ್ರಹಿಸಿ ರಾಗಬದ್ಧವಾಗಿ ಹಾಡಿರಿ', ವೀರ ಸೈನಿಕರ ಜೀವನ ಚರಿತ್ರೆಯನ್ನು ಓದಿರಿ', ಎಂದು ಹೇಳಿರುವ ವ್ಯಾಖ್ಯೆಗಳಲ್ಲಿ ಪುರುಷ ಪರವಾದ ಚಿಂತನೆಯನ್ನು ಮಕ್ಕಳಲ್ಲಿ ಭಾಷೆಯ ಮೂಲಕ ಸಾಮಾಜೀಕರಣಗೊಳಿಸಲಾಗುತ್ತಿದೆ.

೬ನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ಭಾಷೆ ಮೂಲಕ ಬಿಂಬಿಸುವ ಸಾಮಾಜೀಕರಣ ನೋಡಿದರೆ, ಪಾಠ-೬ರಲ್ಲಿ 'ಮೆರವಣಿಗೆ' ಪಾಠದಲ್ಲಿ 'ದೊಡ್ಡೇಶನು' ಕವಿಗಳ ಚಿತ್ರವನ್ನು ನಮ್ಮ ತರಗತಿಯವರದು' ಎಂದು ಹೇಳಿದ್ದನ್ನು ಈ ವಾಕ್ಯದ ಮೂಲಕ ಪುರುಷ ನೆಲೆಯಿಂದ ಕವಿಗಳನ್ನು ಪರಿಚಯಿಸಿರುವುದು ದೊರೆಯುತ್ತದೆ. ಕವಿ ಎಂದರೆ ಕೇವಲ ಪುರುಷರಷ್ಟೇ ಒಳಗೊಳ್ಳುತ್ತಾರೆ ಎನ್ನುವ ಭಾವನೆಯನ್ನು ಸೃಷ್ಟಿಗೊಳಿಸುತ್ತದೆ. ಇದೇ ತರಗತಿಯ ಪಾಠ-೧ರಲ್ಲಿ 'ಡಾ. ಜಾಕೀರ್ ಹುಸೇನರು ರಾಷ್ಟ್ರಪತಿಗಳಾಗಿ ದುಡಿದವರು, ಕೆಲಕಾಲ ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು' ಎಂದು ದೊರೆಯುವ ಪದಗಳಲ್ಲಿ ರಾಷ್ಟ್ರಪತಿ, ಕುಲಪತಿ', ಎರಡು ಪದಗಳು ಪುರುಷನನ್ನೇ ಸಾಮಾಜೀಕರಣಗೊಳಿಸುತ್ತವೆ. ಇನ್ನು ಇದೇ ತರಗತಿಯ ಪಾಠ-೨ರಲ್ಲಿ 'ಗಂಧರ್ವಸೇನೆ' ಎನ್ನುವ ಪಾಠದಲ್ಲಿ ಪ್ರಾಣಿಯಾದ ಕತ್ತೆಯನ್ನು ಪುರುಷ ಪರವಾದ ಸಾಮಾಜೀಕರಣದ ನೆಲೆಯಲ್ಲಿ ವಾಕ್ಯವನ್ನು ಬಳಸಲಾಗಿದೆ. ಉದಾ: ಮಹಾರಾಜರೇ ಗಂಧರ್ವಸೇನರು ತೀರಿಕೊಂಡರಂತೆ', 'ಒಡ್ಡೋಲಗ'(ರಾಜಸಭೆ) ಮುಂದುವರೆದು 'ಗಂಧರ್ವಸೇನರ ಪರಿಚಯ ನನಗೆ ಇಲ್ಲ', ಇದೇ ತರಗತಿಯ ಪಠ್ಯದಲ್ಲಿ ಗಂಡ-ಹೆಂಡತಿಯ ಸಂಬಂಧಗಳ ಮಾಹಿತಿಯನ್ನು ನೀಡಲಾಗಿದೆ. ಆದರೆ ಇತ್ತೀಚೆಗೆ ಸ್ತ್ರೀವಾದಿಗಳು 'ಗಂಡ' ಎನ್ನುವ ಪದ ಪುರುಷನ 'ಅಧಿಕಾರ' ಸಂಬಂಧ ಸೂಚಿಸುತ್ತದೆ. 'ಹೆಂಡತಿ' ಎನ್ನುವ ಪದ ಸೇವಕಿ, ಆಳು, ಕೀಳರಿಮೆ, ಸೂಚಕ ಪದವಾಗಿದೆ ಎನ್ನುವುದನ್ನು ವಿಶ್ಲೇಷಿಸುತ್ತಾರೆ. ಹೀಗಿರುವಾಗ ಈ ತರಗತಿಯ ಪಠ್ಯಪುಸ್ತಕದಲ್ಲಿ ವೈವಾಹಿಕ ಸಂಬಂಧಗಳ ಪಾತ್ರಗಳನ್ನು ಗಂಡ, ಗಂಡಿಗೆ, ಹೆಂಡತಿ, ಹೆಣ್ಣಿಗೆ ಬಳಸಿರುವುದು ಈಗಾಗಲೇ ಸಮಾಜದಲ್ಲಿ ಸ್ಥಾಪಿತಗೊಂಡ ಸಂಪ್ರದಾಯಿಕ ಸಂಗತಿಗಳನ್ನು ಭಾಷೆಯಲ್ಲಿ ಮುಂದುವರೆಸಿರುವುದು ಕಂಡುಬರುತ್ತದೆ.

ಈ ತರಗತಿ ಪಾಠಗಳಲ್ಲಿ ರಾಜಧರ್ಮ, ಗುರುಕುಲ, ಭಾಗ್ಯವಂತ, ಟೀಚರ್ - ಇವೆಲ್ಲವೂ ಹೆಣ್ಣು-ಗಂಡು ಮಕ್ಕಳಲ್ಲಿ ಭಿನ್ನ ಸಾಮಾಜೀಕರಣ ರೂಪಿಸುತ್ತವೆ. ಇನ್ನೂ ಇದೇ ತರಗತಿ ಪದ್ಯಭಾಗದಲ್ಲಿ ದೊರೆಯುವ 'ಬೇಸಿಗೆ' ಪುಟ-೬೭ರಲ್ಲಿ ಪುರುಷ ಪರವಾದ ಸಾಮಾಜೀಕರಣಕ್ಕೆ ಪೂರಕವಾದ ಸಾಹಿತ್ಯ ದೊರೆಯುತ್ತದೆ. ಇದಕ್ಕೆ -

'ಸೂರ್ಯನ ಮಹಿಮೆಯ ಹಾಡೋಣ,
ಏಕೆ ರವಿಗಿಂತ ತಾಪ?
ಯಾರ ಮೇಲವನ ಕೋಪ?
ಎಂದು ಹಳಿಯಬೇಡಿ,
ಸೂರ್ಯನ ತಪ್ಪು ತಿಳಿಯಬೇಡಿ,
ಮೋಡ ಕೂಡಿಸಲು, ಇಳಿಗೆ ಮಳೆ ತರಲು
ದುಡಿಯುತಿಹನು ಪಾಪ!
'ಭೂಮಿಯ ಪೋಷಕ ಸೂರ್ಯ
ಭೂಮಿಗವನು ಅನಿವಾರ್ಯ
ಹೊಗಳಿಕೆ ಬೇಕಿಲ್ಲ
ತೆಗೆಳಿದರೆ ಅವ ಕುಗ್ಗುವುದಿಲ್ಲ
ಬೆಳಕ ನೀಡುವನು, ಬಿಸಿಯನೂಡವನು
ಮರೆಯದೆ ಕರ್ತವ್ಯ'

ಹೀಗೆ ಪ್ರತಿಯೊಂದು ಸಾಲಿನಲ್ಲಿ ಅವನು, ಎಂದೇ ಕೊನೆಗೊಳ್ಳುತ್ತದೆ. 'ಅವನು' ಪುರುಷ ಲಿಂಗಕ್ಕೆ ಸರ್ವನಾಮವಾಗಿ ಬಳಸಲಾಗುತ್ತದೆ. ಹೀಗಾಗಿ ಭಾಷೆಯಲ್ಲಿ ಪುರುಷರನ್ನು ಸೂಚಿಸಿ, ಪುರುಷ ಪರವಾದ ಸಾಮಾಜೀಕರಣಗೋಳಿಸುತ್ತಿರುವುದು ಕಂಡು ಬರುತ್ತದೆ. ಈ ಪದ್ಯದ ಕೊನೆಗೆ ಪ್ರಶ್ನೆಗಳಲ್ಲಿ ಪುರುಷ ಪರವಾದ ವ್ಯಾಖ್ಯೆಗಳ ಮೂಲಕ ಪ್ರಶ್ನೆಗಳನ್ನು ಕೇಳಲಾಗಿದೆ. 'ಕಿತ್ತೂರ ಕೇಸರಿ' ಪದ್ಯದಲ್ಲಿ ಬರುವ ಪದಗಳು ಉದಾ; 'ವೀರವನಿತೆ', ಸಿಂಹದ ಧ್ವನಿಯಂತೆ, 'ಛಲತೊಟ್ಟ್ ಹುಲಿಯಂತೆ ನುಗ್ಗೋಣ ನಾವು' ರಾಜಗುರು ಕೃಪೆ ಪಡೆದು ಕಟ್ಟಿದ ಸೇನೆ' ವೀರ ಯೋಧರ ಎದೆಗೆ ವಜ್ರಕವಚ ಬಿಗಿದು ಹೀಗೆ ಎಲ್ಲವನ್ನು ಪುರುಷ ಪರವಾದ ಪದಗಳನ್ನು ಭಾಷೆಯಲ್ಲಿ ಬಳಸಿ, ಪುರುಷರಿಗೆ ಸಂಬಂಧಿಸಿದ ಸಾಹಿತ್ಯವನ್ನು ನೀಡಿರುವುದು ಕಂಡುಬರುತ್ತದೆ.

೭ನೇ ತರಗತಿ ಕನ್ನಡ ಪಠ್ಯಪುಸ್ತಕದ ಪಾಠ-೪ರಲ್ಲಿ 'ಪರಿಸರ ಸಮತೋಲನ ಪಾಠದಲ್ಲಿ ಪ್ರಕೃತಿ ಪರಿಸರ, ಜೀವ ಪರಿಸರ, ಪ್ರಾಣಿ, ಎಲ್ಲ ಜೀವರಾಶಿಗಳಿಗೆ ಸಂಬಂಧಿಸಿದಂತೆ, ಪ್ರಾಣಿ, ಪಕ್ಷಿ, ಗಿಡ, ಮರ ಹಾಗೂ ಜೀವಸಂಕುಲಗಳನ್ನು ಕುರಿತಾಗಿ ತಿಳಿಸುವ ಈ ಪಾಠದಲ್ಲಿ ಪುರುಷ ವಾಚಕದ ಮೂಲಕ ಪರಿಚಯಿಸಿರುವುದು ಕಂಡು ಬರುತ್ತದೆ. ಇದಕ್ಕೆ ಪಠ್ಯದಲ್ಲಿ ದೊರೆಯುವ 'ಮಾನವ ಮಳೆಯರಾಯನನ್ನು ಬರಮಾಡಿಕೊಳ್ಳುವ' ಎಂದು ದೊರೆಯುವ ಮಾಹಿತಿಯಲ್ಲಿ 'ರಾಯ' ಈ ಪದ ಪುರುಷವಾಚಕ .ಇದು ಪುರುಷಪರ ನೆಲೆಯಲ್ಲಿ ಚಿಂತನೆಯನ್ನು ಸಾಮಾಜೀಕರಣಗೊಳಿಸುತ್ತದೆ. ಪ್ರಾಣಿಗಳಿಗೂ ಮಾನವ, ಪುರುಷರಿಗೆ ಏನು ಸಂಬಂಧ ಎನ್ನುವುದನ್ನು ಚಿಂತನೆ ಮಾಡಬೇಕಾಗಿದೆ. ಯಾಕೆಂದರೆ ಪ್ರಾಣಿ ಸಂಕುಲಗಳನ್ನು ಪರಿಚಯಿಸುವಾಗಲೂ ಪುರುಷ ಲಿಂಗದ ಭಾಷೆ ಬಳಕೆ ಮಾಡಲಾಗಿದೆ. ಇದೇ ತರಗತಿಯ ಪಾಠ-೨ರಲ್ಲಿ 'ಸಂಕ್ರಾಂತಿಯಂದು ಸುಖ-ದುಃಖ ಪುಟ-೮೨ರಲ್ಲಿ 'ಸಂಕ್ರಾಂತಿ ದಿನದಿಂದ ಸೂರ್ಯನು ದಕ್ಷಿಣದಿಂದ ಉತ್ತರ

ದಿಕ್ಕಿಗೆ ಸ್ವಲ್ಪ ಸ್ವಲ್ಪ ಸಂಚರಿಸಲು ಶುರುವಿಡುತ್ತಾನೆ'. ಇಲ್ಲಿ ಪುರುಷವಾಚಕದಿಂದ ವಿಶ್ಲೇಷಿಸಿರುವುದು ಕಂಡು ಬರುತ್ತದೆ. ಇಲ್ಲಿ ಸೂರ್ಯ ಗ್ರಹಣ ದಕ್ಷಿಣದಿಂದ ಉತ್ತರ ದಿಕ್ಕಿಗೆ ಸ್ವಲ್ಪ ಸ್ವಲ್ಪ ಸಂಚರಿಸಲು ಶುರುವಿಡುತ್ತದೆ' ಎಂದು ಹೇಳಬಹುದಾಗಿತ್ತು. ಆದರೆ ಇದನ್ನು ಹೇಳದೆ ಪುರುಷನಿಗೆ ಸಮಾನವಾಗಿ ಭಾಷೆಯ ಮೂಲಕ ಹೇಳಿರುವುದು ಕಂಡು ಬರುತ್ತದೆ. ಇದೇ ತರಗತಿಯ 'ಬಿಡುಗಡೆಯ ಹಾಡು' ಪುಟ-೧೧೭ರಲ್ಲಿ ಸ್ವತಂತ್ರದ ಕುರಿತಾಗಿ ಹೇಳುವ ಹಾಡುಗಳಲ್ಲಿ 'ಸುತ್ತಿಟ್ಟ ಮೃಗರಾಜ ಹತ್ತಡಿಯ ಹದ್ದಿನೊಳು ಮತ್ತು ರವಿಕಿರಣಗಳ ಸೆರೆಯೊಳಡಗಿಸಿದ ಕಾರಿರುಳೆ' ಹೀಗೆ ಪುರುಷವಾಚಕದಿಂದಲೇ ಸಾಹಿತ್ಯವನ್ನು ರಚಿಸಿ ಈ ಮೂಲಕ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದಲ್ಲಿ ಪುರುಷ ಪರವಾದ ನಿಲುವು ತಾಳುವ ಹಾಗೆ ಸಾಮಾಜೀಕರಣ ಗೊಳಿಸುತ್ತಿರುವುದು ಕಂಡುಬರುತ್ತದೆ.

೮ನೇ ತರಗತಿ ಕನ್ನಡ ಪಠ್ಯಪುಸ್ತಕದ ಪದ್ಯ ಭಾಗದಲ್ಲಿ 'ಕನ್ನಡಿಗರ ತಾಯಿ' ಪದ್ಯದಲ್ಲಿ ಭಾಷೆಯನ್ನು ಅನುಲಕ್ಷಿಸಿದರೆ, ಭಾಷೆಯ ಮೂಲಕ ಪುರುಷ ಪರವಾದ ಚಿಂತನೆ ಇಲ್ಲಿ ಮುಂದುವರೆದಿರುವುದು ಕಂಡುಬರುತ್ತದೆ. ಇದಕ್ಕೆ ಕವಿಗಳ ಮತ್ತು ಚರಿತ್ರೆಯ ರಾಜಮನೆತನಗಳನ್ನು ಪರಿಚಯಿಸುವಲ್ಲಿನ ಸಾಲುಗಳು ಈ ರೀತಿಯಾಗಿವೆ.

'ಜೈನರಾದ ಪೂಜ್ಯಪಾದ ಕೊಂಡಕುಂದವರ್ಯರ,
ಮಧ್ವಯತಿಯೆ ಬಸವಪತಿಯೆ ಮುಖ್ಯ ಮತಾಚಾರ್ಯರ,
ಶರ್ಮ ಪಂಪ ರನ್ನರ,

ಲಕ್ಷ್ಮಿಪತಿ ಜನ್ನರ,
ಷಡಕ್ಷರಿ ಮುದ್ದಣ್ಣರ
ಪುರುಂದರ ವರೇಣ್ಯರ
ತಾಯೆ ನಿನ್ನ ಬಸಿರೆ ಹೊನ್ನಗನಿ ವಿದ್ಯಾರಣ್ಯರ.

ಹೀಗೆ ಪುರುಷರ ಕವಿಗಳ ಚರಿತ್ರೆಯನ್ನು ಹೇಳಿರುವುದು ಕಂಡುಬರುತ್ತದೆ. ಕನ್ನಡ ನಾಡಿನ ಭವ್ಯ ಪರಂಪರೆ, ಇತಿಹಾಸ, ಪ್ರಕೃತಿ, ಸಾಹಿತ್ಯ, ವಾಸ್ತುಶಿಲ್ಪ, ಭವ್ಯತೆ ಜಗತ್ತಿನೆಲ್ಲೆಡೆ ಹರಡಬೇಕೆಂಬುದು ಕವಿಯ ಆಶಯವಾಗಿದೆ. 'ಕವಿ' ಎನ್ನುವುದೇ ಪುರುಷವಾಚಕ; ಹೀಗಾಗಿ ಪುರುಷ ಪರವಾದ ಸಾಮಾಜೀಕರಣಗೊಳಿಸುವ ಸಾಹಿತ್ಯ ದೊರೆಯುತ್ತದೆ. ಮುಂದುವರೆದು ಇದೇ ತರಗತಿಯ 'ವಚನಾಮೃತ" ಪಾಠದಲ್ಲಿ 'ಅರಿತಡೆ ಶರಣರ' ಮತ್ತು ಮರೆತರೆ ಮಾನವ'. ಶಿಷ್ಯಂಗೆ ಎಂದು ಬರುವ ವ್ಯಾಖ್ಯೆಗಳಲ್ಲಿ ಪುರುಷರನ್ನೇ ಯೋಚಿಸಲಾಗಿದೆ. ಹೀಗೆ ೮ನೇ ತರಗತಿಯಲ್ಲಿ ಬರುವ ಅನೇಕ ವ್ಯಾಖ್ಯೆ, ಸಾಹಿತ್ಯ, ರೂಪಕ ಸಂಗತಿಗಳಲ್ಲಿ ಪುರುಷ ಪರವಾದ ಸಾಮಾಜೀಕರಣ ರೂಪುಗೊಂಡಿರುವುದು ಕಂಡು ಬರುತ್ತದೆ.

ಕನ್ನಡ ಭಾಷೆ ಪಠ್ಯಪುಸ್ತಕದಲ್ಲಿ ಎಳೆವಯಸ್ಸಿನ ಮುಗ್ಧ ಮನಸ್ಸಿಗೆ ಕನ್ನಡ ಭಾಷೆ ಕಲಿಸುವ ಪ್ರಯತ್ನವನ್ನು ನಲಿ-ಕಲಿ ಮತ್ತು ಕನ್ನಡ ಅಭ್ಯಾಸದ ಪಠ್ಯದ ಮೂಲಕ ಮಾಡಲಾಗಿದೆ. ಇಲ್ಲಿ ಅಕ್ಷರ ಅವುಗಳ ವಿನ್ಯಾಸ, ಅವುಗಳನ್ನು ಗುರುತಿಸುವ ಅಕ್ಷರ ಜ್ಞಾನ ನೀಡುವ ಅಭ್ಯಾಸಗಳು; ಪದ ಅವುಗಳ ವಿನ್ಯಾಸ ಮತ್ತು ರಚನೆ ಕುರಿತ ಅಭ್ಯಾಸಗಳು; ವಾಕ್ಯ ವಿನ್ಯಾಸ ಮತ್ತು ರಚನೆ ಗಾದೆ, ನುಡಿಗಟ್ಟು, ಗದ್ಯ-ಪದ್ಯ ಮಿಶ್ರಿತವಾದ ಅಭ್ಯಾಸಗಳ ಮೂಲಕ ಕನ್ನಡ ಭಾಷೆಯ ಮಕ್ಕಳ ಸೃಜನಶೀಲತೆಯನ್ನು, ನವೀನತೆಯನ್ನು ಮತ್ತು ಹೊಸ ಆಲೋಚನೆಗಳನ್ನು ಪರಿಚಯ ಮಾಡಿಕೊಡುವ ಅದ್ಭುತವಾದ ಅವಕಾಶವಿತ್ತು, ಆದರೆ 'ಯಥಾ ರಾಜ ತಥಾ ಪ್ರಜಾ' ಎನ್ನುವಂತೆ ಆಗಿದೆ. ಪಠ್ಯ ರಚನಾಕಾರರ ಮನೋಸ್ಥಿತಿ ಎಷ್ಟು ಪ್ರಬಲವಾಗಿ ಪುರುಷ ಪ್ರಧಾನವಾಗಿದೆ ಎಂಬುದಕ್ಕೆ ಈ ಪಠ್ಯಗಳಲ್ಲಿ ದೊರೆಯುವ ಹಲವು ಪುರುಷ ಪರವಾದ ಭಾಷೆ, ಜ್ಞಾನವೇ ಸಾಕ್ಷಿಯಾಗಿದೆ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಪಠ್ಯಗಳ ಭಾಷೆಯಲ್ಲಿ ಪುರುಷ ಪ್ರಧಾನ ಕಲ್ಪನೆ, ಚಿಂತನೆ, ಮೌಲ್ಯ, ಪಾತ್ರ, ಕೆಲಸ ನುಡಿಗಟ್ಟು ಮತ್ತು ಪ್ರತೀಕಗಳನ್ನು ಕೊಡಲಾಗಿದೆ. ಉದಾ: ಹೆಣ್ಣು ಮಕ್ಕಳೆಂದರೆ ಅಡುಗೆ ಮಾಡುವವರೆಂದು, ಇದನ್ನು ತಾಯಿಯ ಮೂಲಕ ಹೇಳಲಾಗಿರುವುದು. ಹೆಣ್ಣು ಮಕ್ಕಳು ಮನೆಯೊಳಗಿನ ಹೊರಗಿನ ಸ್ವಚ್ಛತೆ ಮಾಡುವವರೆಂದು, ಹೆಣ್ಣು ಮಕ್ಕಳೆಂದರೆ, ಬಳೆ, ಸರಗಳಿಂದ ತಮ್ಮ ಅಂದಚಂದವನ್ನು ಹೊಂದಿರುವವರೆಂದು ವಿವರಿಸಿದರೆ, ಗಂಡು ಮಕ್ಕಳನ್ನು ವ್ಯಾಪಾರ ಮಾಡುವ, ಸಂಚಾರ ಮಾಡುವ, ರೈತ, ಅಂಚೆಯವ, ವೈದ್ಯ, ಪೋಲೀಸ್, ವೃತ್ತಿಯ ಹಾಗೂ ಶೌರ್ಯ, ಸಾಹಸಗಳಿಗೆ ಪ್ರತೀಕವಾದ ಯೋಧ ಮತ್ತು ಸೈನಿಕ ಎನ್ನುವ ಭಾಷೆಯನ್ನು ಬಳಸಲಾಗಿದೆ. ಬಳಸಿರುವ ನುಡಿಗಟ್ಟು, ಗಾದೆಗಳು ಗಂಡಿನ ಮೇಳರಿಮೆಯನ್ನು ಎತ್ತಿ ಹಿಡಿಯುತ್ತಾ, ಹೆಣ್ಣಿನ ಕೀಳರಿಮೆಯನ್ನು ಹೆಚ್ಚಿಸುತ್ತಾ ಹೋಗುವ ಸಾಮಾಜೀಕರಣ ಕಂಡು ಬರುತ್ತದೆ. ಕೆಟ್ಟದ್ದನ್ನು ಖಂಡಿಸುವ, ದಿಟ್ಟತನವನ್ನು ಕಟ್ಟಿಕೊಡುವ ಸಾಮರ್ಥ್ಯ ಭಾಷೆಯಿಂದ ಸಾಧ್ಯ. ಹೀಗಾಗಿ ಹೆಣ್ಣು ಮತ್ತು ಗಂಡಿನ ಹಿರಿತನ, ಸಾಧನೆ, ಅನುಭವ ಮತ್ತು ಜನಪದೀಯ ನುಡಿಗಟ್ಟುಗಳಲ್ಲಿ ಲಿಂಗತ್ವ ತಟಸ್ಥ ಭಾಷೆಯನ್ನು ಬಳಸುವ ಅನಿವಾರ್ಯತೆ ಇದೆ. ಆದರೆ ಇದು ಸಾಧ್ಯವಾಗಿಸದೇ ಹೆಣ್ಣಿನ ಕುರಿತಾಗಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನಿರ್ಲಕ್ಷ್ಯಕ್ಕೆ ತಳ್ಳುವ ಕೆಲಸಗಳನ್ನು ಮಾಡುತ್ತಿರುವುದು ಕಂಡು ಬರುತ್ತದೆ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಪಠ್ಯಗಳಲ್ಲಿ ಪ್ರತಿಯೊಂದು ಅಕ್ಷರ, ಪದಗಳ ಪರಿಚಯ, ನುಡಿಗಟ್ಟು ಹಾಗೂ ವಾಕ್ಯ ರಚನೆಗಳ ಮೂಲಕ ಮಕ್ಕಳಿಗೆ ಲಿಂಗ ಸಮಾನತೆ ಅಭಿವ್ಯಕ್ತಿಯನ್ನು ಕಟ್ಟಿಕೊಡುವ ಸಾಮಾಜೀಕರಣ ರೂಪಿಸಬೇಕು. ಆದರೆ ಇದು ಸಾಧ್ಯವಾಗಿಲ್ಲದಿರುವುದು ಕಂಡು ಬರುತ್ತದೆ. ಒಟ್ಟಾರೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಭಾಷೆ ಪಠ್ಯಗಳಲ್ಲಿ ಮಕ್ಕಳಿಗೆ (ಹೆಣ್ಣು-ಗಂಡು) ಅವರು ನಿರ್ವಹಿಸುವ ಪಾತ್ರಗಳು, ನಡಾವಳಿಗಳು, ವರ್ತನೆಗಳು, ರೀತಿ ನೀತಿಗಳನ್ನು ಭಿನ್ನ ನೆಲೆಯಲ್ಲಿ ಪಠ್ಯಗಳ ಮೂಲಕ ಚಿತ್ರಗಳ ಮೂಲಕ ಭಾಷೆಯ ಮೂಲಕ ಹೇಳುತ್ತಿರುವುದು ಕಂಡುಬರುತ್ತದೆ. ಇದರಿಂದ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ

ವಾಸ್ತವ ಸಮಾಜದಲ್ಲಿ ಭಿನ್ನ ನೆಲೆಯಲ್ಲಿ ಕಂಡು ಬರುತ್ತದೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಭಾಷೆಯ ಪರಿಸರ ಅಧ್ಯಯನ ಮತ್ತು ಸಮಾಜ ವಿಜ್ಞಾನ ಪಠ್ಯ ಪುಸ್ತಕಗಳಲ್ಲಿ ಸಾಮಾಜೀಕರಣದ ಸ್ವರೂಪವನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಟಿಪ್ಪಣಿಗಳು

೧. ಡಾ. ಮಹಾಬಲೇಶ್ವರ ರಾವ್, ೨೦೧೪, **ಪಠ್ಯಕ್ರಮ ಮತ್ತು ಶೈಕ್ಷಣಿ ತಂತ್ರಜ್ಞಾನಗಳು**, ಪು. ೭೨.

೨. ಅದೇ, ಪು. ೭೨.

೩. ಅದೇ, ಪು. ೭೩.

೪. ಅದೇ, ಪು. ೭೪.

೫. ಅದೇ, ಪು. ೭೫.

೬. **ಸವಿ ಕನ್ನಡ ನಾಲ್ಕನೇ ತರಗತಿ ಪಠ್ಯಪುಸ್ತಕ**, ೨೦೧೯, **ಮುನ್ನುಡಿ**, ಪು. ೩.

೭. ಅದೇ, ಪು. ೩.

೮. ಸಬಿಹಾ ಭೂಮಿಗೌಡ, ೨೦೧೫, **ಮಹಿಳೆ : ಇಂದಿನ ಸವಾಲುಗಳು**, ಪು. ೮೩.

ಆಕರಗಳು

೧. **ನಲಿಕಲಿ ಕನ್ನಡ ಅಭ್ಯಾಸ ಪುಸ್ತಕ (ಪರಿಷ್ಕೃತ)**, ೨೦೧೯, ೧ನೇ ತರಗತಿ.

೨. **ನಲಿಕಲಿ ಕನ್ನಡ ಅಭ್ಯಾಸ ಪುಸ್ತಕ (ಪರಿಷ್ಕೃತ)**, ೨೦೧೯, ೨ನೇ ತರಗತಿ.

೩. **ನಲಿಕಲಿ ಕನ್ನಡ ಅಭ್ಯಾಸ ಪುಸ್ತಕ (ಪರಿಷ್ಕೃತ)**, ೨೦೧೯, ೩ನೇ ತರಗತಿ.

೪. **ಸವಿ ಕನ್ನಡ ಅಭ್ಯಾಸ ಸಹಿತ ಪಠ್ಯಪುಸ್ತಕ (ಪರಿಷ್ಕೃತ)**, ೨೦೧೯, ೪ನೇ ತರಗತಿ.

೫. **ಸಿರಿ ಕನ್ನಡ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ (ಪರಿಷ್ಕೃತ)**, ೨೦೧೭, ೫ನೇ ತರಗತಿ.

೬. **ಸಿರಿ ಕನ್ನಡ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ (ಪರಿಷ್ಕೃತ)**, ೨೦೧೭, ೬ನೇ ತರಗತಿ.

೭. **ಸಿರಿ ಕನ್ನಡ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ (ಪರಿಷ್ಕೃತ)**, ೨೦೧೭, ೭ನೇ ತರಗತಿ.

೮. **ಸಿರಿ ಕನ್ನಡ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ (ಪರಿಷ್ಕೃತ)**, ೨೦೧೭, ೮ನೇ ತರಗತಿ.

♦ ♦ ♦

ಅಧ್ಯಾಯ : ನಾಲ್ಕು

ಸಮಾಜ ವಿಜ್ಞಾನ ಪಠ್ಯಗಳಲ್ಲಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆಯ ಸ್ವರೂಪ

ಅಧ್ಯಾಯ : ನಾಲ್ಕು

ಸಮಾಜ ವಿಜ್ಞಾನ ಪಠ್ಯಗಳಲ್ಲಿ ಹೆಣ್ಣು-ಗಂಡುಮಕ್ಕಳ ಸಾಮಾಜೀಕರಣದ ಸಮಸ್ಯೆಯ ಸ್ವರೂಪ

ಯಾವುದೇ ವ್ಯಕ್ತಿಗೆ ಸಮಾಜದಲ್ಲಿ ನಡೆದಿರುವ, ನೋಡಿರುವ, ಸುತ್ತಲಿನ ಪರಿಸರ ಅವನ ವ್ಯಕ್ತಿತ್ವದ ಮೇಲೆ ಪ್ರಭಾವವನ್ನು ಬೀರುತ್ತದೆ. ಅದು ಭಾಷೆಯಾಗಿರಬಹುದು, ವಿಜ್ಞಾನವಾಗಿರಬಹುದು, ಪರಿಸರವಾಗಿರಬಹುದು. ಅದು ವ್ಯಕ್ತಿಯ ಮೇಲೆ ಪ್ರಭಾವ ಬೀರಿ ಅವನಲ್ಲಿ ಅಂತರ್ಗತಗೊಳಿಸಿದ ಸಾಮಾಜೀಕರಣವನ್ನು ಅರಿಯುವ ಮತ್ತೊಂದು ನೆಲೆಯ ಪ್ರಸ್ತುತ ಅಧ್ಯಯನದ ಅಧ್ಯಾಯವಾಗಿದೆ. ಕನ್ನಡ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಪಠ್ಯಪುಸ್ತಕಗಳಲ್ಲಿ ಬರುವ ಪರಿಸರ ಅಧ್ಯಯನ, ಸಮಾಜ ವಿಜ್ಞಾನ ಪಠ್ಯಪುಸ್ತಕಗಳು ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆಯನ್ನು ರೂಪಿಸಲು ಹೇಗೆ ಕಾರಣವಾಗಿದೆ ಎನ್ನುವ ಅಂಶಗಳನ್ನು ಇಲ್ಲಿ ದಾಖಲಿಸಿ ವಿಶ್ಲೇಷಿಸಲಾಗಿದೆ.

ಪರಿಸರ ಅಧ್ಯಯನ ಮತ್ತು ಸಮಾಜ ವಿಜ್ಞಾನಗಳಲ್ಲಿ, ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸ್ವರೂಪ ಎಂಥದ್ದು? ಪಠ್ಯದಲ್ಲಿ ಲಿಂಗತ್ವ ಸಮಾನತೆ ಇದೆಯೇ? ಅಥವಾ ಲಿಂಗತ್ವ ಅಸಮಾನತೆ ಇದೆಯೇ? ಎನ್ನುವ ಹಿನ್ನೆಲೆಯನ್ನು ಈ ಅಧ್ಯಾಯ ಹೊಂದಿದೆ. ಪರಿಸರ ವಿಜ್ಞಾನ ಮತ್ತು ಸಮಾಜ ವಿಜ್ಞಾನದ ಮೂಲಕ ಕುಟುಂಬ, ಪರಿಸರ ಸಂರಕ್ಷಣೆ, ಮೂಲಭೂತ ಅಗತ್ಯಗಳು, ಮಾನವ ಸಂಬಂಧಗಳು, ವ್ಯಕ್ತಿಯ ನಡಾವಳಿಗಳ ಕುರಿತಾಗಿ ಮಕ್ಕಳಿಗೆ ಕಲಿಸಲಾಗುತ್ತದೆ. ಸಮಾಜದ ಸಮುದಾಯಕ್ಕೆ ಅಗತ್ಯವಾದ ಆಹಾರ ತಯಾರಿಕೆ, ಪ್ರಾಣಿಗಳು, ಸಾರಿಗೆ, ಸ್ವಚ್ಛತೆ ಮತ್ತು ಸುರಕ್ಷತೆ, ಆಟಗಳು ಹಾಗೂ ಸೂರ್ಯ-ಚಂದ್ರ-ನಕ್ಷತ್ರಗಳ ಕುರಿತಾದ ಪಾಠಗಳಿವೆ. ಹೀಗೆ ಸಮಾಜದಲ್ಲಿ ವ್ಯಕ್ತಿ ಬದುಕಿಗೆ ಬೇಕಾದ ಪಾಠಗಳನ್ನು ಈ ಪಠ್ಯಗಳಲ್ಲಿ ಅಭ್ಯಸಿಸಲಾಗುತ್ತದೆ. ಪರಿಸರ ಅಧ್ಯಯನ ಮತ್ತು ಸಮಾಜ ವಿಜ್ಞಾನದಲ್ಲಿ ಲಿಂಗತ್ವ ಸಮಾನತೆ ಹೇಗಿದೆ ಮತ್ತು ಹೆಣ್ಣು-ಗಂಡು ಮಕ್ಕಳ ಮೇಲೆ ಸಾಮಾಜೀಕರಣ ಹೇಗೆ ರೂಪಿತಗೊಳಿಸುತ್ತದೆ ಎನ್ನುವುದರ ಕುರಿತು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

೪.೧. ಸಮಾಜ ವಿಜ್ಞಾನ ಪಠ್ಯ ರಚನಾ ಸಮಿತಿ: ಹೆಣ್ಣು-ಗಂಡುಗಳ ಪ್ರತಿನಿಧೀಕರಣದ ನೆಲೆಯ ಸಾಮಾಜೀಕರಣ

ಮೊದಲಿಗೆ ೧ನೇ ತರಗತಿಯಿಂದ ೫ನೇ ತರಗತಿಯವರೆಗೆ (ಪ್ರಾಥಮಿಕ) ಪರಿಷ್ಕೃತ ಪಠ್ಯದ ಅನ್ವಯ ಪರಿಸರ ಅಧ್ಯಯನ ಅಭ್ಯಾಸ ಪುಸ್ತಕ ಇಡಲಾಗಿದೆ. ಇನ್ನು ೬ ರಿಂದ ೮ನೇ (ಮಾಧ್ಯಮಿಕ) ತರಗತಿಯವರೆಗೆ ಪರಿಷ್ಕೃತ ಸಮಾಜ ವಿಜ್ಞಾನ ಪಠ್ಯಪುಸ್ತಕ ಭಾಗ-೧ ಮತ್ತು ಭಾಗ-೨ನ್ನು ಇಡಲಾಗಿದೆ. ಮೊದಲಿಗೆ ಈ ಪಠ್ಯಪುಸ್ತಕದ ರಚನಾ ಸಮಿತಿಯ ಹಾಗೂ ಪರಿಷ್ಕೃತ ಸಮಿತಿಯ ವಿವರಗಳನ್ನು ಲಿಂಗಸಂಬಂಧಿ ಅಧ್ಯಯನದ ದೃಷ್ಟಿಯಿಂದ, ಪರಿಸರ ಅಧ್ಯಯನ ಮತ್ತು ಸಮಾಜ ವಿಜ್ಞಾನ ಪಠ್ಯ ರಚನಾ ಸಮಿತಿಯ ಹೆಣ್ಣು-ಗಂಡುಗಳ ಪ್ರತಿನಿಧೀಕರಣದ ನೆಲೆಯ ಸಾಮಾಜೀಕರಣದ ವಿವರವನ್ನು ಇಲ್ಲಿ ದಾಖಲಿಸಿ ಪಠ್ಯಪುಸ್ತಕ ಮೇಲೆ ಆದ ಸಾಮಾಜೀಕರಣ ಪ್ರಭಾವದ ಕುರಿತಾಗಿ ಇಲ್ಲಿ ಚರ್ಚಿಸಲಾಗಿದೆ.

ಕೋಷ್ಟಕ-೧

ಪರಿಸರ ಅಧ್ಯಯನ(೧ ರಿಂದ ೩) ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಹೆಣ್ಣು-ಗಂಡುಗಳ ಪ್ರತಿನಿಧಿತ್ವದ

ಕ್ರಸಂ	ತರಗತಿ	ರಚನೆಯಲ್ಲಿ ಭಾಗವಹಿಸಿದ ಸಂಪನ್ಮೂಲ ತಂಡ		ಸಲಹೆ ಮತ್ತು ಮಾರ್ಗದರ್ಶನ		ಕಾರ್ಯಕ್ರಮ ಸಂಯೋಜಕರು		ಸಂಚಾಲಕರು		ವರ್ಷ
		ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಗಂಡು	ಹೆಣ್ಣು	
೧	೧ನೇ	೦	೪	೦	೧	೧	೦	೦	೧	೨೦೧೯
೨	೨ನೇ	೦	೩	೦	೧	೧	೦	೦	೧	೨೦೧೮
೩	೩ನೇ	೨	೪	೦	೧	೧	೦	೦	೧	೨೦೧೮
	ಒಟ್ಟು	**೨**	**೧೧**	**೦**	**೩**	**೩**	**೦**	**೦**	**೩**	

ಆಧಾರ: ೧ ರಿಂದ ೩ನೇ ತರಗತಿ ಪರಿಸರ ಅಧ್ಯಯನ ಪಠ್ಯಪುಸ್ತಕಗಳು

ಈ ಮೇಲಿನ ಕೋಷ್ಟಕವನ್ನು ಗಮನಿಸಿದರೆ, ೧ ರಿಂದ ೩ನೇ ತರಗತಿಯ ಪರಿಸರ ಅಧ್ಯಯನ ಪಠ್ಯಪುಸ್ತಕ ರಚನಾ ಸಭೆಯಲ್ಲಿ ಸಂಪನ್ಮೂಲ ತಂಡದಲ್ಲಿ ಹೆಚ್ಚು ಪುರುಷರೇ ಪಾಲ್ಗೊಂಡಿರುವುದು ಕಂಡು ಬರುತ್ತದೆ. ಇದರಲ್ಲಿ ೧೧ (ಶೇ. ೯೦ರಷ್ಟು) ಪುರುಷರು, ೨ (ಶೇ. ೧೦ರಷ್ಟು) ಮಹಿಳಾ ಸದಸ್ಯರಿದ್ದಾರೆ. ಸಲಹೆ ಮತ್ತು ಮಾರ್ಗದರ್ಶನ ಕುರಿತಂತೆ ನೋಡುವುದಾದರೆ ಎಲ್ಲರೂ ಪುರುಷರೇ ಆಗಿದ್ದಾರೆ. ಕಾರ್ಯಕ್ರಮ ಸಂಯೋಜಕರಲ್ಲಿ ಎಲ್ಲರೂ ಮಹಿಳೆಯರೇ ಆಗಿದ್ದಾರೆ. ಸಂಚಾಲಕರಲ್ಲೂ ಮಹಿಳೆಯರೇ ಇದ್ದಾರೆ. ಅಂದರೆ ಮಹಿಳೆಯರನ್ನು ಕಾರ್ಯಕ್ರಮ ಸಂಯೋಜನೆ, ಸಂಚಾಲಕರಾಗಿ ಮಾಡಲಾಗಿದೆ. ಜ್ಞಾನ ವಲಯದಲ್ಲಿ ಪುರುಷರೇ ಹೆಚ್ಚಾಗಿರುವುದು ಸಾಮಾಜೀಕರಣ ಸೃಷ್ಟಿಗೊಳಿಸುವುದರಲ್ಲಿ ಪುರುಷ ಪ್ರಧಾನತೆ ಹೆಚ್ಚು ಕಂಡುಬರುತ್ತದೆ. ಇದಕ್ಕೆ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಕೂಡ ಪುರುಷ ಜ್ಞಾನ ಹೆಚ್ಚು ಕಂಡು ಬರುತ್ತದೆ.

ಕೋಷ್ಟಕ–೨

ಪರಿಸರ ಅಧ್ಯಯನ ಮತ್ತು ಸಮಾಜ ವಿಜ್ಞಾನ (೪ ರಿಂದ ೮)

ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಹೆಣ್ಣು–ಗಂಡುಗಳ ಪ್ರತಿನಿಧಿತ್ವ

ಕ್ರ.ಸಂ.	ತರಗತಿ	ಅಧ್ಯಕ್ಷರು		ಸದಸ್ಯರು		ಪರಿಶೀಲಕರು		ಸಲಹೆ ಮಾರ್ಗದರ್ಶನ		ಮುಖ್ಯ ಕಾರ್ಯಕ್ರಮ		ಸಂಪಾದಕೀಯ ಮಂಡಳಿ		ವರ್ಷ
		ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
೧	೪ನೇ	೧	೦	೨	೩	೦	೧	೧	೧	೧	೦	–	–	೨೦೧೮
೨	೫ನೇ	೦	೧	೩	೨	೦	೧	೦	೨	೧	೦	೧	೫	೨೦೧೯
೩	೬ನೇ	೦	೧	೦	೪	೦	೨	೧	೧	೧	೦	೦	೩	೨೦೧೯
೪	೭ನೇ	೦	೧	೧	೪	೦	೨	೧	೧	೧	೦	೦	೩	೨೦೧೮
೫	೮ನೇ	೦	೧	೦	೯	೧	೫	–	–	೦	೧	೦	೩	೨೦೧೮
ಒಟ್ಟು		೧	೫	೬	೨೨	೧	೧೧	೩	೫	೪	೧	೧	೧೪	–

ಆಧಾರ: ೪ ರಿಂದ ೮ನೇ ತರಗತಿ ಪರಿಸರ ಮತ್ತು ಸಮಾಜ ವಿಜ್ಞಾನ ಪಠ್ಯಪುಸ್ತಕಗಳು

ಈ ಮೇಲಿನ ಕೋಷ್ಟಕದಲ್ಲಿನ ೪ ರಿಂದ ೮ನೇ ತರಗತಿಯ ಪರಿಸರ ಮತ್ತು ಸಮಾಜ ವಿಜ್ಞಾನ ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಹೆಣ್ಣು-ಗಂಡುಗಳ ಪ್ರತಿನಿಧಿತ್ವವನ್ನು ನೋಡಿದರೆ, ೪ನೇ ತರಗತಿ ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಒಬ್ಬ ಮಹಿಳಾ ಅಧ್ಯಕ್ಷರನ್ನು ಬಿಟ್ಟರೆ ಉಳಿದಂತೆ ಎಲ್ಲರೂ ಪುರುಷರೇ ಅಧ್ಯಕ್ಷರಾಗಿದ್ದಾರೆ. ಇನ್ನು ಸದಸ್ಯರಲ್ಲಿ ಒಟ್ಟು ೬ (ಶೇ. ೨೧.೪೨)ರಷ್ಟು ಜನ ಮಹಿಳೆಯರಿದ್ದಾರೆ, ಒಟ್ಟು ೨೨ (ಶೇ. ೭೮.೫೭) ಜನ ಪುರುಷರಿದ್ದಾರೆ. ಪಠ್ಯಪುಸ್ತಕ ಪರಿಶೀಲಕರಲ್ಲಿ ಪುರುಷರು ಒಟ್ಟು ೧೧(ಶೇ. ೯೨.)ರಷ್ಟಿದ್ದರೆ ಮಹಿಳೆಯರಲ್ಲಿ ಒಟ್ಟು ಸಂಖ್ಯೆ ೧(ಒಬ್ಬರು) (ಶೇ. ೮ರಷ್ಟು) ಆಗಿದ್ದರೆ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಪುರುಷರು ಒಟ್ಟು ೫(ಶೇ. ೬೨.೫ರಷ್ಟು) ಜನ ಮಹಿಳೆಯರು ಒಟ್ಟು ೩ (ಶೇ. ೩೭.೫೦ರಷ್ಟು) ಜನರಿದ್ದಾರೆ. ಮುಖ್ಯ ಕಾರ್ಯಕ್ರಮ ಸಂಯೋಜಕರಲ್ಲಿ ಪುರುಷರು ಒಬ್ಬರು (ಶೇ. ೨೦ರಷ್ಟು) ಮತ್ತು ೪ (ಶೇ. ೮೦) ಜನ ಮಹಿಳೆಯರಿದ್ದಾರೆ. ಇನ್ನು ಮುಖ್ಯವಾಗಿ ಸಂಪಾದಕ ಮಂಡಳಿಯಲ್ಲಿ ಹೆಚ್ಚು ಪುರುಷರು ಒಟ್ಟು ೧೪ (ಶೇ. ೯೩.೩೩ರಷ್ಟು) ಜನರಿದ್ದರೆ, ಇದರಲ್ಲಿ ಮಹಿಳೆಯೊಬ್ಬಳೇ ಇದ್ದಾಳೆ. ಇದನ್ನು ಒಟ್ಟಾರೆಯಾಗಿ ನೋಡಿದಾಗ ಅಧ್ಯಕ್ಷರಲ್ಲಿ, ಪರಿಶೀಲನೆಯಲ್ಲಿ, ಸಲಹೆ ಮತ್ತು ಮಾರ್ಗದರ್ಶನದಲ್ಲಿ, ಸಂಪಾದಕ ಮಂಡಳಿಯಲ್ಲಿ ಪುರುಷರ ಪ್ರಾತಿನಿಧ್ಯ ಹೆಚ್ಚಾಗಿರುವುದು ಕಂಡು ಬರುತ್ತದೆ. ಇದು ಗಂಡು ಪರವಾದ ಸಾಮಾಜೀಕರಣ ಸಮಾಜದಲ್ಲಿ ಇದ್ದು, ಇದನ್ನೇ ಅನುಸರಿಸಿಕೊಂಡು ಜ್ಞಾನವಲಯವು ಮುಂದುವರೆದಿರುವುದು ಕಂಡುಬರುತ್ತದೆ. ಇದನ್ನು ಪರಿಶೀಲಿಸಿರುವುದರ ಉದ್ದೇಶ ಪುರುಷರು ಮತ್ತು ಮಹಿಳೆಯರಿಗೂ ಸಮಾನತೆ ಎಲ್ಲಾ ಕ್ಷೇತ್ರದಲ್ಲೂ ಸಿಗಬೇಕು. ಜೊತೆಗೆ ಎಲ್ಲದರಲ್ಲೂ ಸಮಾನ ಹಕ್ಕುಗಳನ್ನು ದೊರೆಯುವಂತಾಗಬೇಕು. ಮಹಿಳೆಯರನ್ನು ಮಾತೃಸ್ವರೂಪಿ ಎಂದು ಪಟ್ಟ ಕಟ್ಟಿ ಗೃಹಕ್ಕೆ ಸೀಮಿತ ಮಾಡಿರುವುದು ಮಹಿಳೆಯರಿಗೆ ಸಿಗುವ ಅವಕಾಶವನ್ನೆಲ್ಲಾ ಪುರುಷರೇ ಪಡೆದು ಮಹಿಳೆಯರನ್ನು ಗೃಹಬಂಧಿಯನ್ನಾಗಿಸುತ್ತಿರುವುದು ಕಂಡುಬರುತ್ತದೆ. ಹೀಗಾಗಿ ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಲಿಂಗ ತಾರತಮ್ಯವನ್ನು ಹೋಗಲಾಡಿಸುವುದು ಅವಶ್ಯವಾಗಿದೆ. ಆದರೆ ಇದು ಸಾಧ್ಯವಾಗಿಲ್ಲದಿರುವುದು ಪರಿಷ್ಕರಣೆ ಸಮಿತಿಯಲ್ಲಿನ ಹೆಣ್ಣು-ಗಂಡಿನ ಪ್ರತಿನಿಧಿತ್ವದ ಸ್ವರೂಪ ನೋಡಿದರೆ ತಿಳಿದು ಬರುತ್ತದೆ. ಇದನ್ನು ಈ ಕೆಳಗಿನ ಕೋಷ್ಟಕದಿಂದ ತಿಳಿಯಬಹುದು.

ಕೋಷ್ಟಕ-೩

ಪರಿಸರ ಅಧ್ಯಯನ ಮತ್ತು ಸಮಾಜ ವಿಜ್ಞಾನ ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳಲ್ಲಿ ಹೆಣ್ಣು-ಗಂಡಿನ ಪ್ರತಿನಿಧಿಕರಣ

ಕ್ರ.ಸಂ.	ತರಗತಿ	ಸರ್ವಾಧ್ಯಕ್ಷರು/ಅಧ್ಯಕ್ಷರು		ಪರಿಷ್ಕರಣ ಸಮಿತಿ ಸದಸ್ಯರು		ಉನ್ನತ ಪರಿಶೀಲನಾ ಸಮಿತಿ		ಸಲಹೆ ಮಾರ್ಗದರ್ಶಕರು		ವರ್ಷ
		ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
೧	೧ನೇ	–	–	–	–	–	–	–	–	೨೦೧೯
೨	೨ನೇ	–	–		–	–	–	–		೨೦೧೮
೩	೩ನೇ	–	–	–	–	–	–	–	–	೨೦೧೮
೪	೪ನೇ	೦	೧	೫	೧	೦	೪	೧	೧	೨೦೧೮
೫	೫ನೇ	೦	೧	–	–	೦	೩	೦	೩	೨೦೧೯
೬	೬ನೇ	೦	೧	೨	೫	೦	೪	೦	೨	೨೦೧೯
೭	೭ನೇ	೦	೧	೨	೫	೦	೪	೧	೧	೨೦೧೮
೮	೮ನೇ	೦	೧	೦	೯	೦	೪	೧	೧	೨೦೧೮
ಒಟ್ಟು		೦	೫	೯	೨೦	೦	೧೯	೩	೮	–

ಆಧಾರ: ೪ ರಿಂದ ೮ನೇ ತರಗತಿ ಪರಿಸರ ಮತ್ತು ಸಮಾಜ ವಿಜ್ಞಾನ ಪಠ್ಯಪುಸ್ತಕಗಳು

ಈ ಮೇಲಿನ ಕೋಷ್ಟಕವನ್ನು ಗಮನಿಸಿದರೆ ಪ್ರಾಥಮಿಕ ಮತ್ತು ಮಾಧ್ಯಮಿಕ ಕನ್ನಡ ಪಠ್ಯ ಪುಸ್ತಕ ಪರಿಷ್ಕರಣ ಸಮಿತಿಯಲ್ಲಿ ಕೂಡ ಪುರುಷ ಪ್ರಧಾನ ಸಾಮಾಜೀಕರಣ ಹೆಚ್ಚಾಗಿರುವುದು ಕಂಡು ಬರುತ್ತದೆ. ಇದಕ್ಕೆ ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿದಂತೆ ಪರಿಷ್ಕರಣೆ ಸಮಿತಿಯ ೪ ರಿಂದ ೮ನೇ ತರಗತಿಯವರೆಗಿನ ಅಧ್ಯಕ್ಷರೆಲ್ಲ ಪುರುಷರೇ ಆಗಿದ್ದಾರೆ. ಪರಿಷ್ಕರಣ ಸಮಿತಿ ಸದಸ್ಯರಲ್ಲಿ ಹೆಚ್ಚು ಪುರುಷರಿರುವುದು ಕಂಡುಬರುತ್ತದೆ. ಇದಕ್ಕೆ ೪ ರಿಂದ ೮ನೇ ತರಗತಿಯವರೆಗೆ ಪುರುಷರು ಒಟ್ಟು ೨೦(ಶೇ. ೬೮.೯೬) ಜನರಿದ್ದಾರೆ. ಒಟ್ಟು ೯(ಶೇ. ೩೨.೧೪) ಜನ ಮಹಿಳೆಯರಿದ್ದಾರೆ. ಉನ್ನತ ಪರಿಶೀಲನಾ ಸಮಿತಿಯಲ್ಲಿ ಎಲ್ಲರೂ ಪುರುಷರೇ(ಶೇ. ೧೦೦) ಇದ್ದಾರೆ. ಇನ್ನೂ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಪುರುಷರು ಒಟ್ಟು ೮(ಶೇ. ೭೨.೭೨)ರಷ್ಟು ಜನರು ಇದ್ದಾರೆ. ಮಹಿಳೆಯರಲ್ಲಿ ಒಟ್ಟು ೩(ಶೇ. ೨೭.೨೭)ರಷ್ಟು ಜನರಿದ್ದಾರೆ. ಇಲ್ಲಿಯೂ ಹೆಣ್ಣು-ಗಂಡು ಮಕ್ಕಳ ಪ್ರತಿನಿಧಿತ್ವದ ಸಾಮಾಜೀಕರಣದಲ್ಲಿ ಪುರುಷ ಪ್ರಧಾನ್ಯತೆ ಮೆರೆದಿದೆ. ಮಹಿಳೆಯರನ್ನು ನಗಣ್ಯ ವಲಯದಲ್ಲಿ ಇರಿಸಲಾಗಿದೆ. ಇದು ಲಿಂಗ ಸಮಾನತೆ ಇಲ್ಲದ ಪರಿಷ್ಕರಣ ಸಮಿತಿಯಾಗಿದೆ.

೪.೨. ಪರಿಸರ ಅಧ್ಯಯನ ಪಠ್ಯಗಳಲ್ಲಿ: ಹೆಣ್ಣು-ಗಂಡುಮಕ್ಕಳ ಸಾಮಾಜೀಕರಣದ ಸ್ವರೂಪ

ಮೊದಲಿಗೆ ೧ನೇ ತರಗತಿ ಪರಿಸರ ಅಧ್ಯಯದ ಪಠ್ಯಪುಸ್ತಕದಲ್ಲಿ ಹೆಣ್ಣು-ಗಂಡು ಮಕ್ಕಳ ಸಮಾಜೀಕರಣ ಕುರಿತಂತೆ ನೋಡುವುದಾದರೆ, ಚಿತ್ರಗಳ ಮೂಲಕ ಕುಟುಂಬದ ಪರಿಚಯದಲ್ಲಿ ಮೊದಲು ಗಂಡಿನ ಮೂಲಕ ಪರಿಚಯ ಪ್ರಾರಂಭವಾಗುತ್ತದೆ. ಇದಕ್ಕೆ ಉದಾ; ಪುಟ-೧ರಲ್ಲಿ ಅಪ್ಪ, ಅಮ್ಮ, ಅಣ್ಣ, ಅಕ್ಕ, ಅಜ್ಜ, ಅಜ್ಜಿ, ಚಿಕ್ಕಪ್ಪ-ಚಿಕ್ಕಮ್ಮ, ಅತ್ತೆ-ಮಾವ, ದೊಡ್ಡಪ್ಪ-ದೊಡ್ಡಮ್ಮ, ತಮ್ಮ-ತಂಗಿ ಹೀಗೆ ಮೊದಲು ಗಂಡು ನಂತರ ಹೆಣ್ಣುಗಳ ಮೂಲಕ ಕುಟುಂಬವನ್ನು ಪರಿಚಯಿಸಲಾಗಿದೆ. ಕುಟುಂಬದ ಚರ್ಚಾಚಿತ್ರಗಳಲ್ಲಿ ಹೆಣ್ಣು ಮಕ್ಕಳು ಪೊರಕೆಯಿಂದ ಗುಡಿಸುತ್ತಿರುವ, ಅಡುಗೆ ಮಾಡುತ್ತಿರುವ, ಅವರ ಹತ್ತಿರ ಇನ್ನೊಂದು ಹೆಣ್ಣುಮಗು ಕೆಲಸ ಮಾಡುತ್ತಿರುವ, ಪಾತ್ರೆ ತೊಳೆಯುತ್ತಿರುವ, ಊಟ ಬಡಿಸುತ್ತಿರುವ, ಬಟ್ಟೆ ಒಗೆಯುತ್ತಿರುವ, ಹೆಣ್ಣು ಮಗುವಿನ ತಲೆ ಕೂದಲು ಬಾಚುತ್ತಿರುವ, ನಾಟಿ ಮಾಡುತ್ತಿರುವ, ನೀರು ಸಂಗ್ರಹಿಸುತ್ತಿರುವ, ನೀರು ಹಾಕುತ್ತಿರುವ, ತಂದೆ ಪೇಪರ್ ಓದುತ್ತಿರುವ, ತಾಯಿ ಅಡುಗೆ ಮಾಡುತ್ತಿರುವ, ಹಾಗೇ ಪುರುಷ ಯಾವುದೋ ರಾಶಿಯ ಮುಂದೆ ನಿಂತಿರುವ, ಶಾಲೆಗೆ ಹೊರಟಿರುವ ಗಂಡು ಮಗು ಬೂಟ್ಸ್ ಧರಿಸುತ್ತಿರುವ, ಶಾಲೆಗೆ ಎರಡು ಚಿತ್ರಗಳಲ್ಲಿ ಬಂಡಿಯ ನಡುವೆ ಮುಂದಿನ ಭಾಗ ಹಿಡಿದಿರುವ, ಹಸುಗಳನ್ನು ತೊಳೆಯುತ್ತಿರುವ, ಕಾರು ತೊಳೆಯುತ್ತಿರುವ, ಅಂಚೆ ಕಛೇರಿಗೆ ಹೋಗುತ್ತಿರುವ, ನಿಂತಿರುವ ಬಸ್ಸಿಗೆ ಪುರುಷರು ಹತ್ತುತ್ತಿರುವ; ಒಂದು ಅಂಗಡಿ ಇದ್ದು ಇದರಲ್ಲಿ ಒಳಗಡೆ ಮತ್ತು ಹೊರಗಡೆ ಇಬ್ಬರು ಗಂಡುಮಕ್ಕಳಿರುವ ಮತ್ತು ಬಾಲಕರು ಮಾತ್ರ ಸಾಲಾಗಿ ಶಾಲೆಯ ಒಳಗಡೆ ಹೋಗುತ್ತಿರುವ ಚಿತ್ರಗಳಿವೆ. ಹೆಣ್ಣು-ಗಂಡುಮಕ್ಕಳಿಗೆ ಸಾಮಾಜೀಕರಣದ ಸಮಸ್ಯೆ ರೂಪಿಸುವ ಕುರಿತಾಗಿ ನೋಡಿದರೆ ಕುಟುಂಬ, ನೀರು, ಶಾರಿಗೆ ಇತ್ಯಾದಿ ಚಿತ್ರಗಳಲ್ಲಿ ಮನೆಯೊಳಗಿನ ಕೆಲಸಗಳಲ್ಲಿ ಹೆಣ್ಣುಮಕ್ಕಳು

ಮತ್ತು ಹೊರಗಿನ ವ್ಯವಹಾರದಲ್ಲಿ ಗಂಡು ಮಕ್ಕಳು ಎನ್ನುವ ಹಳೆಯ ಪಡಿಯಚ್ಚುಗಳನ್ನೇ ಹೇಳಲಾಗಿದೆ. ಇದಕ್ಕೆ ಪೂರಕವಾಗುವಂತೆ, ಕೆಲವು ಚಿತ್ರಗಳಲ್ಲಿ ಕುಟುಂಬ ಮತ್ತು ಸಹಕಾರ ಚಿತ್ರಗಳಲ್ಲಿ ಲಿಂಗತ್ವ ಸಮಾನತೆಯನ್ನು ಬಿಂಬಿಸುವಂಥ ಚಿತ್ರಗಳಿವೆ. ಅದರೆ ಆ ಚಿತ್ರಗಳ ಪ್ರಮಾಣ ಕಡಿಮೆ. ದೇಶದ ಸಂವಿಧಾನದಲ್ಲಿ ಸಮಾನತೆ, ಘನತೆ ಮತ್ತು ಸ್ವಾತಂತ್ರ್ಯ ಕುರಿತು ಹೇಳಲಾಗಿದೆ. ಅದರೆ ಶಿಕ್ಷಣ ವ್ಯವಸ್ಥೆಯಲ್ಲಿ ಲಿಂಗ ಅಸಮಾನತೆಯನ್ನು ಬಿಂಬಿಸುವ ಶಿಕ್ಷಣ ಮಕ್ಕಳಿಗೆ ದೊರೆಯುತ್ತಿರುವುದರಿಂದ, ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆ ಕಾರಣವಾಗುತ್ತಿರುವುದು ಕಂಡು ಬರುತ್ತದೆ.

ಪಠ್ಯಗಳ ಮೂಲಕ ಹೆಣ್ಣು-ಗಂಡು ಮಕ್ಕಳಿಗೆ ಸ್ಥಿರ ಮಾದರಿಯ ಪಾತ್ರಗಳು ನಿರಂತರವಾಗಿ ಮುಂದುವರೆಯುತ್ತಿರುವುದು ಕಂಡು ಬರುತ್ತದೆ. ಇದಕ್ಕೆ ಈ ಪಠ್ಯದ ಚಿತ್ರಗಳಲ್ಲಿ ತೋರಿಸಿರುವ ಹೆಣ್ಣು ಮಕ್ಕಳಿಗೆ ಸ್ವಚ್ಛತೆಯ ಕೆಲಸಗಳಾದ ಪಾತ್ರೆ ತೊಳೆಯುವ, ಬಟ್ಟೆ ತೊಳೆಯುವ, ಕಸ ಗುಡಿಸುವ, ಅಡುಗೆ ಮಾಡುವ, ಊಟ ಬಡಿಸುವ, ತಲೆ ಬಾಚುವ ಮತ್ತು ಪಾಲನೆ, ಪೋಷಣೆ, ರಕ್ಷಣೆಗಳಿಗೆ ಸಂಬಂಧಿಸಿದಂತೆ ತೋರಿಸಲಾಗಿದೆ, ಅದೇ ಗಂಡು ಮಕ್ಕಳ ಕುರಿತಂತೆ, ಅಂಚೆ ಕೊಡುವ, ರೈತನ ಕೆಲಸ ಮಾಡುವ, ಶಾಲೆಗೆ ಹೋಗುವ, ಆರಾಮಾಗಿರುವ ಪಾತ್ರಗಳಲ್ಲಿ ಪುರುಷರನ್ನು ಚಿತ್ರಗಳ ಮೂಲಕ ತೋರಿಸಲಾಗಿದೆ. ಇದು ವ್ಯಕ್ತಿಯಿಂದ ವ್ಯಕ್ತಿಗೆ, ಪೀಳಿಗೆಯಿಂದ ಪೀಳಿಗೆ, ಸಮಾಜದಿಂದ ಸಮಾಜಕ್ಕೆ ಈ ಲಿಂಗತ್ವ ಅಸಮಾನತೆಗಳೇ ಮುಂದುವರೆದು, ಹೆಣ್ಣು ಮತ್ತು ಗಂಡಿಗೆ ಪ್ರತ್ಯೇಕ ಕೆಲಸಗಳೆಂದು, ಶ್ರಮ ವಿಭಜನೆಯ ಸಾಮಾಜೀಕರಣದ ಸಮಸ್ಯೆಗೆ ಕಾರಣವಾಗುತ್ತದೆ.

ಮಕ್ಕಳಿಗೆ ಚಿತ್ರದ ಮೂಲಕ ಮನಸ್ಸಿಗೆ ಶಿಕ್ಷಣ ದೊರೆಯುವುದರಿಂದ, ಮಕ್ಕಳು ಪರಿಸರವನ್ನು ಅರಿವ ಸಂದರ್ಭದಲ್ಲಿ ಹೆಣ್ಣು-ಗಂಡುಗಳ ಕೆಲಸದಲ್ಲಿ ಬೇರೆ ಬೇರೆ ಎನ್ನುವ ಮನೋಭಾವನೆ ಬಾಲ್ಯದಲ್ಲೇ ಉಳಿಯುತ್ತದೆ. ಮುಂದೆ ಇದು ಮಕ್ಕಳ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಬೆರೆತು ಹೆಣ್ಣು ಸೇವೆಗೆ ಮೀಸಲು, 'ಗಂಡು' ಅಧಿಕಾರಕ್ಕೆ ಮೀಸಲು ಎನ್ನುವ ಸಾಮಾಜಿಕ ಸಂರಚನೆಗೆ ಕಾರಣವಾಗುತ್ತದೆ. ಈ ಪಠ್ಯಗಳ ಮೂಲಕ ಹೆಣ್ಣು-ಗಂಡು ಪ್ರತ್ಯೇಕ ಎನ್ನುವುದನ್ನು ಪ್ರಕ್ರಿಯೆಗೊಳಿಸುವ ಕೆಲವು ಅಂಶಗಳನ್ನು ಮುಂದುವರೆಸಿರುವುದು ಕಂಡು ಬರುತ್ತದೆ. ಅದೇನೆಂದರೆ ಹೆಣ್ಣು ಮಕ್ಕಳಿಗೆ ಕೂದಲು ಹೆಚ್ಚು ಬಿಡುವ ಹಾಗೆ ನೋಡಿಕೊಳ್ಳುವುದು, ಪ್ರತ್ಯೇಕ ಉಡುಪುಗಳನ್ನು ಧರಿಸುವ ಹಾಗೆ ನೋಡಿಕೊಳ್ಳುವುದು, ಗಂಡಿನ ಜೊತೆಗೆ ಬೆರೆಯದ ಹಾಗೆ ನೋಡಿಕೊಳ್ಳುವುದು ಮತ್ತು ಹೆಣ್ಣುಮಕ್ಕಳಿಗೆ ಪ್ರತ್ಯೇಕವಾಗಿ ಕೆಲವು ಕ್ರೀಡೆಗಳಿವೆ ಎಂದು ತೋರಿಸಿರುವ, ಈ ರೀತಿಯ ಬಿಂಬಿಸುವ ಕೆಲವು ಚಿತ್ರಗಳನ್ನು ಬದಲಿಸದೆ ಹಾಗೇ ಮುಂದುವರೆಸಿಕೊಂಡು ಹೋಗಲಾಗಿದೆ. ಇವುಗಳನ್ನಲ್ಲಿ ಅದಲು-ಬದಲಾಗಿ ಮಾಡಿಲ್ಲ. ಮಾಡಿದರೂ, ಹೆಣ್ಣುಮಕ್ಕಳು ಮಾಡುವ ಕೆಲಸ, ಗಂಡುಮಕ್ಕಳು ಮಾಡಬಹುದಾಗಿದೆ ಜೊತೆಗೆ ಹೆಣ್ಣು-ಗಂಡು ಮಕ್ಕಳಿಬ್ಬರು ಜೊತೆ ಸೇರಿ ಮಾಡುವ ಕೆಲಸವನ್ನಾಗಿ ತೋರಿಸಿದ್ದಾರೆ. ಆದರೂ ಇದರ ಪ್ರಮಾಣ ಕಡಿಮೆ. ಪಠ್ಯಗಳಲ್ಲಿ ಲಿಂಗ ಸಮಾನತೆ

ಮೂಡಿಸುವುದರ ಮೂಲಕ ಪುರುಷ ಪ್ರಧಾನತೆ, ಪಿತೃಪ್ರಧಾನ್ಯತೆಯು ಕಟ್ಟಿಕೊಟ್ಟಿರುವ ಮಿಥ್‌ಗಳನ್ನು ಮುರಿಯುವ ಕೆಲಸ ಮಾಡಿಲ್ಲದಿರುವುದು ಕಂಡು ಬರುತ್ತದೆ. ಹೆಣ್ಣು-ಗಂಡು ಮಕ್ಕಳ ಪಾತ್ರಗಳ ಬದಲಾದ ಚಿತ್ರಗಳು, ಪುರುಷ ಪ್ರಧಾನ ವ್ಯವಸ್ಥೆಯನ್ನು ಹಿಡಿದಿಟ್ಟುಕೊಂಡಿರುವ ಕುಟುಂಬ ಶಿಕ್ಷಣ, ಸಾಮಾಜಿಕತೆ, ಧಾರ್ಮಿಕತೆ ಮುಂತಾದ ವಲಯಗಳ ವ್ಯವಸ್ಥೆಯಲ್ಲಿ ಆಗಬೇಕಾದ ಸಾಮಾಜೀಕರಣದ ಪರಿವರ್ತನೆಗೆ ಬುನಾದಿಯಾಗುತ್ತಿತ್ತು. ಹೆಣ್ಣು-ಗಂಡು ಮಕ್ಕಳ ಉಡುಪು ಧರಿಸುವುದರಲ್ಲಿ ಹೆಣ್ಣುಮಕ್ಕಳು ಬೇರೆ, ಗಂಡುಮಕ್ಕಳ ಉಡುಪು ಬೇರೆ ಎನ್ನುವ ರೀತಿಯಲ್ಲಿ ಚಿತ್ರೀಕರಿಸಿರುವುದರಿಂದ ಹೆಣ್ಣು-ಗಂಡುಮಕ್ಕಳು ಒಂದೇ ರೀತಿಯ ಬಟ್ಟೆ ಧರಿಸಿದರೆ ಏನು ತಪ್ಪು ಎನ್ನುವ ಚಿಂತನೆ ಕೂಡ ಈ ಪರಿಸರ ಅಧ್ಯಯನದಲ್ಲಿ ಕಂಡು ಬರುವುದಿಲ್ಲ. ಹೆಣ್ಣು-ಗಂಡು ಮಕ್ಕಳಿಗೆ ಬೇರೆ-ಬೇರೆ ಉಡುಪು ಎನ್ನುವ ಸಾಮಾಜೀಕರಣ ಸಮಸ್ಯೆ ಮಕ್ಕಳಲ್ಲಿ ತಲೆದೂರುತ್ತದೆ.

ಆಟ ಆಡುವುದು ಶಾರೀರಿಕ ಅಭ್ಯಾಸದ ಜೊತೆ ಮನಸ್ಸಿಗೆ ಸಂತೋಷವನ್ನುಂಟುಮಾಡುವ ಸಂಗತಿ. ಆದರೆ ಪಠ್ಯಗಳಿಂದ ದೊರೆಯುವ ಕ್ರೀಡಾಚಿತ್ರಗಳು ಹೆಣ್ಣು-ಗಂಡು ಮಕ್ಕಳಿಗೆ ಬೇರೆ ಬೇರೆ ಇವೆ ಎನ್ನುವ ಸಾಮಾಜೀಕರಣವನ್ನು ರೂಢಿಸುತ್ತದೆ. ಜೊತೆಗೆ ಲಿಂಗತ್ವ ತಾರತಮ್ಯವನ್ನು ಗಟ್ಟಿಗೊಳಿಸುತ್ತದೆ. ಈ ಚಿತ್ರಗಳನ್ನು ಬದಲಾಯಿಸಿದ್ದರೇ, ಬೇರೂರಿರುವ ಹೆಣ್ಣು-ಗಂಡು ಮಕ್ಕಳ ಲಿಂಗ ತಾರತಮ್ಯದ ಸಾಮಾಜೀಕರಣವನ್ನು ಹೋಗಲಾಡಿಸಲು ಸಾಧನವಾಗಬಹುದು. ಜೊತೆಗೆ ಎಳೆಯ ಮನಸ್ಸುಗಳನ್ನು, ಹೊಸತನ್ನು ಕಲಿಯುವ, ಸೃಜನಾತ್ಮಕತೆಯನ್ನು ಬೆಳೆಸಿಕೊಳ್ಳುವ, ಹೊಸದಾಗಿ ಆಲೋಚಿಸುವ, ಪ್ರಗತಿಪರ ಚಿಂತನೆಗೆ ತೆರೆದುಕೊಳ್ಳುವಂತೆ, ಲಿಂಗ ಸಮಾನತೆಯನ್ನು ಬೆಳೆಯುವಂತೆ, ಶ್ರಮ ವಿಭಜನೆಯನ್ನು ಹೋಗಲಾಡಿಸಲು ಸಾಧ್ಯವಾಗುತ್ತಿತ್ತು. ಆದರೆ ಇದು ಸಾಧ್ಯವಾಗಿಲ್ಲ.

ಎರಡನೇ ತರಗತಿಯ ಪರಿಸರ ಅಧ್ಯಯನ ಪಠ್ಯಪುಸ್ತಕದಲ್ಲಿ ಮಕ್ಕಳಿಗೆ ಕುಟುಂಬ, ಹಬ್ಬ-ಸಮಾರಂಭ, ಸ್ವಚ್ಛತೆ, ಸುರಕ್ಷತೆ, ನಮ್ಮ ಅವಶ್ಯಕತೆಗಳು, ನಮ್ಮ ಮನೆ, ಆಹಾರ, ನೀರು, ಸಾರಿಗೆ, ಸೌಕರ್ಯ, ಪ್ರಾಣಿ ಪಕ್ಷಿ, ಸಸ್ಯಗಳು ಮತ್ತು ಕೆಲಸದ ಪರಿಚಯ ಮಾಡಿಕೊಡಲಾಗಿದೆ. ಆಹಾರದ ವಿಧಗಳು, ಆಹಾರಾಭ್ಯಾಸಗಳು, ಪ್ರಾಣಿ-ಪಕ್ಷಿ, ಕೀಟಗಳಿಗೆ ಸಂಬಂಧಿಸಿದಂತೆ ಪಾಠಗಳು ಇವೆ. ಜೊತೆಗೆ ಇವುಗಳಿಗೆ ಸಂಬಂಧಿಸಿದಂತೆ ಚಿತ್ರಗಳನ್ನು ಕೊಡಲಾಗಿದೆ. ಮನುಷ್ಯರಿರುವ ಚಿತ್ರಗಳು ಹಾಗೂ ಮಾನವ ಸಂಬಂಧಗಳ ಚಿತ್ರಗಳ ಜೊತೆಗೆ ಅವುಗಳ ವಿವರಣೆ, ವಿಶ್ಲೇಷಣೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಕೆಲವು ಲಿಂಗ ಸಮಾನತೆಯನ್ನು ಪ್ರತಿಫಲಿಸಿದರೆ, ಹೆಚ್ಚಿನವು ಲಿಂಗತ್ವ ಅಸಮಾನತೆಯನ್ನು ಬಿಂಬಿಸುತ್ತವೆ. ಪುರುಷ ಪ್ರಧಾನ್ಯತೆ ಪ್ರತಿಪಾದಿಸುವ ಪಡಿಯಚ್ಚುಗಳಾದ, ಸಮಾರಂಭದಲ್ಲಿ ಸಂಭ್ರಮಿಸುವ ಪುರುಷರು, ಧೈರ್ಯದ ಸಂದೇಶ ಇರುವ ಚಿತ್ರ, ವೈದ್ಯ ವೃತ್ತಿಯಲ್ಲಿನ ಪುರುಷ ಚಿತ್ರ, ಗಂಡುಮಕ್ಕಳು ಶಾಲೆಯೊಳಗೆ ಹೋಗುತ್ತಿರುವ ಚಿತ್ರ, ಅದೇ ಹೆಣ್ಣುಮಕ್ಕಳಿಗೆ ಕುಟುಂಬದೊಳಗಿನ ಕೆಲಸಗಳು ಮತ್ತು ಕುಟುಂಬದವರ ಆರೈಕೆ ಇರುವ ಚಿತ್ರಗಳು. ಕೌಟುಂಬಿಕ ಪರಿಸರದಲ್ಲಿನ ಮಹಿಳೆ ಹೆಣ್ಣು ಮಗುವಿನ ಕೂದಲು ಬಾಚುತ್ತಿರುವ, ನಮ್ಮ ಅವಶ್ಯಕತೆ ಪಾಠದಲ್ಲಿ ಮಗುವಿಗೆ ತಾಯಿ ಊಟ ಮಾಡಿಸುತ್ತಿರುವ ಮತ್ತು ಮಹಿಳೆ ಪಾತ್ರೆ

ತೊಳೆಯುತ್ತಿರುವ, ಪುರುಷ ಬಿಂದಿಗೆಯಿಂದ ನೀರನ್ನು ಬಕೆಟ್‌ಗೆ ತುಂಬಸುತ್ತಿರುವ, ಮಹಿಳೆ ಹಾಲು ಕರೆಯುತ್ತಿರುವ ಚಿತ್ರಗಳಿವೆ. ಹೆಣ್ಣುಮಕ್ಕಳನ್ನು ಮನೆಗೆ ಸೀಮಿತ ಮಾಡುವ ಪ್ರತಿಮೆಗಳು, ಗಂಡುಮಕ್ಕಳಿಗೆ ಹೊರಗಿನ ವ್ಯವಹಾರಗಳು ಎನ್ನುವ ಸಾಮಾಜೀಕರಣವನ್ನು ರೂಪಿಸುತ್ತವೆ. ಇದೇ ತರಗತಿಯಲ್ಲಿ 'ಹಬ್ಬ ಮತ್ತು ಸಮಾರಂಭಗಳು' ಎಂಬ ಪಾಠದಲ್ಲಿ ಪುರುಷರು ಮುಂದೆಯಿದ್ದು, ಅಪ್ಪಿಕೊಂಡಿರುವ; ಹುಡುಗ ಪಟಾಕಿ ಹಚ್ಚುತ್ತಿರುವ, ಪಕ್ಕದಲ್ಲಿ ಹುಡುಗಿ ನಿಂತು ಕಿವಿ ಮುಚ್ಚಿಕೊಂಡು ಅಂಜಿಕೆ ವ್ಯಕ್ತಪಡಿಸುತ್ತಿರುವ, ಹೆಣ್ಣು ಮಕ್ಕಳು ದೀಪ ಹಚ್ಚುತ್ತಿರುವ, ಪುರುಷ ಮಹಿಳೆಗೆ ತಾಳಿ ಕಟ್ಟುತ್ತಿದ್ದು, ಸುತ್ತ ಜನರು ನಿಂತಿರುವ; ರಾಜನೊಬ್ಬ ಆನೆಯ ಮೇಲೆ ಮೆರವಣಿಗೆಯಲ್ಲಿರುವ ಚಿತ್ರ (ಪುಟ-೧೬ ಮತ್ತು ೧೭) ಇಲ್ಲಿ ಸೇರಿರುವ ಜನರಲ್ಲಿ ಹೆಚ್ಚಿನವರು ಪುರುಷರಾಗಿದ್ದಾರೆ. 'ನೀರಿನ ಅವಶ್ಯಕತೆ' ಚರ್ಚೆ ಪಾಠದಲ್ಲಿ ಪುಟ-೪೫ರಲ್ಲಿ ಮಹಿಳೆಯೊಬ್ಬಳು ಪಾತ್ರೆ ತೊಳೆಯುತ್ತಿರುವ ಚಿತ್ರ ಮತ್ತೊಂದು ಕಡೆ ಬಟ್ಟೆ ತೊಳೆಯುವ ಮಹಿಳೆಯರನ್ನು ತೋರಿಸಲಾಗಿದೆ. ನೀರನ್ನು ಪೋಲು ಮಾಡುವವರು ಮಹಿಳೆಯರು ಎನ್ನುವಂತೆ ಬಿಂಬಿಸಲಾಗಿದೆ. 'ಆಹಾರದ ವಿಧಗಳು 'ಹೊಂದಿಸು' ಪುಟ-೫೨ರಲ್ಲಿ ಮಹಿಳೆಯೊಬ್ಬಳು ಅಡುಗೆ ಮಾಡುತ್ತಿರುವ ಚಿತ್ರವನ್ನು ತೋರಿಸಲಾಗಿದೆ 'ಆಹಾರಾಭ್ಯಾಸ ಚರ್ಚೆ' ಪಾಠದಲ್ಲಿ ಪುಟ-೫೫ರಲ್ಲಿ ಹೆಣ್ಣು-ಗಂಡು ಇಬ್ಬರನ್ನು ತೋರಿಸಲಾಗಿದ್ದು, ಲಿಂಗ ಸಮಾನ ನೆಲೆಯಲ್ಲಿ ಇದೆ.' ನಾವು ಮತ್ತು ಸ್ವಚ್ಛತೆ ಸಮೀಕ್ಷೆ 'ಪಾಠದಲ್ಲಿ ಪು-೭೨ರಲ್ಲಿ ಹೆಣ್ಣು ಮಗುವೊಂದು ಕಸ ಬಳಿಯುತ್ತಿರುವ ಚಿತ್ರವಿದೆ. ಇಂತಹ ಚಿತ್ರಗಳು ಹೆಣ್ಣು-ಗಂಡು ಮಕ್ಕಳಿಗೆ ಪ್ರತ್ಯೇಕ ಸಾಮಾಜೀಕರಣ ರೂಪಿಸುತ್ತವೆ. ಮುಂದುವರೆದು ಮಕ್ಕಳಲ್ಲಿ ಲಿಂಗತ್ವ ತಾರತಮ್ಯ ವ್ಯವಸ್ಥೆಯೇ ಸರಿ' ಎಂದು ಒಪ್ಪಿಕೊಳ್ಳುವಂತೆ ಸಾಮಾಜೀಕರಣ ರೂಪಿಸಲು ಇಂತಹ ಪಠ್ಯಗಳು ಕಾರಣವಾಗುತ್ತವೆ.

ಮನೆ ಎಲ್ಲರಿಗೂ ಅವಶ್ಯಕ; ಹೆಣ್ಣು-ಗಂಡು ಎಂಬ ಭೇದವಿಲ್ಲದೆ, ಲಿಂಗ ತಾರತಮ್ಯವಿಲ್ಲದೆ ಕುಟುಂಬದಲ್ಲಿ ಎಲ್ಲಾ ಸದಸ್ಯರು ಸೇರಿಕೊಂಡು ಮನೆಯೊಳಗಿನ ಕೆಲಸಗಳನ್ನು ಸಮಾನವಾಗಿ ಮಾಡಬೇಕೆಂಬ ಕಾಲಘಟ್ಟದಲ್ಲಿದ್ದೇವೆ. ಹೀಗಿದ್ದರೂ ಪಠ್ಯದಲ್ಲಿ ದೊರೆಯುವ "ಕೆಲಸ ಸಮೀಕ್ಷೆ" ಯಾರು ಮಾಡುತ್ತಾರೆ ಎಂದು ತಿಳಿದು ಅನ್ವಯಿಸುವುದಕ್ಕೆ ಗುರುತು ಹಾಕಿ ಪುಟದಲ್ಲಿ (ಪುಟ-೮೩) ಮಹಿಳೆ ಪಾತ್ರೆ ತೊಳೆಯುವ, ಬಟ್ಟೆ ತೊಳೆಯುವ, ಹೆಣ್ಣು ಮಗುವನ್ನು ಆರೈಕೆ ಮಾಡುವ, ಮಹಿಳೆ ನಾಟಿ ಮಾಡುವ, ಪುರುಷ ಮಾತ್ರ ಕಟ್ಟಿಗೆ ಕಡಿಯುವ ಶ್ರಮದಾಯಕ ಎನ್ನುವ ಚಿತ್ರಗಳನ್ನು ಮತ್ತು ಕೆಲಸಗಳನ್ನು ಯಾರು, ಯಾರು ಮಾಡುತ್ತಾರೆ ಎಂದು ಹೇಳುವಾಗಲೇ ಹೆಣ್ಣು-ಗಂಡುಗಳಲ್ಲಿ ಕೆಲಸ ಭಿನ್ನತೆ ಇದೆ ಎನ್ನುವಂತೆ ಸಾಮಾಜೀಕರಣ ಈ ಪರಿಸರ ಅಧ್ಯಯನದ ಚಟುವಟಿಕೆಯ ಅಭ್ಯಾಸಗಳಲ್ಲಿ ಕಂಡು ಬರುತ್ತದೆ. ಪುರುಷರು ಮುಂದಿರಬೇಕು ಅವರ ಹಿಂದೆ ಮಹಿಳೆಯರು ಇರಬೇಕು, ಮಗುವನ್ನು ಮಹಿಳೆ ಹಿಡಿದುಕೊಂಡಿರಬೇಕು, ಹೆಣ್ಣುಮಕ್ಕಳಿಗೆ ನೀರು ಸಂಗ್ರಹಣೆ, ಮಗುವಿನ ಲಾಲನೆ-ಪಾಲನೆ ತಾಯಿಯ ಕರ್ತವ್ಯ ಎನ್ನುವ ಹಾಗೂ ಗಂಡುಮಕ್ಕಳು ಮಾತ್ರ ಶಾಲೆಗೆ ಹೋಗುತ್ತಿರುವುದನ್ನು ನಮ್ಮ ಅವಶ್ಯಕತೆಯಲ್ಲಿ ತೋರಿಸಿರುವುದು, ಶಿಕ್ಷಣ

ಗಂಡುಮಕ್ಕಳಿಗೆ ಮಾತ್ರ ಅಗತ್ಯ ಎನ್ನುವ ಸಾಮಾಜೀಕರಣ ನೀಡುತ್ತದೆ. ಹಬ್ಬದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಸಂಭ್ರಮಿಸುವವರು ಪುರುಷರು, ಧೈರ್ಯದ ಕೆಲಸಗಳು ಗಂಡುಮಕ್ಕಳಿಗೆ, ಪೌಷ್ಠಿಕ ಆಹಾರ ಗಂಡುಮಕ್ಕಳಿಗೆ, ವೈದ್ಯ ವೃತ್ತಿ ಗಂಡುಮಕ್ಕಳಿಗೆ ಇವುಗಳಲ್ಲೆವೂ ಪುರುಷ ಪ್ರಧಾನತೆಯ ಧೋರಣೆಯನ್ನು ಗಟ್ಟಿಗೊಳಿಸುತ್ತಿರುವ ಸಂದೇಶಗಳಾಗಿವೆ. ಮುಂದುವರೆದು ಸಾಮಾಜೀಕರಣ ಒಳ್ಳೆಯ ಆಹಾರ ಗಂಡುಮಕ್ಕಳಿಗೆ ಇದನ್ನು ತಯಾರಿಸಿ ಕೊಡುವ ಜವಾಬ್ದಾರಿ ಹೆಣ್ಣುಮಕ್ಕಳಿಗೆ. ಜ್ಞಾನ, ಅನುಭವ, ನಿರ್ವಹಣೆ ಪುರುಷರಿಗೆ ಇರುವುದು ಎನ್ನುವಂತೆ ಸಾಮಾಜೀಕರಣ ರೂಪಿತಗೊಳಿಸುತ್ತದೆ. ಪದೇ ಪದೇ ಮಹಿಳೆಯೇ ಅಡುಗೆ ಕೆಲಸವನ್ನು ಮಾಡುತ್ತಿರುವ ಚಿತ್ರಗಳನ್ನು ತೋರಿಸುವುದರ ಮೂಲಕ ಮಹಿಳೆಯರನ್ನು ಕುಟುಂಬದೊಳಗಿನ ಸೇವಕಿಯರ ಪಾತ್ರದಲ್ಲಿ ಸಾಮಾಜೀಕರಣಗೊಳಿಸುತ್ತಿರುವುದು ಕಂಡು ಬರುತ್ತದೆ.

ಮಗುವನ್ನು ಹಿಡಿದುಕೊಳ್ಳುವುದರ ಕುರಿತು ಈ ಚಿತ್ರಗಳನ್ನೇ ಅದಲು-ಬದಲು ಮಾಡಿ ತೋರಿಸಬಹುದಿತ್ತು. 'ಹಬ್ಬ ಮತ್ತು ಸಮಾರಂಭ' ಪಾಠದಲ್ಲಿ ಮದುವೆ ಅದರಲ್ಲೂ ತಾಳಿಕಟ್ಟುವ ಚಿತ್ರವನ್ನು ಇಷ್ಟು ಎಳೆಯ ಮನಸ್ಸಿಗೆ ಪರಿಚಯಿಸುವ ಅಗತ್ಯತೆಯಾದರೂ ಏನು? ಮಕ್ಕಳಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅರ್ಥಗೊಳಿಸುವ ಸನ್ನಿವೇಶವಿರುವಾಗ ರಾಜನ ಮೆರವಣಿಗೆಯನ್ನು ತೋರಿಸುವ ಔಚಿತ್ಯವಾದರೂ ಏನು ? ಮಕ್ಕಳಿಗೆ ತನ್ನ ಪರಿಸರದಲ್ಲಿ ಕಣ್ಣಿಗೆ ಕಾಣುವ ಸಮಾರಂಭ ಮತ್ತು ಹಬ್ಬಗಳನ್ನು ಪರಿಚಯಿಸಬೇಕೇ ಹೊರತು ಕಾಣದ ರಾಜರನ್ನಲ್ಲ. ಸಾಮಾಜೀಕರಣದಲ್ಲಿ ಮಹಿಳೆಯರಿಗೆಂದು ಅಲಿಖಿತವಾಗಿ ಮೀಸಲಿಟ್ಟಿರುವ ಕುಟುಂಬ, ಮನೆ ಮತ್ತು ಅಡುಗೆಗೆ ಸಂಬಂಧಿಸಿದ ಕೆಲಸಗಳು, ಕುಟುಂಬ ಸದಸ್ಯರ ಆರೈಕೆ ಇವುಗಳನ್ನು ಮಹಿಳೆಯರ ಮೂಲಕ ತೋರಿಸಿರುವುದು, ಅಡುಗೆ ಮಾಡುತ್ತಿರುವ ಮಹಿಳೆಯ ಸಹಾಯಕ್ಕೆ ಹೆಣ್ಣು ಮಗಳು, ರಕ್ಷಣೆಯ ಪಾತ್ರ ಹುಡುಗನಿಗೆ; ಗಿಡಗಳಿಗೆ ನೀರು ಹಾಕುವ ಕೆಲಸ ಹೆಣ್ಣುಮಕ್ಕಳಿಗೆ ಮತ್ತು ಕಟ್ಟಿಗೆ ಸೀಳುವ ಕೊಂಡೊಯ್ಯುವ ಕೆಲಸ ಗಂಡುಮಕ್ಕಳಿಗೆ ಜೊತೆಗೆ ಪುರುಷರಿಗೆ ಗಂಡುಮಕ್ಕಳು ಸಹಾಯ ಮಾಡುವವರು ಎನ್ನುವ ಸಾಮಾಜೀಕರಣವನ್ನು ಮಕ್ಕಳಿಗೆ ಹೇಳಿ ಕೊಡಲಾಗುತ್ತಿದೆ. ಎರಡನೇ ತರಗತಿಯ ಪರಿಸರ ಅಧ್ಯಯನ ಪುಸ್ತಕವನ್ನು ಒಟ್ಟಾರೆ ಗಮನಿಸಿದರೆ, ಅಡುಗೆ ಕೋಣೆ, ಸ್ವಚ್ಛತೆ ಮತ್ತು ಕುಟುಂಬದವರ ಆರೈಕೆ ಹೆಣ್ಣು ಮಕ್ಕಳಿಗೆ; ಸಂಚಾರ ಜ್ಞಾನ, ಆಟ, ಹೊರಗಿನ ವ್ಯಾಪಾರ, ಶಾಲಾ ಶಿಕ್ಷಣ, ಧೈರ್ಯ, ಸಾಹಸಗಳು 'ಗಂಡಿಗೆ' ಎಂಬ ಸಾಮಾಜೀಕರಣವನ್ನು ಚಿತ್ರಗಳ ಮೂಲಕ ಪುಷ್ಠಿಗೊಳಿಸುತ್ತಾ, ಸಮಾಜದಲ್ಲಿ ಹೆಣ್ಣು-ಗಂಡು ಮಕ್ಕಳು ಹೀಗೆಯೇ ಇರಬೇಕೆಂಬ ಸಾಮಾಜೀಕರಣವನ್ನು ಬಲಗೊಳಿಸುತ್ತಿರುವುದು ಕಂಡು ಬರುತ್ತದೆ.

ಮೂರನೇ ತರಗತಿ ಪರಿಸರ ಅಧ್ಯಯನ ಪಠ್ಯಪುಸ್ತಕದಲ್ಲಿ ಚಿತ್ರಗಳು ಲಿಂಗ ತಾರತಮ್ಯವನ್ನು ಪ್ರತಿಫಲಿಸುತ್ತವೆ. ಕೆಲವು ಚಿತ್ರಗಳು ಮಾತ್ರ ಲಿಂಗತ್ವ ತಟಸ್ಥತೆ ಮತ್ತು ಗುಣಾತ್ಮಕ ಅಂಶವಾಗಿ ಗುರುತಿಸುತ್ತವೆ. ಲಿಂಗ ತಾರತಮ್ಯವನ್ನು ಮಕ್ಕಳಿಗೆ ಪರಿಚಯಿಸುತ್ತಾ ಪುರುಷ ಪ್ರಧಾನ್ಯತೆಯ ಶಾಶ್ವತೀಕರಣಕ್ಕೆ ಈ ಪಠ್ಯದಲ್ಲಿ ಅಲಿಖಿತವಾಗಿರುವ ಧೋರಣೆಗಳು ಕಂಡು ಬರುತ್ತವೆ. ಇದಕ್ಕೆ

ಕುಟುಂಬದ ಸದಸ್ಯರ ನಡುವಿನ ಪಾತ್ರಗಳು, ಕೆಲಸಗಳು ಮತ್ತು ಸಂಭಾಷಣೆಗಳು ಪೂರಕವಾಗಿವೆ. ಮಹಿಳೆಯರನ್ನು ಅಡುಗೆ ಮಾಡಿ ಆಹಾರ ಪೂರೈಸುವ, ಬಟ್ಟೆ ಶುಚಿಗೊಳಿಸುತ್ತಿರುವ, ಮಕ್ಕಳ ಮತ್ತು ಕುಟುಂಬದ ಸದಸ್ಯರ ಆರೈಕೆ ಮಾಡುತ್ತಿರುವ, ಮನೆಯಲ್ಲಿ ನೀರು ಸಂಗ್ರಹಿಸುವ, ಹಾಸಿಗೆ ಮಡಚುವ ಇತ್ಯಾದಿ ಕೆಲಸಗಳಲ್ಲಿ ತೋರಿಸಲಾಗಿದೆ. ಹಬ್ಬದ ದಿನಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಸಂಭ್ರಮಿಸುತ್ತಿರುವ ವೇದಿಕೆಗಳಲ್ಲಿ ಆಸೀನರಾಗಿರುವ, ಗುಡಿ-ಕೈಗಾರಿಕೆ ವೃತ್ತಿ ಮಾಡುತ್ತಿರುವ, ಆಧುನಿಕ ಯಂತ್ರಗಳನ್ನು ಬಳಸುತ್ತಿರುವ, ರೈತನಾಗಿರುವ ಮತ್ತು ವಿವಿಧ ವೃತ್ತಿಗಳನ್ನು ನಿರ್ವಹಿಸುವ ಸಾಮರ್ಥ್ಯ ಮತ್ತು ಧೈರ್ಯವುಳ್ಳವರೆಂದರೆ ಪುರುಷರೇ ಎನ್ನುವಂತಹ ಸಾಮಾಜೀಕರಣವನ್ನು ಇಲ್ಲಿ ಮಾಡಲಾಗಿದೆ. ಹೆಚ್ಚು ಪುರುಷ ಪ್ರಧಾನವಾದ ಭಾಷೆಗಳನ್ನು ಬಳಸಿದ್ದು, ಲಿಂಗತ್ವ ತಟಸ್ಥ ಮತ್ತು ಸ್ತ್ರೀಲಿಂಗ ಪದಗಳು ಬೆರಳೆಣಿಕೆಯಷ್ಟು ಮಾತ್ರವಿದೆ. ಕೆಲವು ಶಬ್ದಗಳನ್ನು ಪುರುಷರೇ ಮಾಡಬೇಕಾದ ವೃತ್ತಿ ಎನ್ನುವ ರೀತಿಯಲ್ಲಿ ಬಳಸಲಾಗಿದೆ. ಉದಾ: ಅಂಚೆಯವನು, ರೈತ, ಕಂಬಾರ, ಅಕ್ಕಸಾಲಿಗ, ದರ್ಜಿ, ವೈದ್ಯ ಹಾಗೆಯೇ ಪ್ರಕೃತಿಯ ಭಾಗವಾಗಿರುವ ಸೂರ್ಯ, ಮಳೆ ಸಹ ಪುರುಷವಾಚಕವಾಗಿ ಸಂಬೋಧಿಸಿರುವುದು ಕಂಡು ಬರುತ್ತದೆ. ಕುಟುಂಬದ ಸಂಬಂಧವನ್ನು ಮೊದಲು ಪುರುಷರಿಗೆ ಕೊಟ್ಟು ಅವರ ಮೂಲಕ ಉಳಿದ ಸದಸ್ಯರನ್ನು ಗುರುತಿಸಿರುವುದು, ಮೊದಲು ಗಂಡುಮಕ್ಕಳಿಂದ ಪಾಠದ ಸಂಭಾಷಣೆಯನ್ನು ಆರಂಭಿಸಿರುವುದು ಮತ್ತು ವಿಚಾರಗಳನ್ನು ಪುರುಷರಿಂದ ಪರಿಚಯಿಸಿರುವುದರಲ್ಲಿ ಮಕ್ಕಳಿಗೆ ಪುರುಷರು(ಗಂಡು) ಹೊರ ಪ್ರಪಂಚ ಜ್ಞಾನಿಗಳು, ಅನುಭವಿಗಳು, ಅವರಿಂದ ಕಲಿಯಬೇಕು ಎಂಬ ಸಾಮಾಜೀಕರಣ ರೂಪಿಸುತ್ತಿರುವುದು ಇಲ್ಲಿ ಕಂಡು ಬರುತ್ತದೆ. ಈ ಪರಿಸರ ಅಧ್ಯಯನದಲ್ಲಿ ಚಿತ್ರ, ಸಂಭಾಷಣೆ ಮತ್ತು ವೃತ್ತಿ ಪರಿಚಯಗಳ ಮೂಲಕ ಪುರುಷ ಪ್ರಧಾನ ಸಮಾಜದಲ್ಲಿ ಒಂದು ಕಡೆಯಿಂದ ಹೆಣ್ಣುಮಕ್ಕಳ ಬಗೆಗಿರುವ ಕೀಳರಿಮೆ, ತಾರತಮ್ಯ ಮತ್ತು ಸಾಂಪ್ರದಾಯಿಕವಾಗಿ ಮೀಸಲಿರಿಸಲ್ಪಟ್ಟ ಸ್ಥಾನವನ್ನೇ ಪರಿಚಯಿಸುತ್ತಿದೆ. ಇನ್ನೊಂದು ಕಡೆಯಿಂದ ಗಂಡುಮಕ್ಕಳ ಬಗೆಗಿರುವ ಮೇಳರಿಮೆ, ಪ್ರಾಧಾನ್ಯತೆ ಮತ್ತು ಶ್ರೇಷ್ಠತೆಯನ್ನೇ ಪ್ರತಿನಿಧಿಸುತ್ತಿದೆ. ಇದರ ಪರಿಣಾಮವಾಗಿ ಮಕ್ಕಳು ಇದೇ ಚಿತ್ರಗಳು ಸಹಜವೆಂದು ಕಲಿತು ಅವುಗಳನ್ನೇ ಅನುಕರಣೆ ಮಾಡುವುದರಿಂದ ಇದೇ ಮಾದರಿಯ ಸಂಬಂಧ, ವೃತ್ತಿ ಮತ್ತು ಭಾಷೆ ಶಾಶ್ವತೀಕರಣಗೊಳ್ಳುತ್ತದೆ. ಉದಾ: ಪು. ೧೦ರಿಂದ ೧೫ರವರೆಗಿನ 'ಸಂಬಂಧಗಳು' ಪಾಠದಲ್ಲಿ ಕುಟುಂಬದೊಳಗಿರುವ ಒಟ್ಟು ೧೨ ರೀತಿಯ ಸಂಬಂಧಗಳನ್ನು ಪುರುಷರಿಂದ ಗುರುತಿಸಲಾಗಿದೆ. ಉದಾ: ಅಜ್ಜ, ಅಜ್ಜಿ, ಅಪ್ಪ, ಅಮ್ಮ, ದೊಡ್ಡಮ್ಮ ದೊಡ್ಡಪ್ಪ ಚಿತ್ರದಲ್ಲಿ ಮೊದಲು ಪುರುಷರ ಚಿತ್ರ, ಹೆಸರು ನಂತರ ಮಹಿಳೆಯರ ಚಿತ್ರ ಹೆಸರಿದೆ; ಇನ್ನೊಂದು ಚಿತ್ರದಲ್ಲಿ ಅಜ್ಜ ಮೊಮ್ಮಗನಿಗೆ ಏನನ್ನು ಹೇಳುತ್ತಿದ್ದಾರೆ, ಮತ್ತೊಂದು ಚಿತ್ರದಲ್ಲಿ ಮಗುವನ್ನು ತನ್ನ ತೊಡೆ ಮೇಲೆ ಕೂರಿಸಿ ಮಹಿಳೆ ಆಹಾರ ಕೊಡುತ್ತಿದ್ದಾಳೆ ಮತ್ತು ಇಲ್ಲಿನ ಕಲಿಕಾಂಶಗಳ ಸಂಭಾಷಣೆಗಳು ಪುರುಷವಾಚಕದಿಂದ ಆರಂಭವಾಗುತ್ತದೆ. ಅಪ್ಪ-ಅಮ್ಮ, ಅಜ್ಜ-ಅಜ್ಜಿ, ಹಾಗೆಯೇ ತಾಯಿ ಪ್ರೀತಿ ತೋರಿಸಿ ಮಕ್ಕಳನ್ನು ಪೋಷಿಸಬೇಕೆನ್ನುವ ಸಂದೇಶವನ್ನು

ಮಕ್ಕಳಿಗೆ ಕೊಡಲಾಗುತ್ತದೆ. ಪು. ೧೦ರಲ್ಲಿ ಕೇಳಿದ ಪ್ರಶ್ನೆಯಲ್ಲಿನ್ನು ಗಮನಿಸುವುದಾದರೆ, ಉದಾ: ನನ್ನ ಅಪ್ಪನ ಅಪ್ಪ ನಿನಗೆ ಏನಾಗಬೇಕು? ಚಿಕ್ಕಪ್ಪ ಎಂದು ಯಾರನ್ನು ಕರೆಯುವೇ? ನಿನ್ನ ಕುಟುಂಬದ ಯಾಜಮಾನ ಯಾರು? ನಿನ್ನ ತಾಯಿ ನಿನಗೆ ಯಾವ ಕೆಲಸಗಳಲ್ಲಿ ಸಹಾಯ ಮಾಡುವವರು? ಎಂಬಂತಹ ಪ್ರಶ್ನೆಗಳನ್ನು ಕೇಳಲಾಗಿದೆ. ಹಾಗೆಯೇ ಪುಟ ೧೪ ಮತ್ತು ೧೫ರಲ್ಲಿ ಇದೇ ರೀತಿಯ ಪ್ರಶ್ನೆಗಳನ್ನು ಮುಂದುವರೆಸಿರುವುದು ಕಂಡು ಬರುತ್ತದೆ. ಈ ಮೇಲೆ ಉಲ್ಲೇಖಿಸಿರುವ ಪ್ರಶ್ನೆಗಳನ್ನು ಗಮನಿಸಿದಾಗ ಮುಖ್ಯವಾಗಿ ಕುಟುಂಬದ ಸಂಬಂಧಗಳು ಪುರುಷರಿಂದ ಗುರುತಿಸಲ್ಪಡುತ್ತವೆ. ಪುರುಷವಾಚಕ ಭಾಷೆಯನ್ನು ಬಳಸಿಕೊಂಡು, ಪುರುಷನನ್ನು ಮೇಲಸ್ತರದಲ್ಲಿ ಇಡುವುದು, ಮಹಿಳೆಯನ್ನು(ಹೆಣ್ಣು) ಮನೆಯಲ್ಲಿ ಕೆಲಸ ಮಾಡುವವಳು ಎಂಬಂತೆ ಚಿತ್ರಿಸಿರುವುದು. ಇದಕ್ಕೆ ತಾಯಿ ಮಕ್ಕಳಿಗೆ ಕಥೆ ಹೇಳುವ, ಊಟ ಮಾಡಿಸುವ, ಬಟ್ಟೆ ತೊಳೆಯುವ, ಪಾತ್ರೆ ತೊಳೆಯುವ, ಅಡುಗೆ ಮಾಡುವ, ಒಟ್ಟಾರೆಯಾಗಿ ಗೃಹಕೃತ್ಯಕ್ಕೆ ಸಂಬಂಧಿಸಿದಂತಹ ಕೆಲಸ ಕಾರ್ಯಗಳನ್ನು ಮಾಡುವವಳು ಮಹಿಳೆ (ಹೆಣ್ಣು) ಎಂದು ಸಾಮಾಜೀಕರಣ ರೂಪಿಸುತ್ತಿರುವುದು ಕಂಡು ಬರುತ್ತದೆ. ಅದೇ ಪುರುಷರ ವಿಷಯಗಳನ್ನು ವಿಶ್ಲೇಷಣೆ ಮಾಡಿದರೆ ಕುಟುಂಬದ ಯಜಮಾನ, ಮನೆಯಲ್ಲಿ ಕೆಲಸ ಮಾಡದೆ ಆರಾಮಾಗಿ ಕುಳಿತಿರುವುದು, ಪೇಪರ್ ಓದುವುದು, ಟಿ.ವಿ. ವೀಕ್ಷಣೆ ಮಾಡುವುದು ಪುರುಷ ಪ್ರಧಾನ್ಯತೆಯ ಧೋರಣೆಯಿಂದ ಇತ್ಯಾದಿಗಳನ್ನು ತೋರಿಸುತ್ತಿರುವುದರಿಂದ ಇದು ಕೂಡ ಹೆಣ್ಣು-ಗಂಡು ಮಕ್ಕಳ ಮೇಲೆ ಸಾಮಾಜೀಕರಣ ಭಿನ್ನ-ಭಿನ್ನವಾಗಿ ರೂಪಿಸಲು ಕಾರಣವಾಗುತ್ತದೆ.

'ಉದ್ಯೋಗಂ ಪುರುಷ ಲಕ್ಷಣಂ' ಎನ್ನುವ ಗಾದೆಯನ್ನು ಯಥಾವತ್ತಾಗಿ ಸಾಮಾಜೀಕರಣ ಗೊಳಿಸುವ ಕೆಲಸ ನಡೆದಿರುವುದು ಕಂಡು ಬರುತ್ತದೆ. ಇದಕ್ಕೆ 'ಮಾನವನ ಅಗತ್ಯಗಳು' ಎನ್ನುವ ಪಾಠದ (ಪು. ೩೩ರ) ಚಿತ್ರಗಳಲ್ಲಿ ಪುರುಷ ಎಂದರೆ ದುಡಿಯುವವ, ಹೊರಗಡೆ ಕೆಲಸ ಮಾಡುವವ, ಶ್ರಮದಾಯಕ ಜೀವಿ, ಹಣ ಸಂಪಾದಿಸುವಾತ, ಅವನ ಕೆಲಸ ಮನೆಯಿಂದ ಹೊರಗಡೆ ಎನ್ನುವ ಸಂದೇಶದ ಚಿತ್ರಗಳು ಇದರಲ್ಲಿ ಇವೆ. ಈ ಪಾಠದ ಮೊದಲ ಚಿತ್ರವು ಆದಿಮಾನವರನ್ನು ಸೂಚಿಸುತ್ತಿದ್ದು, ಗುಹೆಯ ಮುಂದೆ ನಿಂತಿರುವ, ಮಡಕೆ ತಯಾರಿಸುತ್ತಿರುವ, ಕಬ್ಬಿಣ ತಯಾರಿಸುತ್ತಿರುವ, ಮುಂದುವರೆದು ಮಗುವಿನ ಆರೋಗ್ಯ ಪರಿಶೀಲಿಸುತ್ತಿರುವ, ಟೈಲರಿಂಗ್, ರೈತನ ಚಿತ್ರ, ಎಲ್ಲವೂ ಪುರುಷ(ಗಂಡು) ದುಡಿಮೆ ಮತ್ತು ಪುರುಷ ಪ್ರಧಾನ್ಯತೆಯನ್ನು ತೋರಿಸುತ್ತಿವೆ. 'ಮಾನವನ ಅಗತ್ಯ'ಗಳು ಪಾಠದಲ್ಲಿ 'ಮಾನವ' ಎನ್ನುವ ಪುರುಷವಾಚಕ ತಲೆಬರಹದಿಂದ ಇದು ಆರಂಭವಾಗುತ್ತದೆ. ಅದರಲ್ಲಿರುವ ಚಿತ್ರಗಳು ಹೆಚ್ಚು ಪುರುಷರಿಂದ ಕೂಡಿಕೊಂಡಿವೆ ಮತ್ತು ಈ ಎಲ್ಲಾ ಕೆಲಸಗಳು ಪುರುಷನೇ ಮಾಡುವವನು ಎಂದು ಬಿಂಬಿಸುವ ಚಿತ್ರಗಳು ಪುರುಷ ಪ್ರಧಾನ್ಯತೆಗೆ ಪೂರಕವಾಗಿದೆ. ಈ ತರಹದ ಚಿತ್ರ, ಭಾಷೆ ಮಹಿಳೆಯ(ಹೆಣ್ಣಿನ) ಅಸ್ತಿತ್ವವನ್ನು, ಅವರ ಕೊಡುಗೆಯನ್ನು ಅಲ್ಲಗಳೆದು ಮಕ್ಕಳಲ್ಲಿ ಹೆಣ್ಣು-ಗಂಡು ಬೇರೆ-ಬೇರೆ ಶ್ರಮ ಮಾಡುವವರು ಎನ್ನುವ ಸಾಮಾಜೀಕರಣವನ್ನು ಸಮಾಜದಲ್ಲಿ ರೂಪಿಸಲಾಗುತ್ತದೆ. ಇದಕ್ಕೆ ಈ

ಪಾಠದಲ್ಲಿ ಆದಿಮಾನವನಿಂದ ಹಿಡಿದು ಆಧುನಿಕ ಮಾನವನವರೆಗೆ ವಿವಿಧ ಕಸುಬುಗಳಲ್ಲಿ ಪುರುಷರನ್ನು ಮಾತ್ರ ತೋರಿಸಿರುವುದು. ಕೃಷಿಗೆ-ರೈತನಾಗಿ ಪುರುಷ, ಚಿತ್ರ ತಯಾರಿಕೆ-ಪುರುಷ, ಕಬ್ಬಿಣ ತಯಾರಿಕೆ-ಪುರುಷ ಹೀಗೆ ತೋರಿಸಲಾಗಿದೆ. ಅದರಲ್ಲೂ ಮಹಿಳೆಯರು ಕೃಷಿಯನ್ನು ಅನ್ವೇಷಿಸಿರುವ ಸಾರ್ವತ್ರಿಕ ಸತ್ಯವನ್ನು ಐತಿಹಾಸಿಕವಾಗಿ ಮತ್ತು ವ್ಯವಸ್ಥಿತವಾಗಿ ಮಕ್ಕಳ ಕಲಿಕೆಯ ಸಂದರ್ಭದಲ್ಲಿ ಮುಚ್ಚಿಡಲಾಗುತ್ತಿದೆ. ಅಲ್ಲದೆ ಇಂದು ಮಹಿಳೆ-ಪುರುಷರಿಬ್ಬರೂ ಸಮ-ಸಮವಾಗಿ ಎಲ್ಲಾ ಕೆಲಸಗಳಲ್ಲಿ ದುಡಿಮೆ ಮಾಡುತ್ತಿದ್ದರು. ಇದನ್ನು ತೋರಿಸದೆ ಪ್ರತ್ಯೇಕವಾಗಿ ಪುರುಷರನ್ನು ತೋರಿಸುತ್ತಿರುವುದರಿಂದಲೇ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆ ಪಠ್ಯಪುಸ್ತಕದಲ್ಲಿ ಕಂಡು ಬರುತ್ತಿದೆ.

'ನೀರು ಚರ್ಚಾ ಚಿತ್ರ'ಗಳಲ್ಲಿ (ಪುಟ ೪೨) ಹೆಣ್ಣು ಮಕ್ಕಳು ನೀರು ಹೊತ್ತುಕೊಂಡಿರುವ ಚಿತ್ರ 'ಮಳೆ ಮತ್ತು ಜಲಚರಗಳು' ಚರ್ಚೆ (ಪುಟ ೪೬) ಗಂಡುಮಕ್ಕಳು ನೀರಿನಲ್ಲಿ ಆಟವಾಡುವ ಚಿತ್ರ, ಜ್ಞಾನೇಂದ್ರಿಯಗಳು ಚರ್ಚಾ ಚಿತ್ರಗಳು (ಪುಟ ೯೯) ತಾಯಿ ಮಗುವಿನೊಂದಿಗೆ ಇರುವ ಚಿತ್ರ, 'ಕೆಲಸ ಮತ್ತು ಆ ಚರ್ಚಾ ಚಿತ್ರಗಳು (ಪುಟ ೧೧೯) ರೈತನ ಚಿತ್ರ, ಹೆಣ್ಣು-ಮಕ್ಕಳು ಕಳೆ ಕೀಳುವುದು, 'ಕೆಲಸ ಮತ್ತು ಆಟ ಚರ್ಚಾ ಚಿತ್ರಗಳು' (ಪುಟ ೧೨೩) ಕಬಡ್ಡಿ, ಚೆಸ್, ಕ್ರಿಕೇಟ್, ಓಟ, ಚಿನ್ನಿದಾಂಡು, ಸೈಕ್ಲಿಂಗ್ ಹೀಗೆ ಬಹುತೇಕ ಗಂಡುಮಕ್ಕಳೇ ಆಡುವ ಆಟಗಳು ಎಂಬಂತೆ ಚಿತ್ರಗಳಲ್ಲಿ ತೋರಿಸಲಾಗಿದೆ. ಅಟಗಳು ಮತ್ತು ಮನೋರಂಜನೆ (ಪುಟ-೧೨೫) ಕಂಬಳ, ಕುಂಟಾಬಿಲ್ಲೆ ಖೋಖೋ, ಚೌಕಾಬಾರ ಆಟಗಳ ಚಿತ್ರಗಳನ್ನು ತೋರಿಸಲಾಗಿದೆ. ಇದರಲ್ಲಿ ಕಂಬಳದಲ್ಲಿ ಗಂಡು ಪುರುಷನ ಚಿತ್ರವನ್ನು, ಕುಂಟಾಬಿಲ್ಲೆ ಮತ್ತು ಖೋಖೋದಲ್ಲಿ ಹೆಣ್ಣು-ಗಂಡು ಮಕ್ಕಳಿದ್ದರೇ, ಚೌಕಾಬಾರ ಆಟದಲ್ಲಿ ಹೆಣ್ಣುಮಕ್ಕಳು ಇರುವುದನ್ನು ತೋರಿಸಲಾಗಿದೆ. ಇಲ್ಲಿ ಹೆಚ್ಚು ಪುರುಷರಿರುವ ಮತ್ತು ಗಂಡುಮಕ್ಕಳೇ ಇರುವ ಮತ್ತು ಸಮಾಜದಲ್ಲಿ ಯಾವ ಕ್ರೀಡೆಯನ್ನು ಯಾರು ಆಡಬೇಕು ಎನ್ನುವ ಪೂರ್ವಗ್ರಹ ಚಿಂತನೆಗಳು ಈ ಚಿತ್ರಗಳಲ್ಲಿ ಕಂಡು ಬರುತ್ತವೆ. ಇದು ಮಕ್ಕಳಲ್ಲಿ ಸಾಮಾಜೀಕರಣ ರೂಪಿತಗೊಂಡಾಗ ಅವರಲ್ಲಿ ಗಂಡು ಆಡುವುದು ಯಾವುದು, ಹೆಣ್ಣು ಆಡಬೇಕಾದದ್ದು ಯಾವುದು, ಯಾವುದನ್ನು ಗಂಡು ಮಾಡಬಾರದು, ಯಾವುದನ್ನು ಹೆಣ್ಣು ಮಾಡಬಾರದು - ಹೀಗೆ ಹೆಣ್ಣು-ಗಂಡು ಮಕ್ಕಳು ಮಾಡುವುದು ಮಾಡಬಾರದು ಎನ್ನುವ ಮನೋಭಾವನೆ ಮಕ್ಕಳಲ್ಲಿ ಲಿಂಗತ್ವದಿಂದ ಕೂಡಿದ ಸಾಮಾಜೀಕರಣಗೊಳ್ಳಲು ಕಾರಣವಾಗುತ್ತದೆ. ಈ ಲಿಂಗತ್ವವು ಸಮಾಜದಿಂದ ಬಂದರೂ ಆ ಲಿಂಗತ್ವಕ್ಕೆ ಅಂಟಿಕೊಂಡಿರುವ ಸಾಮಾಜಿಕ ಮೌಲ್ಯವು ಅದನ್ನು ಬದಲಾಯಿಸಬಹುದು ಅಥವಾ ಪರಿವರ್ತನೆ ಮಾಡಬಹುದು. ಆದರೆ ಇದನ್ನು ಬದಲಾಯಿಸದೇ ಯಥಾವತ್ತಾಗಿ ಪಠ್ಯಪುಸ್ತಕಗಳಲ್ಲಿ ಜಾರಿಗೆ ತರುವುದರ ಮೂಲಕ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆಯನ್ನು ತಂದೊಡ್ಡುವ ಅನೇಕ ಸಂಗತಿಗಳು ಈ ಮೂರನೇ ತರಗತಿ ಪರಿಸರ ಅಧ್ಯಯನವಾದ 'ನಲಿ-ಕಲಿ' ಅಭ್ಯಾಸ ಪಠ್ಯಪುಸ್ತಕದಲ್ಲಿ ಕಂಡು ಬರುತ್ತವೆ.

ನಾಲ್ಕನೇ ತರಗತಿಯ 'ಪ್ರಾಣಿ ಪ್ರಪಂಚ' ಪಾಠ-೧ರಲ್ಲಿ(ಪುಟ ೪, ೫, ೭) ಪ್ರಾಣಿಗಳಿಂದ ನಮಗೆ ಆಗುವ ಉಪಯೋಗಗಳನ್ನು ಕೊಟ್ಟಿರುವ ಚಿತ್ರ ನೋಡಿ ಮಕ್ಕಳು ಗುರುತಿಸಿ ಬರೆಯುವ ಅಭ್ಯಾಸವಿದೆ. ಇದರಲ್ಲಿ ಪುರುಷ ಉಳುಮೆ ಮಾಡುತ್ತಿರುವ, ಮಹಿಳೆ ಹಾಲು ಕರೆಯುತ್ತಿರುವ, ಪುರುಷ ಕುರಿಯನ್ನು ಹಿಡಿದುಕೊಂಡಿರುವ, ಒಂಟಿ ಕುದುರೆ ಸವಾರಿ ಮೇಲೆ ಅಜ್ಜ ಬರುತ್ತಿರುವ ಚಿತ್ರಗಳು ಹಾಗೆಯೇ 'ಪುಷ್ಪರಾಗ' ಪಾಠದಲ್ಲಿ (ಪುಟ ೩೬) ಹೂವಾಡಗಿತ್ತಿ ಬೀದಿಯಲ್ಲಿ ಹೂವಿನ ಬುಟ್ಟಿ ಹಿಡಿದುಕೊಂಡು ಹೋಗುತ್ತಿರುವುದು, ೩೮ನೇ ಪುಟದಲ್ಲಿ ಬಣ್ಣ ಬಣ್ಣದ ಹೂವುಗಳನ್ನು ತೋರಿಸಲು ಹೆಣ್ಣು ಮಗುವೊಂದು ಬಣ್ಣದ ಬಟ್ಟೆ ತೊಟ್ಟು ನಿಂತಿರುವ ಚಿತ್ರ ತೋರಿಸಲಾಗಿದೆ ಮತ್ತು (ಪುಟ ೩೯) ಚಿತ್ರ ಬಿಡಿಸು ಎನ್ನುವುದನ್ನು ತೋರಿಸಲು ಹುಡುಗ ಬಣ್ಣದ ಚಿತ್ರ ಬಿಡಿಸುತ್ತಿರುವುದನ್ನು ತೋರಿಸಲಾಗಿದೆ. ಇಲ್ಲಿ ಪುರುಷನಿಗೆ ಸಂಬಂಧಿಸಿದಂತಹ ಚಿತ್ರಗಳಲ್ಲಿ ದುಡಿಮೆ, ರೈತ, ಸಂಪಾದನೆ, ಗಂಡುಮಕ್ಕಳ ಮೂಲಕ ಪ್ರತಿಫಲಿಸುವಂತೆ ನೋಡಿಕೊಳ್ಳಲಾಗಿದೆ. ಬೀದಿ ಮಾರಾಟವನ್ನು ಗೌರವವಾಗಿ ನೋಡದಿರುವುದನ್ನು ಮಹಿಳೆಯ ಮೂಲಕ ಮತ್ತು ಅಂಗಡಿಯಲ್ಲಿ ಮಾರಾಟ ಮಾಡುವುದನ್ನು ಪುರುಷರ ಮೂಲಕ ಮಕ್ಕಳಿಗೆ ಪರಿಚಯಿಸಿರುವುದರ ಜೊತೆಗೆ ಭಾಷೆಯಲ್ಲಿ 'ಹೂವಾಡಗಿತ್ತಿ ಬರುತಿಹಳು' ಎಂದು ಏಕವಚನ, ಷಾಹಿನ ತಂದೆ ಹೂವಿನ ಅಂಗಡಿ ಇಟ್ಟಿದ್ದಾರೆ ಎಂದು ಬಹುವಚನ ಶಬ್ದ ಬಳಸಲಾಗಿದೆ. ಬಣ್ಣದ ಬಟ್ಟೆ ಹಾಕಿಕೊಂಡು ಹೆಣ್ಣು ಮಗು ನಿಂತಿರುವುದನ್ನು ಚೆಂದಕ್ಕೆ ಹುಡುಗಿ ಎನ್ನುವಂತೆ, ಗಂಡುಮಗು ಚಿತ್ರ ಬಿಡಿಸುತ್ತಿರುವುದರ ಮೂಲಕ ಕೌಶಲ್ಯ ಮತ್ತು ಸೃಜನಶೀಲತೆಯನ್ನು ಗಂಡಿಗೆ ಎಂಬ ಸಾಮಾಜೀಕರಣವನ್ನು ವ್ಯಕ್ತಪಡಿಸಲಾಗಿದೆ. ಹೆಣ್ಣುಮಕ್ಕಳ ಘನತೆಯನ್ನು ಎತ್ತಿ ಹಿಡಿಯುವ ಬದಲು ಅವರ ಕುರಿತು ಈಗಾಗಲೇ ಸಮಾಜದಲ್ಲಿರುವ ೨ನೆಯ ದರ್ಜೆಯ ಗುರುತಿಸುವಿಕೆಯು ಇಲ್ಲಿ ಪ್ರತಿಫಲನಗೊಂಡಿದೆ.

ಪಾಠ-೬ರ 'ದನಿಗೂಡಿದರೆ'(ಪುಟ ೪೫, ೪೯, ಮತ್ತು ೫೧)ದಲ್ಲಿ ೯ ಚಿತ್ರಗಳು ಇವೆ. ಇದರಲ್ಲಿ ಮಕ್ಕಳು ನೀರನ್ನು ಯಾವ ಕೆಲಸಗಳಿಗೆ ಬಳಸುತ್ತೇವೆ ಎನ್ನುವುದನ್ನು ತಿಳಿಸಬೇಕು ಇದರಲ್ಲಿ ೫ ಚಿತ್ರಗಳು ಹೆಣ್ಣುಮಕ್ಕಳ ಮನೆ ಕೆಲಸಗಳಿಗೆ ಸಂಬಂಧಿಸಿದವುಗಳಿವೆ. ಉದಾ:- ಹುಡುಗಿ ಸಿಂಕನ್ನು ಸ್ವಚ್ಛಗೊಳಿಸುತ್ತಿರುವ, ನೆಲ ಒರೆಸುತ್ತಿರುವ ಹಾಗೂ ಮಹಿಳೆ ಅಡುಗೆ ಮಾಡುತ್ತಿರುವ ಚಿತ್ರಗಳಿವೆ. ಗಂಡುಮಕ್ಕಳ ೩ ಚಿತ್ರಗಳಲ್ಲಿ ಹುಡುಗ ಸಸಿಗಳಿಗೆ ನೀರು ಹಾಕುತ್ತಿರುವ, ಪುರುಷ ಕಾರನ್ನು ತೊಳೆಯುತ್ತಿರುವ ಮತ್ತು ಕೆರೆಯಲ್ಲಿ ಎಮ್ಮೆಯನ್ನು ತೊಳೆಯುತ್ತಿರುವ ಚಿತ್ರಗಳಿವೆ. ಪಾಠ-೭ 'ಜಲಮಾಲಿನ್ಯ-ಸಂರಕ್ಷಣೆ' ಪಾಠದಲ್ಲಿ (ಪುಟ ೫೭) ಅಜ್ಜಿಯೊಬ್ಬರು ಗಂಡುಮಕ್ಕಳಿಗೆ ಚರಂಡಿ ನೀರಿನಲ್ಲಿ ಆಡಬೇಡಿ ಎನ್ನುತ್ತಾರೆ. (ಪುಟ ೫೮) ರಮೇಶನಿಗೆ ಕಾಲರಾ ಬಂದಿದೆ ನೀವು ಹುಷಾರಾಗಿರಿ ಎನ್ನುತ್ತಿದ್ದಾರೆ. ಆಹಾರ-ಅಭ್ಯಾಸ ಪಾಠದಲ್ಲಿ (ಪುಟ ೭೭) ೫ ಚಿತ್ರಗಳಿವೆ. ಮೊದಲ ಚಿತ್ರದಲ್ಲಿ ಪುರುಷರು ಒಕ್ಕಣೆ ಕೆಲಸ ಮಾಡುತ್ತಿರುವುದು. ಮಹಿಳೆ ಅಡುಗೆ ಕೆಲಸ, ಅಂಗಡಿಯಲ್ಲಿ ದಿನಸಿಗಳನ್ನು ಖರೀದಿಸುತ್ತಿರುವ ಚಿತ್ರಗಳಿವೆ. ಅಂದರೆ ಇಲ್ಲಿ ಒಳಗಿನ ಮತ್ತು

ಹೊರಗಿನ ಕೆಲಸ ಕಾರ್ಯಗಳು ಪುರುಷ ಮಹಿಳೆಗೆ ಪ್ರತ್ಯೇಕ ಎನ್ನುವ ಚಿತ್ರಗಳು ಇಲ್ಲಿ ಕಂಡು ಬರುತ್ತವೆ. ಮಾತುಕತೆ, ವ್ಯಾಪಾರ, ಕೃತಿ ಇವುಗಳು ಪುರುಷರ ವಲಯ ಮನೆ, ಮನೆಗೆ ಬೇಕಾದ ಆಹಾರ ಸಂಗ್ರಹಣೆ, ನೀರು ಸಂಗ್ರಹಣೆ, ಅಡುಗೆಗೆ ಬೇಕಾದ ವಸ್ತುಗಳ ಸಂಗ್ರಹಣೆ ಹೆಣ್ಣಿನ ಕೆಲಸ, ದುಡಿಮೆ ಗಂಡಿನ ಕೆಲಸ, ಹೀಗೆ ಹೆಣ್ಣು-ಗಂಡಿಗೆ ಭಿನ್ನ ಸಾಮಾಜೀಕರಣವನ್ನು ಸೃಷ್ಟಿಸಿರುವುದು ಕಂಡು ಬರುತ್ತದೆ.

೨೧ನೇ ಶತಮಾನದಲ್ಲಿ ಕುಟುಂಬದ ಚೌಕಟ್ಟಿನೊಳಗೆ ಹೆಣ್ಣು ಮಕ್ಕಳಿರಬೇಕೆಂಬ ಧೋರಣೆಯನ್ನು ಈ ಪಠ್ಯಪುಸ್ತಕಗಳಲ್ಲಿ ಮುಂದುವರೆಸಿರುವುದು ಮತ್ತು ಲಿಂಗತ್ವ ಅಸಮಾನತೆ ಮತ್ತು ಲಿಂಗ ಸೂಕ್ಷ್ಮತೆಯ ಕನಿಷ್ಠ ಕಲ್ಪನೆಯೂ ಇಲ್ಲದಿರುವುದು ಕಂಡು ಬರುತ್ತದೆ. 'ವಸತಿ ವೈವಿಧ್ಯ' ಪಾಠದ ಪುಟ ೮೯ರ ನಾಲ್ಕನೇ ಪಾಠದಲ್ಲಿ 'ಬಿದಿರಿನ ದೊಡ್ಡ ಗಳುವನ್ನು ಕಡಿದು ಅಪ್ಪ ಹೊತ್ತು ತಂದರು, ಅಮ್ಮನೊಂದಿಗೆ ನಾನು (ಹುಡುಗಿ) ತಮ್ಮ ಮತ್ತು ತಂಗಿಯರು ಬಿದಿರಿನ ಸಣ್ಣ ಗಳುವನ್ನು ಹೊತ್ತು ತಂದೆವು; ಸಗಣಿಯನ್ನು ಕಲಿಸಿ ಅಮ್ಮ ನೆಲಕ್ಕೆ ಮತ್ತು ಒಳಗಿನ ಗೋಡೆಗಳಿಗೆ ಹಚ್ಚಿದರು; ಮನೆ ಮುಂದೆ ಸಗಣಿಯಿಂದ ಸಾರಿಸಿ, ಕೆಮ್ಮಣ್ಣು ರಂಗೋಲಿಯಿಂದ ಅಲಂಕರಿಸಿ ಮನೆ ಪ್ರವೇಶಿಸಿದೆವು'. ನಂತರದ ಪ್ಯಾರಾದಲ್ಲಿ 'ನಾನು(ಹುಡುಗಿ) ದೊಡ್ಡವಳಾದೆ ನನ್ನ ಮದುವೆಯಾಯಿತು, ನಾನು ನನ್ನ ಗಂಡನ ಮನೆಗೆ ಬಂದೆ' ಮುಂದುವರೆದು (ಪು. ೯೦) ೨ನೇ ಪ್ಯಾರಾದಲ್ಲಿ- 'ನನಗೆ ನೆಲವನ್ನು ಸಗಣಿ ಇಲ್ಲವೇ ಕೆಮ್ಮಣ್ಣಿನಿಂದ ಸಾರಿಸುವ ಕೆಲಸ ಇರಲಿಲ್ಲ, ನೀರಿನಿಂದ ನೆಲವನ್ನು ಒರೆಸಿದರೆ ಸಾಕಿತ್ತು.' ೩ನೇ ಪ್ಯಾರಾದಲ್ಲಿ 'ವೆಂಕಜ್ಜಿ ತನ್ನ ಮೊಮ್ಮಗನ ಮನೆಯನ್ನು ನೋಡುತ್ತಿದ್ದಾರೆ; ೧೫-೨೦ರ ಮಹಡಿಗಳ ಕಟ್ಟಡ; ಸುಮಾರು ೫೦೦ಕ್ಕೂ ಹೆಚ್ಚು ಮನೆಗಳಿವೆ. ಮೇಲಿನ ಮಹಡಿಗಳಿಗೆ ಹೋಗಲು ಲಿಫ್ಟ್ ಇದೆ' - ಇಲ್ಲಿ ದೊರೆಯುವ ಪರಿಸರ ಅಧ್ಯಯನ ಪಠ್ಯಪುಸ್ತಕದಲ್ಲಿನ ಮಾಹಿತಿಗಳನ್ನು ಗಮನಿಸಿದರೆ ಚಿತ್ರಗಳು ಜೆಂಡರ್ ನಿರ್ಲಿಪ್ತವಾಗಿ ತೋರಿಸಲಾಗಿದ್ದರೂ ಸಹ ಸಂಭಾಷಣೆ ಮತ್ತು ಸಂದೇಶದಲ್ಲಿ ಪುರುಷ ಪ್ರಧಾನ್ಯತೆಯ ಸಾಮಾಜೀಕರಣ ಬಿಂಬಿಸಲಾಗಿದೆ. ಉದಾ: ಪುರುಷ ಮರ ಕಡಿಯುವ, ಹೆಚ್ಚು ಭಾರ ಹೊರುವ ಸಾಮರ್ಥ್ಯವುಳ್ಳವನು, ಮೊಮ್ಮಗ ನಗರದಲ್ಲಿ ತನ್ನದೇ ಮನೆಯಲ್ಲಿ ವಾಸಿಸುತ್ತಿದ್ದಾನೆ ಹಾಗೂ ಮಕ್ಕಳು ಅಪ್ಪನ ಜೊತೆಯಲ್ಲಿ ಇರುತ್ತಾರೆ. ಹೆಣ್ಣುಮಕ್ಕಳ ಮದುವೆ ಆಗಬೇಕು. ಸ್ವಚ್ಛತೆ ಮತ್ತು ಅಲಂಕಾರ ಕೆಲಸಗಳನ್ನು ಹೆಣ್ಣುಮಕ್ಕಳೇ ಮಾಡಬೇಕು ಎನ್ನುವ ಸಂದೇಶಗಳಲ್ಲಿ ಹೆಣ್ಣುಮಕ್ಕಳ ಕುಟುಂಬದೊಳಗಿನ ಸಾಮಾಜೀಕರಣವನ್ನು ರೂಢಿಸುತ್ತದೆ. ಮತ್ತೊಂದು ಕಡೆ ಪಾಠದ ತಲೆಬರಹ "ವಸತಿ ವೈವಿಧ್ಯ" ಆಗಿದ್ದು, ಮಕ್ಕಳಿಗೆ ಬಿದಿರಿನ, ಕಾಂಕ್ರೇಟ್ ಮುಂತಾದ ವಿಧವಾದ ಮನೆಗಳನ್ನು ಪರಿಚಯಿಸುತ್ತಿದ್ದಾರೆ. ಹಾಗೇ ಮಾಡುವಾಗ ಗಂಡುಮಕ್ಕಳಿಗೆ ಪೇಟೆಯಲ್ಲಿ ಸ್ವಂತ ಮನೆ ಇದೆ. ಹೆಣ್ಣುಮಕ್ಕಳಿಗೆ ಮದುವೆಯಾಗಿ ಬೇರೆ ಮನೆಗೆ ಹೋಗಬೇಕು. ಇದು ಹೆಣ್ಣು-ಗಂಡು ಮಕ್ಕಳಲ್ಲಿ ಲಿಂಗ ತಾರತಮ್ಯದ ಸಾಮಾಜೀಕರಣ ರೂಪಿಸಲು ಹಿಡಿದ ಕೈಗನ್ನಡಿಯಾಗಿದೆ.

ಹೆಣ್ಣುಮಕ್ಕಳ ಭವಿಷ್ಯವನ್ನು 'ಮದುವೆ' ಎನ್ನುವ ಸಂಸ್ಥೆಯೊಂದಿಗೆ ಸಂಬಂಧ ಕಲ್ಪಿಸಿದರೆ, ಗಂಡುಮಗುವಿಗೆ 'ಆಸ್ತಿ' ಮತ್ತು 'ಮನೆ' ಜೊತೆಗೆ ಸಂಬಂಧ ಕಲ್ಪಿಸಿರುವುದು ಕಂಡು ಬರುತ್ತದೆ. ಹೆಣ್ಣಿನ ಅಸ್ತಿತ್ವ ಆಕೆಯ ಗಂಡನ (ಪುರುಷನ) ಜೊತೆ ಚಿತ್ರಿಸಿದ್ದು, ಹೆಣ್ಣುಮಕ್ಕಳು ಕೌಟುಂಬಿಕ ಚೌಕಟ್ಟಿನಲ್ಲಿ ಬಂಧಿಯಾಗಿರಬೇಕೆಂಬ ಸಾಮಾಜೀಕರಣ ಹೆಣ್ಣು-ಗಂಡುಮಕ್ಕಳ 'ಮಧ್ಯೆ' ಅನೇಕ ಸಮಸ್ಯೆಗಳನ್ನು ತಂದೊಡ್ಡಿದೆ. ನಾವು-ಅವರು, ಮೇಲು-ಕೀಳು, ಶ್ರೇಷ್ಠ-ಕನಿಷ್ಠ – ಹೀಗೆ ಜೀವನದ ಪ್ರತಿಯೊಂದು ಹಂತದಲ್ಲಿ ಪ್ರತಿಷ್ಠೆಯು ಮಕ್ಕಳಲ್ಲಿ ಸಾಮಾಜಿಕರಣಗೊಂಡಿದೆ. ಇದು ಮುಂದೆ ಪುರುಷನ ಪರವಾಗಿ ಬದಲಾಗಿದೆ. ಹೆಣ್ಣು ಪ್ರತಿಷ್ಠೆ ಕಳೆದುಕೊಂಡು, ಅಧೀನವಾಗಿ ಉಳಿದು ನೋವು, ಸಂಕಟ, ದುಃಖಿತಗಳಾಗಿ ಕಾಲ ಕಳೆಯುವಂತೆ ಮಾಡಿದೆ. ಪಾಠ-೧೩ರಲ್ಲಿ "ಅದ್ಭುತ ಯಂತ್ರ-ನಮ್ಮ ದೇಹ"ದಲ್ಲಿ (ಪು. ೧೧೭, ೧೧೮ ಮತ್ತು ೧೨೨) ಮಾನವನ ದೇಹದ ಭಾಗಗಳನ್ನು ತೋರಿಸಲಾಗಿದೆ. ಮಕ್ಕಳಿಗೆ ಮಾನವನ ಕಲ್ಪನೆ ಕೊಡಲು ಪುರುಷರ ಚಿತ್ರಗಳನ್ನು ತೋರಿಸಿದ್ದಾರೆ. ಮಕ್ಕಳಿಗೆ ಮಾನವನ ದೇಹದ ಬಗ್ಗೆ ತಿಳಿಸುವಲ್ಲಿ, ದೇಹ ಅದ್ಭುತವಾದ ಯಂತ್ರವೆನ್ನುವ ಕಲ್ಪನೆ ಕೊಡಲು ಅಹ್ಲಾದ, ಅದ್ಭುತ ಶಕ್ತಿಯುಳ್ಳದ್ದು ಎನ್ನುವ ಸಾಮಾಜೀಕರಣ ರೂಪಿಸಿರುವುದು ಕಂಡು ಬರುತ್ತದೆ. ಇದು ಹೆಣ್ಣು-ಗಂಡುಮಕ್ಕಳಲ್ಲಿ ಪುರುಷರ ಶ್ರೇಷ್ಠತೆಯನ್ನು ಪೋಷಿಸಿದಂತೆ. ಹೆಣ್ಣು-ಗಂಡು ಎರಡು ದೇಹಗಳ ರಚನೆ ಭಿನ್ನವಾಗಿದೆ ಎನ್ನುವುದನ್ನು ಸಹಜತೆಯಲ್ಲಿ ಪರಿಚಯಿಸುವುದರಲ್ಲಿ ಯಾಕೆ ಹಿಂಜರಿಕೆ? ಹೆಣ್ಣಿನ ದೇಹವನ್ನು ಪೂರ್ಣವಾಗಿ ಮುಚ್ಚಿಡಬೇಕೆನ್ನುವ ಸಾಮಾಜಿಕ ಕಟ್ಟಳೆಯನ್ನು ಚಾಚು ತಪ್ಪದೇ ಪಾಲಿಸುವ ಕೆಲಸ ಈ ಪಠ್ಯಪುಸ್ತಕದಲ್ಲಿ ಕಂಡು ಬರುತ್ತದೆ. ಇದರಿಂದಾಗಿಯೇ ಇಂದು ಹೆಣ್ಣಿನ ಆರೋಗ್ಯದ ಕಡೆ ನಿರ್ಲಕ್ಷ್ಯ ವಹಿಸುವಂತೆ ಸಾಮಾಜೀಕರಣ ಪುರುಷರಲ್ಲಿ ರೂಪಿತಗೊಂಡಿದೆ. ಇಂದು ತಾಯಿ ಮರಣ, ಶಿಶು ಮರಣ, ಹೆಣ್ಣುಮಕ್ಕಳಿಗೆ ಕಾಡುವ ಅಪೌಷ್ಠಿಕತೆ, ರಕ್ತ ಹೀನತೆ ಮುಂತಾದ ಅನಾರೋಗ್ಯದ ಸಂಗತಿಗಳು ಕಾಡಿದರೂ ಯಾರು ಗಮನಹರಿಸದೆ ಇರುವುದು ಸಮಾಜದಲ್ಲಿ ಕಂಡು ಬರುತ್ತದೆ.

ಸಾರ್ವಜನಿಕ ಸಂಗತಿಗಳ ಕುರಿತಂತೆ ನೋಡುವುದಾದರೆ ಪಾಠ-೧೪ 'ಸಂಚಾರ ನಿಯಮಗಳು (ಪು. ೧೨೮, ೧೨೯, ೧೩೦, ೧೩೭ ಮತ್ತು ಪಾಠ-೧೫ "ಸಾರಿಗೆ ಮತ್ತು ಸಂಪರ್ಕ" (ಪು. ೧೩೭, ರಿಂದ ೧೪೪)ರವರೆಗೆ ತೋರಿಸಿರುವ ಸಾರಿಗೆ ಮತ್ತು ಸಂಪರ್ಕ ನಿಯಮಗಳಿಗೆ ಸಂಬಂಧಿಸಿದಂತೆ ವಿವಿಧ ಸಾಧನೆ ಸಲಕರಣೆಗಳನ್ನು ಪುರುಷರೇ ನಿರ್ವಹಿಸುತ್ತಿದ್ದಾರೆ. ಪುಟ-೧೪೪ರಲ್ಲಿ ಚಿತ್ರಗಳ ವಿವರಗಳನ್ನು ಗಮನಿಸಿದರೆ, ಪತ್ರಿಕೆ ಓದುವುದು, ಗಣಕಯಂತ್ರ ಬಳಕೆ, ಸಾಗಾಣಿಕೆ ಸಾಧನಗಳಲ್ಲಿ ಪುರುಷರು ಮತ್ತು ಸ್ಥಿರ ದೂರವಾಣಿ ಸಂಭಾಷಣೆಯಲ್ಲಿ ಹುಡುಗಿಯನ್ನು ತೋರಿಸಲಾಗಿದೆ. ಪುಟ ೧೪೨ರಲ್ಲಿ ಅಂಚೆ ಕಛೇರಿಯಲ್ಲಿ ೪ ಜನ ಪುರುಷರು ಒಬ್ಬ ಮಹಿಳೆ ಇರುವುದು, ಹೀಗೆ ಲಿಂಗ ತಾರತಮ್ಯಕ್ಕೆ ಪೂರಕವಾದ ಚಿತ್ರಗಳನ್ನು ಇಲ್ಲಿ ಕೊಡಲಾಗಿದೆ. ಮೃದು ಕೆಲಸಗಳು ಹೆಣ್ಣುಮಕ್ಕಳಿಗೆ, ಕೌಶಲ್ಯ ಮತ್ತು ಆಧುನಿಕ ಯಂತ್ರಗಳ ಬಳಕೆ ಗಂಡುಮಕ್ಕಳಿಗೆ ಎನ್ನುವ ರೂಢಿಗತ ಪಾತ್ರ ವಿಭಜನೆಯನ್ನು ಮುಂದುವರೆಸಿರುವುದು ಕಂಡು ಬರುತ್ತದೆ. ಇಂದಿನ

ಆಧುನಿಕ ಜಗತ್ತಿನಲ್ಲಿ ಹೆಣ್ಣು-ಗಂಡು ಇಬ್ಬರು ಸಮಾನವಾಗಿ ಆಧುನಿಕ ಯಂತ್ರಗಳು ನಿರ್ವಹಿಸುವ ಸಾಮರ್ಥ್ಯ ಮತ್ತು ಕೌಶಲ್ಯವನ್ನು ಪಡೆದಿದ್ದಾರೆ. ಆದರೆ ಇದನ್ನು ಮರೆ ಮಾಡುವ ಸಾಮಾಜೀಕರಣದ ಕೆಲಸ ಈ ಪಠ್ಯಪುಸ್ತಕಗಳಲ್ಲಿ ಮುಂದುವರೆದಿದೆ.

ಪಾಠ-೧೬ರ 'ಬದಲಾಗುತ್ತಿರುವ ಕುಟುಂಬಗಳು' (ಪು. ೧೪೭, ೧೪೮, ೧೫೧, ಮತ್ತು ೧೫೨) ರಾಮಯ್ಯನ ಕುಟುಂಬದ ಹಿಂದಿನ ವರ್ಷದ ಚಿತ್ರವನ್ನು ಸರಿಯಾಗಿ ಗಮನಿಸು ಎಂದಿರುವ ಅಭ್ಯಾಸದಲ್ಲಿ ರಾಮಯ್ಯನ ಚಿತ್ರ ಮೊದಲಿದ್ದು, ಅವರ ಪಕ್ಕದಲ್ಲಿ ಹೆಂಡತಿ ಚಿತ್ರವಿದೆ. ಈ ಚಿತ್ರದ ಕೆಳಗೆ ಸಮಾನಾಂತರ ರೇಖೆ ಎಳೆದು ಮೊದಲಿಗೆ ಗೋಪಿ (ಮಗ) ರಾಮಯ್ಯನವರ ಮಗ ಮತ್ತು ಗೋಪಿಯ ಹೆಂಡತಿ ದೀಪಿಕಾ ಚಿತ್ರವನ್ನು ನಂತರ ಸುರೇಶ ರಾಮಾಯ್ಯನವರ ಮಗ ಮತ್ತು ಸುರೇಶನ ಹೆಂಡತಿ ರಾಧಿಕ ಬಳಿಕ ರಮೇಶ, ದಿಲೀಪ್ ರಾಮಯ್ಯರವರ ಮಗ ಮತ್ತು ಪಿಂಕಿ ರಾಮಯ್ಯರವರ ಮಗಳು ಎಂದೂ, ಗೋಪಿ ಮತ್ತು ದೀಪಿಕಾರವರ ಮಕ್ಕಳು ಸುಹಾಸ ಹಾಗೂ ಸುರಭಿ ಎಂದು ಚಿತ್ರಿಸಲಾಗಿದೆ. ಪುಟ ೧೪೮ರಲ್ಲಿ ರಾಮಯ್ಯ ಕುಟುಂಬದಲ್ಲಿ ಆದ ಬದಲಾವಣೆಯನ್ನು ಗುರುತಿಸುವ ಅಭ್ಯಾಸವಿದೆ. ಇದರಲ್ಲಿ ಗೋಪಿಯು ತನಗೆ ಬೇರೆ ಕೆಲಸ ಸಿಕ್ಕಿದೆ. ತನ್ನ ಕುಟುಂಬದ ಜೊತೆ ಅಲ್ಲಿಗೆ ಹೋಗುತ್ತೇನೆ ಎನ್ನುತ್ತಾನೆ. ಅದರ ಕೆಳಗಡೆ ಚಿತ್ರಿಸಿರುವ ಪಿಂಕಿಯು ತನಗೆ ಮುಂದಿನ ತಿಂಗಳು ಮದುವೆ, ಮದುವೆಯಾದ ಮೇಲೆ ಗಂಡನ ಮನೆಗೆ ಹೋಗುವೆ ಎನ್ನುತ್ತಾಳೆ. ರಾಧಿಕಾ ತಾನು ತಮ್ಮ ಕುಟುಂಬಕ್ಕೆ ಹೊಸ ಸದಸ್ಯೆ ಆಗಿದ್ದೇನೆ ಎನ್ನುತ್ತಾಳೆ. ನಂತರ ಶೀಲಾ ತಾನು ರಮೇಶನನ್ನು ಮದುವೆ ಆಗಿ ಅವನ ಮನೆಯಲ್ಲಿರುವೆ ಎನ್ನುತ್ತಾಳೆ. ದೀಲಿಪ್ ಉನ್ನತ ಶಿಕ್ಷಣಕ್ಕಾಗಿ ಪಟ್ಟಣಕ್ಕೆ ಹೋಗಿ ಅಲ್ಲಿರುವುದಾಗಿ ಹೇಳುತ್ತಾನೆ. (ಪು. ೧೫೧ರಲ್ಲಿ ಮತ್ತು ೧೫೨) ಮರದ ಚಿತ್ರದ ಮೂಲಕ ಕುಟುಂಬದ ವಂಶವೃಕ್ಷವನ್ನು ಗುರುತಿಸಲಾಗಿದೆ. ವೃತ್ತಾಕಾರದ ಚಿಹ್ನೆಯನ್ನು ಕುಟುಂಬದಿಂದ ಹೊರಹೋಗುವುದಕ್ಕೂ ಮತ್ತು ತ್ರಿಕೋನದ ಮೂಲಕ ಕುಟುಂಬದೊಳಗಡೆ ಬರುವುದನ್ನು ಬಳಸಲಾಗಿದೆ. ವೃತ್ತಾಕಾರದ ಚಿಹ್ನೆಯನ್ನು ೧೫೧ರಲ್ಲಿ ಶಾಬಾನು ಮತ್ತು ರಿಹಾನಳಿಗೂ (ಪು. ೧೫೨) ಸುನೀತಾಳಿಗೂ ಸೂಚಿಸಲಾಗಿದೆ. ತ್ರಿಕೋನ ಚಿಹ್ನೆಯನ್ನು (ಪು. ೧೫೧) ನಸೀಬಾ, ಮುನ್ನಿ ಮತ್ತು ಫಾತಿಮಾಗೂ (ಪು. ೧೫೨) ರಾಣಿಗೂ ಸೂಚಿಸಲಾಗಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಮೊದಲು ಗಂಡ, ನಂತರ ಹೆಂಡತಿ ಎನ್ನುವ ಕೌಟುಂಬಿಕ ಸಾಮಾಜೀಕರಣ ಮಕ್ಕಳಿದ್ದರೆ ಮೊದಲು ಗಂಡು ಮಗ, ನಂತರ ಹೆಣ್ಣುಮಕ್ಕಳು ಎನ್ನುವ ಸಾಮಾಜೀಕರಣ ಈ ಪಠ್ಯದಲ್ಲಿ ದೊರೆಯುತ್ತದೆ. ಹೆಂಡತಿ, ಮೂರು ಮಕ್ಕಳು ಮತ್ತು ಇಬ್ಬರು ಮೊಮ್ಮಕ್ಕಳನ್ನು ರಾಮಯ್ಯನ ಕುಟುಂಬ ಸದಸ್ಯರೆಂದು ಗುರುತಿಸಲಾಗಿದೆ. ಹೆಂಡತಿಯನ್ನು ಗಂಡನ ಹೆಸರು ಬಳಸಿ ಗುರುತಿಸಲಾಗಿದೆ. ಗೋಪಿ ಕೆಲಸಕ್ಕೆ ಬೇರೆ ಕಡೆ ಹೋಗುವುದು, ದಿಲೀಪ್ ಉನ್ನತ ಶಿಕ್ಷಣಕ್ಕೆ ಪಟ್ಟಣಕ್ಕೆ ಹೋಗುವುದು; ರಾಧಿಕಾಗೂ ಗಂಡು ಮಗು ಆಗಿದ್ದು, ಅದು ಸುರೇಶನ ಕುಟುಂಬದ ಹೊಸ ಸದಸ್ಯನಾಗುತ್ತದೆ. ಶೀಲಾ ರಮೇಶನನ್ನು ಮದುವೆಯಾಗಿ ಅವನ ಮನೆಯಲ್ಲಿರುತ್ತಾಳೆ ಮತ್ತು ಪಿಂಕಿ ಮದುವೆಯಾಗಿ ಗಂಡನ ಮನೆಗೆ

ಹೋಗುತ್ತಾಳೆ. ಕುಟುಂಬದಿಂದ ಹೊರಹೋಗಲು ಮತ್ತು ಒಳ ಬರಲು ವೃತ್ತಕಾರ ಮತ್ತು ತ್ರಿಕೋನ ಚಿಹ್ನೆಯನ್ನು ಹೆಣ್ಣುಮಕ್ಕಳಿಗೆ ಮಾತ್ರ ಬಳಸಲಾಗಿದೆ. ಅಂದರೆ ಹೆಣ್ಣುಮಕ್ಕಳು ಮಾತ್ರ ಕುಟುಂಬದ ಹೊರಗಡೆ ಹೋಗುವವರು ಮತ್ತು ಒಳಗಡೆ ಬರುವವರು ಮತ್ತು ಗಂಡುಮಕ್ಕಳು ಇದ್ದ ಕುಟುಂಬದಲ್ಲೇ ಇರುವವರು ಎಂದು ಚಿತ್ರಿಸಲಾಗಿದೆ.

ಕುಟುಂಬದ ಮುಖ್ಯಸ್ಥರು ಪುರುಷರು, ಇವರ ಮೂಲಕವೇ ಹೆಣ್ಣುಮಕ್ಕಳ ಅಸ್ತಿತ್ವ, ಹುಟ್ಟಿದ ಕುಟುಂಬದಲ್ಲಿ ಗಂಡು ಮಗು ಶಾಶ್ವತವಾಗಿರುವವನು, ಹೆಣ್ಣುಮಕ್ಕಳು ಎಂದರೆ ಬೇರೆ ಮನೆಗೆ ಹೋಗುವವರು ಮತ್ತು ಕುಟುಂಬದೊಳಗೆ ಇರುವವರು ಎನ್ನುವ ಸಾಮಾಜೀಕರಣ ರೂಪಿಸುವ ಕೆಲಸ ನಡೆದಿರುವುದು ಕಂಡು ಬರುತ್ತದೆ. ಈಗಾಗಲೇ ಸಮಾಜದಲ್ಲಿ ಸ್ಥಾಪಿತಗೊಂಡಿರುವ 'ಗಂಡು' ವಂಶೋದ್ಧಾರಕ ಎನ್ನುವ ಮಿಥ್‌ನ್ನು ಇಲ್ಲಿ ಮತ್ತೊಮ್ಮೆ ಸಾಮಾಜೀಕರಣಗೊಳಿಸುವ ಕೆಲಸ ನಡೆದಿದೆ. ಹೆಣ್ಣುಮಕ್ಕಳ ಅಸ್ತಿತ್ವವನ್ನು ನಾಶಗೊಳಿಸುವುದರ ಮೂಲಕ ಹೆಣ್ಣು-ಗಂಡು ಮಕ್ಕಳು ಬೇರೆ-ಬೇರೆ ಎನ್ನುವ ಸಾಮಾಜೀಕರಣಗೊಳಿಸುತ್ತಿರುವುದು ಕಂಡು ಬರುತ್ತದೆ. ಪಠ್ಯದಲ್ಲಿ ಎಲ್ಲಿಯೂ ಹೆಣ್ಣುಮಕ್ಕಳನ್ನು ಸ್ವತಂತ್ರವಾಗಿ ಸಾಮಾಜೀಕರಣಗೊಳಿಸದೆ ಇರುವುದು, ಗಂಡು ಮಕ್ಕಳಿಗೆ ಮಾತ್ರ ಹೊರಗಿನ ಕೆಲಸ, ಅವರಿಗೆ ಉನ್ನತ ಶಿಕ್ಷಣ, ಹುಟ್ಟಿದ ಗಂಡು ಮಗು ಹುಟ್ಟಿದ ಮನೆಯಲ್ಲಿ ಸ್ಥಿರವಾಗಿರುವವನು ಎನ್ನುವುದನ್ನು ಎಳೆ ಮಕ್ಕಳಿಗೆ ಮನದಟ್ಟು ಮಾಡುವುದು ಯಾಕೆ? ಹೆಣ್ಣುಮಕ್ಕಳು ಮದುವೆಯಾಗಿ ಗಂಡನ ಮನೆಗೆ ಹೋಗಲೇಬೇಕು ಎನ್ನುವ ಸಂದೇಶ ಯಾಕೆ? ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಸಮಾನ ಪಾಲು ಸಂಬಂಧ ಕಾನೂನು ಇದ್ದರೂ ಮತ್ತು ವಾಸಿಸುವ ಸ್ಥಾನದಲ್ಲಿಯಾದರೂ ಇರಬಹುದು ಎನ್ನುವ ಸಂವಿಧಾನದ ಸಮಾನತೆಯ ಆಶಯವನ್ನು ಬದಿಗೊತ್ತಿರುವುದು ಕಂಡು ಬರುತ್ತದೆ. ಸ್ವತಂತ್ರ ಭಾರತದಲ್ಲಿ ಮದುವೆ ಹೆಣ್ಣು-ಗಂಡಿನ ಆಯ್ಕೆ ಎನ್ನುವ ಚಿಂತನೆಯನ್ನು ಶಾಲಾ ಶಿಕ್ಷಣದಲ್ಲಿ ಸೇರಿಸಿಲ್ಲ! ಪುರುಷ ಪ್ರಧಾನತೆಯನ್ನು ಬೆಂಬಲಿಸುವುದನ್ನು ಪುಸ್ತಕದಲ್ಲಿ ಸ್ಥಿರೀಕರಿಸುವುದೇಕೆ? ಹೀಗೆ ಅನೇಕ ಸಂಗತಿಗಳ ಕುರಿತಾಗಿ ಪ್ರಶ್ನೆ ಹಾಕಿಕೊಂಡರೆ ಸಾಮಾಜೀಕರಣದ ಪ್ರಭಾವ ಸ್ಪಷ್ಟವಾಗುತ್ತದೆ.

ಇದೇ ತರಗತಿಯ "ವೃತ್ತಿ ವಿಶೇಷ" ಪಾಠದಲ್ಲಿ (ಪು. ೧೭೦ರಿಂದ ೧೭೪) ಚಿತ್ರಗಳಿವೆ. ಇದರಲ್ಲಿ ಪುಟ ೧೭೦ರಲ್ಲಿ ಕೆಳಗಡೆ ಇರುವ ೩ ಚಿತ್ರಗಳಲ್ಲಿ ಒಬ್ಬ ಮಹಿಳೆ ಹೂವಿನ ವ್ಯಾಪಾರ ಮಾಡುತ್ತಿದ್ದಾಳೆ. ೩ನೇ ಚಿತ್ರದಲ್ಲಿ ಪುರುಷ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದಾನೆ. ಪುಟ ೧೭೧ರ ಮೇಲ್ಭಾಗದಲ್ಲಿ ಒಟ್ಟು ೭ ಚಿತ್ರಗಳಿವೆ; ಅದರಲ್ಲಿ ೩ ಚಿತ್ರಗಳಲ್ಲಿ ಮಹಿಳೆ ತರಕಾರಿ ವ್ಯಾಪಾರ ಮಾಡುತ್ತಿರುವುದು, ಬಟ್ಟೆ ನೇಯ್ಗೆ ಮಾಡುತ್ತಿರುವುದು, ಮತ್ತೊಂದು ಚಿತ್ರದಲ್ಲಿ ಮಹಿಳೆ ಬಟ್ಟೆ ಹೊಲಿಯುತ್ತಿರುವುದು ಇದೆ. ಇನ್ನುಳಿದ ಚಿತ್ರಗಳಲ್ಲಿ ಪುರುಷ ಕಬ್ಬಿಣದ ಕೆಲಸ ಮಾಡುತ್ತಿದ್ದಾನೆ. ಎರಡನೇ ಚಿತ್ರದಲ್ಲಿ ಪುರುಷ ರೇಷ್ಮೆ ಗೂಡು ಬಿಚ್ಚುತ್ತಿದ್ದಾನೆ. ಪುರುಷ ಗಡಿಗೆ ತಯಾರಿಕೆ. ಪುರುಷರು ಬಲೆ ಹಾಕುತ್ತಿರುವು ಇದೆ. (ಪು. ೧೭೨)ರ ಮೇಲ್ಭಾಗದಲ್ಲಿ ಒಟ್ಟು ೪ ಚಿತ್ರಗಳಿವೆ. ಎಲ್ಲದರಲ್ಲೂ ಪುರುಷರಿದ್ದಾರೆ. ಮೊದಲ ಚಿತ್ರದಲ್ಲಿ ಪುರುಷ ಹಿಟ್ಟಿನ ಯಂತ್ರವನ್ನು ನಡೆಸುತ್ತಿರುವುದು.

ಎರಡನೆಯದರಲ್ಲಿ ಪುರುಷ ಗೋಡೆ ಕಟ್ಟುತ್ತಿದ್ದಾನೆ. ಮೂರನೆಯದರಲ್ಲಿ ಪುರುಷರಿಬ್ಬರು ಬ್ಯಾಂಕ್ ವ್ಯವಹಾರ ನಡೆಸುತ್ತಿದ್ದಾರೆ ಮತ್ತು ನಾಲ್ಕನೆಯ ಚಿತ್ರದಲ್ಲಿ ಅಕ್ಕಸಾಲಿಗ ಪುರುಷ ತಮ್ಮ ವೃತ್ತಿ ಮಾಡುತ್ತಿರುವುದು ಇದೆ. (ಪು. ೧೭೩) ಆನೆ ಮತ್ತು ಪುರುಷರ ನಡುವೆ ಸಂಭಾಷಣೆಯಲ್ಲಿ ಮಿಠಾಯಿ ಮಾರುವವರು, ಮರಗೆಲಸದವರು ಮತ್ತು ಮಡಿಕೆ ಮಾಡುವವರು ಎಲ್ಲಾ ವೃತ್ತಿಯಲ್ಲಿ ಪುರುಷರನ್ನು ತೋರಿಸಲಾಗಿದೆ. ಈ ಮೇಲೆ ತಿಳಿಸಿರುವ ಎಲ್ಲಾ ಚಿತ್ರಗಳನ್ನು ವಿಶ್ಲೇಷಣೆ ಮಾಡಿದರೆ ಸಾಮಾಜೀಕರಣಕ್ಕೆ ಒಳಪಡಿಸುವ ಸಂಗತಿಗಳೇನೆಂದರೆ ಶಕ್ತಿ, ಸೃಜನಶೀಲತೆ, ಸಾಮರ್ಥ್ಯ, ಸಾಹಸದ ಮತ್ತು ಹೆಚ್ಚು ಸಂಪಾದನೆಯಾಗುವ ಹೊರಗಡೆಯ ವ್ಯವಹಾರಗಳನ್ನು ಪುರುಷರೇ ಮಾಡುವವರು ಎನ್ನುವ ಸಾಮಾಜೀಕರಣ ಬಿಂಬಿಸುತ್ತದೆ. ಇಲ್ಲಿ ಹುಟ್ಟುವ ಪ್ರಶ್ನೆ ಏನೆಂದರೆ ಇವುಗಳಲ್ಲಿ ಕೆಲವು ಕೆಲಸಗಳನ್ನು ಬರಿ ಪುರುಷರೇ ಅಥವಾ ಕೆಲವು ಕೆಲಸಗಳನ್ನು ಬರಿ ಮಹಿಳೆಯರೇ ಮಾಡಲು ಶಕ್ತರೆನ್ನುವುದಿದೆ. ಇಲ್ಲಿ ತೋರಿಸಿರುವ ಎಲ್ಲಾ ಕೆಲಸಗಳನ್ನು ಹೆಣ್ಣು-ಗಂಡುಗಳಿಬ್ಬರು ಯಾವುದೇ ಭಿನ್ನತೆಯಿಲ್ಲದೆ ನಿತ್ಯಜೀವನದಲ್ಲಿ ಮಾಡುತ್ತಿದ್ದಾರೆ. ಹೀಗಿರುವಾಗ ಯಾಕೆ ಸಮಾನತೆಯ ಸಾಮಾಜೀಕರಣ ಬಿಂಬಿಸುವ ಕೆಲಸವನ್ನು ಪಠ್ಯಪುಸ್ತಕಗಳಿಗೆ ಮಾಡಲಾಗುತ್ತಿಲ್ಲ ಎನ್ನುವುದನ್ನು ಮೊದಲು ವಿಮರ್ಶಿಸಬೇಕಾಗಿದೆ. ಈ ತರಗತಿಯ ಬಹುತೇಕ ಚಿತ್ರಗಳಲ್ಲಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದಲ್ಲಿ ಭಿನ್ನತೆ ರೂಪಿಸುತ್ತಾ ಸಾಗಿರುವುದು ಕಂಡು ಬರುತ್ತದೆ.

ಐದನೇ ತರಗತಿ 'ಪರಿಸರ ಅಧ್ಯಯನ ಪಠ್ಯಪುಸ್ತಕ' ನೋಡುವುದಕ್ಕಿಂತ ಪೂರ್ವದಲ್ಲಿ ಈ ಹಿಂದೆ ಇದ್ದ 'ಸಮಾಜ ವಿಜ್ಞಾನ' ಪಠ್ಯಪುಸ್ತಕಗಳನ್ನು ನೋಡಬೇಕಾಗಿದೆ. ಯಾಕೆಂದರೆ ೨೦೧೭-೧೮ನೇ ಶೈಕ್ಷಣಿಕ ಸಾಲಿನಿಂದ ಸಮಾಜ ವಿಜ್ಞಾನ ತೆಗೆದು ಹಾಕಿ ಪರಿಸರ ಅಧ್ಯಯನವನ್ನು ಸೇರಿಸಲಾಗಿದೆ. ಹಿಂದಿನ ಪಠ್ಯಗಳಲ್ಲಿ ಹೆಣ್ಣು-ಗಂಡುಮಕ್ಕಳ ಸಾಮಾಜೀಕರಣ ಸ್ವರೂಪ ಹೇಗಿದೆ ಎನ್ನುವುದನ್ನು ತಿಳಿಯಬೇಕಾಗಿದೆ. ಸಮಾಜ ವಿಜ್ಞಾನದ ಪಠ್ಯಪುಸ್ತಕದಲ್ಲಿ ಅಡಕಗೊಂಡಿರುವ ಹೆಣ್ಣು-ಗಂಡುಮಕ್ಕಳಿಗೆ ಸಂಬಂಧಿಸಿದಂತಹ ಸಾಮಾಜೀಕರಣಗೊಳಿಸುವ ಅಂಶಗಳನ್ನು ನೋಡಿದರೆ, ೫ನೇ ತರಗತಿಯ "ನಮ್ಮ ಸುತ್ತ ಮುತ್ತ (ಬೆಂಗಳೂರು ವಿಭಾಗ)" ಪಾಠದಲ್ಲಿ ಸಾಹಿತ್ಯ, ಕಲೆ, ಜನಪದ ಅಧ್ಯಾಯದಲ್ಲಿ ಹೊಸ ಕನ್ನಡ ಸಾಹಿತ್ಯವನ್ನು ಪರಿಚಯಿಸುವ ಮತ್ತು ವ್ಯಕ್ತಿಗಳ ಸಾಧನೆಗಳನ್ನು ಗುರುತಿಸುವ ಅಂಶಗಳಿವೆ. ಇದರಲ್ಲಿ ಎಂ.ಕೆ. ಇಂದಿರಾ, ಅನುಪಮ ನಿರಂಜನ ಮತ್ತು ಮಾಯಾರಾವ್‌ರಂತಹ ಮೂವರು ಮಹಿಳೆಯರ ಪರಿಚಯವಿದೆ. ಪುಟ ೨೯ರಲ್ಲಿ ಡೊಳ್ಳು ಕುಣಿತವನ್ನು ಪರಿಚಯಿಸುವಾಗ ಪುರುಷ ತಂಡದ ಚಿತ್ರವಿದೆ. ಪುಟ ೩೧ ರಿಂದ ೩೫ರವರೆಗೆ ಮರೆಯಲಾಗದ ಮಹಾನುಭಾವರು ಎಂಬ ಪಾಠದಲ್ಲಿ ೧೨ ವ್ಯಕ್ತಿಗಳಲ್ಲಿ ಕೇವಲ ಸಾಲು ಮರದ ತಿಮ್ಮಕ್ಕರ ಪರಿಚಯ ಮಾತ್ರವಿದೆ.

ಹೊಸ ಕನ್ನಡ ಸಾಹಿತ್ಯ ಪರಿಚಯಿಸುವಾಗ ಪ್ರಸ್ತುತಪಿರುವ ಕೆಲವು ಸಾಹಿತಿಗಳನ್ನು ಪರಿಚಯಿಸಲಾಗಿದೆ. ಪ್ರಗತಿಪರ ಚಿಂತನೆಯ ಮೂಲಕ ಗುರುತಿಸಿಕೊಂಡ ಸಾಕಷ್ಟು ಸಾಹಿತಿಗಳು,

ಮಹಾನುಭಾವರು ನಮ್ಮ ನಡುವೆ ಇದ್ದಾರೆ. ಅಲ್ಲದೆ ಇಂದು ಮಹಿಳಾ ಕಲಾವಿದರು ಡೊಳ್ಳು ಮಾತ್ರವಲ್ಲದೆ ಅನೇಕ ಕಲೆಗಳ ಪ್ರದರ್ಶನವನ್ನು ರಾಷ್ಟ್ರಮಟ್ಟದಲ್ಲೂ ನೀಡುತ್ತಿದ್ದಾರೆ. ಹಾಗೆಯೇ ಸಾಮಾಜಿಕವಾಗಿ ಪ್ರಗತಿಪರ ಹೋರಾಟಗಳಲ್ಲಿ ತೊಡಗಿಸಿಕೊಂಡಿರುವ ಸಾಕಷ್ಟು ಮಹಿಳಾ ಮುಂದಾಳುಗಳು ನಮ್ಮ ನಡುವೆ ಇದ್ದಾರೆ. ಹಲವು ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಲೇಖಕಿಯರ ಸಂಘಟನೆಗಳಿವೆ. ಪ್ರಸಿದ್ಧ ಲೇಖಕಿಯರು ಮತ್ತು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಜವಾಬ್ದಾರಿಯನ್ನು ನಿಭಾಯಿಸಿದ ಮಹಿಳೆಯರು ಇದ್ದಾರೆ. ಈ ಎಲ್ಲ ಸಂಗತಿಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ಪಠ್ಯವನ್ನು ವಿಶ್ಲೇಷಿಸಿದಾಗ ಸಮಾಜ, ಸಾಹಿತ್ಯ ಮತ್ತು ಕಲೆಗಳು ಪುರುಷರಿಗೆ ಎನ್ನುವ ಧೋರಣೆಯನ್ನು ಈ ಮೂಲಕ ಮಕ್ಕಳ ಎಳೆ ಮನಸ್ಸಿನಲ್ಲಿ ಸಾಮಾಜೀಕರಣ ರೂಪಿಸಲಾಗುತ್ತಿದೆ. ಮಹಿಳೆಯರು ಸಾಧನೆ ಮಾಡಿಲ್ಲವೇ ಅಥವಾ ಸಾಧನೆಯನ್ನು ಮಾಡಿದ ಮಹಿಳೆಯರಿಲ್ಲವೇ ಎನ್ನುವ ಅನೇಕ ಪ್ರಶ್ನೆಗಳು ಮೂಡುತ್ತವೆ. ಈ ಪಠ್ಯಗಳ ಮೂಲಕ ಮಹಿಳಾ ಪ್ರಗತಿಪರ ಚಿಂತಕರು, ಸಾಹಿತಿಗಳು ಹಾಗೂ ಕತೆಗಾರರನ್ನು ಗುರುತಿಸಿ, ಪುರುಷರ ಸಮಾನವಾಗಿ ಪರಿಚಯಿಸಿದ್ದರೆ ಪಠ್ಯದಲ್ಲಿ ಲಿಂಗತ್ವ ಸಮಾನತೆಯನ್ನು ಪ್ರತಿಪಾದಿಸಿದಂತೆ ಆಗುತ್ತಿತ್ತು. ಆದರೆ ಇದು ಈ ಪಠ್ಯದಲ್ಲಿ ಸಾಧ್ಯವಾಗಿಸಿಲ್ಲದಿರುವುದು ಕಂಡು ಬರುತ್ತದೆ.

ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮಕ್ಕಳಿಗೆ ಕಲಿಸಲು ಪಠ್ಯಗಳು ಇನ್ನೂ ಸಿದ್ಧವಾಗಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಇದಕ್ಕೆ ಉದಾ: ನಾಲ್ಕು ಆಶ್ರಮಗಳು ಪಾಠದಲ್ಲಿ (ಪು. ೪೬) ಬ್ರಹ್ಮಚರ್ಯ, ವಾನಪ್ರಸ್ಥ ಮತ್ತು ಸನ್ಯಾಸದಲ್ಲಿ ಪುರುಷರನ್ನು ಹಾಗೂ ಗೃಹಸ್ಥಾಶ್ರಮದಲ್ಲಿ ಗಂಡು ಮತ್ತು ಹೆಣ್ಣುಮಕ್ಕಳನ್ನು ತೋರಿಸಲಾಗಿದೆ. ಪುಟ ೫೪ರಿಂದ ೫೬ರವರೆಗೆ ಕುಟುಂಬ, ಸಮುದಾಯ ಮತ್ತು ಸಮಾಜ ಪಾಠದಲ್ಲಿರುವ ವಂಶವೃಕ್ಷವನ್ನು ಲಕ್ಷ್ಮಣ ಮತ್ತು ವಾಸುದೇವರಿಂದ ೧ನೇ ಮತ್ತು ೨ನೇ ಪೀಳಿಗೆಯನ್ನು ಪುರುಷ ಪ್ರಧಾನತೆಯ ನೆಲೆಗಟ್ಟಿನಿಂದ ಕುಟುಂಬವನ್ನು ವಿವರಿಸಲಾಗಿದೆ. ಇಲ್ಲಿನ ಪಾಠಗಳನ್ನು ಇಂದಿನ ಕಾಲಘಟ್ಟದಿಂದ ವಿಶ್ಲೇಷಿಸಿದಾಗ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮಕ್ಕಳಿಗೆ ಅರ್ಥ ಮಾಡಿಸುವ ಬದಲು ಪುರಾಣದ ನಾಲ್ಕು ಹಂತಗಳ ಕುಟುಂಬ ಜೀವನ ಮತ್ತು ಕುಟುಂಬದ ಮುಖ್ಯಸ್ಥನೆಂದರೆ ಪುರುಷನೇ ಎಂಬ ಸಾಮಾಜೀಕರಣವನ್ನು ಅಳವಡಿಸಲಾಗಿದೆ. ಈ ತೆರನಾದ ಸಾಮಾಜೀಕರಣ ಇಂದಿಗೂ ಮುಂದುವರೆದಿದ್ದರಿಂದ ಪುರುಷ ಪ್ರಧಾನ ಸಮಾಜ ಹೆಣ್ಣುಮಕ್ಕಳ ಕುರಿತಾಗಿ ನಿರ್ಲಕ್ಷ್ಯ ಧೋರಣೆಗೆ ಕಾರಣವಾಗಿದೆ. ಮತ್ತೊಂದು ಕಡೆ ವಂಶವೃಕ್ಷವನ್ನು ನೀಡುವಾಗ ಪುರುಷ ಪ್ರಧಾನ್ಯತೆಯ ಕುಟುಂಬದ ಚಿತ್ರಣವನ್ನು ನೀಡಿರುವುದರಿಂದ ಮಾತೃಮೂಲ ಸಮುದಾಯಗಳನ್ನು ಕಡೆಗಣಿಸಿದಂತಾಗಿದೆ.

ಸಮುದಾಯಗಳ ವಿವಿಧ ಕಸುಬುಗಳನ್ನು ಪರಿಚಯಿಸುವಾಗ ಗ್ರಾಮೀಣ ಸಮುದಾಯ ಪಾಠದ ಪುಟ ೬೧ರಲ್ಲಿ ಬುಟ್ಟಿ ತಯಾರಿಸುತ್ತಿರುವ ಮಹಿಳೆ, ಮಹಿಳೆ-ಪುರುಷ ಜೊತೆಗೆ

ದೋಣಿ ನಡೆಸುತ್ತಿರುವ ಹಾಗೂ ಧಾನ್ಯ ಒಕ್ಕಣೆ ಮಾಡುತ್ತಿರುವುದನ್ನು ತೋರಿಸಲಾಗಿದೆ. ಇವುಗಳನ್ನು ಬಿಟ್ಟರೆ ಉಳಿದಂತೆ ಕುಂಬಾರಿಕೆ, ಧಾನ್ಯವನ್ನು ಗಾಳಿಗೆ ತೂರುವ, ಕಬ್ಬಿಣದ ಕೆಲಸ, ಬೆಳೆ ಕಟಾವು, ಉಳುಮೆ, ಮರದ ಕೆಲಸ ಎಲ್ಲವನ್ನು ಪುರುಷರೇ ಮಾಡುತ್ತಾರೆಂದು ಸಾಮಾಜೀಕರಣಗೊಳಿಸಲಾಗಿದೆ. (ಪು. ೬೨) ಒಳಪು ಗ್ರಾಮವನ್ನು ನಿರ್ಮಲ ಗ್ರಾಮ ಎಂದು, ರಾಷ್ಟ್ರ ಪುರಸ್ಕಾರ ಪಡೆದಿರುವುದನ್ನು ವಿವರಿಸಲಾಗಿದೆ. (ಪು. ೬೩) ಕಮಲಳನ್ನು ಕೂಲಿ ಕೆಲಸ ಮಾಡುವವರಾಗಿ, (ಪು. ೬೪) ಕೃಷ್ಣಪ್ಪ ಸಣ್ಣ ಹಿಡುವಳಿದಾರ ಎಂದು ಮಕ್ಕಳಿಗೆ ಪರಿಚಯಿಸಲಾಗಿದೆ. ಸಮುದಾಯದ ಕಸುಬು (ಪು. ೩) ಮಹಿಳೆಯರನ್ನು ಮತ್ತು (ಪು. ೬) ಪುರುಷರನ್ನು ತೋರಿಸುವುದು ಆರ್ಥಿಕ ಕ್ಷೇತ್ರವನ್ನು ಪುರುಷರ ವಲಯವೆಂದು ಮಕ್ಕಳಿಗೆ ಪರಿಚಯಿಸಿದಂತಲ್ಲವೆ? ಒಳಪು ಗ್ರಾಮವನ್ನು ನಿರ್ಮಲ ಗ್ರಾಮವೆಂದು ಗುರುತಿಸಿರುವುದು ಹೆಮ್ಮೆಯ ವಿಷಯ ಹೌದು. ಆದರೆ ಇದರ ಜೊತೆಗೆ ಇಲ್ಲಿರುವ ಜೀವನ ಮೌಲ್ಯಗಳನ್ನು ಮಕ್ಕಳಿಗೆ ಪರಿಚಯಿಸಬಹುದಾಗಿತ್ತು. ಬಂಟ, ಬಿಲ್ಲವ, ಮೊಗವೀರ, ಕುಂಬಾರ, ಕೊರಗ ಇನ್ನು ಕೆಲವು ಮಾತೃಮೂಲ ಸಮುದಾಯಗಳ ಸಾಮುದಾಯಿಕ ಮೌಲ್ಯಗಳ ಪರಿಚಯದ ಜೊತೆಗೆ ಈ ಪ್ರದೇಶದಲ್ಲಿರುವ ಪ್ರಗತಿಪರ ಮತ್ತು ಲಿಂಗತ್ವದ ಮೌಲ್ಯಗಳ ಆಧಾರದಲ್ಲಿ ಪಠ್ಯವನ್ನು ರಚಿಸಬಹುದಿತ್ತು. ಜೊತೆಗೆ ಇತ್ತೀಚಿನ ವರ್ಷಗಳಲ್ಲಿ ವಸತಿ ನಿಮಾಣಕ್ಕಾಗಿ ಮಹಿಳೆ ಮತ್ತು ಪುರುಷರ ಜಂಟಿ ಖಾತೆಯಿರಬೇಕೆಂಬ ಸರಕಾರದ ನೀತಿಯೂ ಜಾರಿಯಲ್ಲಿದೆ. ಈ ರೀತಿಯ ಕಲಿಕೆಯ ಅವಕಾಶಗಳನ್ನು ಉಪಯೋಗಿಸುವ ಬದಲು, ಹಿಡುವಳಿದಾರರು ಎಂದು ಪುರುಷರ ಚಿತ್ರಣವನ್ನೇ ಮರು ಸ್ಥಾಪಿಸುತ್ತಾ ಬರುತ್ತಿರುವುದು ಲಿಂಗತ್ವ ಅಸಮಾನತೆಯನ್ನು ಇನ್ನಷ್ಟು ಪುಷ್ಟೀಕರಿಸಿದಂತೆ ಆಗಿದೆ.

ಪು. ೬೯ ಮತ್ತು ೭೧ರಲ್ಲಿ 'ನಗರ ಸಮುದಾಯ' ಪಾಠದಲ್ಲಿ ವಿವಿಧ ವೃತ್ತಿಗಳನ್ನು ಪರಿಚಯಿಸುವ ಚಿತ್ರಗಳಿವೆ. ಪುಸ್ತಕ ವ್ಯಾಪಾರದಿಂದ ಆರಂಭಗೊಂಡಿದ್ದು, ಬಟ್ಟೆ ಹೊಲಿಯುವುದು, ಕೂದಲು ಕತ್ತರಿಸುವ, ವಾಹನ ದುರಸ್ತಿಯನ್ನು ಪರಿಚಯಿಸಲಾಗಿದೆ. ಇವುಗಳಲ್ಲಿ ದಿನಸಿ ವ್ಯಾಪಾರದಲ್ಲಿ ಮಾತ್ರ ಮಹಿಳೆಯನ್ನು ತೋರಿಸಿ, ಉಳಿದವುಗಳಲ್ಲಿ ಪುರುಷರನ್ನೇ ಚಿತ್ರೀಕರಿಸಲಾಗಿದೆ. "ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯತ್ತ" ಪಾಠದ ಪುಟ-೭೫ ರಿಂದ ೭೯ರವರೆಗೆ ಸಮಸ್ಯೆಗಳಲ್ಲಿ ಜಾತೀಯತೆ, ಕೋಮುವಾದ, ಅನಕ್ಷರತೆ, ಬಾಲಕಾರ್ಮಿಕ ಪಿಡುಗು ಇವುಗಳನ್ನು ವಿವರಿಸಲಾಗಿದೆ. ಚಿತ್ರದಲ್ಲಿ ಮದ್ಯಪಾನವನ್ನು ಬಿಂಬಿಸಲು ಪುರುಷ ಒಂದು ಬಾಟಲಿ ಹಿಡಿದುಕೊಂಡು ನೆಲದಲ್ಲಿ ಕುಳಿತಿರುವ ದೃಶ್ಯವಿದೆ. ಮಹಿಳೆ ಮತ್ತು ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳ ಬಗೆಗಿನ ಚರ್ಚೆಯಲ್ಲಿ ಆರ್ಥಿಕ ಸಮಸ್ಯೆಗಳು, ಮಿತಿಮೀರಿದ ಜನಸಂಖ್ಯೆ ಮತ್ತು ಬಡತನ ವಿಚಾರಗಳಿವೆ. ವ್ಯಾಪಾರ ಮತ್ತು ಹಣ ಗಳಿಕೆ ಎನ್ನುವುದು ಪುರುಷರಿಗೆ ಮೀಸಲು ಎನ್ನುವ ಸಾಮಾಜೀಕರಣಗೊಳಿಸುವ ಬದಲು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರನ್ನು ಪರಿಚಯಿಸಬಹುದಿತ್ತು. ಸಾಮಾಜಿಕ ಸಮಸ್ಯೆಯಡಿ ಮಹಿಳೆ ಮತ್ತು ಮಕ್ಕಳು ಎದುರಿಸುತ್ತಿರುವ ವಿಚಾರದಲ್ಲಿ ಲಿಂಗ ಅಸಮಾನತೆ, ಹೆಣ್ಣು ಭ್ರೂಣ ಹತ್ಯೆ, ಕೌಟುಂಬಿಕ ಹಿಂಸೆ, ವರದಕ್ಷಿಣೆ, ಹೆಣ್ಣನ್ನು ಲೈಂಗಿಕ

ವಸ್ತುವಾಗಿ ನೋಡುವ ಧೋರಣೆ, ಅತ್ಯಾಚಾರ, ಹೆಣ್ಣುಮಕ್ಕಳ ಸಾಗಾಣಿಕೆ, ಹೆಣ್ಣು ಮಕ್ಕಳ ಮಾರಾಟ, ಬಾಲ್ಯವಿವಾಹ, ದೇವದಾಸಿ ಪದ್ಧತಿ, ವಿಧವಾ ಆಚರಣೆ, ಎಚ್.ಐ.ವಿ.ಯೊಂದಿಗೆ ಬದುಕುತ್ತಿರುವ ಮಹಿಳೆ ಮತ್ತು ಮಕ್ಕಳ ಸಮಸ್ಯೆಗಳು, ಲೈಂಗಿಕ ವೃತ್ತಿಗೆ ಹೆಣ್ಣು ಮಕ್ಕಳನ್ನು ತಳ್ಳಲ್ಪಟ್ಟ ಸಮಸ್ಯೆಗಳು, ಮದುವೆ ಸಂಸ್ಥೆಯಲ್ಲಿ ಹೆಣ್ಣನ್ನು ಗುಲಾಮಳನ್ನಾಗಿಸಿರುವುದು, ಆಸ್ತಿಯ ಹಕ್ಕಿನ ನಿರಾಕರಣೆ, ಅಪೌಷ್ಠಿಕತೆ ಇಂತಹ ಗಂಭೀರ ಜ್ವಲಂತ ಸಮಸ್ಯೆಗಳನ್ನು ಬದಿಗೊತ್ತಿ ಮಿತಿಮೀರಿದ ಜನಸಂಖ್ಯೆ ಬಡತನ, ಇವುಗಳನ್ನು ಮಹಿಳೆ ಮತ್ತು ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳೆಂದು ಆರ್ಥಿಕ ಚೌಕಟ್ಟಿನಲ್ಲಿ ಪರಿಚಯಿಸಲಾಗಿದೆ. ಇದರರ್ಥ ಹೆಣ್ಣುಮಕ್ಕಳ ನೈಜ ಸಮಸ್ಯೆಗಳ ಕುರಿತು ಸಮಾಜಕ್ಕೆ ಅರಿವಿಲ್ಲ ಎನ್ನುವುದು ಗೊತ್ತಾಗುತ್ತದೆ. ಇನ್ನೊಂದು ಕಡೆಯಿಂದ ಹಣ ಗಳಿಕೆ ಮತ್ತು ಆರ್ಥಿಕ ಅಭಿವೃದ್ಧಿ, ನಗರೀಕರಣದಲ್ಲಿ ಗಂಡುಮಕ್ಕಳ ಸಾಧನೆಯನ್ನು ಚಿತ್ರೀಕರಿಸಲಾಗಿದೆ. ಈ ಮೂಲಕ ಹೆಣ್ಣುಮಕ್ಕಳು ಜನಸಂಖ್ಯೆಗೆ ಹೊಣೆಗಾರರು, ಗಂಡುಮಕ್ಕಳು ಆರ್ಥಿಕ ವಲಯದ ಯಜಮಾನರು ಎನ್ನುವ ಸಾಮಾಜೀಕರಣ ರೂಪಿಸುತ್ತಿರುವುದು ಕಂಡು ಬರುತ್ತದೆ.

ಐದನೇ ತರಗತಿ ಎರಡನೆ ಸೆಮಿಸ್ಟರ್ ಪಠ್ಯಪುಸ್ತಕದಲ್ಲಿ ಪುಟ ೧ರಿಂದ ೧೦೨ ಪುಟದವರೆಗೆ ಸಮಾಜ ವಿಜ್ಞಾನ ಪಾಠಗಳಿವೆ. ಇದರಲ್ಲಿ ೧೫ ರಿಂದ ೫೨ ಪುಟಗಳವರೆಗೆ ರಾಜರ ಆಳ್ವಿಕೆ ಪಾಠದಲ್ಲಿ ಹೆಚ್ಚು ಪುರುಷರ ಚಿತ್ರಗಳು, ಅವರ ಸಾಧನೆಗಳು ಮತ್ತು ಪುರುಷ ವಾಚಕ ಪ್ರಯೋಗಗಳಿವೆ. ಈ ಪಠ್ಯದಲ್ಲಿ ಒಟ್ಟು ೨೧ ಮನುಷ್ಯರಿರುವ ಚಿತ್ರಗಳನ್ನು ಲಿಂಗತ್ವ ದೃಷ್ಟಿಯ ವಿಶ್ಲೇಷಣೆಗೆ ಒಳಪಡಿಸಿದರೆ ಕೇವಲ ೬ ಚಿತ್ರಗಳು ಮಾತ್ರ ಲಿಂಗತ್ವ ತಟಸ್ಥ ಸಂದೇಶವನ್ನು ಕೊಡುತ್ತವೆ. ಉಳಿದ ಪುಟಗಳ ಚಿತ್ರಗಳು ಲಿಂಗತ್ವ ಅಸಮಾನತೆಯ ಸಂದೇಶವನ್ನು ಕೊಡುತ್ತವೆ.

ಮಕ್ಕಳಿಗೆ ಲಿಂಗತ್ವ ಸಮಾನತೆಯನ್ನು ಪರಿಚಯಿಸುವಲ್ಲಿ ಮಹಿಳೆಯರು ರಾಜ್ಯವಾಳಿದ, ಲೇಖಕಿಯರ, ನರ್ತಕಿಯರ, ಮಂತ್ರಿಗಳಾಗಿದ್ದವರ ಹಾಗೂ ಪ್ರಜಾಪ್ರಭುತ್ವದ ಗ್ರಾಮ ಸಭೆಯಲ್ಲಿ ಭಾಗವಹಿಸಿರುವ ಚಿತ್ರಗಳನ್ನು ನೀಡಿರುವುದು ಕಂಡು ಬರುತ್ತದೆ. ಇದರಿಂದ ಧೈರ್ಯ ಬುದ್ಧಿವಂತಿಕೆ, ಅನುಭವ, ಚಿಂತನೆ, ಬರಹಗಳಲ್ಲಿ ಮಹಿಳೆಯರಿದ್ದಾರೆ ಎನ್ನುವ ಅಂಶಗಳನ್ನು ಮಕ್ಕಳಲ್ಲಿ ಬಿತ್ತಲು ಸಹಕಾರಿಯಾಗುತ್ತಿತ್ತು. ಆದರೆ ಈ ಅಂಶಗಳು ಇದ್ದರೂ ಮಹಿಳೆಯರನ್ನು ಗೃಹದಿಂದ ಹೊರತಂದು ನೋಡುವ ದೃಷ್ಟಿಕೋನದ ಅಂಶಗಳು ಕಡಿಮೆ ಕಂಡು ಬರುತ್ತದೆ. ಇದಕ್ಕೆ ೫ನೇ ತರಗತಿ ಸಮಾಜ ವಿಜ್ಞಾನ ಎರಡನೇ ಸೆಮಿಸ್ಟರ್‌ನಲ್ಲಿ (ಪು. ೧ರಿಂದ ೬ವರೆಗೆ) 'ಚೆಲುವ ಕನ್ನಡ ನಾಡು ಪಾಠವಿದೆ' ಮೊದಲ ಪುಟದಲ್ಲಿ ಶಿಕ್ಷಕಿಯ ಚಿತ್ರವಿದ್ದು, ಗಂಡುಮಕ್ಕಳು ಎದ್ದು ಕಾಣುವಂತಹ ಚಿತ್ರಗಳನ್ನು ಕಂಡು ಬರುತ್ತವೆ. ಕನ್ನಡ ನಾಡಿನ ಸಾಹಿತಿಗಳ, ಸಂಗೀತ, ನೃತ್ಯ, ಚಿತ್ರಕಲೆಯ ಮತ್ತು ಜ್ಞಾನ ವಿಜ್ಞಾನದ ವಿವರಣೆ ಇದೆ. ಇದು ಎಲ್ಲವೂ ಪುರುಷವಾಚಕದಿಂದ ಕೂಡಿದೆ. ಇದಕ್ಕೆ ನಾಡನ್ನು 'ಸ್ತ್ರೀ' ವಾಚಕದಲ್ಲಿ ಅಂದರೆ 'ತಾಯಿಯೆಂದು' ಗುರುತಿಸಿರುವುದು. ಆದರೆ ವಿವರಣೆಯಲ್ಲಿ ಪುರುಷರನ್ನೇ ವೈಭವೀಕರಿಸಿರುವುದು ಕಂಡು ಬರುತ್ತದೆ. ಇತಿಹಾಸದಲ್ಲಿ ಮೌರ್ಯರು,

ಅಶೋಕ ಚಕ್ರವರ್ತಿ, ಗುಪ್ತರ ಕಾಲ ಹೀಗೆ ಪುರುಷ ರಾಜರ ಇತಿಹಾಸವಿದೆ. ಬಹುತೇಕ ಈ ತರಗತಿಯ ಪಠ್ಯದಲ್ಲಿ ರಾಜ, ಮಹಾಕವಿ, ಶ್ರೀಮಂತ, ವ್ಯಾಪಾರಿ ಎಲ್ಲರೂ ಪುರುಷರು, ದಾಸಿ, ರಾಣಿ ಪಾತ್ರದಲ್ಲಿ ಮಹಿಳೆಯರು ಹೀಗೆ ಇತಿಹಾಸವನ್ನು ಹೇಳುತ್ತಾ ಬರಲಾಗಿದೆ. ಇದು ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದಲ್ಲಿ ಗಂಡು-ಶ್ರೇಷ್ಠ ಹೆಣ್ಣು-ಕನಿಷ್ಠ, ಗಂಡು-ಪ್ರಥಮ, ಹೆಣ್ಣು-ದ್ವಿತೀಯ ಎನ್ನುವಂತಹ ಸಾಮಾಜೀಕರಣವನ್ನು ದೃಢಪಡಿಸುತ್ತದೆ. ಏಕೆಂದರೆ ಪಠ್ಯಪುಸ್ತಕಗಳಲ್ಲಿ ದಾಸಿ, ರಾಣಿ ಮನೆಯಲ್ಲಿ ಸೇವಕಿಯರು ರಾಜನಿಗೆ ಅಡಿಯಾಳಾಗಿ ಇರುವವರು ಎನ್ನುವ ಅಂಶಗಳು ಇಂದಿಗೂ ಕಂಡುಬರುತ್ತವೆ. ಇಲ್ಲಿ ಪುರುಷ ಪಠ್ಯಕ್ರಮವನ್ನು ರಾಜರ, ಮಹಾರಾಜರುಗಳ ಮೂಲಕ ಹೇಳುವ ಮೂಲಕ ಶ್ರೇಷ್ಠತೆಯನ್ನು ಬಿಂಬಿಸಲಾಗಿದೆ. ಇದರ ಬದಲಾಗಿ ಸೌಹಾರ್ದತೆ, ಶಾಂತಿ, ಸಮಾನತೆ, ತ್ಯಾಗಗಳ ಕುರಿತಾದ ಇತಿಹಾಸವನ್ನು ಕಟ್ಟಿಕೊಟ್ಟಿದ್ದರೆ. ಮಕ್ಕಳಲ್ಲಿ ಸಮಾನತೆ, ಉದಾರತೆಯನ್ನು ಬೆಳೆಸಿದಂತಾಗುತ್ತಿತ್ತು.

'ಸಾರ್ವಜನಿಕ ಆಸ್ತಿ ನಮ್ಮೆಲ್ಲರ ಆಸ್ತಿ' ಎಂಬ ಪಾಠದ ಪುಟ ೫೭ರಲ್ಲಿ ಪುರುಷ ತನ್ನ ಮನೆಯತ್ತ ಕೈ ತೋರಿಸಿ ನಿಂತಿರುವ ಚಿತ್ರ, ಶಿವಪ್ಪನ ಮನೆ, ಜಮೀನು, ಹಸು, ಸೈಕಲ್ ಇತ್ಯಾದಿ ಇವೆಲ್ಲಾ ಅವನ ಸ್ವಂತದ್ದು ಎನ್ನುವ ಅಂಶಗಳು ಪಾಠದಲ್ಲಿ ದೊರೆಯುತ್ತದೆ. 'ಆಸ್ತಿ' ಎನ್ನುವುದು ಶಿವಪ್ಪ (ಪುರುಷ) ಒಬ್ಬರದೇ ಎನ್ನುವ ಸಂದೇಶ ಕೊಟ್ಟಿರುವುದರಿಂದ 'ಆಸ್ತಿ'ಯ ಮಾಲೀಕತ್ವಕ್ಕೆ ಪುರುಷರು ಮಾತ್ರ ಅರ್ಹರೆಂದು ಹೇಳಿದಂತಾಗುತ್ತದೆ. 'ಆಸ್ತಿ'ಯನ್ನು ಹೊಂದಲು ಮಹಿಳೆ-ಪುರುಷರು ಇಬ್ಬರು ಅರ್ಹರಿದ್ದಾರೆ; ಆದರೆ ಪಠ್ಯಪುಸ್ತಕದ ಮೂಲಕ ಮಕ್ಕಳಲ್ಲಿ ಪುರುಷರನ್ನು 'ಆಸ್ತಿ' ಹೊಂದಲು ಅರ್ಹ, ಅಧಿಕಾರಸ್ಥ ಎನ್ನುವ ಸಾಮಾಜೀಕರಣ ನೀಡಿದಂತಾಗಿದೆ. ಪೌರ ಮತ್ತು ಪೌರತ್ವ ಪಾಠದ (ಪು. ೫೯) ಅರಮನೆಯ ಮುಂದೆ ನಿಂತಿರುವ ಜನರ ಗುಂಪಿನಲ್ಲಿ ಕೆಲವೇ ಕೆಲವು ಮಹಿಳೆಯರು ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಾರೆ. ಇನ್ನು (ಪು. ೬೧) ಯಾವ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿ ತನ್ನ ದೇಶದ ಪೌರತ್ವವನ್ನು ಕಳೆದುಕೊಳ್ಳುತ್ತಾನೆ? ಸರಿತಾ ಪ್ರಶ್ನಿಸುತ್ತಾಳೆ. ಒಬ್ಬ ವ್ಯಕ್ತಿ ಇನ್ನೊಂದು ದೇಶದ ಪೌರತ್ವ ಪಡೆದುಕೊಂಡನೆಂದಾದರೆ ತನ್ನ ಮೂಲ ದೇಶದ ಪೌರತ್ವವನ್ನು ಕಳೆದುಕೊಳ್ಳುತ್ತಾನೆ. ಉತ್ತಮ ಪೌರನ ಲಕ್ಷಣಗಳು, ಅವನ ಹಕ್ಕುಗಳು, ಅವನಿಗೆ ಹೊಣೆಗಾರಿಕೆಯೂ ಇದ್ದು, ಮಾಡಬೇಕಾದ ಕೆಲವು ಕರ್ತವ್ಯಗಳಿವೆ. ಇಲ್ಲಿ ಸರಿತಾ ತಂದೆಯನ್ನು ಪ್ರಶ್ನಿಸುವುದು ಗುಣಾತ್ಮಕ ಬದಲಾವಣೆಗೆ ಆಗಿದ್ದರೂ, ಇಲ್ಲಿ ಸಂದೇಶ ಕೊಡುತ್ತಿರುವ ರೀತಿ, ಇಂತಹ ವಿಚಾರಗಳು ತಂದೆಗೆ ಮಾತ್ರ ಗೊತ್ತಿದೆ ಎಂಬಂದಂತಿದೆ. ಅಂದರೆ ಗಂಡಿಗೆ ಎಲ್ಲ ಗೊತ್ತಿದೆಯೋ ಎಂಬಂತಹ ಸಾಮಾಜೀಕರಣಕ್ಕೆ ದಾರಿಯಾಗುತ್ತಿರುವುದು ಕಂಡು ಬರುತ್ತದೆ.

ಪ್ರಜಾಪ್ರಭುತ್ವ ಪಾಠದ (ಪು. ೬೩) ರಾಜ ಸಿಂಹಾಸನದಲ್ಲಿ ಕುಳಿತಿದ್ದು, ಅವನ ಸುತ್ತ ಪುರುಷರು ಕೂತಿರುವ ಮತ್ತು ನಿಂತಿರುವ ಚಿತ್ರವಿದೆ. ಇದರ ಪಕ್ಕದಲ್ಲಿ ಪುರುಷ ಮತವನ್ನು ಮತ ಪೆಟ್ಟಿಗೆಗೆ ಹಾಕುತ್ತಿರುವ ಚಿತ್ರವಿದೆ. ಪು. ೬೪ರಲ್ಲಿ ರಾಜನ ಕುರಿತ ಪಾಠವಿದೆ. ಇದರಲ್ಲಿ

ರಾಜನ ರಾಣಿ ಗಂಡುಮಗುವಿಗೆ ಜನ್ಮವಿತ್ತು ಮಡಿದಳು; ರಾಜನು ಆಸ್ಥಾನದ ನರ್ತಕಿಯನ್ನು ಮದುವೆಯಾದನು, ಅವಳಿಗೂ ಗಂಡುಮಗು ಜನಿಸಿತು; ಅಣ್ಣ-ತಮ್ಮಂದಿರು ಗುರುಕುಲ ಶಿಕ್ಷಣ ಪಡೆದರು, ಸಿಂಹಾಸನಕ್ಕಾಗಿ ಕಿತ್ತಾಟ; ಚಿಂತೆಯಿಂದ ರಾಜನು ಅಸುನೀಗಿದನು. ಪುಟ ೬೬ರಲ್ಲಿ ಮತ ಚಲಾವಣೆಗೆ ಕಾಯುತ್ತಿರುವ ಸಾಲಿನಲ್ಲಿ ಮಹಿಳೆಯರಿದ್ದರೂ ತೋರಿಸಿರುವ ೪ ಅಧಿಕಾರಿಗಳಲ್ಲಿ ಓರ್ವ ಮಹಿಳೆ ಇದ್ದು; ಎದ್ದು ಕಾಣುವುದು ಪುರುಷರಿರುವ ಮುಖ್ಯ ಅಧಿಕಾರಿ ಮತ್ತು ಹೊರಗಡೆ ಬಾಗಿಲ ಪಕ್ಕದಲ್ಲಿ ನಿಂತಿರುವ ಪೊಲೀಸ್, ಹೀಗೆ ಎಲ್ಲವೂ ಪುರುಷರಿಂದಲೇ ಎನ್ನುವ ಸಾಮಾಜೀಕರಣ ರೂಪಿಸುವ ಅಂಶಗಳು ಕಂಡು ಬರುತ್ತವೆ. ಪೌರತ್ವ ಮತದಾನ, ಗಂಡು ಮಗು, ಅರಮನೆ ವೀಕ್ಷಣೆಯಲ್ಲಿ ಹೆಚ್ಚು ಗಂಡು ಮಕ್ಕಳಿರುವ ಚಿತ್ರ ಮತ್ತು ಪುರುಷಪ್ರಧಾನ ಭಾಷೆಗಳನ್ನು ಬಳಸುವುದರ ಮೂಲಕ ಪುರುಷ ಪ್ರಧಾನತೆ ಸಹಜವೆಂಬ ಸಾಮಾಜೀಕರಣಕ್ಕೆ ಮಕ್ಕಳನ್ನು ಒಪ್ಪಿಸಿದಂತಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮಾನತೆ ಪ್ರಮುಖ ಮೌಲ್ಯವಾಗಿರುವುದನ್ನು ಮಕ್ಕಳಿಗೆ ಹೇಳುವ ಸಾಮಾಜೀಕರಣ ಇಲ್ಲಿ ಕಂಡು ಬಂದಿಲ್ಲ. ೫ನೇ ತರಗತಿಯಲ್ಲಿದ್ದ ಸಮಾಜ ವಿಜ್ಞಾನದ ಅಧ್ಯಾಯಗಳನ್ನು ೬ನೇ ತರಗತಿಯ ಸಮಾಜ ವಿಜ್ಞಾನದ ಪಠ್ಯಕ್ಕೆ ಸ್ಥಳಾಂತರಿಸಲಾಗಿದೆ. ಹೀಗಾಗಿ ಸಾಮಾಜೀಕರಣ ಮುಂದಿನ ತರಗತಿಗಳ ಮಕ್ಕಳಿಗೆ ವರ್ಗಾವಣೆಗೊಂಡಿದೆ.

ಹೊಸದಾಗಿ ೨೦೧೭-೧೮ನೇ ಶೈಕ್ಷಣಿಕ ಸಾಲಿನಿಂದ ಪ್ರಸ್ತುತ ಪರಿಸರ ಅಧ್ಯಯನ ಜಾರಿಗೆ ಬಂದಿದೆ. ಇದರಲ್ಲಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಕುರಿತು ನೋಡುವುದಾದರೆ, ಈ ತರಗತಿ ಪಠ್ಯಪುಸ್ತಕ (ಪು. ೭ರಲ್ಲಿ) ಜೀವಿಗಳು ಬೆಳೆಯುತ್ತವೆ ಎನ್ನುವಾಗಲೂ ಪುರುಷರ ಚಿತ್ರಗಳನ್ನು ತೋರಿಸಿರುವುದು ಪುರುಷಪರವಾದ ಚಿಂತನೆಗಳು ಮುಂದುವರೆದಿರುವುದು ಕಂಡು ಬರುತ್ತದೆ. ಭಾಷಾ ವಿಜ್ಞಾನಿಗಳು ಹೇಳುವ ಹಾಗೆ 'ಮಾನವ' ಎನ್ನುವ ಪದವೇ ಪುರುಷವಾಚಿಯಾಗಿರುವುದು; ಹೀಗಿರುವಾಗ ಪುರುಷ ಪರವಾದ ಚಿತ್ರಗಳನ್ನು ಹಾಕುವ ಅವಶ್ಯಕತೆ ಇರಲಿಲ್ಲ! 'ಕುಟುಂಬ' ಪಾಠ-೨ರಲ್ಲಿ (ಪು. ೧೯) ಕುಟುಂಬ ಸದಸ್ಯರನ್ನು ಪರಿಚಯಿಸುವಾಗ ಪುರುಷ ಪ್ರಧಾನತೆ ಎದ್ದು ಕಾಣುತ್ತದೆ. ಮೊದಲು ಪುರುಷ, ನಂತರ ಮಹಿಳೆ ಇದಕ್ಕೆ ವಂಶವೃಕ್ಷದಲ್ಲಿ ಬಳಸಿರುವ ಸಂಕೇತಗಳಲ್ಲಿ ಬಳಸಿರುವ ಪಾತ್ರಗಳೇ ಉದಾಹರಣೆ. ಗಂಡು-ಹೆಣ್ಣು, ಗಂಡ-ಹೆಂಡತಿ, ತಂದೆ-ತಾಯಿ, ಹೀಗೆ ಸಂಬಂಧಗಳ ಸಂಕೇತಗಳನ್ನು ಗುರುತಿಸಿರುವುದು ಕಂಡು ಬರುತ್ತದೆ. ಮುಂದುವರೆದು ಅವರು ಸೂಚಿಸುವ ನಕ್ಷೆಗಳಲ್ಲಿ ಕೂಡ ಮೊದಲು ಪುರುಷ ನಂತರ ಮಹಿಳೆ ಹೀಗೆ ಈ ಲಿಂಗದ ಅಸೂಕ್ಷ್ಮತೆಗಳು ಈ ಪರಿಸರ ಅಧ್ಯಾಯದಲ್ಲಿ ಮತ್ತು ಸಾಮಾಜಿಕ ಸಂಸ್ಥೆಯಾದ ಕುಟುಂಬವನ್ನು ಪರಿಚಯಿಸುವಾಗ ಕಂಡು ಬರುತ್ತದೆ.

ಸಹಾಯ - ಸಂಬಂಧಗಳನ್ನು ಹೇಳುವಾಗ ಮಕ್ಕಳ ಪಾಲನೆ-ಪೋಷಣೆ, ರಕ್ಷಣೆ ಹೆಣ್ಣಿಗೆ ಇರುವ ಜವಾಬ್ದಾರಿಗಳು. ಇದು ಅವಳ ಕೆಲಸ, ಅದು ಅವಳ ಕರ್ತವ್ಯ, ಎನ್ನುವ ಸಂದೇಶ ಸಾರುವ ಚಿತ್ರಗಳನ್ನು (ಪು. ೨೬) ಚಿತ್ರಿಸಲಾಗಿದೆ. ಗಂಡನಿಗೆ ಹೆಣ್ಣು (ಹೆಂಡತಿ) ಆದವಳು ಊಟ ಕೊಡಬೇಕು. ಮತ್ತೊಂದು ಕಡೆ ಮಗುವಿನ ಪೋಷಣೆ-ಪಾಲನೆ ರಕ್ಷಣೆ ಹೆಣ್ಣಿಗೆ ಇರುವ

ಕೆಲಸಗಳು ಮತ್ತು ಇದನ್ನು ನೋಡಿಕೊಳ್ಳಲು ಮತ್ತೊಬ್ಬ ಮಹಿಳೆಯೇ ಆಗಬೇಕು ಎನ್ನುವ ಸಂದೇಶ ಚಿತ್ರಗಳಲ್ಲಿ ಕೊಟ್ಟಿರುವ ಮಾಹಿತಿಯಲ್ಲಿ ಕಂಡು ಬರುತ್ತದೆ. ಇಲ್ಲಿ ಹೆಣ್ಣಿಗೆ ಅಂಟಿಕೊಂಡಿರುವ ಕೆಲಸಗಳ, ಸಂಬಂಧಗಳ ಸಾಮಾಜೀಕರಣವನ್ನು ಒತ್ತಿ ಹೇಳಿದಂತೆ ಕಂಡು ಬರುತ್ತದೆ. ಇದನ್ನು ಸಾಬೀತುಪಡಿಸಲು ಹೆಣ್ಣಿನ ಚಿತ್ರ ಬಳಸಿಕೊಂಡಿರುವುದು, ಹೆಣ್ಣು-ಗಂಡಿನ ಸಾಮಾಜೀಕರಣ ಸಂಗತಿಗಳ ಯಥಾವತ್ತಾಗಿ ರೂಪ ಪಡೆದುಕೊಂಡು ಮುಂದುವರೆದಿರುವುದು ಕಂಡು ಬರುತ್ತದೆ.

ಪಠ್ಯದಲ್ಲಿನ ಚಟುವಟಿಕೆಗಳಲ್ಲಿ ಪುರುಷ ಪರವಾದ ಸಾಮಾಜೀಕರಣ ರೂಪಿತಗೊಂಡಿದೆ (ಪು. ೨೮). ಚಟುವಟಿಕೆಯಲ್ಲಿ ಮನೆ ಭೇಟಿ ಕಾಲಂನಲ್ಲಿ ಮನೆಯ (ಕುಟುಂಬ) ಸದಸ್ಯರ ಮಾಹಿತಿಯ ಭರ್ತಿ ನಮೂನೆಯಲ್ಲಿ ಮೊದಲಿಗೆ ಕುಟುಂಬದ ಮುಖ್ಯಸ್ಥರ ಹೆಸರು ರಾಮಣ್ಣ ಎಂದು ನಮೂದಿಸಲಾಗಿದೆ. ಆದರೆ ಇಂದು ಬಿಪಿಎಲ್-ಕಾರ್ಡ್ ಹೊಂದಿರುವ ಸದಸ್ಯರಿಗೆ ಕುಟುಂಬದ ಮುಖ್ಯಸ್ಥರು ಮಹಿಳೆಯ ಹೆಸರಲ್ಲಿ ವಿತರಿಸುತ್ತಿರುವುದು ಕಂಡು ಬರುತ್ತಿದೆ. ಪಾಠ-೩ 'ಸಮುದಾಯ'ದಲ್ಲಿನ (ಪು. ೩೧) ಗ್ರಾಮದ ಚಿತ್ರಗಳಲ್ಲಿ ಹೆಣ್ಣುಮಕ್ಕಳಿಗೆ ಅಂಟಿಸಲಾಗಿರುವ ಸಾಂಪ್ರದಾಯಿಕ ಸಹಾಯಕ ಕೆಲಸಗಳ ಫೋಟೋಗಳನ್ನು ನೋಡಿದರೆ, ಹೆಣ್ಣು-ಗಂಡುಗಳ ಸಾಮಾಜೀಕರಣದ ಸಂಗತಿಗಳನ್ನು ತಿಳಿಯಬಹುದು. ಉದಾ: ಪಾತ್ರೆ ತೊಳೆಯುವುದು, ನೀರು ಸಂಗ್ರಹಿಸುವುದು, ಇದೇ ಪಾಠದ (ಪು. ೩೪) ಪುರುಷನ ಕೆಲಸಗಳನ್ನು ತೋರಿಸುವಾಗ ರೈತನ ಉಳುಮೆ ಮಾಡುವ ಚಿತ್ರ, ಕುಂಬಾರ, ಕಮ್ಮಾರಿಕೆ, ಗೊಬ್ಬರ ಹರಡುವುದು, ಕಟ್ಟಿಗೆ(ಕಾರ್ಪೆಂಟರ್) ಕೆಲಸ, ಬಲೆ ಹಾಕುವುದು, ಮಹಿಳೆಗೆ ಸಂಬಂಧಿಸಿದಂತೆ ಗುಡಿ ಕೈಗಾರಿಗೆ, ಬುಟ್ಟಿ ಹೆಣೆಯುವುದು, ತೊಗರಿ ಬಡಿಯುವುದು, ರಾಶಿ ಮಾಡುವುದು ಅಂದರೆ ಹೆಚ್ಚು ಆದಾಯ ತರುವ ಕೆಲಸಗಳಿಗೆ ಪುರುಷರ ಚಿತ್ರಗಳನ್ನು ಅನ್ವಯಿಸಲಾಗಿದೆ. ಕಡಿಮೆ ಆದಾಯ ಬರುವ ಕೆಲಸಗಳಿಗೆ ಮಹಿಳೆಯರ ಚಿತ್ರಗಳನ್ನು ಅನ್ವಯಿಸಲಾಗಿದೆ. ಪಾಠ-೪ರ 'ಸಮುದಾಯ ಕ್ರೀಡೆಗಳು' ಅಧ್ಯಾಯದಲ್ಲಿ ಪುಟ ೫೨ ರಿಂದ ೫೮ರವರೆಗೆ ಸಮುದಾಯ ಕ್ರೀಡೆಗಳನ್ನು ಪರಿಚಯಿಸುವಲ್ಲಿ ದೈಹಿಕ ವ್ಯಾಯಾಮವನ್ನು ಪ್ರಕಟಿಸುವ ಕ್ರೀಡೆಗಳು ಇವು. ಸಾಮಾನ್ಯವಲ್ಲದ ಸನ್ನಿವೇಶಗಳಲ್ಲಿ ಗುರಿ ಮುಟ್ಟುವ ಸವಾಲನ್ನು ಮತ್ತು ದೈಹಿಕ ಕಸರತ್ತು ಹೊಂದಿದ್ದು ಕ್ರೀಡಾಪಟುವಿಗೆ ಹೊಸ ಹೊಸ ಸವಾಲನ್ನು ಒಡ್ಡುತ್ತವೆ. ಇಂತಹ ಕ್ರೀಡೆಗಳಿಂದ ಮನಸ್ಸಿಗೆ ಉಲ್ಲಾಸ, ಅಪಾಯ ಎದುರಿಸುವ ಛಲ, ಮಾನಸಿಕ ಧೈರ್ಯ, ದೈಹಿಕ ಕಸರತ್ತು ಮತ್ತು ಮನೋರಂಜನೆ ದೊರೆಯುತ್ತದೆ ಎಂದು ಮಾಹಿತಿ ನೀಡುವುದರ ಜೊತೆಗೆ ಮತ್ತು ಕ್ರೀಡೆಗಳನ್ನು ಹೆಸರಿಸಲಾಗಿದೆ. ತೆಪ್ಪದಾಟ, ಪರ್ವತಾರೋಹಣ, ಆಕಾಶ ನೆಗೆತ, ಪರ್ವತ ಚಾರಣ, ಪರ್ವತ ಕಾಲು ಬಂಡಿ ಇವುಗಳೆಲ್ಲವೂ ಪುರುಷರೇ ಮಾತ್ರ ಆಡುತ್ತಾರೆ ಎನ್ನುವಂಥ ಸಂದೇಶ ಸಾರುವ ಚಿತ್ರಗಳನ್ನು (ಪು. ೫೬) ಪ್ರಕಟಿಸಲಾಗಿದೆ. ಆದರೆ ಮಹಿಳೆ ಇಂದು ಅನೇಕ ಕ್ರೀಡೆಗಳಲ್ಲಿ ಸಾಧನೆ ಮಾಡಿದ್ದಾಳೆ. ಕ್ರೀಡೆಯ ಯಾವ ಕ್ಷೇತ್ರವನ್ನು ಬಿಟ್ಟಿಲ್ಲ. ಹೀಗಿರುವಾಗ ಗಂಡು ಮಾತ್ರ ದೈಹಿಕ ಕಸರತ್ತು ಮಾಡಬಲ್ಲ, ಸಾಧಿಸಬಲ್ಲ ಎನ್ನುವಂತೆ ಪಠ್ಯಗಳ ಮೂಲಕ ಸಾಮಾಜೀಕರಣಗೊಳಿಸುತ್ತಿರುವುದು ಎಷ್ಟು ಸರಿ? ಇದಕ್ಕೆ ಸಾಕ್ಷಿಯಾಗಿ ಇದೇ

ಪಾಠದಲ್ಲಿ (ಪು. ೫೮) ಗುಂಡು ಎತ್ತುವುದು, ಕುಸ್ತಿ ಆಡುವ, ಮಲ್ಲಕಂಬ ಪ್ರದರ್ಶನ ಮಾಡುವ, ದೋಣಿ ಸಾಗಿಸುವ ಸ್ಪರ್ಧೆ, ಹಗ್ಗ ಜಗ್ಗುವ ಕ್ರೀಡೆಗಳ ಚಿತ್ರಗಳಲ್ಲಿ ಪುರುಷರನ್ನೇ ಚಿತ್ರಿಸಲಾಗಿದೆ. ಇಂದು ಹಗ್ಗ ಜಗ್ಗಾಟ, ಮಹಿಳಾ ಕುಸ್ತಿ, ಮಲ್ಲಕಂಬ, ದೋಣಿ ನಡೆಸುವ ಹೀಗೆ ಎಲ್ಲ ರಂಗದಲ್ಲಿ ಮಹಿಳೆಯರ ಭಾಗವಹಿಸುವಿಕೆ, ಪ್ರದರ್ಶನ ಕಂಡು ಬರುತ್ತದೆ. ಇದನ್ನು ಮರೆ ಮಾಚುವ ಕೆಲಸ ಇಲ್ಲಿ ನಡೆದಿರುವುದು ಕಂಡು ಬರುತ್ತದೆ.

'ನೈಸರ್ಗಿಕ ಸಂಪನ್ಮೂಲಗಳು' ಎಂಬ ಪಾಠ-೫ರಲ್ಲಿ ಭೂಮಿ ಮೇಲೆ ಜೀವಿಗಳು ಬದುಕಲು ಅಗತ್ಯವಾದ ಸಂಪನ್ಮೂಲಗಳನ್ನು ಪರಿಚಯಿಸುವ ಕೆಲಸವನ್ನು ಮಾಡಲಾಗಿದೆ. ಇದರಲ್ಲಿ ಸಾಲು ಮರದ ತಿಮ್ಮಕ್ಕ ಪರಿಸರ ಕಾಳಜಿ ವ್ಯಕ್ತಪಡಿಸಿದ ರೀತಿಗೆ ಅವರ ಪರಿಚಯವನ್ನು ಮಾಡಲಾಗಿದೆ. ಆದರೆ ಇದೇ ತರಗತಿಯ ಪಾಠ-೭ರಲ್ಲಿ 'ವಾಯು' ಪಾಠದಲ್ಲಿ ನೈಸರ್ಗಿಕ ಸಂಪನ್ಮೂಲಗಳಲ್ಲಿ ವಾಯು ಒಂದು; ಇದರಿಂದ ನೀನೇನು ತಿಳಿದೆ? ಎಂದು ಪರಿಚಯಿಸುವಾಗ, ಒಲೆ ಉರಿಯಲು ವಾಯು ಅಗತ್ಯ ಇದೆ ಎಂದಿದ್ದರೆ ಸಾಕಿತ್ತು. ಆದರೆ ಅಲ್ಲಿ (ಪು. ೭೮ ಮತ್ತು ೭೯) ಮಹಿಳೆಯೊಬ್ಬಳು ಅಡುಗೆ ಮಾಡಲು ಒಲೆಯನ್ನು ಊದುತ್ತಿರುವ ಚಿತ್ರವನ್ನು ಪ್ರಕಟಿಸಿದ್ದಾರೆ. ವೈಜ್ಞಾನಿಕವಾಗಿ ಈ ಸಮಾಜ ಎಷ್ಟೇ ಮುಂದುವರೆದಿದ್ದರೂ ಗಂಡು-ಹೆಣ್ಣು ಬೇರೆ ಬೇರೆ ಎಂದು ಮತ್ತು ಅವರ ಕೆಲಸ, ಕರ್ತವ್ಯ ಪಾತ್ರಗಳ ವಿಷಯಕ್ಕೆ ಬಂದಾಗ, ಲಿಂಗಸಂಬಂಧಿ ಶ್ರಮವಿಭಜನೆ ಮಾಡುತ್ತಿರುವುದು ಕಂಡು ಬರುತ್ತದೆ. ಇದಕ್ಕೆ ಸಾಕ್ಷಿಯಾಗಿ ಈ ಪಾಠದಲ್ಲಿ ಮಹಿಳೆಯೊಬ್ಬಳು ಒಲೆ ಊದುವ ಚಿತ್ರ ಪ್ರಕಟಿಸಿದ್ದಾರೆ

ವಾಯುಮಾಲಿನ್ಯವನ್ನು ಗಮನದಲ್ಲಿಟ್ಟುಕೊಂಡ ಚಿತ್ರಗಳಲ್ಲಿ ಹೆಣ್ಣುಮಕ್ಕಳು ಸ್ವಚ್ಛತೆ ಮಾಡುತ್ತಿರುವ ಚಿತ್ರಗಳನ್ನು ಮುದ್ರಿಸಲಾಗಿದೆ. ಅಂದರೆ ಇಲ್ಲಿ ಕಸ ಗುಡಿಸುವುದು, ಕಸ ಸಂಗ್ರಹಿಸುವುದು ಮಹಿಳೆಯೇ ಎನ್ನುವಂತಹ ಲಿಂಗಪೂರ್ವ ಮತ್ತು ನಿರ್ಧಾರಿತ ಲಿಂಗ ತಾರತಮ್ಯದ ಮನೋಭಾವನೆ ಇಲ್ಲಿ ಪ್ರಕಟಗೊಂಡಿದೆ. ಅದೇ ಪುರುಷನ ಚಿತ್ರದಲ್ಲಿ ಸ್ವಚ್ಛವಾದ ರಸ್ತೆಯಲ್ಲಿ ಸೈಕಲ್ ತುಳಿಯುತ್ತಿರುವುದು. ಪರಿಸರ ಮಾಲಿನ್ಯ ವಾಹನಗಳಿಂದ ಆಗುತ್ತಿದೆ ಎನ್ನುವ ಸಂದೇಶವನ್ನು ಇಲ್ಲಿ ಚಿತ್ರಗಳ ಮೂಲಕ ತಿಳಿಸುವ ಪ್ರಯತ್ನ ಮಾಡಲಾಗಿದೆ. ೫ನೇ ತರಗತಿ ಪರಿಸರ ಅಧ್ಯಯನದಲ್ಲಿ ಪಾಠದಲ್ಲಿ ಸಸ್ಯ ಹಾಗೂ ಪ್ರಾಣಿಗಳು ಜೀವಿಸಲು ನೀರು ಅವಶ್ಯಕ. ನೀರಿಲ್ಲದೆ ಬೆಳೆ ಬೆಳೆಯಲು ಸಾಧ್ಯವಿಲ್ಲ. ನೀರು ಎಲ್ಲರ ಮೂಲಭೂತ ಅಗತ್ಯವಾಗಿದೆ. ನೀರಿನಿಂದ ಅನೇಕ ಉಪಯೋಗಗಳಿವೆ. ಆದ್ದರಿಂದ ನೀರು ಬಹು ಮುಖ್ಯವಾದ ಸಂಪನ್ಮೂಲವಾಗಿದೆ ಎಂದು ಹೇಳುವುದರ ಮೂಲಕ ನೀರಿನ ಮಹತ್ವ, ಅದರ ಬಳಕೆ, ಅಳಿವು-ಉಳಿವುಗಳ ಕುರಿತು ಮಾಹಿತಿಯನ್ನು ಈ ಪಾಠದಲ್ಲಿ ನೀಡಲಾಗಿದೆ. ಆದರೆ ಈ ನೀರಿನ ಬಳಕೆ ಸಂಬಂಧಿಸಿದಂತೆ, ಉಪಯೋಗಕ್ಕೆ ಸಂಬಂಧಿಸಿದಂತೆ, ತೋರಿಸುವ ಚಿತ್ರಗಳಲ್ಲಿ ಲಿಂಗ ಅಸೂಕ್ಷ್ಮತೆ ಕಂಡು ಬಂದಿದೆ. ಇದೇ ಪಾಠದ (ಪು. ೯೨) ಜಲ ಮಾಲಿನ್ಯದ ಮಾಹಿತಿಯನ್ನು ತಿಳಿಸುವ ಚಿತ್ರಗಳಲ್ಲಿ ಹೆಣ್ಣುಮಕ್ಕಳು ಪಾತ್ರೆ ತೊಳೆಯುವ, ಪುರುಷ ಎಮ್ಮೆ ಮೈ ತೊಳೆಯುವ, ಮಹಿಳೆ ಒಬ್ಬಳು ಬಟ್ಟೆ

ತೊಳೆಯುವ, ವಾಹನವೊಂದು ಕಸ ಸುರಿಯುವ, ಚರಂಡಿ ನೀರು ಕೆರೆಗೆ ಸೇರುವ ಚಿತ್ರಗಳನ್ನು ಇಲ್ಲಿ ಪ್ರಕಟಿಸಲಾಗಿದೆ. ಜಲ ಮಾಲಿನ್ಯಕ್ಕೆ, ಹೆಣ್ಣುಮಕ್ಕಳಿಗೆ ಆರೋಪಿತವಾಗಿರುವ ಲಿಂಗಾಧಾರಿತ ಪಾತ್ರಗಳಾದ ಪಾತ್ರೆ ತೊಳೆಯುವ, ಬಟ್ಟೆ ತೊಳೆಯುವ ಚಿತ್ರಗಳು, ಹೆಣ್ಣು-ಗಂಡುಮಕ್ಕಳ ಸ್ಥಿರಮಾದರಿ ಪಾತ್ರಗಳು ಸಂದೇಶ ಕೊಡುವಂತೆ ಚಿತ್ರಗಳು ಇಲ್ಲಿ ಪ್ರಕಟಗೊಂಡಿವೆ. ಹೆಣ್ಣು-ಗಂಡುಮಕ್ಕಳು ಪಾತ್ರಗಳನ್ನು ಸಾಮಾನ್ಯ ಪರಿಸರ ಅಧ್ಯಯನದಲ್ಲಿ ಕೂಡ ಲಿಂಗಾಧಾರಿತ ಶ್ರಮ ವಿಭಜನೆಗೆ ಬಳಸಿಕೊಂಡು, ಮ್ಕಕಳಲ್ಲಿ ಹೆಣ್ಣು-ಗಂಡುಮಕ್ಕಳಿಗೆ ಪ್ರತ್ಯೇಕ ಸಾಮಾಜೀಕರಣ ರೂಪಿಸುವ ಕೆಲಸ ಈ ತೆರನಾದ ಚಿತ್ರಗಳಿಂದ ಕಂಡು ಬರುತ್ತಿದೆ.

ಕೃಷಿಗೆ ಸಂಬಂಧಿಸಿದ ಮಾಹಿತಿಯನ್ನು ಮಕ್ಕಳಿಗೆ ತಿಳಿಸಲು 'ಕೃಷಿ' ಪಾಠವನ್ನು ಈ ತರಗತಿಯಲ್ಲಿ ನೀಡಲಾಗಿದೆ. ಆದರೆ ಕೃಷಿ ಎಂದರೆ ರೈತ, ರೈತ ಎಂದರೆ ಪುರುಷ, ಕೃಷಿಯ ಸಹಾಯಕ ಕೆಲಸಗಳಿಗೆ ಮಹಿಳೆ, ಮಹಿಳೆ ಎಂದರೆ ರೈತನ ಸಹಾಯಕಳಾಗಿ ಕೆಲಸ ನಿರ್ವಹಿಸುವವಳು ಎನ್ನುವ ಸಾಮಾಜೀಕರಣವು ೫ನೇ ತರಗತಿ ಪರಿಸರ ಅಧ್ಯಯನ ಪಾಠದಲ್ಲಿ ದೊರೆಯುತ್ತದೆ. ಇದಕ್ಕೆ ಪುಟ ೯೪ರಿಂದ ೧೦೧ರ ಪುಟಗಳವರೆಗೆ ಚಿತ್ರಗಳು ಪ್ರಕಟಗೊಂಡಿವೆ. (ಪು. ೯೪) ಪುರುಷನ ರೈತ ಚಿತ್ರ. ಪುಟ-೯೮ರಲ್ಲಿ ರೈತನಿಗೆ ಸಹಾಯಕವಾಗಿ ಬೀಜ ಬಿತ್ತನೆ ಕಾರ್ಯ ನಿರ್ವಹಿಸುವ ಚಿತ್ರಗಳು, ಕೃಷಿ ಕಾರ್ಮಿಕಳಾಗಿ ದುಡಿಯುವ ಮಹಿಳೆ ಕುರಿತು ಮಾಹಿತಿ ನೀಡಿರುವುದು - ಹೀಗೆ ನಾನಾ ಬಗೆಯಲ್ಲಿ ಹೆಣ್ಣು ಗಂಡು ಕುರಿತಂತೆ ಸಾಂಪ್ರದಾಯಿಕ ಸಾಮಾಜೀಕರಣ ಕಂಡು ಬಂದಿದೆ. ಮುಂದುವರೆದು 'ಆಹಾರ' ಜೀವದ ಜೀವಾಳ ಪಾಠ-೯ (ಪು. ೧೧೧ರಿಂದ ೧೨೧ರವರೆಗೆ) ಇಲ್ಲಿ ಆಹಾರ ಮಹತ್ವವನ್ನು, ಜೀವಕ್ಕೆ ಒಳ್ಳೆಯ ಆಹಾರದ ಅವಶ್ಯಕತೆಯನ್ನು ತೋರಿಸಿಕೊಡಲಾಗಿದೆ. ಆಹಾರ ಸೇವನೆಯಿಂದ ಮನುಷ್ಯನಿಗೆ ಶಕ್ತಿ ದೊರೆಯುತ್ತದೆ. ಆಹಾರ ಹೇಗಿರಬೇಕು, ಆಹಾರದಲ್ಲಿನ ಪೋಷಕಾಂಶಗಳು, ಆಹಾರ ಪದ್ಧತಿ, ಆಹಾರ ಪದಾರ್ಥಗಳು ಹೀಗೆ ಒಟ್ಟಾರೆ ಮನುಷ್ಯನಿಗೆ ಬೇಕಾದ ಆಹಾರ ಕುರಿತಂತೆ ಮಾಹಿತಿ ನೀಡುವ ಪಾಠ ಇದಾಗಿದೆ. ಆದರೆ ಇಲ್ಲಿಯು ಕೂಡ ಲಿಂಗಾಧಾರಿತವಾದ ಸಾಮಾಜೀಕರಣವನ್ನು ರೂಪಿಸಿರುವುದು ಕಂಡು ಬರುತ್ತದೆ. ಇದಕ್ಕೆ ಆಹಾರ ತಯಾರಿಕೆಯಲ್ಲಿ ಮಹಿಳೆ ಚಿತ್ರವನ್ನು ಪ್ರಕಟಿಸಿರುವುದು, ಆಹಾರ ತಯಾರಿಸುವವರು ಎಂದರೆ ಮಹಿಳೆ ಆಗಿದ್ದಾಳೆ. ಅವಳಿಗೆ ಆಹಾರ ತಯಾರಿಕೆ ಕೆಲಸ ಎನ್ನುವ ಸಂಗತಿಗಳು ಮಕ್ಕಳಲ್ಲಿ ಬೆಳೆಯುವ ಹಾಗೆ ಚಿತ್ರಗಳನ್ನು ಅಳವಡಿಸಲಾಗಿದೆ.

ಒಟ್ಟಾರೆಯಾಗಿ ಪಠ್ಯಗಳ ಮೂಲಕ ಹೆಣ್ಣುಮಕ್ಕಳನ್ನು ೨ನೇ ದರ್ಜೆಯ ಪ್ರಜೆಯಾಗಿ ನೋಡಲಾಗುತ್ತಿದೆ. ಇದರಿಂದ ಹೆಣ್ಣುಮಕ್ಕಳು ಜೀವನಪರ್ಯಂತ ಸಮಸ್ಯೆಗಳ ಸುಳಿಯಲ್ಲಿ ಬದುಕುವಂತಾಗಿದೆ. ಇದಕ್ಕೆ ಪ್ರಸ್ತುತ ಸಮಾಜದಲ್ಲಿ ಹೆಣ್ಣಿಗೆ ನಡೆಯುತ್ತಿರುವ ದೈಹಿಕ ಹಿಂಸೆಯ ಸ್ವರೂಪದಿಂದ ಹಿಡಿದು, ವರದಕ್ಷಿಣೆಗಾಗಿ ಸಾಯಿಸುವ, ಆ್ಯಸಿಡ್ ದಾಳಿ, ಹೆಣ್ಣು ಭ್ರೂಣ ಹತ್ಯೆ, ಸಾಮೂಹಿಕ ಅತ್ಯಾಚಾರ, ಮರ್ಯಾದಾ ಹತ್ಯೆ, ಕೌಟುಂಬಿಕ ದೌರ್ಜನ್ಯ, ಲೈಂಗಿಕ ಕಿರುಕುಳ, ಮಾನಸಿಕ ಹಿಂಸೆ - ಹೀಗೆ ನಾನಾ ಬಗೆಯ ದೈಹಿಕ ಮತ್ತು ಮಾನಸಿಕ ಹಿಂಸೆಗಳು ಮಹಿಳೆಗೆ

ಮುಂದುವರೆದಿವೆ. ಹೀಗಾಗಿ ಹೆಣ್ಣು-ಗಂಡು ಮಕ್ಕಳಿಗೆ ಸಾಮಾಜೀಕರಣ ರೂಪಿಸುವಾಗ ಬಹಳ ಎಚ್ಚರಿಕೆಯಿಂದ, ಲಿಂಗ ಸಮಾನ, ಲಿಂಗಸೂಕ್ಷ್ಮತೆಯ ನೆಲೆಯಲ್ಲಿ ಬೋಧಿಸಬೇಕಾದ ಅವಶ್ಯಕತೆ ಇದೆ. ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ವಲಯಗಳಲ್ಲಿ ಮಕ್ಕಳು ಸಮಾನವಾಗಿ, ಭಾಗವಹಿಸುವಂತೆ, ಮಾನಸಿಕವಾಗಿ ತಯಾರಿಗೊಳಿಸಲು ಲಿಂಗತ್ವ ಸಮಾನತೆಯ ಕಲ್ಪನೆ ಅನಿವಾರ್ಯವಾಗಿದೆ. ಈ ಕಲ್ಪನೆಯನ್ನು ರೂಪಿಸಬೇಕಾದರೆ ಲಿಂಗ ಸಮಾನ ಸಾಮಾಜೀಕರಣದ ಅವಶ್ಯಕತೆ ಇದೆ.

೪.೩. ಸಮಾಜ ವಿಜ್ಞಾನ ಪಠ್ಯಗಳಲ್ಲಿ: ಹೆಣ್ಣು-ಗಂಡುಮಕ್ಕಳ ಸಾಮಾಜೀಕರಣದ ಸ್ವರೂಪ

೬ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕದ ಭಾಗ-೧ರಲ್ಲಿ ಇತಿಹಾಸ ಪರಿಚಯ, ನಮ್ಮ ಕರ್ನಾಟಕ, ಆರ್ಥಿಕ, ಸಮಾಜ, ಪ್ರಾಚೀನ ನಾಗರಿಕತೆ, ವೇದಕಾಲದ ಸಂಸ್ಕೃತಿ, ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮ, ಹೊಸ ಧರ್ಮದ ಉದಯ, ಉತ್ತರ ಭಾರತದ ಪ್ರಮುಖ ರಾಜ ಮನೆತನಗಳು ಇವುಗಳ ಕುರಿತಾಗಿ ಮಾಹಿತಿಯನ್ನು ಕೊಡಲಾಗಿದೆ. ಮೊದಲಿಗೆ ಇತಿಹಾಸ ಪರಿಚಯದಲ್ಲಿ, ಇತಿಹಾಸದ ಪಿತಾಮಹ ಹೆರೋಡೊಟಸ್, ವಿಲಿಯಂ ಜೋನ್ಸ್, ಮ್ಯಾಕ್ಸ್ ಮುಲ್ಲರ್, ಅಬೆ ದಬಾಯ್ಸ್ - ಇವರ ಪರಿಚಯ ಸಾಧನೆ ವಿವರಗಳನ್ನು ಪರಿಚಯಿಸಲಾಗಿದೆ ಪಾಠ-೨ರಲ್ಲಿ ನಮ್ಮ ಕರ್ನಾಟಕ ‘ಕುರಿತಂತೆ ಪಾಠದಲ್ಲಿ ಕರ್ನಾಟಕ ರಾಜ್ಯದ ವಿಭಾಗಗಳ ಚರಿತ್ರೆ, ಜಿಲ್ಲೆಗಳು ಮತ್ತು ಅವುಗಳ ವಿಶಿಷ್ಟತೆ, ಬೆಳೆಗಳು, ಜನಸಂಖ್ಯೆ, ಉದ್ದಿಮೆಗಳು, ನದಿಗಳು ಮುಂತಾದ ಸಂಗತಿಗಳನ್ನು ತಿಳಿಸುವ ಕೆಲಸ ಮಾಡಲಾಗಿದೆ. ಪ್ರಾಕೃತಿಕ ಸಂಪನ್ಮೂಲಗಳು, ಅರಣ್ಯ, ವನ್ಯಮೃಗಗಳು, ಪಕ್ಷಿಧಾಮಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಲಾಗಿದೆ. ಜೊತೆಗೆ ಕರ್ನಾಟಕ ರಾಜ್ಯದ ಕಲೆ, ಸಾಹಿತ್ಯ, ಕ್ರೀಡೆ, ರಾಜಕಾರಣ ಮುಂತಾದ ಕ್ಷೇತ್ರಗಳಲ್ಲಿ ಪ್ರಸಿದ್ಧರಾದವರ ಪರಿಚಯವನ್ನು ಮಕ್ಕಳಿಗೆ ತಿಳಿಸಿಕೊಡುವ ಕೆಲಸ ಈ ಸಮಾಜ ವಿಜ್ಞಾನ ಪುಸ್ತಕದ ಪಾಠಗಳಲ್ಲಿ ಮಾಡಲಾಗಿದೆ. ಆದರೆ ಈ ಕುರಿತಂತೆ ಸಮಾಜ ವಿಜ್ಞಾನದ ಪಾಠಗಳಲ್ಲಿ ಕಂಡು ಬರುವುದೇನೆಂದರೆ, ಕೃಷಿ, ಉದ್ದಿಮೆ ಬೆಳವಣಿಗೆಯಲ್ಲಿ ಪುರುಷರ ಪಾಲು ಇದೆ ಎನ್ನುವುದನ್ನು ನಿರೂಪಿಸಲಿಕ್ಕೆ ಪುರುಷ ವ್ಯಕ್ತಿಯ ಸಾಧನೆಯನ್ನು ತಿಳಿಸಲಾಗಿದೆ. ಕಲೆ, ಸಾಹಿತ್ಯ, ಜಾನಪದ, ನಾಟಕ, ನೃತ್ಯ ಇವುಗಳಿಗೆ ಸಂಬಂಧಿಸಿದಂತೆ ನೋಡಿದರೆ, ಆಧುನಿಕ ಸಾಹಿತ್ಯದಲ್ಲಿ ಹೆಸರು ಮಾಡಿರುವ ವ್ಯಕ್ತಿಗಳನ್ನು ಪರಿಚಯಿಸುವಲ್ಲಿ ಪುರುಷರ ಮೇಲುಗೈಯನ್ನು ಸಾಮಾಜೀಕರಣಗೊಳಿಸಿರುವುದು ಕಂಡು ಬರುತ್ತದೆ. ಇದಕ್ಕೆ ಪುಟ-೧೫ರಲ್ಲಿ “ಆಧುನಿಕ ಕಾಲಕ್ಕೆ ಬಂದರೆ ಕುವೆಂಪು, ಡಿ.ವಿ. ಗುಂಡಪ್ಪ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಪಿ. ಲಂಕೇಶ್, ನಿಸಾರ್ ಅಹಮದ್, ಟಿ.ಪಿ. ಕೈಲಾಸಂ, ತ.ರಾ.ಸು., ನಿರಂಜನ, ಹಾ.ಮಾ. ನಾಯಕ, ಪ್ರಿ. ಸೀತಾರಾಮಯ್ಯ, ಕೆ.ವಿ. ಸುಬ್ಬಣ್ಣ, ಯು.ಆರ್. ಅನಂತಮೂರ್ತಿ, ಬರಗೂರು ರಾಮಚಂದ್ರಪ್ಪ, ಶತಾಯುಷಿ ಜಿ. ವೆಂಕಟಸುಬ್ಬಯ್ಯ, ಜಿ.ಎಸ್. ಶಿವರುದ್ರಪ್ಪ, ದಲಿತ ಕವಿ ಡಾ. ಸಿದ್ಧಲಿಂಗಯ್ಯ,

ಡಾ. ಡಿ.ಆರ್. ನಾಗರಾಜ್, ಕಿ.ರಂ. ನಾಗರಾಜ್, ನಾ. ಡಿಸೋಜಾ, ಕೋಟಗಾನಹಳ್ಳಿ ರಾಮಯ್ಯ, ಕೆ.ಬಿ. ಸಿದ್ಧಯ್ಯ, ದೊಡ್ಡರಂಗೇಗೌಡ ಮುಂತಾದವರನ್ನು ಮತ್ತು ಮಹಿಳೆಯರಲ್ಲಿ ಎಂ.ಕೆ. ಇಂದಿರಾ, ಪ್ರತಿಭಾ ನಂದಕುಮಾರ್, ಡಾ. ಅನುಪಮಾರವರ ಪರಿಚಯ ಕೊಡಲಾಗಿದೆ. ಇಲ್ಲಿ ೨೪ ಪುರುಷ ಸಾಹಿತಿಗಳ ಜೊತೆ ಕೇವಲ ೩ ಮಹಿಳಾ ಸಾಹಿತಿಗಳ ಭಾವಚಿತ್ರಗಳನ್ನು ಮುದ್ರಿಸಲಾಗಿದೆ. ಸಾಹಿತ್ಯದಲ್ಲಿ ಪುರುಷ ಪ್ರಧಾನತೆಯ ಮೂಲಕ ಸಾಮಾಜೀಕರಣವನ್ನು ಸ್ಥಿರಗೊಳಿಸುವ ಪ್ರಕ್ರಿಯೆ ನಡೆದಿದೆ.

'ಕಲೆ'ಗೆ ಸಂಬಂಧಿಸಿದಂತೆ, ಪುರುಷರಲ್ಲಿ ರಂಗಭೂಮಿಯಲ್ಲಿ ಗುಬ್ಬಿ ವೀರಣ್ಣ, ಸುಬ್ಬಯ್ಯ ನಾಯ್ಡು, ಕೆ. ಹಿರಣ್ಣಯ್ಯ ಹಾಗೆಯೇ ನಟರಲ್ಲಿ ಡಾ. ರಾಜಕುಮಾರ್, ಡಾ. ವಿಷ್ಣುವರ್ಧನ್, ಶಂಕರ್‌ನಾಗ್ ಮುಂತಾದವರು ಹಾಗೂ ಮಹಿಳೆಯರಲ್ಲಿ ರಂಗಭೂಮಿಗೆ ಸಂಬಂಧಿಸಿದಂತೆ, ಶ್ರೀಮತಿ ಮಾಯಾರಾವ್, ಒಬ್ಬರ ಭಾವಚಿತ್ರವನ್ನು ಅವರ ಜೊತೆ ಹಾಕಲಾಗಿದೆ. ಕಲೆಯಲ್ಲಿಯೂ ಪುರುಷರ ಪರವಾದ ಸಾಮಾಜೀಕರಣಗೊಳಿಸುವ ಕೆಲಸ ಮಾಡಲಾಗಿದೆ. ಜಾನಪದ ಲೋಕದಲ್ಲಿ ಜನಪದ ತಜ್ಞರ ಪರಿಚಯದಲ್ಲಿ ಎಚ್.ಎಲ್. ನಾಗೇಗೌಡ, ಆರ್.ಎಸ್. ನಾಯ್ಡು, ರುಮಾಲೆ ಚನ್ನಬಸಯ್ಯ, ವೆಂಕಟಪ್ಪ ಇವರು ಜಾನಪದ ಲೋಕದಲ್ಲಿ ಮೂಡಲಪಾಯ, ಯಕ್ಷಗಾನ, ಗಾರುಡಿ ಕುಣಿತ, ಡೊಳ್ಳು ಕುಣಿತ, ಕಂಸಾಳೆ ಕುಣಿತ ಮುಂತಾದ ಕಲೆಗಳಿಗೆ ಪುರುಷರೇ ಕೊಡುಗೆ ನೀಡಿದ್ದಾರೆ ಎನ್ನುವುದನ್ನು ತಿಳಿಸಲಾಗಿದೆ. ಶಿಕ್ಷಣ ಮತ್ತು ಆರೋಗ್ಯದಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ಮತ್ತು ಸಿ.ಎನ್.ಆರ್. ರಾವ್, ಸಿ.ವಿ. ರಾಮನ್ ಇನ್ನುಳಿದಂತೆ ಶಿಕ್ಷಣ ಧಾರ್ಮಿಕ ರಂಗದಲ್ಲಿ ಪುರುಷರೇ ಸಾಧನೆಯನ್ನು ಮಾಡಿದವರು ಎಂಬುದನ್ನು ಸ್ಥಾಪಿಸುವ ಕೆಲಸವಾಗಿದೆ. ಆದರೆ ಮುಖ್ಯವಾಗಿ ಇಲ್ಲಿ ಸ್ತ್ರೀ-ಪುರುಷರ ಸಮಾನ ಪರಿಚಯ ಮಾಡುವ ಕೆಲಸವಾಗಿಲ್ಲ ಎಷ್ಟೋ ಮಹಿಳೆಯರು ಅನೇಕ ರಂಗದಲ್ಲಿ ವಲಯದಲ್ಲಿ ಸಾಧನೆ ಮಾಡಿದ್ದರೂ ಅವರ ಕುರಿತಾಗಿ ಶೋಧಿಸಿ ದಾಖಲಿಸುವ ಕೆಲಸ ಮಾಡಿಲ್ಲ. ಇದರಿಂದ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದಲ್ಲಿ ಪುರುಷ ಪರವಾದ ಸಾಮಾಜೀಕರಣ ಉಂಟಾಗುವುದರ ಜೊತೆಗೆ ಮಕ್ಕಳಲ್ಲಿ ಲಿಂಗ ತಾರತಮ್ಯದ ಮನೋಭಾವನೆಗೆ ಕಾರಣವಾಗುತ್ತದೆ. ಸಾಂಸ್ಕೃತಿಕ ಮತ್ತು ರಾಜಕೀಯ ಮುತ್ಸದ್ದಿಗಳು ಸಮಾಜವಾದಿ ಚಳುವಳಿಗಳಿಗೆ ಅಡಿಪಾಯ ಹಾಕಿದವರು. ಪರಿಸರ, ಅರಣ್ಯ, ಕ್ರೀಡೆ, ಕೃಷಿ ಮತ್ತು ಉದ್ದಿಮೆಗಳಲ್ಲಿ ಪುರುಷರನ್ನೇ ಸಾಧಕರೆಂದು ಹೆಚ್ಚಾಗಿ ಅವರ ಪರಿಚಯವನ್ನು ಮಾಡಿಸಿರುವುದು, ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆಗೆ ಕಾರಣವಾಗಿದೆ. ಕಲೆ, ಸಾಹಿತ್ಯ, ಸಂಗೀತ, ಜಾನಪದ, ನಾಟಕ, ನೃತ್ಯದಲ್ಲಿಯೂ ಪುರುಷರೇ ಹೆಚ್ಚು ಇದ್ದಾರೆ ಎಂದು ನಂಬಲು ಚಿತ್ರಗಳು ಹಾಕಿರುವುದು ಪುರುಷ ರಾಜಕಾರಣ ಕೆಲಸ ಮಾಡಿರುವುದು ಕಂಡು ಬರುತ್ತದೆ. ಇದಕ್ಕೆ (ಪು. ೩೪, ೩೫) ಉದಾಹರಣೆಯಾಗಿ ಗಮನಿಸಬಹುದಾಗಿದೆ.

೬ನೇ ತರಗತಿ ಸಮಾಜ ವಿಜ್ಞಾನ ಭಾಗ-೨ರಲ್ಲಿ ನಮ್ಮ ಕರ್ನಾಟಕ (ಮುಂದುವರೆದ ಭಾಗ)ಎನ್ನುವ ಪಾಠದಲ್ಲಿ ಕಲ್ಯಾಣ (ಹೈದ್ರಾಬಾದ್) ಕರ್ನಾಟಕ ಭಾಗದ ಚಾರಿತ್ರಿಕ ಹಿನ್ನೆಲೆ, ಪ್ರಾಕೃತಿಕ ಸಂಪನ್ಮೂಲ, ಅರಣ್ಯ, ವನ್ಯಮೃಗ ಧಾಮಗಳು, ಕೃಷಿ ಬೆಳವಣಿಗೆ, ಉದ್ದಿಮೆಗಳು, ಕಲೆ, ಸಾಹಿತ್ಯ, ಸಂಗೀತ, ಜಾನಪದ, ನಾಟಕ ಕುರಿತಂತೆ ಪರಿಚಯಿಸುವ ಕೆಲಸದಲ್ಲಿ ದಾಖಲಿಸಿದ ಪುರುಷ-ಮಹಿಳೆಯರ ಕುರಿತಂತೆ ಮಾಹಿತಿಯನ್ನು ವಿಶ್ಲೇಷಿಸಿದರೆ, ಸ್ತ್ರೀ-ಪುರುಷರ ಕುರಿತಾಗಿ ಹೊಂದಿರುವ ಧೋರಣೆಯ ಗೊತ್ತಾಗುತ್ತದೆ. ಇದಕ್ಕೆ ವಚನ ಚಳುವಳಿಯಲ್ಲಿ ಪುರುಷರು ಬಸವಣ್ಣ, ಸಿದ್ಧರಾಮ, ಜೇಡರ(ದೇವರ) ದಾಸಿಮಯ್ಯ, ಅಲ್ಲಮಪ್ರಭು ಹಾಗೂ ಮಹಿಳೆಯರಲ್ಲಿ ಅಕ್ಕಮಹಾದೇವಿ ಒಬ್ಬರ ಬಗ್ಗೆ ಮಾತ್ರ ತಿಳಿಸಲಾಗಿದೆ. ದಾಸಸಾಹಿತ್ಯದಲ್ಲಿ ಪುರಂದರದಾಸ, ಕನಕದಾಸ, ರಾಘವೇಂದ್ರ ತೀರ್ಥ ಮುಂತಾದವರನ್ನು ಪರಿಚಯಿಸಲಾಗಿದೆ. ತತ್ವ ಪದಕಾರರು, ಸಾಧು-ಸಂತರು, ಫಕೀರರು ಕಟ್ಟಿದ ಹಾಡುಗಳನ್ನು ತತ್ವಪದಗಳು ಎಂದು ಕರೆಯಬಹುದು. ಮುಂದುವರೆದು ಚೆನ್ನೂರ ಜಲಾಲ್ ಸಾಬ್, ಹನುಮಂತವ್ವ ಮುಂತಾದವರು ತತ್ವಪದಗಳನ್ನು ರಚಿಸಿದ್ದಾರೆ. ಅನೇಕ ಅನಕ್ಷರಸ್ಥರು ತತ್ವಪದಗಳನ್ನು ಕಟ್ಟಿ ಹಾಡಿದ್ದಾರೆ.

ಆಧುನಿಕ ಕಾಲಕ್ಕೆ ಬಂದರೆ ಕಲಬುರಗಿ ವಿಭಾಗದಲ್ಲಿ ಸಾಹಿತ್ಯವನ್ನು ಶ್ರೀಮಂತ ಗೊಳಿಸಿರುವವರೆಂದರೆ ಸಿದ್ಧಯ್ಯ ಪುರಾಣಿಕ್, ಜಯತೀರ್ಥ, ರಾಜಪುರೋಹಿತ, ಶಾಂತರಸ, ಪಂಡಿತ ತಾರನಾಥ್, ಬೀಚಿ, ಮುದೇನೂರು ಸಂಗಣ್ಣ, ಸಿಂಪಿ ಲಿಂಗಣ್ಣ, ಚೆನ್ನಣ್ಣ ವಾಲೀಕರ, ಜಂಬಣ್ಣ ಅಮರಚಿಂತ ಮುಂತಾದವರು ಎಂದು ದಾಖಲಿಸಲಾಗಿದೆ. ಅಂದರೆ (ಹೈದ್ರಾಬಾದ್) ಕಲ್ಯಾಣ ಕರ್ನಾಟಕ ಭಾಗದಲ್ಲಿ ಮಹಿಳೆಯರ ಸಾಹಿತ್ಯವನ್ನು ದಾಖಲಿಸದೆ ಇರುವುದು ಮತ್ತು ಪುರುಷ ಸಮಾನವಾಗಿ ಮಹಿಳೆಯರನ್ನು ಪರಿಚಯಿಸದೇ ಇರುವುದು ಎದ್ದು ಕಾಣುತ್ತದೆ. ಏಕೆಂದರೆ ಮಹಿಳಾ ಸಾಹಿತಿಗಳಲ್ಲಿ ಶ್ರೀಮತಿ ಶೈಲಜಾ ಉಡಚಣ, ಜಯದೇವಿ ತಾಯಿ ಲಿಗಾಡೆಯವರನ್ನು ಮಾತ್ರ ಉಲ್ಲೇಖಿಸಲಾಗಿದೆ. ಸಂಗೀತ ಕ್ಷೇತ್ರಗಳಲ್ಲಿ ಸಿದ್ಧರಾಮ ಜಂಬಲದಿನ್ನಿ, ಪಂಡಿತ ತಾರಾನಾಥ, ಗಜಲ್ ಗುಂಡಮ್ಮ, ಸುಭದ್ರಮ್ಮ ಮನ್ಸೂರ್ ಸಂಗೀತ ಕ್ಷೇತ್ರಕ್ಕೆ ಕಾಣಿಕೆ ನೀಡಿದ್ದಾರೆ ಎಂದು ದಾಖಲಿಸುವಲ್ಲಿ ಲಿಂಗ-ಸಮಾನತೆಯ ಕಂಡುಬಂದರೆ, ಕಲಬುರ್ಗಿ ಭಾಗದಲ್ಲಿ ಜನಪದರ ದೊಡ್ಡಾಟ, ಸಣ್ಣಾಟ, ತೊಗಲುಗೊಂಬೆ ಸಂದರ್ಶನ ಮುಂತಾದವುಗಳಿವೆ. ಇದರಲ್ಲಿ ಬೆಳಗಲ್ ವೀರಣ್ಣರವರು ತೊಗಲುಗೊಂಬೆ ಆಟದಲ್ಲಿ ಪ್ರಸಿದ್ಧರು ಎಂದು ದಾಖಲಿಸಿರುವುದು ಕಂಡು ಬರುತ್ತದೆ. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿನ ಕಲೆ, ಸಾಹಿತ್ಯ, ಸಂಗೀತ, ಜನಪದ, ನಾಟಕ ಕುರಿತಂತೆ ಪರಿಚಯಿಸುವ ವ್ಯಕ್ತಿಗಳಲ್ಲಿ ಪುರುಷ ಸಾಮಾಜೀಕರಣ ಸ್ಥಾಪಿಸಿರುವುದು ಸ್ಪಷ್ಟವಾಗುತ್ತದೆ. ಇದಕ್ಕೆ (ಪು. ೨೨) ಸಂಗೀತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪಂಡಿತ ಭೀಮಸೇನ್ ಜೋಶಿ, ಪಂಡಿತ ಮಲ್ಲಿಕಾರ್ಜುನ ಮನ್ಸೂರ್, ಬಾಲೇಖಾನ್(ಸಿತಾರ್), ವಿದುಷಿ ಗಂಗೂಬಾಯಿ ಹಾನಗಲ್, ಪಂಡಿತ ವೆಂಕಟೇಶ್ ಕುಮಾರ್, ಪಂ. ಬಸವರಾಜ ರಾಜಗುರು ಮುಂತಾದ

ಸಂಗೀತಗಾರರು ಧಾರವಾಡದವರು ಎಂದು ಪರಿಚಯಿಸಿರುವುದರಲ್ಲಿ ಪುರುಷರ ಪರಿಚಯ ಎದ್ದು ಕಾಣುತ್ತದೆ.

ಮಧ್ಯಯುಗದಲ್ಲಿ ಅನೇಕ ಪ್ರಮುಖ ಕನ್ನಡ ಕಾವ್ಯಗಳನ್ನು ರಚಿಸಿದ ರನ್ನ, ನಾಗಚಂದ್ರ, ನಯಸೇನ, ಕುಮಾರವ್ಯಾಸ, ಚಾಮರಸ, ಬಸವಣ್ಣ, ಕನಕದಾಸ, ಶಿಶುನಾಳ ಶರೀಫ್ ಮುಂತಾದವರು ಬೆಳಗಾವಿ ವಿಭಾಗಕ್ಕೆ ಸೇರಿದವರು, ಇನ್ನು ವಚನ ಪಿತಾಮಹ ಫ.ಗು. ಹಳಕಟ್ಟಿ, ರೆವರೆಂಡ್ ಕಿಟ್ಟೆಲ್, ಭೂಸನೂರಮಠ, ವಿ.ಕೃ.ಗೋಕಾಕ್, ಜ್ಞಾನಪೀಠ ಪ್ರಶಸ್ತಿ ವಿಜೇತ ದ.ರಾ. ಬೇಂದ್ರೆ, ದಿನಕರ ದೇಸಾಯಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ್ ಕಂಬಾರ, ಬಸವರಾಜ ಕಟ್ಟೀಮನಿ, ಎಂ.ಎಂ. ಕಲುಬುರ್ಗಿ, ಆದ್ಯ ರಂಗಾಚಾರ್ಯ(ಶ್ರೀರಂಗ) ಮುಂತಾದವರು ಆಧುನಿಕ ಯುಗದಲ್ಲಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಜಾನಪದಕ್ಕೆ ಸಂಬಂಧಿಸಿದಂತೆ ಹುಕ್ಕೇರಿ ಬಾಳಪ್ಪ, ಸುಕ್ರಿ ಬೊಮ್ಮಗೌಡ ನಾಟಕ ವಲಯಗಳಲ್ಲಿ ಪುರುಷ ಸಾಮಾಜೀಕರಣಗೊಳಿಸುವ ಕೆಲಸ ಆಗಿದೆ ಹೊರತು, ಹೆಣ್ಣು-ಗಂಡಿಗೆ ಸಮಾನ ಸಾಮಾಜೀಕರಣ ರೂಪಿಸುವಲ್ಲಿ ವಿಫಲಗೊಂಡಿರುವುದು ಕಂಡು ಬರುತ್ತದೆ. ಈ ತೆರನಾದ ಸಾಮಾಜೀಕರಣಕ್ಕೆ ಒಳಗಾದ ಮಕ್ಕಳು ಸಮಾಜದಲ್ಲಿ ವ್ಯಕ್ತಿಯನ್ನು ನೋಡುವಾಗ ಯಾವ ಲಿಂಗಕ್ಕೆ ಹೆಚ್ಚು ಒತ್ತು ಕೊಡಬೇಕು. ಯಾವ ಲಿಂಗ ಸಾಧನೆ ಮಾಡಿದೆ ಎನ್ನುವ ಚಾರಿತ್ರಿಕ ಅಂಶಗಳಿಂದ ಪ್ರೇರಣೆಗೊಂಡು ಕೊನೆಗೆ ಹೆಚ್ಚು ಸಾಧನೆ ಮಾಡಿರುವ ಲಿಂಗದ (ಪುರುಷ ಪರವಾದ) ಸಾಮಾಜೀಕರಣಕ್ಕೆ ಒಳಗಾಗುವ ಅಪಾಯವಿರುತ್ತದೆ.

ಏಳನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕ ಭಾಗ-೧ರಲ್ಲಿ ಇತಿಹಾಸ ವಿಭಾಗದಲ್ಲಿ ೮ ಪಾಠಗಳಿವೆ. ಪೌರನೀತಿ ಭಾಗದಲ್ಲಿ ೩ ಪಾಠಗಳಿವೆ. ಭೌಗೋಳಿಕ ವಿಜ್ಞಾನದಲ್ಲಿ ೨ ಪಾಠಗಳಿವೆ. ಮೊದಲಿಗೆ ಈ ತರಗತಿಯ ಸಮಾಜ ವಿಜ್ಞಾನ ಪುಸ್ತಕದಲ್ಲಿ ಇತಿಹಾಸ ವಿಭಾಗದಲ್ಲಿ ಚಾರಿತ್ರಿಕ ಅಂಶಗಳನ್ನು ಪರಿಚಯಿಸುವಾಗ ರಾಜರ ಆಳ್ವಿಕೆಯ ಸಾಮಾಜಿಕ ಸ್ಥಿತಿಯನ್ನು ವಿವರಿಸಲಾಗಿದೆ. ಹೀಗೆ ವಿವರಿಸುವಾಗ ಹೆಣ್ಣುಮಕ್ಕಳಿಗೆ ಸಂಬಂಧಿಸಿದಂತೆ, "ಬಾಲ್ಯವಿವಾಹ, ಸತಿಪದ್ಧತಿ, ದೇವದಾಸಿ ಪದ್ಧತಿ, ರೂಢಿಯಲ್ಲಿದ್ದವು ಏಕಪತ್ನಿತ್ವ ಸಾಮಾನ್ಯವಾಗಿದ್ದರೂ, ಶ್ರೀಮಂತ ಅರಸರು ಬಹುಪತ್ನಿತ್ವ ಅನುಸರಿಸುತ್ತಿದ್ದರು. ಸ್ತ್ರೀಯರನ್ನು ಗೌರವಿಸಲಾಗುತ್ತಿತ್ತು"(ಪು. ೭). ಹೀಗೆ ಹೇಳಿ ಇತಿಹಾಸದ ಅರಸರ ಮನೆತನಗಳನ್ನು ಪರಿಚಯಿಸುವಾಗ ಅಲ್ಲಿಯ ಹೆಣ್ಣು ಮಕ್ಕಳಿಗೆ ಈ ಅನಿಷ್ಟ ಪದ್ಧತಿಗಳು ಇದ್ದವು ಎಂದು ಹೇಳುವುದಕ್ಕಿಂತ, ಇದನ್ನು ಬದಲಾಯಿಸಿ ಶ್ರೀಮಂತರಿಗೆ ಗೌರವ ಸ್ಥಾನಗಳಿದ್ದವು ಎಂದು ಹೇಳಿದ್ದರೆ ಸಾಕಿತ್ತು. ಅದರೆ ಹೆಣ್ಣಿಗೆ ಅಂಟಿಸಲಾದ ಅನಿಷ್ಟ ಪದ್ಧತಿಗಳನ್ನು ಪರಂಪರಾಗತವಾಗಿ ಪಠ್ಯಗಳ ಮೂಲಕ ಪರಿಚಯಿಸುವ ಅಗತ್ಯ ಏನಿತ್ತು ಎನ್ನುವ ಪ್ರಶ್ನೆ ಕಾಡುತ್ತದೆ. ಇದೇ ತರಗತಿಯ ಪಾಠ-೩ರಲ್ಲಿ 'ಭಕ್ತಿಪಂಥ ಹಾಗೂ ಸೂಫಿ ಪರಂಪರೆ' ಎಂಬ ಪಾಠದಲ್ಲಿ ದಕ್ಷಿಣ ಮತ್ತು ಉತ್ತರ ಭಾರತದಲ್ಲಿ ಭಕ್ತಿಪಂಥ ಹಾಗೂ ಸೂಫಿ ಪರಂಪರೆ ಇದರಲ್ಲಿ ಮಹಿಳೆಯರಲ್ಲಿ ಆಂಡಾಳ್, ಅಕ್ಕಮಹಾದೇವಿ, ಮೀರಾಬಾಯಿ ಇದ್ದ ಪುರುಷರಲ್ಲಿ ಪುರಂದರದಾಸರು, ಕನಕದಾಸರು, ಶಿಶುನಾಳ ಶರೀಫರು, ಕಬೀರದಾಸ, ಗುರುನಾನಕರು,

ತುಳಸೀದಾಸರು, ಚೈತನ್ಯರು, ಸೂಫಿ ಪಂಥರಲ್ಲಿ ನಿಜಾಮುದ್ದೀನ್ ಔಲಿಯ, ಖ್ವಾಜಾ ಬಂದೇನವಾಜ್, ಮೊಹಿದ್ದೀನ್ ಚಿಸ್ತಿ ಇವರುಗಳ ಸಾಧನೆಯ ಪರಿಚಯಿಸಲಾಗಿದೆ.

ಇದೇ ತರಗತಿಯ ಪಾಠ–೪ರಲ್ಲಿ ನಾಯಕರ, ಪಾಳೆಗಾರರ ಮತ್ತು ನಾಡಪ್ರಭುಗಳ ಸಾಧನೆಯನ್ನು ನಿರೂಪಿಸಲಾಗಿದೆ. ಇದರಲ್ಲಿ ರಾಣಿ ಚೆನ್ನಮ್ಮಾಜಿ ಒಬ್ಬರೇ ಮಹಿಳೆಯನ್ನು ಪರಿಚಯಿಸಿದ್ದಾರೆ. ಉಳಿದಂತೆ ಎಲ್ಲಾ ರಾಜರ(ಪುರುಷರು) ಚರಿತ್ರೆಯನ್ನು ಪರಿಚಯಿಸಲಾಗಿದೆ. ಮುಂದುವರೆದು ಪಾಠ–೫ರಲ್ಲಿ 'ಮೈಸೂರು ಒಡೆಯರು' ಇದರಲ್ಲಿ ಪುರುಷರ ಸಾಧನೆಯನ್ನು ಪರಿಚಯಿಸಲಾಗಿದೆ. ಆದರೆ ಸತತವಾಗಿ ಸಮಾಜ ವಿಜ್ಞಾನದ ಇತಿಹಾಸ ವಿಭಾಗದಲ್ಲಿ ಪುರುಷರ ಇತಿಹಾಸವನ್ನು ಪರಿಚಯಿಸುವ ಕೆಲಸ ನಡೆದಿದೆ. ಮಹಿಳೆಯರ ಚರಿತ್ರೆ ಅವರ ಕೊಡುಗೆ, ಸಾಧನೆಯನ್ನು ಪರಿಚಯಿಸುವ ಪಠ್ಯಗಳು ಈ ತರಗತಿಯಲ್ಲಿ ಹೆಚ್ಚು ಕಂಡು ಬರುವುದಿಲ್ಲ. ಇದು ಹೆಣ್ಣು–ಗಂಡು ಮಕ್ಕಳ ಸಾಮಾಜೀಕರಣದ ಮೇಲೆ ಪರಿಣಾಮ ಬೀರುವ ಸಂಗತಿಯಾಗಿದೆ. ಅದೇನೆಂದರೆ ಮಹಿಳೆಯರ ಸಾಧನೆ, ಕೊಡುಗೆ ಪುರುಷರಿಗೆ ಸಮಾನವಾಗಿಲ್ಲ ಎನ್ನುವುದು. ಹಾಗಾದರೆ ಮಹಿಳೆಗೆ ಇತಿಹಾಸ ಇಲ್ಲವೇ ? ಇತಿಹಾಸದಲ್ಲಿ ಮಹಿಳೆಯರ ಸಾಧನೆ ಇಲ್ಲವೇ ? ಮಹಿಳೆಯರ ಕುರಿತಾಗಿ ಇತಿಹಾಸ ರಚನೆಗೊಂಡಿಲ್ಲ ಯಾಕೆ ? ಮಹಿಳೆಯರ ಕುರಿತಾಗಿ ಇತಿಹಾಸ ಅರಿಯುವುದು ಯಾವಾಗ ? ಹೀಗೆ ಮಹಿಳೆಯರ ಕುರಿತಂತೆ ಪ್ರಶ್ನೆಗಳನ್ನು ಹಾಕಿಕೊಂಡರೆ ಪಠ್ಯಪುಸ್ತಕಗಳಲ್ಲಿ ಗಂಡುಮಕ್ಕಳ ಕುರಿತಾದ ಸಾಮಾಜೀಕರಣದ ಪ್ರಭಾವದಿಂದಾಗಿ ಹೆಣ್ಣುಮಕ್ಕಳ ಚರಿತ್ರೆಯ ಸಂಗತಿಗಳನ್ನು ಮರೆಮಾಚಿರುವುದು ಕಂಡುಬರುತ್ತದೆ. ಮಕ್ಕಳಲ್ಲಿ ಪುರುಷರ ಪರವಾದ, ಪಿತೃಪ್ರಧಾನವಾದ ಸಾಮಾಜೀಕರಣ ರೂಢಿಸಿ, ನಂತರ ಅವರಲ್ಲಿ ಲಿಂಗ ಸಮಾನತೆ ಕುರಿತಾಗಿ ಮಾತನಾಡಿದರೆ ಮಕ್ಕಳಲ್ಲಿ ಲಿಂಗ ಸಮಾನತೆಯ ಆಶಯ ಮೂಡಲು ಸಾಧ್ಯವಿಲ್ಲ. ಅದನ್ನು ಜಾರಿಗೆ ತರುವ ಹಾಗೆ ನೋಡಿಕೊಂಡಾಗ ಮಾತ್ರ ಸಮಾನವಾದ ಸಾಮಾಜೀಕರಣ ಮೂಡಲು ಸಾಧ್ಯ. ಸಂವಿಧಾನ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳು ಎನ್ನುವ ಪಾಠ–೧೦ರಲ್ಲಿ ಧರ್ಮ, ಕುಲ ಜಾತಿ, ಲಿಂಗ, ಜನ್ಮಸ್ಥಳ ಇವುಗಳ ಆಧಾರದಲ್ಲಿ ರಾಜ್ಯವು ಪಕ್ಷಪಾತ ಮಾಡುವಂತಿಲ್ಲ, ಎಂದಾದರೂ ವಾಸ್ತವದಲ್ಲಿ ಪಠ್ಯಪುಸ್ತಕದ ಮೂಲಕ ಸಾಮಾಜೀಕರಣಗೊಳಿಸುವ ಸಂಗತಿಗಳು ಕಂಡು ಬರುತ್ತಿವೆ.

ಏಳನೇ ತರಗತಿ 'ಸಮಾಜ ವಿಜ್ಞಾನ' ಪಠ್ಯ ಪುಸ್ತಕದ ಭಾಗ–೨ರಲ್ಲಿ ಬರುವ ಚರಿತ್ರೆ ಮತ್ತು ರಾಜಕೀಯ ಕುರಿತ ಪಾಠಗಳಲ್ಲಿ, ಪುರುಷರ ಇತಿಹಾಸವೇ ಎದ್ದು ಕಾಣುತ್ತದೆ. ಇನ್ನು ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆ ಪಾಠ–೪ರಲ್ಲಿ ಭಾರತೀಯ ಸಮಾಜದ ದೌರ್ಬಲ್ಯಗಳ ಕುರಿತಾಗಿ ಮತ್ತು ಸಮಾಜದಲ್ಲಿರುವ ಮೌಢ್ಯತೆಗಳ ಕುರಿತಾಗಿ ಸಮಾಜ ಸುಧಾರಕರು ಸಮಾಜವನ್ನು ಸುಧಾರಿಸಲು ಶ್ರಮವಹಿಸಿದರು ಎನ್ನುವ ಸಂದೇಶದಲ್ಲಿ ರಾಜಾರಾಮ ಮೋಹನ್‌ರಾಯ್, ಎಂ.ಜಿ. ರಾನಡೆ, ಮಹಾತ್ಮ ಜ್ಯೋತಿಬಾ ಫುಲೆ, ಸ್ವಾಮಿ ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸರು, ಇದರಲ್ಲಿ ಮಾನವ ಹಿತ ಮತ್ತು ಸಮಾಜ ಸೇವೆಯನ್ನು ನಿರಂತರವಾಗಿ ನಡೆಸಿಕೊಂಡು ಹೋಗಲು ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸಿದರು. ಸ್ತ್ರೀಯರ ಬಗ್ಗೆ ಅಪಾರ ಕಾಳಜಿ ಹಾಗೂ ಗೌರವ ಹೊಂದಿದ್ದರು ಎಂದು ಬರೆಯಲಾಗಿದೆ. ಆದರೆ ಇದೇ ಸಾಮಾಜಿಕ ಸುಧಾರಣೆಗಳಲ್ಲಿ

ಮಹಿಳೆಯರಿದ್ದಾರೆ; ಅವರನ್ನು ಇಲ್ಲಿ ಪರಿಚಯಿಸಲಾಗಿಲ್ಲ. ಕೇವಲ ಸಾವಿತ್ರಿಬಾಯಿ ಪುಲೆ, ತಾರಾಭಾಯಿ ಸಿಂಧೆ, ಪಂಡಿತ ರಮಾಬಾಯಿ ಹಾಗೂ ಇಬ್ಬರು ಪಾಶ್ಚಿಮಾತ್ಯ ಮಹಿಳೆಯರನ್ನು ಪರಿಚಯಿಸಲಾಗಿದೆ.

ಮುಂದುವರೆದು ಪಾಠ-೫ "ಸ್ವಾತಂತ್ರ್ಯ ಹೋರಾಟಗಳು' ಇದರಲ್ಲಿ ಇದೇ ಸಾಮಾಜೀಕರಣ ಮುಂದುವರೆದಿದೆ. ಉದಾ: ಝಾನ್ಸಿ ರಾಣಿ ಲಕ್ಷ್ಮೀಬಾಯಿ ಒಬ್ಬ ಮಹಿಳೆ ಸ್ವಾತ್ರಂತ್ರ್ಯಕ್ಕಾಗಿ ಹೋರಾಡಿದರು ಎನ್ನುವ ಸಂದೇಶ ನೀಡಲಾಗಿದೆ. ಮುಂದುವರೆದು ಸ್ವಾತಂತ್ರ್ಯದ ನಂತರ ಆದ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಪ್ರಮುಖ ನಾಯಕರನ್ನು ಪರಿಚಯಿಸುವ ಸಂದೇಶ ಇರುವಲ್ಲಿ ಯಾರೊಬ್ಬ ಮಹಿಳೆಯರು ಇಲ್ಲದಿರುವುದು ಪುರುಷ ಪ್ರಧಾನತೆ ಸಾಮಾಜೀಕರಣ ಪಠ್ಯದಲ್ಲಿ ಪುನರ್‌ಸ್ಥಾಪಿಸುವ ಕೆಲಸ ನಡೆದಿರುವುದು ಕಂಡು ಬರುತ್ತದೆ. ಇದಕ್ಕೆ ಸಾಕ್ಷಿ ಎನ್ನುವಂತೆ ಪಾಠ-೫ರಲ್ಲಿ "ಸ್ವಾತಂತ್ರ್ಯ ಹೋರಾಟಗಳು", ಎನ್ನುವ ಪಾಠದಲ್ಲಿ ಭಾರತೀಯರು ತಮ್ಮ ಸ್ವಾತಂತ್ರ್ಯಕ್ಕಾಗಿ ಅನೇಕ ಹೋರಾಟಗಳನ್ನು ಮಾಡಿದರು. ಭಾರತೀಯರ ಇತಿಹಾಸದಲ್ಲಿಯೇ ಇದೊಂದು ಮೈಲಿಗಲ್ಲು ಎಂದು ಸ್ವಾತಂತ್ರ್ಯ ಹೋರಾಟದ ವಿವಿಧ ಮಜಲುಗಳನ್ನು ಪರಿಚಯಿಸುವಾಗ ಹೆಚ್ಚಾಗಿ ಪುರುಷ ಹೋರಾಟಗಾರರನ್ನು, ಪುರುಷ ಸೇನಾನಿಗಳನ್ನು ಪರಿಚಯಿಸಲಾಗಿದೆ. ಕೇವಲ ಝಾನ್ಸಿ ರಾಣಿ ಲಕ್ಷ್ಮೀಬಾಯಿ ಅವರೊಬ್ಬರನ್ನು ಬಿಟ್ಟರೆ, ಉಳಿದಂತೆ ಪುರುಷ ಹೋರಾಟಗಾರರ ಹೆಸರುಗಳನ್ನು ಹೆಚ್ಚಾಗಿ ದಾಖಲಿಸಲಾಗಿದೆ. ಇದಕ್ಕೆ ಉದಾ: ಮಂಗಲ್ ಪಾಂಡೆ, ತಾಂತ್ಯಾ ಟೋಪಿ, ನಾನಾ ಸಾಹೇಬ್, ಮುಂಡರಗಿ ಭೀಮರಾಯ್, ಕುವರಸಿಂಗ್ ಇನ್ನು ಇದೇ ಪಾಠದಲ್ಲಿ ಮುಂದುವರೆದು ಸ್ವಾತಂತ್ರ್ಯ ಚಳುವಳಿಯಲ್ಲಿ ೧೮೮೫-೧೯೧೯ರವರೆಗಿನ ಹೆಚ್ಚು ಪುರುಷ ನಾಯಕರ ಸಾಧನೆ ಮತ್ತು ಹೆಸರುಗಳನ್ನು ಕೊಡಲಾಗಿದೆ. ಎ.ಒ. ಹ್ಯೂಮ್, ಉಮೇಶ್‌ಚಂದ್ರ ಬ್ಯಾನರ್ಜಿ, ಸಯ್ಯದ್ ಬದ್ರುದ್ದೀನ್ ತ್ಯಾಬ್ಜಿ, ಫಿರೋಜ್ ಷಾ ಮೆಹತಾ, ದಾದಾಬಾಯಿ ನವರೋಜಿ, ಸುರೇಂದ್ರನಾಥ್ ಬ್ಯಾನರ್ಜಿ, ಗೋಪಾಲಕೃಷ್ಣ ಗೋಖಲೆ, ಲಾಲಾ ಲಜಪತ್‌ರಾಯ್, ಬಾಲಗಂಗಾಧರ ತಿಲಕ್, ಬಿಪಿನ್‌ಚಂದ್ರಪಾಲ್, ಲಾರ್ಡ್ ಕರ್ಜನ್, ಬಂಕಿಮಚಂದ್ರ ಚಟರ್ಜಿ, ಖುದಿರಾಮ್ ಬೋಸ್, ವಿನಾಯಕ ದಾಮೋದರ ಸಾವರ್ಕರ್, ಚಂದ್ರಶೇಖರ ಆಜಾದ್, ಭಗತ್‌ಸಿಂಗ್ - ಹೀಗೆ ಎಲ್ಲಾ ಪುರುಷರ ಚರಿತ್ರೆ ಸಾಧನೆ ಹೇಳಲಾಗಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರು ಅನೇಕರಿದ್ದಾರೆ ಅವರ ಹೆಸರು ಸಾಧನೆ ಚರಿತ್ರೆಯನ್ನು ಹೇಳುವಲ್ಲಿ ಈ ಪಠ್ಯಪುಸ್ತಕಗಳು ವಿಫಲತೆಯನ್ನು ಕಂಡಿದೆ. ಏಕೆಂದರೆ ಇದಕ್ಕೆ ಸಮಾಜದಲ್ಲಿನ ಪುರುಷ ಪ್ರಧಾನ ಸಾಮಾಜೀಕರಣದ ಅಂಶಗಳು ಮತ್ತೆ ಪಠ್ಯದ ಮೂಲಕ ಮಕ್ಕಳಲ್ಲಿ ಪುರುಷ ಪ್ರಧಾನ್ಯತೆಯನ್ನು ಮೆರೆಯಲು ಕಾರಣವಾಗಿರುವುದು ಕಂಡು ಬರುತ್ತದೆ.

ಸಮಾಜವಾದಿಗಳಲ್ಲಿ ಪುರುಷರ ಹೆಸರುಗಳೇ ಹೆಚ್ಚಾಗಿರುವುದು ಈ ತರಗತಿಯ ಸಮಾಜ ವಿಜ್ಞಾನದಲ್ಲಿ ಕಂಡು ಬಂದಿದೆ. ಪಾಠ-೬ರಲ್ಲಿ 'ಕರ್ನಾಟಕದ ಸಮಾಜಮುಖಿ ಚಳುವಳಿಗಳು' ಮಹಿಳೆಯರು, ರೈತರು, ದಲಿತರು ಮತ್ತು ಕನ್ನಡ ಪರ ಸಂಘಟನೆಗಳು ಮಾಡಿರುವ ಚಳುವಳಿಗಳನ್ನು

ನಿರೂಪಣೆ ಮಾಡಲಾಗಿದೆ. ವಿಕೇಂದ್ರೀಕರಣದ ನಿಟ್ಟಿನಲ್ಲಿ ಜಾರಿಗೊಂಡ ಮಹತ್ವದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಕೂಡ ಪರಿಚಯಿಸಲಾಗಿದೆ. ಆದರೆ ಇಲ್ಲಿ ಮಹಿಳಾ ಚಳುವಳಿಯಲ್ಲಿ ಸಾಲುಮರದ ತಿಮ್ಮಕ್ಕ ಅವರ ಭಾವಚಿತ್ರದೊಂದಿಗೆ ಕಿರು ಮಾಹಿತಿಯನ್ನು ನೀಡಲಾಗಿದೆ. ಇನ್ನುಳಿದಂತೆ ರೈತ ಚಳುವಳಿ, ದಲಿತ ಚಳುವಳಿ, ಕನ್ನಡ ಉಳಿಸಿ ಚಳುವಳಿ ಅಥವಾ ಕನ್ನಡ ಕಾವಲು ಚಳುವಳಿ, ಗೋಕಾಕ್ ಚಳುವಳಿಗಳಲ್ಲಿ ಮಹಿಳೆಯರ ಪಾತ್ರ ಇಲ್ಲವೆಂಬ ಸಂದೇಶ ಇಲ್ಲಿ ಕಂಡು ಬರುತ್ತದೆ. ಇದನ್ನು ಅಭ್ಯಸಿಸುವ ಹೆಣ್ಣು-ಗಂಡು ಮಕ್ಕಳಲ್ಲಿಯೂ ಲಿಂಗ ಅಸಮಾನತೆ ಸಾಮಾಜೀಕರಣ ರೂಪುಗೊಳ್ಳುತ್ತದೆ. ಅದು ಹೇಗೆಂದರೆ ಮಕ್ಕಳಲ್ಲಿ ಎಲ್ಲಾ ರಂಗದಲ್ಲಿಯ ಚಳುವಳಿಗಳಲ್ಲಿ ಪುರುಷರಿದ್ದಾರೆ. ಉಳಿದಂತೆ ಮಹಿಳೆಯರ ಸಾಧನೆ ಇಲ್ಲ ಎನ್ನುವ ಸಾಮಾಜೀಕರಣ ರೂಪುಗೊಂಡಿದೆ.

ಪಾಠ-೭ರಲ್ಲಿ 'ಕರ್ನಾಟಕ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ' ಭೂ ಸುಧಾರಣೆ, ಜಮೀನ್ದಾರ ಪದ್ಧತಿಯ ನಿರ್ಮೂಲನೆ, ಜೀತಪದ್ಧತಿ ಸುಧಾರಣೆ, ಹಿಂದುಳಿದ ವರ್ಗಗಳ ಆಯೋಗಗಳು – ಹೀಗೆ ಕರ್ನಾಟಕ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ಹೆಚ್ಚಾಗಿ ಪುರುಷರ ಪಾತ್ರ ಇದೆ ಎನ್ನುವ ಸಂಗತಿಗಳನ್ನು ದಾಖಲಿಸಿರುವುದು ಕಂಡುಬರುತ್ತದೆ. ಮುಂದುವರೆದು ಪಾಠ-೯ರಲ್ಲಿ 'ಕರ್ನಾಟಕ ಏಕೀಕರಣ ಮತ್ತು ಗಡಿ ವಿವರಗಳು' ಪಾಠದ ಪರಿಚಯದಲ್ಲಿ ಅದರಲ್ಲಿಯೂ ವಿಶೇಷವಾಗಿ ಪತ್ರಿಕೋದ್ಯಮ ಮತ್ತು ಸಾಹಿತ್ಯದ ಪಾಠ ವಿವರಿಸುವಾಗ ನಾಡು-ನುಡಿ ಸಂಸ್ಕೃತಿಗೆ ಶ್ರಮಿಸಿದವರಲ್ಲಿ ಪುರುಷರೇ ಎನ್ನುವ ಸಾಮಾಜೀಕರಣ ರೂಪುಗೊಂಡ ಕೆಲಸ ಈ ಪಠ್ಯದಲ್ಲಿ ಕಂಡು ಬರುತ್ತದೆ. ಇದಕ್ಕೆ ಉದಾ: ಆಲೂರು ವೆಂಕಟರಾಯರು, ಹುಯಿಲಗೋಳ ನಾರಾಯಣರಾವ್, ಕುವೆಂಪು, ಮೈಸೂರು ರಾಜ್ಯಕ್ಕೆ ಸಂಬಂಧಿಸಿದಂತೆ ಕೆಂಗಲ್ ಹನುಮಂತಯ್ಯ, ಎಸ್. ನಿಜಲಿಂಗಪ್ಪ, ಡಿ. ದೇವರಾಜ ಅರಸು ಅವರುಗಳ ಭಾವಚಿತ್ರದೊಂದಿಗೆ ವಿವರಗಳನ್ನು ನೀಡಲಾಗಿದೆ. ಇಡೀ ೭ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ ಪುರುಷರ ಶ್ರಮ-ಸಾಧನೆ-ಯಶಸ್ಸು ಅವರಿಂದಲೇ ಎನ್ನುವ ಸಾಮಾಜೀಕರಣ ರೂಪಿತಗೊಳಿಸುವ ಕೆಲಸ ನಡೆದಿದೆ. ಇದಕ್ಕೆ ಪಠ್ಯಪುಸ್ತಕದಲ್ಲಿ ಹೆಚ್ಚು ಪುರುಷ ಸಾಧಕರ ಚಿತ್ರಗಳನ್ನು ಪ್ರಕಟಿಸಿರುವುದು, ಅಕ್ಷರ ಮತ್ತು ಭಾಷೆ ಮೂಲಕ ಸಾಧನೆ ತಿಳಿಸಿರುವುದು, ಮಕ್ಕಳಲ್ಲಿ ಪುರುಷ ಪರವಾದ ಸಾಮಾಜೀಕರಣ ಕಂಡು ಬರಲಿಕ್ಕೆ ಕಾರಣವಾಗುತ್ತದೆ.

೮ನೇ ತರಗತಿ ಸಮಾಜ ವಿಜ್ಞಾನ ಭಾಗ-೧ರಲ್ಲಿ ಚರಿತ್ರೆ, ಭೂಗೋಳದಂತಹ ಸಾಂಪ್ರದಾಯಿಕ ವಿಷಯಗಳೊಂದಿಗೆ ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮತ್ತು ವ್ಯವಹಾರ ಅಧ್ಯಯನಗಳನ್ನು ರಾಷ್ಟ್ರೀಯ ಪಠ್ಯಕ್ರಮಗಳ ನೆಲೆಗಟ್ಟಿನಲ್ಲಿ ಹೊರತರಲಾಗಿದೆ. ಇದನ್ನು ೨೦೧೭-೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗಿದೆ ಎಂದು ಹೇಳಲಾಗಿದೆ. ಹೀಗೆ ಹೇಳಿರುವ ೮ನೇ ತರಗತಿ ಪಠ್ಯಪುಸ್ತಕದ ಅಧ್ಯಾಯ-೩ರಲ್ಲಿ 'ಭಾರತದ ಪ್ರಾಚೀನ ನಾಗರಿಕತೆಗಳು' ಪುಟ-೧೨ ರಿಂದ ೨೧ರವರೆಗೆ. ಇದರಲ್ಲಿ ಭಾರತದ ಪ್ರಾಚೀನ ನಾಗರಿಕತೆಗಳ ಜನರ ಬದುಕು ಸ್ಥಿರಗೊಂಡ ಬಗೆ, ಮೊದಲ ಹಂತದ ನಗರೀಕರಣ, ನಗರಗಳ ವಿಶೇಷತೆ, ನಗರ ಯೋಜನೆ, ನಗರ ಜೀವನ

ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆ ಹೀಗೆ ಭಾರತದ ಪ್ರಾಚೀನ ನಾಗರಿಕತೆಗಳ ಕುರಿತಂತೆ ಮಾಹಿತಿಯನ್ನು ನೀಡಲಾಗಿದೆ. ಆದರೆ ಇಲ್ಲಿ ಋಗ್ವೇದ ಕಾಲದ ಸಾಮಾಜಿಕ ವ್ಯವಸ್ಥೆಯ ಕುರಿತಂತೆ ಸಂಕ್ಷಿಪ್ತ ಮಾಹಿತಿಯಲ್ಲಿ, ಪಿತೃಪ್ರಧಾನ ಕುಟುಂಬ ಮುಖ್ಯವಾದ ಸಾಮಾಜಿಕ ಘಟಕವಾಗಿತ್ತು ಎಂದು ಹೇಳಿರುವುದು ಕಂಡು ಬರುತ್ತದೆ. ಉತ್ತರ ಋಗ್ವೇದ ಕಾಲ ಸಾಮಾಜಿಕ ವ್ಯವಸ್ಥೆ ಕಾಲದ ಮಾಹಿತಿಯನ್ನು ವಿವರಿಸುವಾಗ "ಸಾಮಾಜಿಕ ಶ್ರೇಣೀಕರಣದಲ್ಲಿ ಹೆಣ್ಣನ್ನು ಕೆಳಸ್ಥಾನದಲ್ಲಿ ಇರಿಸಲಾಯಿತು. ಮಹಿಳೆಯನ್ನು 'ಅಸತ್ಯ'ದ ಮೂರ್ತರೂಪವೆಂದು ಪರಿಗಣಿಸಲಾಗಿತ್ತು, ಅಥರ್ವವೇದದ ಸಮಯಕ್ಕೆ ವರದಕ್ಷಿಣೆ ಪದ್ಧತಿಯ ಉಲ್ಲೇಖವಿದೆ. ಮಹಿಳೆಯರ ಶ್ರಮಕ್ಕೆ ತಕ್ಕ ಪ್ರತಿಫಲವೂ ಇರಲಿಲ್ಲ. ಬಾಲ್ಯವಿವಾಹ ಪದ್ಧತಿ ಇರಲಿಲ್ಲ, ಶ್ರೀಮಂತರು ಮತ್ತು ಬಲಾಢ್ಯರಲ್ಲಿ ಬಹುಪತ್ನಿತ್ವ ಇತ್ತು. ವಿಧವೆಯರು ಮರುವಿವಾಹ ಮಾಡಿಕೊಳ್ಳುವ ಸಾಧ್ಯತೆ ಇತ್ತು"(ಪು. ೧೯). ಪಠ್ಯಪುಸ್ತಕ ಸಾಮಾಜೀಕರಣಗೊಳಿಸುವ ದೃಷ್ಟಿಕೋನದಿಂದ ನೋಡಿದರೆ, ಇಂದಿನ ಆಧುನಿಕ ಯುಗದಲ್ಲಿ ಅನೇಕ ಕಾನೂನುಗಳು ಬಲಿಷ್ಠವಾಗಿದ್ದರೂ ಮಹಿಳೆಯರನ್ನು ಶೋಷಿಸುವ ಅನಿಷ್ಟ ಪದ್ಧತಿ ನಿಷೇಧಗಳು ಇದ್ದರೂ ಅವುಗಳನ್ನು ಈ ಹಿಂದಿನ ಪ್ರಾಚೀನ ಕಾಲದಲ್ಲಿ ಇದ್ದವು ಎಂದು ಹೇಳುವ ಮೂಲಕ ಹೆಣ್ಣನ್ನು ಕೆಳಸ್ಥಾನದಲ್ಲಿ ಇರಿಸಲಾಯಿತು. ಇದು ಹೆಣ್ಣುಮಕ್ಕಳನ್ನು ಶೋಷಿಸುವ ವರದಕ್ಷಿಣೆ ಪದ್ಧತಿ, ಬಹುಪತ್ನಿತ್ವ, ಹೆಣ್ಣುಮಕ್ಕಳನ್ನು ಕೆಳಸ್ಥಾನದಲ್ಲಿ ಇರಿಸುವ ಸಂಗತಿಗಳನ್ನು ಸಾಮಾಜಿಕ ವ್ಯವಸ್ಥೆಯಲ್ಲಿ ಪರಿಚಯ ಮಾಡುವ ಅಗತ್ಯವೇ ಇಲ್ಲ. ಏಕೆಂದರೆ ಮಕ್ಕಳು ಪಠ್ಯದಲ್ಲಿ ಇರುವ ಮಾಹಿತಿಯನ್ನು ನೇರವಾಗಿ ಪರಿಗಣಿಸುವುದರಿಂದ ಮತ್ತು ಇದನ್ನು ಕಂಠಪಾಟದ ಮೂಲಕ ಅಭ್ಯಾಸ ಮಾಡುವುದರಿಂದ ಮಕ್ಕಳ ಮನೋಭಾವನೆಯಲ್ಲಿ ವರದಕ್ಷಿಣೆ ಪದ್ಧತಿ, ಬಹುಪತ್ನಿತ್ವ, ಹೆಣ್ಣುಮಕ್ಕಳನ್ನು ಕೆಳಸ್ಥಾನದಲ್ಲಿ ಇಟ್ಟಿರುವ ಸಂಗತಿಗಳು ಪರಂಪರೆಯಿಂದ ಬೆಳೆದು ಬಂದ ಪದ್ಧತಿಗಳಾಗಿವೆ ಎಂದು ತಿಳಿದುಕೊಳ್ಳುವ ಸಾಧ್ಯತೆ ಹೆಚ್ಚು. ಹೀಗಾಗಿ ಹೆಣ್ಣು ಗಂಡುಮಕ್ಕಳ ಸಾಮಾಜೀಕರಣ ರೂಪಿಸುವಲ್ಲಿ ಈ ಪಠ್ಯದಲ್ಲಿ ೫ ಅಂಶಗಳು ನೇರವಾಗಿ ಕಾರಣವಾಗುತ್ತವೆ. ಇವುಗಳೇ ಮುಂದೆ ಮಕ್ಕಳಲ್ಲಿ ಉಳಿದು ಸಾಮಾಜಿಕ ಸಮಸ್ಯೆಗೆ ಕಾರಣವಾಗುತ್ತವೆ. ೮ನೇ ತರಗತಿಯ ಅಧ್ಯಾಯ-೬ರಲ್ಲಿ "ಜೈನ ಮತ್ತು ಬೌದ್ಧ ಧರ್ಮಗಳ ಉದಯ" (ಪು. ೪೪) ಜಾಗತಿಕ ಧರ್ಮಗಳು ಇವು; ಇವುಗಳನ್ನು ಪರಿಚಯಿಸುವ ಮಾಹಿತಿಯಲ್ಲಿ ಮಹಿಳೆಯರ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಮಾಹಿತಿಯಲ್ಲಿ "ಸ್ತ್ರೀಯರು ಸೇರಿದಂತೆ ಶೂದ್ರರು ಅಶುದ್ಧರೆಂದು ಪರಿಗಣಿಸಲ್ಪಟ್ಟಿದ್ದರು" (ಪು. ೪೪) ಎಂದು ಹೇಳಲಾಗಿದೆ. ಚಾರಿತ್ರಿಕ ಅಂಶಗಳ ದೃಷ್ಟಿಯಿಂದಲೂ ಮಕ್ಕಳಲ್ಲಿ ಹೆಣ್ಣು-ಗಂಡು ಸ್ಥಾನಮಾನಗಳು ಬೇರೆ ಬೇರೆ ಇದ್ದವು ಎನ್ನುವುದು ಕಂಡು ಬರುತ್ತದೆ. ಜೊತೆಗೆ ಶ್ರೇಣೀಕರಣದ ಮಾಹಿತಿಯು ಮಕ್ಕಳ ಸಾಮಾಜೀಕರಣಕ್ಕೆ ಕಾರಣವಾಗುತ್ತದೆ.

೮ನೇ ತರಗತಿ ಸಮಾಜ ವಿಜ್ಞಾನದ ಭಾಗ-೨ರಲ್ಲಿ ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳ ಶಾಸ್ತ್ರ, ಅರ್ಥಶಾಸ್ತ್ರ, ವ್ಯವಹಾರ ಅಧ್ಯಯನ ಕುರಿತಂತೆ ಮಾಹಿತಿಯನ್ನು ನೀಡಲಾಗಿದೆ.

ಇತಿಹಾಸ ಭಾಗದಲ್ಲಿ ರಾಜರ ಸಾಧನೆ, ಕೊಡುಗೆಗಳನ್ನು ಪರಿಚಯಿಸಲಾಗಿದೆ. ಮೌರ್ಯರಲ್ಲಿ 'ಗುಪ್ತರು ಮತ್ತು ವರ್ಧನರು' ಇದರಲ್ಲಿ ಸಮುದ್ರಗುಪ್ತ, ಎರಡನೇ ಚಂದ್ರಗುಪ್ತ ಮೌರ್ಯರ ಕುರಿತಾಗಿ ಸಾಧನೆಯನ್ನು ಪರಿಚಯಿಸಲಾಗಿದೆ. 'ದಕ್ಷಿಣ ಭಾರತದಲ್ಲಿ' ಶಾತವಾಹನರು, ಗೌತಮಿಪುತ್ರ ಶಾತಕರ್ಣಿ, ಕದಂಬರು, ಗಂಗರ ಕುರಿತು ಮಾಹಿತಿ ಇದೆ. ಅಧ್ಯಾಯ-೧೦ರಲ್ಲಿ ಬಾದಾಮಿ ಚಾಲುಕ್ಯರು ಮತ್ತು ಕಂಚಿಯ ಪಲ್ಲವರು ಹಾಗೆಯೇ ಚಾಲುಕ್ಯರ ಸಾಂಸ್ಕೃತಿಕ, ಸಾಹಿತ್ಯಿಕ ಕೊಡುಗೆಗಳನ್ನು, ರಾಜರ ಬಿರುದುಗಳನ್ನು ಪರಿಚಯಿಸಲಾಗಿದೆ. ಅಧ್ಯಾಯ-೧೧ರಲ್ಲಿ ಮಾನ್ಯಖೇಡ, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು ಎಂಬಲ್ಲಿ ರಾಷ್ಟ್ರಕೂಟರ ಕೊಡುಗೆಗಳು ಆರ್ಥಿಕ ಸ್ಥಿತಿಗತಿ, ಸಾಮಾಜಿಕ ಸ್ಥಿತಿಗತಿ ಸಾಹಿತ್ಯಿಕ ಸಂಗತಿಗಳನ್ನು ಪರಿಚಯಿಸಲಾಗಿದೆ. ಅಧ್ಯಾಯ-೧೨ರಲ್ಲಿ ಚೋಳರು ಮತ್ತು ದ್ವಾರಸಮುದ್ರದ ಹೊಯ್ಸಳರ ಪರಿಚಯವಿದ್ದು, ಇದರಲ್ಲಿ ಚೋಳರ ಕೊಡುಗೆ, ದ್ವಾರಸಮುದ್ರ ಹೊಯ್ಸಳರ ಕಲೆ, ಸಾಹಿತ್ಯ, ವಾಸ್ತುಶಿಲ್ಪದ ಕುರಿತು ಮಾಹಿತಿ ನೀಡಲಾಗಿದೆ. ಆದರೆ ಇಲ್ಲಿ ಮಹಿಳೆಯರ ಕುರಿತಾಗಿ ಮತ್ತು ಅವರ ಕೊಡುಗೆಗಳ ಕುರಿತು ಮಾಹಿತಿ ದೊರೆಯುವುದಿಲ್ಲ. ಇದು ಪುರುಷಪರವಾದ ಸಾಮಾಜೀಕರಣ ರೂಪಿಸಲು ಕಾರಣವಾಗುತ್ತದೆ.

ವ್ಯವಹಾರ ಅಧ್ಯಾಯದಲ್ಲಿ 'ವ್ಯವಹಾರ ಮತ್ತು ಕೈಗಾರಿಕೆ' ಪಾಠವನ್ನು ಇಡಲಾಗಿದೆ. ಇಲ್ಲಿ ವ್ಯಾಪಾರ, ಗೃಹಕೈಗಾರಿಕೆ, ಸಣ್ಣ ಕೈಗಾರಿಕೆ, ವ್ಯವಹಾರದಲ್ಲಿ ನೀತಿ ತತ್ವಗಳನ್ನು ಚಿತ್ರಗಳ ಸಮೇತ ವಿವರಿಸಲಾಗಿದೆ. ಹೀಗೆ ವಿವರಿಸುವಾಗ ಪುರುಷ ಮತ್ತು ಮಹಿಳೆಯರಿಗೆ ಸಂಬಂಧಿಸಿದಂತೆ ಕೆಲವು ವ್ಯಾಪಾರ, ವ್ಯವಹಾರಗಳ ಚಟುವಟಿಕೆಗಳನ್ನು ವಿಂಗಡಿಸಲಾಗಿದೆ. ಪುರುಷರೆಲ್ಲರೂ ಖಾಯಂ ಅಂಗಡಿಗಳಲ್ಲಿ, ಮಹಿಳೆಯರು ತಲೆಹೊರೆ ವ್ಯಾಪಾರಿಗಳು, ರಸ್ತೆ ಬದಿಯಲ್ಲಿ ತಳ್ಳುಗಾಡಿ ವ್ಯಾಪಾರ ಮತ್ತು ಸಂತೆ ವ್ಯಾಪಾರವನ್ನು ಮಾಡುತ್ತಾರೆಂದು ಬಿಂಬಿಸಲಾಗಿದೆ. ಆದರೆ ಗೃಹ ಕೈಗಾರಿಕೆಗಳ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಕುರಿತು ಮಾಹಿತಿ ನೀಡುವಾಗ ಎಲ್ಲಾ ಪುರುಷರ ಚಿತ್ರಗಳನ್ನೇ ನೀಡಲಾಗಿದೆ. ಇದರಿಂದ ಗುಡಿ ಕೈಗಾರಿಕೆಯಲ್ಲಿ, ಕುಶಲಕರ್ಮಿಗಳಲ್ಲಿ, ಸಣ್ಣ ಕೈಗಾರಿಕೆಗಳಲ್ಲಿ ಪುರುಷರು ಕೆಲಸ ಮಾಡುತ್ತಿದ್ದಾರೆ ಎನ್ನುವಂತೆ ಬಿಂಬಿಸಿರುವುದು ಕಾಣಬಹುದು. ಕೈಗಾರಿಕೆಯಲ್ಲಿ, ಕುಶಲಕರ್ಮಿಗಳಲ್ಲಿ, ಸಣ್ಣ ಕೈಗಾರಿಕೆಗಳಲ್ಲಿನ ಮಹಿಳೆಯರ ಕೆಲಸಗಳನ್ನು ಮರೆಮಾಚಿ, ಮಹಿಳೆಯರು ಕೇವಲ ಗೃಹಕೆಲಸಕ್ಕೆ ಸೀಮಿತ ಎನ್ನುವ ಸಾಮಾಜೀಕರಣವನ್ನು ರೂಪಿಸುವ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ.

'ಮನೆಯೇ ಮೊದಲ ಪಾಠ ಶಾಲೆ', ಜನನಿ ತಾಯಿ ಮೊದಲು ಗುರು', ಜನನಿಯಿಂದ ಪಾಠ ಕಲಿತ ಜನರು ಧನ್ಯರು ಪದ್ಯದ ಈ ಸಾಲುಗಳು ಮಕ್ಕಳ ಸಾಮಾಜೀಕರಣದ ಮೊದಲ ಹಂತವನ್ನು ಚೆನ್ನಾಗಿ ಕಟ್ಟಿಕೊಟ್ಟಿದೆ. ಮಕ್ಕಳ ಕಲಿಕೆಯ ಕೇಂದ್ರಬಿಂದುವೇ ತಾಯಿ. ಆದರೆ ಈ ತಾಯಿಯ ಹಿರಿತನ ಮಹತ್ವ ಮತ್ತು ಗರಿಮೆಗಳನ್ನು ಸಾಮಾಜೀಕರಣ ಎರಡನೆಯ ಹಂತವಾದ ಶಾಲಾ ಶಿಕ್ಷಣದಲ್ಲಿ ಬದಿಗೊತ್ತಿದಂತಾಗಿದೆ. ಪುರುಷ ಕೇಂದ್ರಿತವಾಗಿ ಶಿಕ್ಷಣವನ್ನು ರೂಪಿಸಿರುವುದರಿಂದ ಮಕ್ಕಳ ಕಲಿಕೆಯು ಸ್ವಾಭಾವಿಕ ನೆಲೆಯ ವಿರುದ್ಧ ದಿಕ್ಕಿನಲ್ಲಿ ಚಲಿಸಿದಂತಿದೆ. ಶಿಕ್ಷಣ ವ್ಯವಸ್ಥೆಯ

ಮೂಲಕ ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಗಮನಿಸುತ್ತಾ, ಅವಲೋಕಿಸುತ್ತಾ, ಸಾಮಾಜೀಕರಣಗೊಳ್ಳುತ್ತಾರೆ. ಮಕ್ಕಳ ವಿಕಾಸದಲ್ಲಿ ಸಕಾರಾತ್ಮಕವಾದ, ಸೃಜನಶೀಲವಾದ, ವಿಮರ್ಶಾತ್ಮಕವಾದ ಚಿಂತನೆ ಚಿಗುರೊಡೆಯುವುದು ಎಳೆಯ ವಯಸ್ಸಿನಿಂದಲೇ, ಸಾಮಾಜೀಕರಣ ಪ್ರಕ್ರಿಯೆ ಮಕ್ಕಳ ಬದುಕಿನ ಪ್ರಮುಖ ಘಟ್ಟ. ಇಲ್ಲಿ ಬಿತ್ತುವ ಪ್ರತಿಯೊಂದು ಆಲೋಚನಾ ಬೀಜಗಳು ಮುಂದೆ ಚಿಗುರೊಡೆದು ಹೆಮ್ಮರವಾಗುತ್ತವೆ. ಈ ದೃಷ್ಟಿಕೋನದಲ್ಲಿ ಒಂದನೇ ತರಗತಿಯಿಂದ ಐದನೇ ತರಗತಿಯವರೆಗಿನ ಪರಿಸರ ವಿಜ್ಞಾನ ಪಠ್ಯವನ್ನು ವಿಶ್ಲೇಷಿಸಿದಾಗ ತಟಸ್ಥವಾದ, ಮಿಥ್‌ಗಳನ್ನು ಸತ್ಯವೆಂದು ನಂಬಿಸುವ ಮತ್ತು ಶೋಷಣೆಗೆ ತಳ್ಳುವ ಪರಂಪರೆಗಳ ಸಾಮಾಜೀಕರಣದ ಅಂಶಗಳು ಕಂಡು ಬರುತ್ತವೆ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತದಲ್ಲಿ ಪರಿಸರ ಅಧ್ಯಯನ ಮತ್ತು ಸಮಾಜ ವಿಜ್ಞಾನ ಪಠ್ಯದ ಮೂಲಕ ಮಕ್ಕಳಿಗೆ ಕುಟುಂಬ, ಸಂಬಂಧ, ಕೆಲಸಗಳು, ವೃತ್ತಿಗಳು, ವಸತಿ, ನೀರು, ಪರಿಸರ ಹಾಗೂ ಅವುಗಳ ಸಂರಕ್ಷಣೆ, ಆರೋಗ್ಯ, ಆಹಾರ, ಸಾರಿಗೆ–ಸಂವಹನ–ಸಂಪರ್ಕ ಸಾಧನಗಳು, ಕ್ರೀಡೆಗಳು, ಮನೋರಂಜನೆ, ಹಬ್ಬ ಸಮಾರಂಭಗಳು, ಕಲೆ, ಸಾಹಿತ್ಯ, ಗ್ರಾಮೀಣ ಸಮುದಾಯಗಳು, ನಗರೀಕರಣ, ಇತಿಹಾಸ, ರಾಜಕೀಯ ಹಾಗೂ ಪ್ರಜಾಪ್ರಭುತ್ವದ ವಿಷಯಗಳನ್ನು ಪರಿಚಯಿಸಲಾಗಿದೆ. ಈ ಎಲ್ಲ ವಿಷಯಗಳ ಮೂಲಕ ಮಕ್ಕಳಿಗೆ ಅಲಿಖಿತವಾದ, ಸಾಮಾಜಿಕ ಭಿನ್ನತೆಗಳನ್ನು ತಿಳಿಸುತ್ತಿರುವುದು ಕಂಡು ಬರುತ್ತದೆ. ಅದೇನೆಂದರೆ 'ಹೆಣ್ಣು–ಗಂಡು ಭಿನ್ನ', 'ಹೆಣ್ಣು ಅಧೀನ ಗಂಡು ಸ್ವತಂತ್ರ' ಎನ್ನುವ ಮೌಲ್ಯವನ್ನು ಬಗೆಬಗೆಯಾಗಿ ಸಾಮಾಜೀಕರಣ ಗೊಳಿಸಲಾಗುತ್ತಿದೆ. ಇದಕ್ಕೆ ಹಂತಹಂತವಾಗಿ ಹೆಣ್ಣುಮಕ್ಕಳಿಗೆ ಸ್ವಚ್ಛತೆ, ಆರೈಕೆ, ಅಡುಗೆ ಕೆಲಸಗಳನ್ನು ಮಾಡುವವರೆಂದೂ ಹಾಗೂ ವೃತ್ತಿಯಲ್ಲಿ ನಾಟಿ ಮಾಡುವವರು, ಕೃಷಿಯಲ್ಲಿ ಪುರುಷನಿಗೆ ಸಹಾಯಕರು, ಬುಟ್ಟಿ ಹೆಣೆಯುವವರು, ಬಟ್ಟೆ ನೇಯ್ಗೆಯವರು, ಬಟ್ಟೆ ಹೊಲೆಯುವವರು ಮತ್ತು ಶಿಕ್ಷಕಿ ಕೆಲಸಗಳಲ್ಲಿ ಮಾತ್ರ ತೋರಿಸಲಾಗಿದೆ. ಜೊತೆಗೆ ಸಂತೋಷಪಡುವ ವಿಷಯಗಳಾಗಿ ಉಡುಪು, ಆಭರಣ, ವೈಯಾರ, ಅಂದ ಚಂದದ ವ್ಯಾಪ್ತಿಗೆ ಸೀಮಿತಗೊಳಿಸಲಾಗಿದೆ. ಇದು ಸಾಲದೆಂಬಂತೆ 'ಮದುವೆ' ಹೆಣ್ಣಿಗೆ ಮಾತ್ರ ಎಂಬಂತೆ ಬಿಂಬಿಸಲಾಗಿದೆ. ವಿವಿಧ ವೃತ್ತಿಗಳನ್ನು ಪುರುಷಕೇಂದ್ರಿತವಾಗಿ ಜ್ಞಾನ ಮತ್ತು ಅನುಭವದ ಭಂಡಾರವಾಗಿ, ಶೌರ್ಯ, ಸಾಹಸಗಳು ಪ್ರತೀಕವಾಗಿ ಮತ್ತು ಮಾನವರ ವಿಕಾಸ ಹಾಗೂ ಅನ್ವೇಷಣೆಗಳನ್ನು ಪುರುಷರ ಸಾಧನೆಗಳಾಗಿ, ಕಲೆ ಮತ್ತು ಸಾಹಿತ್ಯದ ಅಧಿಪತಿಗಳಾಗಿ, ಸಮಾಜ ಸುಧಾರಕರಾಗಿ, ಉನ್ನತ ಹುದ್ದೆಯ ವಾರಸುದಾರರನ್ನಾಗಿ, ಅಧಿಕಾರ ಚುಕ್ಕಾಣಿ ಹಿಡಿಯುವವರಾಗಿ ಚಿತ್ರೀಕರಿಸಿರುವುದು ಕಂಡು ಬರುತ್ತದೆ. ಇಡೀ ಲೋಕ ಪುರುಷ ಮಾಯವೆಂಬಂತೆ ಸಾಮಾಜೀಕರಣಗೊಳಿಸುತ್ತಿರುವುದು ಕಂಡು ಬರುತ್ತದೆ. ಇದಕ್ಕೆ ಹೆಚ್ಚು ಇತಿಹಾಸದಲ್ಲಿ ರಾಜರುಗಳ ಪರಿಚಯ, ರಾಜಕೀಯ

ವ್ಯಕ್ತಿಗಳಲ್ಲಿ ಧಾರ್ಮಿಕ ಮತ್ತು ಸಮಾಜ ಸುಧಾರಕರಲ್ಲಿ ಪುರುಷರನ್ನು ಪರಿಚಯಿಸಿರುವುದು ಮತ್ತು ಚಿತ್ರಗಳನ್ನು ಪ್ರಕಟಿಸಿರುವುದು ಕಂಡು ಬರುತ್ತದೆ. ಇಷ್ಟೊಂದು ದಟ್ಟವಾದ ಮತ್ತು ವೈರುಧ್ಯಗಳಿರುವ ಆಲೋಚನೆಗಳನ್ನು ಮಕ್ಕಳಲ್ಲಿ ತುಂಬಿದರೆ ಮಕ್ಕಳಲ್ಲಿ ಲಿಂಗ ತಾರತಮ್ಯದ ಸಾಮಾಜೀಕರಣ ರೂಪುಗೊಳ್ಳುತ್ತದೆ. ಬುದ್ಧ, ಬಸವಣ್ಣ, ಅಕ್ಕಮಹಾದೇವಿ, ಸಾವಿತ್ರಿಬಾ ಫುಲೆ, ಪಂಡಿತಾ ರಮಾಬಾಯಿ, ಡಾ. ಬಿ.ಆರ್. ಅಂಬೇಡ್ಕರ್, ಡಾ. ಮನೋಹರ ಲೋಹಿಯಾ ಹೀಗೆ ಮುಂತಾದ ಸಮಾಜ ಸುಧಾರಕರು ಕಂಡ 'ಸಮ-ಸಮಾಜ' ಸ್ಥಾಪನೆ ಯಾವಾಗ ಎನ್ನುವುದು ಅನುಮಾನ ಮೂಡುತ್ತದೆ. ದೇಶದ ಸಂವಿಧಾನದಲ್ಲಿ ಲಿಂಗ, ಜಾತಿ, ಮತ, ಪಂಥ, ಪ್ರದೇಶಗಳ ಬೇಧವಿಲ್ಲದ ಸಮಾನತೆ ಬರುವುದು ಯಾವಾಗ ಎನ್ನುವುದನ್ನು ಚಿಂತಿಸಬೇಕಾಗಿದೆ. ಒಟ್ಟಾರೆ ಇಲ್ಲಿ ಮುಖ್ಯವಾಗಿ ಹೆಣ್ಣು-ಗಂಡು ಮಕ್ಕಳ ಶಿಕ್ಷಣದಲ್ಲಿ ಸಮಾನವಾದ, ಲಿಂಗ ಸಮಾನ ಶಿಕ್ಷಣ ದೊರೆತರೆ ಮಾತ್ರ ಅವರ ಮುಂದಿನ ಸಾಮಾಜೀಕರಣದ ಸಂಗತಿಗಳಲ್ಲಿ ಸಮಾನ ದೃಷ್ಟಿಕೋನ ಬೆಳೆಯಲು ಸಾಧ್ಯ. ಇಲ್ಲದೇ ಹೋದರೆ ಸಾಮಾಜೀಕರಣ ಸಮಸ್ಯೆ ಸಮಾಜದಲ್ಲಿ ಮುಂದುವರೆಯುತ್ತದೆ.

ಮನೆ ಕೆಲಸಗಳಲ್ಲಿ ಕಂಡುಬರುವ ವ್ಯತ್ಯಾಸದ ಚಿತ್ರಗಳು





ಹೆಣ್ಣು-ಗಂಡುಮಕ್ಕಳ ಆಟಗಳಲ್ಲಿ ಬೇರೆ ಬೇರೆ ಇವೆ ಎಂದು ಗುರುತಿಸುವ ಚಿತ್ರಗಳು

ಹೆಣ್ಣು-ಗಂಡು ಮಕ್ಕಳ ಆಟಗಳು ಬೇರೆ ಬೇರೆ ಇವೆ ಎಂದು ಗುರುತಿಸುವ ಚಿತ್ರ





















ಲಿಂಗತ್ವ ಅಸಮಾನತೆ ಚಿತ್ರಗಳು

೧. ಶ್ರಮವಿಭಜನೆ




























ಲಿಂಗತ್ವ ಅಸಮಾನತೆ ಚಿತ್ರಗಳು

೨. ಸಿದ್ಧಮಾದರಿ ಸೀಮಿತಗೊಳಿಸುವ ಚಿತ್ರಗಳು










ಲಿಂಗತ್ವ ಅಸಮಾನತೆ ಚಿತ್ರಗಳು


೩. ಪಿತೃಪ್ರಧಾನತೆಯನ್ನು ಬಿಂಬಿಸುವ ಚಿತ್ರಗಳು





ಲಿಂಗತ್ವ ಅಸಮಾನತೆ ಚಿತ್ರಗಳು

೪. ಪ್ರತ್ಯೇಕ ವೃತ್ತಿಗಳನ್ನು ಬಿಂಬಿಸುವ ಚಿತ್ರಗಳು













ಲಿಂಗತ್ವ ಅಸಮಾನತೆ ಚಿತ್ರಗಳು

೫. ಪುರುಷ ಪ್ರಧಾನತೆಯನ್ನು ಬಿಂಬಿಸುವ ಚಿತ್ರಗಳು







































ಆಕರಗಳು

೧. **'ನಲಿ-ಕಲಿ'; ಪರಿಸರ ಅಧ್ಯಯನ ಅಭ್ಯಾಸ ಪುಸ್ತಕ(ಪರಷ್ಕೃತ),** ೨೦೧೯, ಒಂದನೇ ತರಗತಿ ಪಠ್ಯಪುಸ್ತಕ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೇ ಹಂತ, ಬೆಂಗಳೂರು.

೨. **'ನಲಿ-ಕಲಿ'; ಪರಿಸರ ಅಧ್ಯಯನ ಅಭ್ಯಾಸ ಪುಸ್ತಕ(ಪರಿಷ್ಕೃತ),** ೨೦೧೮, ಎರಡನೇ ತರಗತಿ ಪಠ್ಯಪುಸ್ತಕ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೇ ಹಂತ, ಬೆಂಗಳೂರು.

೩. **'ನಲಿ-ಕಲಿ'; ಪರಿಸರ ಅಧ್ಯಯನ ಅಭ್ಯಾಸ ಪುಸ್ತಕ(ಪರಿಷ್ಕೃತ),** ೨೦೧೮, ಮೂರನೇ ತರಗತಿ ಪಠ್ಯಪುಸ್ತಕ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೇ ಹಂತ, ಬೆಂಗಳೂರು.

೪. **'ನಲಿ-ಕಲಿ'; ಪರಿಸರ ಅಧ್ಯಯನ ಅಭ್ಯಾಸ ಪುಸ್ತಕ(ಪರಿಷ್ಕೃತ),** ೨೦೧೮, ನಾಲ್ಕನೇ ತರಗತಿ ಪಠ್ಯಪುಸ್ತಕ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೇ ಹಂತ, ಬೆಂಗಳೂರು.

೫. **'ಪರಿಸರ ಅಧ್ಯಯನ'; ಅಭ್ಯಾಸ ಸಹಿತ ಪಠ್ಯಪುಸ್ತಕ,** ೨೦೧೯, ಐದನೇ ತರಗತಿ ಪಠ್ಯಪುಸ್ತಕ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೇ ಹಂತ, ಬೆಂಗಳೂರು.

೬. **'ಸಮಾಜ ವಿಜ್ಞಾನ'; ಪಠ್ಯಪುಸ್ತಕ(ಪರಿಷ್ಕೃತ),** ೨೦೧೯, ಆರನೇ ತರಗತಿ ಪಠ್ಯ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೇ ಹಂತ, ಬೆಂಗಳೂರು.

೭. **'ಸಮಾಜ ವಿಜ್ಞಾನ'; ಪಠ್ಯಪುಸ್ತಕ(ಪರಿಷ್ಕೃತ),** ಏಳನೇ ತರಗತಿ ಪಠ್ಯ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೇ ಹಂತ, ಬೆಂಗಳೂರು, ೨೦೧೮.

೮. **'ಸಮಾಜ ವಿಜ್ಞಾನ'; ಪಠ್ಯಪುಸ್ತಕ(ಪರಿಷ್ಕೃತ),** ೨೦೧೮, ಎಂಟನೇ ತರಗತಿ ಪಠ್ಯ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೇ ಹಂತ, ಬೆಂಗಳೂರು.

♦ ♦ ♦

ಅಧ್ಯಾಯ : ಐದು

ಕೌಟುಂಬಿಕ ವಲಯ : ಸಾಮಾಜೀಕರಣ ಸಮಸ್ಯೆಯ ಗ್ರಹಿಕೆ
(ಕ್ಷೇತ್ರಕಾರ್ಯದ ಮಾಹಿತಿಯನ್ನು ಅನುಲಕ್ಷಿಸಿ)

೫.೧. ಕೌಟುಂಬಿಕ ಲಿಂಗ ಪೂರ್ವಗ್ರಹ

೫.೨. ಸ್ಥಿರ ಮಾದರಿಯ ಲಿಂಗ ಪಾತ್ರಗಳ ಚೌಕಟ್ಟು

೫.೩. ಕೇತ್ರಕಾರ್ಯ ಮಾಹಿತಿಯ ವಿಶ್ಲೇಷಣಾತ್ಮಕ ಸಮೀಕ್ಷೆ

ಅಧ್ಯಾಯ : ಐದು

ಕೌಟುಂಬಿಕ ವಲಯ : ಸಾಮಾಜೀಕರಣ ಸಮಸ್ಯೆಯ ಗ್ರಹಿಕೆ
(ಕ್ಷೇತ್ರಕಾರ್ಯದ ಮಾಹಿತಿಯನ್ನು ಅನುಲಕ್ಷಿಸಿ)

ಕೌಟುಂಬಿಕ ವಲಯದಲ್ಲಿ ಹೆಣ್ಣು-ಗಂಡುಮಕ್ಕಳು ಹೊಂದಿರುವ ಸಾಮಾಜೀಕರಣದ ಗ್ರಹಿಕೆ ಕುರಿತಂತೆ ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಈ ಅಧ್ಯಾಯದ ಅಧ್ಯಯನದಲ್ಲಿ ಮುಖ್ಯವಾಗಿ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನಾಧರಿಸಿ 'ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆ' ಸಂಗತಿಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಸಾಮಾನ್ಯವಾಗಿ ಮಗು ಯಾವ 'ಲಿಂಗ'ಕ್ಕೆ ಸೇರಿದ್ದು ಎಂದು ತಿಳಿದು ಕೌಟುಂಬಿಕ ವಲಯದಲ್ಲಿ ಲಿಂಗ ಪೂರ್ವಗ್ರಹಗಳು ಕಂಡು ಬರುತ್ತದೆ. ಇದಕ್ಕೆ ಉದಾಹರಣೆಯಾಗಿ ಕುಟುಂಬವೊಂದರಲ್ಲಿ ಹುಟ್ಟಿದ ಮಗು 'ಹೆಣ್ಣಾದಾಗ' ನೋಡಲು ಬಂದಿರುವ ಸಂಬಂಧಿಗಳು, ಸ್ನೇಹಿತರು, ಆಪ್ತರು, ನೆರೆಹೊರೆಯವರು ಅವರಾಡುವ ಮಾತುಗಳಲ್ಲಿ ನಿನ್ನ ಮಗಳು ತುಂಬ ಚೆನ್ನಾಗಿದ್ದಾಳೆ, ಕಪ್ಪಾಗಿದ್ದರೆ ಸ್ವಲ್ಪ ಕಪ್ಪಾಗಿದ್ದಾಳೆ, ಹಿರೋಯಿನ್ ತರ ಇದ್ದಾಳೆ, ಮಗು ಅಳುವುದನ್ನು ಕೇಳಿದರೆ ಅವಳದ್ದು ಧ್ವನಿ ಚೆನ್ನಾಗಿದೆ, ಒಳ್ಳೆಯ ಸಂಗೀತಗಾರಳಾಗುತ್ತಾಳೆ. ಒಳ್ಳೆಯ ಡ್ಯಾನ್ಸರ್ ಆಗುತ್ತಾಳೆ ನಮ್ಗೆ ಕೊಟ್ಟು ಬಿಡಿ, ನಾವು ಮದುವೆ ಮಾಡಿಕೊಳ್ಳುತ್ತವೆ – ಹೀಗೆ ಲಿಂಗವನ್ನಾಧರಿಸಿ ಹತ್ತು ಹಲವು ರೀತಿಯಲ್ಲಿ ಮಾತನಾಡುವುದು ಕಂಡು ಬರುತ್ತದೆ. ಹೆಣ್ಣು ಮಗುವಿಗೆ ಉಡುಗೊರೆಯನ್ನು ನೀಡುವಲ್ಲಿ ಲಿಂಗವನ್ನಾಧರಿಸಿ ಉಡುಗೆ-ತೊಡುಗೆಯನ್ನು ನೀಡಲಾಗುತ್ತದೆ. ಅವುಗಳೆಂದರೆ ಲಂಗ, ಸ್ಕರ್ಟ್, ಫ್ರಾಕ್‌ಗಳು, ಆಟಿಕೆಗಳ ವಸ್ತುಗಳಲ್ಲಿ ಟೆಡ್ಡಿಬೇರ್, ಬಾರ್ಬಿ ಬೊಂಬೆ, ಪ್ಲಾಸ್ಟಿಕ್ ಅಡುಗೆ ಸಲಕರಣೆಗಳ ಆಟಿಕೆ ವಸ್ತುಗಳನ್ನು ತಂದು ಕೊಡಲಾಗುತ್ತದೆ. ಅದೇ ಗಂಡು ಮಗುವಾಗಿದ್ದರೆ, ಹೆಣ್ಣು ಮಗುವಿಗೆ ವಿರುದ್ಧವಾದ ಮಾತುಗಳನ್ನಾಡಿ ಉಡುಗೆ-ತೊಡುಗೆಯಲ್ಲಿ ಅಂಗಿ, ಚಡ್ಡಿ, ಪ್ಯಾಂಟ್, ಶರ್ಟ್, ಆಟಿಕೆ ವಸ್ತುಗಳಲ್ಲಿ ಬ್ಯಾಟ್, ಬಾಲ್, ಪ್ಲಾಸ್ಟಿಕ್ ಬೈಕ್, ಕಾರ್ ಹೀಗೆ ಆಟಿಕೆ ವಸ್ತುಗಳನ್ನು ಕಾಣಿಕೆಯ ರೂಪದಲ್ಲಿ ತಂದುಕೊಡುವುದು ಕಂಡು ಬರುತ್ತದೆ. ಅಂದರೆ ಮಗು ಯಾವ ಲಿಂಗಕ್ಕೆ ಸೇರಿದ್ದು ಎಂದು ಆಧರಿಸಿಯೇ ಮಾತು, ನಡವಳಿಕೆ ಪ್ರಕ್ರಿಯೆಗಳು ಕಂಡುಬರುತ್ತದೆ. ಇದು ಹೆಣ್ಣುಮಕ್ಕಳಿಗೆ ಕೌಟುಂಬಿಕ ವಲಯದಲ್ಲಿ ಇರುವಂಥ ಸಾಮಾಜೀಕರಣ ರೂಪಿಸಿದರೆ ಅದೇ ಗಂಡುಮಕ್ಕಳಿಗೆ ಹೊರ ಪ್ರಪಂಚದ ಜೊತೆ ಸಂಪರ್ಕಿಸುವ ಸಾಮಾಜೀಕರಣ ರೂಪಿಸುತ್ತದೆ. ಇದು ಕುಟುಂಬದಲ್ಲಿ ಪೋಷಕರು ಹೆಣ್ಣು-ಗಂಡುಮಕ್ಕಳ ಕುರಿತಂತೆ ಹೊಂದಿರುವ ಲಿಂಗ ಪೂರ್ವಗ್ರಹದ ಸಾಮಾಜೀಕರಣ. ಹೀಗಾಗಿ ಪ್ರಸ್ತುತ ಈ ಅಧ್ಯಾಯದಲ್ಲಿ

ಹೆಣ್ಣು-ಗಂಡು ಮಕ್ಕಳ ಕುರಿತಂತೆ ಪೋಷಕರು ಹೊಂದಿರುವ ಸಾಮಾಜೀಕರಣದ ಸಮಸ್ಯೆಯನ್ನು ತಿಳಿಯುವ ದೃಷ್ಟಿಯಿಂದ ಕ್ಷೇತ್ರಕಾರ್ಯದ ಮೂಲಕ ಕೌಟುಂಬಿಕ ಸಮೀಕ್ಷೆಯ ಮಾಹಿತಿ ಸಂಗ್ರಹಿಸಿಕೊಂಡು ದಾಖಲಿಸಿ ಇಲ್ಲಿ ಚರ್ಚಿಸಲಾಗಿದೆ.

೫.೧. ಕೌಟುಂಬಿಕ ಲಿಂಗ ಪೂರ್ವಗ್ರಹ

ಕುಟುಂಬದೊಳಗೆ ಪೋಷಕರು ಹೊಂದಿರುವ ಲಿಂಗ ಪೂರ್ವಗ್ರಹಗಳ ಕುರಿತಾಗಿ ನೋಡುವುದಾದರೆ, ಪೋಷಕರು/ತಂದೆ ತಾಯಿ ಮಕ್ಕಳಿಗೆ ಎಳೆವಯಸ್ಸಿನಿಂದಲೇ ಅವರ ಆಲೋಚನೆ ಮೇಲೆ ಲಿಂಗ ಪೂರ್ವಗ್ರಹದ ಪ್ರಭಾವಗಳನ್ನು ಬೀರುತ್ತಾರೆ. ಹೆಣ್ಣು-ಗಂಡು ಮಕ್ಕಳಿಗೆ ನಿರ್ದಿಷ್ಟವಾದ, ನಡವಳಿಕೆ, ಮಾನದಂಡಗಳನ್ನು ಮತ್ತು 'ಲಿಂಗಪಾತ್ರಗಳನ್ನು ಸೃಷ್ಟಿಸುವ ಮೂಲಕ ಮಕ್ಕಳಿಗೆ ಲಿಂಗ ಪೂರ್ವಗ್ರಹಗಳನ್ನು ಬಿತ್ತಲಾಗುತ್ತದೆ. ಇದಕ್ಕೆ ಕುಟುಂಬದೊಳಗೆ ಗಂಡುಮಕ್ಕಳಿಗೆ ನೀನು 'ಗಂಡಾಗಿ' ಅಳಬಾರದು, ಗಂಭೀರವಾಗಿ ಇರಬೇಕು, ನಿನ್ನ ಕೆಲಸ ಏನಿದ್ದರೂ ಹೊರಗಡೆ. ಹೆಣ್ಣುಮಕ್ಕಳಿಗೆ ನೀನು ಗಹಗಹಿಸಿ ನಗಬಾರದು, ತಲೆ ಎತ್ತಿ ನೋಡಬಾರದು, ಹೊರಗಡೆ ಹೆಚ್ಚು ಇರಬಾರದು. ಹೀಗೆ ಮಕ್ಕಳಿಗೆ ಕುಟುಂಬದೊಳಗೆ ಲಿಂಗ ಪೂರ್ವಗ್ರಹಗಳ ಕುರಿತು ಮಾತು, ಕ್ರಿಯೆ, ಪ್ರಕ್ರಿಯೆಗಳು ಪೋಷಕರು/ತಂದೆ ತಾಯಿಗಳಿಂದಲೇ ನಡೆಯುತ್ತವೆ. ಇದನ್ನೇ ಮುಂದುವರೆದು ನೋಡಿದರೆ ಪೋಷಕರ ಧೋರಣೆಗಳಲ್ಲಿ ಹೆಣ್ಣುಮಕ್ಕಳ ಕುರಿತಾಗಿ ಅವರಾಡುವ ಮಾತುಗಳಲ್ಲಿ ಈ ರೀತಿಯಾಗಿ ಕಂಡು ಬರುತ್ತದೆ. ಅದೇನೆಂದರೆ 'ಹೆಣ್ಣು ಮಗಳಿಗೆ ಚೆನ್ನಾಗಿ ಅಡುಗೆ ಮಾಡಲು ಬಂದರೆ ಸಾಕು', 'ಅವಳೇನು ಓದಿ ಏನು ಸಾಧಿಸಬೇಕಿದೆ?, ಅದೇ ಗಂಡು ಮಗುವಿಗೆ ಓದಿಸಿದರೆ ಓದಿ ದೊಡ್ಡವನಾದ ಮೇಲೆ ನೌಕರಿ ಮಾಡಿ ಮನೆಯನ್ನು ಪೋಷಿಸುತ್ತಾನೆ. ಹಣ ಸಂಪಾದನೆ ಮಾಡುತ್ತಾನೆ, ಮನೆಯ ಬೆಳಕು, ವಂಶೋದ್ಧಾರಕ ಹೀಗೆ ಪುರುಷ ಪ್ರಧಾನತೆಯ ತಳಹದಿಯ ಮೇಲೆ ಅನೇಕ ಪೋಷಕರು ಹೆಣ್ಣು-ಗಂಡು ಮಕ್ಕಳ ಕುರಿತಂತೆ ಕುಟುಂಬದೊಳಗೆ ಲಿಂಗ ಪೂರ್ವಗ್ರಹಗಳನ್ನು ಹೊಂದಿರುವುದು ಕಂಡು ಬರುತ್ತದೆ. ಮುಂದೆ ಮಕ್ಕಳು ಇದೇ ಧೋರಣೆಗಳನ್ನು ಹೊಂದಿ ಸಾಮಾಜೀಕರಣ ಗೊಳಿಸುವುದರಿಂದ ಹೆಣ್ಣು-ಗಂಡುಮಕ್ಕಳ ಸಾಮಾಜೀಕರಣ ಸಮಸ್ಯೆಗೆ ಕಾರಣವಾಗುತ್ತಿದೆ. ಸಮಾಜದೊಳಗೆ ಈ ರೀತಿಯ ವಿಚಾರಗಳು ಕ್ರಿಯಾಶೀಲವಾಗಿರುವುದು ಕಂಡು ಬರುತ್ತದೆ. ನೆರೆಹೊರೆಯವರ ಮಾತುಗಳಲ್ಲಿ ಹೆಣ್ಣುಮಕ್ಕಳಿಗೆ ನಿನ್ನ ಗಂಡ ದುಡಿದು ತಂದು ಹಾಕುತ್ತಾನೆ. ನಿನ್ನದು ಏನು ಇದ್ದರೂ ಮನೆ ಕೆಲಸ, 'ಹೆಣ್ಣು ಎಷ್ಟು ಕಲಿತರೂ ಪಾತ್ರೆ ತೊಳೆಯೊದು ತಪ್ಪುತ್ತಾ? ಎಷ್ಟು ಕಲಿತರೂ ಅಡುಗೆ ಮಾಡೋದು ತಪ್ಪುತ್ತಾ', 'ಹೆಣ್ಣು ಹೆಚ್ಚು ಕಲಿತರೆ ಅಹಂಕಾರಿಯಾಗುತ್ತಾಳೆ; ಗಂಡಸರನ್ನು ನಿರ್ಲಕ್ಷ್ಯ ಮಾಡುತ್ತಾಳೆ' ಎಂಬ ಮಾತುಗಳನ್ನಾಡುವುದು ಸಮಾಜದಲ್ಲಿ ಕಂಡು ಬರುತ್ತದೆ. ಈ ರೀತಿಯ ಲಿಂಗ ಪೂರ್ವಗ್ರಹಗಳು ಸಮಾಜದಲ್ಲಿ ಚಲಾವಣೆಯಲ್ಲಿವೆ ಎನ್ನುವುದಕ್ಕೆ ಸಾಕ್ಷಿಯಾಗುತ್ತದೆ. ಇದು ಮುಂದುವರೆದು 'ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ಕಳುಹಿಸುವುದು ಸೂಕ್ತವಲ್ಲ. ಪ್ರೇಮದ ಬಲೆಯಲ್ಲಿ ಬಿದ್ದು, ಹುಡುಗರ ಜೊತೆ ಓಡಾಡುತ್ತಾಳೆ. ಓಡಿ ಹೋಗುತ್ತಾಳೆ. ಆಮೇಲೆ ಆಕೆಯನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಎಂದು ಲಿಂಗ ಪೂರ್ವಗ್ರಹಗಳು ಕುಟುಂಬದಿಂದ

ಪ್ರಾರಂಭವಾಗಿ ಸಮಾಜದಲ್ಲಿ ಪ್ರಕಟಗೊಂಡ ಅನೇಕ ತಾರತಮ್ಯಗಳನ್ನು ಸೃಷ್ಟಿಸುವುದು ಕಂಡು ಬರುತ್ತದೆ.

ಸಮಾಜದಲ್ಲಿ ಈಗಾಗಲೇ ಸಾಮಾನ್ಯವಾಗಿ ಸ್ಥಾಪಿತವಾದ ಹೆಣ್ಣು-ಗಂಡು ಮಕ್ಕಳ ಕುರಿತಂತೆ ಲಿಂಗಪೂರ್ವ ಕೆಲವು ಹೇಳಿಕೆಗಳೆಂದರೆ –

ಗಂಡುಮಕ್ಕಳ ಕುರಿತಂತೆ ಲಿಂಗ ಪೂರ್ವಗ್ರಹದ ಹೇಳಿಕೆಗಳು

೧. ಹುಡುಗರು ದೈಹಿಕವಾಗಿ ಹುಡುಗಿಯರಿಗಿಂತ ಬಲಿಷ್ಠ.

೨. ಹುಡುಗನು ದುಃಖಿತನಾದರೆ ಹುಡುಗಿಯಂತೆ ಅಳುವುದಿಲ್ಲ.

೩. ಹುಡುಗರು ಕ್ರೀಡೆಯಲ್ಲಿ ಹೆಚ್ಚು ಪಾಲ್ಗೊಳ್ಳಬೇಕು.

೪. ಹುಡುಗರು ರಫ್ ಆಗಿರಬೇಕು(ವರ್ತನೆಗಳು ಕಠಿಣವಾಗುತ್ತವೆ.).

೫. ನಿಷ್ಠರು (ಮಾತು ನಡತೆಯಲ್ಲಿ ನಿಷ್ಠುರ ಗುಣ ಹೊಂದಿದವರು).

೬. ತರ್ಕಬದ್ಧ ನಿರ್ಣಾಯಕರು.

೭. ಲೈಂಗಿಕತೆಯಲ್ಲಿ ಆಸಕ್ತರು.

೮. ದಕ್ಷತೆ ಇರುವವರು.

೯. ಉತ್ತಮ ವ್ಯವಹಾರಸ್ಥರು.

ಹೆಣ್ಣುಮಕ್ಕಳ ಕುರಿತಂತೆ ಲಿಂಗ ಪೂರ್ವಗ್ರಹದ ಹೇಳಿಕೆಗಳಿವೆ.

೧. ಅವಳಿಗೆ ಅಡುಗೆ ಮಾಡಲು ಬರುವುದಿಲ್ಲ

೨. ಹುಡುಗಿಯರು ನೀವು ಕರಕುಶಲ ಕಲಿತಿರಬೇಕು

೩. ಹುಡುಗಿಯರ ಸ್ವಭಾವ ಕೋಮಲ

೪. ಹುಡುಗಿಯರಿಗೆ ಡ್ರಸ್ ಗುಲಾಬಿ, ಕೆಂಪು ಇದ್ದರೆ ಚೆಂದ

೫. ಹೆಂಗಸರಿಗೆ ಕೆಲಸ ಮಾಡಲಾರದಷ್ಟು ದುರ್ಬಲರು.

೬. ಹೆಂಗಸರು ಹೊರಗಿನ ಕೆಲಸಗಿಂತ ಮನೆಯೇ ಕೆಲಸ ಮುಖ್ಯ.

೭. ಹೆಂಗಸರು ಅಳುವುದರ ಅಥವಾ ನಾಜೂಕಿನ ಮೂಲಕ ಅವರು ಏನು ಬೇಕೋ ಅದನ್ನು ಪಡೆಯುತ್ತಾರೆ.

೮. ಅವರ ದಕ್ಷತೆಗೆ ತಕ್ಕಂತೆ ಮನೋಲಹರಿಯೂ ಬದಲಾಗುತ್ತಿರುತ್ತದೆ.

೯. ಅವರು ಸೂಕ್ಷ್ಮರು; ತಡೆದುಕೊಳ್ಳಲಾರರು.

೧೦. ಅವರು ಬೇಗ ಬಿಸಿಲಿಗೆ ಬಳಲುತ್ತಾರೆ

೧೧. ಮಹಿಳೆಯರಿಗೆ ಏಕೆ ಆಸ್ತಿ

ಹೀಗೆ ಗಂಡು-ಹೆಣ್ಣುಗಳ ಕುರಿತಂತೆ ಸಮಾಜದಲ್ಲಿ ಲಿಂಗ ಪೂರ್ವಗ್ರಹ ಸಾಮಾಜೀಕರಣ ಪಟ್ಟಿ ದೊಡ್ಡದಾಗುತ್ತದೆ. ಇಂದು ಗಂಡು-ಹೆಣ್ಣುಮಕ್ಕಳ ಮೇಲೆ ಪ್ರಭಾವ ಬೀರಿ ಅದು ಅನೇಕ ಅಸಮಾನತೆ ಅಪಾಯಗಳನ್ನು ತಂದೊಡ್ಡುತ್ತಿದೆ. ಜೊತೆಗೆ 'ಹೆಣ್ಣು ಗಂಡಿನಷ್ಟು ಸಮರ್ಥಳಲ್ಲ', ನಿರ್ಣಾಯಕ ಹುದ್ದೆಯಲ್ಲಿ ಇರಲು ಅನರ್ಹಳು' ಎನ್ನುವಂಥ ಅಭಿಪ್ರಾಯವನ್ನು ಸಮಾಜದಲ್ಲಿ ಸೃಷ್ಟಿಯಾಗಲು ಕಾರಣವಾಗಿದೆ. ಹೀಗಾಗಿ ರಾಜಕೀಯದಂಥ ಅವಕಾಶಗಳಿಂದ ದೂರ ಇಡುವ ಪ್ರಯತ್ನಗಳನ್ನು ಮಾಡಿರುವುದು ಇದೆ. ಅದೇ ಗಂಡಿಗೆ ಅಧಿಕಾರ ಅವಕಾಶ ನೀಡುತ್ತದೆ.

೫.೨. ಸ್ಥಿರ ಮಾದರಿಯ ಲಿಂಗ ಪಾತ್ರಗಳ ಚೌಕಟ್ಟು

ಕುಟುಂಬದೊಳಗೆ ಸೃಷ್ಟಿಗೊಳ್ಳುವ ಹೆಣ್ಣು-ಗಂಡುಮಕ್ಕಳ ಕುರಿತಂತೆ ಸ್ಥಿರ ಮಾದರಿಗಳನ್ನು ಮತ್ತು ಲಿಂಗ ಪಾತ್ರದ ಚೌಕಟ್ಟನ್ನು ಲಿಂಗಾಧಾರಿತ ಪಡಿಯಚ್ಚು ಎಂತಲೂ ಕರೆಯಬಹುದಾಗಿದೆ. 'ಪಡಿಯಚ್ಚು' ಎಂದರೆ ಮುದ್ರಣಾಲಯದ ತಂತ್ರಜ್ಞಾನದಲ್ಲಿದೆ ಒಂದೇ ತರಹದ ಹಲವಾರು ಪ್ರತಿಗಳನ್ನು ಮಾಡಲು ಬಳಸುವ ಲೋಹದ ಪ್ಲೇಟುಗಳನ್ನು 'ಪಡಿಯಚ್ಚು'ಗಳೆಂದು ಕರೆಯುತ್ತಾರೆ. ಈ ಪಡಿಯಚ್ಚು ಸ್ಥಿರ ಮಾದರಿಯ ರೂಪದ್ದು, ಇದನ್ನು ಕುಟುಂಬದೊಳಗೆ ಹೆಣ್ಣು-ಗಂಡು ಮಕ್ಕಳನ್ನು ಸಾಮಾಜೀಕರಣಗೊಳಿಸುವ ರೂಪದಿಂದ ತಿಳಿದು ಬರುತ್ತದೆ. ಇದಕ್ಕೆ ಕುಟುಂಬದೊಳಗೆ ಹೆಣ್ಣು ಮಗುವನ್ನು ಮಗಳು, ತಂಗಿ, ಅಕ್ಕ, ಹೆಂಡತಿ, ಸೊಸೆ, ಅತ್ತೆ, ತಾಯಿ ಎನ್ನುವ ಪಾತ್ರಗಳಿಗೆ ತಕ್ಕಂತೆ ಹೆಣ್ಣುಮಕ್ಕಳನ್ನು ಸಾಮಾಜೀಕರಣಗೊಳಿಸುತ್ತಿರುವುದು ಕಂಡು ಬರುತ್ತದೆ. ಈ ಮೂಲಕ ಸ್ಥಿರ ಮಾದರಿ ರೂಪದಲ್ಲಿ ಹೆಣ್ಣು ಮಕ್ಕಳಿಗೆ ಪಾತ್ರಗಳನ್ನು ಹೇಳಿ ಕೊಡಲಾಗುತ್ತದೆ. ಅದೇನೆಂದರೆ ಹೆಣ್ಣುಮಕ್ಕಳಿಗೆ ಮಗಳಾಗಿದ್ದಾಗ ಅಂದರೆ ಬಾಲ್ಯದಲ್ಲಿ ಕಸ ಬಳಿಸುವುದು, ಪಾತ್ರೆ ತೊಳೆಸುವುದು, ಅಡುಗೆ ಮಾಡಿಸುವುದು, ಮನೆಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದನ್ನು ಹೇಳಿಕೊಡುವುದು, ಮನೆಯ ಅಲಂಕಾರದ ಬಗ್ಗೆ ಹೇಳಿ ಕೊಡುವುದು, ಮಕ್ಕಳ ಲಾಲನೆ-ಪಾಲನೆ, ಪೋಷಣೆ, ರಕ್ಷಣೆ ಕುರಿತಂತೆ ಹೇಳಿ ಕೊಡುವುದು, ಇಲ್ಲಿಯ ಪಾತ್ರ ಮಾದರಿ ಮುಂದಿನ ಹಂತವಾದ ಮದುವೆಗೆ ಸಿದ್ಧಗೊಂಡು ಮುಂದೆ ಕುಟುಂಬದಲ್ಲಿ ಕಾರ್ಯನಿರ್ವಹಿಸುವ ಪಾತ್ರಗಳ ಕುರಿತಂತೆ ಸಾಮಾಜೀಕರಣ ಗೊಳಿಸಲಾಗುತ್ತದೆ. ಮುಂದುವರೆದು, ಹೆಂಡತಿಯ ಗುಣಗಳನ್ನು ಅಳವಡಿಸಿಕೊಳ್ಳಲಿಕ್ಕೆ ಮೌಲ್ಯ ಆದರ್ಶ ಗುಣಗಳನ್ನು ಹೇಳಲಾಗುತ್ತದೆ. ಹೆಣ್ಣು ಮದುವೆಯಾಗಿ ಹೆಂಡತಿ ಎನಿಸಿಕೊಂಡವಳಿಗೆ ಕುಟುಂಬದೊಳಗೆ ಮತ್ತೆ ಬೇರೆ ರೀತಿಯಾದ ಚೌಕಟ್ಟಿನಡಿಯಲ್ಲಿ ಸಾಮಾಜೀಕರಣವನ್ನು ರೂಪಿಸಲಾಗುತ್ತದೆ. ಹೆಂಡತಿಯಾದವಳು ಗಂಡನಿಗೆ ವಿಧೇಯಳಾಗಿ ಇರಬೇಕು, ಗಂಡನು ಹೇಳಿದ ಮಾತುಗಳನ್ನು ಕೇಳಬೇಕು, ಆದರ್ಶ ಗೃಹಿಣಿ ತತ್ವಗಳನ್ನು ಪಾಲಿಸಬೇಕು, ಅಡುಗೆ ಮಾಡುವುದು, ಹಿರಿಯರಿಗೆ

ಗೌರವದೊಂದಿಗೆ ಉಪಚರಿಸುವುದು, ಮನೆಯ ಜವಾಬ್ದಾರಿಗಳನ್ನು ನಿಭಾಯಿಸುವುದು, ಮುಂದುವರೆದು ಹೆಂಡತಿ ಪಾತ್ರದೊಂದಿಗೆ ಸೊಸೆಯ ಪಾತ್ರಗಳನ್ನು ಹೇಳಿ ಕೊಡಲಾಗುತ್ತದೆ. ಕುಟುಂಬದ ಗೌರವ ಕಾಪಾಡಬೇಕು, ಮನೆತನದ ಹೆಸರನ್ನು ಉಳಿಸಲು ಕುಟುಂಬದೊಳಗೆ ಇದ್ದು ಕೆಲಸ ಮಾಡಬೇಕು, ಕುಟುಂಬದ ವಿಷಯಗಳನ್ನು ಯಾರಿಗೆ ಹೇಳದಂತೆ ಕುಟುಂಬದ ಮಾನ-ಮಾರ್ಯಾದೆ ಗೌರವ ಕಾಪಾಡಬೇಕು, ಎಷ್ಟೇ ಕಷ್ಟವಾದರೂ ಮನೆಯಲ್ಲಿ ಇದ್ದು ಹಿಂಸೆಯನ್ನು ಸಹಿಸಿಕೊಂಡು ಹೋಗಬೇಕು, ಬಂಧು-ಬಳಗ, ಗಂಡ, ಅತ್ತೆ, ಮಾವ, ನಾದಿನಿ, ಮೈದುನ ಮನೆಯ ಎಲ್ಲರನ್ನು ನಿಭಾಯಿಸಿಕೊಂಡು ಹೋಗಬೇಕು. ಇದು ಅದರ್ಶ ಹೆಂಡತಿ ಹಾಗೂ ಸೊಸೆಯ ಗುಣ ಮೌಲ್ಯಗಳೆಂದು ಹೇಳಿ ಕೊಡಲಾಗುತ್ತದೆ. ಹೆಣ್ಣು ತಾಯಿ ಆಗಿ ಮಧ್ಯ ವಯಸ್ಸಿಗೆ ಬಂದಾಗ ಈ ಪಾತ್ರಗಳಲ್ಲಿ ಮನೆಯಲ್ಲಿದ್ದು ಸೊಸೆಗೆ ಅಥವಾ ಸೊಸೆಯಂದಿರಿಗೆ ಕುಟುಂಬದೊಳಗಿನ ಕೆಲಸಗಳನ್ನು ಹೇಳಿಕೊಡುವುದು, ಮನೆಯಲ್ಲಿನ ಚಿಕ್ಕಮಕ್ಕಳನ್ನು ನೋಡಿಕೊಳ್ಳುವುದು, ಮನೆಯ ಆಗುಹೋಗುಗಳ ಕುರಿತಾಗಿ ಸೊಸೆಯಂದಿರಿಗೆ ಮತ್ತು ಮಕ್ಕಳಿಗೆ ಮಾರ್ಗದರ್ಶನವನ್ನು ಮಾಡುವುದು ಹೀಗೆ ಹೆಣ್ಣಿಗೆ ಸ್ಥಿರ ಮಾದರಿ ಚೌಕಟ್ಟಿನಲ್ಲಿ ಹೆಣ್ಣುಮಕ್ಕಳಿಗೆ ಕೌಟುಂಬಿಕ ಸಾಮಾಜೀಕರಣ ನೀಡಲಾಗುತ್ತದೆ. ಅದರಾಚೆಗೆ ಹೆಣ್ಣುಮಕ್ಕಳಿಗೆ ಶಿಕ್ಷಣ ಅಧಿಕಾರ, ಉದ್ಯೋಗ, ಸಾರ್ವಜನಿಕ ಸಂಪರ್ಕ, ಸಾಮಾಜಿಕ, ರಾಜಕೀಯ, ಆರ್ಥಿಕ ಸ್ಥಾನಮಾನಗಳ ಕುರಿತಾಗಿ ಯೋಚಿಸುವುದು ಕಂಡು ಬರುವುದಿಲ್ಲ. ಇದಕ್ಕೆ ಸ್ತ್ರೀವಾದಿ ಚಿಂತಕರು "ಹೆಣ್ಣು ಮತ್ತು ಗಂಡು ಅಥವಾ ಸ್ತ್ರೀತ್ವ ಮತ್ತು ಪುರುಷತ್ವ ಎಂಬ ಅಸ್ಮಿತೆಗಳು ನಿರ್ದಿಷ್ಟವಾದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ವರ್ಗ, ವಯಸ್ಸು, ವೈವಾಹಿಕ ಸ್ಥಾನಮಾನ ಇತ್ಯಾದಿಯನ್ನು ಆಧರಿಸಿ ಕಟ್ಟಲ್ಪಟ್ಟಿರುತ್ತವೆ"[೧] ಎಂದು ಹೇಳಿರುವುದು ಗಮನಾರ್ಹ.

ಕುಟುಂಬದೊಳಗೆ ಲಿಂಗ ಮಾದರಿ ಪಾತ್ರಗಳ ಚೌಕಟ್ಟನ್ನು ರೂಪಿಸುವುದರ ಜೊತೆಗೆ ಹೆಣ್ಣು ಮಗುವಿನ ವ್ಯಕ್ತಿತ್ವದಲ್ಲಿ ಶಿಕ್ಷಣ, ಆತ್ಮಗೌರವ, ರಕ್ಷಣೆಯನ್ನು ಪ್ರೋತ್ಸಾಹಿಸುವುದಕ್ಕೆ ಬದಲಾಗಿ ವಿನಯ, ಸಹನೆ, ವಿಧೇಯತೆ, ಕ್ಷಮೆ, ಪ್ರೀತಿ, ವಿಶ್ವಾಸ ಇವುಗಳನ್ನು ಬೋಧಿಸಲಾಗುತ್ತದೆ. ಅವಳು ಮುಂದೆ ವಹಿಸಬೇಕಾದ ಪಾತ್ರಗಳಾದ ತಾಯಿ, ಮಗಳು, ಹೆಂಡತಿ, ಸೊಸೆ, ಅತ್ತೆ, ನಾದಿನಿ, ಓರಗಿತ್ತಿ ಹೀಗೆ ವಿವಿಧ ಪಾತ್ರಗಳನ್ನೇ ಗಮನದಲ್ಲಿಟ್ಟುಕೊಳ್ಳಲಾಗಿರುತ್ತದೆ. ಹೀಗಾಗಿ ಹೆಣ್ಣುಮಕ್ಕಳಿಗೆ ನೀಡುವ ಸಾಮಾಜೀಕರಣದಲ್ಲಿ ಹುಟ್ಟಿನಿಂದಲೇ ಹೆಣ್ಣುಮಗುವನ್ನು ಪರರ ಮನೆಯ ಸೊತ್ತು ಎಂಬಂತೆ ಬೆಳೆಸಲಾಗುತ್ತದೆ. ಇದಕ್ಕೆ ಅವಳಿಗೆ ಹೇಳುವ ಮಾತುಗಳಲ್ಲಿ 'ನೀನು ಬೇರೆಯವರ ಮನೆಗೆ ಹೋಗುವಾಕೆ', 'ಎಲ್ಲವನ್ನು ಇಲ್ಲೇ ಕಲಿಯಬೇಕು' ಎಂದು ಹೇಳುವ ಮಾತುಗಳಿಂದ ತಿಳಿಯಬಹುದಾಗಿದೆ. ಇದರಿಂದ ಗಂಡುಮಕ್ಕಳೊಂದಿಗೆ ಸಮಾನವಾಗಿ ಆಡಲು, ಕಲಿಯಲು ಅವಕಾಶ ಕಲ್ಪಿಸದೆ ಪ್ರತ್ಯೇಕವಾಗಿ ಸಾಮಾಜೀಕರಣಗೊಳಿಸಲಾಗುತ್ತದೆ. ಇದರಿಂದಲೇ ಸಮಾಜದಲ್ಲಿ ಹೆಣ್ಣೆಂದರೆ ದುರ್ಬಲೆ, ಗಂಡಸಿನ ರಕ್ಷಣೆಯಲ್ಲಿರಬೇಕಾದವಳು, ಹೆಣ್ಣು ಮಕ್ಕಳ ಬೌದ್ಧಿಕ ಮಟ್ಟ ಕಡಿಮೆ ಎಂಬಂಥ ಆರೋಪಕ್ಕೆ ಗುರಿಯಾಗಿರುವುದು ಕಂಡು ಬರುತ್ತದೆ.

ಹೆಣ್ಣುಮಕ್ಕಳಿಗೆ ಸ್ಥಿರ ಮಾದರಿಯ ಪಾತ್ರಗಳ ಚೌಕಟ್ಟಿನ ಸಾಮಾಜೀಕರಣದಿಂದ ವೈಯಕ್ತಿಕ ಮತ್ತು ಸಾರ್ವತ್ರಿಕವಾಗಿ ಸ್ವತಃ ತಾವೇ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲದಂತಾಗಿದೆ. ಹೆಣ್ಣು ಸೊಸೆಯಾಗಿ ಅನುಭವಿಸುವ ಮಾನಸಿಕ ದೈಹಿಕ ಹಾಗೂ ಕೌಟುಂಬಿಕ ಸಮಸ್ಯೆಗಳಿಗೆ ಹಿಂಸೆಯಂತಹ ಒಳಗಾಗುತ್ತಿರುವುದು ಕಂಡು ಬರುತ್ತದೆ. ಕುಟುಂಬದೊಳಗೆ ನೀಡುವ ಸ್ಥಿರ ಮಾದರಿ ಪಾತ್ರಗಳ ಸಾಮಾಜೀಕರಣದಿಂದಾಗಿ ಹೆಣ್ಣು ಮಕ್ಕಳಲ್ಲಿ, ತಾನು ಜೀವಿಸುವುದು ತನಗಾಗಿ ಅಲ್ಲ, ಇತರರ ಸೇವೆಗಾಗಿ, ಅಂದರೆ ಗಂಡ, ಮಕ್ಕಳು, ಅತ್ತೆ, ಮಾವ, ಮೈದುನ, ಭಾವ, ಹಿರಿಯರು, ಕಿರಿಯರ ರಕ್ಷಣೆ ಪಾಲನೆ ಪೋಷಣೆಗಳು ಎನ್ನುವಂತಹ ಮನೋಸ್ಥಿತಿಗಳು ಕಂಡು ಬರುತ್ತವೆ. ಮತ್ತೊಂದು ಕಡೆ ಹೆಣ್ಣುಮಕ್ಕಳಿಗೆ ಕುಟುಂಬದೊಳಗಿನ ಸ್ಥಿರ ಮಾದರಿ ಚೌಕಟ್ಟಿನಿಂದಾಗಿ ಇಂದಿಗೂ ಹೆಣ್ಣು ಮಕ್ಕಳು ಆಧುನೀಕರಣದ ಜಾಗತೀಕರಣದಲ್ಲಿ ದೊರೆಯುವ ಉದ್ಯೋಗದಲ್ಲಿ ಕೂಡ ಕೌಟುಂಬಿಕ ಚೌಕಟ್ಟಿನಂತೆ ಗುಮಾಸ್ತೆ, ನರ್ಸ್(ದಾದಿ), ಟೈಪಿಸ್ಟ್, ಸ್ವಾಗತಕಾರಿಣಿ, ಶಿಕ್ಷಕಿ, ದೂರವಾಣಿ ಆಪರೇಟರ್ ಮುಂತಾದ ಮಧ್ಯಮ ದರ್ಜೆಯ ಉದ್ಯೋಗದಲ್ಲಿ ದುಡಿಯುತ್ತಿರುವುದು ಕಂಡು ಬರುತ್ತದೆ. ಈ ಉದ್ಯೋಗಗಳೇ ಹೆಣ್ಣಿಗೆ ಸುರಕ್ಷಿತ ಉದ್ಯೋಗಳೆಂಬ ಸಾಮಾಜೀಕರಣವನ್ನು ಬಿತ್ತಲಾಗಿದೆ. ಇದರಿಂದಾಗಿ ಹೆಣ್ಣುಮಕ್ಕಳು ಉನ್ನತ ಶಿಕ್ಷಣ ಪಡೆದರೂ ಕುಟುಂಬದಾಚೆಗಿನ ಹೊರ ಪ್ರಪಂಚದತ್ತ, ಆಧುನಿಕತೆಯತ್ತ, ಉದ್ಯೋಗಾವಕಾಶಗಳತ್ತ ದೃಷ್ಟಿ ಹರಿಸಲು ಸಾಧ್ಯವಾಗದಂತಾಗಿದೆ.

ಕುಟುಂಬದೊಳಗಿನ ಸ್ಥಿರ ಮಾದರಿ ಪಾತ್ರಗಳಿಂದಾಗಿ ಹೆಣ್ಣುಮಕ್ಕಳಿಗೆ ರೂಪಿಸುತ್ತಿರುವ ಸಾಮಾಜೀಕರಣದೊಳಗಡೆ ಲೈಂಗಿಕತೆ, ಕನ್ಯತ್ವ ರಕ್ಷಣೆ, ಪತಿನಿಷ್ಠೆ ಮುಂತಾದ ಕಲ್ಪನೆಗಳನ್ನು ಸಾಮಾಜೀಕರಣಗೊಳಿಸಲಾಗುತ್ತಿದೆ. ಹೀಗಾಗಿ ಹೆಣ್ಣುಮಕ್ಕಳು ಗರತಿಯಾಗಿರಬೇಕು, ಪತಿವ್ರತೆಯಾಗಿರಬೇಕು ಎನ್ನುವಂಥ ಮಾತುಗಳು ಸಮಾಜದಿಂದಲೇ ಕಂಡು ಬರುತ್ತವೆ. ಮತ್ತೊಂದು ಕಡೆ ಕುಟುಂಬದೊಳಗಿನ ಲಿಂಗ ಮಾದರಿ ಚೌಕಟ್ಟಿನಲ್ಲಿ ಹೆಣ್ಣುಮಕ್ಕಳಿಗೆ ಕುಟುಂಬದಲ್ಲಿ ಆಗುವ ನೋವು, ಹಿಂಸೆ, ಕೌರ್ಯ, ಅಸಹಾಯಕತೆ, ಅವಲಂಬನೆಗಳನ್ನು 'ಸಹಜ'ವೆಂದು ನಂಬಿಸಲಾಗುತ್ತದೆ. ಇದರಿಂದ ಇಂದಿನ ಸಮಾಜದಲ್ಲಿ ಹೆಣ್ಣಿಗೆ ಎಷ್ಟೇ ನೋವು, ಹಿಂಸೆಗಳಾದರೂ ಅದನ್ನು ಅವಳು ಸಹಿಸಿಕೊಂಡು ಹೋಗಬೇಕಾದದು ಹೆಣ್ಣಿನ ಲಕ್ಷಣ ಎನ್ನುವಂಥ ಸಾಮಾಜಿಕ ಮಾತುಗಳು ಕಂಡು ಬರುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಹೆಣ್ಣಿಗೆ 'ಸಹಜ'ವೆಂದು ನಂಬಿಸಲಾಗಿರುವ ಸಾಮಾಜೀಕರಣದಲ್ಲಿ ಹೆಣ್ಣುಮಕ್ಕಳಿಗೆ ಶೋಷಣೆ ಕಂಡು ಬರುತ್ತದೆ. ಇದಕ್ಕೆ ಸ್ತ್ರೀವಾದಿ ಚಿಂತನೆಗಳು ಇದನ್ನು ಧಿಕ್ಕರಿಸುವತ್ತ ಮಹಿಳಾ ವಿಮೋಚನೆಯ ಆಂದೋಲನಗಳ ದಾರಿಯಲ್ಲಿ ಮುಂದುವರೆದಿರುವುದು ಕಂಡು ಬರುತ್ತದೆ. ಕುಟುಂಬ ಹೆಣ್ಣಿಗೆ 'ಅನಿವಾರ್ಯ'ವಾಗಬಾರದು ಮತ್ತು ಕುಟುಂಬ ಹೆಣ್ಣಿಗೆ 'ಅನಿವಾರ್ಯ' ಎಂಬ ಸಾಮಾಜೀಕರಣದಿಂದ ಹೊರಬರಬೇಕು. ಆಕೆಗೆ ತನ್ನ, ದೇಹ, ಮನಸ್ಸು ಹಾಗೂ ಬುದ್ಧಿಯ ಬಗ್ಗೆ ಸ್ವತಂತ್ರವಿರಬೇಕು. ಕೌಟುಂಬಿಕ ಜವಾಬ್ದಾರಿಗಳು ಸ್ತ್ರೀ-ಪುರುಷರಿಬ್ಬರಿಗೂ ಸಮಾನ ಹಂಚಿಕೆಯ ಸಾಮಾಜೀಕರಣ ರೂಪಿತಗೊಳಿಸಬೇಕೆಂಬ ಸ್ತ್ರೀವಾದದ ಹಕ್ಕೊತ್ತಾಯ ಇಂದು ಕಂಡು ಬರುತ್ತಿದೆ. ಈ ಹಿನ್ನೆಲೆಯಿಂದ ಇಲ್ಲಿ ಕುಟುಂಬದೊಳಗೆ ತಂದೆ-

ತಾಯಿ ಮತ್ತು ಪೋಷಕರು ಹೊಂದಿರುವ ಲಿಂಗ ಪೂರ್ವಗ್ರಹ ಮತ್ತು ಹೆಣ್ಣು-ಗಂಡು ಮಕ್ಕಳ ಕುರಿತಂತೆ ರೂಪಿಸುತ್ತಿರುವ ಸ್ಥಿರ ಮಾದರಿಯ ಸಾಮಾಜೀಕರಣದ ಸಂಗತಿಗಳನ್ನು ಹಾಗೂ ಇದಕ್ಕೆ ಹೆಣ್ಣು-ಗಂಡು ಮಕ್ಕಳ ಪ್ರತಿಕ್ರಿಯೆಗಳನ್ನು ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಿಕೊಂಡು ದಾಖಲಿಸಿ ವಿಶ್ಲೇಷಣೆ ಮಾಡಲಾಗಿದೆ.

೫.೩. ಕೇತ್ರಕಾರ್ಯ ಮಾಹಿತಿಯ ವಿಶ್ಲೇಷಣಾತ್ಮಕ ಸಮೀಕ್ಷೆ

ಸಾಮಾಜೀಕರಣ ಸಮಸ್ಯೆ ಕೌಟುಂಬಿಕ ವಲಯದಿಂದ ಕಾರಣವಾಗುತ್ತಿದೆ. ಇದಕ್ಕೆ ಕುಟುಂಬದಲ್ಲಿ ಕೆಲವು ತಂದೆ-ತಾಯಿಗಳು, ಮಕ್ಕಳ ಕುರಿತಂತೆ ಲಿಂಗ ತಾರತಮ್ಯ ಮಾಡುವುದಿಲ್ಲ ಎಂದು ಎಷ್ಟೇ ಹೇಳಿದ್ದರೂ ಕೂಡ ಸಮಾಜದಲ್ಲಿನ ಸಾಮಾಜೀಕರಣದಿಂದಾಗಿ, ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಕುಟುಂಬದಲ್ಲಿ ತಂದೆ-ತಾಯಿಗಳು ಲಿಂಗ ತಾರತಮ್ಯ ಸಾಮಾಜೀಕರಣ ಅನುಸರಿಸುತ್ತಿರುವುದು ಕಂಡುಬರುತ್ತದೆ. ಇದಕ್ಕೆ ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಸಿರುಗುಪ್ಪ ತಾಲೂಕಿನ ಬೂದುಗುಂಪ, ಕರೂರು, ತೆಕ್ಕಲಕೋಟೆ ಗ್ರಾಮ, ಹೊಸಪೇಟೆ ತಾಲೂಕಿನ ಡಣಾಪುರ, ಕಮಲಾಪುರ, ಬುಕ್ಕಸಾಗರ ಗ್ರಾಮ. ಕೊಟ್ಟೂರು ತಾಲೂಕಿನಲ್ಲಿ ಚಪ್ಪರದಹಳ್ಳಿ, ಹಾರಾಳು, ಕೆ. ಅಯ್ಯನಹಳ್ಳಿ ಗ್ರಾಮ. ಸಂಡೂರು ತಾಲೂಕಿನಲ್ಲಿ ಬಂಡ್ರಿ, ಯಶವಂತ ನಗರ, ತಾರಾನಗರ ಗ್ರಾಮ. ಕೂಡ್ಲಿಗಿ ತಾಲೂಕಿನ ಹನಸಿ, ಶಿವಪುರ, ಹಿರೇಹೆಗ್ಡಾಳ ಗ್ರಾಮ ಹೀಗೆ ಒಟ್ಟು ತಾಲೂಕಿಗೆ ೮೦ ಕುಟುಂಬಗಳಂತೆ ಒಟ್ಟು ೫ ತಾಲೂಕಿನಲ್ಲಿ ಒಟ್ಟು ೪೦೦ ತಂದೆ-ತಾಯಿ ಪೋಷಕ ಕುಟುಂಬಗಳನ್ನು ಕ್ಷೇತ್ರಕಾರ್ಯಕ್ಕೆ ಬಳಸಿಕೊಳ್ಳಲಾಗಿದೆ. ಕುಟುಂಬದೊಳಗಿನ ತಂದೆ-ತಾಯಿ/ ಪೋಷಕರುಗಳಿಗೆ ಸಂಬಂಧಿಸಿದಂತೆ, ನಡೆಸಿದ ಕ್ಷೇತ್ರಕಾರ್ಯದ ಅಧ್ಯಯನವನ್ನಾಧರಿಸಿದ ಮಾಹಿತಿ ಈ ಕೆಳಕಂಡಂತೆ ಕಂಡು ಬರುತ್ತದೆ.

ಕೋಷ್ಟಕ-೧

ಕ್ರ.ಸಂ.	ವಿವರ	ಹೌದು (ಶೇಕಡಾ ವಾರುಗಳಲ್ಲಿ)	ಇಲ್ಲ ವಾರುಗಳಲ್ಲಿ) (ಶೇಕಡಾ
೧.	ನಿಮ್ಮ ಪ್ರಕಾರ ಸಮಾಜದಲ್ಲಿ ಹೆಣ್ಣು-ಗಂಡುಗಳ ಮಧ್ಯೆ ಲಿಂಗಭೇದವಿದೆಯೆಂದು ನಿಮಗೆ ಅನಿಸುತ್ತಿದೆಯೇ?	೯೪.೩೨	೫.೬೮
೨.	ನಿಮ್ಮ ಪ್ರಕಾರ ನಿಮ್ಮ ಕುಟುಂಬ (ಮನೆಯಲ್ಲಿ)ದಲ್ಲಿ ಹೆಣ್ಣು-ಗಂಡು ಮಕ್ಕಳ ಮಧ್ಯೆ ಲಿಂಗಬೇಧವಿದೆಯೇ?	೯೧.೦೨	೮.೯೮
೩.	ನಿಮ್ಮ ಮನೆಯಲ್ಲಿ ಹೆಣ್ಣು-ಗಂಡು ಮಕ್ಕಳನ್ನು ಪ್ರತ್ಯೇಕಿಸಿ ಬೇರೆ ಬೇರೆ ಕೆಲಸಗಳನ್ನು ನೀಡಿದ್ದೀರಾ?.	೮೮.೯೧	೧೧.೦೯
೪.	ನಿಮ್ಮ ಮನೆಯಲ್ಲಿ ಹೆಚ್ಚು ಗೃಹಕೃತ್ಯ ಕಾರ್ಯಗಳನ್ನು ಹೆಣ್ಣು ಮಕ್ಕಳಿಗೆ ಮಾತ್ರ ನೀಡಿದ್ದೀರಾ?	೮೭.೬೯	೧೨.೩೧

೫.	ನಿಮ್ಮ ಮನೆಯಲ್ಲಿ ಹೆಣ್ಣುಮಕ್ಕಳು ಗಂಡುಮಕ್ಕಳ ಉಡುಪುಗಳನ್ನು ಧರಿಸಲು ನೀವು ಇಚ್ಛಿಸುತ್ತಿರಾ?	೧೩.೩೭	೮೬.೬೩
೬.	ನಿಮ್ಮ ಮನೆಯ ಹೆಣ್ಣುಮಕ್ಕಳನ್ನು ಅವರ ಸ್ನೇಹಿತನ (ಗಂಡುಮಕ್ಕಳ) ಜೊತೆ ಬೆರೆಯಲು ಒಪ್ಪುತ್ತಿರಾ?	೨೨.೪೨	೭೭.೫೮
೭.	ನಿಮ್ಮ ಮನೆಯ ಗಂಡುಮಕ್ಕಳು ಅವರ ಸ್ನೇಹಿತೆ (ಹೆಣ್ಣುಮಕ್ಕಳ) ಜೊತೆ ಬೆರೆಯಲು ಇಚ್ಛಿಸುತ್ತಿರಾ?	೬೭.೨೩	೩೨.೭೭
೮.	ನಿಮ್ಮ ಮನೆಯಲ್ಲಿ ಹೆಣ್ಣುಮಕ್ಕಳು ಗಂಡುಮಕ್ಕಳು ಮಾಡಬಹುದಾದ ಕೆಲಸಗಳೆಂದು ಹೇಳಿ ಕೆಲಸವನ್ನು ನಿಲ್ಲಿಸಿರುವುದು ಅಥವಾ ನಿಮ್ಮ ಜೊತೆ (ಪೋಷಕರ) ವಾದಕ್ಕೆ ಇಳಿದಿರುವುದುಂಟೆ?	೮೭.೬೯	೧೨.೩೧
೯.	ನಿಮ್ಮ ಮನೆಯಲ್ಲಿ ಗಂಡುಮಕ್ಕಳು ಇದು ಹೆಣ್ಣುಮಕ್ಕಳು ಮಾಡಬಹುದಾದ ಕೆಲಸಗಳೆಂದು ಹೇಳಿ ಕೆಲಸವನ್ನು ನಿಲ್ಲಿಸಿರುವುದು ಅಥವಾ ನಿಮ್ಮ (ಪೋಷಕರ) ಜೊತೆ ವಾದಕ್ಕೆ ಇಳಿದಿರುವುದುಂಟೆ?	೮೩.೭೮	೧೬.೨೨
೧೦.	ನಿಮ್ಮ ಮನೆಯಲ್ಲಿ ಹೆಣ್ಣುಮಕ್ಕಳು ಗಂಡುಮಕ್ಕಳ ಉಡುಪುಗಳನ್ನು ಧರಿಸುತ್ತಿದ್ದಾರೆಯೇ?	೧೦.೨೨	೮೯.೭೮

ಈ ಮೇಲಿನ ಕೋಷ್ಟಕ-೧ರಲ್ಲಿ ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯನ್ನು ವಿಶ್ಲೇಷಿಸಿದರೆ, ಹೆಣ್ಣು-ಗಂಡಿನ ಕುರಿತಂತೆ, ತಂದೆ-ತಾಯಿ, ಪೋಷಕರು ಲಿಂಗ ಪೂರ್ವಗ್ರಹಗಳನ್ನು ಹೊಂದಿರುವುದು ಕಂಡು ಬರುತ್ತದೆ. ಜೊತೆಗೆ ಹೆಣ್ಣು-ಗಂಡುಮಕ್ಕಳಿಗೆ ಭಿನ್ನ ಸಾಮಾಜೀಕರಣ ನೀಡುತ್ತಿರುವುದು ಕಂಡು ಬರುತ್ತದೆ. ಇದಕ್ಕೆ ಕ್ಷೇತ್ರಕಾರ್ಯದ ಮೂಲಕ ದೊರೆತ ಮಾಹಿತಿಯಲ್ಲಿ ತಂದೆ-ತಾಯಿ, ಪೋಷಕರು ಸಮಾಜದಲ್ಲಿ ಹೆಣ್ಣು-ಗಂಡುಗಳ ಮಧ್ಯೆ ಲಿಂಗ ಭೇದವಿದೆ ಎನ್ನುವ ಪ್ರಶ್ನೆಗೆ ಶೇ. ೯೪.೩೨ರಷ್ಟು ಪೋಷಕರು ಒಪ್ಪಿಕೊಳ್ಳುತ್ತಾರೆ. ಮುಂದುವರೆದು ಶೇ. ೯೧.೦೨ರಷ್ಟು ಪೋಷಕರು ತಮ್ಮ ಮನೆಯಲ್ಲಿ ಕೂಡ ಹೆಣ್ಣು-ಗಂಡು ಮಕ್ಕಳ ಲಿಂಗಬೇಧವಿದೆ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಅಂದರೆ ಸಮಾಜದಲ್ಲಿ ಇರುವ ಲಿಂಗಭೇದ ಸಂಗತಿಗಳೇ ಕುಟುಂಬದಲ್ಲಿ ಮುಂದುವರೆಸಿರುವುದು ಪೋಷಕರು ನೀಡಿರುವ ಉತ್ತರದಲ್ಲಿ ದೊರೆಯುತ್ತದೆ. ಕುಟುಂಬದೊಳಗೆ ಹೆಣ್ಣು-ಗಂಡು ಮಕ್ಕಳಿಗೆ ಪ್ರತ್ಯೇಕಿಸಿ ಕೆಲಸವನ್ನು ನೀಡಿರುವುದು, ತಂದೆ/ತಾಯಿ/ಪೋಷಕರು ನೀಡಿರುವ ಉತ್ತರದಲ್ಲಿ ಶೇ. ೮೮.೯೧ರಷ್ಟು ಕಂಡು ಬರುತ್ತದೆ. ಇನ್ನು 'ನಿಮ್ಮ ಮನೆಯಲ್ಲಿ ಹೆಚ್ಚು ಗೃಹಕೃತ್ಯ ಕಾರ್ಯಗಳನ್ನು ಹೆಣ್ಣುಮಕ್ಕಳಿಗೆ ಮಾತ್ರ ನೀಡುತ್ತಿರಾ' ಎನ್ನುವ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಶೇ. ೮೭.೬೯ರಷ್ಟು ಇದೆ. ಇಲ್ಲ ಅಂದವರ ಪ್ರಮಾಣ ಶೇ. ೧೨.೩೧ರಷ್ಟು ಕಂಡು ಬರುತ್ತದೆ. ಇದು ಹೆಣ್ಣು-ಗಂಡು ಮಕ್ಕಳಲ್ಲಿ ಶ್ರಮ ವಿಭಜನೆ ಒಂದೇ ಸಾಮಾಜೀಕರಣಗೊಳಿಸುವುದಿಲ್ಲ. ಮುಂದುವರೆದು ಹೆಣ್ಣು-ಗಂಡು ಪ್ರತ್ಯೇಕವಾದ ಸಂಗತಿಗಳನ್ನು ಸ್ಥಿರಗೊಳಿಸುತ್ತದೆ. ಹೆಣ್ಣು ಗಂಡು ಮಕ್ಕಳಲ್ಲಿ ಪೋಷಕರು ಹೊಂದಿರುವ ಲಿಂಗ ಪೂರ್ವಗ್ರಹ ಕುರಿತಂತೆ ಮಾಹಿತಿಯಲ್ಲಿ ಕೇಳಲಾದ

ಪ್ರಶ್ನೆಗಳಲ್ಲಿ 'ನಿಮ್ಮ ಮನೆಯಲ್ಲಿ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳ ಉಡುಪುಗಳನ್ನು ಧರಿಸಲು ಇಚ್ಚಿಸುತ್ತಿರಾ ಎನ್ನುವ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಶೇ. ೧೩.೩೭ರಷ್ಟು. ಇಲ್ಲ ಅಂದವರ ಪ್ರಮಾಣ ಶೇ. ೮೬.೬೩ರಷ್ಟಿದೆ. ಇನ್ನು 'ನಿಮ್ಮ ಮನೆಯ ಹೆಣ್ಣುಮಕ್ಕಳನ್ನು ಅವರ ಸ್ನೇಹಿತನ(ಗಂಡುಮಕ್ಕಳ) ಜೊತೆ ಬೆರೆಯಲು ಒಪ್ಪುತ್ತಿರಾ ಎನ್ನುವ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಶೇ. ೨೨.೪೨ರಷ್ಟಿದೆ. ಇಲ್ಲ ಅಂದವರ ಪ್ರಮಾಣ ಶೇ.೭೭.೫೮ರಷ್ಟಿದೆ. 'ನಿಮ್ಮ ಮನೆಯ ಗಂಡುಮಕ್ಕಳು ಅವರ ಸ್ನೇಹಿತೆ(ಹೆಣ್ಣುಮಕ್ಕಳ) ಜೊತೆ ಬೆರೆಯಲು ಇಚ್ಚಿಸುತ್ತಿರಾ? ಎನ್ನುವ ಪ್ರಶ್ನೆಗೆ ಶೇ. ೬೭.೨೩ರಷ್ಟು ಹೌದು ಎಂದು ಶೇ. ೩೨.೭೭ರಷ್ಟು ಇಲ್ಲ ಎಂದಿರುವುದು ಕಂಡು ಬರುತ್ತದೆ. ಪಾಲಕರೇ ಕುಟುಂಬದೊಳಗೆ ಹೆಣ್ಣು-ಗಂಡು ಬೇರೆ ಬೇರೆ ಎನ್ನುವ ಸಂಗತಿಗಳನ್ನು ಮಕ್ಕಳಿಗೆ ರೂಢಿಸುವುದರ ಜೊತೆಗೆ ಹೆಣ್ಣುಮಕ್ಕಳು ಗಂಡುಮಕ್ಕಳ ಜೊತೆಗೆ ಬೆರೆಯಲು ಇಚ್ಛಿಸುವವರ ಪ್ರಮಾಣ ಕಡಿಮೆ ಕಂಡು ಬರುತ್ತದೆ. ಆದರೆ ತಮ್ಮ ಕುಟುಂಬದ ಗಂಡು ಮಕ್ಕಳು ಹೆಣ್ಣುಮಕ್ಕಳ ಜೊತೆ ಬೆರೆಯಲು ಸಮ್ಮತಿಸುವವರು ಹೆಚ್ಚು ಪೋಷಕರು ಕಂಡು ಬರುತ್ತಾರೆ. ಅಂದರೆ ಇಲ್ಲಿ ಹೆಣ್ಣುಮಕ್ಕಳು ಗಂಡಿನ ಜೊತೆ ಬೆರೆಯಲು ಪೋಷಕರು ಸಮ್ಮತಿಸುವುದಿಲ್ಲ. ಅದೇ ತಮ್ಮ ಗಂಡುಮಕ್ಕಳು ಹೆಣ್ಣುಮಕ್ಕಳ ಜೊತೆ ಬೆರೆಯಲು ಸಮ್ಮತಿಸಲು ಇಚ್ಛಿಸುತ್ತಾರೆ. ಹೀಗೆ ಪೋಷಕರಲ್ಲಿ ಹೆಣ್ಣುಮಕ್ಕಳ ಕುರಿತಂತೆ ಲಿಂಗ ಪೂರ್ವಗ್ರಹಗಳು ಕೆಲಸ ಮಾಡುತ್ತಿರುವುದು ಕಂಡು ಬರುತ್ತದೆ. ಇದಕ್ಕಾಗಿಯೇ ಪೋಷಕರು ಗಂಡುಮಕ್ಕಳ ಉಡುಪುಗಳನ್ನು ಹೆಣ್ಣುಮಕ್ಕಳು ಧರಿಸುವುದನ್ನು ಇಚ್ಛಿಸುವುದಿಲ್ಲ ಎಂದು ಉತ್ತರಿಸಿರುವುದೇ ಇದಕ್ಕೆ ಸಾಕ್ಷಿ.

ಹೆಣ್ಣು-ಗಂಡುಮಕ್ಕಳ ಕೆಲಸ ಕಾರ್ಯಗಳನ್ನು ಪ್ರತ್ಯೇಕಿಸುವುದರ ಮೂಲಕ ಅವರ ಗುಣ, ನಡವಳಿಕೆ, ಮೌಲ್ಯಗಳ ಕ್ರಿಯೆಗಳಲ್ಲಿ ಪ್ರತ್ಯೇಕಿಸಲಾಗಿದೆ. ಇದರ ಪರಿಣಾಮವಾಗಿ ಮಕ್ಕಳಲ್ಲಿ ಸ್ಥಿರಗೊಂಡ ಸಾಮಾಜೀಕರಣ ಕುರಿತಂತೆ ಮುಂದುವರೆದ ಪ್ರಶ್ನೆಗಳಲ್ಲಿ ಕಂಡು ಬರುತ್ತದೆ. ಇದಕ್ಕೆ 'ನಿಮ್ಮ ಮನೆಯಲ್ಲಿ ಹೆಣ್ಣುಮಕ್ಕಳು ಇದು ಗಂಡುಮಕ್ಕಳು ಮಾಡಬಹುದಾದ ಕೆಲಸಗಳೆಂದು ಹೇಳಿ ಕೆಲಸವನ್ನು ನಿಲ್ಲಿಸಿರುವುದು ಅಥವಾ ನಿಮ್ಮ ಜೊತೆ ವಾದಕ್ಕೆ ಇಳಿದಿರುವುದುಂಟೆ? ಎನ್ನುವ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರು ಪ್ರಮಾಣ ಶೇ. ೮೭.೬೦ರಷ್ಟು, ಇಲ್ಲ ಎಂದ ಪ್ರಮಾಣ ಶೇ. ೧೨.೩೧ರಷ್ಟು ಕಂಡು ಬರುತ್ತದೆ. ಮುಂದುವರೆದು ಪ್ರಶ್ನೆಯಲ್ಲಿ 'ನಿಮ್ಮ ಮನೆಯಲ್ಲಿ ಗಂಡುಮಕ್ಕಳು ಇದು ಹೆಣ್ಣುಮಕ್ಕಳು ಮಾಡಬಹುದಾದ ಕೆಲಸಗಳೆಂದು ಹೇಳಿ ಕೆಲಸವನ್ನು ನಿಲ್ಲಿಸಿರುವುದು ಅಥವಾ ನಿಮ್ಮ (ಪೋಷಕರ) ಜೊತೆ ವಾದಕ್ಕೆ ಇಳಿದಿರುವುದುಂಟೆ?' ಎನ್ನುವ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಶೇ. ೮೩.೭೮ರಷ್ಟು ಇದೆ. ಇಲ್ಲ ಎಂದು ಉತ್ತರಿಸಿದವರ ಪ್ರಮಾಣ ಶೇ. ೧೬.೨೨ರಷ್ಟು ಇದೆ. ಅಂದರೆ ಕುಟುಂಬದೊಳಗೆ ಬೆಳೆಸಿದ ಲಿಂಗದ ಪೂರ್ವಗ್ರಗಳು ಅದು ಮಕ್ಕಳ ಮೇಲೆ ಪ್ರಭಾವ ಬೀರಿ ಅವರಲ್ಲಿ ಲಿಂಗಪೂರ್ವಗ್ರಹ ಮತ್ತು ಲಿಂಗ ತಾರತಮ್ಯದ ಸಾಮಾಜೀಕರಣಕ್ಕೆ ಕಾರಣವಾಗಿರುವುದು ಕಂಡು ಬರುತ್ತದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹೆಣ್ಣು-ಗಂಡುಮಕ್ಕಳ ಕುರಿತಂತೆ ಪಾಲಕರು/ಪೋಷಕರು ಪ್ರತ್ಯೇಕವಾಗಿ ಕೆಲಸ ಹಂಚಿಕೆ ಮಾಡಿರುವುದರ ವಿವರಣೆ ಮತ್ತು ಅಭಿಪ್ರಾಯಗಳ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಪೋಷಕರಿಂದ ಬಂದ ಉತ್ತರಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.

ಕೋಷ್ಟಕ-೧ 'ಅ'

ಕ್ರ.ಸಂ.	ಪ್ರಶ್ನೆ	ತಂದೆ/ತಾಯಿ/ಪೋಷಕರಿಂದ ಬಂದ ವಿವರಣೆ ಉತ್ತರ
೧.	ನಿಮ್ಮ ಮನೆಯಲ್ಲಿ ಹೆಣ್ಣುಮಕ್ಕಳಿಗೆ ಯಾವ ಯಾವ ಕೆಲಸಗಳನ್ನು ಮಾಡಲು ಹೇಳುತ್ತಿರಾ ವಿವರಿಸಿ?	ಪಾತ್ರೆ ತೊಳೆಯಲು, ಕಸಗುಡಿಸಲು, ಅಡುಗೆ ಮಾಡಲು, ಊಟ ಮಾಡಿದ ನಂತರ ಪಾತ್ರೆಗಳನ್ನು ಎತ್ತಿಡಲು, ಮನೆಯಲ್ಲಿ ನೆಲ ಒರೆಸಲು, ಊಟಕ್ಕೆ ನೀಡಲು, ನೀರು ತರಲು, ಬಟ್ಟೆ ತೊಳೆಯಲು, ಮಕ್ಕಳನ್ನು ನೋಡಿಕೊಳ್ಳಲು,
೨.	ನಿಮ್ಮ ಮನೆಯಲ್ಲಿ ಗಂಡುಮಕ್ಕಳಿಗೆ ಯಾವ ಯಾವ ಕೆಲಸಗಳನ್ನು ಮಾಡಲು ಹೇಳುತ್ತಿರಾ ವಿವರಿಸಿ?	ನೀರು ತರಲು, ಅಂಗಡಿಗೆ ಹೋಗಿ ರೇಷನ್ ತರಲು, ಮನೆಯ ಹೊರಗಿನ ಕೆಲಸ, ಕಟ್ಟಿಗೆ ಕಡಿಯಲು, ಸಂತೆ ಮಾಡಲು ಜೊತೆಗೆ ಕರೆದುಕೊಂಡು ಹೋಗುವುದು. ದನಗಳಿಗೆ ಮೇವು ತರಲು, ಬುತ್ತಿಕೊಟ್ಟು ಬರಲು.
೩.	ನಿಮ್ಮ ಪ್ರಕಾರ ಹೆಣ್ಣುಮಕ್ಕಳ ನಡವಳಿಕೆ ಹೇಗೆ ಇರಬೇಕು ಎಂಬುವುದರ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ.	ನಯ, ವಿನಯತೆ, ತಗ್ಗಿ-ಬಗ್ಗಿ ನಡೆಯಬೇಕು, ಗಂಡುಮಕ್ಕಳು ಬಂದಾಗ ದೂರ ನಿಲ್ಲಬೇಕು. ಮನೆಯಲ್ಲಿ ಪೂಜೆ ಮಾಡುವುದು ಕಲಿತಿರಬೇಕು, ಸಂಸ್ಕಾರಗಳು ಹೊಂದಿರಬೇಕು, ಮನೆಗೆ ಬೇರೆ ಗಂಡು ಮಕ್ಕಳು ಬಂದಾಗ ಹೊರಗಡೆ ಬರಬಾರದು, ಮನೆ ಕೆಲಸಗಳ ಬಗ್ಗೆ ಎಲ್ಲ ತಿಳಿದುಕೊಂಡಿರಬೇಕು.
೪.	ನಿಮ್ಮ ಪ್ರಕಾರ ಗಂಡುಮಕ್ಕಳ ನಡವಳಿಕೆ ಹೇಗೆ ಇರಬೇಕು ಎಂಬುದರ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ.	ಗಂಭೀರವಾಗಿ ಇರಬೇಕು, ಧೈರ್ಯವಂತ ಇರಬೇಕು, ದುಡಿಯವಂತನಾಗಿರಬೇಕು, ಶಕ್ತಿವಂತನಾಗಬೇಕು. ಅಳಬಾರದು.
೫.	ನಿಮ್ಮ ಪ್ರಕಾರ ಹೆಣ್ಣು/ಗಂಡುಮಕ್ಕಳನ್ನು ಲಿಂಗ ಸಮಾನತೆಯಿಂದ ಬೆಳೆಸಬೇಕೆಂದರೆ ಏನು ಮಾಡಬೇಕು. ನಿಮ್ಮ ಅಭಿಪ್ರಾಯ ತಿಳಿಸಿ.	ಇಬ್ಬರಿಗೂ ಶಿಕ್ಷಣ ಕೊಡಬೇಕು, ಸಮಾನವಾಗಿ ನೋಡಿಕೊಳ್ಳಬೇಕು.

ಈ ಮೇಲಿನ ಕೋಷ್ಟಕದಲ್ಲಿ ತಂದೆ-ತಾಯಿ/ಪೋಷಕರು ನೀಡಿದ ವಿವರಣೆ/ಅಭಿಪ್ರಾಯದಲ್ಲಿ ಸ್ಪಷ್ಟವಾಗಿ ಹೆಣ್ಣು-ಗಂಡುಮಕ್ಕಳಿಗೆ ಶ್ರಮ ವಿಭಜನೆ ಸಾಮಾಜೀಕರಣಗೊಳಿಸುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹೆಣ್ಣು-ಗಂಡುಮಕ್ಕಳ ಕುರಿತಂತೆ ಲಿಂಗ ಪೂರ್ವಗ್ರಹ ಮತ್ತು ಭಿನ್ನ ನಿಲುವು

ಹೊಂದಿರುವುದು ಅವರು ನೀಡಿರುವ ವಿವರಣೆಯಲ್ಲಿ ಕಂಡು ಬರುತ್ತದೆ. ಅಂದರೆ ಪಾಲಕರು/ಪೋಷಕರು ರೂಢಿಸಿದ ನಡವಳಿಕೆಯಲ್ಲಿ ಹೆಣ್ಣುಮಕ್ಕಳಿಗೆ ಪಾತ್ರ ತೊಳೆಯಲು, ಕಸ ಗುಡಿಸಲು, ಅಡುಗೆ ಮಾಡಲು, ಊಟ ಮಾಡಿದ ನಂತರ ಪಾತ್ರೆಗಳನ್ನು ಎತ್ತಿಡಲು, ಮನೆಯಲ್ಲಿ ನೆಲ ಒರೆಸಲು, ಊಟಕ್ಕೆ ನೀಡಲು, ನೀರು ತರಲು, ಬಟ್ಟೆ ತೊಳೆಯಲು, ಮಕ್ಕಳನ್ನು ನೋಡಿಕೊಳ್ಳಲು ಹೇಳುತ್ತೇವೆ ಎಂದು ವಿವರಣೆ ನೀಡಿದರೆ, ಅದೇ ಗಂಡು ಮಕ್ಕಳಿಗೆ ನೀರು ತರಲು, ಅಂಗಡಿಗೆ ಹೋಗಿ ರೇಷನ್ ತರಲು, ಮನೆಯ ಹೊರಗಿನ ಕೆಲಸ, ಕಟ್ಟಿಗೆ ಕಡಿಯಲು, ಸಂತೆ ಮಾಡಲು ಜೊತೆಗೆ ಕರೆದುಕೊಂಡು ಹೋಗುವುದು. ದನಗಳಿಗೆ ಮೇವು ತರಲು, ಬುತ್ತಿ ಕೊಟ್ಟು ಬರಲು ಹೇಳುತ್ತೇವೆ ಎಂದು ವಿವರಣೆ ಕೊಡುತ್ತಾರೆ. ಹೆಣ್ಣುಮಕ್ಕಳ ನಡವಳಿಕೆ ಹೇಗೆ ಇರಬೇಕು ಎಂಬುದಕ್ಕೆ ಸಂಬಂಧಿಸಿದ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ ಎನ್ನುವುದಕ್ಕೆ ಪೋಷಕರು ನೀಡಿದ ವಿವರಣೆ ತಗ್ಗಿ-ಬಗ್ಗಿ, ನಯ-ವಿನಯತೆದಿಂದ ನಡೆಯಬೇಕು, ಗಂಡುಮಕ್ಕಳ ಬಂದಾಗ ದೂರ ಇರಬೇಕು, ಮನೆಯಲ್ಲಿ ಪೂಜೆ ಮಾಡುವುದನ್ನು ಕಲಿತಿರಬೇಕು, ಸಂಸ್ಕಾರಗಳನ್ನು ಹೊಂದಿರಬೇಕು, ಮನೆಗೆ ಬೇರೆ ಗಂಡುಮಕ್ಕಳು ಬಂದಾಗ ಹೊರಗಡೆ ಬರಬಾರದು, ಮನೆ ಕೆಲಸಗಳ ಬಗ್ಗೆ ಎಲ್ಲ ತಿಳಿದುಕೊಂಡಿರಬೇಕು ಎಂದು. ಅದೇ ಗಂಡುಮಕ್ಕಳ ವಿಷಯಕ್ಕೆ ಗಂಭೀರವಾಗಿ ಇರಬೇಕು, ಧೈರ್ಯವಂತ ಇರಬೇಕು, ದುಡಿಯವಂತನಾಗಿರಬೇಕು, ಶಕ್ತಿವಂತನಾಗಬೇಕು ಎನ್ನುವ ಅಭಿಪ್ರಾಯವನ್ನು ತಿಳಿಸಿರುವುದು ಕಂಡು ಬರುತ್ತದೆ. ಹೀಗಾಗಿಯೇ "ಸಮಾಜ ವಿಜ್ಞಾನಗಳ ಪ್ರಕಾರ ವ್ಯಕ್ತಿಯ ಜೈವಿಕತೆಯನ್ನಾಧರಿಸಿ, ಆ ವ್ಯಕ್ತಿ ಗಂಡೋ ಹೆಣ್ಣೋ ಎಂಬುದನ್ನು ನಿರ್ಧರಿಸಬಹುದು; ಆದರೆ ವ್ಯಕ್ತಿಯು ಗಂಡು ಅಥವಾ ಹೆಣ್ಣಿನಂತೆ ವರ್ತಿಸಬೇಕೆಂಬ ನಿರೀಕ್ಷೆಯೂ ರೂಪುಗೊಂಡಿದ್ದು, ಕುಟುಂಬದೊಳಗಿನ ಸಾಮಾಜೀಕರಣ ಪ್ರಕ್ರಿಯೆಯ ಮೂಲಕ ಹೀಗೆ ಅವರು ಲಿಂಗ ಸಂಬಂಧಿ ಪರಿಕಲ್ಪನೆಗಳಿಂದ ಸಾಮಾಜಿಕ ಲಿಂಗವನ್ನು ಜೈವಿಕ ಲಿಂಗದಿಂದ ಬೇರ್ಪಡಿಸಿದರು. ಸಾಮಾಜಿಕ ವಿಜ್ಞಾನಿಗಳು ಜೈವಿಕ ಲಿಂಗವನ್ನು ಜೀವವಿಜ್ಞಾನಿಗಳ ಪಾಲಿಗೆ ಬಿಟ್ಟು ತಾವು ಕೇವಲ ಸಾಮಾಜಿಕ ಲಿಂಗದ ಮೇಲೆ ಗಮನಹರಿಸಿದರು"[3] ಎಂದು ಹೇಳುವಾಗಲೂ ಕುಟುಂಬದೊಳಗಿನ ಸಾಮಾಜೀಕರಣ ಪ್ರಕ್ರಿಯ ಪರಿಣಾಮದ ಕುರಿತು ತಿಳಿಸುತ್ತಾರೆ. ಅಂದರೆ ಕುಟುಂಬವೇ ಹೆಣ್ಣು-ಗಂಡಿಗೆ ಸಾಮಾಜೀಕರಣಗೊಳಿಸುವುದು ಎನ್ನುವುದು ಸ್ಪಷ್ಟವಾಗುತ್ತದೆ. ಇದರಲ್ಲಿ ಹೆಣ್ಣುಮಕ್ಕಳಿಗೆ ಅನೇಕ ಸಾಂಸ್ಕೃತಿಕ ಸಂಗತಿಗಳನ್ನು ಅವರಲ್ಲಿ ತುಂಬಿರುವುದಕ್ಕೆ ಕಾರಣವಾಗುತ್ತದೆ. ಮುಂದುವರಿದು ಕುಟುಂಬದೊಳಗೆ ಹೆಣ್ಣು-ಗಂಡು ಮಕ್ಕಳಿಗೆ ಪ್ರತ್ಯೇಕತೆಗೊಳಿಸಿರುವ ಸಂಗತಿಗಳಲ್ಲಿ ಮತ್ತು ಯಾವ 'ಲಿಂಗ'ದ ಪರ-ಪೋಷಕರ ಹೆಚ್ಚು ಒಲವನ್ನು ಹೊಂದಿದ್ದಾರೆ ಮತ್ತು ಯಾವ ಲಿಂಗ ಕಡೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎನ್ನುವುದು ತಿಳಿದು ಬರುತ್ತದೆ. ಇದಕ್ಕೆ ಕೇಳಲಾದ ಪ್ರಶ್ನೆಗಳ ಕೋಷ್ಟಕದಲ್ಲಿ ಈ ರೀತಿಯಾಗಿ ಕಂಡು ಬರುತ್ತದೆ.

ಕೋಷ್ಟಕ-೨

ಕ್ರ.ಸಂ.	ವಿವರ	ಹೆಣ್ಣು ಮಕ್ಕಳು (ಶೇಕಡಾವಾರುಗಳಲ್ಲಿ)	ಗಂಡು ಮಕ್ಕಳು (ಶೇಕಡಾವಾರುಗಳಲ್ಲಿ)
೧	ನಿಮ್ಮ ಮನೆಯಲ್ಲಿ ಹೆಚ್ಚು ಗೃಹ ಕೃತ್ಯ (ಗೃಹಕಾರ್ಯ) ಕೆಲಸಗಳನ್ನು ಮಾಡುವವರು ಯಾರು?	೯೭.೨೩	೨.೭೭
೨.	ನಿಮ್ಮ ಪ್ರಕಾರ ಯಾವ ಮಗುವಿಗೆ ಹೆಚ್ಚಿನ ಶಿಕ್ಷಣ ಕೊಡಿಸಬೇಕು?	೬೮.೮೯	૩೧.೧೧
೩.	ನಿಮ್ಮ ಕುಟುಂಬದೊಳಗಿನ ಸಾಂಸ್ಕೃತಿಕ ಸಂಗತಿಗಳಾದ ವ್ರತ/ಉಪವಾಸ/ಸಂಕಷ್ಟಿ/ ವಿಶೇಷ ಪೂಜೆಗಳನ್ನು ಮಾಡಲು ಯಾರಿಗೆ ಹೇಳಲು ಇಚ್ಚಿಸುತ್ತಿರಾ?	೮೩.೭೭	೧೬.೨೩
೪.	ನಿಮ್ಮ ಮನೆಯಲ್ಲಿ ಹೆಣ್ಣು-ಗಂಡು ಮಕ್ಕಳಿಬ್ಬರಲ್ಲಿ ಯಾರಿಗೆ ಹೆಚ್ಚಿನ ಬುದ್ಧಿವಾದ ಹೇಳುತ್ತೀರಿ.	೫೯.೨೫	೪೦.೭೫
೫.	ನಿಮ್ಮ ಮನೆಯಲ್ಲಿ ಹೆಣ್ಣು-ಗಂಡು ಮಕ್ಕಳಿಬ್ಬರಲ್ಲಿ ಭವಿಷ್ಯತ್ತಿನ ಜೀವನಕ್ಕಾಗಿ ಯಾರಿಗೆ? ಆಸ್ತಿ(ಆರ್ಥಿಕ)ಗೆ ಸಂಪಾದನೆ ಮಾಡುತ್ತೀರಿ.	೬೭.೬೮	૩೨.૩೨

ಈ ಮೇಲಿನ ಕೋಷ್ಟಕದಲ್ಲಿ ಕ್ಷೇತ್ರಕಾರ್ಯದಿಂದ ದೊರೆತ ಮಾಹಿತಿಯಲ್ಲಿ ಹೆಣ್ಣುಮಕ್ಕಳಿಗೆ ಗೃಹಕೃತ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪೋಷಕರೇ ನೀಡುತ್ತಿರುವುದು ಕಂಡು ಬರುತ್ತದೆ. ಇದಕ್ಕೆ ಕ್ಷೇತ್ರಕಾರ್ಯದಲ್ಲಿ ಪಾಲಕರು/ಪೋಷಕರು ನೀಡಿದ ಉತ್ತರದಿಂದ ಕಂಡು ಬರುತ್ತದೆ. ಕುಟುಂಬದೊಳಗೆ ಹೆಚ್ಚು ಗೃಹಕೃತ್ಯಗಳನ್ನು ಹೆಣ್ಣುಮಕ್ಕಳು ಮಾಡುತ್ತಿರುವುದರ ಪ್ರಮಾಣ ಶೇ. ೯೭.೨೩ರಷ್ಟಿದೆ. ಕುಟುಂಬದಲ್ಲಿ ಯಾವ ಮಗುವಿಗೆ ಹೆಚ್ಚಿನ ಶಿಕ್ಷಣ ಕೊಡಿಸಬೇಕು ಕುರಿತಂತೆ ಪೋಷಕರು ನೀಡಿದ ಮಾಹಿತಿಯಲ್ಲಿ ಶೇ. ೬೮.೮೯ರಷ್ಟು ಗಂಡುಮಕ್ಕಳಿಗೆ ಒಲವು ತೋರಿಸಿರುವುದು ಕಂಡು ಬರುತ್ತದೆ. ಹೆಣ್ಣುಮಕ್ಕಳ ಕುರಿತಂತೆ ಶೇ. ૩೧.೧೧ರಷ್ಟು ಮಾತ್ರ ಒಲವು ತೋರಿಸಿರುವುದು ಕಂಡು ಬರುತ್ತಿದೆ. ಹೆಣ್ಣುಮಕ್ಕಳಿಗೆ ಸಾಂಸ್ಕೃತಿಕ ಸಂಗತಿಗಳಲ್ಲಿ ವಿಶೇಷವಾಗಿ ಕುಟುಂಬದೋಳಗೆ ನಡೆಯುವ ಖಾಸಗಿ ಸಂಪ್ರದಾಯ ಅಚರಣೆಗಳಲ್ಲಿ ವ್ರತ, ಉಪವಾಸ, ಸಂಕಷ್ಟಿ, ವಿಶೇಷ ಪೂಜೆಗಳನ್ನು ನೇರವೇರಿಸಲು ಹೆಚ್ಚು ಹೆಣ್ಣುಮಕ್ಕಳಿಗೆ ಹೇಳಿಕೊಡುವ ಸಂಗತಿಗಳ ಪ್ರಮಾಣ ಶೇ. ೮೩.೭೭ರಷ್ಟು ಕಂಡು ಬರುತ್ತಿದೆ. ಗಂಡುಮಕ್ಕಳಿಗೆ ಹೇಳಿರುವಲ್ಲಿ ಶೇ. ೧೬.೨೩ರಷ್ಟು ಕಂಡು ಬರುತ್ತದೆ. ಇನ್ನು ಕುಟುಂಬದಲ್ಲಿ ಹೆಣ್ಣು-ಗಂಡು ಮಕ್ಕಳಿಬ್ಬರಲ್ಲಿ ಯಾರಿಗೆ ಹೆಚ್ಚಿನ ಬುದ್ಧಿವಾದ ಹೇಳುತ್ತೀರಿ ಎನ್ನುವ ಪ್ರಶ್ನೆಗೆ ಶೇ. ೫೯.೨೫ರಷ್ಟು ಹೆಣ್ಣುಮಕ್ಕಳಿಗೆ, ಗಂಡುಮಕ್ಕಳಿಗೆ ಶೇ. ೪೦.೭೫ರಷ್ಟು ಕಂಡು ಬರುತ್ತದೆ. ನಿಮ್ಮ ಮನೆಯಲ್ಲಿ ಹೆಣ್ಣು-ಗಂಡು ಮಕ್ಕಳಿಬ್ಬರಲ್ಲಿ ಭವಿಷ್ಯತ್ತಿನ ಜೀವನಕ್ಕಾಗಿ ಆಸ್ತಿ (ಆರ್ಥಿಕ) ಸಂಪಾದನೆ ಮಾಡುತ್ತೀರಿ ಎನ್ನುವ ಪ್ರಶ್ನೆಗೆ ಶೇ. ೬೭.೬೮ರಷ್ಟು ಗಂಡುಮಕ್ಕಳಿಗೆ, ಶೇ. ૩೨.૩೨ರಷ್ಟು ಹೆಣ್ಣು

ಮಕ್ಕಳಿಗೆ ಎಂದು ಹೇಳುತ್ತಿರುವುದು ಕಂಡು ಬರುತ್ತದೆ ಇದಕ್ಕೆ ಪೂರಕವಾಗಿ ಮುಂದುವರೆದು ಹೆಣ್ಣು-ಗಂಡು ಮಕ್ಕಳನ್ನು ಸೇರಿಸಿರುವ ಶಾಲೆ ಮತ್ತು ಮಾಧ್ಯಮಗಳ ಕುರಿತಂತೆ ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿ ಈ ಕೆಳಕಂಡ ಕೋಷ್ಟಕದಲ್ಲಿ ಕಂಡು ಬರುತ್ತದೆ.

ಕೋಷ್ಟಕ-೩

ಕ್ರ.ಸಂ.	ವಿವರ	ಸರಕಾರಿ ಶಾಲೆ (ಕನ್ನಡ ಮಾಧ್ಯಮ)
೧.	ಕುಟುಂಬಗಳಲ್ಲಿ ಗಂಡು ಮಕ್ಕಳು ಓದುತ್ತಿರುವ ಶಾಲೆ	೬೩.೨೫
೨.	ಕುಟುಂಬಗಳಲ್ಲಿ ಹೆಣ್ಣು ಮಕ್ಕಳು ಓದುತ್ತಿರುವ ಶಾಲೆ	೮೩.೮೯

ಕ್ರ.ಸಂ.	ವಿವರ		ಖಾಸಗಿ ಶಾಲೆ
		ಕನ್ನಡ ಮಾಧ್ಯಮ	ಇಂಗ್ಲೀಷ್ ಮಾಧ್ಯಮ
೧.	ಕುಟುಂಬಗಳಲ್ಲಿ ಗಂಡುಮಕ್ಕಳು ಓದುತ್ತಿರುವ ಶಾಲೆ	೧೩.೮೮	೨೩.೮೭
೨.	ಕುಟುಂಬಗಳಲ್ಲಿ ಹೆಣ್ಣುಮಕ್ಕಳು ಓದುತ್ತಿರುವ ಶಾಲೆ	೮.೫೯	೭.೫೨

ಬಹುತೇಕ ಪೋಷಕರು ಹೆಣ್ಣು-ಗಂಡುಮಕ್ಕಳಿಬ್ಬರು ಇರುವಂಥ ಕುಟುಂಬದೊಳಗೆ ಹೆಚ್ಚು ಗಂಡುಮಗುವಿನ ಉತ್ತಮ ಶಿಕ್ಷಣಕ್ಕೆ ಒಲವು ತೋರಿಸುತ್ತಿರುವುದು ಕಂಡು ಬರುತ್ತದೆ. ಇದಕ್ಕೆ ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯಲ್ಲಿ ಕುಟುಂಬದೊಳಗೆ ಗಂಡುಮಕ್ಕಳು ಓದಿಸುತ್ತಿರುವ ಮಾಧ್ಯಮ ಶಾಲೆ ಮಾಹಿತಿಯನ್ನು ಗಮನಿಸಿದರೆ, ಸರಕಾರಿ ಶಾಲೆಯ ಕನ್ನಡ ಮಾಧ್ಯಮದಲ್ಲಿ ಶೇ. ೬೩.೨೫ರಷ್ಟು ಗಂಡುಮಕ್ಕಳನ್ನು ಓದಿಸಿದರೆ, ಉಳಿದಂತೆ ಶೇ. ೩೬.೭೫ರಷ್ಟು ಖಾಸಗಿ ಶಾಲೆಯಲ್ಲಿ ಓದಿಸುತ್ತಿರುವುದು ಕಂಡು ಬರುತ್ತದೆ. ಇದರಲ್ಲಿ ಕನ್ನಡ ಮಾಧ್ಯಮದಲ್ಲಿ ಗಂಡುಮಕ್ಕಳು ಶೇ. ೧೩.೮೮ರಷ್ಟು ಮತ್ತು ಇಂಗ್ಲೀಷ್ ಮಾಧ್ಯದಲ್ಲಿ ಓದುತ್ತಿರುವುದು ಶೇ. ೨೩.೮೭ರಷ್ಟು ಕಂಡು ಬರುತ್ತದೆ. ಖಾಸಗಿ ಶಾಲೆಯಲ್ಲಿ ಕನ್ನಡ ಮಾಧ್ಯಮಕ್ಕಿಂತ ಇಂಗ್ಲೀಷ್ ಮಾಧ್ಯಮ ಶಾಲೆಯಲ್ಲಿ ಗಂಡುಮಕ್ಕಳ ಓದುತ್ತಿರುವವರ ಪ್ರಮಾಣ ಹೆಚ್ಚಾಗಿ ಕಂಡು ಬರುತ್ತದೆ. ಇಂಗ್ಲೀಷ್ ಮಾಧ್ಯಮದಲ್ಲಿ ಗಂಡುಮಕ್ಕಳು ಓದಿಸುತ್ತಿರುವವರಲ್ಲಿ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಪೋಷಕರು. ಖಾಸಗಿ ಶಾಲೆಯಲ್ಲಿ ಮತ್ತು ಇಂಗ್ಲೀಷ್ ಮಾಧ್ಯದಲ್ಲಿ ಓದಿಸುತ್ತಿರುವುದರಿಂದ ಭವಿಷ್ಯತ್ತಿನಲ್ಲಿ ಗಂಡುಮಕ್ಕಳಿಗೆ ಉತ್ತಮವಾದ ಉದ್ಯೋಗ ಸಿಗಬಹುದೆಂದು ನಿರೀಕ್ಷೆ ಇದೆ ಎನ್ನುತ್ತಾರೆ.

ಹೆಣ್ಣುಮಕ್ಕಳ ಶಿಕ್ಷಣದ ಕುರಿತಂತೆ, ಸರಕಾರಿ ಶಾಲೆಯ ಕನ್ನಡ ಮಾಧ್ಯಮದಲ್ಲಿ ಶೇ. ೮೩.೮೯ರಷ್ಟಿದೆ. ಉಳಿದಂತೆ ಖಾಸಗಿ ಶಾಲೆಯಲ್ಲಿ ಶೇ. ೧೬.೧೧ರಷ್ಟು ಇದರಲ್ಲಿ ಖಾಸಗಿ ಶಾಲೆಯ ಕನ್ನಡ ಮಾಧ್ಯಮದಲ್ಲಿ ಶೇ. ೮. ೫೯ರಷ್ಟಿದರೆ, ಖಾಸಗಿ ಶಾಲೆಯ ಇಂಗ್ಲೀಷ್

ಮಾಧ್ಯಮದಲ್ಲಿ ಹೆಣ್ಣುಮಕ್ಕಳು ಓದುವ ಪ್ರಮಾಣ ಶೇ. ೭.೫೨ರಷ್ಟಿದೆ. ಅಂದರೆ ಇಲ್ಲಿ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ ಪೋಷಕರು ಗಂಡುಮಕ್ಕಳು ಇಂಗ್ಲೀಷ್ ಮಾಧ್ಯಮಗಳನ್ನು ಶಿಕ್ಷಣದಲ್ಲಿ ಹೆಚ್ಚು ಒಲವು ತೋರಿಸಿರುವುದು ಮತ್ತು ಖಾಸಗಿ ಶಾಲೆಯ ಇಂಗ್ಲಿಷ್ ಮಾಧ್ಯಮದಲ್ಲಿ ಹೆಚ್ಚು ಓದಿಸುತ್ತಿರುವುದು ಕಂಡುಬರುತ್ತದೆ. ಅದೇ ಹೆಣ್ಣುಮಕ್ಕಳ ವಿಷಯಕ್ಕೆ ಸಂಬಂಧಿಸಿದಂತೆ ನೋಡಿದರೆ ಸರಕಾರಿ ಶಾಲೆಯ ಕನ್ನಡ ಮಾಧ್ಯಮ ಓದಿಸುತ್ತಿರುವುದು ಕಂಡುಬರುತ್ತದೆ. ಅಂದರೆ ಸರಕಾರಿ ಮತ್ತು ಖಾಸಗಿ ಎರಡು ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಹೆಚ್ಚು ಹೆಣ್ಣುಮಕ್ಕಳನ್ನು ಓದಿಸುತ್ತಿರುವುದು ಕಂಡು ಬರುತ್ತದೆ. ಅಂದರೆ ಪೋಷಕರು ಹೆಣ್ಣು-ಗಂಡುಮಕ್ಕಳಲ್ಲಿ ಶಿಕ್ಷಣ ನೀಡುವಲ್ಲಿ ಗಂಡು ಮಕ್ಕಳ ಪರ ಒಲವಿನ ಸಾಮಾಜೀಕರಣ ಇರುವುದು ಕಂಡು ಬರುತ್ತದೆ.

ಕ್ಷೇತ್ರಕಾರ್ಯದಲ್ಲಿ ಕಂಡು ಬಂದಿರುವ ಅವಲೋಕನ ಮತ್ತು ಅನುಭವದ ಮಾಹಿತಿ

ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆ: ಲಿಂಗಸಂಬಂಧಿ ಅಧ್ಯಯನ (ಪ್ರಾಥಮಿಕ ಮತ್ತು ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳನ್ನು ಅನುಲಕ್ಷಿಸಿ) ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದಲ್ಲಿ ಅವಲೋಕನದಿಂದ ಕಂಡು ಬಂದ ವಿವರಗಳನ್ನು ಮತ್ತು ಕೆಲವು ಮಾಹಿತಿಗಳನ್ನು ಇಲ್ಲಿ ದಾಖಲಿಸಲಾಗಿದೆ. ಮೊದಲಿಗೆ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಬೂದುಗುಪ್ಪ ಎಂಬ ಗ್ರಾಮದಲ್ಲಿ ಕ್ಷೇತ್ರಕಾರ್ಯ ಮಾಡಿದಾಗ ಪೂರಕ ವಿಷಯಗಳು ದೊರಕಿದವು. ಹೆಚ್ಚಿನ ಜನರು ಅನಕ್ಷರತೆಯನ್ನು ಹೊಂದಿರುವ ಗ್ರಾಮ. ತಮಗೆ ದೊರೆಯದ ಶಿಕ್ಷಣ ಆದರೂ ತಮ್ಮ ಮಕ್ಕಳನ್ನು ಚೆನ್ನಾಗಿ ಓದಿಸಬೇಕು ಎನ್ನುವ ಹಂಬಲ ಅಲ್ಲಿನ ತಂದೆ-ತಾಯಿಗಳದ್ದು. ತಮ್ಮ ಗ್ರಾಮದಲ್ಲಿ ಸರಿಯಾದ ಶಿಕ್ಷಣ ದೊರಕದ ಕಾರಣ ತಮ್ಮ ಮಕ್ಕಳನ್ನು ಬೇರೆ ಬೇರೆ ಊರಿನ ವಸತಿ ಶಾಲೆಯಲ್ಲಿ ಬಿಟ್ಟು ಓದಿಸುತ್ತಿದ್ದಾರೆ. ಆದರೆ ಅದು ಗಂಡುಮಕ್ಕಳಿಗೆ ಮಾತ್ರ, ಹೆಣ್ಣುಮಕ್ಕಳು ಇದರಿಂದ ವಂಚಿತರಾಗಿದ್ದಾರೆ. ಹೆಣ್ಣುಮಕ್ಕಳು ಬೇರೆ ಊರಿಗೆ ಹೋಗಿ ಹೆಚ್ಚು ಓದುವ ಅವಶ್ಯಕತೆ ಇಲ್ಲ ಎನ್ನುವ ಅಭಿಪ್ರಾಯಗಳೇ ಜಾಸ್ತಿ. 'ಹೆಣ್ಣುಮಕ್ಕಳು ಎಷ್ಟಾದರೂ ಮದುವೆ ಮಾಡಿಕೊಂಡು ಗಂಡನ ಮನೆಗೆ ಹೋಗುವವರು; ಅವರು ಎಷ್ಟೇ ಓದಿದರೂ ಕಸ ಮುಸುರೆ ಮಾಡುವುದು ತಪ್ಪುವುದಿಲ್ಲ, ಅದಕ್ಕಾಗಿ ಅಕ್ಷರ ಜ್ಞಾನಕ್ಕಾಗಿ ಓದಿದರೆ ಅಷ್ಟೇ ಸಾಕು' ಎಂಬ ಅಭಿಪ್ರಾಯ ಬಹುತೇಕ ತಂದೆ-ತಾಯಿಗಳದ್ದು. ಇನ್ನೊಂದು ಗಮನಿಸಬೇಕಾದ ಅಂಶವೇನೆಂದರೆ, ಸಾಕಷ್ಟು ಕುಟುಂಬಗಳು ಗಂಡುಮಕ್ಕಳು ಬೇಕು ಅನ್ನುವ ಕಾರಣಕ್ಕಾಗಿ ೪, ೩ ಹೆಣ್ಣುಮಕ್ಕಳು ಆದ ಮೇಲೆ ಗಂಡು ಮಗು ಮಾಡಿಕೊಂಡಿದ್ದಾರೆ. ಅದು ಯಾಕೆ ಎಂದು ಕೇಳಿದರೆ ಹೆಣ್ಣುಮಕ್ಕಳು ಯಾವತ್ತಾದರೂ ಗಂಡನ ಮನೆಗೆ ಹೋಗುವವರು, ಗಂಡು ಮಗ ಇದ್ದರೆ ನಮ್ಮ ವಯಸ್ಸಾದ ಕಾಲದಲ್ಲಿ ನಮ್ಮನ್ನು ಅವನೇ ಸಾಕಬೇಕು ತಾನೆ, ಮತ್ತೆ ನಮ್ಮ ವಂಶೋದ್ಧಾರಕ, ನಮ್ಮ ಆಸ್ತಿ-ಪಾಸ್ತಿ ಅವನೇ ತಾನೆ ನೋಡಿಕೊಳ್ಳಬೇಕು ಎನ್ನುವ ಉತ್ತರ. ಅವರ ನಂಬಿಕೆ ಗಂಡುಮಕ್ಕಳೇ ನಮ್ಮನ್ನು ಸಾಕುವವರು ಎನ್ನುವುದು. ಬೇರೆ ಕುಟುಂಬಗಳಲ್ಲಿ ಹೆಣ್ಣುಮಕ್ಕಳನ್ನು ನಾವು ಓದಿಸ್ತೀವಿ. ಆದರೆ ಗಂಡನ

ಮನೆಯವರು ಮುಂದೆ ಅವಳನ್ನು ಕೆಲಸಕ್ಕೆ ಕಳುಹಿಸುತ್ತಾರೆ ಎನ್ನುವ ನಂಬಿಕೆ ಇಲ್ಲ. ಅದಕ್ಕೆ ಯಾಕೆ ಜಾಸ್ತಿ ಓದಿಸಬೇಕು, ಮತ್ತೆ ಅವರಿಗೆ ಓದಿಸಿದ್ದಲ್ಲದೇ ವರದಕ್ಷಿಣೆ ಕೊಟ್ಟು ಮದುವೆ ಮಾಡಿಕೊಡಬೇಕು; ಸುಮ್ಮನೆ ಖರ್ಚು ಜಾಸ್ತಿ, ಅದಕ್ಕೆ ಎಷ್ಟೋ ಬೇಕು ಅಷ್ಟು ಓದಿಸಿದರೆ ಸಾಕು ಎನ್ನುವ ಅಭಿಪ್ರಾಯಗಳು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರೆಯಿತು.

ಬೂದುಗುಪ್ಪ ಸಾವಿತ್ರಮ್ಮ (೪೮ ವಯಸ್ಸು) ವಕ್ತೃ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹೆಣ್ಣು-ಗಂಡುಮಕ್ಕಳ ಸಾಮಾಜೀಕರಣದಲ್ಲಿ ಉಡುಗೆ-ತೊಡುಗೆಗಳ ವಿಷಯ ಕುರಿತಂತೆ ಪ್ರಶ್ನಿಸಿದಾಗ ಅವರು ಹೇಳಿದ್ದು, ಹೆಣ್ಣು-ಮಕ್ಕಳು ಗಂಡುಮಕ್ಕಳ ಬಟ್ಟೆಗಳನ್ನು ಹಾಕಬಾರದು, ಮತ್ತೆ ಗಂಡುಮಕ್ಕಳ ಜೊತೆ ಹೆಣ್ಣುಮಕ್ಕಳು ಬೆರೆತು ಆಟವಾಡಬಾರದು, ಗಂಡುಮಕ್ಕಳು ಮಾಡುವ ಕೆಲಸ ಹೆಣ್ಣುಮಕ್ಕಳು ಮಾಡಬಾರದು. ನಮ್ಮ ಮನೆಯಲ್ಲಿ ಗಂಡುಮಕ್ಕಳ ಊಟದ ತಟ್ಟೆಯನ್ನು ನಾವು ಗಂಡು ಹುಡುಗರಿಗೆ ಮುಟ್ಟಬಾರದು. ನೀವು ಎದ್ದೇಳಿ ಎಂದು ಅವರನ್ನು ಎಬ್ಬಿಸಿ ನಾವು ಮನೆಯಲ್ಲಿನ ಹೆಣ್ಣುಮಕ್ಕಳಿಂದ ಊಟದ ತಟ್ಟೆಯನ್ನು ತೆಗೆಸುತ್ತೇವೆ. ಮನೆಗೆ ಬೇರೆ ಯಾರಾದರೂ ಗಂಡುಮಕ್ಕಳು ಬಂದರೆ ಹೆಣ್ಣುಮಕ್ಕಳನ್ನು ನಾವು ಹೊರಗೆ ಕಳುಹಿಸುವುದಿಲ್ಲ. ನಮ್ಮ ಮನೆಯಲ್ಲಿ ಗಂಡುಮಕ್ಕಳು ಮೊದಲು ಊಟ ಮಾಡಿಸಿ ಎಂದು ನಾನು ನನ್ನ ಹೆಣ್ಣುಮಕ್ಕಳಿಗೆ ಹೇಳುತ್ತವೆ. ಗಂಡು ಮಗ ಏನಿದ್ದರೂ ಗಂಡು ಮಗನೇ ಎಂದು ಪುರುಷ ಪ್ರಧಾನ ಸಾಮಾಜೀಕರಣದ ಮಾತುಗಳನ್ನಾಡುವುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿತು.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಡಣಾಪುರ ಎಂಬ ಗ್ರಾಮದಲ್ಲಿ ಕ್ಷೇತ್ರಕಾರ್ಯ ಮಾಡಿದಾಗ, ಈ ಗ್ರಾಮದಲ್ಲಿ ಲಿಂಗ ತಾರತಮ್ಯ ಹೆಚ್ಚಾಗಿರುವುದು ಕಂಡು ಬಂದಿದೆ. ಜಾತಿವಾರು ನೋಡಿದಾಗ ಮುಸ್ಲಿಂ ಜಾತಿಯವರು ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವುದು ತಪ್ಪು ಎನ್ನುವ ರೀತಿಯಲ್ಲಿ ಮಾತನಾಡಿದರು. ನಮ್ಮ ಕುರಾನ್ ಒಂದೇ ಓದಿಕೊಂಡರೇ ಸಾಕು ಅವರು ಶಾಲೆಗೆ ಹೋಗುವ ಅವಶ್ಯಕತೆ ಇಲ್ಲ. ನಮ್ಮ ಜಾತಿಯ ಹೆಣ್ಣುಮಕ್ಕಳ ಹೊರಗಡೆ ಕಳುಹಿಸುವುದು ಕಡಿಮೆ. ಆದರೂ ಪಟ್ಟಣಗಳಲ್ಲಿ ಮುಸ್ಲಿಂ ಜಾತಿಯ ಹೆಣ್ಣುಮಕ್ಕಳು ಕೆಲಸ ಮಾಡುತ್ತಿದ್ದಾರೆ. ಆದರೆ ಹಳ್ಳಿಯಲ್ಲಿ ಮೌಢ್ಯತೆಯ ವಾತಾವರಣ ಬದಲಾಗಿಲ್ಲ ಎನ್ನುವುದು ಈ ಕ್ಷೇತ್ರಕಾರ್ಯದಿಂದ ಪೋಷಕರು ಹೆಣ್ಣು-ಗಂಡು ಮಕ್ಕಳ ಕುರಿತಂತೆ ನೀಡಿರುವ ಮಾಹಿತಿಯಿಂದ ತಿಳಿಯುತ್ತದೆ.

ಇದೇ ಗ್ರಾಮದಲ್ಲಿ ಲಕ್ಷ್ಮೀ (೪೩ ವಯಸ್ಸು) ವಕ್ತೃ ಕ್ಷೇತ್ರಕಾರ್ಯ ಸಂದರ್ಭದಲ್ಲಿ ವಿಚಾರಿಸಿದಾಗ ಹೆಣ್ಣುಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಕಳುಹಿಸಬೇಕಾಗಿದೆ. ಇವತ್ತು ಹೆಣ್ಣುಮಕ್ಕಳು ಉನ್ನತ ಶಿಕ್ಷಣ ಪಡೆಯುವುದರಿಂದ ಅನೇಕ ಲಾಭಗಳಿವೆ ಎಂದು ವಿವರಿಸಿದರು. ಹೆಣ್ಣುಮಕ್ಕಳ ಶಿಕ್ಷಣದ ಕುರಿತಾಗಿ ವಿಚಾರಿಸಿದಾಗ ಆಕೆ ಹೇಳಿದ್ದು 'ಹೆಣ್ಣುಮಕ್ಕಳು ವಯಸ್ಸಿಗೆ ಬಂದಾಗ ಮತ್ತೆ ಸಂಬಂಧ ಕೂಡಿ ಬಂದಾಗ ಮದುವೆ ಮಾಡುವುದು ಒಳ್ಳೆಯದು ತಂಗಿ. ಯಾಕೆ ಈ ಶಾಲೆ-ಕಾಲೇಜು, ಸಿಟಿಗೆ ಹೋಗಿ ಬಂದು ಮತ್ತೆ ಅಲ್ಲಿ ಏನಾದರೂ ಲವ್ ಗಿವ್ ಅಂತ ತಿರುಗಾಡಿ, ಊರವರ ಕಣ್ಣಿಗೆ

ಬಿದ್ದು, ಸಂಬಂಧಿಕರು ನೋಡಿ, ಅನೇಕ ಜನರು ಅನೇಕ ತರಹ ಮಾತನಾಡುತ್ತಾರೆ. ಹಾಗಾಗಿ ಓದಿಸಬೇಕು. ಆದರೆ ಮದುವೆ ಸಂಬಂಧ ಬಂದರೆ ನೋಡಿ ಮದುವೆ ಮಾಡಿಕೊಡುವುದು ಉತ್ತಮ. ಇನ್ನು ಮನೆಯಲ್ಲಿ ಗಂಡು ಮಗ ಇದ್ದಾನೆ. ಅವನು ಪಿ.ಯು.ಸಿ. ಓದಿದ್ದಾನೆ. ಇನ್ನೂ ನೀನು ಓದಪ್ಪಾ ಅಂತ ಹೇಳಿನಿ. ತಂಗಿ ಅವರ ಹಣೆಬರಹ. ಆದರೆ ನೀನೇನು ಹೇಳುತ್ತೀಯಾ ಹೆಣ್ಣುಮಕ್ಕಳನ್ನು ಓದಿಸು ಅಂತ. ಆದರೆ ಕಾಲ ಸುಮಾರಾಗಿದೆ' ಎಂದು ಮಾತು ನಿಲ್ಲಿಸಿದಳು.

ಹಿರಿಯರ ತಾತ್ಸಾರ ಮತ್ತು ಸ್ವಯಂ ಕೀಳರಿಮೆಯಿಂದ ಹೆಣ್ಣಿನ ಜೀವನ ದಯನೀಯವಾಗುತ್ತಿದೆ. ಅನಕ್ಷರಸ್ಥರ ಕುಟುಂಬಗಳಲ್ಲಿ ಹೆಣ್ಣುಮಕ್ಕಳು ಓದು ಮುಂದುವರಿಸಲು ಅಗತ್ಯವಾದ ಪ್ರೇರಣೆ, ಪ್ರೋತ್ಸಾಹ, ಮಾರ್ಗದರ್ಶನದ ಸಾಮಾಜೀಕರಣ ಕಂಡು ಬರುವುದಿಲ್ಲ.

ಗ್ರಾಮೀಣ ಪ್ರದೇಶದಲ್ಲಿ ತಂದೆ-ತಾಯಿಗಳು ಹೆಣ್ಣುಮಕ್ಕಳನ್ನು ವ್ಯಾಸಂಗಕ್ಕಾಗಿ ಪೇಟೆ ಪಟ್ಟಣಗಳಿಗೆ ಕಳುಹಿಸಲು ಹಿಂಜರಿಯುತ್ತಾರೆ. ಪೇಟೆ ಪಟ್ಟಣಗಳಿಗೆ ಹೋದ ಹೆಣ್ಣುಮಕ್ಕಳು ಹಾಳಾಗುತ್ತಾರೆ ಎನ್ನುವ ಲಿಂಗ ಪೂರ್ವಗ್ರಹಗಳು ಉಳಿದುಕೊಂಡಿವೆ. ಹೆಣ್ಣುಮಕ್ಕಳು ದೊಡ್ಡವರಾದರೆ(ಮೈನೆರೆದರೆ) ಮದುವೆಯ ಕಡೆ ಹೆಚ್ಚು ಗಮನಹರಿಸುವುದು ಕಂಡು ಬರುತ್ತದೆ.

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಶಿವಪುರ ಎಂಬ ಗ್ರಾಮದಲ್ಲಿ ಕ್ಷೇತ್ರಕಾರ್ಯ ಮಾಡಲಾಗಿದ್ದು, ಆ ಗ್ರಾಮದಲ್ಲಿ ತಂದೆ ತಾಯಿಯರು ಅಕ್ಷರಸ್ಥರು ಇದ್ದರೂ ಕೂಡ ಹೆಣ್ಣು ಮಕ್ಕಳನ್ನು ಜಾಸ್ತಿ ಓದಿಸದೇ ಸಣ್ಣ ವಯಸ್ಸಿಗೆ ಮದುವೆ ಮಾಡಿದ್ದಾರೆ. ಏಕೆ ಎಂದು ಕೇಳಿದರೆ ಪ್ರಾಥಮಿಕ ಶಿಕ್ಷಣ ಮುಗಿಸಿದ ಮೇಲೆ ಪ್ರೌಢ ಶಿಕ್ಷಣಕ್ಕಾಗಿ ಬೇರೆ ಊರಿಗೆ ಹೋಗಬೇಕು, ಅದು ಬಸ್ಸುಗಳಲ್ಲಿ ಹೋಗಿ ಹೆಣ್ಣುಮಕ್ಕಳು ಓದುವುದು ಅಷ್ಟೇ ಇದೆ ಎಂಬ ಅಭಿಪ್ರಾಯದಿಂದ ಮದುವೆ ಮಾಡಿದ್ದಾರೆ. ಗಂಡು ಮಕ್ಕಳನ್ನು ಖಾಸಗಿ ಶಾಲೆಗಳಲ್ಲಿ ಓದಿಸುತ್ತಾರೆ. ಖಾಸಗಿ ವಸತಿ ಶಾಲೆಗಳಲ್ಲಿ ಡೊನೇಷನ್ ಕೊಟ್ಟು ಓದಿಸುತ್ತಿದ್ದಾರೆ. ಆದ್ದರಿಂದ ಇಲ್ಲಿ ಲಿಂಗ ತಾರತಮ್ಯ ಎದ್ದು ಕಾಣುತ್ತದೆ.

ಇದೇ ಗ್ರಾಮದಲ್ಲಿ ಹೆತ್ತವರು ಹೆಣ್ಣುಮಕ್ಕಳ ಬಗೆಗೆ ನಿರಾಸಕ್ತಿ ಪ್ರದರ್ಶಿಸಿದ ಮಾತುಗಳು ಕಂಡು ಬಂದವು. ಅವುಗಳೆಂದರೆ "ಗಂಡನ ಮನೆಯಲ್ಲಿ ಕಸಮುಸುರೆ ತೊಳೆಯುವವಳಿಗೆ ವಿದ್ಯೆ ಏಕೆ? 'ಹೆಣ್ಣು ಕಲಿತು ಗುಡ್ಡೆ ಹಾಕುವುದಾದರೂ ಏನು? ಎಂಬ ಭಾವನೆ ಅನೇಕಾನೇಕ ಕುಟುಂಬಗಳ ಪೋಷಕರಲ್ಲಿ ಪ್ರಬಲವಾಗಿರುವುದು ಕಂಡು ಬಂದಿತು. ಈರಮ್ಮ ಎನ್ನುವ ಒಬ್ಬ ಮಹಿಳೆ ಹೆಣ್ಣುಮಕ್ಕಳಿಗೆ ಹೆಚ್ಚು ಶಾಲೆ ಓದಿಸಿದರೆ ಅವಳಿಗಿಂತ ಹೆಚ್ಚು ಓದಿದ ಗಂಡು ಹುಡುಕುವುದು ಕಷ್ಟ. ಸೂಕ್ತ ಗಂಡ ಸಿಗುವುದಿಲ್ಲ. ಇದಲ್ಲದೆ ಹೆಚ್ಚು ಓದಿದಷ್ಟು ಹೆಚ್ಚು ವರದಕ್ಷಿಣೆ ಕೊಡಬೇಕಾಗುತ್ತದೆ. ಆದರೆ ಅದೇ ಮನೆಯಲ್ಲಿ ಗಂಡುಮಕ್ಕಳಿಗೆ ಓದಿಸಿದರೆ ನಮಗೆ ಲಾಭ. ಒಟ್ಟಾರೆ ಹೆಣ್ಣನ್ನು ಓದಿಸಿದಷ್ಟು ಖರ್ಚಿಗೆ ದಾರಿ ಎಂದು ಹೇಳಿರುವುದು ಕಂಡು ಬಂದಿತು.

ಈ ಗ್ರಾಮದಲ್ಲಿ ಕೆಲವು ಕುಟುಂಬಗಳಲ್ಲಿ ಕುಟುಂಬದ ಬಡತನ ಹಾಗೂ ಹೆಚ್ಚು ಹೆಣ್ಣುಮಕ್ಕಳು ಹೊಂದಿರುವ ಮನೆಯಲ್ಲಿ ಹೆಚ್ಚಿನ ಪೋಷಕರು ಹೆಣ್ಣೆಂದರೆ ಹೊರೆ ಶಾಪ ಎಂದು ಭಾವಿಸಲಾಗಿರುವ ಮಾತುಗಳು ಕಂಡು ಬಂದವು. ಮತ್ತೊಂದು ಕಡೆ ಇದೇ ಗ್ರಾಮದಲ್ಲಿ ಕೆಲವು ಕ್ಷೇತ್ರಕಾರ್ಯದಲ್ಲಿ ದೊರೆತ ಶಾಲೆ ಬಿಟ್ಟ ಹೆಣ್ಣುಮಗಳನ್ನು ಯಾಕೆ ಶಾಲೆಗೆ ಹೋಗುತ್ತಿಲ್ಲ ? ಎಂದು ವಿಚಾರಿಸಿದಾಗ, ತಮ್ಮ ತಂಗಿಯರನ್ನು ನೋಡಿಕೊಳ್ಳಲೆಂದು ಶಾಲೆ ಬಿಡಿಸಿದ್ದಾರೆ ಎಂದು ಹೇಳಿರುವುದು ಕಂಡು ಬಂದಿತು. ಹೆಣ್ಣುಮಕ್ಕಳನ್ನು ಅರ್ಧದಲ್ಲಿ ಶಾಲೆ ಬಿಡಿಸುತ್ತಾರೆ. ಇದರಿಂದ ಹಲವು ಹೆಣ್ಣುಮಕ್ಕಳು ಬಾಲಕಾರ್ಮಿಕರಾಗಬೇಕಾದ ದುಸ್ಥಿತಿಯು ಈ ಕ್ಷೇತ್ರಕಾರ್ಯದಲ್ಲಿ ಕಂಡು ಬಂದಿತು.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಬಂಡ್ರಿ ಎಂಬ ಗ್ರಾಮದಲ್ಲಿ ಕ್ಷೇತ್ರಕಾರ್ಯ ಮಾಡಿದಾಗ, ಪೋಷಕರು ಅನಕ್ಷರಸ್ಥರು ಮತ್ತು ಅಕ್ಷರಸ್ಥರು ಇದ್ದರೂ ಮಕ್ಕಳು ಕಲಿತು ಮುಂದೆ ಬರಬೇಕು ಎಂಬ ಆಶಾಭಾವನೆ ಇಟ್ಟುಕೊಂಡಿದ್ದಾರೆ. ಆದರೆ ಹೆಣ್ಣುಮಕ್ಕಳ ಶಿಕ್ಷಣ ಕುರಿತಲ್ಲ. ಅದು ಗಂಡುಮಕ್ಕಳ ಕುರಿತಾಗಿ ಕಂಡು ಬರುತ್ತದೆ. ಒಂದು ಮನೆಯ ಪೋಷಕರು ಹೆಣ್ಣು ಮಕ್ಕಳನ್ನು ಜಾಸ್ತಿ ಓದಿಸಿದರೆ ಅದರಿಂದ ಪೋಷಕರಿಗೆ ತೊಂದರೆ ಕಟ್ಟಿಟ್ಟ ಬುತ್ತಿ, ಹೆಣ್ಣು ಹದ್ದುಬಸ್ತಿನಲ್ಲಿನಲ್ಲಿರಬೇಕು. ಅಂದರೆ ಅವರನ್ನು ಓದಿಸಿದಷ್ಟು ಅನಾಹುತನೇ ಜಾಸ್ತಿ, ಅಕ್ಷರ ಜ್ಞಾನಕ್ಕೆ ಓದಿಸಿದರೆ ಅಷ್ಟೇ ಸಾಕು ಎನ್ನುವ ರೀತಿಯಲ್ಲಿ ಬಹಳ ಕಠಿಣ ರೀತಿಯಲ್ಲಿ ಮಾತಾಡಿದರು. ಕಾಲೇಜು ಮಟ್ಟಿಲು ಹತ್ತಿಸಿದರೆ ಪ್ರೀತಿ ಅಂತ ಅಂದುಕೊಂಡು ಮನೆ ಬಿಟ್ಟು ಹೊರಟೇ ಹೋಗುತ್ತಾರೆ ಎನ್ನುವ ರೀತಿಯಲ್ಲಿ ಹೇಳಿದರು. ಅವರ ಮನಸ್ಸಿನಲ್ಲಿ ಈ ರೀತಿಯ ಅಪನಂಬಿಕೆಯ ಕಾರಣದಿಂದ ಹೆಣ್ಣಿಗೆ ಸ್ವಾತಂತ್ರ್ಯ ನೀಡುವುದು ತಪ್ಪು; ಅವರನ್ನು ಜಾಸ್ತಿ ಓದಿಸುವುದು ತಪ್ಪು ಎನ್ನುವ ಮನೋಭಾವನೆ ಅವರ ಮನಸ್ಸಿನಲ್ಲಿ ಹುಟ್ಟಿಕೊಂಡಿರುವುದು ಕಂಡು ಬರುತ್ತದೆ.

ಇದೇ ಗ್ರಾಮದ ಯಲ್ಲಮ್ಮ (೪೬ ವಯಸ್ಸು) ವಕ್ತೃ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪ್ರತ್ಯೇಕವಾಗಿ ವಿಚಾರಿಸಿದಾಗ ಈಕೆಗೆ ಮೂರು ಹೆಣ್ಣುಮಕ್ಕಳು, ಗಂಡು ಮಕ್ಕಳಿಲ್ಲ. ಈ ಹೆಣ್ಣುಮಕ್ಕಳನ್ನು ಶಾಲೆ ಕಳುಹಿಸಿದ್ದಾಳೆ. ಈಕೆಯದು ಬಡತನದ ಕುಟುಂಬ. ಗಂಡ ಕೂಲಿ ಕೆಲಸ ಮಾಡುತ್ತಾನೆ. ಆದರೆ ಈಕೆಯು ಹೇಳುವ ಮಾತುಗಳಲ್ಲಿ ಹೆಣ್ಣುಮಕ್ಕಳನ್ನು ಆಸೆಯಿಂದ ಶಾಲೆಗೆ ಕಲಿಸುತ್ತಿದ್ದೇನೆ. ಮುಂದೆ ಓದಿ ಯಾವುದಾದರೂ ನೌಕರಿ ಮಾಡಿದರೆ ಸಾಕು. ೮ ರಿಂದ ೧೦ ವರ್ಷ ನನಗೆ ಗಂಡು ಮಕ್ಕಳು ಹುಟ್ಟಿಲ್ಲ ಎಂದು ಗಂಡನ ಮನೆಯವರು ಮಾತುಮಾತಿನಲ್ಲಿ ಕಿರುಕುಳ ಕೊಡುತ್ತಿದ್ದರು. ಅದರಲ್ಲಿ ಸಂಬಂಧಿಕರು ನಿಮಗೇನು ಗಂಡು ಮಕ್ಕಳಿಲ್ಲ, ಹೆಣ್ಣು ಮಕ್ಕಳಿಗಳನ್ನು ಏಕೆ ಶಾಲೆಗೆ ಓದಿಸುತ್ತೀರಿ, ನಿಮಗೆ ಬುದ್ಧಿ ಇಲ್ಲ. ದೊಡ್ಡವರಾದ ಮೇಲೆ ಮದುವೆ ಮಾಡಿಕೊಡುವುದಕ್ಕೆ ಕಷ್ಟ ಇದೆ. ಅಂತಹದ್ದರಲ್ಲಿ ನೀವು ಮೂರು ಹೆಣ್ಣು ಮಕ್ಕಳನ್ನು ಯಾಕೆ ಓದಿಸುತ್ತೀರಿ. ನಿಮಗೆ ಯಾರು ಹೇಳುತ್ತಾರೆ ಎಂದು ಇಷ್ಟಪಡದ ಸಂಬಂಧಿಕರು ಇದ್ದಾರೆ ಎಂದು ಹೇಳಿದರು.

ಇದೇ ಗ್ರಾಮದ ಸಿದ್ಧಮ್ಮ ಎನ್ನುವವರಿಗೆ ಒಂದು ಗಂಡು ಮೂರು ಹೆಣ್ಣುಮಕ್ಕಳಿದ್ದಾರೆ. ಇವರನ್ನು ಶಾಲೆ ಕಳುಹಿಸುತ್ತಿದ್ದಾರೆ. ಇವರ ಹೆಣ್ಣು ಗಂಡು ಮಕ್ಕಳಲ್ಲಿ ನೀವು ಯಾರನ್ನು ಉನ್ನತ ಶಿಕ್ಷಣಕ್ಕೆ ಕಳುಹಿಸುತ್ತೀರಿ ಎಂದು ಕೇಳಲಾದ ಪ್ರಶ್ನೆಗೆ ಅವರು ಹೇಳಿದ್ದು 'ಹೆಣ್ಣುಮಕ್ಕಳು ಓದಬೇಕು. ಇಂದು ಎಲ್ಲಿ ಹೋದರೂ ನೌಕರಿ ಸಿಗುತ್ತವೆ. ಖಾಸಗಿ ಶಾಲೆಯಲ್ಲಿ, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಬಹುದು. ಜೊತೆಗೆ ಗಂಡು ಮಕ್ಕಳಿಗೆ ಸಮಾನಾಗಿ ಸಂಬಳ ನೀಡುತ್ತಾರೆ. ಹೆಣ್ಣು ಮಕ್ಕಳೇ ಮುಂದೆ ಸರಿಯಾಗಿ ದುಡಿದು, ಸಂಸಾರ ನೋಡುವುದು. ಮುಂದೆ ನಾವು ಚೆನ್ನಾಗಿರಬೇಕೆಂದರೆ ಹೆಣ್ಣುಮಕ್ಕಳನ್ನು ಓದಿಸಿ, ನೌಕರಿ ಸಿಗುವವರಿಗೆ ಮದುವೆ ಮಾಡಬಾರದು. ಸಣ್ಣ ವಯಸ್ಸಿಗೆ ಮದುವೆ ಮಾಡಿದರೆ ಅವರು ತೊಂದರೆಗೆ ಸಿಲುಕಿಹಾಕಿಕೊಳ್ಳುತ್ತಾರೆ. ಮುಂದುವರಿದು ನಾವೆಲ್ಲಾ ಸಣ್ಣ ವಯಸ್ಸಿಗೆ ಮದುವೆ ಮಾಡಿಕೊಂಡು ಬಂದಿದ್ದೇವೆ. ಆದರೆ ಇತ್ತೀಚಿನ ಕಾಲಮಾನ ಬದಲಾಗಿದೆ. ಹೆಣ್ಣುಮಕ್ಕಳನ್ನು ಓದಿಸಬೇಕು ತಂಗಿ ಎಂದು ಮಾತು ನಿಲ್ಲಿಸಿದಳು. ಅಂದರೆ ಹೆಣ್ಣು ಮಕ್ಕಳ ಕುರಿತಾಗಿ ಸಕಾರಾತ್ಮಕವಾಗಿ ಮಾತನಾಡುವ ಪೋಷಕರ ಸಂಖ್ಯೆ ಕಡಿಮೆ ಕಂಡು ಬಂದಿತು. ಆದರೆ ಗಂಡುಮಕ್ಕಳ ಪರವಾದ ಧೋರಣೆಗಳನ್ನು ಹೊಂದಿರುವ ಪೋಷಕರ ಸಂಖ್ಯೆ ಹೆಚ್ಚು ಕಂಡು ಬರುತ್ತದೆ.

ಬಳ್ಳಾರಿ ಜಿಲ್ಲೆಯ ಕೊಟ್ಟೂರು ತಾಲೂಕಿನ ಚಪ್ಪರದಳ್ಳಿ ಗ್ರಾಮದಲ್ಲಿ ಕ್ಷೇತ್ರಕಾರ್ಯ ಮಾಡಿದಾಗ, ಇಲ್ಲಿ ಹೆಣ್ಣುಮಕ್ಕಳು ಅರ್ಧದಲ್ಲಿ ಶಾಲೆ ಬಿಟ್ಟು ಚಿಕ್ಕ ವಯಸ್ಸಿಗೆ ಮದುವೆ ಮಾಡಿಕೊಂಡಿರುವ ಪ್ರಕರಣಗಳೇ ಜಾಸ್ತಿ ಕಂಡು ಬಂದವು. ಚಿಕ್ಕಮಕ್ಕಳನ್ನು ಹೊಂದಿರುವವರು ಗಂಡುಮಕ್ಕಳನ್ನು ಖಾಸಗಿ ಶಾಲೆಯಲ್ಲಿ ಓದಿಸುವುದು, ಹೆಣ್ಣುಮಕ್ಕಳನ್ನು ಸರಕಾರಿ ಶಾಲೆಯಲ್ಲಿ ಓದಿಸುವುದು ಕಂಡು ಬಂತು. ಹೆಣ್ಣುಮಕ್ಕಳು ನಾಲ್ಕು ಗೋಡೆ ಮಧ್ಯ ಇದ್ದು ಮನೆ ಕೆಲಸ, ಅಡುಗೆ ಮಾಡುವುದು, ಮದುವೆ ಮಾಡಿಕೊಂಡು ಮಕ್ಕಳನ್ನು ಹೇರುವುದು, ಅವರ ಲಾಲನೆ-ಪಾಲನೆ, ಪೋಷಣೆ, ಕುಟುಂಬ ನಿರ್ವಹಣೆ ಮಾಡುವುದು ಹೆಣ್ಣುಮಕ್ಕಳ ಕರ್ತವ್ಯ ಎಂದು ಬಿಂಬಿಸಲಾಗಿದೆ. ಬೇರೆ ಹಳ್ಳಿಗಳಿಗಿಂತ ಇಲ್ಲಿ ಮಕ್ಕಳು ಒಂದು ಹೆಣ್ಣು ಒಂದು ಗಂಡು ಇರುವುದು ಕಂಡುಬಂತು. ಆದರೂ ಲಿಂಗ ತಾರತಮ್ಯ ಮಾಡುವುದು ಎಷ್ಟರಮಟ್ಟಿಗೆ ಸರಿ ಎಂದು ಅವರಲ್ಲಿ ಕೇಳಿದಾಗ ಅವರಿಂದ ಬಂದ ಉತ್ತರ ಮೌನ. ಇನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಳ್ಳಿಗಳಲ್ಲಿ ಹೆಣ್ಣುಮಕ್ಕಳು ಚೆನ್ನಾಗಿ ಓದಿಕೊಂಡು ಕೆಲಸ ತೆಗೆದುಕೊಳ್ಳಬೇಕು ನಾವು ದುಡಿಯಬೇಕು ಎನ್ನುವ ಆಶಾಭಾವನೆಯ ಛಲದಿಂದ ಮದುವೆ ಆದರೂ ಕುಟುಂಬವನ್ನು ಎದುರಿಸಿ ಓದಲು ಕಾಲೇಜಿಗೆ ಬರುತ್ತಾರೆ. ಆದರೆ ಅವರ ಪ್ರಮಾಣ ಹೆಚ್ಚು ಕಂಡು ಬಂದಿಲ್ಲ.

ಈ ಗ್ರಾಮದಲ್ಲಿ ಬಸವರಾಜ (೪೮ ವಯಸ್ಸು) ವಕ್ತೃ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹೆಣ್ಣು ಗಂಡುಮಕ್ಕಳ ಸಾಮಾಜೀಕರಣ ಕುರಿತಂತೆ ಚರ್ಚಿಸಿದಾಗ ಅವರು ಹೆಣ್ಣು-ಗಂಡುಮಕ್ಕಳು ಇಬ್ಬರು ಸಮಾನ ಮಕ್ಕಳು. ಆದರೆ ಸಮಾಜದಲ್ಲಿ ಕೆಲವು ನಿರೀಕ್ಷೆಗಳಿವೆ. ಅವುಗಳನ್ನು ಪೂರೈಸುವಾಗ

ತಾರತಮ್ಯ ಉಂಟಾಗುತ್ತದೆ. ಹೆಣ್ಣುಮಕ್ಕಳನ್ನು ಗಂಡುಮಕ್ಕಳಂತೆ ನಾವು ಸಮಾನವಾಗಿ ಕಲಿಸಲಿಕ್ಕೆ ಪ್ರಯತ್ನಿಸಿದರೂ, ಸಮಾಜ, ನೆರೆಹೊರೆಯವರು, ಸಂಬಂಧಿಕರು, ಸ್ನೇಹಿತರು ಇವರಿಂದ ಪ್ರಭಾವಿತರಾಗಿ ನಾವು ಪ್ರತ್ಯೇಕವಾಗಿ ಕೆಲಸ ಕಾರ್ಯಗಳನ್ನು, ಮಾತುಗಳನ್ನು, ಆಚಾರ-ವಿಚಾರಗಳನ್ನು ಹೇಳುತ್ತೇವೆ. ಎಷ್ಟೋ ಶಿಕ್ಷಿತ ಪೋಷಕರು ಈ ಲಿಂಗ ತಾರತಮ್ಯದ ಸಾಮಾಜೀಕರಣದಿಂದ ಹೊರಬರಲಿಕ್ಕೆ ಸಾಧ್ಯವಾಗಿಲ್ಲ. ನಾನು ನಮ್ಮ ಮನೆಯಲ್ಲಿ ಹೆಣ್ಣು-ಗಂಡುಮಕ್ಕಳಿಗೆ ಸಮಾನ ಶಿಕ್ಷಣ ನೀಡುತ್ತಿದ್ದೇನೆ. ಆದರೆ ಮನೆಯೊಳಗೆ ಮತ್ತೆ ಮಕ್ಕಳಿಗೆ ಪ್ರತ್ಯೇಕತೆಯ ಬೋಧನೆ ಮಾಡುತ್ತೇನೆ. ಲಿಂಗ ಸಮಾನ ಸಾಮಾಜೀಕರಣ ನೀಡಲಿಕ್ಕೆ ಇದು ಸಾಧ್ಯವಾಗುತ್ತದಂತಹ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಕುಟುಂಬವೊಂದೇ ಕಾರಣವಾಗಿಲ್ಲ. ಶಾಲಾ-ಕಾಲೇಜು, ಶಿಕ್ಷಣದ ಪಠ್ಯಗಳು ಇವುಗಳು ಕಾರಣವಾಗಿವೆ. ಸಾಮಾಜೀಕರಣ ಬದಲಾಯಿಸಬೇಕಾದರೆ ಕೇವಲ ಕುಟುಂಬವೊಂದರಿಂದ ಸಾಧ್ಯವಿಲ್ಲ. ಶಿಕ್ಷಣ, ಸಮಾಜ, ನೆರೆಹೊರೆ, ಸ್ನೇಹಿತರು, ಸಾರ್ವಜನಿಕತೆ ಹೀಗೆ ಎಲ್ಲವೂ ಲಿಂಗಸಮಾನ ಸಾಮಾಜೀಕರಣದ ಕಡೆ ಮುಖ ಮಾಡಬೇಕಾಗಿದೆ ಎಂಬ ಉತ್ತರವನ್ನು ಅವರು ತಮ್ಮ ಮಾತುಗಳಲ್ಲಿ ವಿವರಿಸಿದ್ದಾರೆ.

ಕ್ಷೇತ್ರಕಾರ್ಯದಿಂದ ತಿಳಿದು ಬರುವುದೇನೆಂದರೆ ಪೋಷಕರು ತಮ್ಮ ಹೆಣ್ಣು ಮಗಳಿಗೆ ಆಸ್ತಿಯನ್ನು ಕೊಡಲು ನಿರಾಕರಿಸಿದ್ದು, ಯಾರು ಆಸ್ತಿಯ ಹಕ್ಕನ್ನು ಒಪ್ಪಿಕೊಳ್ಳಲು ತಯಾರಿಲ್ಲ. 'ನಮ್ಮ ಮಗಳಿಗೆ ಓದಿಸಿ, ವರದಕ್ಷಿಣೆ, ಮದುವೆ ಖರ್ಚು ಮಾಡಿ ಆದಮೇಲೆ ಕೂಡ ಅವಳಿಗೆ ಮತ್ತೆ ಆಸ್ತಿಯಲ್ಲಿ ಪಾಲು ಕೊಡುವುದು ಯಾವ ನ್ಯಾಯ ಹೇಳಿ? ನಮ್ಮ ಮಗನಿಗೆ ಆಸ್ತಿ ಬೇಡವೆ? ಮಗ ತಾನೇ ನಮ್ಮನ್ನು ನೋಡಿಕೊಳ್ಳುವುದು; ಮತ್ತೆ ಅವನೇ ಆಸ್ತಿಗೆ ಹಕ್ಕುದಾರ' ಎಂದು ಬಹಳ ನಿಷ್ಠುರವಾಗಿ ಮಾತನಾಡುವ ಸಂದರ್ಭಗಳು ಕಂಡು ಬಂದವು. ಅದರೆ ಮನೆ ಕೆಲಸವನ್ನು ನಿರ್ವಹಿಸುವವರು ಹೆಣ್ಣು ಮಕ್ಕಳೇ; ಅಡುಗೆ, ವಿಶೇಷ ಪೂಜೆ, ಮನೆಯ ಸ್ವಚ್ಛತಾ ಕಾರ್ಯವೆನ್ನೆಲ್ಲ ಹೆಣ್ಣುಮಕ್ಕಳೇ ನಿಭಾಯಿಸುವುದು ಎಂದು ತಿಳಿಸಿದರು. ಗಂಡುಮಕ್ಕಳು ಹೊರಗಡೆ ದುಡಿಯುವವರು, ಅವರಿಗೆ ಯಾಕೆ ಮನೆಯಲ್ಲಿ ಕೆಲಸ? ಎನ್ನುವ ಮಾತುಗಳನ್ನು ಪೋಷಕರಾಡಿರುವುದು ಕಂಡು ಬಂದಿದೆ. ಹೆಣ್ಣುಮಕ್ಕಳೇ ಮನೆ ಕೆಲಸಕ್ಕೆ ಸೀಮಿತ ಎನ್ನುವುದು ಸಾಮಾಜೀಕರಣಗೊಳಿಸಿದ ಸಂಗತಿಗಳು ಕ್ಷೇತ್ರಕಾರ್ಯದಲ್ಲಿ ಕಂಡು ಬಂದಿತು.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪೋಷಕರೊಬ್ಬರಿಗೆ ಸಮಾಜದಲ್ಲಿ ಹೆಣ್ಣು-ಗಂಡು ಮಕ್ಕಳಿಗೆ ಇರುವ ತಾರತಮ್ಯ ಹೋಗಲಾಡಿಸುವುದಕ್ಕೆ ಏನು ಮಾಡಬೇಕು ಎಂದು ಕೇಳಿದರೆ ಅವರ ಉತ್ತರ, ಅದು ಹೇಗೆ ಇದಿಯೋ ಹಾಗೆ ಇದ್ದರೆ ಚಂದ. ಹೆಣ್ಣು-ಹೆಣ್ಣೇ, ಗಂಡು-ಗಂಡೇ ಅದನ್ನು ಬದಲಾಯಿಸಲು ಸಾಧ್ಯವಿಲ್ಲ ಎನ್ನುವ ಉತ್ತರ ದೊರೆಯಿತು. ಇದು ಒಬ್ಬರದ್ದು ಅಷ್ಟೇ ಅಲ್ಲ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಇದು ಬಹುಪಾಲು ಪೋಷಕರಿಂದ ಬಂದ ಮಾಹಿತಿಯಾಗಿದೆ.

ಕುಟುಂಬದಲ್ಲಿ ಲಿಂಗ ತಟಸ್ಥ ಸಾಮಾಜೀಕರಣ

ಕುಟುಂಬದೊಳಗಿನ ಲಿಂಗ ತಟಸ್ಥ ನೀತಿಗೆ ಜಾರಿಗೆ ತರುವುದರ ಮೂಲಕ ಹೆಣ್ಣು-ಗಂಡು ಮಕ್ಕಳಿಗೆ ಸಮ-ಸಾಮಾಜೀಕರಣ ರೂಪಿಸಬಹುದಾಗಿದೆ. ಇದಕ್ಕೆ ಕುಟುಂಬದೊಳಗೆ ಮುಖ್ಯವಾಗಿ ಕೆಲವು ಅಭ್ಯಾಸಗಳು ಮಾಡಿಸಬೇಕಿದೆ. ಮಕ್ಕಳಿಗೆ ಯಾವ ಉಡುಪು ಬೇಕೆಂಬುದನ್ನು ಅವರೇ ನಿರ್ಧರಿಸುವ ಮತ್ತು ಅದನ್ನು ಬಳಸಿಕೊಳ್ಳುವ ಸ್ವಾತಂತ್ರ್ಯ ನೀಡುವುದು; ಯಾವುದೇ ಕಲೆ, ಕ್ರೀಡೆ, ಚಟುವಟಿಕೆಗಳಲ್ಲಿ ಸಮಾನತೆಯಿಂದ ಭಾಗಹಿಸುವಂತೆ ಪ್ರೋತ್ಸಾಹಿಸುವುದು, ಮನೆ ಸ್ವಚ್ಛತೆ, ಸಂಗತಿಗಳು ಭೇದ ಇಲ್ಲದೆ ಕೆಲಸ ನಿರ್ವಹಿಸಲು ಬಿಡುವುದು. ಹೆಣ್ಣು ಮತ್ತು ಗಂಡಿನ ಮಧ್ಯೆ ಬೇರೆ ಕೆಲಸಗಳನ್ನು ಲಿಂಗಕ್ಕೆ ಅನುಗುಣವಾಗಿ ಹಂಚದೇ ಸಮಾನವಾಗಿ ಕೆಲಸ ಹಂಚುವುದು. ಗಂಡು-ಹೆಣ್ಣು ಇಬ್ಬರು ಇದನ್ನು ಮಾಡಬಹುದೆಂದು ಹೇಳುವುದು – ಹೀಗೆ ಹಲವು ಸಂಗತಿಗಳು ಕುಟುಂಬದೊಳಗೆ ಸಾಮಾಜೀಕರಣಗೊಳಿಸುವುದರ ಮೂಲಕ 'ಲಿಂಗ ತಟಸ್ಥ' ನೀತಿಯನ್ನು ಜಾರಿಗೆ ತರುವುದರ ಮೂಲಕ ಹೆಣ್ಣು-ಗಂಡಿನ ಸಾಮಾಜೀಕರಣ ಸಮಸ್ಯೆಗಳನ್ನು ಬಗೆಹರಿಸಬಹುದು.

ಕುಟುಂಬದೊಳಗಿನ ಸಾಮಾಜೀಕರಣದಲ್ಲಿ ಹೆಣ್ಣುಮಕ್ಕಳಿಗೆ ತಮ್ಮನ್ನು ಕಾಡುವ ಸಮಸ್ಯೆಗಳ ಬಗ್ಗೆ ಮತ್ತು ಅದಕ್ಕೆ ಪರಿಹಾರಗಳ ಬಗ್ಗೆ ತಾವೇ ಜಾಗೃತರಾಗುವಂತಹ ಸಾಮಾಜೀಕರಣ ರೂಪಿಸಬೇಕಾಗಿದೆ. ಕುಟುಂಬ ಜೀವನದಲ್ಲಿನ ಲೈಂಗಿಕತೆ, ದಾಂಪತ್ಯ ಮಕ್ಕಳನ್ನು ಹೊರುವ ಹೆರುವ ಪಾಲನೆ-ಪೋಷಣೆ, ರಕ್ಷಣೆ ಮಾಡುವ ಕಾರ್ಯ ಕುಟುಂಬದಲ್ಲಿ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯ, ಸ್ವ-ಇಚ್ಛೆ ಇತ್ಯಾದಿಗಳ ಬಗ್ಗೆ ಹೆಣ್ಣು-ಗಂಡುಮಕ್ಕಳಿಗೆ ಸಮ-ಸಾಮಾಜೀಕರಣಗೊಳಿಸುವುದು ಅಗತ್ಯವಾಗಬೇಕಾಗಿದೆ. ಇದಕ್ಕೆ ಕುಟುಂಬದೊಳಗೆ ಹೆಣ್ಣು-ಗಂಡುಮಕ್ಕಳಿಗೆ ಸಮಾನ ಶ್ರಮ ಹಂಚಿಕೆ ಮಾಡುವುದು, ಮಕ್ಕಳಿರುವಾಗಲೇ ಹೆಣ್ಣುಮಕ್ಕಳಿಗೆ ಸ್ಥಿರಗೊಳಿಸುವ ಮೌಲ್ಯಗಳನ್ನು/ಆದರ್ಶದ ಸಂಗತಿಗಳಲ್ಲಿ ಹೆಣ್ಣು ಆದರ್ಶ ನಾರಿ, ತ್ಯಾಗಮಯಿ, ಪ್ರೇಮಮಯಿ, ಸಹನಾಶೀಲೆ, ಸೇವಾದಾರಳು, ಕರಣಾಮಯಿ – ಎಂದೆಲ್ಲ ವೈಭವೀಕರಿಸುವ ಸಂಗತಿಗಳನ್ನು ನಿಲ್ಲಿಸಬೇಕು. ಹೆಣ್ಣಿನ ಪ್ರಮುಖ ಕೆಲಸವೆಂದರೆ ಅಡುಗೆ ಮಾಡುವುದು, ಕಸಮುಸುರೆ ತೊಳೆಯುವುದು ಎಂಬ ಧೋರಣೆಗಳ ಸಾಮಾಜೀಕರಣವನ್ನು ಕುಟುಂಬಗಳಲ್ಲಿ ನಿಲ್ಲಿಸಬೇಕು.

ಹೆಣ್ಣಿನ 'ಸ್ವ-ಕಲ್ಪನೆಗಳು' ಪುರುಷರು ಹೆಣ್ಣಿನ ಬಗ್ಗೆ ಕಲ್ಪಿಸಿಕೊಂಡ ವಿಚಾರಗಳಿಂದ ಪ್ರೇರಿತವಾಗಿವೆ. ತಾನು ಹೇಗಿರಬೇಕು ? ಹೇಗೆ ವ್ಯವಹರಿಸಬೇಕು ? ಹೇಗೆ ಮಾತನಾಡಬೇಕು ಎಂಬುದನ್ನೆಲ್ಲ ಹೆಣ್ಣಿನ ಪರವಾಗಿ ಪುರುಷರು ನಿರ್ಧರಿಸುತ್ತಾರೆ. ಸ್ವಂತ ಬದುಕಿನ ಬಗೆಗೆ ಮೌಲ್ಯ ಕಲ್ಪನೆಯು ಕುಟುಂಬದಲ್ಲಿ ಬಾಲ್ಯದಿಂದಲೇ ಪರರ ವಿಚಾರಗಳು ಬೆಳಕಿನಲ್ಲಿ ರೂಪುಗೊಳ್ಳುತ್ತದೆ. ಹೀಗಾಗಿ ಇದನ್ನು ಕುಟುಂಬದಿಂದಲೇ ನಿಲ್ಲಿಸಬೇಕು.

ಕುಟುಂಬದಲ್ಲಿನ ಪೋಷಕರು, ತಂದೆ-ತಾಯಿಗಳು ಬದಲಾವಣೆಯ ಬೆಂಬಲಿಗರಾಗಬೇಕಾಗುತ್ತದೆ. ಮಕ್ಕಳಿಗೆ ಕಲಿಸುವ ರೀತಿ-ನೀತಿಗಳು ಹಾಗೂ ಆಚಾರ-ವಿಚಾರಗಳು, ಆದರ್ಶ, ಮೌಲ್ಯಗಳು ಹೆಣ್ಣು-

ಗಂಡು ಮಕ್ಕಳಲ್ಲಿ ಲಿಂಗ ಸಮಾನ ಪಾಠವನ್ನು ಕುಟುಂಬದಿಂದಲೇ ಕಟ್ಟಿಕೊಡಬಹುದು. ಕುಟುಂಬದೊಳಗೆ ಹೆಣ್ಣು-ಗಂಡು ಮಕ್ಕಳನ್ನು ನೋಡುವ ರೀತಿ, ಸಂಬೋಧಿಸುವ ರೀತಿ, ಅವರೊಡನೆ ವ್ಯವಹಾರ ಮಾಡುವ ಕ್ರಮ, ಜವಾಬ್ದಾರಿಗಳನ್ನು ಹಂಚುವ ಕ್ರಮ, ಪುರಸ್ಕಾರ ಮತ್ತು ಶಿಕ್ಷೆ ಕೊಡುವ ರೀತಿ ಇತ್ಯಾದಿ ಆಚರಣೆಗಳ ಮೂಲಕ ಕುಟುಂಬದೊಳಗೆ ಲಿಂಗ ಸಮಾನತೆಯ ಪರಿಕಲ್ಪನೆಯನ್ನು ಮಕ್ಕಳಲ್ಲಿ ಬೆಳೆಸಬೇಕು. ಇದು ಮೇಲ್ನೋಟಕ್ಕೆ ಸುಲಭವೇ ಎಂದು ಪ್ರಶ್ನೆ ಆದರೂ ಭವಿಷ್ಯತ್ತಿನ ಸಮಾಜಕ್ಕಾಗಿ, ಹೆಣ್ಣುಮಕ್ಕಳ ಮೇಲಿನ ಶೋಷಣೆ ನಿಲ್ಲಿಸುವುದಕ್ಕಾಗಿ, ಲಿಂಗ ಸಮಾನ ಸಮಾಜ ನಿರ್ಮಾಣಕ್ಕಾಗಿ ಪುರುಷ ಪ್ರಧಾನ ವ್ಯವಸ್ಥೆಯ ನಿರ್ಮೂಲನೆಗಾಗಿ ಇದು ಅವಶ್ಯಕವಾಗಬೇಕಾಗಿದೆ.

ಮಕ್ಕಳನ್ನು ಸಣ್ಣ ಮಗು ಇರುವಾಗಲೇ ಅವರು ಇಷ್ಟಪಡುವ ಆಟಿಕೆಗಳ ಜೊತೆಗೆ ಆಟವಾಡಲು ಬಿಡುವುದರ ಜೊತೆಗೆ ಅವರು ಇಷ್ಟಪಡುವ ಉಡುಗೆ-ತೋಡಿಗೆಗಳನ್ನು ಉಡುವುದರ ಮೂಲಕ ಸಮಾನತೆಯ ಕುರಿತಂತೆ ಮಕ್ಕಳಲ್ಲಿ ಪ್ರಜ್ಞೆಯನ್ನು ತರಬಹುದು ಎನ್ನುವುದಕ್ಕೆ ಸಂಬಂಧಿಸಿದಂತೆ ದೊರೆಯುವ ಮಾಹಿತಿಯಲ್ಲಿ, "ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಬ್ರಿಟನ್ ಸರಕಾರ ಶಾಲಾ ಮಕ್ಕಳ ಸಮವಸ್ತ್ರ ಕುರಿತಂತೆ ಕಾಯ್ದೆಯನ್ನು ಅಂಗೀಕರಿಸಿತು. ಈ ಕಾಯ್ದೆಯಿಂದ ಮಕ್ಕಳು ತಮ್ಮ ಇಷ್ಟದ ಸಮವಸ್ತ್ರ ಅದು ಪ್ಯಾಂಟು ಇರಲಿ ಅಥವಾ ಸ್ಕರ್ಟ್ ಇರಲಿ, ಯಾವುದನ್ನು ಬೇಕಾದರೂ ಧರಿಸಲು ಈ ಕಾಯ್ದೆ ಅವಕಾಶ ಮಾಡಿಕೊಟ್ಟಿತು. ಸ್ಕರ್ಟ್ ತೊಟ್ಟ ಹುಡುಗಿಯರು ಶಾಲೆಯಲ್ಲಿ ಬಿಡುವಿನ ಸಮಯದಲ್ಲಿ ಪುಟ್ಬಾಲ್ ಆಡಲು ತೊಡಕುಂಟಾಗುವುದನ್ನು ಗಮನಿಸಿದ ಸಂಸದೆಯೊಬ್ಬರು. ಇಂತಹ ಕಾನೂನು ತರಲು ಪ್ರಸ್ತಾವ ಮಂಡಿಸಿದ್ದು ಗಮನಾರ್ಹ"[1] ಈ ರೀತಿಯ ಸಂಗತಿಗಳಿಂದ ಲಿಂಗ ತಟಸ್ಥ ನೀತಿಯನ್ನು ಬೋಧಿಸುತ್ತವೆ. ಜೊತೆಗೆ ಸಮಾಜದಲ್ಲಿ ಗಂಡು-ಹೆಣ್ಣು ಮಕ್ಕಳ ಮೇಲಿನ ಸಾಮಾಜೀಕರಣದ ಸಮಸ್ಯೆಯನ್ನು ನಿರ್ಮೂಲನೆಗೆ ಸಹಾಯಕವಾಗುತ್ತವೆ. ಇಲ್ಲಿ ಹೆಣ್ಣು-ಗಂಡು ಇಬ್ಬರ ಅಸ್ಮಿತೆಯನ್ನು, ಆತ್ಮವಿಶ್ವಾಸವನ್ನು ಇಬ್ಬರಲ್ಲಿ ಲಿಂಗಬೇಧವನ್ನು ತಡೆಯುವ ಉದ್ದೇಶ ಇಂತಹ ಸಂಗತಿಗಳಿಂದ ಕಂಡು ಬರುತ್ತದೆ. ಹೀಗೆ ಕುಟುಂಬ ಮತ್ತು ಶೈಕ್ಷಣಿಕ ವಲಯಗಳಲ್ಲಿ ಮಕ್ಕಳಿಗೆ ಸಮಾನ ರೀತಿಯಲ್ಲಿ ಸಾಮಾಜೀಕರಣ ರೂಪಿಸುವ ಕಾಯ್ದೆ ಕಾನೂನುಗಳನ್ನು ಜಾರಿಗೆ ತರುವುದರ ಮೂಲಕವು ಲಿಂಗ ತಟಸ್ಥ ಸಾಮಾಜೀಕರಣಗೊಳಿಸಬಹುದಾಗಿದೆ.

ಒಟ್ಟಾರೆ ಹೆಣ್ಣಿಗೆ ಕುಟುಂಬದೊಳಗಿನ ಸಾಮಾಜೀಕರಣ "ಹುಟ್ಟುತ್ತಾ ಲಿಂಗವಾಗಿ (ಸೆಕ್ಸ್) ಬೆಳೆಯುತ್ತಾ ಸಾಮಾಜೀಕರಣವಾಗಿ ಜೆಂಡರ್ (ಲಿಂಗತ್ವ) ರೂಪುಗೊಳ್ಳುವ ಪ್ರಕ್ರಿಯೆಯನ್ನು ವಿವರಿಸುತ್ತದೆ ಮಕ್ಕಳು ಈ ರೀತಿಯ ಸಾಮಾಜೀಕರಿಸುವ ವಿವಿಧ ಸಂಸ್ಥೆಗಳ ಮೂಲಕ ಸಾಮಾಜಿಕ ಲಿಂಗದ ವ್ಯತ್ಯಾಸ ಜೈವಿಕ ನಿರ್ಧಾರವಾಗಿರದೆ ಅದು ಸಾಂಸ್ಕೃತಿಕ ಉತ್ಪನ್ನವಾಗಿದೆ ಎನ್ನುವುದು ಅರ್ಥ ಮಾಡಿಕೊಳ್ಳಬಹುದು.

ಕುಟುಂಬ ಹೆಣ್ಣಿಗೆ ಸಾಂಸ್ಕೃತಿಕ ನಂಬಿಕೆ ಮೌಲ್ಯಗಳ ಆಚರಿಸಬೇಕಾದ ವಿಧಿ ಕರ್ಮಗಳನ್ನು ಅನುಸರಿಸಬೇಕಾದ ನಿಯಮಗಳ ಕಂತೆಯನ್ನು ಸೃಷ್ಟಿಸಿ ಸಾಮಾಜಿಕ ರೀತಿ-ನೀತಿಗಳ ಒಂದು ವಿಸ್ತೃತ ಜಾಲವನ್ನು ಹೆಣೆದಿರುವುದು ಕಂಡು ಬರುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಭದ್ರ ಬುನಾದಿಯನ್ನು

ಹಾಕಿ ಹೆಣ್ಣು–ಗಂಡಿನ ಮಧ್ಯ ಲಿಂಗ ಅಸಮಾನತೆ ಸೃಷ್ಟಿಸಿ ಮುಂದುವರೆಯುವಂತೆ ಮಾಡಿತು. ವ್ಯಕ್ತಿಯ (ಹೆಣ್ಣಿಗೆ) ಘನತೆಗೆ ನಿರಂತರ ಚ್ಯುತಿ ತಂದು ಈ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಿಗೆ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಕೀಳರಿಮೆ ಸೃಷ್ಟಿಸಿ ಗಂಡು ಮಕ್ಕಳು ಬಲಶಾಲಿಯಾಗುವಂತೆ ಮಾಡಿತು.

ಕುಟುಂಬದೊಳಗಿನ ಹೆಣ್ಣಿಗೆ ನೀಡಿದ ಸ್ಥಿರ ಮಾದರಿಯ ಸಾಮಾಜೀಕರಣದಿಂದ, ಹೆಣ್ಣುಮಕ್ಕಳಲ್ಲಿ ಅಧೀನ ಭಾವನೆ, ಆತ್ಮವಿಶ್ವಾಸ ಕೊರತೆ, ಆತ್ಮಗೌರವ, ಆತ್ಮ ನಿರೀಕ್ಷಣೆಯನ್ನು ಕುಗ್ಗಿಸುವ ಮತ್ತು ಆಕಾಂಕ್ಷೆಗಳಿಗೆ ಕಡಿವಾಣ ಹಾಕುವಂತೆ ಮಾಡಿದೆ. ಇದರಿಂದಾಗಿ ತನ್ನತನವನ್ನು ಉಳಿಸಿಕೊಳ್ಳಲು ಹೆಣ್ಣುಮಕ್ಕಳು ಮಾಡುವ ಪ್ರತಿಯೊಂದು ಪ್ರಕ್ರಿಯೆಯಲ್ಲಿ 'ಹೆಣ್ಣು ತಕ್ಕುದಲ್ಲ' ಎನಿಸಿಕೊಳ್ಳುತ್ತದೆ. ತನ್ನ 'ಪಾತ್ರ ಮತ್ತು ಸ್ಥಾನ'ವನ್ನು ಆಕೆಯನ್ನು ಬಿಡದಂತೆ ನಿರ್ಬಂಧಿಸಿದ ಕುಟುಂಬ, ಒಂದುವೇಳೆ ಹೆಣ್ಣುಮಕ್ಕಳು ಕುಟುಂಬವನ್ನು ಬಿಟ್ಟು ಕದಲಿದರೆ ಸಾಕು! 'ಗಂಡು ಬೀರಿ' ಅಥವಾ 'ಮಾನ' ಗೆಟ್ಟವಳು ಎಂಬ ಅಪಖ್ಯಾತಿಗೆ ಒಳಗಾಗುತ್ತಾಳೆ. ಕುಟುಂಬ ಸಾಮಾಜೀಕರಣದಿಂದ ಹೆಣ್ಣಿನ ಮೇಲೆ ಉಂಟಾಗಿರುವ ಯಾತನೆ ಕುರಿತು ಹೆಣ್ಣು ಮಕ್ಕಳ ಅನುಭವ ಕೇಳಿದರೆ ಅಧೀನತೆ ಹೆಣ್ಣಿನ ಹಣೆಬರಹವೂ ಅಲ್ಲ, ನತದೃಷ್ಟತೆಯು ಅಲ್ಲ, ಹೆಣ್ಣಿಗೆ ಕುಟುಂಬವು ರೂಪಿಸಿದ ಸಾಮಾಜೀಕರಣವಾಗಿದೆ.

ಟಿಪ್ಪಣಿಗಳು

೧. ಸುಧಾ ಸೀತಾರಾಮನ್, **ಮಹಿಳಾ ಅಧ್ಯಯನ,** ೨೦೧೦, ಪು. ೧೭.

೨. ಅದೇ, ಪು. ೨೯.

೩. ಪ್ರಜಾವಾಣಿ, **ಭೂಮಿಕಾ,** ಜೂನ್–೨೦೧೯, ಪು. ೧.

♦ ♦ ♦

ಅಧ್ಯಾಯ : ಆರು

ಸಮಾರೋಪ

೬.೧. ಅಧ್ಯಯನದ ಫಲಿತಗಳು

೬.೨. ಕನ್ನಡ ಭಾಷಾ ಪಠ್ಯಗಳು ಮತ್ತು (ಪರಿಸರ ಅಧ್ಯಯನ) ಸಮಾಜ ವಿಜ್ಞಾನ ಪಠ್ಯಗಳ ಒಟ್ಟು ಸಮೀಕ್ಷೆ

೬.೩. ಮುಂದಿನ ಅಧ್ಯಯನದ ಸಲಹೆ–ಸಾಧ್ಯತೆಗಳು

ಅಧ್ಯಾಯ : ಆರು

ಸಮಾರೋಪ

'ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆ: ಲಿಂಗ ಸಂಬಂಧಿ ಅಧ್ಯಯನ (ಪ್ರಾಥಮಿಕ ಮತ್ತು ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳನ್ನು ಅನುಲಕ್ಷಿಸಿ)' ಎಂಬ ಪ್ರಸ್ತುತ ಅಧ್ಯಯನದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಪಠ್ಯಪುಸ್ತಕಗಳು ಮಕ್ಕಳಿಗೆ ಏನನ್ನು ಕಲಿಸುತ್ತಿವೆ ಎಂಬುದರ ಕುರಿತಂತೆ ಲಿಂಗಸಂಬಂಧಿ ವಿಶ್ಲೇಷಣೆ ಮಾಡಲಾಗಿದೆ. ಹೆಣ್ಣು-ಗಂಡುಮಕ್ಕಳಲ್ಲಿ ಲಿಂಗಭೇದ, ಸಾಮಾಜೀಕರಣದ ಸಮಸ್ಯೆಯನ್ನು ಸೃಷ್ಟಿಸುತ್ತಿರುವುದು ಕಂಡು ಬರುತ್ತದೆ. ಶಿಕ್ಷಣ ಎಂದರೆ, ಜ್ಞಾನ, ವ್ಯಕ್ತಿ ವಿಕಾಸಗೊಳಿಸಲು, ಪೂರಕವಾದ ಸಾಧನ ಜೊತೆಗೆ ಸಾಮಾಜಿಕ ಪಿಡುಗುಗಳನ್ನು ಕಿತ್ತೆಸೆಯಲು ಮತ್ತು ಭೇದಭಾವ ರಹಿತ ಸಮಾಜವನ್ನು ಕಟ್ಟಲು ನೆರವಾಗಿರಬೇಕಾದ ಸಾಧನವಾಗಿದೆ. ಹೀಗಿರುವಾಗ ಪಠ್ಯಪುಸ್ತಕಗಳು ಹೆಣ್ಣು-ಗಂಡುಮಕ್ಕಳಲ್ಲಿ ಲಿಂಗಭೇದ ಸಾಮಾಜೀಕರಣ ರೂಪಿಸಿ ಅದನ್ನು ಯಥಾವತ್ತಾಗಿ ಸ್ಥಿರಗೊಳಿಸಿ ಜಾರಿಗೊಳಿಸುತ್ತಿರುವುದು ಕಂಡು ಬರುತ್ತದೆ.

೬.೧. ಅಧ್ಯಯನದ ಫಲಿತಗಳು

- ಹೆಣ್ಣು ಗಂಡಿನ ಪ್ರಾಕೃತಿಕ ಭಿನ್ನತೆಯನ್ನಾಧರಿಸಿ ಸಾಮಾಜಿಕ ಭಿನ್ನತೆಯನ್ನು ಕಟ್ಟಿಕೊಡುವ ಕೆಲಸ ಈ ಪಠ್ಯಪುಸ್ತಕಗಳಲ್ಲಿ ಕಂಡು ಬರುತ್ತಿದೆ. ಅನೇಕ ಚಿತ್ರಗಳಲ್ಲಿ, ವಾಕ್ಯಗಳಲ್ಲಿ, ಗಾದೆಗಳಲ್ಲಿ, ನುಡಿಕಟ್ಟುಗಳಲ್ಲಿ 'ಹೆಣ್ಣು ಮತ್ತು ಗಂಡಿಗೆ ಅನ್ವಯಿಸುವ ಮೌಲ್ಯಗಳು, ನಿಯೋಜಿತ ಪಾತ್ರಗಳು ಹಾಗೂ ಕಟ್ಟಿಕೊಟ್ಟಿರುವ ಮಿಥ್‌ಗಳು ತರ-ತಮ ವಾಚಕಗಳಾಗಿಯೇ ದಾಖಲಿಸಿರುವುದು ಕಂಡುಬರುತ್ತದೆ.
- ಹೆಣ್ಣು-ಕೀಳು ಗಂಡು-ಮೇಲು ಎಂಬ ಸ್ಥಾಯೀಭಾವವಾಗಿ, ಹೆಣ್ಣಿಗೆ ಶೋಷಣೆಯು ಶಾಶ್ವತವೂ ಹಾಗೂ ಸಹಜವೂ ಆಗಿದೆ ಎನ್ನುವುದನ್ನು ಸಾಮಾಜೀಕರಣಗೊಳಿಸುವ ಕೆಲಸ ಮಾಡಿರುವುದು ಕಂಡು ಬರುತ್ತಿದೆ. ಸ್ತ್ರೀ ವಿಶ್ಲೇಷಣೆಯ ವಿಮೋಚನೆಗಾಗಿ ಪರಿಹಾರಗಳನ್ನು ಸೂಚಿಸಬಹುದಿತ್ತು. ಆ ಕಾರ್ಯ ಪಠ್ಯಪುಸ್ತಕಗಳಿಂದ ಸಾಧ್ಯವಾಗಿಲ್ಲ.
- ಪಠ್ಯಪುಸ್ತಕಗಳಲ್ಲಿ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಆಂತರಿಕ ಕ್ಷೇತ್ರಗಳಲ್ಲಿ ಹೆಣ್ಣು-ಗಂಡು ಪ್ರತ್ಯೇಕ ಎನ್ನುವಂತೆ ಸಾಮಾಜೀಕರಣಗೊಳಿಸುತ್ತಿರುವುದು ಕಂಡು ಬರುತ್ತಿದೆ.

- 'ಸಾಮಾಜೀಕರಣ ಮಾನವ ನಿರ್ಮಿತವಾದದು', ಇದರಲ್ಲಿ ರೂಪಿತಗೊಂಡಿರುವ ಲಿಂಗ ಅಸಮಾನತೆ, ಲಿಂಗ ತಾರತಮ್ಯವನ್ನು ಹೋಗಲಾಡಿಸುವ ಶಕ್ತಿ ಶಿಕ್ಷಣಕ್ಕೆ ಇದೆ. ಇದನ್ನು ಬದಲಾಯಿಸುವ ಕೆಲಸ ಪಠ್ಯಪುಸ್ತಕಗಳಲ್ಲಿ ಮಾಡದೆ ಸ್ಥಾಪಿತವಾದ ಸ್ತ್ರೀ-ಪುರುಷ ತಾರತಮ್ಯವನ್ನೇ ಮತ್ತೆ ಮುಂದುವರಿಸಲಾಗಿದೆ.

- ಸಂವಿಧಾನದ ಮೂಲ ಆಶಯವಾದ ಸಾಮಾಜಿಕ ನ್ಯಾಯ, ಲಿಂಗ ಸಮಾನತೆ, ಸ್ವಾತಂತ್ರ್ಯವನ್ನು ಸಾಕಾರಗೊಳಿಸುವ ಸಾಮಾಜೀಕರಣ ರೂಪಿಸುವಲ್ಲಿ ಶಾಲಾ ಪಠ್ಯಪುಸ್ತಕಗಳಲ್ಲಿ ವಿಫಲತೆ ಎದ್ದು ಕಾಣುತ್ತಿದೆ.

- ಪ್ರಾಥಮಿಕ ಹಾಗೂ ಮಾಧ್ಯಮಿಕ (೧ರಿಂದ ೮) ಕನ್ನಡ ಪಠ್ಯಪುಸ್ತಕಗಳಲ್ಲಿ ಲಿಂಗ ತಾರತಮ್ಯದ ಚಿತ್ರವನ್ನೇ ಪದೇ ಪದೇ ತೋರಿಸಿ, ಗಂಡು ಮಕ್ಕಳ(ಪುರುಷರ) ಹಿರಿಮೆಯನ್ನು ಪ್ರತಿಪಾದಿಸುವ ಸಾಮಾಜೀಕರಣ ಇದೆ.

- ಪಠ್ಯಪುಸ್ತಕಗಳಲ್ಲಿ ಬಳಸಿರುವ ಭಾಷೆ ಮತ್ತು ವಿಷಯಗಳು ಪುರುಷ ಕೇಂದ್ರಿತವಾಗಿದ್ದು, ಪುರುಷವಾಚಕದಲ್ಲಿಯೇ ಇವೆ. ಅಂದರೆ ಲಿಂಗತ್ವ ತಟಸ್ಥ/ಸ್ತ್ರೀ ಲಿಂಗ ಶಬ್ದಗಳ ಕೊರತೆ ಎದ್ದು ಕಾಣುತ್ತದೆ. ಇದರಿಂದ ಪಠ್ಯಪುಸ್ತಕಗಳ ಮೂಲಕ ಮಕ್ಕಳಿಗೆ ಪುರುಷ ಪ್ರಧಾನ ಸಾಮಾಜೀಕರಣ ರೂಪಿಸುವ ಕೆಲಸ ಮಾಡುತ್ತಿರುವುದು ಕಂಡು ಬರುತ್ತದೆ.

- ಕನ್ನಡ ಪಠ್ಯಪುಸ್ತಕಗಳಲ್ಲಿ ಸಂದೇಶ ಕೊಡುವಾಗ ಗಂಡುಮಕ್ಕಳು ಕುಟುಂಬದ ವಾರಸುದಾರರು, ನಿರ್ಣಾಯಕರು, ಪ್ರತಿಭಾವಂತರು, ಬುದ್ಧಿವಂತರು, ಸಾಧಕರು, ಆಸ್ತಿ, ಹಣ, ಕೌಶಲ್ಯ ಹೊಂದಿರುವವರು ಎನ್ನುವ ಸಂದೇಶದ ಸಾಮಾಜೀಕರಣ ರೂಪಿಸುತ್ತಿರುವುದು ಕಂಡು ಬರುತ್ತಿದೆ. ಹೆಣ್ಣುಮಕ್ಕಳು ಮತ್ತು ಮಹಿಳೆಯರನ್ನು ಕುಟುಂಬದ ಒಳಗೂ, ಹೊರಗೂ ಸೇವೆ ಮಾಡುವವರು, ವಿಧೇಯರಾಗಿರುವವರು, ಗಂಡಿನ ಅಧೀನದಲ್ಲಿರುವವರು, ಭಯಸ್ತರು, ಮದುವೆ ಸಂಸ್ಥೆಯ ಕಾರಣಕ್ಕಾಗಿ ಹುಟ್ಟಿದ ಮನೆ(ಕುಟುಂಬದಿಂದ)ಯಿಂದ ಹೊರಹೋಗುವವರು ಮತ್ತು ಗಂಡನ ಕುಟುಂಬಕ್ಕೆ ಬರುವವರು ಎನ್ನುವ ರೂಢಿಗತ ಆಚರಣೆಗಳನ್ನೇ ತಿಳಿಸಿರುವುದು ಮತ್ತು ಹೆಣ್ಣು ಕುಟುಂಬದಲ್ಲಿ ಇರುವವಳು ಎನ್ನುವಂಥ ಸಾಮಾಜೀಕರಣ ರೂಪಿಸುವ ಕೆಲಸ ಮಾಡಿರುವುದು ಕಂಡು ಬರುತ್ತಿದೆ.

- ಹೆಣ್ಣು-ಗಂಡು ಮಕ್ಕಳಿಬ್ಬರೂ ಆಡುವ ಆಟಗಳಲ್ಲಿ ಪಡಿಯಚ್ಚುಗಳನ್ನು ಕಾಣಬಹುದು. ಅಂದರೆ ಬುಗುರಿ, ಲಗೋರಿ, ಗೋಲಿ, ಮರಕೋತಿ, ಚಿನ್ನಿದಾಂಡು, ದೋಣಿ ನಡೆಸುವುದು, ಈಜು, ಕಬಡ್ಡಿ, ಕಾಲ್ಚೆಂಡು, ಕ್ರಿಕೇಟ್ ಆಟಗಳಲ್ಲಿ ಗಂಡುಮಕ್ಕಳನ್ನೇ ತೋರಿಸಲಾಗಿದೆ. ಹಗ್ಗದಾಟ, ಕುಂಟೆ ಬಿಲ್ಲೆ, ಜೋಕಾಲಿ ಆಟಗಳಲ್ಲಿ ಹೆಣ್ಣುಮಕ್ಕಳನ್ನು ತೋರಿಸಲಾಗಿದೆ. ಇದರಿಂದ ಹೆಣ್ಣು-ಗಂಡು ಮಕ್ಕಳ ಆಟಗಳು (ಕ್ರೀಡೆಗಳು) ಪ್ರತ್ಯೇಕವಾಗಿವೆ ಎಂಬುದನ್ನು ಬಿಂಬಿಸಲಾಗಿದೆ.

- ಪಠ್ಯಪುಸ್ತಕದಲ್ಲಿ ಮುಖ್ಯವಾಗಿ ಗಂಡು (ಪುರುಷರ) ಮಕ್ಕಳ ಚಿತ್ರಗಳನ್ನು ಹೆಚ್ಚಾಗಿ ತೋರಿಸುವುದರ ಮೂಲಕ ಶಿಕ್ಷಣ ಗಂಡುಮಕ್ಕಳಿಗೆ ಎನ್ನುವ ಮನೋಧರ್ಮದ ಸಾಮಾಜೀಕರಣವನ್ನು ಕಟ್ಟಿಕೊಟ್ಟಿರುವುದು ಕಂಡು ಬರುತ್ತದೆ.
- ಮನುಷ್ಯರ ವಿಕಾಸ, ಪ್ರಾಪಂಚಿಕ ಜ್ಞಾನ, ಲೋಕಾನುಭವ, ಯಂತ್ರಗಳ ಅನ್ವೇಷಣೆ, ಕೌಶಲ್ಯ ಕಲೆ ಎಲ್ಲವೂ ಪುರುಷರಿಂದಲೇ ಎಂದು ಹೇಳುವ ಭಾಷೆ ಮತ್ತು ಚಿತ್ರಗಳ ಮೂಲಕ ಇಡೀ ಪಠ್ಯಪುಸ್ತಕಗಳನ್ನು ಪುರುಷಕೇಂದ್ರಿತ ಸಾಮಾಜೀಕರಣಗೊಳಿಸಲಾಗಿದೆ.
- ಪಠ್ಯಪುಸ್ತಕಗಳಲ್ಲಿ ಮಹಿಳೆಯರು ಸಾಹಿತ್ಯ, ವಿಜ್ಞಾನ, ಸಂಸ್ಕೃತಿ, ಸಂಗೀತ, ಕಲೆ, ಕೌಶಲ್ಯ, ಮುಂತಾದ ವಲಯಗಳಲ್ಲಿ ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಮರೆಮಾಚಲಾಗಿದೆ.
- ಪಠ್ಯಪುಸ್ತಕಗಳಲ್ಲಿ ಕೃಷಿಗೆ ಮೂಲಕಾರಣಗಳಾದ ಮಹಿಳೆಯನ್ನು ಮರೆಮಾಚಲಾಗಿದೆ. ಮೂಲತಃ ಬೆಂಕಿ, ಆಹಾರ, ಉತ್ಪಾದನೆ, ಆಹಾರ ಸಂಗ್ರಹಣೆ, ಆಹಾರ ತಯಾರಿಕೆ, ನೇಯ್ಗೆ, ಆರೋಗ್ಯ ರಕ್ಷಣೆ ಇತ್ಯಾದಿಗಳನ್ನು ಅನ್ವೇಷಿಸಿದವರು ಮಹಿಳೆಯರು. ಇದನ್ನು ಸಂಪೂರ್ಣವಾಗಿ ಗೌಣವಾಗಿಸಿ ಇವೆಲ್ಲವುಗಳಲ್ಲಿ ಪುರುಷರ ಪಾತ್ರವನ್ನು ವೈಭವೀಕರಿಸಿ ಪುರುಷ ಪರ ಸಾಮಾಜೀಕರಣ ಗೊಳಿಸಿರುವುದು ಕಂಡು ಬರುತ್ತವೆ.
- ಪದವಿ, ಪುರಸ್ಕಾರ, ಹೆಗ್ಗಳಿಕೆ, ಮಾನ, ಸನ್ಮಾನ ಪುರುಷರಿಗೆ ಮಾತ್ರ ಎಂಬಂತಹ ಪಾತ್ರಗಳನ್ನು ಕಟ್ಟಿಕೊಡಲಾಗಿದೆ. ರಾಜ್ಯ ಆಡಳಿತ ಪ್ರಜಾತಂತ್ರ ಮತ್ತು ಆಡಳಿತ ನಿರ್ವಹಣೆಯಲ್ಲಿ ಸಹ ಕೇವಲ ಪುರುಷರನ್ನೇ ಹೆಸರಿಸಿರುವುದು, ಪುರುಷರೇ ಇವುಗಳನ್ನು ನಿರ್ವಹಣೆ ಮಾಡಲು ಸಾಧ್ಯ ಎಂಬಂತಹ ಸಾಮಾಜೀಕರಣ ಪಠ್ಯಗಳಲ್ಲಿದೆ.
- ಹೆಚ್ಚಾಗಿ ಪುರುಷರನ್ನು ರಾಜರಾಗಿ, ಸಮಾಜ ಸುಧಾರಕರಾಗಿ, ಇತಿಹಾಸಕಾರರಾಗಿ, ಸಾಹಿತಿಗಳಾಗಿ, ವಿಜ್ಞಾನಿಗಳನ್ನಾಗಿ, ರಾಜಕಾರಣಿಗಳನ್ನಾಗಿ, ರೈತರನ್ನಾಗಿ ಪುರುಷರನ್ನು ಪ್ರಧಾನವಾಗಿ ಮಕ್ಕಳಿಗೆ ಪಠ್ಯಪುಸ್ತಕಗಳಲ್ಲಿ ಪರಿಚಯಿಸಲಾಗಿದೆ. ಇದರಿಂದ ಪುರುಷ ಪರವಾದ ಸಾಮಾಜೀಕರಣ ರೂಪಿತಗೊಳ್ಳಲು ಕಾರಣವಾಗಿದೆ.
- ಪುರುಷರನ್ನು ಹೊರ ಸಂಚಾರ, ಸಾರ್ವಜನಿಕ ಸಮಾರಂಭ, ಮನೋರಂಜನೆಯ ಕ್ಷೇತ್ರ, ಕ್ರೀಡಾಕ್ಷೇತ್ರ ಪುರುಷರದ್ದೇ ಎಂಬಂತೆ ಪಠ್ಯಪುಸ್ತಕಗಳಲ್ಲಿ ಬಿಂಬಿಸಲಾಗಿದೆ.
- ಹೆಣ್ಣುಮಕ್ಕಳ ಚಿತ್ರವಿರುವುದು ಬಹಳ ವಿರಳ. ಅವರು ಮನೆ ಕೆಲಸವನ್ನು ತಲ್ಲೀನರಾಗಿರುವಂತೆ ರೂಪಿಸಲಾಗಿದೆ. ಪಠ್ಯಪುಸ್ತಕಗಳ ಚಿತ್ರಗಳಲ್ಲಿ ಹೆಣ್ಣನ್ನು ಅಲಂಕಾರ ಪ್ರಿಯರನ್ನಾಗಿ, ಸೊಬಗಿನ ಚೆಲುವಿನ ಪ್ರತಿಮೆಗಳಾಗಿ ಚಿತ್ರಿಸಲಾಗಿದೆ. ಹೆಣ್ಣುಮಕ್ಕಳಿಗೆ ಸಂಭ್ರಮ ಮತ್ತು ಸಂತೋಷ, ಹಬ್ಬ ಮತ್ತು ಮದುವೆ ಎಂದು ಸಮೀಕರಿಸಲಾಗಿದೆ. ವಂಶವೃಕ್ಷದ ಮೂಲಕ ಹೆಣ್ಣು ತಾನು ಹುಟ್ಟಿದ ಮನೆ ತನ್ನದಲ್ಲ; ಹೊರಗೆ ಹೋಗಬೇಕಾದವಳು ಎಂಬ ಸಾಮಾಜೀಕರಣವನ್ನು ಸ್ಥಿರಗೊಳಿಸುವುದು ಕಂಡುಬರುತ್ತದೆ.

- ಮಾನವೀಯ ಮೌಲ್ಯಗಳಾದ ಸತ್ಯ, ನಿಷ್ಠೆ, ಪರೋಪಕಾರ, ತಾಳ್ಮೆ, ನ್ಯಾಯ ಇವುಗಳನ್ನು ಪುರುಷ ಪಾತ್ರಗಳ ಮೂಲಕವೇ ಅಭಿವ್ಯಕ್ತಿಸಿ, ಗಂಡಸಿನ ಹಿರಿಮೆಯನ್ನು ಪುರುಷ ಪಾತ್ರಗಳ ಮೂಲಕವೇ ಅಭಿವ್ಯಕ್ತಿಸಿ, ಗಂಡಸಿನ ಹಿರಿಮೆಯನ್ನು ಎತ್ತಿ ಹಿಡಿಯಲಾಗಿದೆ. ಮನುಷ್ಯ ಸಹಜ ಗುಣಗಳಾದ ಧೈರ್ಯ, ಸಾಹಸ, ಶೌರ್ಯ, ಶಕ್ತಿ, ಸಾಮರ್ಥ್ಯ, ದಕ್ಷತೆ, ಬುದ್ಧಿವಂತಿಕೆ, ಔದಾರ್ಯ, ಜಾಣ್ಮೆ, ತ್ಯಾಗ, ಬಲಿದಾನ, ಹೋರಾಟ, ದೇಶಪ್ರೇಮ ಇವುಗಳೆಲ್ಲವೂ ಪುರುಷರಲ್ಲಿವೆ ಎನ್ನುವಂತಹ ಅಂಶಗಳನ್ನು ಪಠ್ಯಗಳ ಮೂಲಕ ಮಕ್ಕಳಿಗೆ ಸಾಮಾಜೀಕರಣಗೊಳಿಸಲಾಗಿದೆ. ಅದೇ ಹೆಣ್ಣಿನ ಈ ಮೇಲಿನ ಎಲ್ಲ ಗುಣಗಳನ್ನು ಹೊರತುಪಡಿಸಿ ಭಯ–ಭಕ್ತಿ, ದೈನ್ಯತೆ, ಅಧೀನತೆ, ಸೇವೆ, ಅಸಹಾಯಕತೆ, ಆರೈಕೆ, ಸಂರಕ್ಷಣೆ ಮುಂತಾದ ಮೌಲ್ಯಗಳನ್ನು ಅನ್ವಯಿಸುವ ಸಾಮಾಜೀಕರಣ ಪಠ್ಯಪುಸ್ತಕಗಳಲ್ಲಿದೆ.
- ಸಮಾಜದಲ್ಲಿ ರೂಢಿಯಲ್ಲಿರುವ ಲಿಂಗತ್ವ ತಾರತಮ್ಯವುಳ್ಳ ಪಾತ್ರ, ಜವಾಬ್ದಾರಿ, ಮೌಲ್ಯಗಳನ್ನು ಪಠ್ಯಪುಸ್ತಕಗಳಲ್ಲಿ ಪದೇ ಪದೇ ಚಿತ್ರ, ವ್ಯಾಖ್ಯೆಗಳ ಮೂಲಕ ಬಳಸಲಾಗಿದೆ. ಇವುಗಳನ್ನೇ ಸಹಜ ಸತ್ಯ; ಅದನ್ನು ಅನುಸರಿಸಬೇಕೆಂಬುದನ್ನು ತಿಳಿಹೇಳಲಾಗಿದೆ.

೬.೨. ಕನ್ನಡ ಭಾಷಾ ಪಠ್ಯಗಳು ಮತ್ತು (ಪರಿಸರ ಅಧ್ಯಯನ) ಸಮಾಜ ವಿಜ್ಞಾನ ಪಠ್ಯಗಳ ಒಟ್ಟು ಸಮೀಕ್ಷೆ

ಅ. ಕನ್ನಡ ಭಾಷಾ ಪಠ್ಯಗಳು

- ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ಕಂಡು ಬರುವ ಸಾಮಾಜೀಕರಣ ಪುರುಷ ಪರವಾಗಿ ಕಂಡು ಬರುತ್ತಿದೆ.
- ಪದಗಳ ರಚನೆ. ವಾಕ್ಯ ವಿನ್ಯಾಸ, ಗಾದೆ, ನುಡಿಕಟ್ಟು ಪದ್ಯ–ಗದ್ಯ ಮಿಶ್ರಿತವಾದ ಅಭ್ಯಾಸಗಳನ್ನು ನೀಡಲಾಗಿದೆ. ಇದರಲ್ಲಿ ಪುರುಷ ಪರವಾದ ಚಿಂತನೆಗಳ ಸಾಮಾಜೀಕರಣ ಪರಿಚಯ ಮಾಡಲಾಗಿದೆ. ಪರಿಸರ ಅಧ್ಯಯನ ಹಾಗೂ ಸಮಾಜ ವಿಜ್ಞಾನದಲ್ಲಿ ಕೊಟ್ಟಿರುವಂತಹ ಕಲ್ಪನೆ, ಚಿಂತನೆ, ಮೌಲ್ಯ, ಪಾತ್ರ, ಕೆಲಸ, ನುಡಿಗಟ್ಟು ಮತ್ತು ಪ್ರತೀಕಗಳನ್ನು ಕೊಡಲಾಗಿದೆ. ಉದಾ: ಅಜ್ಜಿ ಮತ್ತು ತಾಯಿ ಅಡುಗೆ ಮಾಡುವ ಚಿತ್ರ, ಹೆಣ್ಣುಮಕ್ಕಳು ಮನೆಯೊಳಗಿನ ಕೆಲಸ ಮಾಡುವ ಚಿತ್ರ, ಬಳೆ ಸರಗಳಿಂದ ಅಲಂಕಾರಗೊಂಡಿರುವವರೆಂದು ಚಿತ್ರೀಕರಿಸಿದ ಸಾಮಾಜೀಕರಣದ ಅಂಶಗಳು ಕಂಡು ಬರುತ್ತದೆ.
- ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ಗಂಡುಮಕ್ಕಳನ್ನು ವ್ಯಾಪಾರ ಮಾಡುವ, ಸಂಚಾರ ಮಾಡುವ, ರೈತ, ಅಂಚೆ ಕೆಲಸ, ವೈದ್ಯ ವೃತ್ತಿ, ಪೋಲೀಸ್ ವೃತ್ತಿ ಹಾಗೂ ಶೌರ್ಯ, ಸಾಹಸಗಳಿಗೆ ಪ್ರತೀಕವಾಗಿ ಗಂಡುಮಕ್ಕಳನ್ನು ತೋರಿಸಲಾಗಿದೆ. ಬಹುತೇಕ ಯೋಧ ಮತ್ತು ಸೈನಿಕರಾಗಿ ಪುರುಷರನ್ನು ಚಿತ್ರೀಕರಿಸಲಾಗಿದೆ. ಜೋಕಾಲಿ ಆಟದಲ್ಲಿ ಹೆಣ್ಣುಮಕ್ಕಳನ್ನು ತೋರಿಸಲಾಗಿದೆ.

- ಕನ್ನಡ ಭಾಷೆ ಪಠ್ಯಪುಸ್ತಕಗಳಲ್ಲಿ ಬಳಸಿರುವ ನುಡಿಗಟ್ಟು ಗಾದೆ, ಅಭ್ಯಾಸದಲ್ಲಿ ಗಂಡಿನ ಮೇಲರಿಮೆಯನ್ನು ಎತ್ತಿ ಹಿಡಿಯುತ್ತಾ, ಹೆಣ್ಣಿನ ಕೀಳರಿಮೆಯನ್ನು ಹೆಚ್ಚಿಸುತ್ತಾ ಹೋಗುವಂತಹ ಸಾಮಾಜೀಕರಣದ ಅಂಶಗಳು ಕಂಡು ಬರುತ್ತವೆ. ಉದಾ: ಅಪ್ಪನ ದುಡ್ಡು ಎಣಿಸಲಿಕ್ಕೆ ಆಗುವುದಿಲ್ಲ, ಅಮ್ಮನ ಸೀರೆ ಮಡಿಸೋಕೆ ಆಗುವುದಿಲ್ಲ, ಇಲ್ಲಿ ಅಪ್ಪನ ಆರ್ಥಿಕತೆ, ದುಡಿಮೆ, ಅಮ್ಮ ಸ್ವಚ್ಛತೆಯ ಕೆಲಸ, ಮನೆಯೊಳಗಿನ ಗೃಹ ಕೆಲಸ ಎನ್ನುವ ಅಂಶಗಳು ಕಂಡು ಬರುತ್ತವೆ.

- ಕನ್ನಡ ಪಠ್ಯಪುಸ್ತಕದಲ್ಲಿ ಹೆಣ್ಣು-ಗಂಡಿನ ಅಸಮಾನತೆ, ಲಿಂಗ ತಾರತಮ್ಯ ಅಂಶಗಳನ್ನು ಗಟ್ಟಿಗೊಳಿಸುವ ಕೆಲಸ ನಡೆದಿರುವುದು ಕಂಡು ಬರುತ್ತದೆ. ಹೆಣ್ಣು ಮತ್ತು ಗಂಡಿನ ಹಿರಿತನ ಸಾಧನೆ, ಅನುಭವ ಮತ್ತು ಅನುಭಾವವನ್ನು ಎತ್ತಿ ಹಿಡಿಯುವ ನುಡಿಗಟ್ಟು, ಗಾದೆಗಳಲ್ಲಿ ಲಿಂಗತ್ವ ತಟಸ್ಥ ಭಾಷೆಯ ಬಳಕೆಯಾಗದಿರುವುದು ಕಂಡು ಬರುತ್ತಿದೆ.

- ಮಾತೃಭಾಷಾ ಕನ್ನಡ ಪಠ್ಯಪುಸ್ತಕದಲ್ಲಿ ಅಸಮಾನತೆಯನ್ನು ಸಾಮಾಜೀಕರಣಗೊಳಿಸಿದೆ. ವಿನೂತನ ಆಯಮಗಳಿಗೆ ತೆರೆದುಕೊಳ್ಳುವ, ಕೆಟ್ಟದ್ದನ್ನು ಖಂಡಿಸುವ, ದಿಟ್ಟತನವನ್ನು ಗಟ್ಟಿಗೊಳಿಸುವ ಸಾಮರ್ಥ್ಯ ಭಾಷಾ ಪಠ್ಯಪುಸ್ತಕದಿಂದ ಸಾಮಾಜೀಕರಣಗೊಳಿಸುವುದು ಸಾಧ್ಯವಿತ್ತು. ಆದರೆ ಇದು ಆಗದೆ ಇರುವುದು ಕಂಡು ಬರುತ್ತದೆ.

ಪರಿಸರ ಅಧ್ಯಯನ ಮತ್ತು ಸಮಾಜ ವಿಜ್ಞಾನ ಪಠ್ಯಪುಸ್ತಕಗಳು

- ಅಧ್ಯಯನದಲ್ಲಿ ಕುಟುಂಬದ ಒಳಗಡೆ ಹೆಣ್ಣು ಮಕ್ಕಳಿಗೆ ಸ್ವಚ್ಛತೆ, ಆರೈಕೆ, ಅಡುಗೆ, ಮಕ್ಕಳ ಪಾಲನೆ ಪೋಷಣೆ, ರಕ್ಷಣೆ ಕೆಲಸಗಳನ್ನು ಮಾಡುವವರೆಂದು ಹಾಗೂ ವೃತ್ತಿಯಲ್ಲಿ ನಾಟಿ ಮಾಡುವ, ಬುಟ್ಟಿ ಹೆಣೆಯುವ, ಬಟ್ಟೆ ನೇಯ್ಗೆ, ಬಟ್ಟೆ ಹೊಲಿಯುವ ಮತ್ತು ಸ್ಥಿರ ದೂರವಾಣಿ ಕಾರ್ಯ ನಿರ್ವಹಿಸುವ ಕೆಲಸಗಾರಳನ್ನಾಗಿ ತೋರಿಸಲಾಗಿದೆ.

- ಹೆಣ್ಣುಮಕ್ಕಳಿಗೆ ಹೆಚ್ಚು ಸಂತೋಷ ಕೊಡುವ ವಿಷಯಗಳಾದ ಉಡುಪು, ವೈಯ್ಯಾರ, ಅಂದಚೆಂದ, ಶೃಂಗಾರ ಇತ್ಯಾದಿಗಳ ವ್ಯಾಪ್ತಿಗೆ ಸೇರಿಸಿರುವುದು ಕಂಡು ಬರುತ್ತದೆ.

- ಸಮಾಜ ವಿಜ್ಞಾನದ ಬಹುತೇಕ ಪಠ್ಯಗಳಲ್ಲಿನ ಚಾರಿತ್ರಿಕ, ರಾಜಕೀಯ, ಆರ್ಥಿಕ ಸಂಗತಿಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ವಿಷಯಗಳನ್ನು ನಗಣ್ಯ ರೂಪದಲ್ಲಿ ಇರಿಸಲಾಗಿದೆ. ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಹೆಚ್ಚು ಪುರುಷ ಪ್ರಧಾನತೆಯ ಅಂಶಗಳನ್ನು ಸಾರುವ ಪಾಠಗಳು ಇರುವುದು ಕಂಡು ಬರುತ್ತವೆ. ಉದಾ:- ಸಾಹಿತ್ಯ, ರಾಜಕೀಯ, ಸಾಮಾಜಿಕ ಸುಧಾರಣೆ, ರಾಜರ ಚರಿತ್ರೆ, ವಿಜ್ಞಾನ ಇನ್ನೂ ಮುಂತಾದ ವಿಷಯಗಳಲ್ಲಿ ಹೆಚ್ಚು ಪುರುಷರ ಸಾಧನೆಯ ವಿವರಗಳನ್ನು ಪರಿಚಯಿಸಿರುವುದು ಕಂಡು ಬರುತ್ತದೆ.

- ಪರಿಸರ ಮತ್ತು ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಗಂಡುಮಕ್ಕಳನ್ನು ವಂಶೋದ್ಧಾರಕರಾಗಿ, ಕುಟುಂಬದ ಯಜಮಾನರಾಗಿ, ಆಸ್ತಿಯ ಒಡೆಯರಾಗಿ, ಸಂರಕ್ಷಕರಾಗಿ, ವಿವಿಧ ವೃತ್ತಿಗಳಲ್ಲಿ

ಪುರುಷ ಕೇಂದ್ರಿತವಾಗಿ, ಜ್ಞಾನ ಭಂಡಾರವಾಗಿ, ಶೌರ್ಯ, ಸಾಹಸಗಳೇ ಪ್ರತ್ಯೇಕವಾಗಿ ಮತ್ತು ಮಾನವರ ವಿಕಾಸ ಹಾಗೂ ಅನ್ವೇಷಣೆಯಲ್ಲಿ ಪುರುಷರೇ ಮೊದಲು ಎನ್ನುವಂತೆ ಸಾಮಾಜೀಕರಣಗೊಳಿಸುವಂತಹ ಸಂಗತಿಗಳು ಇರುವುದು ಕಂಡು ಬರುತ್ತದೆ.

- ಕಲೆ, ಸಾಹಿತ್ಯ, ಚರಿತ್ರೆಯಲ್ಲಿ ಅಧಿಪತಿಗಳಾಗಿ, ಸಾಮಾಜಿಕ ಸುಧಾರಕರಾಗಿ, ಉನ್ನತ ವೃತ್ತಿಪರರನ್ನಾಗಿ, ವಾರಸುದಾರರನ್ನಾಗಿ, ಅಧಿಕಾರ ಹಿಡಿಯುವವರೆಂದು ಚಿತ್ರೀಕರಿಸಿದ ಸಾಮಾಜೀಕರಣ ಕಂಡು ಬರುತ್ತದೆ.
- ಸಮಾಜ ವಿಜ್ಞಾನದ ಬಹುತೇಕ ಪಠ್ಯಗಳು ಪುರುಷಮಯವೆಂದು ಭಾಸವಾಗುತ್ತದೆ. ಹೆಚ್ಚಾಗಿ ಪುರುಷ ಪರವಾದ ಸಾಮಾಜೀಕರಣ ಅಂಶಗಳು ಕಂಡು ಬರುತ್ತದೆ.

ಸಲಹೆಗಳು

- ಪಠ್ಯಪುಸ್ತಕಗಳಲ್ಲಿ ಲಿಂಗತ್ವ ಅಸಮಾನತೆಯನ್ನು ವಿಶ್ಲೇಷಿಸಿರುವುದು ಚಿತ್ರಗಳಲ್ಲಿ ಕಂಡುಬರುತ್ತದೆ. ಜೊತೆಗೆ ಭಾಷಾ ಪುಸ್ತಕಗಳಲ್ಲಿ ಹೆಣ್ಣುಮಕ್ಕಳು ಪಾತ್ರೆ ತೊಳೆಯುವಂಥ ಚಿತ್ರಗಳು, ಮನೆಕೆಲಸ ಕಾರ್ಯಗಳಿಗೆ ಸೀಮಿತಗೊಳಿಸಲಾಗಿದೆ. ಹೀಗಾಗಿ ಹೆಣ್ಣು-ಗಂಡು ಮಕ್ಕಳಿಗೆ ಸೃಷ್ಟಿಗೊಳ್ಳುವ ಸಾಮಾಜೀಕರಣ ಸಮಸ್ಯೆಗೆ ಪರಿಹಾರವೆಂದರೆ ಪಠ್ಯಪುಸ್ತಕಗಳಲ್ಲಿ ಭಾಷೆ, ಚಿತ್ರಗಳ ಮೂಲಕ ಮಕ್ಕಳಿಗೆ ಲಿಂಗ ಸಮಾನತೆಯ ಅಂಶಗಳನ್ನು ಸೇರಿಸಬೇಕು. ಪ್ರಾಥಮಿಕ ಹಾಗೂ ಮಾಧ್ಯಮಿಕ ತರಗತಿಗಳ ಪಠ್ಯಪುಸ್ತಗಳಲ್ಲಿ ಲಿಂಗ ಸಮಾನತೆಯ ಮೌಲ್ಯಗಳನ್ನು ಅನುಸರಿಸುವ ಅಂಶಗಳನ್ನು ಸೇರಿಸಬೇಕು. ಈ ಮೂಲಕ ಸಂವಿಧಾನದ ಆಶಯದಂತೆ ಪಠ್ಯಗಳ ಮೂಲಕ ಲಿಂಗಬೇಧ ನೀತಿಯನ್ನು ಹೋಗಲಾಡಿಸಬಹುದು.
- ಪ್ರಾಥಮಿಕ ಹಾಗೂ ಮಾಧ್ಯಮಿಕ ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಲಿಂಗ ಸಮಾನತೆಯನ್ನು ಹೊಂದಿರುವ ಸಮಿತಿಯನ್ನು ರಚಿಸುವ ಮೂಲಕ ಪಠ್ಯಗಳಲ್ಲಿ ಲಿಂಗ ಸಮಾನ ಆಶಯಗಳು ಇರುವಂತೆ ನೋಡಿಕೊಳ್ಳಬೇಕು.
- ಪಠ್ಯಪುಸ್ತಕಗಳು ರಾಷ್ಟ್ರೀಯ ವಿಷಯಗಳಿಂದ ಹಿಡಿದು ಸ್ಥಳೀಯ ಗ್ರಾಮ ಮಟ್ಟದವರೆಗಿನ ಅನೇಕ ವೈವಿಧ್ಯಮಯ ವಿಷಯಗಳು, ಸಂಸ್ಕೃತಿ, ಆಚರಣೆಗಳನ್ನು ಒಳಗೊಂಡಿರುತ್ತವೆ. ಹಾಗೆಯೇ ಬಹುತ್ವ ತತ್ವವನ್ನು ಪ್ರತಿನಿಧಿಸುತ್ತವೆ. ಈ ರೀತಿಯಲ್ಲಿ ರಚನೆಗೊಂಡ ಪಠ್ಯಗಳು ಬಹುರೂಪಿಯಾಗಿರುತ್ತವೆ. ಇವುಗಳಲ್ಲಿ ಸಮಾನ ಶಿಕ್ಷಣದ ಆಶಯ ಜೊತೆಗೆ ಮಕ್ಕಳಲ್ಲಿ ಕೀಳರಿಮೆಯನ್ನು ತೊಡೆದುಹಾಕುವಂಥ ಅಂಶಗಳನ್ನು ಸೇರಿಸಿ ಪಠ್ಯಗಳನ್ನು ರಚಿಸಬೇಕು.
- ಪಠ್ಯಪುಸ್ತಕಗಳಲ್ಲಿ ಲಿಂಗ ಪೂರ್ವಗ್ರಹದಿಂದ ಮುಕ್ತವಾಗುವಂತಹ ಅಂಶಗಳನ್ನು ಸೇರಿಸಬೇಕು ಈಗಿನ ಪಠ್ಯಗಳಲ್ಲಿ ಇರುವ ಭಾಷೆ, ಚಿತ್ರಗಳು ಹಾಗೂ ಕುಟುಂಬದಲ್ಲಿನ ಸನ್ನಿವೇಶಗಳನ್ನು ಬದಲಾಯಿಸಬೇಕು. ಈಗಾಗಲೇ ಇರುವ ಲಿಂಗ ಪೂರ್ವಗ್ರಹದ ಅಂಶಗಳಾದ ಮೊದಲು

ಗಂಡುಮಕ್ಕಳನ್ನು ಮೊದಲಿಗೆ ಪರಿಚಯಿಸುವುದು, ನಂತರ ಹೆಣ್ಣುಮಕ್ಕಳನ್ನು ಪರಿಚಯಿಸುವುದು, ನಂತರ ಹೆಣ್ಣುಮಕ್ಕಳೆಂದರೆ ಹುಟ್ಟಿದ ಮನೆಯಿಂದ ಹೊರಗಡೆ ಹೋಗುವುದು, ಪ್ರತ್ಯೇಕ ಆಟವಾಡುವವರು, ಈ ರೀತಿಯಲ್ಲಿರುವ ಅನೇಕ ಲಿಂಗ ಪೂರ್ವಗ್ರಹಗಳನ್ನು ತೆಗೆದು ಹಾಕಬೇಕು.

- ಜ್ಞಾನ, ಕೌಶಲ್ಯ, ಹಾಗೂ ಮೌಲ್ಯ ಇವು ಶಿಕ್ಷಣದ ಮೂರು ಬಹು ಮುಖ್ಯ ಆಶಯಗಳು ಇವುಗಳಲ್ಲಿ ಲಿಂಗ ಸಮಾನತೆಯನ್ನು ತುಂಬಬೇಕು.
- ಶತಶತಮಾನಗಳಿಂದ ಮನುಷ್ಯ ನಿರ್ಮಿತ ಲಿಂಗ ತಾರತಮ್ಯವನ್ನು ಕೌಟುಂಬಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಸಂಸ್ಥೆಗಳು ವ್ಯವಸ್ಥಿತವಾಗಿ ಬೆಳೆಸುತ್ತಾ ಬಂದಿದ್ದು, ಅವುಗಳನ್ನು ಪ್ರಕೃತಿ ಸಹಜ ಎಂಬಂತೆ ನಂಬಿಸಲಾಗಿದೆ. ಇದರ ವಾಸ್ತವತೆಯನ್ನು ತಿಳಿಸಿಕೊಡಬೇಕು.
- ದೇಶದ ಸಂವಿಧಾನದಲ್ಲಿ ಲಿಂಗಸಮಾನತೆಯನ್ನು ಸಂವಿಧಾನಬದ್ಧಗೊಳಿಸಲಾಗಿದೆ. ಜೊತೆಗೆ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ತತ್ವದ ಮೂಲಕ ಎಲ್ಲ ಬಗೆಯ ತಾರತಮ್ಯವನ್ನು ನಿರ್ಮೂಲನೆ ಮಾಡುವ ಉದ್ದೇಶವನ್ನು ಹೊಂದಲಾಗಿದೆ. ಈ ಹಿನ್ನೆಲೆಯಲ್ಲಿ ಈಗ ಚಾಲ್ತಿಯಲ್ಲಿರುವ ಪಠ್ಯಪುಸ್ತಕಗಳಲ್ಲಿನ ತಾರತಮ್ಯ ಅಂಶಗಳನ್ನು ತೆಗೆಯಬೇಕು
- ನಿಜವಾದ ಅರ್ಥದಲ್ಲಿ ಶಿಕ್ಷಣದ ಗುರಿ ವಿಮೋಚನೆ, ಲಿಂಗತ್ವ ನ್ಯಾಯ ಮತ್ತು ಸಮಾನತೆಯ ಮಕ್ಕಳ ಸಾಮಾಜೀಕರಣ ಪ್ರಕ್ರಿಯೆಯ ಭಾಗವಾಗಲು 'ಲಿಂಗತ್ವ ಅಧ್ಯಯನ'(ಜೆಂಡರ್ ಸ್ಟಡೀಸ್)ವನ್ನು ಒಂದು ಪಠ್ಯವಾಗಿ ಸೇರ್ಪಡೆಗೊಳಿಸಬೇಕು.
- ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳಲ್ಲಿ ಮತ್ತು ಪರಿಸರ ಅಧ್ಯಯನ, ಸಮಾಜ ವಿಜ್ಞಾನ ಅಧ್ಯಯನಗಳಲ್ಲಿ ಲಿಂಗತ್ವ ತಟಸ್ಥ (ಜೆಂಡರ್ ನ್ಯೂಟ್ರಲ್) ಮತ್ತು ಸಮಾನತೆಯನ್ನು ವಿವರಿಸುವ ಪದಕೋಶಗಳಿಲ್ಲ. ಇದನ್ನು ಪರಿಹರಿಸುವ ರೀತಿಯಲ್ಲಿ ಸಮಾನ ಲಿಂಗತ್ವ ದೃಷ್ಟಿಕೋನದ ಭಾಷೆಗಳನ್ನು ಸೇರಿಸುವ ಮೂಲಕ ಮಕ್ಕಳಲ್ಲಿ ಲಿಂಗ ಸಮಾನತೆಯನ್ನು ತರಲು ಸಾಧ್ಯ.
- ಲಿಂಗತ್ವ ಸಮಾನತೆಯ ವಿಷಯವುಳ್ಳ ಪಾಠಗಳನ್ನು ಸೇರಿಸಬೇಕು. ಪ್ರತಿ ೫ ವರ್ಷಕ್ಕೊಮ್ಮೆ ಲಿಂಗತ್ವ ತಾರತಮ್ಯ ಒಳಗೊಂಡಿರುವ ಎಲ್ಲ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಪಠ್ಯಗಳಿಂದ ತೆಗೆದುಹಾಕಬೇಕು ಅಂದಾಗ ಮಾತ್ರ ಹೆಣ್ಣು-ಗಂಡುಮಕ್ಕಳಲ್ಲಿ ಸೃಷ್ಟಿಗೊಳ್ಳುವ 'ಸಾಮಾಜೀಕರಣ ಸಮಸ್ಯೆಯನ್ನು ತೊಡೆದು ಹಾಕಬಹುದು.
- ಪಠ್ಯಗಳಲ್ಲಿ ಲಿಂಗ ತಾರತಮ್ಯತೆಯನ್ನು ಬಿಂಬಿಸುವ ಪಾತ್ರೆ ತೊಳೆಯುವ ಕೆಲಸ, ಹೊಣೆಗಾರಿಕೆ, ಪರಂಪರೆ, ಆಚರಣೆ, ಆಟ, ಆಡಳಿತ, ಸಾಮಾಜಿಕ ಮೌಲ್ಯ ಮುಂತಾದವುಗಳನ್ನು ಪಠ್ಯದಿಂದ ಹಾಗೂ ಬೋಧನಾ ಕ್ರಮದಿಂದ ಕೈ ಬಿಡಬೇಕು.

- ಪಠ್ಯಗಳಲ್ಲಿನ ಲಿಂಗತ್ವ ಅಸಮಾನತೆ ಮತ್ತು ಹೆಣ್ಣುಮಕ್ಕಳ ಪರಾವಲಂಬಿತನವನ್ನು ಬಿಂಬಿಸುವ ಎಲ್ಲ ಚಿತ್ರ, ಕಥೆ, ಸಂಭಾಷಣೆ, ನುಡಿಗಟ್ಟು ಮತ್ತು ಸಂದೇಶಗಳ ಸಂಪೂರ್ಣವಾಗಿ ತೆಗೆದುಹಾಕಬೇಕು ಅಂದಾಗ ಮಾತ್ರ ಹೆಣ್ಣು-ಗಂಡುಮಕ್ಕಳ ಸಾಮಾಜೀಕರಣ ಸಮಸ್ಯೆ ನಿವಾರಿಸಬಹುದು.
- ಸಮಾಜಕ್ಕೆ ಹೆಣ್ಣುಮಕ್ಕಳು ಮತ್ತು ಮಹಿಳೆಯರು ನೀಡಿರುವ ಕೊಡುಗೆ, ಸಾಧನೆ, ಅವರು ನಿರ್ವಹಿಸುತ್ತಿರುವ ಸಾಮಾಜಿಕ ಜವಾಬ್ದಾರಿ, ಎಲ್ಲ ವಲಯಗಳಲ್ಲಿ ನೀಡಿರುವ ಕುರಿತು ಮತ್ತು ಮುಂದಾಳತ್ವದ ಪರಿಚಯವನ್ನು ಮಕ್ಕಳಿಗೆ ಹೇಳುವ ಕಥೆ, ನುಡಿಗಟ್ಟು, ಹಾಡು ಮತ್ತು ಚಿತ್ರಗಳನ್ನು ಪಠ್ಯದಲ್ಲಿ ಅಳವಡಿಸಬೇಕು.
- ಪಠ್ಯಪುಸ್ತಕ ರಚನಾ ಸಭೆಯಲ್ಲಿ, ಪಠ್ಯಕ್ರಮದಲ್ಲಿ, ಬೋಧನ ಕ್ರಮದಲ್ಲಿ ಲಿಂಗತ್ವ ಸಮಾನತೆಯನ್ನು ಸಾಧಿಸಬೇಕು. ಪಠ್ಯಗಳ ಆಯ್ಕೆ ನೆಲೆಯ ಸಾಮಾಜೀಕರಣ ಲಿಂಗ ಸಮಾನತೆಯಿಂದ ಕೂಡಿರಬೇಕು.
- ಮಹಿಳಾ ಪರವಾಗಿರುವ ಸ್ತ್ರೀವಾದಿ ಚಿಂತಕರನ್ನು ಪಠ್ಯರಚನಾ ಸಮಿತಿಯಲ್ಲಿ ಕಡ್ಡಾಯವಾಗಿ ಪ್ರತಿನಿಧೀಕರಿಸಬೇಕು.

ಒಟ್ಟಾರೆಯಾಗಿ 'ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆ' ಪರಿಹಾರ ಕಂಡುಕೊಳ್ಳಲು ಮುಖ್ಯವಾಗಿ ಪಠ್ಯ ರಚನಾ ತಂಡದಲ್ಲಿ ಹಾಗೂ ಪಠ್ಯಗಳಲ್ಲಿ ಲಿಂಗ ಸಮಾನತೆ ಇರಬೇಕು. ಪ್ರಬಲವಾಗಿ ಬೇರು ಬಿಟ್ಟಿರುವ ಪುರುಷ ಪ್ರಧಾನತೆ ವಿರುದ್ಧ ಮತ್ತು ಮಹಿಳೆಯರ ಕೊಡುಗೆಗಳನ್ನು ಪರಿಚಯಿಸುವ ಕೆಲಸವಾಗಬೇಕು. ಹೀಗಾದಾಗ ಮಾತ್ರ ಪಠ್ಯಪುಸ್ತಕಗಳ ಮೂಲಕ ಸೃಷ್ಟಿಗೊಳ್ಳುವ ಲಿಂಗ ಅಸಮಾನತೆ ಸಾಮಾಜೀಕರಣಕ್ಕೆ ಪರಿಹಾರ ಕಂಡುಕೊಳ್ಳಲು ಸಾಧ್ಯ.

೬.೩. ಮುಂದಿನ ಅಧ್ಯಯನದ ಸಲಹೆ-ಸಾಧ್ಯತೆಗಳು

ಇಂದು ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣ ವಿವಿಧ ಭಾಷಾ ಮಾಧ್ಯಮಗಳಲ್ಲಿ ನಡೆಯುತ್ತಿವೆ. ಉದಾ: ಆಂಗ್ಲ, ತೆಲುಗು, ಉರ್ದು ಮಾಧ್ಯಮಗಳಲ್ಲದೆ, ಕೇಂದ್ರ ಸರಕಾರದ ಎನ್.ಸಿ.ಆರ್.ಟಿ.ಇ. ನಿಗದಿಪಡಿಸಿದ ಪಠ್ಯಪುಸ್ತಕ ಹೀಗೆ ವಿವಿಧ ಮಾದರಿ ಪಠ್ಯಪುಸ್ತಕಗಳಲ್ಲಿ 'ಹೆಣ್ಣು-ಗಂಡುಮಕ್ಕಳ ಸಾಮಾಜೀಕರಣದ ಸಮಸ್ಯೆಗಳು' ಕುರಿತು ಅಧ್ಯಯನ ಮಾಡಬಹುದಾಗಿದೆ.

- ಮನುಷ್ಯ ಜಾಗತೀಕರಣವಾಗಿ ಎಷ್ಟೇ ಮುಂದುವರೆದಂತೆಯೇ ತನ್ನಲ್ಲಿನ ಲಿಂಗ ಭೇದ ನೀತಿಗಳನ್ನು ಮುಂದುವರೆಸುತ್ತಾ ಬರುತ್ತಿದ್ದಾನೆ. ಹೀಗಾಗಿ ಇಂದಿಗೂ ಅನೇಕ ಸಾಹಿತ್ಯ ಕ್ಷೇತ್ರದ ಅನೇಕ ಪಠ್ಯಪುಸ್ತಕಗಳಲ್ಲಿ ಹೆಣ್ಣು-ಗಂಡಿನ ಸಾಮಾಜೀಕರಣಗೊಳಿಸುವ ಅಂಶಗಳ ಬಗ್ಗೆ ಅಧ್ಯಯನ ಮಾಡಬಹುದಾಗಿದೆ.

- ಸಾಹಿತ್ಯದ ಪಠ್ಯಪುಸ್ತಕಗಳು ಸಾಮಾಜೀಕರಣಗೊಳಿಸುತ್ತಿರುವ ಭಾಷೆ ಕುರಿತಂತೆ ಅಧ್ಯಯನ ಮಾಡಬಹುದಾಗಿದೆ.
- ಹೆಣ್ಣು-ಗಂಡು ಮಕ್ಕಳ ಕುರಿತಂತೆ ಸಾಮಾಜೀಕರಣ ಸೃಷ್ಟಿ ಮಾಡುವ ಸಮಸ್ಯೆಗಳಲ್ಲಿ ಒಂದಾದ ಶಿಕ್ಷಣದ ಕುರಿತಾಗಿ ಅಧ್ಯಯನ ಮಾಡಬಹುದಾಗಿದೆ. ಪ್ರಾಥಮಿಕ, ಮಾಧ್ಯಮಿಕ ಶಾಲೆಗೆ ಸೇರದಿರುವ ವರ್ಗ ಮತ್ತು ಪ್ರೌಢ ಹಂತದಲ್ಲಿ ಶಾಲೆಗೆ ಸೇರಿ ನಂತರ ಬಿಡುವ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣ ಸಮಸ್ಯೆಗಳ ಕುರಿತಾಗಿ ಅಧ್ಯಯನ ಮಾಡಬಹುದಾಗಿದೆ.

♦ ♦ ♦

ಅನುಬಂಧ

೧. ಪ್ರಧಾನ ಆಕರ ಗ್ರಂಥಗಳು
೨. ಪರಾಮರ್ಶನ ಗ್ರಂಥಗಳು
೩. ವಕ್ತೃಗಳ ಪಟ್ಟಿ
೪. ಛಾಯಾಚಿತ್ರಗಳು

೧. ಪ್ರಧಾನ ಆಕಾರ ಗ್ರಂಥಗಳು

ಅ. ಕನ್ನಡ ಭಾಷಾ ಪಠ್ಯಪುಸ್ತಕಗಳು

೧. ನಲಿ–ಕಲಿ ಕನ್ನಡ ಅಭ್ಯಾಸ ಪುಸ್ತಕ(ಪರಿಷ್ಕೃತ) ಒಂದನೇ ತರಗತಿ, ೨೦೧೯.

೨. ನಲಿ–ಕಲಿ ಕನ್ನಡ ಅಭ್ಯಾಸ ಪುಸ್ತಕ(ಪರಿಷ್ಕೃತ) ಎರಡನೇ ತರಗತಿ, ೨೦೧೯.

೩. ನಲಿ–ಕಲಿ ಕನ್ನಡ ಅಭ್ಯಾಸ ಪುಸ್ತಕ(ಪರಿಷ್ಕೃತ) ಮೂರನೇ ತರಗತಿ, ೨೦೧೯.

೪. ಸವಿ–ಕನ್ನಡ ಅಭ್ಯಾಸ ಸಹಿತ ಪಠ್ಯಪುಸ್ತಕ(ಪರಿಷ್ಕೃತ) ನಾಲ್ಕನೇ ತರಗತಿ, ೨೦೧೯.

೫. ಸಿರಿ–ಕನ್ನಡ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ(ಪರಿಷ್ಕೃತ) ಐದನೇ ತರಗತಿ, ೨೦೧೮.

೬. ಸಿರಿ–ಕನ್ನಡ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ(ಪರಿಷ್ಕೃತ) ಆರನೇ ತರಗತಿ, ೨೦೧೭.

೭. ಸಿರಿ–ಕನ್ನಡ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ(ಪರಿಷ್ಕೃತ) ಏಳನೇ ತರಗತಿ, ೨೦೧೮.

೮. ಸಿರಿ–ಕನ್ನಡ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ(ಪರಿಷ್ಕೃತ) ಎಂಟನೇ ತರಗತಿ, ೨೦೧೮.

ಆ. ಪರಿಸರ ಅಧ್ಯಯನ ಹಾಗೂ ಸಮಾಜ ವಿಜ್ಞಾನ ಪಠ್ಯಪುಸ್ತಕಗಳು

೧. 'ನಲಿ–ಕಲಿ; ಪರಿಸರ ಅಧ್ಯಯನ ಅಭ್ಯಾಸ ಪುಸ್ತಕ', (ಪರಿಷ್ಕೃತ) ಒಂದನೇ ತರಗತಿ ಪಠ್ಯಪುಸ್ತಕ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಸಂಕರಿ ೩ನೇ ಹಂತ, ಬೆಂಗಳೂರು, ೨೦೧೯.

೨. 'ನಲಿ–ಕಲಿ; ಪರಿಸರ ಅಧ್ಯಯನ ಅಭ್ಯಾಸ ಪುಸ್ತಕ', (ಪರಿಷ್ಕೃತ) ಎರಡನೇ ತರಗತಿ ಪಠ್ಯಪುಸ್ತಕ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಸಂಕರಿ ೩ನೇ ಹಂತ, ಬೆಂಗಳೂರು, ೨೦೧೮.

೩. 'ನಲಿ–ಕಲಿ; ಪರಿಸರ ಅಧ್ಯಯನ ಅಭ್ಯಾಸ ಪುಸ್ತಕ' (ಪರಿಷ್ಕೃತ) ಮೂರನೇ ತರಗತಿ ಪಠ್ಯಪುಸ್ತಕ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಸಂಕರಿ ೩ನೇ ಹಂತ, ಬೆಂಗಳೂರು, ೨೦೧೮.

೪. 'ನಲಿ-ಕಲಿ; ಪರಿಸರ ಅಧ್ಯಯನ ಅಭ್ಯಾಸ ಪುಸ್ತಕ' (ಪರಿಷ್ಕೃತ) ನಾಲ್ಕನೇ ತರಗತಿ ಪಠ್ಯಪುಸ್ತಕ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಸಂಕರಿ ೩ನೇ ಹಂತ, ಬೆಂಗಳೂರು, ೨೦೧೮.

೫. 'ಪರಿಸರ ಅಧ್ಯಯನ', ಅಭ್ಯಾಸ ಸಹಿತ ಪಠ್ಯಪುಸ್ತಕ, ಐದನೇ ತರಗತಿ ಪಠ್ಯ ಪುಸ್ತಕ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಸಂಕರಿ ೩ನೇ ಹಂತ, ಬೆಂಗಳೂರು, ೨೦೧೯.

೬. 'ಸಮಾಜ ವಿಜ್ಞಾನ', ಪಠ್ಯಪುಸ್ತಕ (ಪರಿಷ್ಕೃತ), ಆರನೇ ತರಗತಿ ಪಠ್ಯ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ೧೦೦ ಅಡಿ ವರ್ತುಲ ರಸ್ತೆ, ಬನಸಂಕರಿ ೩ನೇ ಹಂತ, ಬೆಂಗಳೂರು, ೨೦೧೯.

೭. 'ಸಮಾಜ ವಿಜ್ಞಾನ', ಪಠ್ಯಪುಸ್ತಕ (ಪರಿಷ್ಕೃತ), ಏಳನೇ ತರಗತಿ ಪಠ್ಯ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಸಂಕರಿ ೩ನೇ ಹಂತ, ಬೆಂಗಳೂರು, ೨೦೧೮.

೮. 'ಸಮಾಜ ವಿಜ್ಞಾನ', ಪಠ್ಯಪುಸ್ತಕ (ಪರಿಷ್ಕೃತ), ಎಂಟನೇ ತರಗತಿ ಪಠ್ಯ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ೧೦೦ ಅಡಿ ವರ್ತುಲ ರಸ್ತೆ, ಬನಸಂಕರಿ ೩ನೇ ಹಂತ, ಬೆಂಗಳೂರು, ೨೦೧೮.

♦ ♦ ♦

೨. ಪರಾಮರ್ಶನ ಗ್ರಂಥಗಳು

೧. ಅನುಪಮಾ ಎಚ್.ಎಸ್., ೨೦೧೩, **ಹೆಣ್ಣು: ಸಂಕರ ಕಾಲದ ಆತ್ಮಪ್ರಜ್ಞೆ,** ಲಡಾಯಿ ಪ್ರಕಾಶನ, ಗದಗ.

೨. ಆರ್‍ವಿಯಸ್ ಸುಂದರಂ, ಡಾ. ಎನ್.ಎಸ್. ತಾರಾನಾಥ(ಸಂ), ೨೦೦೬, **ಸಂಶೋಧನ ಪಥ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩. ಆಶಾದೇವಿ ಎಂ.ಎಸ್., ೨೦೧೧, **ನಡುವೆ ಸುಳಿವ ಆತ್ಮ : ಸ್ತ್ರೀ ಸಂಕಥನದ ಚಹರೆಗಳು,** ಇಳಾ ಮುದ್ರಣಾಲಯ, ಬೆಂಗಳೂರು.

೪. ಆಶಾದೇವಿ ಎಂ.ಎಸ್., ೨೦೧೬, **ನಾರಿಕೇಳಾ,** ಪ್ರಜಾವಾಣಿ ಪ್ರಕಾಶನ, ಬೆಂಗಳೂರು.

೫. ಅಶ್ವಿನಿ ಧೋಂಗಡೆ, ೨೦೦೫, **ಸ್ತ್ರೀವಾದಿ ವಿಮರ್ಶೆ ಸ್ವರೂಪ ಮತ್ತು ಪರಿಕಲ್ಪನೆಗಳು,** ಅನು: ವಿಠಲರಾವ್ ಗಾಯಕ್ವಾಡ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೬. ಆಚಾರ್ ವನಮಾಲಾ, ೧೯೬೮, **ಸ್ತ್ರೀ ಮತ್ತು ಶಿಕ್ಷಣ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭. ಇಂದಿರಾ ಆರ್., ೧೯೯೫, **ಸ್ತ್ರೀವಾದಿ ದಿಕ್ಸೂಚಿ,** ಸಮತಾ ಅಧ್ಯಯನ ಕೇಂದ್ರ, ಮೈಸೂರು.

೮. ಇಂದಿರಾ ಜೈಪ್ರಕಾಶ್, ೨೦೦೯, **ಸ್ತ್ರೀವಾದಿ ಮನೋವಿಜ್ಞಾನ,** ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೯. ಇಂದಿರಾ ಆರ್., ೨೦೦೧, **ಸಾಮಾಜಿಕ ಸಂಶೋಧನಾ ವಿಧಾನಗಳು,** ವಿದ್ಯಾಸಾಗರ ಮುದ್ರಣ ಮತ್ತು ಪ್ರಕಾಶನಾಲಯ, ಮೈಸೂರು.

೧೦. ಇಂದಿರಾ ಆರ್., ೨೦೦೨, **ಮಹಿಳೆ ಸಮಾಜ ಮತ್ತು ಸಂಸ್ಕೃತಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೧೧. ಉಷಾ ಎಂ., ೨೦೧೭, **ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೧೨. ಕಲಾವತಿ ಬಿ.ಜಿ., ೨೦೧೦, **ಮಾಧ್ಯಮ ಮತ್ತು ಮಹಿಳೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೧೩. ಕವಿತಾ ರೈ., ೨೦೧೫, **ಮಹಿಳೆ ವಸಾಹತೋತ್ತರ ಸಂದರ್ಭ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೪. ಕವಿತಾ ರೈ, ೨೦೦೯, **ಮಹಿಳೆ ಅಸ್ತಿತ್ವದ ಸಂಕಥನ,** ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

೧೫. ಕೇಶವಶರ್ಮ ಕೆ., ೧೯೯೨, **ಸ್ತ್ರೀವಾದಿ ವಿಮರ್ಶೆ,** ಅನ್ವೇಷಣೆ ಪ್ರಕಾಶನ, ಬೆಂಗಳೂರು.

೧೬. ಗಂಗಾಧರಮೂರ್ತಿ ಬಿ., **ಭಾರತೀಯ ಭಕ್ತಿಪಂಥ(ಹೆಣ್ಣು ವಿಚಾರ ಸಾಹಿತ್ಯ ಮತ್ತು ಹೆಣ್ಣು).**

೧೭. ಗಾಂಧಿ ಎಂ.ಕೆ., ಎಸ್.ಆರ್.ಕುಲಕರ್ಣಿ (ಅನು), ೧೯೮೭, **ನನ್ನ ಕಲ್ಪನೆಯ ಸಮಾಜವಾದ,** ಭಾರತೀಯ ವಿದ್ಯಾಭವನ, ಬೆಂಗಳೂರು.

೧೮. ಗಾಯತ್ರಿ ಎನ್., ೧೯೯೧, **ಮಹಿಳೆ ಬಿಡುಗಡೆಯ ಹಾದಿಯಲ್ಲಿ,** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೯. ಗಾಯತ್ರಿ ನಾವಡ, ೧೯೯೯, **ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು,** ಸಿರಿ ಪ್ರಕಾಶನ, ಹೊಸಪೇಟೆ.

೨೦. ಗಾಯತ್ರಿ ಎನ್., ೧೯೯೬, **ಸ್ತ್ರೀವಾದಿ ಪ್ರವೇಶಿಕೆ,** ನವ ಕೋರಿಕೆ ಪ್ರಕಾಶನ, ಬೆಂಗಳೂರು.

೨೧. ಗಾಯತ್ರಿ ನಾವಡ, **ವಿರಚನೆ,** ೧೯೯೭, ಎನ್.ಆರ್.ಎ.ಎಮ್.ಎಚ್. ಪ್ರಕಾಶನ, ಕೋಟೇಶ್ವರ.

೨೨. ಗಾಯತ್ರಿ ನಾವಡ, ೨೦೦೩, **ಮಹಿಳಾ ಸಂಕಥನ,** ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ, ಬೆಂಗಳೂರು.

೨೩. ಗೀತಾ ಕೃಷ್ಣಮೂರ್ತಿ, ೨೦೦೯, **ಮಹಿಳಾ ಹಕ್ಕುಗಳು, ಮಾನವ ಹಕ್ಕುಗಳ ನೆಲೆಯಲ್ಲಿ,** ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೨೪. ಚಂದ್ರಶೇಖರ ಟಿ.ಆರ್., ೨೦೧೦, **ಲಿಂಗಸಂಬಂಧಗಳು ಮತ್ತು ಅಭಿವೃದ್ಧಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೨೫. ಚಂದ್ರ ಪೂಜಾರಿ ಎಂ., ೨೦೦೫, **ಸಮಾಜ ಸಂಶೋಧನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೬. ಚನ್ನಮ್ಮ ಕೆ.ಸಿ., ೨೦೧೦, **ಮಹಿಳೆಯ ದುಡಿಮೆ ಏಕರೂಪತೆಯ ಪ್ರಶ್ನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೨೭. ಜೆರಾಲ್ಡಿನ್ ಫೊರ್ಬ್ಸ್, ಎಚ್.ಎಸ್. ಶ್ರೀಮತಿ (ಅನು), ೨೦೦೧, **ಆಧುನಿಕ ಭಾರತದಲ್ಲಿ ಮಹಿಳೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೮. ಜ್ಯೋತಿ ಶಶಿಕುಮಾರ್, ೨೦೦೭, **ಮಹಿಳಾ ಸಾಮಾಜಿಕತೆ,** ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೨೯. ಜ್ಯೋತಿ ಶಶಿಕುಮಾರ್ ವೈ.ಎಸ್., ೧೯೭೬, **ಮಹಿಳೆ ಮತ್ತು ಕಲೆ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೦. ಜ್ಯೋತ್ಸ್ನಾ ಕಾಮತ್ ೧೯೯೧, **ಮಹಿಳೆ: ಒಂದು ಅಧ್ಯಯನ,** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೩೧. ತಿರುಮಲೇಶ್ ಕೆ.ವಿ., ೨೦೧೬, **ಅಸ್ತಿವಾದ,** ಅಭಿನವ ಪ್ರಕಾಶನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೨. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ(ಸಂ), ೧೯೯೪, **ಸ್ತ್ರೀವಾದಿ ಸಾಹಿತ್ಯ ವಿಮರ್ಶೆ,** ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು.

೩೩. ನಾಗಮಣಿ ಎಸ್. ರಾವ್ (ಸಂ), **ಲೇಖ-ಲೋಕ, (ಮಹಿಳಾ ಸಾಹಿತ್ಯ: ಒಂದು ಆತ್ಮಕಥನ- ಸಂಪುಟ ೨),** ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.

೩೪. ಪ್ರೀತಿ ಶುಭಚಂದ್ರ ೨೦೦೭, **ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೩೫. ಪೂರ್ಣಿಮಾ ಆರ್., ೧೯೯೮, **ಮಹಿಳೆ: ಮೀಸಲಾತಿಯ ಅಗತ್ಯ,** ಜನವಾದಿ ಮಹಿಳಾ ಸಂಘಟನೆ, ದಕ್ಷಿಣ ಕನ್ನಡ.

೩೬. ಪೋಲಂಕಿ ರಾಮಮೂರ್ತಿ, ಅನಸೂಯ ಕಾಂಬಳೆ(ಸಂ), ೧೯೯೯, 'ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣು'(ಲೇ), **ವಿಚಾರ ಸಾಹಿತ್ಯ ಮತ್ತು ಹೆಣ್ಣು,** ವೈಚಾರಿಕ ಸಾಹಿತ್ಯ ಪ್ರಕಾಶನ, ರಾಯಭಾಗ.

೩೭. ಮಂಗಳಾ ಪ್ರಿಯದರ್ಶಿನಿ, ೨೦೦೭, **ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಪ್ರವೇಶಿಕೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೩೮. ಮಧುಕೇಶ್ವರ್, ೧೯೭೩, **ಗಾಂಧೀಜಿ ಮತ್ತು ಮಹಿಳೆಯರು,** ಮಹಾಬಲೇಶ್ವರರಾವ್ (ಅನು), ಜನಪದ ಸೇವಾ ಟ್ರಸ್ಟ್, ಮೇಲುಕೋಟೆ.

೩೯. ಮಂಗಳಾ ಚಿ.ನ., ೧೯೯೦, **ಎಚ್ಚೆತ್ತ ಹಾದಿಯಲ್ಲಿ ಮಹಿಳೆ,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೪೦. ಮಂಗಳಾ ಚಿ.ನ., **ಮಾತೃಪೂಜೆ,** ಎಸ್.ಎಂ.ಕೆ.ಆರ್.ವಿ ಕಾಲೇಜು, ಬೆಂಗಳೂರು.

೪೧. ಮಲ್ಲಿಕಾ. ಎಸ್.ಘಂಟಿ, ೧೯೯೪, **ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ,** ಯುವಲೋಕ ಪ್ರಕಾಶನ, ಧಾರವಾಡ.

೪೨. ಮೀರಾ ಎಲ್.ಜಿ. (ಅನು), ೧೯೯೭, **ಮಾನುಷಿಯ ಮಾತು, ಸ್ತ್ರೀವಾದಿ ಚಿಂತಕಿ, ಮಧುಕೀಶ್ವರ್ ಅವರ ಬರಹಗಳು,** ಅಕ್ಷರ ಪ್ರಕಾಶನ, ಹೆಗ್ಗೋಡು.

೪೩. ಮೀರಾ ಎಲ್.ಜಿ., ೨೦೦೪, **ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ,** ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು.

೪೪. ರಾವ್ ಮಹಾಬಲೇಶ್ವರ (೧೯೯೯) **ಪ್ರಾಥಮಿಕ ಶಿಕ್ಷಣ : ಸಮಸ್ಯೆಗಳು, ಸವಾಲುಗಳು,** ಬೆಂಗಳೂರು, ನವಕರ್ನಾಟಕ ಪ್ರಕಾಶನ.

೪೫. ರಾವ್ ಮಹಾಬಲೇಶ್ವರ (೨೦೧೨) **ಪ್ರಾಥಮಿಕ ಶಿಕ್ಷಣ : ಸಮಸ್ಯೆಗಳು, ಸವಾಲುಗಳು,** ಶ್ರುತಿಲೋಕ ಪ್ರಕಾಶನ, ಮೈಸೂರು.

೪೬. ರೋಹಿಣಿ ಬಿ.ಎಂ., ೧೯೯೫, **ಸ್ತ್ರೀ ಸಂವೇದನೆ,** ಹೇಮಾಂಶು ಪ್ರಕಾಶನ, ಮಂಗಳೂರು.

೪೭. **ಲಿಂಗತ್ವ ಸಮಾನತೆ ಮತ್ತು ಲಿಂಗತ್ವ ನ್ಯಾಯದ ಪರಿಕಲ್ಪನೆಯಲ್ಲಿ ಪ್ರಾಥಮಿಕ ಶಾಲಾ ಪಠ್ಯಪುಸ್ತಕದ ಅಧ್ಯಯನ ಮತ್ತು ವಿಶ್ಲೇಷಣೆ,** ಸ್ವರಾಜ್ ಸಂಘಟನೆ, ಕರ್ನಾಟಕ ಬೆಂಗಳೂರು.

೪೮. ವರದಾ ಶ್ರೀನಿವಾಸ, ೧೯೯೯, **ಮಹಿಳೆಯ ಸ್ಥಿತಿಗತಿ ಅಂದು ಇಂದು,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೪೯. ವಿನೋದಾಬಾಯಿ ಎಸ್. ಆಂಡಾಳ್, ೧೯೬೯, **ಮಹದೇವಿ ಮೀರ,** ಉಷಾ ಸಾಹಿತ್ಯ ಮಾಲೆ, ಮೈಸೂರು.

೫೦. ವಿಜಯಾ ದಬ್ಬೆ, ೧೯೯೭, **ನಾರಿದಾರಿ: ದಿಂಗತ,** ರಚನಾ ಪ್ರಕಾಶನ, ಮೈಸೂರು.

೫೧. ವಿಜಯಾ ದಬ್ಬೆ, ೧೯೮೯, **ಶ್ಯಾಮಲಾ ಸಂಚಯ,** ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.

೫೨. ವೀರೇಶ, ೨೦೧೬, **ಹೆಣ್ಣಿನ ಜೈವಿಕತೆಯ ಮೇಲೆ ಸಾಮಾಜಿಕ ಹೇರಿಕೆ,** ಗಾಯತ್ರಿ ಪ್ರಕಾಶನ, ಬಳ್ಳಾರಿ.

೫೩. ವೀರಣ್ಣ ಸಿ., ೧೯೯೯, **ಕನ್ನಡ ಕಾವ್ಯ ಕಂಡ ಹೆಣ್ಣು,** ಶಕ್ತಿ ಮುದ್ರಣ ಪ್ರಕಾಶನ, ಬೆಂಗಳೂರು.

೫೪. ವೀಣಾ ಶಾಂತೇಶ್ವರ (ಸಂ.), **ಮಹಿಳಾ ಅಧ್ಯಯನ,** ಪ್ರೊ. ಎಚ್.ಪಿ. ನಾಗೇಶ್ ಅಭಿನಂದನಾ ಗ್ರಂಥ, ಧಾರವಾಡ.

೫೫. ವೀಣಾ ಶಾಂತೇಶ್ವರ, ೨೦೦೯, **ಇಲ್ಲಿಂದ ಮುಂದೆಲ್ಲಿಗೆ? (ಮಹಿಳೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳು),** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೬. ಶಾಂತಾ ಇಮ್ರಾಪೂರ, ೨೦೧೦, **ಮಧ್ಯಯುಗದ ಮಹಿಳಾ ಸಾಹಿತ್ಯ ಮತ್ತು ಸೃಜನಶೀಲತೆ,** ಚಿತ್ತಾರ ಪ್ರಕಾಶನ, ಧಾರವಾಡ.

೫೭. ಶಿವಾನಂದ ವಿರಕ್ತಮಠ, ೨೦೧೦, **ಮಹಿಳೆ ಮತ್ತು ಧರ್ಮ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೫೮. ಶಿವಾನಂದ ವಿರಕ್ತಮಠ, ೨೦೧೨, **ಮಹಿಳಾ ಅಧ್ಯಯನ,** ಸಂಯುಕ್ತ ಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ ಹಂಪಿ, ವಿದ್ಯಾರಣ್ಯ.

೫೯. ಶಿವಾನಂದ ವಿರಕ್ತಮಠ, ೨೦೧೧, **ಮಹಿಳಾ ಅಧ್ಯಯನ,** ಸಂಯುಕ್ತ ಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೬೦. ಶಿರೂರ ಬಿ.ವಿ., ೨೦೧೨, **ಸಂಶೋಧನ ಸ್ವರೂಪ,** ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ.

೬೧. ಶ್ರೀಮತಿ ಎಚ್.ಎಸ್., ೨೦೦೬, **ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೨. ಶ್ರೀಮತಿ ಎಚ್.ಎಸ್., ೨೦೦೪, **ಹೆಣ್ಣು-ಹೆಂಗಸು,** ಬ್ಯಾಲದಕೆರೆ ಪ್ರಕಾಶನ, ಮಂಡ್ಯ.

೬೩. ಶ್ರೀಮತಿ ಎಚ್.ಎಸ್., ೨೦೦೪, **ಚಹರೆ,** ಪ್ರಸಾರಾಂಗ, ಇಳಾ ಪ್ರಕಾಶನ, ಬೆಂಗಳೂರು.

೬೪. ಶ್ರೀಮತಿ ಎಚ್.ಎಸ್., ೨೦೦೪, **ಸ್ತ್ರೀವಾದ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೬೫. ಶ್ರೀಮತಿ ಎಚ್.ಎಸ್., ೨೦೦೨, **ಗರ್ಭಾಶಯ ಮಹಿಳೆಯ ಶಕ್ತಿ ಕೇಂದ್ರ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೬೬. ಶ್ರೀಮತಿ ಎಚ್.ಎಸ್., ೨೦೦೭, **ಸಿಮೋನ್ ದ ಬೋವಾ, ದಿ ಸೆಕೆಂಡ್ ಸೆಕ್ಸ್ ಒಂದು ಕನ್ನಡ ಓದು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೬೭. ಶ್ರೀಮತಿ ಎಚ್.ಎಸ್., ೨೦೦೯, **ಸ್ತ್ರೀವಾದಿ ಭಾಷಾಶಾಸ್ತ್ರ ಪ್ರವೇಶಿಕೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೬೮. ಶ್ರೀಮತಿ ಎಚ್.ಎಸ್., ೨೦೧೨, **ಸ್ತ್ರೀವಾದಿ ಸಂಶೋಧನೆ ವಿಧಿ-ವಿಧಾನಗಳು,** ಬರಹ ಪಬ್ಲಿಕೇಷನ್ ಹೌಸ್, ಬೆಂಗಳೂರು.

೬೯. ಶ್ರೀಮತಿ ಎಚ್.ಎಸ್., ೨೦೧೯, **ಸ್ತ್ರೀವಾದ ಚಿಂತನ ಮತ್ತು ಹೋರಾಟ,** ಅಭಿರುಚಿ ಪ್ರಕಾಶನ, ಮೈಸೂರು.

೭೦. ಶೇಷ ನವರತ್ನ, ೨೦೦೫, **ಮನುಸ್ಮೃತಿ,** ಸಮಾಜ ಮಸ್ತಕಾಲಯ, ಧಾರವಾಡ.

೭೧. ಶೈಲಜ ಹಿರೇಮಠ, ೨೦೦೪, **ಮಾತೃಪ್ರಧಾನ ಪರಿಕಲ್ಪನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೭೨. ಶೈಲಜ ಹಿರೇಮಠ, ೨೦೦೩, **ಸ್ತ್ರೀ–ಸಂಕಥನ,** ಭುವನ ಪ್ರಕಾಶನ, ಹೊಸಪೇಟೆ.

೭೩. ಶೈಲಜ ಹಿರೇಮಠ, ೨೦೧೨, **ಮಹಿಳಾ ಅಧ್ಯಯನ,** ಸಂಚಿಕೆ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ ಹಂಪಿ, ವಿದ್ಯಾರಣ್ಯ.

೭೪. ಶೈಲಜ ಹಿರೇಮಠ, ೨೦೧೨, **ಮಹಿಳಾ ಅಧ್ಯಯನ,** ಸಂಚಿಕೆ–೨', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ ಹಂಪಿ, ವಿದ್ಯಾರಣ್ಯ.

೭೫. ಶೈಲಜ ಹಿರೇಮಠ, ೨೦೧೭, **ಪಾತರದವರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೬. ಸವಿತಾ ನಾಗಭೂಷಣ (ಸಂ), ೧೯೯೨, **ಮುಡಿ ಮಲ್ಲಿಗೆ, (ಸ್ತ್ರೀವಾದಿ ಚಿಂತನೆ),** ಸಂವಾದ ಪ್ರಕಾಶನ, ಚಿತ್ರದುರ್ಗ.

೭೭. ಸಬಿಹಾ ಭೂಮಿಗೌಡ, ೨೦೧೨, **ಮಹಿಳೆ ಇಂದಿನ ಸವಾಲುಗಳು,** ಲಡಾಯಿ ಪ್ರಕಾಶನ, ಗದಗ.

೭೮. ಸಬಿಹಾ ಭೂಮಿಗೌಡ, ೨೦೧೨, **ದಶಕದ ಮಹಿಳಾ ಸಾಹಿತ್ಯದಲ್ಲಿ: ಪ್ರತಿರೋಧದ ನೆಲೆಗಳು,** ಚಿಂತನ ಮಸ್ತಕ ಬೆಂಗಳೂರು.

೭೯. ಸಬಿಹಾ ಭೂಮಿಗೌಡ, ೨೦೦೮, **ಲಿಂಗತ್ವ ಸಮನ್ಯಾಯದೆಡೆಗೆ,** ಕರ್ನಾಟಕ ಸಂಘ, ಮಂಡ್ಯ

೮೦. ಸುನಂದಮ್ಮ ಆರ್., ೨೦೦೫, **ಮಹಿಳಾ ಸಂಸ್ಕೃತಿ,** ಸಮತಾ ಅಧ್ಯಯನ ಕೇಂದ್ರ, ಮೈಸೂರು.

೮೧. ಸುಮಿತ್ರಾಬಾಯಿ ಬಿ.ಎನ್. ೨೦೦೦, **ಹೆಣ್ಣು (ಧರ್ಮ ವಿಶ್ವಕೋಶ),** ಮೈಸೂರು (ಸಂ) ರಹಮತ್ ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೮೨. ಸುಮಿತ್ರಾಬಾಯಿ ಬಿ.ಎನ್., ೧೯೯೫, **ಸ್ತ್ರೀವಾದಿ ಪ್ರವೇಶಿಕೆ,** ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.

೮೩. ಸುಮಿತ್ರಾಬಾಯಿ ಬಿ.ಎನ್., ೨೦೦೬, **ಸ್ತ್ರೀವಾದ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೮೪. ಸುಮಿತ್ರಾಬಾಯಿ ಬಿ.ಎನ್. ೨೦೦೯, **ಸರಹದ್ದುಗಳ ಆಚೆ–ಈಚೆ,** ಇಳಾ ಪ್ರಕಾಶನ, ಬೆಂಗಳೂರು.

೮೫. ಸುಜ್ಞಾನಮೂರ್ತಿ ಬಿ., ೨೦೧೮, **ಕುಟುಂಬ ವ್ಯವಸ್ಥೆ: ಮಾರ್ಕ್ಸ್‌ವಾದ-ಸ್ತ್ರೀವಾದ,** ಲಡಾಯಿ ಪ್ರಕಾಶನ, ಗದಗ.

೮೬. ಸುಜ್ಞಾನಮೂರ್ತಿ ಬಿ., ೨೦೧೮, **ಮನೆ ಕೆಲಸ ಮತ್ತು ಹೊರಗಿನ ಕೆಲಸ,** ಲಡಾಯಿ ಪ್ರಕಾಶನ, ಗದಗ.

೮೭. Subhadra channa (Ed.by), 2004, **Women and Religion, Encyclopaedia Of Women Studies-vol-3',** Cosmo Publications, New Delhi.

೮೮. ಹಾಲತಿ ಸೋಮಶೇಖರ, ೨೦೦೭, **ಮಹಿಳಾ ಚಳುವಳಿ: ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ,** ವಿಸ್ಮಯ ಪ್ರಕಾಶನ, ಮೈಸೂರು.

೮೯. ಹೇಮಲತಾ ಎಚ್.ಎಂ., ೨೦೦೪, **ಮಹಿಳಾ ಅಧ್ಯಯನ ಸಂಚಿಕೆ,** ಡಿ.ವಿ.ಕೆ. ಮೂರ್ತಿ, ಮೈಸೂರು.

♦♦♦

೩. ವಕ್ತೃಗಳ ಪಟ್ಟಿ

ಕ್ರ.ಸಂ.	ಹೆಸರು	ವಯಸ್ಸು	ಜಾತಿ	ಶಿಕ್ಷಣ	ಗ್ರಾಮ	ತಾಲ್ಲೂಕು
೧.	ಮಾಬುಭಾಷ	೨೯	ಪಿಂಜಾರ್	೧೦ನೇ ತರಗತಿ	ಬೂದುಗುಪ್ಪ	ಸಿರುಗುಪ್ಪ
೨.	ಶೇಕ್ಷವಾಲಿ	೪೫	ಪಿಂಜಾರ್	೭ನೇ ತರಗತಿ	ಬೂದುಗುಪ್ಪ	ಸಿರುಗುಪ್ಪ
೩.	ಪೀರಸಾಬ್	೫೫	ಪಿಂಜಾರ್	ಅನಕ್ಷರತೆ	ಬೂದುಗುಪ್ಪ	ಸಿರುಗುಪ್ಪ
೪.	ಪಿ. ಚಂದಾ ಸಾಬ್	೬೮	ಪಿಂಜಾರ್	ಪದವಿ	ಬೂದುಗುಪ್ಪ	ಸಿರುಗುಪ್ಪ
೫.	ಪಿ. ಖಾಸಿಂ ಸಾಬ್	೭೨	ಪಿಂಜಾರ್	೮ನೇ ತರಗತಿ	ಬೂದುಗುಪ್ಪ	ಸಿರುಗುಪ್ಪ
೬.	ಪಿ. ಶೇಕ್ಷವಲಿ	೩೦	ಪಿಂಜಾರ್	ಪಿ.ಯು.ಸಿ	ಬೂದುಗುಪ್ಪ	ಸಿರುಗುಪ್ಪ
೭.	ಗುರುಸಿದ್ದಯ್ಯ	೫೫	ವೀರಶೈವ	೭ನೇ ತರಗತಿ	ಬೂದುಗುಪ್ಪ	ಸಿರುಗುಪ್ಪ
೮.	ಶಿವಕುಮಾರ್ ಎಚ್.ಎಂ	೩೮	ವೀರಶೈವ	೧೦ನೇತರಗತಿ	ಬೂದುಗುಪ್ಪ	ಸಿರುಗುಪ್ಪ
೯.	ಚನ್ನಬಸವರಾಜ ಜಿ.ಎಂ	೫೫	ವೀರಶೈವ	೧೦ ನೇ ತರಗತಿ	ಬೂದುಗುಪ್ಪ	ಸಿರುಗುಪ್ಪ
೧೦.	ಮರಿಸ್ವಾಮಿ ಎಚ್.ಎಂ.	೪೧	ವೀರಶೈವ	೧೦ನೇ ತರಗತಿ	ಕರೂರು	ಸಿರುಗುಪ್ಪ
೧೧.	ಆರ್. ಚಂದ್ರಶೇಕರ್‌ರೆಡ್ಡಿ	೬೦	ರೆಡ್ಡಿ	೧೦ನೇ ತರಗತಿ	ಕರೂರು	ಸಿರುಗುಪ್ಪ
೧೨.	ಆರ್. ಸಿದ್ದಲಿಂಗ ರೆಡ್ಡಿ	೩೫	ರೆಡ್ಡಿ	ಪಿ.ಯು.ಸಿ	ಕರೂರು	ಸಿರುಗುಪ್ಪ
೧೩.	ಯು. ವೆಂಕಟೇಶ	೫೦	ಉಪ್ಪಾರ	೫ನೇ ತರಗತಿ	ಕರೂರು	ಸಿರುಗುಪ್ಪ
೧೪.	ಯು.ಗೋವಿಂದ	೩೫	ಉಪ್ಪಾರ	೮ನೇ ತರಗತಿ	ಕರೂರು	ಸಿರುಗುಪ್ಪ
೧೫.	ಯು.ಹನುಮಂತ	೩೨	ಉಪ್ಪಾರ	ಅನಕ್ಷರಸ್ಥರು	ಕರೂರು	ಸಿರುಗುಪ್ಪ
೧೬.	ಎಚ್.ವೆಂಕಟೇಶ್	೩೮	ಉಪ್ಪಾರ	ಪಿ.ಯು.ಸಿ	ತೆಕ್ಕಲಕೋಟೆ	ಸಿರುಗುಪ್ಪ
೧೭.	ಎಚ್.ರಮೇಶ್	೪೩	ಉಪ್ಪಾರ	೧೦ನೇ ತರಗತಿ	ತೆಕ್ಕಲಕೋಟೆ	ಸಿರುಗುಪ್ಪ
೧೮.	ಎಚ್.ನಾಗರಾಜು	೩೮	ಉಪ್ಪಾರ	೧೦ನೇ ತರಗತಿ	ತೆಕ್ಕಲಕೋಟೆ	ಸಿರುಗುಪ್ಪ
೧೯.	ನಟರಾಜರೆಡ್ಡಿಜಿ	೨೯	ರೆಡ್ಡಿ	೧೦ನೇ ತರಗತಿ	ತೆಕ್ಕಲಕೋಟೆ	ಸಿರುಗುಪ್ಪ
೨೦.	ತಿಮ್ಮರೆಡ್ಡಿ .ಜಿ	೫೭	ರೆಡ್ಡಿ	ಪಿ.ಯು.ಸಿ	ತೆಕ್ಕಲಕೋಟೆ	ಸಿರುಗುಪ್ಪ
೨೧.	ಶಿವಪ್ರಕಾಶ ರೆಡ್ಡಿ	೩೬	ರೆಡ್ಡಿ	೧೦ನೇ ತರಗತಿ	ತೆಕ್ಕಲಕೋಟೆ	ಸಿರುಗುಪ್ಪ
೨೨.	ವಿಶ್ವನಾಥ ಜಿ	೪೪	ಹೂಗಾರ	೧೦ನೇ ತರಗತಿ	ತೆಕ್ಕಲಕೋಟೆ	ಸಿರುಗುಪ್ಪ
೨೩.	ದಾನಪ್ಪ .ಜಿ	೪೬	ಹೂಗಾರ	ಅನಕ್ಷರಸ್ಥರು	ತೆಕ್ಕಲಕೋಟೆ	ಸಿರುಗುಪ್ಪ
೨೪.	ಮಂಜುನಾಥ ಜಿ	೪೦	ಹೂಗಾರ	೧೦ನೇ ತರಗತಿ	ತೆಕ್ಕಲಕೋಟೆ	ಸಿರುಗುಪ್ಪ
೨೫.	ಗಂಗಾಧರ .ಜಿ	೩೭	ಹೂಗಾರ	೧೦ನೇ ತರಗತಿ	ತೆಕ್ಕಲಕೋಟೆ	ಸಿರುಗುಪ್ಪ
೨೬.	ಪಾಂಡುರಂಗ	೪೦	ನಾಯಕ	ಅನಕ್ಷರಸ್ಥರು	ತೆಕ್ಕಲಕೋಟೆ	ಸಿರುಗುಪ್ಪ
೨೭.	ಸಿದ್ಧಲಿಂಗ	೨೯	ಹರಿಜನ	ಅನಕ್ಷರಸ್ಥರು	ತೆಕ್ಕಲಕೋಟೆ	ಸಿರುಗುಪ್ಪ
೨೮.	ರಂಗಪ್ಪ ಸಿ	೫೦	ಚಲುವಾದಿ	ಅನಕ್ಷರಸ್ಥರು	ತೆಕ್ಕಲಕೋಟೆ	ಸಿರುಗುಪ್ಪ

೨೯.	ಓಂಕಾರಪ್ಪ	೪೯	ಚಲುವಾದಿ	೧೦ನೇ ತರಗತಿ	ತೆಕ್ಕಲಕೋಟೆ	ಸಿರುಗುಪ್ಪ
೩೦.	ಶ್ರೀನಿವಾಸ	೫೦	ಬಾರಿಕರು	೭ನೇ ತರಗತಿ	ತೆಕ್ಕಲಕೋಟೆ	ಸಿರುಗುಪ್ಪ
೩೧.	ಚಕ್ರವರ್ತಿ	೪೫	ಬಾರಿಕರು	ಅನಕ್ಷರಸ್ಥರು	ತೆಕ್ಕಲಕೋಟೆ	ಸಿರುಗುಪ್ಪ
೩೨.	ಪುರುಷೊತ್ತಮ	೪೨	ಬಾರಿಕರು	ಪದವಿ	ತೆಕ್ಕಲಕೋಟೆ	ಸಿರುಗುಪ್ಪ
೩೩.	ಕೃಷ್ಣಮೂರ್ತಿ	೪೩	ಬಾರಿಕರು	೭ನೇ ತರಗತಿ	ತೆಕ್ಕಲಕೋಟೆ	ಸಿರುಗುಪ್ಪ
೩೪.	ತಿರುಕಪ್ಪ	೬೦	ಬಾರಿಕರು	೪ನೇ ತರಗತಿ	ತೆಕ್ಕಲಕೋಟೆ	ಸಿರುಗುಪ್ಪ
೩೫.	ಯು.ಸೋಮಣ್ಣ	೪೮	ಉಪ್ಪಾರ	೭ನೇ ತರಗತಿ	ಡಣಾಪುರ	ಹೊಸಪೇಟೆ
೩೬.	ವಿರುಪಾಕ್ಷಯ್ಯ ಸ್ವಾಮಿ	೫೯	ಜಂಗಮ	೧೦ನೇ ತರಗತಿ	ಡಣಾಪುರ	ಹೊಸಪೇಟೆ
೩೭.	ಮರಿದೇವಯ್ಯ ಸ್ವಾಮಿ	೪೮	ಲಿಂಗಾಯತ	ಪದವಿ	ಡಣಾಪುರ	ಹೊಸಪೇಟೆ
೩೮.	ಶ್ರೀನಿವಾಸ	೩೮	ಲಿಂಗಾಯತ	೧೦ನೇ ತರಗತಿ	ಡಣಾಪುರ	ಹೊಸಪೇಟೆ
೩೯.	ಹುಲುಗಪ್ಪ	೫೦	ಹರಿಜನ	ಅನಕ್ಷರಸ್ಥರು	ಡಣಾಪುರ	ಹೊಸಪೇಟೆ
೪೦.	ವೀರಭದ್ರಯ್ಯ	೬೨	ಜಂಗಮ	ಅನಕ್ಷರಸ್ಥರು	ಡಣಾಪುರ	ಹೊಸಪೇಟೆ
೪೧.	ಕೆ. ನಾಗರಾಜ	೩೪	ಕಮ್ಮಾರ	೭ನೇ ತರಗತಿ	ಡಣಾಪುರ	ಹೊಸಪೇಟೆ
೪೨.	ಖಾಜ ಹುಸೇನ್	೩೫	ಮುಸ್ಲಿಂ	ಅನಕ್ಷರಸ್ಥರು	ಡಣಾಪುರ	ಹೊಸಪೇಟೆ
೪೩.	ಕೆ.ಎಸ್. ಸುರೇಂದ್ರ	೩೩	ಉಪ್ಪಾರ	೧೦ನೇ ತರಗತಿ	ಕಮಲಾಪುರ	ಹೊಸಪೇಟೆ
೪೪.	ಎ. ಫಕ್ಕಿರ್ ಸ್ವಾಮಿ	೪೦	ಮಡಿವಾಳ	೮ನೇ ತರಗತಿ	ಕಮಲಾಪುರ	ಹೊಸಪೇಟೆ
೪೫.	ಜಾಕಿರ್ ಭಾಷಾ	೩೨	ಮುಸ್ಲಿಂ	ಅನಕ್ಷರಸ್ಥರು	ಕಮಲಾಪುರ	ಹೊಸಪೇಟೆ
೪೬.	ರಮೇಶ್	೩೫	ಕುರುಬ	ಅನಕ್ಷರಸ್ಥರು	ಕಮಲಾಪುರ	ಹೊಸಪೇಟೆ
೪೭.	ಎನ್.ವಿ ೀರಣ್ಣ	೩೭	ನಾಯಕ	೧೦ನೇ ತರಗತಿ	ಕಮಲಾಪುರ	ಹೊಸಪೇಟೆ
೪೮.	ಟಿ.ಎಮ್. ಚಂದ್ರಶೇಖರಯ್ಯ	೪೩	ವೀರಶೈವ	ಪದವಿ	ಕಮಲಾಪುರ	ಹೊಸಪೇಟೆ
೪೯.	ಶಿವಶರಣಪ್ಪ	೪೫	ಲಿಂಗಾಯತ	೧೦ನೇ ತರಗತಿ	ಕಮಲಾಪುರ	ಹೊಸಪೇಟೆ
೫೦.	ಪೀರುಪಾಕ್ಷಯ್ಯ ಸ್ವಾಮಿ	೬೦	ವೀರಶೈವ	೧೦ನೇ ತರಗತಿ	ಬುಕ್ಕಸಾಗರ	ಹೊಸಪೇಟೆ
೫೧.	ಹನುಮೇಶ	೩೮	ಮಡಿವಾಳ	ಪದಪಿ	ಬುಕ್ಕಸಾಗರ	ಹೊಸಪೇಟೆ
೫೨.	ವೀರಭದ್ರಯ್ಯ	೬೩	ಲಿಂಗಾಯತ	೭ನೇ ತರಗತಿ	ಬುಕ್ಕಸಾಗರ	ಹೊಸಪೇಟೆ
೫೩.	ಮರಿದೇವಯ್ಯ	೫೫	ಲಿಂಗಾಯತ	೧೨ನೇ ತರಗತಿ	ಬುಕ್ಕಸಾಗರ	ಹೊಸಪೇಟೆ
೫೪.	ಮಲ್ಲಿಕಾರ್ಜುನ	೫೮	ಲಿಂಗಾಯತ	ಪದವಿ	ಬುಕ್ಕಸಾಗರ	ಹೊಸಪೇಟೆ
೫೫.	ಭೋಜರಾಜ	೪೦	ಕುರುಬರು	ಪದವಿ	ಬುಕ್ಕಸಾಗರ	ಹೊಸಪೇಟೆ
೫೬	ಕೆ.ಎನ್. ಕೊಟ್ರಪ್ಪ	೪೫	ಜಂಗಮ	ಪಿ.ಯು.ಸಿ	ಬುಕ್ಕಸಾಗರ	ಹೊಸಪೇಟೆ
೫೭.	ಹಳ್ಳಿಳ್ಳಿ ಪತ್ರಪ್ಪ	೫೦	ಲಿಂಗಾಯತ	ಅನಕ್ಷರಸ್ಥರು	ಬುಕ್ಕಸಾಗರ	ಹೊಸಪೇಟೆ
೫೮.	ಒಡಗಿದುರುಗಮ್ಮ	೬೦	ಹರಿಜನ	ಅನಕ್ಷರಸ್ಥರು	ಬುಕ್ಕಸಾಗರ	ಹೊಸಪೇಟೆ
೫೯.	ಕುರಿ ಬರಮಪ್ಪ	೬೦	ಕುರುಬ	ಅನಕ್ಷರಸ್ಥರು	ಬುಕ್ಕಸಾಗರ	ಹೊಸಪೇಟೆ
೬೦.	ಪೀರಣ್ಣ	೫೬	ಲಿಂಗಾಯತ	ಪಿ.ಯು.ಸಿ	ಬಂಡ್ರಿ	ಸಂಡೂರು
೬೧.	ಪೀರೇಂದ್ರ	೪೦	ಲಿಂಗಾಯತ	ಪದವಿ	ಬಂಡ್ರಿ	ಸಂಡೂರು
೬೨.	ಬಿ. ದಾದಾಬೀರ್	೪೦	ಮುಸ್ಲಿಂ	೧೦ನೇ ತರಗತಿ	ಬಂಡ್ರಿ	ಸಂಡೂರು
೬೩.	ವೆಂಕಟೇಶ್	೪೦	ಉಪ್ಪಾರ	ಅನಕ್ಷರಸ್ಥರು	ಬಂಡ್ರಿ	ಸಂಡೂರು
೬೪.	ಮಾರೆಪ್ಪ	೪೦	ನಾಯಕ	ಅನಕ್ಷರಸ್ಥರು	ಬಂಡ್ರಿ	ಸಂಡೂರು

೬೫.	ಗೋಣೆಪ್ಪ	೪೦	ನಾಯಕ	ಅನಕ್ಷರತೆ	ಬಂಡ್ರಿ	ಸಂಡೂರು
೬೬.	ಅಂಜಿನಿದೇವಿ	೫೨	ನಾಯಕ	೫ನೇ ತರಗತಿ	ಬಂಡ್ರಿ	ಸಂಡೂರು
೬೭.	ರತ್ನಮ್ಮ	೫೮	ನಾಯಕ	ಅನಕ್ಷರಸ್ಥರು	ಬಂಡ್ರಿ	ಸಂಡೂರು
೬೮.	ಬಸಮ್ಮ	೫೫	ನಾಯಕ	ಅನಕ್ಷಸ್ಥರು	ಬಂಡ್ರಿ	ಸಂಡೂರು
೬೯.	ದಶರಥ	೪೫	ವೈಶ್ಯಸ್	ಪದವಿ	ಯಶವಂತನಗರ	ಸಂಡೂರು
೭೦.	ಜಿ. ಶೆಕ್ಷಾವಲಿ	೪೪	ಮುಸ್ಲಿಂ	೧೦ನೇ ತರಗತಿ	ಯಶವಂತನಗರ	ಸಂಡೂರು
೭೧.	ಎಸ್.ಬಸವರಾಜು	೪೦	ನಾಯಕ	ಅನಕ್ಷರತೆ	ಯಶವಂತನಗರ	ಸಂಡೂರು
೭೨.	ಸಣ್ಣ ಬಸಣ್ಣ	೪೧	ಲಿಂಗಾಯತ	ಪಿ.ಯು.ಸಿ	ಯಶವಂತನಗರ	ಸಂಡೂರು
೭೩.	ಯಾಕ್ರ ಬಸಪ್ಪ	೫೫	ನಾಯಕ	ಅನಕ್ಷರಸ್ಥರು	ಯಶವಂತನಗರ	ಸಂಡೂರು
೭೪.	ಗುರುಬಾಲ ಲಕ್ಷ್ಮಿ	೩೦	ನಾಯಕ	ಅನಕ್ಷರಸ್ಥರು	ಯಶವಂತನಗರ	ಸಂಡೂರು
೭೫.	ಚಲುವಾದಿ ಕೊಟ್ರಪ್ಪ	೫೦	ಚಲುವಾದಿ	ಅನಕ್ಷರಸ್ಥರು	ಯಶವಂತನಗರ	ಸಂಡೂರು
೭೬.	ಗುರುಪ್ರಸಾದ್	೩೯	ಲಿಂಗಾಯತ	ಪದವಿ	ಯಶವಂತನಗರ	ಸಂಡೂರು
೭೭.	ಮಲ್ಲೇಶ್	೪೦	ಗೊಲ್ಲರು	ಪಿ.ಯು.ಸಿ	ಯಶವಂತನಗರ	ಸಂಡೂರು
೭೮.	ಅಂಜಿನಪ್ಪ	೪೦	ಮಡಿವಾಳ	ಎಂ.ಎ.	ಯಶವಂತನಗರ	ಸಂಡೂರು
೭೯.	ಪೋರಪ್ಪ	೪೧	ಲಿಂಗಾಯತ	೧೦ನೇ ತರಗತಿ	ಯಶವಂತನಗರ	ಸಂಡೂರು
೮೦.	ರವಿಕುಮಾರ	೪೦	ಲಿಂಗಾಯತ	೧೦ನೇ ತರಗತಿ	ಯಶವಂತನಗರ	ಸಂಡೂರು
೮೧.	ಮಲಿಯಪ್ಪ	೫೦	ಹರಿಜನ	ಬಿ.ಎ	ಯಶವಂತನಗರ	ಸಂಡೂರು
೮೨.	ಸಾರಪ್ಪ	೪೦	ಚಲುವಾದಿ	ಅನಕ್ಷರತೆ	ತಾರಾನಗರ	ಸಂಡೂರು
೮೩.	ಬಿ.ಎ. ಈರಣ್ಣ	೪೫	ಲಿಂಗಾಯತ	೧೦ನೇತರಗತಿ	ತಾರಾನಗರ	ಸಂಡೂರು
೮೪.	ಜಿ. ಶರಣಪ್ಪ	೬೮	ಲಿಂಗಾಯತ	ಪದವಿ	ತಾರಾನಗರ	ಸಂಡೂರು
೮೫.	ಮಹಂತೇಶ	೫೦	ನಾಯಕ	ಪದವಿ	ತಾರಾನಗರ	ಸಂಡೂರು
೮೬.	ಅಪ್ಪಣ್ಣ ಬಿ.	೪೫	ಹರಿಜನ	ಅನಕ್ಷರಸ್ಥರು	ತಾರಾನಗರ	ಸಂಡೂರು
೮೭.	ಕಲ್ಲಪ್ಪ ಎ.	೪೮	ಹರಿಜನ	ಅನಕ್ಷರಸ್ಥರು	ತಾರಾನಗರ	ಸಂಡೂರು
೮೮.	ಹನುಮಂತಪ್ಪ ಪಿ.	೪೫	ಹರಿಜನ	ಅನಕ್ಷರಸ್ಥರು	ಶಿವಪುರ	ಕೂಡ್ಲಿಗಿ
೮೯.	ಈರಣ್ಣ	೫೬	ಹರಿಜನ	ಅನಕ್ಷರಸ್ಥರು	ಶಿವಪುರ	ಕೂಡ್ಲಿಗಿ
೯೦.	ಬರಮಪ್ಪ	೪೬	ಹರಿಜನ	ಅನಕ್ಷರಸ್ಥರು	ಶಿವಪುರ	ಕೂಡ್ಲಿಗಿ
೯೧.	ಹನುಮಕ್ಕ	೪೫	ವಡ್ಡರು	ಅನಕ್ಷರಸ್ಥರು	ಶಿವಪುರ	ಕೂಡ್ಲಿಗಿ
೯೨.	ಹಾಲಸ್ವಾಮಿ ಕೆ.	೪೫	ಕುಂಬಾರ	೭ನೇ ತರಗತಿ	ಶಿವಪುರ	ಕೂಡ್ಲಿಗಿ
೯೩.	ಚಿನ್ನಪುರದಮ್ಮ	೩೫	ಮಡಿವಾಳ	೫ನೇ ತರಗತಿ	ಶಿವಪುರ	ಕೂಡ್ಲಿಗಿ
೯೪.	ಎಚ್.ಎಂ. ಜಯಾನಂದ	೪೮	ಜಂಗಮ	೧೦ನೇ ತರಗತಿ	ಶಿವಪುರ	ಕೂಡ್ಲಿಗಿ
೯೫.	ನಟರಾಜ್ ಐ	೩೪	ನಾಯಕ	೧೦ನೇ ತರಗತಿ	ಹನಸಿ	ಕೂಡ್ಲಿಗಿ
೯೬.	ಟಿ.ಬಸವರಾಜು	೩೯	ನಾಯಕ	ಪಿ.ಯು.ಸಿ	ಹನಸಿ	ಕೂಡ್ಲಿಗಿ
೯೭.	ಎಸ್.ಎಂ. ಬಸವರಾಜ	೬೦	ಜಂಗಮ	೭ನೇ ತರಗತಿ	ಹನಸಿ	ಕೂಡ್ಲಿಗಿ
೯೮.	ಹನುಮಂತಪ್ಪ	೪೦	ಕುಂಬಾರ	ಅನಕ್ಷರಸ್ಥರು	ಹನಸಿ	ಕೂಡ್ಲಿಗಿ
೯೯.	ಅನ್ನಮ್ಮ	೪೦	ಕುಂಬಾರ	ಅನಕ್ಷರಸ್ಥರು	ಹನಸಿ	ಕೂಡ್ಲಿಗಿ
೧೦೦.	ರಾಮಪ್ಪ	೪೦	ಕುಂಬಾರ	೭ನೇ ತರಗತಿ	ಹನಸಿ	ಕೂಡ್ಲಿಗಿ
೧೦೧.	ಶಿವಕುಮಾರ್	೩೯	ಜಂಗಮ	೧೦ನೇ ತರಗತಿ	ಹನಸಿ	ಕೂಡ್ಲಿಗಿ

೧೦೨.	ನಾಗರಾಜ ಕೆ	೩೬	ಕುಂಬಾರ	ಅನಕ್ಷರಸ್ಥರು	ಹಿರೇಹೆಗ್ಡಾಳ್	ಕೂಡ್ಲಿಗಿ
೧೦೩.	ಸಿದ್ದರಾಮಪ್ಪ	೪೫	ಲಿಂಗಾಯತ	೭ನೇ ತರಗತಿ	ಹಿರೇಹೆಗ್ಡಾಳ್	ಕೂಡ್ಲಿಗಿ
೧೦೪.	ನಂಜಪ್ಪ	೪೦	ನಾಯಕ	ಅನಕ್ಷರಸ್ಥರು	ಹಿರೇಹೆಗ್ಡಾಳ್	ಕೂಡ್ಲಿಗಿ
೧೦೫.	ಲಕ್ಷಣ ವಿ.	೩೫	ನಾಯಕ	೭ನೇ ತರಗತಿ	ಹಿರೇಹೆಗ್ಡಾಳ್	ಕೂಡ್ಲಿಗಿ
೧೦೬.	ರಾಮಪ್ಪ	೪೫	ನಾಯಕ	೫ನೇ ತರಗತಿ	ಹಿರೇಹೆಗ್ಡಾಳ್	ಕೂಡ್ಲಿಗಿ
೧೦೭.	ಬಸವರಾಜಯ್ಯ	೪೮	ಜಂಗಮ	ಪದವಿ	ಹಿರೇಹೆಗ್ಡಾಳ್	ಕೂಡ್ಲಿಗಿ
೧೦೮.	ಪಂಚಕ್ಷರಯ್ಯ	೬೫	ಜಂಗಮ	೧೦ನೇ ತರಗತಿ	ಹಿರೇಹೆಗ್ಡಾಳ್	ಕೂಡ್ಲಿಗಿ
೧೦೯.	ಮಂಜಯ್ಯ	೬೮	ಜಂಗಮ	೭ನೇ ತರಗತಿ	ಹಿರೇಹೆಗ್ಡಾಳ್	ಕೂಡ್ಲಿಗಿ
೧೧೦.	ವಾಮಯ್ಯ	೫೭	ಜಂಗಮ	೧೦ನೇ ತರಗತಿ	ಹಿರೇಹೆಗ್ಡಾಳ್	ಕೂಡ್ಲಿಗಿ
೧೧೧.	ಅಜ್ಜಯ್ಯ	೭೦	ಜಂಗಮ	ಬಿ.ಎ	ಹಿರೇಹೆಗ್ಡಾಳ್	ಕೂಡ್ಲಿಗಿ
೧೧೨.	ರಾಜಶೇಖರ	೪೮	ಲಿಂಗಾಯತ	೭ನೇ ತರಗತಿ	ಚಪ್ಪರದಳ್ಳಿ	ಕೊಟ್ಟೂರು
೧೧೩.	ಕೊಟ್ರೇಶ್	೩೫	ಲಿಂಗಾಯತ	೧೦ನೇ ತರಗತಿ	ಚಪ್ಪರದಳ್ಳಿ	ಕೊಟ್ಟೂರು
೧೧೪.	ಬಿ. ಪ್ರಭಾಕರ್	೬೪	ಗೌಡ್ರು	ಅನಕ್ಷರಸ್ಥರು	ಚಪ್ಪರದಳ್ಳಿ	ಕೊಟ್ಟೂರು
೧೧೫.	ನಾಗರಾಜ	೪೫	ನಾಯಕ	೧೦ನೇ ತರಗತಿ	ಚಪ್ಪರದಳ್ಳಿ	ಕೊಟ್ಟೂರು
೧೧೬	ಬಸವರಾಜು	೪೫	ಲಿಂಗಾಯತ	೭ನೇ ತರಗತಿ	ಚಪ್ಪರದಳ್ಳಿ	ಕೊಟ್ಟೂರು
೧೧೭.	ರಾಜಶೇಖರಯು	೪೬	ಗೌಡ್ರು	೭ನೇ ತರಗತಿ	ಚಪ್ಪರದಳ್ಳಿ	ಕೊಟ್ಟೂರು
೧೧೮.	ಸಿದ್ದೇಶ್	೫೦	ಉಪ್ಪಾರ	೫ನೇ ತರಗತಿ	ಚಪ್ಪರದಳ್ಳಿ	ಕೊಟ್ಟೂರು
೧೧೯.	ನಾಗರಾಜ ಕಲ್ಲಜ್ಜ	೫೩	ಕಮ್ಮಾರ	೧೦ನೇ ತರಗತಿ	ಚಪ್ಪರದಳ್ಳಿ	ಕೊಟ್ಟೂರು
೧೨೦.	ಕೊಟ್ರೇಶ್ ಜಿ.	೪೫	ಲಿಂಗಾಯತ	೭ನೇ ತರಗತಿ	ಚಪ್ಪರದಳ್ಳಿ	ಕೊಟ್ಟೂರು
೧೨೧.	ಪ್ರಕಾಶ್	೪೫	ಉಪ್ಪಾರ	೫ನೇ ತರಗತಿ	ಚಪ್ಪರದಳ್ಳಿ	ಕೊಟ್ಟೂರು
೧೨೨.	ಚಂದ್ರಪ್ಪ	೫೦	ನಾಯಕರು	೭ನೇ ತರಗತಿ	ಚಪ್ಪರದಳ್ಳಿ	ಕೊಟ್ಟೂರು
೧೨೩.	ಸುರೇಶ್‌ಗೌಡ	೪೦	ಗೌಡ್ರು	ಪಿ.ಯು.ಸಿ	ಚಪ್ಪರದಳ್ಳಿ	ಕೊಟ್ಟೂರು
೧೨೪.	ಬಸವರಾಜು	೪೫	ಲಿಂಗಾಯತ	೫ನೇ ತರಗತಿ	ಚಪ್ಪರದಳ್ಳಿ	ಕೊಟ್ಟೂರು
೧೨೫.	ವೀರಣ್ಣ	೪೫	ಗೌಡ್ರು	೧೦ನೇ ತರಗತಿ	ಚಪ್ಪರದಳ್ಳಿ	ಕೊಟ್ಟೂರು
೧೨೬.	ಬಾಷಾ ಪಿ.	೫೦	ಮುಸ್ಲಿಂ	೭ನೇ ತರಗತಿ	ಹಾರಾಳು	ಕೊಟ್ಟೂರು
೧೨೭.	ನವಾಬ್	೪೫	ಮುಸ್ಲಿಂ	೧೦ನೇ ತರಗತಿ	ಹಾರಾಳು	ಕೊಟ್ಟೂರು
೧೨೮.	ಸಿದ್ದೇಶ್ ಆರ್	೪೬	ನಾಯಕ	ಪಿ.ಯು.ಸಿ	ಹಾರಾಳು	ಕೊಟ್ಟೂರು
೧೨೯.	ಗಾದೆಪ್ಪ	೪೫	ನಾಯಕ	ಪದವಿ	ಹಾರಾಳು	ಕೊಟ್ಟೂರು
೧೩೦.	ಮಾರುತಿ ಎನ್	೪೦	ಕುಂಬಾರ	೫ನೇ ತರಗತಿ	ಹಾರಾಳು	ಕೊಟ್ಟೂರು
೧೩೧.	ಅಂಜಿನಪ್ಪ ಎ	೫೦	ಉಪ್ಪಾರ	೭ನೇ ತರಗತಿ	ಹಾರಾಳು	ಕೊಟ್ಟೂರು
೧೩೨.	ಗೋಪಾಲ ಜಿ	೪೫	ಉಪ್ಪಾರ	ಪದವಿ	ಹಾರಾಳು	ಕೊಟ್ಟೂರು
೧೩೩.	ಲಕ್ಷ್ಮೀಪತಿ	೩೫	ಉಪ್ಪಾರ	೧೦ನೇ ತರಗತಿ	ಕೆ.ಅಯ್ಯನಹಳ್ಳಿ	ಕೊಟ್ಟೂರು
೧೩೪.	ಶರಣ್ ಆರ್	೩೯	ಲಿಂಗಾಯತ	ಪದವಿ	ಕೆ.ಅಯ್ಯನಹಳ್ಳಿ	ಕೊಟ್ಟೂರು
೧೩೫.	ಅರುಣ್ ಜೆ.	೪೦	ನಾಯಕ	ಪದವಿ	ಕೆ.ಅಯ್ಯನಹಳ್ಳಿ	ಕೊಟ್ಟೂರು
೧೩೬.	ಮಾರುತಿ ಎಸ್	೪೦	ನಾಯಕ	೭ನೇ ತರಗತಿ	ಕೆ.ಅಯ್ಯನಹಳ್ಳಿ	ಕೊಟ್ಟೂರು
೧೩೭.	ಲೊಕ್ಯನಾಯಕ್	೩೯	ಲಂಬಾಣಿ	ಪದವಿ	ಕೆ.ಅಯ್ಯನಹಳ್ಳಿ	ಕೊಟ್ಟೂರು
೧೩೮.	ಅಶೋಕ್ ಎಸ್	೪೦	ಹರಿಜನ	೫ನೇ ತರಗತಿ	ಕೆ.ಅಯ್ಯನಹಳ್ಳಿ	ಕೊಟ್ಟೂರು

♦ ♦ ♦

೪. ಛಾಯಾಚಿತ್ರಗಳು

೪. ಛಾಯಾಚಿತ್ರಗಳು



ಸಿರುಗುಪ್ಪ ತಾಲೂಕಿನ ಬೂದುಗುಪ್ಪ ಗ್ರಾಮದ ರಮೇಶ ಅವರೊಂದಿಗೆ ಮಾಹಿತಿ



ಸಿರುಗುಪ್ಪ ತಾಲೂಕಿನ ಬೂದುಗುಪ್ಪ ಗ್ರಾಮದ ನಾಗರಾಜ ಅವರೊಂದಿಗೆ ಮಾಹಿತಿ



ಸಿರುಗುಪ್ಪ ತಾಲೂಕಿನ ಬೂದುಗುಪ್ಪ ಗ್ರಾಮದ ಚಂದ್ರಶೇಖರ ರೆಡ್ಡಿ ಅವರೊಂದಿಗೆ ಮಾಹಿತಿ



ಸಿರುಗುಪ್ಪ ತಾಲೂಕಿನ ಕರೂರು ಗ್ರಾಮದ ಆರ್. ಸಿದ್ಧಲಿಂಗರೆಡ್ಡಿ ಅವರೊಂದಿಗೆ ಮಾಹಿತಿ



ಹೊಸಪೇಟೆ ತಾಲೂಕಿನ ಡಣಾಪುರ ಗ್ರಾಮದ ಎ. ಫಕ್ಕೀರಸ್ವಾಮಿ
ಅವರ ಹೆಂಡತಿಯೊಂದಿಗೆ ಮಾಹಿತಿ



ಹೊಸಪೇಟೆ ತಾಲೂಕಿನ ಡಣಾಪುರ ಗ್ರಾಮದ ಸೋಮಣ್ಣ
ಅವರ ಹೆಂಡತಿಯೊಂದಿಗೆ ಮಾಹಿತಿ



ಕೂಡ್ಲಿಗಿ ತಾಲೂಕಿನ ಶಿವಪುರ ಗ್ರಾಮದ ಶ್ರೀಮತಿ ಅನ್ನಮ್ಮ ಅವರೊಂದಿಗೆ ಮಾಹಿತಿ



ಕೂಡ್ಲಿಗಿ ತಾಲೂಕಿನ ಶಿವಪುರ ಗ್ರಾಮದ ಶ್ರೀಮತಿ ಹನುಮಕ್ಕ ಅವರೊಂದಿಗೆ ಮಾಹಿತಿ



ಕೂಡ್ಲಿಗಿ ತಾಲೂಕಿನ ಶಿವಪುರ ಗ್ರಾಮದ ಹನುಮಂತ ವಿ. ಅವರೊಂದಿಗೆ ಮಾಹಿತಿ



ಕೂಡ್ಲಿಗಿ ತಾಲೂಕಿನ ಹನಸಿ ಗ್ರಾಮದ ಈರಣ್ಣ ಅವರೊಂದಿಗೆ ಮಾಹಿತಿ



ಕೂಡ್ಲಿಗಿ ತಾಲೂಕಿನ ಹನಸಿ ಗ್ರಾಮದ ಭರಮಪ್ಪ ಅವರ ಮಕ್ಕಳಿಂದ ಮಾಹಿತಿ



ಕೊಟ್ಟೂರು ತಾಲೂಕಿನ ಚಪ್ಪರದಹಳ್ಳಿ ಗ್ರಾಮದ ರಾಜಶೇಖರ ಮಗಳು ಅವರೊಂದಿಗೆ ಮಾಹಿತಿ



ಕೊಟ್ಟೂರು ತಾಲೂಕಿನ ಚಪ್ಪರದಹಳ್ಳಿ ಗ್ರಾಮದ ನಾಗರಾಜ ಅವರೊಂದಿಗೆ ಮಾಹಿತಿ



ಸಂಡೂರು ತಾಲೂಕಿನ ಬಂಡ್ರಿ ಗ್ರಾಮದ ದಶರಥ ಅವರ ಹೆಂಡತಿಯೊಂದಿಗೆ ಮಾಹಿತಿ



ಸಂಡೂರು ತಾಲೂಕಿನ ಬಂಡ್ರಿ ಗ್ರಾಮದ ಬಿ. ದಾದಾಪೀರ್ ಅವರೊಂದಿಗೆ ಮಾಹಿತಿ



ಸಂಡೂರು ತಾಲೂಕಿನ ಬಂಡ್ರಿ ಗ್ರಾಮದ ವೀರೇಂದ್ರ
ಅವರ ಹೆಂಡತಿ ಮಂಗಳ ಅವರೊಂದಿಗೆ ಮಾಹಿತಿ

Curiginal

Document Information

Analyzed document	KUH-PhD-DWS-B M Sumalata.docx (D98346052)
Submitted	3/15/2021 5:59:00 AM
Submitted by	Shankaragouda S G
Submitter email	shankargoudas.mailbox@gmail.com
Similarity	5%
Analysis address	shankargoudas.mailbox.kanuni@analysis.urkund.com

Sources included in the report

W	URL: https://karnatakaeducation.org.in/KOER/index.php/%E0%B2%B0%E0%B2%9A%E0%B2%A8%E0%B2 ... Fetched: 3/15/2021 6:00:00 AM	7
W	URL: https://www.socialworkfootprints.org/kannada-articles/9558278 Fetched: 7/20/2020 1:19:36 PM	15
W	URL: https://archive.org/stream/dasohasiri0000sric/dasohasiri0000sric_djvu.txt Fetched: 11/6/2020 6:25:07 AM	44
W	URL: http://samaajakkaagi.blogspot.com/2013/ Fetched: 12/22/2020 5:12:00 AM	68
W	URL: http://skdrdpindia.org/2015/06/13/%E0%B2%B8%E0%B2%B0%E0%B2%95%E0%B2%BE%E0%B2%B0%E0 ... Fetched: 2/22/2021 7:01:47 AM	6
W	URL: https://www.socialworkfootprints.org/kannada-articles/1573294 Fetched: 3/15/2021 6:00:00 AM	7
W	URL: https://kanaja.karnataka.gov.in/ebook/wp-content/uploads/2020/Text/46.docx Fetched: 2/19/2021 11:22:23 AM	53
W	URL: https://kanaja.karnataka.gov.in/%E0%B2%9A%E0%B2%B0%E0%B2%BF%E0%B2%A4%E0%B3%8D%E0%B ... Fetched: 2/23/2021 7:22:13 AM	4
W	URL: https://kn.wikipedia.org/wiki/%E0%B2%95%E0%B3%81%E0%B2%9F%E0%B3%81%E0%B2%82%E0%B2%AC Fetched: 3/15/2021 6:00:00 AM	6
W	URL: https://zolotoywek.ru/kn/installation/feministka---kto-eto-na-samom-dele-feminizm- ... Fetched: 2/19/2021 11:22:15 AM	14
W	URL: https://kn.wikisource.org/wiki/%E0%B2%AE%E0%B3%88%E0%B2%B8%E0%B3%82%E0%B2%B0%E0	77

W %B3 ... Fetched: 2/8/2021 12:16:59 PM

W URL: https://kn.wikipedia.org/wiki/%E0%B2%89%E0%B2%AA%E0%B2%BE%E0%B2%A7%E0%B3%8D%E0%B2% ... Fetched: 12/11/2020 7:00:03 AM — 12

W URL: https://karnatakaeducation.org.in/KOER/index.php/%E0%B2%B0%E0%B2%9A%E0%B2%A8%E0%B2 ... Fetched: 12/16/2020 12:12:06 PM — 5

W URL: https://sakkreachchu.wordpress.com/ Fetched: 2/19/2021 11:22:14 AM — 6

W URL: https://kanaja.karnataka.gov.in/%E0%B2%B8%E0%B3%8D%E0%B2%A4%E0%B3%8D%E0%B2%B0%E0%B ... Fetched: 3/15/2021 6:00:00 AM — 5

W URL: https://kn.wikipedia.org/wiki/%E0%B2%AD%E0%B2%BE%E0%B2%B0%E0%B2%A4%E0%B2%A6%E0%B2% ... Fetched: 9/10/2020 6:05:10 AM — 5

W URL: http://marchtowardsequality.blogspot.com/2017/06/blog-post_67.html Fetched: 3/15/2021 6:00:00 AM — 9

W URL: https://practiceconnect.azimpremjiuniversity.edu.in/%E0%B2%B5%E0%B2%BF%E0%B2%B6%E0 ... Fetched: 12/16/2020 12:11:57 PM — 10

W URL: https://sakkreachchu.wordpress.com/2020/05/01/%E0%B2%AE%E0%B2%B9%E0%B2%BF%E0%B2%B3 Fetched: 2/19/2021 11:22:12 AM — 2

W URL: https://kn.wikipedia.org/wiki/%E0%B2%B8%E0%B3%8D%E0%B2%A4%E0%B3%8D%E0%B2%B0%E0%B3%80 Fetched: 2/19/2021 11:22:13 AM — 3

W URL: http://karnatakaeducation.org.in/KOER/images1/4/4c/%E0%B2%B8%E0%B2%BE%E0%B2%AE%E0% ... Fetched: 3/15/2021 6:00:00 AM — 1

W URL: https://kanaja.karnataka.gov.in/%E0%B2%B8%E0%B2%BE%E0%B2%AE%E0%B2%BE%E0%B2%9C%E0%B Fetched: 3/15/2021 6:00:00 AM — 5

W URL: https://archive.org/stream/hosatuMarch2013/Hosathu%2BMar%2B2013_djvu.txt Fetched: 12/11/2020 7:00:04 AM — 19

W URL: https://kn.wikipedia.org/wiki/%E0%B2%B2%E0%B2%BF%E0%B2%82%E0%B2%97_%E0%B2%B8%E0%

W B2 ... 6
Fetched: 3/15/2021 6:00:00 AM

W URL: https://www.duxburysystems.com/samples/kannada_kn.docx 1
Fetched: 3/15/2021 6:00:00 AM

W URL: http://www.schooleducation.kar.nic.in/pryednkn/uniforms%26bags.html 2
Fetched: 12/11/2020 6:59:58 AM

W URL: https://vijaykarnataka.com/news/belagavi/female-equality-let-start-from-home-first ... 3
Fetched: 3/15/2021 6:00:00 AM

W URL: https://prabhasalimath.wordpress.com/ 2
Fetched: 5/16/2020 3:15:39 PM

W URL: https://rfilex.ru/kn/polozhitelnyi-imidzh-musulmanki-v-obshchestve-shadinova-g-a-s ... 2
Fetched: 2/19/2021 11:22:15 AM

W URL:
https://karnatakaeducation.org.in/KOER/index.php/%E0%B2%B8%E0%B2%AE%E0%B2%BE%E0%B2 ... 6
Fetched: 12/16/2020 8:12:36 AM

W URL: https://sharechat.com/tag/n9Wke/fresh 5
Fetched: 3/15/2021 6:00:00 AM

W URL: https://sharechat.com/tag/pl65b/fresh 3
Fetched: 3/15/2021 6:00:00 AM

W URL: https://isha.sadhguru.org/in/kn/in/kn/wisdom/article/gandu-hennina-samasyege-parihara 1
Fetched: 3/15/2021 6:00:00 AM

W URL:
https://karnatakaeducation.org.in/KOER/index.php/%E0%B2%B0%E0%B2%9A%E0%B2%A8%E0%B2 ... 4
Fetched: 12/16/2020 12:12:05 PM

W URL: https://tumkurzillapanchayat.gov.in/educationk.html 1
Fetched: 2/9/2021 7:33:55 AM

W URL: http://www.matthekalyana.in/rajya.html 3
Fetched: 12/16/2020 12:12:07 PM

W URL: https://www.prajavani.net/girl-child-pride-662731.html 1
Fetched: 3/15/2021 6:00:00 AM



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಮಹಿಳಾ ಅಧ್ಯಯನ ವಿಭಾಗ